—ಕೆಲ ತ್ತಿಯ ಗಾಂ ಸ್ಥಾಯ ನಸಜ ಳಕ ಳಿಂ ಸ್ಥಾಯ ಎ ರಸ್ಥ ಂ ರು ಸುತ್ತ ಗಂ ಸ್ವೆರಳ್ಳಿ ನ್ನ ದ ಡ ಸುತ್ತ ಕಾಲುಗೆ ಳಿ ದಿನಸನ್ನ ಪ ನಿಲ್ಲಿರಿಸಿ ಪಿಕ್ಷೆಯನ್ನು ಪಿಡಿದರ

—ಪ್ಲೇಗಮಿಷ್ಟ್ರ ಮುಂಬಾಪಕರಮಳಗಳು ನಗರ ಸಸವ ಕಲಸವು ನಡೆದಿರುತ್ತ

ದಂಗೆಯು ನಿಜವು ಮ ಸುವ ತೆ ಸಿಸಿಸಿ

ಮ್ಯಾನೇಜರು, ವಿಭಾಕರ, ಇವರ

ನೋಟೀಸು.

ವರ್ಗಣಿಯ ದರಗಳು:—

	ರೂ	ಆ
ವಾರ್ಷಿಕ ವರ್ಗಣಿ ಸ್ಥಳಿಕ	೩	೦
,, ,, ಪರಸ್ಥಳ ಸವರಿಗೆ ಆಂಜನೆಟ್ಟ ಸೇರಿ ...	೩	೧೨
ಒಂದು ಸಂಚಿಕೆಗೆ ೧ ಪ್ರತಿಗೆ	೦	೧
ಅಂದಿನ ,, ,, ...	೦	೪

ವರ್ಗಣಿ ಹಣವನ್ನು ಮುಂಗಡವಾಗಿ ಕೊಡದ ಹೊರ್ಗೆ ವರ್ತಮಾನಪತ್ರವು ಪ್ರಾರಂಭ ಮಾಡಲ್ಪಡಲಾರದು "ಪೋಸ್ಟಲ ಮನಿ ಆರ್ಡರ ದ್ವಾರ ವರ್ಗಣಿಯ ಕಣವನ್ನು ಕಳಿಸುವವರು ಮನಿಆರ್ಡರದ ಕೂಪನಮೇಲೆ ನಮ್ಮ ಪೂರ್ಣ ಹೆಸರು ಮತ್ತು ಪತ್ತೆಗಳನ್ನು ಸುವ್ಯಾಜ ಕ್ಷರಗಳಿಂದ ಬರಯಲಿಕ್ಕಾ ಬೇಕು ಹೀಗೆ ಬರೆಯದಿದ್ದ ಕ್ಷದಲ್ಲಿ ಹಣವನ್ನು ಜಮೆ ಹಿಡಿಯುವ ಕೆಲಸದಲ್ಲಿಯೂ ಕೆಸರನ್ನು ರಜಿಸ್ಟರದಲ್ಲಿ ದಾಖಲ ಮಾಡಿಕೊಳ್ಳುವ ಕೆಲ ದಲ್ಲಿಯೂ ತಪ್ಪುಗಳಾದರೆ ಮ್ಯಾನೇಜರರು ಯಾವದೇ ತಿಮಿಂಪ ಜಬಾಬದಾರರಾಗುವದಿಲ್ಲ ವರ್ತಮಾನ ತ್ರವು ಬೇಕಾದ ತಾರೀಖಿನಿಂದ ಪ್ರಾರಂಭ ಮಾಡಲ್ಪ ಕುಹುದು ಹಿಂದಿನ-ಅಂಕುಗಳು ಸಿಲ್ಲಕ ಇದ್ದಪಕ್ಷದಲ್ಲಿ ಮಾತ್ರ ದೊರಕಬಹುದ

ಜಾಹೀರಾತುಗಳ ದರಗಳು.

		೧	೧೫
೨೫	,, ...	೧	೪
೧೫	,, ೭೫ ,, ...	೧	೪
೭೫	ರಿಂದ ಮುಂದೆ . ..	೧	೦

ಒಂದು ಇಂಚಿಗಿಂತಲೂ ಕಡಿಮೆ ಸ್ಥಳಕ್ಕೆ ಒಂದು ಇಂಚಿನ ಪೂರ್ಣ ದರವು ತಕ್ಕೊಳ್ಳಲ್ಪಡುವದು ಜಾಹೀರಾತುಗಳ ಹಣವನ್ನು ಮುಂಗಡವಾಗಿ ಕೊಡತಕ್ಕದ್ದು

ಮ್ಯಾನೇಜರ, ವಿಭಾಕರ,
ವಿಭಾಕರ ಆಫಿಸ,
ಮಾಲಗಲ್ಲಿ, **ಬೆಳಗಾವ.**

Printed by Pandit Rayapa Chikodi at Vibhaker Press House No 2559 Malgal Belgaum, and published by Gurushiddaya Parvataya Patil at House No 2559, Malgalli Belgaum

ಪ್ರಕಟಣೆ ತಾ|| ೭ ಅಗಷ್ಟ ೧೯೨೨.

ಆರ. ಎಲ್ ಹಿರೇಮಠ, ಆರೋಗ್ಯಮಂದಿರ, ಆಯರ್ವೇದಿಕ ಔಷಧಾಲಯ ಮತ್ತು ಪ್ರಯೋಗಶಾಲೆ, ಕಮತನೂರ, ಸೊ|| ಸಂಕೇಶ್ವರ, ತಾ| ಹುಕ್ಕೇರಿ, ಜಿ| ಬೆಳಗಾವಿ.

ಕಕಡ(ಬತ್ತಿ)ರಸಾಯನ ತಕ್ಕೊಂಡು ಏಕೆ ಸಾಯುತ್ತಿ ರಿ?

[ಗುಣವಾಗಿದ್ದರೆ]

೧. **ಉಪದಂಶ ಗರ್ಮಿ(ಉಷ್ಣ) ಸರ್ಮಿ**— ಮುಂತಾದ ಏಳು ಪ್ರಕಾರದ ಸುಖರೋಗಗಳಿಂದ ಜರ್ಜರಿತರಾಗಿಬಿದ್ದರುವಹ ಒ ದಿವಸದಲ್ಲಿ ಗುಣ ಹೊಂದ್ದ ವನಸ್ಪತಿಯಿಂದ ಸಿದ್ಧವಡಿಸಿದ್ದಿಷ್ಟ ಇದರಿಂದ ಜುಟ್ಟು, ವೃಷಣಾವ ಉಪ್ಪರ್ಗ ಮಿ (ಉಪದಂಶ) ಸರ್ಮಿ, ಬಟ್ಟೆ, ಬಡಿ ಎಂಬು ಅತಿಶೀಘ್ರ ಕರವಾಗಿ ಇಂದ್ರಿಯ ಸಂಬಂಧಿ ಗ್ಯಂದಿ, ರಕ್ತಸ್ರಾವ ದಾಹ, ಚಾವು, ವ್ರಣ, ಗಡ್ಡುಮೇಹ, ಸೈಮೆಲೆ ಗರ್ಮಿ ಒಡೆದು ಸೋವುಂಟಾಗುವ ನಂದಿವಾಯು, ಅಂಗಳಕ್ಕೆ ತೊತುಬಿದ್ದು ಮೂಗು ಕೊಳ್ಳುವದು ಮೂಳಿವ್ಯಾಧಿಗಳ್ಳೆ ಕಾರಣದಿಂದ ಕ್ಷೀಣ ಪ್ರಿಯ ತಿದಿಲತಾ ಅಥವಾ ನಪುಂಸಕತ್ವ ಸ್ವಪ್ನಾನಸ್ಥೆ, ಲಘವಿ ಯಿಂದ ಶಾತು ಅಥವಾ ಶರೀರ ಗದ ಮೇಲೆಯಲ್ಲಿ ಸಹಸ್ರೋಣ, ಕ್ಷರಿತ ವಿರ್ಯಸ್ರಾತ ಆಗೋಣ, ನಸುನೋವು ಮುಂತಾದ ಅನೇಕ ರೋಗಗಳ ಮೇಲೆ ಅಸಾಸ್ರಜನರಕಡಿಂದ ವಾರಾಜರನಕಸ್ಪರವೆಗೈರಿ ವಿಷ ವ ಅವರಪಾತುರಿಂದ ವದಾರ್ಜ ವಸ್ತು ನೇಷನ ಮಾಡುವದರಿಂದಾ ತಮ್ಮ ಮೈಯೊಳಗೆ ರಸಾಯನಿನಿಂತು ಕೃಕಾಲುಗಳಲ್ಲಿ ಎದುರು ಮುಂದಾಗುವ ತಮ್ಮ ಸಂತತಿಗೂ ಅನೇಕ ರೋಗ ಉಚ್ಚವಿಸಿ ಬಯಂಕರ ವರಿ ಪರಿಣಾಮಕ್ಕೆ ಇಂದ ರೋಗವು ಬಹುದಿನವದಿಂದಲಿ ಬೆಂಬದಿರಲಿ ನುಂತಾದ ರೋಗದ ಮೇಲೆ ಈ ಔಷಧವ ಉಪಯೋಗ ಮಾಡಿದರೆ ತಪ್ಪಂಬಂದಿ ಯಾವತ್ತು ರೋಗಗಳು ತ್ವರಿತಹಾಗಿ ಶರೀರದೊಳಗಿನ ರಕ್ತ ಮಾಂಸ ಸ್ನೆಹ ಹೊಂದಿ ಕ್ಷೀಣತಾ ದೂರಾಗಿ ಪ್ರಕೃತಿ ಬಂಣಾಯಿಸುತ್ತದೆ ಕ್ರಯ— ಅಲಗಾಳಿಗೆ ೩ ರೂ. ಕಮಿಶ, ಇಲ್ಲ

೨. **ಬಾರಾನಂದಚೂರ್ಣ**— ಈ ಚೂರ್ಣವು ೨೩ ಗಿಡಮೂಲಿಕೆಗಳಿಂದ ಸಿದ್ಧನಡಿಸಿದ ಎಪ್ರೆಷ್ಟ ಪುಡಿಯು, ಸುಮಧುರ ರುಚಿಯುಳ್ಳದ್ದು, ಪುಷ್ಟಿಜನರು ಅನುಭವ ತಕ್ಕೊಂಡು ಪ್ರಾಸಾಮಾಡಿದ್ದಾರೆ ಸ್ತ್ರೀಯರ ಮಲೆಗೆ ಹಾಲು ಬಾರದಿದ್ದರೆ, ಕಡಾಮೆಯಾಗಿದ್ದರೆ ಕೂಸುಗಳು ಕಿರಿಕಿರಿಮಾಡಿ ರೋಗಿಗಳಾಗುತ್ತವೆ. ಇವರ ಸೇವನದಿಂದ ಸ್ತ್ರೀಯರ ಆಶಕ್ತತೆ ದೂರಾಗಿ ದೇಹ ಕಾಂತಿ ವ ಪುಷ್ಟಿಯಾಗಿ ಮೊಲೆಗೆ ಹಾಲು ಹಚ್ಚಿಗೆ ಬಿದ್ದು ಕೂಸುಗಳು ಅತ್ಯಾನಂದವರೆದು ದೇಹವೃದ್ಧಿಯಾಗಿ ಪುಷ್ಟವಾಗುತ್ತವೆ ಆದ್ದರಿಂದ ಯಾವತ್ತೂ ಈ ಅಪೂರ್ವ ಪುಡಿಯನ್ನು ತ್ವರೆ ಮಾಡಿ ತರಿಸಿಕೊಳ್ಳಿರಿ ಪತ್ರ ವಿನೂ ಇಲ್ಲ ಡಬ್ಬಿಗ ೧ ರು ಡರುನಿಗೆ ೩ ಡಬ್ಬಿ ಕಮೀಶನ್ನ

೩. **ತಗಣಿ ಹೋಗುವ ದೀವಿಗ**— ಅತಿಶಯ ಚಮತ್ಕಾರಿಕ ವಿಲಕ್ಷಣವಾದದ್ದು ಈ ದೀವಿಗೆಯ ಪ್ರಕಾಶ ಎಲ್ಲಿ ಬೀಳುತ್ತದೆಯೋ ಅಲ್ಲಿ ಎಂದೂ ತಗಣಿ ಇರುವದಿಲ್ಲ ಅನುಭವ ಪಡೆದಿರುವ ಬೆಲೆ—೧ ರೂ

೪. **ವೀರ್ಯಸ್ತಂಭನ ದೀವಿಗೆ**— ಈ ದೀವಿಗೆಯ ಪ್ರಕಾಶವಿರುವ ತನಕ ವೀರ್ಯ ಸ್ತಂಭನವಾಗುತ್ತದೆ ದೀವಿಗೆಯನ್ನು ಕ ದ ಕೂಡಲೆ ವೀರ್ಯಸ್ಖಲನವಾಗುತ್ತದೆ ಪುರುಷಜನರಿಗೆ ಇದು ಬಹಳ ಪ್ರಿಯಕರವಾದದ್ದು ಒಮ್ಮೆ ತರಿಸಿಕೊಂಡು ಪ್ರಯೋಗಮಾಡಿ ನೋಡಿರಿ ಬೆಲೆ—೧ ರೂ ಬಹುದಿವಸ ಬಾಳುತ್ತದೆ

೫. **ಆನಂದ ವಿಲಾಸ (ಸ್ತ್ರೀ ಪ್ರಕೃತಿವರ್ಧಕ ಮಾತ್ರೆ)**—ಈ ಮಾತ್ರೆಯ ಸೇವನೆಯಿಂದ ಮೂರ್ಛೆ ಮುರುಗಿನ ಪಾಮುಖ್ಯಾಮ್ಯವಂಶ ಸಂಬಂದಿ ಕಸರು ನೂತ್ರದ್ವಾರದಿಂದ ಆಗುವ ರುಕ್ಷತನ, ಧಾತು ಕ್ಷೀಣತಾ, ಸ್ವಪ್ನಾನಸ್ಥೆ ಮೈಥುನ ಕಾಮುಕತ್ವ ಬೆಳೆಯುತ್ತದೆ ಇದಾದಿ ಮತ್ತು ಪಕೀಲ ಮೈಥುನಶಕ್ತಿಯು ತಕ್ಕೊಳ್ಳುವಂದ ಜನರು ಇವನ್ನು ಸೇವಿಸಿದರೆ ಸ್ವಪ್ನಾವಸ್ಥೆ ಮೈಥುನಶಕ್ತಿಯು ಕ್ಷೀಣತಾ ದೂರಾಗಿ ಉತ್ತಮ

gog B. N. 4309



ಸಂಸ್ಥಾಪಕಃ—
ಕೈ. ಅನಂತ ವಿನಾಯಕ ಪಟವರ್ಧನ.
ಸಂಪಾದಕಃ—
ಅನಂತ ವಾಸುದೇವ ಸಾಬಡೆ.
ಸಹಾಯಕಃ—
ಪ್ರಜ್ಞಾನಿಧಿ ವಿನಾಯಕ ಪಟವರ್ಧನ.

ರಾಜರಿಗೆ ಪ್ರಜರೊಳನುರಾಗ ವಿರಬೇಕು।
ರಾಜರಭಿಮಾನ ಪ್ರಜರೊಳಗೆ ಇರಬೇಕು
ಪ್ರಜರಿಗಭಿಮತವಾದ ಅಡಳಿತೆ ಬೇಕು॥
ಪ್ರಜರು ಪಶುವೆಂಬ ಭಾವನೆಮಾತ್ರ ಸಾಕು

ವರ್ಗಣಿ ಬುದರವ್ವಃ—
ವಾರ್ಷಿಕ ಅರುತಿಂಗಳ
ಸ್ಥಳಿಕ ೪ ರೂ. ೩
ಅಂಚೆಸಚ್ಚ ಸಹ }
ಪರವೂರಿಗೆ } ೫ರೂ. ೫॥
ಪ್ರತಿ ಸಂಚಿಕೆ ೧॥ ಅಣ

ವರುಷ ೩] ಜಮಖಂಡಿ ಬುಧವಾರ ದಿ. ೩/೭/೪೬ ಇ. [ಸಂಚಿಕೆ ೧೪

ಸಂಸ್ಥಾನಗಳ ಒಗ್ಗೆ ದೇಶಭಕ್ತ ದಿವಾಕರರ ಅಭಿಪ್ರಾಯ

ಇನ್ನು ಸಂಸ್ಥಾನೀ ಪ್ರಜೆಗಳೆದುರು ಬಹಳ ಮಹತ್ವದ ಕರ್ತವ್ಯಗಳಿರುವವು. ಇದು ಕ್ರಾಂತಿ ಕಾಲ, ಸಂಕ್ರಮಣಾವಸ್ಥೆ. ಈಗ ನೀವು ಸ್ವಸ್ಥ ಕುಳಿತರೆ ಇನ್ನು ಐವತ್ತು ವರುಷ ನಿಮ್ಮ ಸ್ಥಿತಿ ಹೀಗೆಯೇ ಉಳಿಯುವದು. ಈ ವಿಷಯದಲ್ಲಿ ನಾವೆಲ್ಲರೂ ನಿಮಗೆ ಸಹಾಯ ಮಾಡಲು ಟೊಂಕ ಕಟ್ಟಲಿಕ್ಕೆ ಬೇಕು. ಮೊದಲನೆಯ ಮಾತೆಂದರೆ ಘಟನಾ ಸಮಿತಿಗೆ ಸಂಸ್ಥಾನೀ ಪ್ರಜೆಗಳ ಪ್ರತಿನಿಧಿಗಳೇ ಹೋಗಲಿಕ್ಕೇ ಬೇಕೆಂದು ನೀವು ಹಟ ಹಿಡಿಯಲಿಕ್ಕೆ ಬೇಕು. ನಿಮ್ಮ ಪ್ರತಿನಿಧಿಗಳಾಗಿ ಹೋಗುವವರೆಲ್ಲರೂ ಇಡೀ ಕರ್ನಾಟಕ ಪ್ರಾಂತವು ಒಂದೇ ಆಗಬೇಕೆನ್ನುವವರಿರಬೇಕು. ಮೂರನೇಯ ಮಾತೆಂದರೆ ಈಗ ಈ ಸಂಸ್ಥಾನಗಳು ಸಂಘರಾಜ್ಯ ಮುಂತಾದವುಗಳು ಪ್ರಜೆಗಳಿಗೆ ಉಪಕಾರಕವಾಗಲಾರವು ಆಯಾ ಭಾಷಾ ಭಾಗಗಳು ಆಯಾ ಭಾಷಾ ಪ್ರಾಂತಗಳಲ್ಲಿ ಒಂದಾಗುವ ದೊಂದು ಯೋಗ್ಯವಾದ ಮಾರ್ಗವೆಂಬುದನ್ನು ತಿಳಿದುಕೊಂಡು ಈಗ ಆ ಮಾರ್ಗದಿಂದಲೆ ನಾವೆಲ್ಲರೂ ಪ್ರಯತ್ನ ನಡಾಯುವದು ಅವಶ್ಯವು. ಇಷ್ಟರಲ್ಲಿಯೇ ಘಟನಾ ಸಮಿತಿಗೆ ಚುನಾವಣೆಗಳಾಗುವವು. ನಾವು ತಡಮಾಡಿದರೆ ನಾವು ಗಾಡಿ ತಪ್ಪಿಸಿಕೊಳ್ಳುವ ಸಂಭವವಿದೆ. ಅದಕ್ಕಾಗಿಂದು ಕೂಡಲೇ ಈ ಆಂದೋಲನ ಪ್ರಾರಂಭ ಮಾಡಲಿಕ್ಕೆಬೇಕು.

ಮುಧೋಳ ಸಂಸ್ಥಾನ ಘಟನಾ ಸಮಿತಿ

ಮುಧೋಳ ಸಂಸ್ಥಾನದ ಹೊಸ ಘಟನೆಯನ್ನು ರಚಿಸಲು ಒಂದು ಸಮಿತಿಯನ್ನು ನಿಯಮಿಸಿದೆಯೆಂದು ಮುಧೋಳದ ದಿವಾಣರು ಪ್ರಕಟನೆಯನ್ನು ಹೊರಡಿಸಿರುವರು. ಭಾರತ ಸೇವಾ ಸಮಾಜದ ಸದಸ್ಯರೊಲ್ಲಬ್ಬರೂ ಅನುಭವಿಕರೂ ಆದ ಶ್ರೀ. ಎಸ್. ಜೆ. ವಝೆಯವರನ್ನು ಈ ಸಮಿತಿಯ ಅಧ್ಯಕ್ಷರೆಂದು ನಿಯಮಿಸಿದೆ. ಈ ಸಮಿತಿಯಲ್ಲಿ ಶ್ರೀ. ಸಾಲೀಮರ (ಮುಧೋಳ ತಾಸನ ಸಭಾಧ್ಯಕ್ಷ) ಶ್ರೀ ಸರನಾಯಿಕ ಶ್ರೀ. ಮಸೂಂಕರ ಎಕೇ ಮತ್ತು ಶ್ರೀ ದ. ಪ ಕರಮರಕರ ಎಂ ಎಲ್ ಎ ಇವರು ಇರುವರು. ಜುಲೈ ಮೊದಲನೇ ವಾರದಲ್ಲಿ ಸಮಿತಿಯ ಸಭೆ ಕೂಡುವದು ಜುಲೈ ೩೧ ನೇ ದಿನಾಂಕಕ್ಕೆ ಈ ಗಿದ್ದ ಶಾಸನ ಸಭೆಯ ಅವಧಿಯು ಮುಗಿಯುವದು.

ಅ. ಕ. ಏ. ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಪಾಸಾದ ಗೊತ್ತುವಳಿ-

ಘಟನಾ ಶಾಸನ ಸಭೆಗೆ ಕರ್ನಾಟಕ ಸಂಸ್ಥಾನಗಳಿಂದ ಬಾಷಾನ್ವಯ ಪ್ರಾಂತರಚನೆಯ ತತ್ವವನ್ನೊಪ್ಪುವ ಕನ್ನಡಿಗರೇ ಆರಿಸಿ ಬರುವಂತೆ ಆಯಾ ಸಂಸ್ಥಾನಗಳ ಜನತೆಯ ಪ್ರತಿನಿಧಿ ಸಂಸ್ಥೆಗಳು ಪ್ರಯತ್ನಿಸಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ

ಸುತ್ತಲಿನ ಸುದ್ದಿಗಳು.

ಕೊಲ್ಹಾಪುರ :— ಈಗಿನ ರೀಜನ್ಸಿ ಕೌನ್ಸಿಲನಲ್ಲಿ ಸದ್ಯದ ಲೋಕನಿಯುಕ್ತ ಪ್ರತಿನಿಧಿಗಳಲ್ಲಿ 'ಇಬ್ಬರನ್ನು ದಿವಾಣರನ್ನಾಗಿ ನೇಮಿಸಬೇಕೆಂದು ವರಿಷ್ಠ ಸರ್ಕಾರದ ರಾಜಕೀಯ ವರ್ಗದ ವಿಚಾರ ನಡೆದಿರುವದೆಂದು ತಿಳಿಯುತ್ತದೆ

ಮಿರಜ :— ಸಂಸ್ಥಾನದ ಆಹಾರ ಖಾತೆಯಲ್ಲಿಯ ಲಂಚ ಗುಳಿತನದ ನಿಚಾರಣೆಮಾಡುವಕ್ಕಾಗಿ. ಒಂದು ಸಮಿತಿಯನ್ನು ನೇಮಿಸಬೇಕೆಂದು ಇಲ್ಲಿಯ ಪ್ರಮುಖ ೨೦ ಸದ್ಗೃಹಸ್ಥರು ಕೂಡಿ ಒಂದು ಮನವಿಯನ್ನು ಶ್ರೀಮಂತ ರಾಜೇಸಾಹೇಬರಿಗೆ ಮಾಡಿ ಕೊಂಡಿದ್ದಾರೆ. ಈ ಬಗ್ಗೆ ಕೂಡಲೇ ವಿಚಾರ ಮಾಡಲಾಗುವದೆಂದು ದರ್ಬಾರವು ಆಶ್ವಾಸನ ಕೊಟ್ಟಿರುವದೆಂದು ತಿಳಿಯುತ್ತದೆ.

ಬೆಂಗಳೂರ :— ಬೆಂಗಳೂರ ದಂಡಿನಲ್ಲಿರುವ ದಕ್ಷಿಣ ಆಫ್ರಿಕನ್ ಯುರೋಪಿಯನ್ನರ ಮೇಲೆ ಪ್ರತಿಕಾರ ಕಾಯದೆಯ ಕಲಮುಗಳನ್ನು ಪ್ರಯೋಗಿಸಲು ಬೆಂಗಳೂರ ದಂಡಿನ ನಗರ ಸಭೆಯವರು ನಿರ್ಣಯಿಸಿದ್ದಾರೆ. ಬೆಂಗಳೂರ ದಂಡಿನಲ್ಲಿ ಈಗ್ಗೆ ೫೦ ಆಫ್ರಿಕನ್ ಯುರೋಪಿಯನ್ನರಿದ್ದು ಅವರನ್ನು ಹೊರಡೂಡಲಾಗುವದೆಂದು ತಿಳಿಯುತ್ತದೆ.

ಅವರನ್ನು ಸಮಾಧಾನ ಪಡಿಸಬೇಕು ಕನ್ನಡಕ್ಕೆ ಪ್ರಾಧಾನ್ಯ ಕೊಟ್ಟು, ಅಸೆಂಬ್ಲಿಯ ಅಧ್ಯಕ್ಷಸ್ಥಾನವನ್ನು ಕನ್ನಡ ಬಲ್ಲವರಿಗೆ ಕೊಡುವ ಕುರಿತು ಮತ್ತು ವಿಧಿಮಂಡಲದ ಎಲ್ಲ ಕಾರ್ಯಕಲಾಪಗಳನ್ನು ಕನ್ನಡದಲ್ಲಿಯೇ ಸಾಗಿಸುವ ಬಗ್ಗೆ ದರ್ಬಾರಕ್ಕೆ ಮತ್ತೆ ಮತ್ತೆ ವತ್ತಿ ಹೇಳುತ್ತೇವೆ.

ಇನ್ನಾದರೂ ಜಮಖಂಡಿ ಸರ್ಕಾರವು ಇತ್ತಕಡೆಗೆ ಗಮನಿಸುವದೋ ?

ಈಗ ಎಲ್ಲಕಡೆಯಲ್ಲಿಯೂ ಶಿಕ್ಷಕರ ಮತ್ತು ಕಾರಕೂನ ಮುಂತಾದ ನೋಕರರ್ಕ ಗೋಳು ಕೇಳಬರುತ್ತದೆ ಆದರಲ್ಲಿ ವಿಶೇಷವಾಗಿ ಸಂಸ್ಥಾನದಲ್ಲಿಯ ಶಿಕ್ಷಕರ ಗೋಳಿಗೆ ಮಿತಿಯೇ ಇಲ್ಲ. ಪಗಾರ ಸ್ವಲ್ಪ ತುಟ್ಟಿಭತ್ತೆ ಅತ್ಯಕಷ್ಟೆ ಹೀಗಾಗಿ ಹೊಟ್ಟೆಗೆ ಪೂರಾ ಸಾಲದೆ ಸಾಲುಗಾರರಾಗಿ ಅವರ ಈ ಸ್ಥಿತಿಯನ್ನ ನೋಡಲು ಅವರ ಭವಣೆಯು ದೇವರೇ ಬಲ್ಲ. ಆದರೆ ಇತ್ತಿತ್ತಲಾಗಿ ಮಿರಜ ಫಲಟಣ, ಸಾಂಗಲಿ ಸಂಸ್ಥಾನದಲ್ಲಿ ಈ ಸ್ಥಿತಿಯನ್ನು ನೋಡಿ ದರಬಾರದವರು ಸ್ವೇಲು ಬೆಳಸಿ ತುಟ್ಟಿ ಭತ್ತೆಯನ್ನಾದರೂ ಹೆಚ್ಚಿಸಿದರು. ಅದರಂತೆ ನಮ್ಮ ಮುದುವರೆದ ಜಮಖಂಡಿ ಸಂಸ್ಥಾನದಲ್ಲಿ ಇದರ ಸೂಳವೇ ಇಲ್ಲ. ಇಲ್ಲಿಯ ಶಿಕ್ಷಕರು ಶ್ರೀಮಂತ ರಾಜೇಸಾಹೇಬರಿಗೆ ಹೆಚ್ಚಿನ ಬೇಡಿಕೆಯಸಲುವಾಗಿ ವಿನಂತಿ ಅರ್ಜಿಯನ್ನು ಸಲ್ಲಿಸಿದ್ದಾರಂತೆ. ಅದರ ವಿಚಾರವು ಇನ್ನೂ ಅದಂತೆ ಕಾಣುವದಿಲ್ಲ. ಆದರೆ ಪರಿಸ್ಥಿತಿಯು ದಿನೇ ದಿನೇ ಗಂಭೀರವಾಗುತ್ತ ನಡೆದಿದೆ. ಕಾರಣ ದರಬಾರದವರು ತೀವ್ರವೇ ಬಡ ಶಿಕ್ಷಕರಿಗೆ ಸಾಕಷ್ಟು ಹೊಟ್ಟೆಗೆ ಕೊಟ್ಟು ಅವರನ್ನು ಸಂತುಷ್ಟ ಪಡಿಸಬೇಕು. ಹಣದ ಕೊರತೆ ಇರಬಹುದು ಆದರೆ ಈ ಕಾರಣ ಮುಂದೆ ಮಾಡಿ ಈ ವಿಷಯ ದುರ್ಲಕ್ಷಿಸುವಂತಿಲ್ಲ ದರಬಾರವು ಈ ಪರಿಸ್ಥಿತಿಯಲ್ಲಿ ಜನರ ಪ್ರತಿನಿಧಿಗಳ ಸಹಾಯದಿಂದ ನಿರ್ಧಾರ ಮಾಡಿ ಏನಾದರೊಂದು ಯೋಜನೆಯನ್ನು ಸಿದ್ಧಪಡಿಸಿ ಈ ಬಡಜನರಿಗೆ ಸೌಕರ್ಯವನ್ನು ಒದಗಿಸಿ ಕೊಡುವದು ಅತ್ಯವಶ್ಯ ಇನ್ನು ಬೇಗನೆ ಅಸೆಂಬ್ಲಿ ಅಧಿವೇಶನವು ಸೇರುವದಿದೆ. ಆ ವೇಳೆಯಲ್ಲಿ ಆದರೂ ಪ್ರಜಾನಿಧಿಗಳು ಮತ್ತು ದರಬಾರದ ಅಧಿಕಾರಿಗಳು ಈ ಸ್ಪುತ್ನೆಯನ್ನು ಬಿಡಿಸಲು ಪ್ರಯತ್ನಿಸುವದು ಅವಶ್ಯವದೆ. ಇತರ ಸಂಸ್ಥಾನಿಕರಂತೆ. ತೀವ್ರವೇ ಸ್ವೇಲು ತುಟ್ಟಿಭತ್ತೆ ಜಾರಿಯಲ್ಲಿತರ ಬೇಕಾಗಿ ದರಬಾರದವರಿಗೆ ಸೂಚಿಸದೆ ಇರಲಾರೆವು.

ಇಹವೃತ್ತ

ಏಕಾದಶಿ ಮನೆಗೆ ಶಿವರಾತ್ರಿಬಂದಂತೆ ಈಗ್ಗೆ ರೇಶನಕಾರ್ಡಿಗೆ ಎ. ಬಿ. ಸಿ. ಹೀಗೆ ಮೂರುವರ್ಗಗಳನ್ನು ಮಾಡಿದ್ದಾರೆ. ಅದರಲ್ಲಿ „ಬಿ„ ವರ್ಗದೊಳಗೆ ದುರ್ದೈವದಿಂದ ಕೆಲ ಶಿಕ್ಷಕರೂ ಕಾರಕೂನರು ಸೇರ್ಪಡೆ ಯಾಗಿದ್ದಾರೆ. ಇದೇ ತಿಂಗಳದಿಂದ „ಬಿ„ ವರ್ಗದವರಿಗೆ ಜೋಳವನ್ನು ಅರ್ಧಕ್ಕೆ ಇಳಿಸಿ ಅದರಬದಲು ಗೋದಿಯನ್ನು ಕೊಡುವರಂತೆ ಆದರೆ ಜೋಳ ಕೊಳ್ಳಲು ಸಾಕಾಗದ ನೋಕರರ ಸಗಾರವು ಹೆಚ್ಚಿನ ಧಾನ್ಯ ಹೇಗೆ ಸಿಗಬೇಕು ? ಈ ಜನರು ಕಂಟ್ರೋಲರ ಕಡೆಗೆ ಅರ್ಜಿಗಳನ್ನು ಕಳಿಸುವರಂತೆ ಆ ಅರ್ಜಿಗಳ ಬಗ್ಗೆ ಸಹಾನುಭೂತಿಪೂರ್ವಕ ವಿಚಾರ ಮಾಡಲಾಗುವದೋ ?

ಓರ್ವ ಅನುಭವಿಕ

ನೂಚನೆ :— ಈ ಸಲ ನಾಲ್ಕೆಪುಟಗಳಿವೆ

ಶ್ರೀಮಂತ ರಾಜೇಸಾಹೇಬರು ಮೊನ್ನೆ ಇಲ್ಲಿಗೆ ಮರಳಿ ಬಂದಿದ್ದಾರೆ. ಇಲ್ಲಿಯ ಪವಾರ ಪ್ರಕರಣದ ಬಗ್ಗೆ ಇಷ್ಟು ದಿನ ನಡೆದ ಕೂಲಾಟದ ಪರಿಣಾಮವಾಗಿ ದರ್ಬಾರನು ಆ ಒಗ್ಗ ವಿಚಾರ ಮಾಡಿ ಬೇಗನೇ ನಿರ್ಣಯ ಕೊಡಲಿದೆಂದು ತಿಳಿಯುತ್ತದೆ

ದುಃಖವಾರ್ತೆ

ಇಲ್ಲಿಯ ಸರ್ಕಾರೀ ದವಾಖಾನೆಯಲ್ಲಿ ಚೀಫ ಮೆಡಿಕಲ ಆಫೀಸರರೆಂದು ಕೆಲಸದಾಡಿದ ಡಾ ಪಟವರ್ಧನ ಇವರು ತಾ ೩೦ ದಿನ ಪುಣೆಯಲ್ಲಿ ಸ್ವರ್ಗಸ್ಥರಾದರು ಇವರು ಕಳೆದ ಐದು ತಿಂಗಳಿಂದ ಆರ್ಥಾಂಗ ವಿಕಾರದಿಂದ ಒಳಲುತ್ತಿದ್ದರು.

—: ಶ್ರೀ ಕಾಡಸಿದ್ಧೇಶ್ವರ ಪ್ರಸನ್ನ. :—

ಶ್ರೀ ಕಾಶೀ ರಾಮೇಶ್ವರ ಮಹಾ ಯಾತ್ರೆಯು

ಒಳ್ಳೇ ಸುಂದರ ಪ್ರವಾಸವು.

ತಾ॥ ೭-೧೧-೪೭ ರಿಂದ-

೮-೧-೪೮ರ ವರೆಗೆ

ಪ್ರಸಿದ್ಧ ೫೭ ಪುಣ್ಯ — ತೀರ್ಥ ಕ್ಷೇತ್ರಗಳು

ಶೇಕಂಡ ಕ್ಲಾಸ ಚಾರ್ಜು ೩೨೫ ರೂಪಾಯಿಗಳು.

ಥರ್ಡ ಕ್ಲಾಸ ಚಾರ್ಜು ೧೭೫ ರೂಪಾಯಿಗಳು.

ಸೂಚನೆ—ಟ್ರೈನಲ್ಲಿ ಒಬ್ಬರಿಗೆ ಇಬ್ಬರ ಸ್ಥಳ ಸಿಗುವದು ಮತ್ತು ಟಿಕೀಟಗಳು ತೀವ್ರದಲ್ಲಿ ಖರ್ಚಾಗುವವು ಸುಸ್ತಿ ಮಾಡದೆ ಸ್ಥಳ ಸಿಗಲಾರದು. ಟಿಕೀಟುಗಳು ಸಿಗುವಷ್ಟರಲ್ಲಿ ರಾ॥ ಪಂಡಿತಪ್ಪಾ ಸಿದ್ದಪ್ಪಾ ಕಾಂಬಳೆ ಇವರ ಆಂಗಡಿಯಲ್ಲಿ ದೊರಯುತ್ತವೆ. ಹೆಚ್ಚಿನ ಮಾಹಿತಿಯ ಬಗ್ಗೆ ಪತ್ರವ್ಯವಹಾರ ಮಾಡಿರಿ ಅಥವಾ ಸಮಕ್ಷಕ ಭೆಟ್ಟಿ ಯಾಗಿರಿ. ಮತ್ತು ಜಾಹಿರಾತ ನೋಡಿರಿ.

ಟಾಪ್ಲಿಲಿಂಗ ವ್ಯಾನೇಜರ ಆರ್ ಎಸ್ ಕಾಂಬಳೆ. } ಶ್ರೀ ಶಿವಾನಂದ ಯಾತ್ರಾ ಕಂಪನಿ ಒನಹಟ್ಟಿ ಪೋ. ಮು ಬನಹಟ್ಟಿ. ವ್ಹಾಯಾ ಕುಡಚಿ.

ವ್ಯಾನೆಜರ
ಎಸ್. ಪ್ಟಿ ಬಂಗಿ

ಉತ್ಕೃಷ್ಟ ಪೇಢೆ ! ಮತ್ತು

ಸುವಾಸಿಕ ಚ್ಯೂಡಾ ! !

ದೊರೆಯುವದೊಂದೇ ಸ್ಥಳ !

ಬಾಳಾರಾಮ ತುಕಾರಾಮ ಚೋಪಡೆ

ಜಮಖಂಡಿ.

ಈ ವೃತ್ತಪತ್ರವನ್ನು ಶ್ರೀ ಆ. ಮಾ ಸಾಖಡೆ ಇವರು ತಮ್ಮ ಭಾರತ ಮುದ್ರಣಾಲಯದಲ್ಲಿ ಮುದ್ರಿಸಿದರು ಸಂಸ್ಥಾನಿಸ್ವರಾಜ್ಯ ಆಫೀಸಿನಲ್ಲಿ ಪ್ರಸಿದ್ಧಿಸಿದರು.

"SAMPAT" KANNADA PERIODICAL, BIJAPUR.
ಜನಹಿತದ ಸಂಪತ್ತಿಗಾಗಿ ಪದಸಮ್ಮಿಲನವನ್ನು ಜೋಗ್ಯತ್ತಗೊಳಿಸುವ ಕನ್ನಡ ಪತ್ರಿಕೆ.

ಮತಶಕ್ತಿ ಅಂಕ

ಸಂಪತ್ತು

ಮಟಗಳು ನಾಲ್ಕು ಬಿಡಿಸಂಚಿಕೆ ಒಂದಾಣೆ

ಸಂಪುಟ ೧] ಗುರುವಾರ ದಿ. ೧-೧೧-೧೯೫೧ [ಸಂಚಿಕೆ ೧

ಬಚ್ಚಿಹಾಕುವ ಮತದಾನಕ್ಕೆ ಮೊದಲೇ ಬಿಚ್ಚಿತೋರಿಸುವ ನಿಚ್ಚಳ ಜನಾಭಿಪ್ರಾಯ

ಅಪಾದನೆ ಪ್ರತ್ಯಾಪಾದನೆಯ ೧೫ಲಕ್ಷ ಪತ್ರಗಳಿಂದ.

ಅವನ್ನು ಕೇಂದ್ರವು ಕಾಯ್ದಿಡುವದಂತೆ !

ಳಂಂ ಸ್ಥಳಗಳಿಗೆ ೩೫೦೦೦ ಅರ್ಜಿ
ನೋಕರಿಗಲ್ಲ ಲೋಕಸಭೆ ಮಾಗೂ ವಾಂತಿಕ ವಿಧಾನ
ಸಭೆಯ ಸ್ಥಳಗಳಿಗೆ. ಪರಿತೀಲಿಸುವದು ವರಾಕಷ್ಟ.
ಹುರಿಯಾಳುಗಳನ್ನು ನಿಲ್ಲಿಸುವ ಕಾರ್ಯ
ಏ. ಐ. ಸಿ ಸಿ ಮಾಡುವದಿಲ್ಲ
ವ್ಯಾದೇಶಿಕ ಕಾಂಗ್ರೆಸ್ ಕಮಿಟಿಗಳೇ ಮಾಡುವವು.
ಏಕನೂತ್ರತೆಗೊಳಗಾಗದ ವ್ಯಾದೇಶಿಕ ರಾಜಕಾರಣ

ಬೇರೆಯೂ ಬೇಕು.
ಬೆರೆತುಕೊಂಡೂ ಬೇಕು.
ಕಾಂಗ್ರೆಸ್ಸಿಟ್ಟ ಸ್ಥಳಗಳಲ್ಲದೆ ಸಾಮಾನ್ಯ ಸ್ಥಳಗಳಿಗೂ
ಮಹಿಳೆಯರಿಗೆ ಪುರುಷರು ಸ್ಪರ್ಧಿಸಬೇಕೆಂಬ ಅಂಶಿಷ್ಟ ವರ್ಗದ
ಮಹಾಮಂಡಲದವರು ಸಿದ್ಧತೆ ನಡೆಸಿದ್ದಾರೆ

ಸಂಪತ್ತಿನ ಸಂಪಾದಕರ ವೈಜ್ಞಾನಿಕ ಸಹಾಯದಿಂದ
ಯಂಗೋಸ್ಲಾವಿಯಾದ ಖಲಕ್ಷ ಆಗಷ್ಟೀಪರ ಸ್ಮಿತಗತಿ ಸಧರಿಸುತಿದೆ



ಜ್ಯೋತಿ !

ಚಾಚಿದೆ! ಚಾಚಿದೆ !
ಜ್ಯೋತಿಯ ನಾಲಿಗೆ !!
ಅರಗಿಸಿ ಅಪಕರ್ಷ,
ಮಿರುಗಿಸೆ ಉತ್ಕರ್ಷ.
ಬಾಳಿನ ಗಂಟಲ್ಲಿ ಅಡ್ಡಿಯಾಗಿರುವ
ತಿಳಿವಿನಗಳಿಕೆಯಬೆಳೆಯುಲು
ಬೆಳಗು ! ಬೆಳಗು !
ನಿರಂತರ ! ಚಿರಂತರ !!

"ಶಂಕರನ್"

ವಿಜಯಪುರ

ತನ್ನರಿವೆ ತನಗೆಗುರು

ಎಂಬಾನುಭವಿಯ ಬಸವಣ್ಣ"

ಸಂಪತ್

ವಿಜಾ ಊರ ದಿ. ೧-೧೧-೫೫ಶಾ.

ಮತಶಕ್ತಿ

ಪ್ರಜಾತಂತ್ರದ ಯುಗವಿದು.

ಭಾರತವು ಪ್ರಜಾಸತ್ತಾತ್ಮಕ ರಾಜ್ಯವಾಗಿದೆ.

ಇಲ್ಲಿ ವಯಸ್ಕಮತದಾರ ಪದ್ಧತಿಯಿಂದ ಒಡಳಿತಗಾರರ ಆಯ್ಕೆ ನಡೆಯುವದು. ಬ್ರಿಟಿಶರ ಆಧೀನದಲ್ಲಿದ್ದಾಗ ಅಂಧ ಚುನಾವಣೆ ನಾಟಕಗಳಾಗುತ್ತಿದ್ದವು. ಆಗ ಆರಿಸಲಾದ ಆಡಳಿತಗಾರರ ಮೇಲೊಂದು ಹಿಡಿತವಿದ್ದಿತು. ಜನರ ಸುಖದುಃಖಗಳ ಕೂಗಾಟವನ್ನು ಕೇಳುವ ಬೇರೊಬ್ಬರೂ ಆಗಿದ್ದರು.

ಈಗ ಭಾರತಕ್ಕೆ ಮಹಾತ್ಮಾಗಾಂಧಿಯವರಂಥ ಗುರುಗಳಿಲ್ಲದಾಗಿದೆ. ಸರ್ದಾರರಂಥ ಹಿರಿಯರಿಲ್ಲದಾಗಿದೆ. ಮತಾಧಿಕಾರವುಳ್ಳ ಜನಸಮೂಹವು ದಿಕ್ಕುಗಾಣದ ಅಜ್ಞಾನಾಂಧಕಾರದಲ್ಲಿದೆ. ಅಂಧಪ್ರಭೆಯುಳ್ಳ ಭಾರತೀಯರು ಹೋದ ಚುನಾವಣೆಗಳಲ್ಲಿ ಸ್ವಾರ್ಥತ್ಯಾಗಿಗಳನ್ನೇ ಆರಿಸಿತು. ಅಧಿಕಾರ ಸಂಪನ್ನತೆಯು ತ್ಯಾಗಿಗಳನ್ನು ಭೋಗಿಗಳನ್ನಾಗಿ ಪರಾವರ್ತಿಸುವುದರಲ್ಲಿ ಪರಿಣಾಮಕಾರಿಯಾಯಿತು. ಸೇವೆಯ ಆದರ್ಶ ಹೇಳಿನದರಲ್ಲಿ ಸಾಶ್ಚರ್ಯ ಉಳಿದಿತು. ಕೃತಿಗಿಳಿಸಲು ಅನೇಕ ತೊಡಕುಗಳಿರುವದು ನಿಜ. ಆದರೆ ಅಂಧ ಪರಿಸ್ಥಿತಿಯು ಂಟಾಗುವಂತೆ ಮಾಡಿದ ವಾತಾವರಣ ನಿಜವಾಗಿಯೂ ನೋಡಿದರೆ ಅಧಿಕಾರಾರೂಢರಾದವರಿಂದಲ್ಲ. ಅಧಿಕಾರಕ್ಕೆ ತಂಮ ಕೊಟ್ಟನರದಾಗಿದೆ.

ಮುಂಬರುವ ಮಹಾಚುನಾವಣೆಗಾಗಿ ಹೊಸಹೊಸ ಪಕ್ಷಗಳು ಮಟ್ಟ ಗಡಿಬಿಡಿ ನಡೆಸಿರುವಾಗ್ಗೆ ಮತದಾರನು ಇನ್ನೂ ಉದಾಸೀನನಾಗಿಯೇ ಉಳಿದುಕೊಂಡಿದ್ದಾನೆ. ತಾನು ನಿತ್ಯಅನುಭವಿಸುವ ಕಷ್ಟನಷ್ಟಗಳಿಗಾಗಿ ಒಂದು ಪಕ್ಷವನ್ನು ದೋಷಾರೋಪಣೆ ಮಾಡುವದಾಗಲೀ, ಬೇರೆಪಕ್ಷಗಳಲ್ಲಿವಿಶ್ವಾಸವಿಲ್ಲವೆ ಇದ್ದಕೊಳ್ಳುವುದಾಗಲೀ ಹಿತಕರವಲ್ಲ. ಯಾವ ಪಕ್ಷಗಳು ಬಂದರೇನ? ಜನಹಿತವನ್ನು ಸಾಧಿಸದ ಪಕ್ಷಗಳು ತಾಳಲಾರವೆಂಬುವದನ್ನು ತೋರಿಸುವ ಮತಶಕ್ತಿ ಜನರಲ್ಲಿದ್ದಾದರೆ. ಮಾತ್ರ ಸುಖಶಾಂತಿಗಳು ನೆಲಿಸಬಲ್ಲವು. ವ್ಯಕ್ತಿಮತಗಳೇನಿದ್ದರೂ ಜನಹಿತವ ಕಡೆಗೇ ಲಕ್ಷಗೊಟ್ಟು ಯಾವ ಪಕ್ಷದಯಾವ ವ್ಯಕ್ತಿಗಳು ಜನತೆಯ ಹಿತವನ್ನೇನು ಮಾಡಬಲ್ಲರೆಂಬುದನ್ನು ಅವರ ಚಾರಿತ್ರ್ಯದಿಂದ ಅಳವಾಗಿ ಯೋಚಿಸಿ ಮತದಾನ ಮಾಡುವ ಹೊಣೆ ಜನತೆಯಮೇಲಿದೆ. ಪಕ್ಷಪಕ್ಷಗಳ ಖಂಡನ ಮಂಡನಗಳ ಬರಿಹ ಲೇಖಗಳ ಪರಿಣಾಮಕ್ಕೊಳಗಾಗದೇ ನ್ಪಷ್ಟಿ ಈವರೆಗಿನ ಅನುಭವ ಹಾಗೂ ಸಾರಾಸಾರ ವಿಚಾರದಿಂದ ಮತದಾನದಲ್ಲಿ ತ್ರೈಷ್ಠಕರ್ತವ್ಯವನ್ನು ನೆರವೇರಿಸುವಂತಿರಬೇಕು. ಇಲ್ಲವಾದರೆ ತಪ್ಪನ್ನು ಮತ್ತೊಂದು ಚುನಾವಣೆಯವರೆಗಾಗಲೀ ಅಥವಾ ಬೇರಾರಿದ ದುಸ್ಥಿತಿಯನ್ನು ಹೋಗಲಾಡಿಸಲು ದಿರ್ಘಕಾಲದವರೆಗಾಗಲೀ ಅನುಭವಿಸುವಂತಾಗಬೇಕಾಗುವದು.

ಸಂಪತ್ತಿನ ಸದುದ್ದೇಶ.

ಪ್ರಜಾತಂತ್ರದಲ್ಲಿ ವ್ಯಕ್ತಿಯು ರಾಷ್ಟ್ರದ ಮುಖ್ಯ ಘಟಕ ವ್ಯಕ್ತಿಜೀವನದ ಸರ್ವಾಂಗಸುಂದರ ಉನ್ನತಿಯು ರಾಷ್ಟ್ರಜೀವನದಲ್ಲಿ ಸಮರಸವಾಗಿ ಹೊಂದಿಕೊಳ್ಳುವದು ಅತ್ಯಾವಶ್ಯಕ. ಆವತ್ತೆ ವ್ಯಕ್ತಿ ಸ್ವಾತಂತ್ರ್ಯವನ್ನು ರಾಷ್ಟ್ರವಿಘಾತಕವಾಗದಂತೆ ಶುದ್ಧವಾಗಿ ಕಾಯ್ದುಕೊಳ್ಳುವದಾದರೂ ಅತಿ ಮಹತ್ವದ್ದಾಗಿದೆ "ಸರ್ವೇಜನಾಃ ಸುಖಿನೋಭವಂತು" ಎಂಬುದರ ಸಾಕ್ಷಾತ್ಕಾರ ಮಾಡಿಕೊಳ್ಳುವದು ಜನತೆಯ ಹಕ್ಕುಹೊಣೆಯಾಗಿದೆ. ವಿವೇಕ ಪೂರ್ಣ ವಿಚಾರ-ವಿಚಾರಪೂರ್ಣ ಕೃತಿಗಳು ಅದರ ಸಾಧನೆಗಾಗಿವೆ.

ಯಾವದೊಂದೇ ವಿಷಯದ ಒಂದೇ ದೃಷ್ಟಿಕೋಣದಿಂದ ಕಾಣುವ ವಿಪರೀತ ವಿಚಾರಗಳ ಅತಿರೇಕದ ಪ್ರಭಾವದಿಂದ ಖಂಡನ ಮಂಡನ ಮಾಡುವ ವಿಘಾತಕ ರೀತಿಯು ಸಮಾಜ ಸ್ವಾಸ್ಥ್ಯಕ್ಕೆ ಎಂದೂ ಕಲ್ಯಾಣಕಾರಿಯಾಗದು. ದೇಶ ಕಾಲ ಮಾನ ಪರಿಸ್ಥಿತಿ ವಾತಾವರಣಗಳಲ್ಲಿ ಸಾಧಕ ಬಾಧಕವಾಗಿ ಸಂಬಂಧಿಸಿದ ಎಲ್ಲ ಸಮಸ್ಯೆಗಳ ಸರ್ವಾಂಗಗಳ ಪರಿಶೋಧನೆಯಿಂದ ಸೂಕ್ತ ವಿವೇಚನೆಯನ್ನುಮಾಡಿ ಸಾರಾಸಾರ ವಿಚಾರದಿಂದ ಜನರೇ ಸ್ವಯಂ ನಿರ್ಣಯಕ್ಕೆ ಬರುವಂತೆ ಮಾಡುವ ಸದ್ವಿವೇಕ ಬುದ್ಧಿಯನ್ನು ಜಾಗೃತಗೊಳಿಸುವದೇ ಪತ್ರಿಕೆಯ ಗುರಿಯಾಗಿದೆ. ಬಾಳಿನ ಸುಖ ಶ್ರೇಯಗಳ ಸೂತ್ರವಾದ "ಸೂಕ್ಷ್ಮವಾಗಿ ನಿರೀಕ್ಷಿಸಿ, ಆಳವಾಗಿ ವಿಚಾರಿಸಿ, ತಿಳಿದುಕೊಂಡು ವರ್ತಿಸಿ" ಎನ್ನುವದೇ 'ಸಂಪತ್' ಪತ್ರಿಕೆಯ ಅಂತರಂಗದ ಕಳಕಳಿಯ ಕೋರಿಕೆಯಾಗಿದೆ. ವ್ಯಕ್ತಿಗಳು ತತ್ವಬದ್ಧರೂ, ವಿಚಾರಶೀಲರೂ, ಕ್ರಿಯಾ ಸಂಪನ್ನರೂ, ಕರ್ತವ್ಯ ನಿಷ್ಠರೂ ಆಗಬೇಕೆಂಬುದೇ ಪತ್ರಿಕೆಯ ಹಿರಿಯಾಸೆಯಾಗಿದೆ

"ಸಂಪಾದಕರು."

[ವಿ. ಸೂ:- ಲೇಖಕರು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯಕ್ಕೆ ಸಂಪಾದಕರು ಹೊಣೆಗಾರರಲ್ಲ.]

ದೀಪಾವಳಿಯ ಸಂದೇಶ.

ದೀಪಾವಳಿಯ ದಿವ್ಯಪ್ರಕಾಶವು
ಕುರುಡುತನದ ಕತ್ತಲೆಯ ಕಡೆಗ
ಣಿಸಿ ಸತ್ಯತೆಯ ಸೂರೆಗೊಳ್ಳಲಿ.
ಅಜ್ಞಾನಾಂಧಕಾರದ ಮೂಲಕ ಗತದಿನ
ಗಳಲ್ಲಿ ಅನುಭವಿಸಿದ ದುಃಖಗಳನ್ನು
ದೂರಿಕರಿಸುವ ತಿಳುವಳಿಕೆಯ ಪ್ರಜ್ವಲಿತ
ಜ್ಯೋತಿಯ ಮುಂದಿನ ಮಾರ್ಗಕ್ರಮಣ
ದಲ್ಲಿ ಕೈದೀವಿಗೆಯಂತಾಗಲಿ!
ಸದಸದ್ವಿವೇಕವು ಜಾಗೃತಗೊಳ್ಳಿ
ಕರುಣಾಳು ಬಾ ಬೆಳಕೆ!

ಸರ್ವಶ್ರೇಷ್ಠವೆಂದು ಜಗತ್ಪ್ರಸಿದ್ಧವಾದ

ಟ್ರ್ಯಾಕ್ಟರ್

ಗಳಿಗಾಗಿಯೂ ಅವುಗಳಿಗೆ ಬೇಕಾಗುವ
ಬಿಡಿಭಾಗ ಹಾಗೂ ಸೇವೆಗಾಗಿಯೂ
ಎನ್. ಎ. ಸಿರೂರ, ಕೃಷಿಯಾಂತ್ರಿಕ
ಕೇಂದ್ರ ಹುಬ್ಬಳ್ಳಿ, ಶಾಖೆ ವಿಜಾಪೂರ
ಇತರ ಸಂಬಂಧದ ಬೆಳೆಕಿರಿ

DHARWAR

ದೀಪಾವಳಿ

ದೀಪಾವಳಿ——ದಿವಾಳಿ

ನೀರುತುಂಬುವ ಹಬ್ಬ, ನರಕ ಚತುರ್ದಸಿ, ದೀವಳಿಗ ಅಮಾವಾಸೆ, ಬಲಿಪಾಡ್ಯ, ಹೀಗೆಲ್ಲ ಒಂದೇಸವನೆ ನಾಲ್ಕಾರು ದಿನ ಮನೆಮನೆಗಳಲ್ಲಿ ಹಬ್ಬವೇ ಹಬ್ಬ!

ಹಿರಿಕಿರಿಯರಿಗೂ ಸ್ತ್ರೀ ಪುರುಷರಿಗೂ, ಸಾಮಾನ್ಯವಾಗಿ ಎಲ್ಲರಿಗೂ ಆನಂದವೇ ಆನಂದ! ಏಕೆ? ಈ ಹಬ್ಬಗಳಲ್ಲಿ ತಿಂಡಿ ತಿನಸು (ಸೀದಾ ಪದ್ಧತಿಯಿಂದೆಷ್ಟು ಸುಲಭವೋ) ಉಡಿಗೆ ತೊಡಿಗೆ (ಟೆಕ್ಸಟಾಯಿಲ್ ಆರ್ಡರುಗಳಿಂದೆಷ್ಟು ಸರಳವೋ?) ವಸ್ತ್ರವಡವೆ (ಆರ್ಥಿಕ ವಿಷಮ ಪ್ರಸಾರದಲ್ಲೆಂತು ಪರಿಯೋ?) ಅಂತೂ ಇಂತೂ ಎಂತೋ ಸಮಾಧಾನ ಹೆಚ್ಚಿಕೊಂಡಾದರೂ ಪರಿವಾರದಂತೆ ಹಬ್ಬವನ್ನು ಹ್ಯಾಗೋ ಹೇಗೋ ಪಾಲಿಸುವದು ಬಡಲಾರದ ಕರ್ಮವಂತಾಗಿದೆ ಜನರಿಗೆ. ಅನ್ನ ಅರಿವೆ ಆಶ್ರಯಗಳ ಅಭಾವದ ಪ್ರಭಾವಕ್ಕೊಳಗಾದ ಜನ ಸಾಮಾನ್ಯನು ಅನುಭವಿಸುವ ಆನಂದೆ ಅವನಿಗೇ ಗೊತ್ತು! ಇಲ್ಲಿ ವರ್ಣಿಸುವದು ಅಸಾಧ್ಯ.

ದೀಪಾವಳಿಯ ಆದರ್ಶ

ದೀಪವು ಅಂಧಕಾರವನ್ನು ಹೊಡೆದೋಡಿಸುವ ಸಾಧನವಾಗಿರುವದು ಎಲ್ಲರಿಗೂ ತಿಳಿದ ವಿಷಯ. ದೀಪವು ಸ್ವಾರ್ಥತ್ಯಾಗದ ದ್ಯೋತಕ, ಪರೋಪಕಾರದ ಪ್ರತೀಕ! ತಿಳಿದವರ ಪ್ರಕಾಶವನ್ನು ಜ್ಞಾನಕ್ಕೆ ಹೋಲಿಸುವರು ಕಲ್ಯಾಣಕಾರಿಯಾದ ತಿಳುವಳಿಕೆಯು ಬೆಳಕನ್ನು ಬೀರುವಂತಾಗಲಿ ಈದೀಪಾವಳಿಯು. ಲಕ್ಷ್ಮೀ ಸರಸ್ವತಿಯರ ಸಾಮರಸ್ಯಪೂಜೆಯು ಜ್ಞಾನಸಂಪತ್ತೇ ಆಗಿದೆ. ಆ ಅವ್ಯತೆಯನ್ನು ಜನತೆಯಲ್ಲು ಸವಿಯುವಂತಾಗಲಿ!

ವರ್ತಕರ ವರ್ಷಾರಂಭ.

ವಿಕ್ರಮಶಕೆ ಪ್ರಚಲಿತವಿರುವ ಉತ್ತರ ಭಾರತದಲ್ಲಿ ದೀಪಾವಳಿಯು ನೂತನ ವರ್ಷಾರಂಭವಾಗಿದೆ. ವ್ಯಾಪಾರಕ್ಕಾಗಿ ಕರ್ನಾಟಕದಲ್ಲಿ ಬಂದಿಪ್ಪ ಗುಜರಾಥಿ, ಮಾರವಾಡಿ ಮೊದಲಾದವರು ತಮ್ಮದೇ ಆದ ಸಂಪ್ರದಾಯದಂತೆ ದೀಪಾವಳಿಗೆ ತಮ್ಮ ಲೆಖ್ಖ-ಪತ್ರಕ್ಕಾಗಿ ವರ್ಷಾರಂಭಮಾಡುವರು. ಅವರ ಪ್ರಭಾವಕ್ಕೊಳಗಾದ ಕನ್ನಡ ವ್ಯಾಪಾರಸ್ಥರೂ, ವ್ಯವಹಾರದ ಅನುಕೂಲತೆಗಾಗಿಯೋ ಅಥವಾ ಅನರಂತೆ ತಾವೂ ಲಕ್ಷ್ಮೀ ಪುತ್ರರಾಗುವ ಹಿರಿಯಾಸೆಯಿಂದಲೋ ಅವರನ್ನನುಸರಿಸುವರು. ಕರ್ನಾಟಕವಲ್ಲಿ ಶಾಲಿವಾಹನ ಶಕೆಯು ಪ್ರಚಲಿತವಿರುವದು ಅವರಿಗೆ ಗೊತ್ತಿಲ್ಲವೊ? ಅಥವಾ ಗೊತ್ತಿದ್ದರೂ ಅದರ ಪ್ರಕಾರ ಯುಗ ಪ್ರತಿಪದೆಗೆ ವರ್ಷಾರಂಭ ಮಾಡಲು ಇಚ್ಛೆ ಇವರಿಗಿಲ್ಲವೊ? ಪರಕೀಯತೆಗಾಗಿರುವ ವ್ಯಾಮೋಹವು ಸ್ವಕೀಯತೆಯನ್ನು ಅನಾದರಿಸುವಂತಾಗಬಾರದು. ಸ್ವಕೀಯತೆಯು ಸಂಕುಚಿತವೇ? ದಾಸ್ಯಭಾವವು ಔದಾರ್ಯವೆ?

ಕಂಠಶೋಷ

ಪಕ್ಷಗಳಿಗೆ ಚುನಾವಣೆ ಗಡಿಬಿಡಿ!
ಪತ್ರಿಕೆಗಳಿಗೆ ಕೂಗಾಟ!
ಹುರಿಯಾಳು ಹುರಿಗಾಳಿನಂತೆ!
ಮತದಾರರಿಗೆ ಮಾತ್ರ
ಬಿಸಿತುಪ್ಪ ನುಂಗುವ ವೇಚಾಟ!

ಕರ್ನಾಟಕದಲ್ಲಿ ಕಾರ್ತೀಕ!

ಕನ್ನಡನಾಡಿನ ಜನರುನ್ನತಿಗಾಗಿ ಕನ್ನಡಿಗರ ಕೂಗು ಪರಿಣಾಮಕಾರಿಯಾಗದಿರಲು ಕುಂದುಕೊರತೆಗಳು ಹೀಗೆ ಕೆಲವಿನ್ನೆಷ್ಟೋ ಇವೆ.

ಕನ್ನಡನಾಡಿನ ಸರ್ವಾಂಗೀಣ ಏಳ್ಗೆಗಾಗಿ ಕರ್ನಾಟಕತೆಯು ಪರಿಪೂರ್ಣವಾಗುವದು ಬೇಡವೆ? ಕನ್ನಡ ಭಾಷೆ ಬರಹ ರೀತಿ ರೂಢಿಗಳಿನ್ನೆಷ್ಟೋ ಸ್ವಕೀಯತೆಯನ್ನು ಕಳೆದು ಕೊಳ್ಳುತ್ತ ವಿದ್ಯುತ್ಸಂಗೊಳ್ಳುತ್ತಿರುವದು ಮನೋವೇಧಕವಾಗಿದೆ. ಕನ್ನಡ ವರ್ತಕ ವರ್ಗದಲ್ಲಿ ರೂಢಿವಾಗಿರುವ ಕನ್ನಡವಲ್ಲದ ಭಾಷೆ ಬರಹಗಳ ಧಾರಾಳ ಉಪಯೋಗದಬಗೆಯನ್ನು ನೋಡಿದರೆ ಕನ್ನಡ ಭಾಷಾಭಿಮಾನಿಗಳಿಗೆ ನಾಚಿಕೆ ಬರುವಂತಿದೆ. ಕನ್ನಡ ಭಾಷೆಯಲ್ಲಿ ಭಾವನೆಗಳನ್ನು ವ್ಯಕ್ತಗೊಳಿಸಲು ಇರುವ ಕನ್ನಡ ಶಬ್ದಸಂಪತ್ತಿಯ ಜ್ಞಾನವನ್ನಾಡಿಕೊಳ್ಳುವದನ್ನು ಬಿಟ್ಟು ಪೂರ್ವಕವಾಗಿ ಬಿಟ್ಟು ಪರಶಬ್ದಗಳನ್ನೇ ತಂತೋತಂತ್ರವಾಗಿ ಉಪಯೋಗಿಸುವ ಈ ಪದ್ಧತಿಯ ಕನ್ನಡ ವರ್ತಕರಿಗೆಷ್ಟು ಭೂಷಣಪ್ರದವೊ? ಇವರ ಇಂಥ ಕೃತಿಯು ಕನ್ನಡದ ದಾರಿದ್ರ್ಯವನ್ನು ಪ್ರದರ್ಶಿಸದೆ ಬಿಡದೇ?

ಸ್ವಭಾಷೆಯ ಶಬ್ದಗಳಿಲ್ಲದಿದ್ದಲ್ಲಿ ಪರಭಾಷೆಗಳನ್ನು ತನ್ನ ಭಾಷೆಗೆ ಹೊಂದಿಕೆಯಾಗುವಂತೆ ರೂಪಾಂತರಗೊಳಿಸುವ ಸಾಮರ್ಥ್ಯ ಎಲ್ಲ ಭಾಷೆಗಳಲ್ಲೂ ಇವೆ. ಆಂಧ್ರ ಕನ್ನಡಿಗರಿಗಷ್ಟು ಆತಂಕಗಳಿಲ್ಲ. ಆವರೆ ಇಂಗ್ಲೀಷ, ಮರಾಠಿ, ಹಿಂದಿ, ಗುಜರಾಥಿ ಮೊದಲಾದ ಕೇವಲ ಪರಭಾಷೆಗಳನ್ನೇ ಬಳಕೆಯು ಕನ್ನಡ ಭಾಷೆಯಲ್ಲಿ ಸಂಬುತ್ತಹೋದರೆ ಕನ್ನಡಭಾಷೆಗೆ ಉಳಿಗಾಲವಾಗಿ ಇನ್ನೊಂದು ಪಂಚರಂಗೀ ಭಾಷೆಗೆ ಜನ್ಮಕೊಟ್ಟಂತಾಗುವದು. ಕನ್ನಡ ವರ್ತಕರು ಉಪಯೋಗಿಸುವ ಭಾಷೆ ಬರಹಗಳು ಕನ್ನಡಿಗರಿಗೆ ನಿಜವಾಗಿಯೂ ವಿನಂಜನೆಗೊಳಿಸದಿರವು. ಅದರಂತೆ ಕನ್ನಡ ಅಧಿಕಾರವರ್ಗದಲ್ಲುಪಯೋಗಿಸಲಾಗುವ ಭಾಷೆಯೂ ಬಹು ವಿಲಕ್ಷಣವಾಗಿದೆ. ಹೀಗಲ್ಲ ಆದರೆ ಕನ್ನಡತನಕ್ಕೆ ಇನ್ನು ಉಳಿಗಾಲವೆಲ್ಲಿ? ಕನ್ನಡವೇತರ ಭಾಷೆ, ಪದ್ಧತಿಪರಿಗಳಿಗೆ ಮನ್ನಿಸುವದು ಅತ್ಯಾವಶ್ಯಕ ಆತ್ಮದ್ರೋಹಿಯಾದ ಪರದಾಸ್ಯವರಂತೆಯನ್ನು ಪ್ರಮೇಣವಾನವರು ಕಡಿಮೆಮಾಡಲು ಪ್ರಯತ್ನಿಸಿದಲ್ಲಿ ಕ್ಷೇಮಕರವಾಗಬಹುದಲ್ಲವೆ! ಕನ್ನಡಿಗರ ಕಣ್ಣು ಕಾರ್ತೀಕದ ಬೆಳಕನ್ನು ಕಾಣುವಂತಾಗಲಿ!

ಪರದಾಸ್ಯಭಾವದ ಕೊನೆಯು ದಿವಾಳಿಯಾಗಲಿ!
ಸ್ವಕೀಯತೆಯ ದಿವಾಳಿ ಕೊನೆಗೊಳ್ಳಲಿ!!
ದೀಪಾವಳಿಯ ದಿವ್ಯ ಪ್ರತಿಭೆಯು
ಭೈದೀಪ್ಯಮಾನವಾಗಲಿ!!

ಮಾತು ಹಿತ ಮಿತ ಋತವಾಗಿರುವದು ಉಚಿತ

ಪ್ರಚಾರಕಾರ್ಯವು

ಹೊಣೆಗಾರ ರಾಯಭಾರಿಯಂತೆ
ಫಲಕಾರಿ ವರ್ಚಸ್ಸುಳ್ಳವರಾಗಿರಬೇಕು.
ಏನು? ಎಲ್ಲಿ? ಏಕೆ? ಹೇಗೆ?
ಎಂಬ ವಿಷಯಗಳನ್ನು ಸಚಿತ್ರವಾಗಿ ಸಂಗ್ರಹಿಸಿ
ಪೇಚಾಟ ತಪ್ಪಿಸಲು
ವಿಶ್ವಸನೀಯವಾದ ಸೇವೆಗಾಗಿ ಜನಪ್ರಿಯವಾದ
ಲಿಪಿ-ವಿಕಾಸ ಕಾರ್ಯಾಲಯಕ್ಕೆ
ನಿಮ್ಮ ಕೆಲಸಗಳನ್ನು ಒಪ್ಪಿಸಿರಿ.

ತನ್ನ ತನದ ಮೈಮರವು!

ರೋಮು ಸಾಮ್ರಾಜ್ಯದಂತೆ ಎಷ್ಟೋ ಜನಾಂಗಗಳು ಜನ್ಮತಾಳಿ ಬೆಳೆದು ಕಣ್ಮರೆಯಾದವು ಸಂಸ್ಕೃತಿಯಷ್ಟೂ ಜನಕ್ಕೆ ಗೌರವ ಇಲ್ಲದಂತೆಯೂ ಆದವು.

ಆದರೆ – ಅನಾದಿ ಕಾಲದಿಂದಲೂ ಭಾರತದ ಸಂಸ್ಕೃತಿ ಮಾತ್ರ ಆಘಾತ ಪ್ರತ್ಯಾಘಾತಗಳನ್ನು ತಡೆದುಕೊಂಡು ನಿಂತಿದೆ. ಇತಿಹಾಸ ಪೂರ್ವಕಾಲದಿಂದ ಈವರೆಗೂ ಏಕರೂಪತೆಯು ಬಹು ವಿಶಾಲವಾದ ಈ ಭಾರತದಲ್ಲಿ ಅನೇಕಾನೇಕರೂಪಾಂತರಗಳುಂಟಾದಾಗ್ಯೂ ಏಕರೂಪತೆಯ ಪರಂಪರೆ ಎಡೆಬಿಡದೆ ಬಂದಿದೆ.

ಭೂಭಾಗದ ಮೇಲಿನ ಎಲ್ಲಾದೇಶಗಳನ್ನೂ ಸ್ವಾಭಾವಿಕವಾಗಿ ಬಂಡಿಸುವ ನಿರ್ದಿಷ್ಟತೆಗೆ ಹೊಂದಿಕೊಳ್ಳುವಂತೆ ಬದಲಾವಣೆಗಳಾಗುತ್ತಿರುವಾಗ ಆಪರಂತೆ ಭಾರತವೂ ತನ್ನ ತನವನ್ನು ಕಾಯ್ದುಕೊಳ್ಳಬೇಕಲ್ಲವೆ?

ವಿಜ್ಞಾನ ಯುಗದಲ್ಲಿ ಎಲ್ಲರಲ್ಲೂ ಪ್ರಗತಿಯ ಸತ್ಯಾನ್ವೇಷಣೆಕ್ಕಾಗಿ ಸಂಶೋಧನೆ ನಡೆದಿರುವುದರಿಂದ ಆದರೆ ಭಾರತೀಯರು ಸತ್ಯಾನ್ವೇಷಣೆಯಿಂದ ಪರಿಪೂರ್ಣತೆಯನ್ನು ಕಂಡುಕೊಂಡವರು. ಮಹರ್ಷಿಗಳ ಮಹತ್ವ ತಿಳಿದುಕೊಳ್ಳುವುದಕ್ಕೆ ನಮ್ಮಲ್ಲಿರುವ ದಿವ್ಯದೃಷ್ಟಿ ಸಾಧು ಸಂತರು ಚಾರಿತ್ರ್ಯದಲ್ಲಿ ನಾವು ಬಳಕನ್ನು ಕಾಣಲು ಆಧುನಿಕ ಧುರೀಣರಾದ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅರವಿಂದಘೋಷ, ರವೀಂದ್ರನಾಥ ಟ್ಯಾಗೋರ, ಮಹಾತ್ಮಾ ಗಾಂಧಿರವರ ಆದರ್ಶವನ್ನು ನಾವು ಕಾಣ್ದುಕೊಳ್ಳುವುದಲ್ಲಿ ಸಂಚಕರಾದರೆ, ಭಾರತ ಸಂಸ್ಕೃತಿಯಲ್ಲಿ ಪರಿಪೂರ್ಣವಾಗಿರುವ ಜ್ಞಾನ ಸಂಪತ್ತನ್ನು ಸವಿಯಲು ಸಾಧ್ಯವೇ?

ಆಧುನಿಕೆಯೇ ಸಂಸ್ಕೃತಿ ಉತ್ತರ ಕುಮಾರತೆಯು ಪರಕೀಯತೆಯು ಬೆನ್ನು ಪ್ರತಿರೂಪವು ಸಹಜವಾಗಿದೆ.

ಜಾಣೆಯರಂಥ ರಾಜಕಾರಣಿಗಳು, ಮನುವಿನಂಥ ಸಮಾಜ ಶಾಸ್ತ್ರಕಾರರೂ ವಾಗ್ಭಟರಂಥ ಆಯುರ್ವೇದ ಶಾಸ್ತ್ರಜ್ಞರೂ ವಿಗ ಗಣಂಗ ನೀತಿಕಾರರೂ ಖಗೋಳ ಗಣಂದ ಸಮಾಜ ಸುಧಾರಕರು ತತ್ವಜ್ಞಾನಿಗಳು ಆತ್ಮಜ್ಞಾನಿಗಳೇ ಮೊದಲಾದ ವಿದ್ವಾಂಸರನ್ನೇನು ಭಾರತದ ವಿವಿಧೆಡೆ ಜನಿಸಿದ್ದಲ್ಲಿ ಮೇಲೆ ಕಾರಿಯಾದಂಥ ಪರಿಪೂರ್ಣತೆಯನ್ನು ಕಂಡು ಕೊಂಡಿರುವ ದನ್ನು ನಾವು ಮರತೇಬಿಡುವೆವು. ಸ್ವೈಚ್ಛೆತ ತಾಯಿಯು ಎತ್ತಿಕೊಂಡ ಕೂಸನ್ನೇ ಹುಡುಕ ಹೊರಟಂತೆ ನಮ್ಮಲ್ಲಿರುವ ಜ್ಞಾನ ಸಂಪತ್ತು ಕಂಡುಕೊಳ್ಳದೆ ಹೊರ ಸಂಪತ್ತಿನ ಹೊಳಪಿಗೆ ಬೆನ್ನು ಹತ್ತಿದ್ದೇವೆ. ಇದು ಅತ್ಯಂತ ಶೋಚನೀಯವಾದ ಆತ್ಮವಿಸ್ಮೃತಿಯ ಲಕ್ಷಣ.

ತನ್ನರಿವೆ ತನಗೆ ಗುರು ಎಂದು ಹೇಳಿದ ಮಹಾನುಭಾವ ಬಸವಣ್ಣನವರ ಉಪದೇಶವನ್ನು ನಾವು ಅಕ್ಷರಶಃ ಪಾಲಿಸುವ ಕಾಲ ವಿದೀಗ ಬಂದಿದೆ. ಪ್ರಜಾತಂತ್ರದ ಯಶಸ್ಸಿಗೆ ಇದು ಮೂಲಾಧಾರ. ಭಾರತವು ಜಗತ್ತಿನಲ್ಲಿ ವಿಸ್ತಾರವಾದ ಜನಮತಾಧೀನ ರಾಜ್ಯವಾಗಿದೆಂದು ನಾವು ಬಲು ಹೆಮ್ಮೆಯಿಂದ ಹೇಳುವೆವು. ಆದರೆ ಜನಮತದ ಸ್ಥಿತಿಗತಿ ಇತಿಮಿತಿಗಳೆಂತು? ಆದರ ಸ್ವರೂಪಕ್ಕೆ ಆಧಾರವಾವುದು? ರಾಜ್ಯ ದಾಡಳಿತೆಯ ದೋಷಗಳಿಗಾಗಿ ಜನತೆಯು ಕಡೆಗೆ ಬಟ್ಟುಮಾಡಿ ತೋರಿಸುವ ಮತ್ತು ಯಶಸ್ಸುಗಳಲ್ಲಿ ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಳ್ಳುವ ಕುಟಿಲ ನೀತಿಯ ಚಾಣಾಕ್ಷ ರಾಜಕಾರಣಿಗಳು ನಾವಾಗಹತ್ತಿದ್ದೇವೆ. ನಮ್ಮ ನಿಷ್ಕೃಯತೆ ಹಾಗೂ ಕರ್ತವ್ಯ ಚ್ಯುತಿಯಿಂದ ಉದ್ಭವಿತವಾದ ಪರಿಸ್ಥಿತಿಯನ್ನು ನಾವೇ ಅನುಭವಿಸಬೇಕಲ್ಲವೇ? ಅಳುರನ್ನು ಹಳಿದರೇನು ಪ್ರಯೋಜನ? ಇನ್ನು ವೇಳಾದರೂ ನಮ್ಮಲ್ಲಿ ಸದಸದ್ವಿವೇಕ ಬುದ್ಧಿಯು ಜಾಗ್ರತಗೊಳ್ಳಲಿ.

ಜಗತ್ತಿನಲ್ಲಿ ನಿರುದ್ಯೋಗದ ಸರಿಲೆಕ್ಕ.

ಯೂರೋಪಿನಲ್ಲಿರುವಕ್ಕಿಂತ ಏಷ್ಯಾದಲ್ಲಿ ನೂರಕ್ಕೆ ೧೪-ಪಟ್ಟು ನಿರುದ್ಯೋಗ ಭಾರತದಲ್ಲಿ ಬೇರಿದೆ.



The figures in the chart above are based on recent statistics compiled by the International Labor Office, one of the Specialized Agencies of the United Nations. They cover the following categories insured unemployed in Canada, Ireland and the United Kingdom (wholly unemployed); insured trade unionists unemployed in Denmark; estimated unemployed based on labor force sample surveys in the United States and Hawaii; registered unemployed in Austria, Finland, the German Federal Republic, India, Israel, South Africa, Switzerland; unemployed on relief in Fr

ನಮ್ಮಭವಿತವ್ಯ

ನಮ್ಮ
ಜೀವನದ ಮಟ್ಟ,
ನೈತಿಕ ಉನ್ನತಿ,
ಆತ್ಮಬಲ,
ವ್ಯಕ್ತಿ ಸ್ವಾತಂತ್ರ್ಯ
ಸಮಾಜ ರಚನೆ,
ರಾಷ್ಟ್ರೀಯ ಪ್ರವೃತ್ತಿ,
ಆಡಳಿತೆಯ ವಿಧಾನ,
ಈವರೆಗಿನ ಅನುಭವ,
ಸಂಸ್ಕೃತಿಯ ಪರಂಪರೆ,
ಸಂಪ್ರದಾಯಗಳ ಸಫಲತೆ,
ವೈಜ್ಞಾನಿಕ ಪ್ರಗತಿ,
ನಿರುದ್ಯೋಗಿಕ ಬೆಳವಣಿಗೆ,
ವಾಣಿಜ್ಯ ಉತ್ಕರ್ಷ,
ಆರ್ಥಿಕ ಭದ್ರತೆ,
ಅಂತರ್ರಾಷ್ಟ್ರೀಯ ಸ್ಥಾನ,
ಇವುಗಳನ್ನವಲಂಬಿಸಿದೆ.

ಸಂಪತ್ ಭಾರದ್ವಾಜದ ಪರವಾಗಿ ಶ್ರೀ. ಕ. ರ. ಕಾರಂತರು ಈ ಪತ್ರಿಕೆಯನ್ನು ಸಂಪಾದಿಸಿ ಲಿಪಿ ಪಿಕಾಸ ಕಾರ್ಯಾಲಯದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಕಾಶಿಸಿದರು.

ಸತ್ಯವಾಣಿ
ಜಯಿನ್ದ್ರಾಕೃತಸದಂತೆಯೇ ಈಚೇರತನವೂ
ಹೋದ ಹೊಕಸು ಬಹತನ ನಿವಾರಣೆಯಾಗದು.

ಸ್ವದೇಶಿ

ನಿತ್ಯ ಪ್ರಾರ್ಥನೆ
ಮಂದಿನ ಪ್ರಜಗಳಂದ ಇಂದಿನ ಮಕ್ಕಗನ್ನು
ಪ್ರರೂ ಸರ್ಕಾರದವರು ಸಂಯಾಗಿ ಕಾಪಾಡಲಿ.

ಕನ್ನಡದ ಕೊಲೆಯನ್ನು ತಪ್ಪಿಸಿರಿ!

ಕನ್ನಡ ಮಹಾಜನರಲ್ಲಿ
ಕಟ್ಟಕಡೆಯ ಪ್ರಾರ್ಥನೆ.

(ಇನ್ನೆಯ ಲೇಖನ)

ಕನ್ನಡದಲ್ಲಿ ಲಿಪಿ ಬದಲಾವಣೆಯಿಲ್ಲದೆ ನಾವು ಟೈಪ್‌ರೈಟರ್ ತಯಾರಿಸಿದ್ದರೂ. ಸಹ ಅದನ್ನು ಹಿಸದೆ, ಲಿಪಿ ಬದಲಾವಣೆ ಮಾಡಲೇಬೇಕೆಂದು ಡೆಯುತ್ತಿರುವ ಒಳಸಂಚನ್ನೂ ಇದರಿಂದ ನಾ ನುಡಿಗಾಗುವ ಅಪಾರ ಕಷ್ಟ ನಷ್ಟಗಳನ್ನೂ ಯವಿಟ್ಟು ಗಮನಿಸಿರಿ.

೧. ನಮ್ಮ ಚೆನ್ನುಡಿಯೆ ಕನ್ನಡಕ್ಕೆ ನಾವು ಂ ವರ್ಷಗಳಿಂದಲೂ ಬಹು ಕಷ್ಟಪಟ್ಟು, ನಾಡಿನಾ ಣ ವಜ್ರಮಾಡಿ. ಲಿಪಿ ಬದಲಾವಣೆಯಿಲ್ಲದೆ ಕಾರ್ಬನ್ ಹಾಳೆ ಲಿನೋಟೈಪ್ ಯೋಜನೆ ನ್ನು ತಯಾರಿಸಿರುವುದೂ, ...

ಇದನ್ನು ಇಡೀ ಕನ್ನಡ ನಾಡಿನ ಸಕಲ ಮ ೀಯರೂ ಮೆಚ್ಚಿ ಸಂತೋಷಪಡಬೇಕಿರುವುದೂ- ರ್ವರಿಗೂ ಗೊತ್ತೇ ಇದೆ.
ಮತ್ತು ಈ ಬಗ್ಗೆ ಈ ಹಿಂದೆಯೇ ಎಲ್ಲ ವಿ ತಿಕೆಗಳೂ ಪತ್ರಿಕೆಗಳಲ್ಲಿ ಸಹ ಸ್ಪಷ್ಟವಾಗಿವೆ.

೨. ಈ ಟೈಪ್‌ರೈಟಿಂಗನ್ನು ನಾವು ಡೆವಿಂಗ್‌ಟೋ ಅಸನಿಯವರಿಂದ ತಯಾರು ಮಾಡಿಸಲು ಏರ್ಪಾ ಮಾಡಿ. ಆ ಬಗ್ಗೆ ಸರ್ಕಾರದ ಒಂದು ತಾ ನಾನ್ಯ ಅಂಗೀಕಾರವನ್ನು ಕೇಳಿದ್ದೆವು.

ಅದಕ್ಕೆ ಸರ್ಕಾರದ ಒಪ್ಪಿಗೆಯೂ ದೊರೆತು, ನ್ನೇನು ಈ ವೇಳೆಗಾಗಲೆ ಯಂತ್ರವು ತಯಾ ಗಿ ಬಂದು ನಾಡಿನ ಸೇವೆಗೊದಗಿ ಬಂದು ವ ರ್ಷವಾಗುತ್ತಿತ್ತು.

೩. ಆದರೆ ಅಷ್ಟರೊಳಗೇ ಸರ್ಕಾರದಿಂದ ಈ ಗ್ಗೆ ನಮ್ಮ ಯಂತ್ರೆ ಪರಿಶೀಲನೆಗೆಂಬುದಾಗಿ ರ ತಾಗಿ ೨೩—೨—೫೦ ರಲ್ಲಿ ಒಂದು ಸಮಿತಿ ನ ರಚನೆಯಾಯಿತು. (ಅದೇ ಶ್ರೀ ಟಿ. ಟಿ ರ್ ರವರ ಸಮಿತಿ.

ಸದರಿ ಸಮಿತಿಯು ಮುಂದೆ ನಾವು ಸರ್ಕಾರ ಆಜ್ಞೆಯಂತೆ ನಮ್ಮ ಯಂತ್ರದ ವಿವರಗಳನ್ನೆಲ್ಲಾ ಒಪ್ಪಿಸಿದೆವು

ಆದರೆ ಆ ಬಗ್ಗೆ ಅವರು ನಮ್ಮೊಡನೆ ಯಾವ ವಿಚಾರವನ್ನೂ ಕೂಲಂಕಶವಾಗಿ ಚರ್ಚಿಸಲೂ ಇಲ್ಲ; ಕಾರ್ಯತಃ ಕೆಲಸ ಮಾಡಿತುವ ನಮ್ಮ ನ್ನು ಸದರಿ ಸಮಿತಿಗೆ ಸಹ ಸೇರಿಸಿಕೊಳ್ಳಲಿಲ್ಲ.

ಮತ್ತು ಸಮಿತಿಯು ಸರ್ಕಾರಿ ಆಜ್ಞೆಯಂತೆ ತಿಂಗಳೊಳಗೆ ವರದಿ ಒಪ್ಪಿಸದೆ ೧ ವರ್ಷಕಾಲ ಏನೇನೋ ನೆವ ಹೇಳಿಕೊಂಡು ಎಳೆದಾಡಿತು.

ಇದರ ಮೇಲೆ ಸಮಿತಿಯ ವಂದಿ ಬಂದು ೬ ತಿಂಗಳಿಂದರೂ ಸರ್ಕಾರದವರು ಸಹೆ—ಅದನ್ನು ಇನ್ನೂ ಪ್ರಕಟಿಸಿಲ್ಲ. ಸರ್ಕಾರದವರಿಗೆ ಯಾವ ಹೆನೆಗೆ ತೊದಿಲ್ಲ
ಇದಕ್ಕೆ ಕಾರಣವಿಷ್ಟೇ:—

೫. ಮುಖ್ಯವಾಗಿ ಈ ನಿಪುಣ ಸಮಿತಿಯವರಿಗೆ ಈ ಬಗ್ಗೆ ನೋದಲು ಏನೇನೂ ತಿಳುವಳಿಕೆ ಇರಲಿಲ್ಲ.

ಆದರೂ ನಮ್ಮ ಯಂತ್ರವನ್ನು ನೋಡಿದ ಮೇಲೆ, ಅವರು, ನಮಗೆ ಏನಾದರೂ ಸೂಕ್ತ ಸ ಲಹೆಗಳನ್ನು ಕೊಡುವುದಕ್ಕೆ ಬದಲಾಗಿ—ನಮ್ಮ ಯಂತ್ರ ಕ್ರಮದಲ್ಲೇ ಅಲ್ಪ ಸಲ್ಪ ಬದಲಾವಣೆ ಮಾಡಿ, ತಮ್ಮದೇ ಒಂದು ಯಂತ್ರ ತಯಾರಿಸಿ ಕೊಂಡು ಅದಕ್ಕೆ ಸರಕಾರದ ಅಂಗೀಕಾರ ಪಡೆದು, ನಮ್ಮ ಬೆನೆಯಿಂದ ರಜನೆಯಾದ ಈ ಸ ಮಿತಿಯವರು ತನ್ನ ಸ್ವಾರ್ಥನ್ನ ಸಾಧಿಸಿಕೊಳ್ಳಲು ಯತ್ನಿಸಿದ್ದಾರೆ

ಮತ್ತು ಈ ಬಗ್ಗೆ ಅನಾವಶ್ಯಕವಾಗಿ ಅಪಾರ ಲಿಪಿ ಬದಲಾವಣೆ ಸಹ ಮಾಡಿಯುತ್ತಾರೆ

(ಇದಕ್ಕೆ ಶ್ರೀಶರ್ಮರವರಿಗೆ ನಾವು ನಮ್ಮ ಯಂ ತ್ರ ಕ್ರಮವನ್ನು ಜೋಡಿಸಿಕೊಟ್ಟಿರುವುದೂ ಒಂ ದು ಅನುಕೂಲವಾಯಿ)

೬. ಇದರಿಂದ ಇಡೀ ಕನ್ನಡ ನಾಡಿನ ಲೆಟ್ಟೋ ತರ ಜನರ ಸಾವಿರಾರು ವರ್ಷಗಳ ಹಿಂದು ಮುಂ ದಿನ ಸಾಹಿತ್ಯ ಗ್ರಂಥ ಲಾಗೆಯ ಪತ್ರ ಮುಂತಾ ದುವುಗಳಿಗೆ ಅಪಾರ ನಷ್ಟವುಂಟಾಗುತ್ತಿರುವುದಲ್ಲ ದೆ ಕನ್ನಡಿಗರ ಲಿಪಿ ಸಂಪತ್ತಿನ ಮೂಲಭೂತ ಹ ತ್ತಿಗೂ ಸಹ ಭಾರಿ ಧಕ್ಕೆ ಬಂದಂತಾಗಿದೆ.

ಹೀಗೆ ಈ ಸಮಿತಿಯು ನಾವು ಸಾಧಿಸಿದ ಕಾ ರ್ಯಕ್ಕೆ ಆಗಿದ್ದ ಕಾರ್ಯಕ್ಕೆ ವಿಘ್ನ ತಂದು ಮೊ ದಲಿಂದಲೂ ಬಾದು ಪಿತಾಮಹರಿಂದ ಅರಂಭವಾ ಗಿ ಕಡೆಯವರೆಗೂ ಗುಪ್ತವಾಗಿ ಮೋಸ್ಕಂಡಂತೆ ತ ಮ್ಮ ಸ್ವಾರ್ಥಸಾಧನೆಯಲ್ಲಿ ನಡೆದಿದೆ.

ಇದಕ್ಕೆಲ್ಲಾ ಸರಿಯಾಗಿ—ಕಂಪೂರ್ಣವಾಗಿ ದಾಖಲೆಗಳನೆ

೭ ಈ ವಿಚಾರವನ್ನು ಸರಕಾರಕ್ಕೆ ನಾವು ಅನೇಕ ಸಲ ಗವನಕ್ಕೆ ತಂದರೂ ಕೊಡ ಅವರು ಇದುವರೆಗೂ ಒಂದಕ್ಷರ ಉತ್ತರ [illegible]

[illegible] ಲಿಪಿ—ಬದಲಾವಣೆಯನ್ನ ನಾಡಿನ ಮೇಲೆಲ್ಲಾ ಅನ್ಯಾಯವಾಗಿ ಹೊರಿಸು ವಪ್ರಯತ್ನವಾಗುತ್ತಿದೆ.

ಇದರಿಂದ ನಮಗೂ ಮತ್ತು ಇಡೀ ನಾಡಿ ನ-ನಾಡಿಗೂ ಮಹತ್ತರವಾದ ಅನ್ಯಾಯವಾಗಿದೆ.

೮ ಆದ್ದರಿಂದ—ನಮ್ಮ ಕನ್ನಡ ಮಹೋದಯರೂ, ಮಹಾಜನರೂ, ಎಲ್ಲರೂ ಇದರಿಂದ ಮುಂದಾ ಗುವ ನಾನಾ ಅನ್ಯಾಯ— ಅನಾಹುತಗಳ ವಿ ಚಾರದಲ್ಲಿ ಕೂಡಲೇ ಎಚ್ಚರಿಕೆ ವಹಿಸಿ ಈ ಬ ಗ್ಗೆ ಜಾಗ್ರತೆ ಸತ್ಯ, ಧರ್ಮ ನ್ಯಾಯ, ಮಾ ರ್ಗದರ್ಶನೆ ಮಾಡಿ, ತಮ್ಮ ನಾಡಿನ —ನುಡಿಯ ಅಸಿ ಸಂಪತ್ತನ್ನು ಉಳಿಸಿ ಬೆಳೆಸಿಕೊಳ್ಳಬೇಕೆಂ ದು ಮತ್ತೊಮ್ಮೆ ಕಟ್ಟಕಡೆಯ ಬಾಗಿ ಪರಿಕೆ ಮಾ ಡಿಕೊಂಡಿದ್ದೇನೆ.

೩೧-೧೦-೫೧. ಕೆ. ಅನಂತನಾರಾಯಣ.
ಕನ್ನಡ ಟೈಪ್‌ರೈಟರ್ ಕರ್ತೃ.

(ಸೇವಕ ಪ್ರಿಂಟಿಂಗ್ ಪ್ರೆಸ್ ಮೈಸೂರು)

ಕನ್ನಡದ ಅತ್ಯಂತ ಆದರ್ಶ ಪತ್ರಿಕೆ-

ಸೇವಕ

ಪಕ್ಷರಾಜಕೀಯಕ್ಕೂ ಪತ್ರಿಕೆಗೂ ಏನಯಗಳಿಲ್ಲ.

ನಿಮಗೆ

ಮುಂದೆ ಒಳ್ಳೆಯ ರಾಜ್ಯಭಾರ ಬೇಕಾದರೆ
ಈಗಲೇ ಸತ್ಯವಂತರೂ, ದಕ್ಷರೂ
ಆದವರನ್ನು ಚುನಾವಣೆಗೆ ನಿಲ್ಲಿಸಲು
ಆಲೋಚನೆ ಮಾಡಿರಿ.

ಜಂಜಂಜಂಜಂಜಂಜಂಜಂಜಂಜಂಜಂಜಂ

ಸ್ವರಾಜ್ಯಕ್ಕೆ ಬೇಕಾದ
ಅಂಕಿ-ಅಂಶಗಳು

ಜನ-ಧನ-ಸಂಪತ್ತು

	ಮೈಸೂರು	— ಭಾರತ
ಜನಸಂಖ್ಯೆ	೯೦ ಲಕ್ಷ	— ೩೬೦ ಲಕ್ಷ
ವರಮಾನ	೧೪ ಕೋಟಿ	— ೩೬೦ಕೋಟಿ
ಹೆಳ್ಳಿಗಳು	೨೦೦೦	— ೭ ಲಕ್ಷ
ಸಾಗುವಳಿ	೬೪ ಲಕ್ಷ ಎಕರೆ	—೫ ಕೋಟಿ ಎಕರೆ
ಬೆಳೆ	೯೫ ,,	ಹಳ್ಳಿ — ೧೪ ,, ೫೯
ಮೈಸೂರು ನಗರ		254809 ಜನ

ನಮ್ಮ ನಾಡಿನ ಬಡತನ ಅಜ್ಞಿಡತನದ

ಧಾರಣೆವಾಸಿ

—೨—

[ಕಲ್ಲು, ಮಣ್ಣು, ಕಸಕಡ್ಡಿ ಬೆರೆತಿರುವದು]

	ಸ್ವರಾಜ್ಯ ಬಂದಾಗ	ಈಗ
ಅಕ್ಕಿ	1ರೂ. ೪ ಸೇ—	೨ಸೇ
ರಾಗಿ	೬.....	೪॥
ಜೋಳ	೬....	೪॥

ಇದೇ ರೀತಿ ಇತರೆ ಪದಾರ್ಥಗಳೂ
೧ ಕ್ಕೆ ೩-೪ ರಷ್ಟು ಏರಿವೆ.

ಚಿನ್ನ—ಜೆಳ್ಳು

ಚಿನ್ನ ೧ ತೊಲ	೧೯—೦—೦
ಬೆಳ್ಳಿ ೧ ತೊಲ	೨—೦—೦

ಇಂದಿನ ಜೀವಹಣ ಪಟ್ಟಿ ಶೇ 420

ಜಂಜಂಜಂಜಂಜಂಜಂಜಂಜಂಜಂಜಂಜಂ

ಬೇಕಾಗಿದೆ

ಈ ಪತ್ರಿಕೆಗೆ
ಎಲ್ಲಾ ಕಡೆಗಳಲ್ಲೂ
ವಿಜಂಟೆರೂ ಸ್ಪಿಗಾರರೂ
ಬೇಕಾಗಿದೆ.

ನಿಮ್ಮ ವೋಟು ಯಾರಿಗೆ?

ಈಗಿನಿಂದಲೇ ಸರಿಯಾಗಿ ಆಲೋಚಿಸಿರಿ-
ಮತ್ತು ಸೇವಕ ಪತ್ರಿಕೆಯನ್ನು ತಪ್ಪದೆ ಓದಿರಿ.

.....

ಬೇಕಾಗಿದೆ

—೦—

ಇಂದಿನ ಪ್ರಜಾಪ್ರಭುತ್ವದಲ್ಲಿ
ಸಕಲ ಜನರೂ ಸುಖವಾಗಿ
ಬದುಕುವ ಮಾರ್ಗ ತೋರಿಸುವಂಥ
ಸಾಹಿತ್ಯ ಬೇಕು.

ಜಂಜಂಜಂಜಂಜಂಜಂಜಂಜಂಜಂಜಂಜಂ

ನೀವು ಆರೋಗ್ಯವಾಗಿರಬೇಕಾದರೆ
ಆಯುರ್ವೇದ ವಾಸ್ತವದಂತೆ
ನಡೆದುಕೊಳ್ಳಿರಿ

= = = = = = = = = = = = = = = =

ನಮ್ಮ ನಾಡಿನ ಪ್ರಗತಿಗೆ
—೪ ಮಹಾ ಸಾಧನಗಳು—

ಕನ್ನಡ
ಅಕ್ಷರ ಪುಸ್ತಕ
೩ ಕಾಸು

ತೀಕ್ಷ್ಣಬುದ್ಧಿ
೪ ಆಣೆ

ಸೈಜ್ ರೈಟರ್
ಅಕ್ಷರಗಳು ೨೫ ರೂ.

ಸುಲಭ ಮುದ್ರಣ ಕ್ರಮ
೧ ರೂ.

ವಿವರಗಳಿಗೆ ಬರೆಯಿರಿ —ಸೇವಕ

ನೀವು ಎಂದೆಂದೂ ನೋಡಿರದಂಥ

ಪಿಂಗ್ಲಿಷ್- ತಮಿಳಿಕಾ
... ಪ್ರೇಕ್ಷಕರಿಗೆ....

ನ್ಯೂಸ್‌ಪೇಪರ್ ಪಬ್ಲಿಸ್ಟ್ಯಾನ್ಸ್‌ಡ್ರೌಂಡಿಂಗ್
ಮೈಸೂರು

ನಿಮ್ಮ ರೋಷ ಕುಂದ ಕೊರತೆಗಳನ್ನು
ಪರಿಹರಿಸಿಕೊಳ್ಳಬೇಕಾದರೆ
ರೇಷ್ಮೆದಾರರ ಸಂಘಕ್ಕೆ
ಸದಸ್ಯರಾಗಿರಿ.

ಮಾರಾಟಕ್ಕಿದೆ

ಇಂಗ್ಲೀಷ್ ಟೈಪ್ ರೈಟರ್-ಎರಡ
CHILDREN'S DICTIONARY
7 VOLUMES
ವಿವರಗಳಿಗೆ ಬಂದು ನೋಡಿರಿ. —ಸಣ್ಣ

ವಿನೋದ

ಮೈಸೂರುನಗರವೊಂದರಲ್ಲೇ
ವರ್ಷಕ್ಕೆ ೪೦ ಲಕ್ಷ ರೂ. ಸಿನಿಮಾಕ್ಕೆ ಕೊಡುತ್ತ

ಎಲ್ಲಿ- ಯಾವ ಚಿತ್ರ ಚೆನ್ನಾಗಿರ? ತಿಳಿದು ಹೋಗ

- ದುಡ್ಡು ಕೊಟ್ಟು ಮುಂದೆ ಪದಬೇಡಿ-

ನೀವು ನೋಡಿದ ಚಿತ್ರ ಹೇಗಿದೆ? ನಮಗೆ

ಒಳ್ಳೆಯದು

ಚಲನಚಿತ್ರಗಳನ್ನು ಮಾತ್ರವೇ
ಈ ಪತ್ರಿಕೆಯಲ್ಲಿ
ಪ್ರಕಟಿಸಲಾಗುವುದು.

—ಟೈಲ್‌ನೇ ಟೈಂ—

ಮೈಸೂರಿಂದ ಹೊರಡುವದು

ಬೆಂಗ್ಳೂರು-7-5 8-25 12-40,3-35 1(
ಅರಸೀಕೆ... 7-25 12-15 7-5
ಚಾಮರಾಜನಗರ .. 6-40 12-1(.5-3(
ನಂಜನಗೂಡು ...9 35 3-45 8-25

.....

ದಿನಪತ್ರಿಕೆ ತಿಂಗಳಿಗೆ ೪ ಆಣೆ
ವಾರಪತ್ರಿಕೆ ವರ್ಷಕ್ಕೆ ೪ ರೂ.

ಕೆ ಅನಂತ ಸುಬ್ಬರಾಯ,
ಸಂಪಾದಕ ಮುದ್ರಕ ಪ್ರಕಾಶಕ
೨ ವಕೀಲ ಮುದ್ರಣಾಲಯ,
ಪಿ. ೧೫ [illegible] ಮೈಸೂರು

ವಾ. ಚಂ. ೩ ರೂ. ೨೨೦-೧೦-೩೯ನೇ ಶುಕವಾರ [ಪ್ರತಿ ೧ ಆಣೆ.



ಕರ್ನಾಟಕ ಸಾಹಿತ್ಯಸಂಸ್ಕೃತಿಗಳ ಸರಂಕ್ಷಕರೂ,
ಕರ್ನಾಟಕ ರತ್ನಸಿಂಹಾಸನಾಧೀಶ್ವರರೂ ಆದ
ಶ್ರೀಮನ್ನಾಲ್ವಡಿ ಕೃಷ್ಣರಾಜೇಂದ್ರ ಭೂಪಾಲರ

ಸರಸ್ವತಿ ಪುಸ್ತಕ ಭಂಡಾರ
ಮಂಡ್ಯ.

ವಿಜಯದಶಮಿಯ ವಿಶೇಷ ಸಂಚಿಕೆ

ತಲೆಮಂಡೆ — ಬೋಳತಲೆ

ಇನ್ನೂ ಚಿಕ್ಕವಯಸು !

ಆದರೆ ತಲೆಮಾತ್ರ ಬೋ ... !!

ಅನೇಕರಿಗೆ ಚಿಕ್ಕವಯಸ್ಸಿನಲ್ಲೇ ತಲೆಯ ಕೂದಲು ಉದುರಿ ವಿಕಾರವಾಗಿರುತ್ತೆ. ಕೆಲವರಿಗೆ ಮಧ್ಯ ಮಧ್ಯದಲ್ಲಿ ಉದುರಿ ನೋಡಲು ಆವಲಕ್ಷಣವಾಗಿರುತ್ತೆ. ಇನ್ನು ಕೆಲವರಿಗೆ ತಲೆಯ ಮಧ್ಯಭಾಗ ದಲ್ಲಿ ಕೂದಲು ಸಂಪೂರ್ಣವಾಗಿ ಉದುರಿಹೋಗಿ, ಸುತ್ತಲೂ ಚೂರು ಚೂರು ಉಳಿದು ತಲೆಯಮೇಲೆ ಟೋಪಿಯಾಗಲಿ, ರುಮಾಲಾಗಲಿ ಇರಲೇಬೇಕಾಗಿರುವವರು ಅನೇಕರಿದ್ದಾರೆ. ಹೀಗೆ ಬೋಪಿಯನ್ನು ತೆಗೆಯಲು ಇಷ್ಟವಿಲ್ಲದ ಕಷ್ಟಪಡುವವರಿದ್ದಾರೆ ಈರೀತಿ ಉದುರಿಹೋದ ಕೂದಲು ಪುನಃ ಹುಟ್ಟುವುದೇ ಇಲ್ಲವೆಂದು ಅನೇಕರು ತಿಳಿದಿದ್ದಾರೆ. ಈಗ ಕಷ್ಟದಿಂದ ಬಳಲಿದ್ದಾರ.

ಇಂಥಾ ಆನಾಹುತವನ್ನು ಹೋಗಲಾಡಿಸಲು ನಾವು ಉತ್ಕೃಷ್ಟವಾದ "ಬಾಲ್ಡ್‌ಕ್ಯೂ" (BALDQUE) ತಯಾರಿಸುತ್ತೇವೆ. ಇದರಲೇಪನೆಯಿಂದ ಈಗಾಗಲೇ ಸಾವಿರಾರು ಜನರು ತೃಪ್ತಿಹೊಂದಿದ್ದಾರೆ. ಸಾಧಾರಣವಾಗಿ ೩ ತಿಂಗಳಿನಿಂದ ೬ ತಿಂಗಳವರೆಗೆ ಚಿಕಿತ್ಸೆ ನಡೆಸಿದರೆ ಸಾಕು ನಾವು ನಿಮಗೆ ಭರವಸೆಕೊಡುತ್ತೇವೆ.

ಸಣ್ಣ ಬಾಟಲು ೧ಕ್ಕೆ ೩-೦-೦, ದೊಡ್ಡ ಬಾಟಲು ೫-೦-೦

BALDQUE DEPOT

— BANGALORE CANTT.

ಸ್ವತಂತ್ರ ಕರ್ನಾಟಕ ಕಾರ್ಯಾಲಯದಲ್ಲಿ ದೊರೆಯುವ ಗ್ರಂಥಗಳು

೧ ಶರಣಸಾಹಿತ್ಯ ವಿಶೇಷ ಸಂಚಿಕೆ (ಹಿಂದೂ ದರ್ಮದಸಾರ ಸರ್ವಸ್ವ
ಉತ್ತಮಪ್ರತಿ ೨—೦—೦
ಸಾಮಾನ್ಯಪ್ರತಿ ೧—೦—೦

೨ ಗುರುಬಸವ ಕವಿಯ " ಮನೋವಿಜಯ " (ವೇದಾಂತ ಗ್ರಂಥ) ಸಂಪಾದಕರು ಮತ್ತು ವಿಸ್ತಾರವಾದ ಇಂಗ್ಲೀಷು ಮತ್ತು ಕನ್ನಡ ಮುನ್ನುಡಿ ಬರದವರು ವಿದ್ಯಾಭೂಷಣ ನಾರಾಯಣ ಶಾಸ್ತ್ರಿಗಳು ಎಂ ಎ, ರೂ ೧—೦—೦

೩ ವೀರಕೇಸರಿ ಕೃತ " ದೌಲತ್ " (ಪೂರ್ವಭಾಗ) ೧-೦-೦

೪ ಕರ್ನಾಟಕ ಮಾತೆಯ ಗುಣಗಾನ.—

—ಶ್ರೀ ಬೆನಗಲ್ ರಾಮರಾವ್ ಎಂ. ಎ., ಎಲ್ ಎಲ್. ಬಿ, ಅವರಿಂದ ರಚಿತವಾದುದು. ಉಚಿತ ವಿನಿಯೋಗ. ಪರಸ್ಥಳದವರು ಟಪ್ಪಾಲು ಹಾಸಲು ಕಳುಹಿಸಬೇಕು.

ಅಪೇಕ್ಷೆಯಿರುವವರು ಈಕೆಳಗಿನ ವಿಳಾಸಕ್ಕೆ ಬರೆಯಿರಿ.

ಸ್ವತಂತ್ರ ಕರ್ನಾಟಕ ಕಾರ್ಯಾಲಯ, ಬೆಂಗಳೂರು ಸಿಟಿ.

The Eastern Lunch & Boarding Home

82, POLICE ROAD, BANGALORE CITY.

† ಸಕಾಲದಲ್ಲಿ ಊಟ † ಶುಚಿಯಾದ ವಸತಿ ಗೃಹ
† ರುಚಿಯಾದ ಕಾಫಿ ತಿಂಡಿ

ಬೇಕೋ ಹಾಗಾದರೆ ಒಂದು ಸಾರೆ ನಮ್ಮಲ್ಲಿಗೆ ದಯಮಾಡಿ

ದಿ ಈಸ್ಟರ್ನ್ ಲಂಚ್ ಅಂಡ್ ಬೋರ್ಡಿಂಗ್ ಹೋಮ್.

೮೨, ಪೋಲೀಸ್ ರೋಡ್ ಸಿಟಿ ಮಾರ್ಕೆಟ್ ಹತ್ತಿರ, ಬೆಂಗಳೂರು ಸಿಟಿ

ಮೈಸೂರು ಉಕ್ಕನ್ನು ಬಳಸಿ

ಮೃದುವಾದ ಉಕ್ಕು
ಪಟ್ಟೆಗಳು
ಸರಳುಗಳು
ಕಂಬಿಗಳು
ಮೂಲೆಕಂಬಿಗಳು
ಬೇಲುಕಟ್ಟುಗಳು

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
ಭದ್ರಾವತಿ.

ನವಕರ್ನಾಟಕ

ಸುಪ್ರಸಿದ್ಧ ಕನ್ನಡವಾರ ಪತ್ರಿಕೆ
ಬಿಜಾಪುರ

ಸಂಪಾದಕರು ರಾ। ಸಾ।। ಫಡಕೆ ಗುರು
ಹಳಕಟ್ಟಿ ಬಿ ಎ ಎಲ್ ಎಲ್ಬಿ
ವಾರ್ಷಿಕ ವರ್ಗಣಿ ೩ ರೂ

ಕೂಡಲೇ ಚಂದಾದಾರರಾಗಿರಿ

ಜಾಹೀರಾತಿಗೆ ಅತ್ಯುತ್ತಮ ಪತ್ರಿಕೆ

ವ್ಯವಸ್ಥಾಪಕ,

ನವಕರ್ನಾಟಕ ಬಿಜಾಪುರ

TO LET

ಉತ್ತಮತರಗತಿಯ ಫೋಟೋಗಳು
ಸಣ್ಣಕಾಸಿಗಳಿಂದ ಎಲಾರ್ಜ್‌ಮೆಂಟ್ಸ್
ಆಯಿಲ್ ಪೆಯಿನ್‌ಟಿಂಗ್ಸ್, ಸಿನಿಮಾಸ್ಲೈಡ್ಸ್,
ಎಲ್ಲಾ ವಿಧವಾದ ಫೋಟೋಕೆಲಸಗಳಿಗೆ

ಡೆ ಆಂಡ್ ನೈಟ್ ಸ್ಟುಡಿಯೋ
(ಮೆಜಸ್ಟಿಕ್ ಥಿಯೇಟರ್ ಎದುರು)

ಅನರಲ್ಲಿ ದಯಮಾಡಿ ನಂ ೫. ಬಳೇಪೇಟೆ, ಬೆಂಗಳೂರು ಸಿಟಿ

ಸ್ವತಂತ್ರ ಕರ್ನಾಟಕ

ಸಂಪಾದಕ:—ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿ.

ಸಂಪುಟ ೧] ೨೦-೧೦-೩೯ನೇ ಶುಕ್ರವಾರ [ಸಂಚಿಕೆ ೨೮

ಗುಹೇಶ್ವರನ ಗುಟ್ಟು

॥ ೧ ॥

ಜಗತ್ತಿನಲ್ಲಿ ಮೊಟ್ಟಮೊದಲು ಹತ್ತಿಯ ಬಟ್ಟೆಯು ತಯಾರಾದುದು ಹಿಂದೂ ದೇಶದಲ್ಲಿ- ರೇಷ್ಮೆಬಟ್ಟೆಯು ತಯಾರಾದುದು ಚೀನಾದಲ್ಲಿ:- ಉಣ್ಣೆಬಟ್ಟೆಗಳು ತಯಾರಾದುದು ಯೂರೋಪಿನಲ್ಲಿ.

॥೨॥

ಮಹಾರಾಷ್ಟ್ರವು ನರ್ಮದೆಯಿಂದ ತುಂಗಭದ್ರೆಯವರೆಗೆ ಇದ್ದಿತೆಂದು ಡಾ॥ ಭಂಡಾರ್ಕರ್ ಹೇಳುತ್ತಾರೆ ಪ್ರಾಚೀನ ತಮಿಳುನಾಡು ಕಾರವಾರ-ಬೆಳಗಾವಿಯವರೆಗೆ ಇದ್ದಿತೆಂದು ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಅಭಿಪ್ರಾಯಪಡುತ್ತಾರೆ. ಕಾವೇರಿಯಿಂದ ಗೋದಾವರಿಯವರೆಗೆ ಇರುವ ನಾಡೆಲ್ಲ ಕನ್ನಡ ನಾಡೆಂದು ಸಾವಿರ ವರ್ಷಗಳಹಿಂದೆ ಸಮ್ರಾಟ್ ನೃಪತುಂಗನು ಹೇಳಿದ್ದಾನೆ. ಇಂದಿನ ನರ್ಮದಾ ತೀರವೇ ಮೂಲ ಕರ್ನಾಟಕವೆಂದು ಶ್ರೀ. ಶಂ ಬಾ ಜೋಶಿಯವರು ಹೇಳುತ್ತಾರೆ ಪುಣೆಯಿಂದ ಬೆಂಗಳೂರುನರೆಗೆ ಇರುವ ನಾಡೆಲ್ಲಾ ದಕ್ಷಿಣ ಮಹಾರಾಷ್ಟ್ರ (ಸದರ್ನ್ ಮರಾಠಾ) ಎಂದು ಎಂ. ಎಸ್. ಎಂ. ಬೈಲ್ವೆ ಕಂಪೆನಿಯವರು ಹೇಳುತ್ತಾರೆ. ಪ್ರಳಯಕಾಲದಲ್ಲಿ ಈ ಪ್ರಪಂಚವೆಲ್ಲ ನೀರಿನಲ್ಲಿ ಮುಳುಗಿ ಹೋಗಿತ್ತೆಂದು ವೈದಿಕರು ಹೇಳುತ್ತಾರೆ. ಇದರಲ್ಲಿ ನಾವು ಯಾರಮಾತನ್ನು ನಂಬಬೇಕು. ?

॥ ೩ ॥

ಈಗ ಹಿಂದೂಸ್ಥಾನದಲ್ಲಿರುವ ಎಲ್ಲ ಸಿಂಹಾಸನಗಳಿಗಿಂತಲೂ ಮೈಸೂರಿನ ರತ್ನ ಸಿಂಹಾಸನವು ಅತ್ಯಂತ ಪ್ರಾಚೀನವೂ ಪವಿತ್ರವೂ, ಎಂದು ತಿಳಿದು ಬಂದಿದೆ. ಇದು ಧರ್ಮರಾಯನ ಸಿಂಹಾಸನವೆಂದು ಪೌರಾಣಿಕರು ಹೇಳುತ್ತಾರೆ ವಿಜಯನಗರದ ರಾಯರು ಅಲಂಕರಿಸುತ್ತಿದ್ದುದೆಂದು ಇತಿಹಾಸಜ್ಞರು ಹೇಳುತ್ತಾರೆ. ಸದ್ಯಕ್ಕೆ ಇದು ನಮ್ಮರಸರ ಸಿಂಹಾಸನವೆಂದು ಮೈಸೂರಿನವರು ಹೇಳುತ್ತಾರೆ. ಇದು ಮುಂದೆ ಅಖಂಡ ಕರ್ನಾಟಕಕ್ಕೆಲ್ಲ ಪೂಜ್ಯ ಪೀಠವೆಂದು ಗುಹೇಶ್ವರನು ಹೇಳುತ್ತಾನೆ.

॥ ೪ ॥

ಒಂದು ಸಮಾಜದ ನಾಗರಿಕತೆಯನ್ನು ನಾವು ಅಲ್ಲಿನ ಪುರುಷರಿಗಿಂತಲೂ ಸ್ತ್ರೀಯರಿಂದ ಹೆಚ್ಚಾಗಿ ತಿಳಿಯಬಹುದು. ಸ್ತ್ರೀಯರು ಸಂಸ್ಕೃತಿಸ್ತ್ರೀಮಿಗಳು. ಜಗತ್ತಿನ ಎಲ್ಲ ಸ್ತ್ರೀಯರ ಸಭ್ಯತೆಗಿಂತ ಹಿಂದೂಸ್ತ್ರೀಯರ ಸಭ್ಯತೆಯು ಶ್ರೇಷ್ಠತಮವಾದುದು. ಇದಕ್ಕೆ ಅವರ ಸುಂದರವೂ, ಗಂಭೀರವೂ ಆದ ಉಡುಪುಗಳೇ ನಿದರ್ಶನ. ಯೂರೋಪಿನ ಜನರನ್ನು ಕೇವಲ ಉಡುಪುಗಳಿಂದ ಸ್ತ್ರೀಪುರುಷರೆಂದು ನಿರ್ಣಯಿಸುವುದು ಕಷ್ಟವಲ್ಲವೇ?

॥ ೫ ॥

ಜಗತ್ತಿನಲ್ಲಿ ಹಲವು ಧಾರ್ಮಿಕ ಗ್ರಂಥಗಳುಂಟು. ಅವುಗಳ ವಯಸ್ಸು ಸ್ಮರಣೆಗೆ ಅರ್ಹವಾದುದು. ಖುರ್ರಾ ಹುಟ್ಟಿ ಸುಮಾರು ೧೩೦೦ ವರ್ಷವಾಯಿತು. ಬೈಬಲ್ ಹುಟ್ಟಿ ೧೯೦೦ ವರ್ಷಗಳಾದುವು. ಬೌದ್ಧಜಾತಕಗಳ ಹುಟ್ಟಿ ೨೫೦೦ ವರ್ಷಗಳಾದುವು. ಹಿಂದುಗಳ ವೇದಗಳು ಹುಟ್ಟಿ ಸುಮಾರು ೧೦೦೦ ವರ್ಷಗಳಾದುವು. ಕನ್ನಡ ಕವಿಗಳು ವೇದಗಳನ್ನು "ಪಳೆವಾಕು" ಎಂದು ಕರೆಯುವುದು ಇದಕ್ಕಾಗಿಯೇ ಎಂದು ತೋರುತ್ತದೆ.

॥ ೬ ॥

ಪ್ರಪಂಚದಲ್ಲಿ ಒಂದೊಂದು ದೇಶ ಒಂದೊಂದು ವಿಷಯಕ್ಕೆ ಪ್ರಸಿದ್ಧಿಯನ್ನು ಪಡೆದಿದೆ. ಇಂಗ್ಲೆಂಡ್ ರಾಜನೀತಿಯಲ್ಲಿ; ಜರ್ಮನಿ ಪರಾಕ್ರಮದಲ್ಲಿ; ಫ್ರಾನ್ಸ್ ವಿಲಾಸ ಜೀವನದಲ್ಲಿ; ಅಮೆರಿಕ ಐಶ್ವರ್ಯ ಸಂಗ್ರಹದಲ್ಲಿ, ಇಂಡಿಯಾ ಪರಸ್ಪರ ಹೊಡೆದಾಡುವುದರಲ್ಲಿ !!

॥ ೭ ॥

ಲೋಕದಲ್ಲಿ ಹಿಂದೂಸ್ಥಾನದಲ್ಲಿರುವಷ್ಟು ವೇದಾಂತಿಗಳು, ಬ್ರಹ್ಮಚಾರಿಗಳು ಮತ್ತಾವದೇಶದಲ್ಲಿಯೂ ಇರುವಂತೆ ತೋರುವುದಿಲ್ಲ ಯೂರೋಪಿನಲ್ಲಿ ವಿಜ್ಞಾನ ಶಾಸ್ತ್ರಕ್ಕೆ ಪ್ರಾಮುಖ್ಯತೆಯಿರುವಂತೆ, ಭಾರತದಲ್ಲಿ ವೇದಾಂತ ಶಾಸ್ತ್ರಕ್ಕೆ ಗಣ್ಯತೆಯುಂಟು ವೇದಾಂತವು ವಿಷಯ ಸುಖವನ್ನು ಬೇಡವೆನ್ನುತ್ತದೆ. ಆದರೆ, ವಿಲಾಸಿಗಳ ದೇಶವಾದ ಯೂರೋಪಿಗಿಂತ ವೇದಾಂತಿಗಳ ನಾಡಾದ ಇಂಡಿಯಾದಲ್ಲಿ ಮಕ್ಕಳಸಂಖ್ಯೆ ಹೆಚ್ಚಲು ಕಾರಣವೇನು?

॥೮॥

ಲೋಕದ ವ್ಯಾಪಾರವು ವಿಚಿತ್ರವಾದುದು. ಕಷ್ಟಪಡುವವರೊಬ್ಬರು ಫಲವನ್ನುಣ್ಣುವವರೊಬ್ಬರು. ಯಜ್ಞದಲ್ಲಿ ವಧಿಸಲ್ಪಡತಕ್ಕುದು ಪಶು; ಸ್ವರ್ಗಕ್ಕೆ ಹೋಗತಕ್ಕವನು ಯಜಮಾನ. ಇಂದಿನ ಯೂರೋಪಿನ ಯುದ್ಧದಲ್ಲಿ ಅಪಕೀರ್ತಿಗೂ, ಅಪಾರ ಕಷ್ಟನಷ್ಟಗಳಿಗೂ ಈಡಾದವನು ಹಿಟ್ಲರ್! ಕೀರ್ತಿ, ಲಾಭ, ದರ್ಪಗಳನ್ನು ಗಳಿಸಿದವನು ಸ್ಟಾಲಿನ್!

೯

ಈ ಜಗತ್ತಿನಲ್ಲಿ ಹತ್ತಿಯ ಬಟ್ಟೆಗಳನ್ನು ಕಂಡುಹಿಡಿದವರು ಹಿಂದುಗಳೆಂದು ಮೇಲೆ ಹೇಳಿದೆಯಷ್ಟೆ. ಆ ಹಿಂದುಗಳಲ್ಲಿಯೂ ಕನ್ನಡಿಗರಾದ ಹಟಗಾರರೇ ಹತ್ತಿಯ ಬಟ್ಟೆಯ ನಿರ್ಮಾಣಕ್ಕೆ ಮೂಲ ಕಾರಣರೆಂದು ಶ್ರೀ- ಶಂ. ಬಾ. ಜೋಶಿಯವರು ಹೇಳುತ್ತಾರೆ. ಆದರೆ ಇಂದು ಅದನ್ನು ಕೇಳುವವರಾರು? ಇಂದು ಆ ಪ್ರಾಚೀನ ಕನ್ನಡಿಗರ ಶಕ್ತಿಯನ್ನು ನಾವು ಮ್ಯಾಂಚೆಸ್ಟರಿನ ವರ್ತಕರಲ್ಲಿ ಮಾತ್ರ ಕಾಣಬಹುದಾಗಿದೆ. ಆ ಹಿಂದಿನ ಕನ್ನಡ ಜೀವಿಗಳೇ ಇಂದು ಆ ಆಂಗ್ಲೇಯ ರೂಪ ರೇಗಳಲ್ಲಿ ಅವಿರ್ಭವಿಸಿನೆಯೆಂದು ಊಹಿಸಬಾರದೇಕೆ?

॥೧೦॥

ಪ್ರಪಂಚದಲ್ಲಿ ಮುಖ್ಯವಾದುವು ಏಳು ಆಶ್ಚರ್ಯಕರ ವಸ್ತುಗಳಿವೆ. (೧) ಭಾರತದ ತಾಜಮಹಲ್ (೨) ಚೀನಾದ ದೊಡ್ಡಗೋಡೆ, (೩) ಈಜಿಪ್ಟಿನ ಪಿರಮಿಡ್ (೪) ಪಿಸಾ ನಗರದ ಗೋಪುರ, (೫) ಕೊಹಿನೂರು ವಜ್ರ.

ಇತ್ಯಾದಿ

(ಉಳಿದ ಭಾಗವನ್ನು ನೋಡಿ)

ಅಮೃತಬಿಂದು

—❀—

ನೀನು ಔನ್ನತ್ಯವನ್ನು ಪಡೆಯಲಿಚ್ಛಿಸಿದರೆ, ಮೊದಲು ಹೃದಯ ನೈರ್ಮಲ್ಯವನ್ನೂ, ಚಿತ್ತಶುದ್ಧಿಯನ್ನೂ ಸಂಪಾದಿಸು. ಪರರ ಸೌಖ್ಯವನ್ನು ನೋಡಿ ಹೊಟ್ಟೆಕಿಚ್ಚು ಪಡದೆ, ಕುಪ್ಸಿತದಿಂದ ಹೊಡೆದಾಡದೆ, ನಿನ್ನ ದೇಶದ ಜನರನ್ನೆಲ್ಲಾ ದೈವವೆಂದು ತಿಳಿದು ಪೂಜಿಸು

—ಸ್ವಾಮಿ ವಿವೇಕಾನಂದ.

ಅಕ್ಟೋಬರ್ ೨೦ನೇ ಶುಕ್ರವಾರ

ಮಹಾನವಮಿಯ ಕಾಣಿಕೆ

ಸ್ವತಂತ್ರ ಕರ್ಣಾಟಕ ಪತ್ರಿಕೆಯು ಪ್ರಕಟಗೊಂಡು ಇಂದಿಗೆ ಆರು ತಿಂಗಳುಗಳಾದುವು. ಈ ಒಳಗಾಗಿ ಇದು ಅಖಿಲ ಕರ್ಣಾಟಕದ ಮೆಚ್ಚುಗೆಯನ್ನು ಪಡೆದುದು ನಾವು ಈ ಪತ್ರಿಕೆಯ ಪ್ರಕಟನೆಗಾಗಿ ಪಟ್ಟ ಕಷ್ಟ, ಮಾಡಿಕೊಂಡ ನಷ್ಟ-ಇವುಗಳಿಂದುಂಟಾದ ಶ್ರಮವನ್ನು ಕೊಂಚ ಮಟ್ಟಿಗೆ ಕಡಿಮೆ ಮಾಡಿದೆಯೆಂದು ಹೇಳಬಹುದು. ಸ್ವತಂತ್ರ ಕರ್ಣಾಟಕ ಪತ್ರಿಕೆಯು ವಿಶಾಲ ಕರ್ಣಾಟಕದ ಆರ್ಥಿಕ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ, ನೈತಿಕ ಮತ್ತು ರಾಜಕೀಯ—ಮೊದಲಾದ ವಿಷಯಗಳ ಉನ್ನತಿಯನ್ನೇ ಗಮನದಲ್ಲಿಟ್ಟುಕೊಂಡು, ವರ್ತಿಸುತ್ತಿದೆ. ಇಂದು ಕನ್ನಡ ನಾಡಿನಲ್ಲಿ ಆರುನೋದಯವಾಗಿದೆ; ಜನತೆಯಲ್ಲಿ ವಿಶಾಲ ಭಾವನೆಗಳು ಬೆಳೆಯುತ್ತಿವೆ ನಾಡಿನ ಹಿರಿಯರನೇಕರು ಬಗೆಬಗೆಯಿಂದ ನಮ್ಮ ಜನರ ಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ. ಒಬ್ಬರು ಕನ್ನಡ ಸಾಹಿತ್ಯಕ್ಕಾಗಿ, ಇನ್ನೊಬ್ಬರು ಕನ್ನಡ ಸಂಸ್ಕೃತಿಗಾಗಿ, ಮತ್ತೊಬ್ಬರು ಕನ್ನಡಿಗರ ಲಲಿತ ಕಲೆಗಳಿಗಾಗಿ, ಮಗುದೊಬ್ಬರು ಕರ್ಣಾಟಕ ಏಕೀಕರಣಕ್ಕಾಗಿ, ಮತ್ತಿನ್ನೊಬ್ಬರು ಕನ್ನಡಿಗರ ಧಾರ್ಮಿಕ ಜೀವನಕ್ಕಾಗಿ ಪರಿವಿಯಿಂದ ದುಡಿಯುತ್ತಿದ್ದಾರೆ ಸ್ವತಂತ್ರ ಕರ್ಣಾಟಕ ನಿರ್ಮಾಣಕ್ಕೆ ಹೀಗೆ ನಾನಾ ಮುಖವಾಗಿ ಹಲವು ಮಹನೀಯರಿಂದ ಪ್ರಯತ್ನವು ನಾಗಬೇಕಾಗಿದೆ ಜನತೆಯ ಮನಸ್ಸಿನಲ್ಲಿ ಉಂಟಾದ ಈ ನವ ಜೈತನ್ಯವು ಕ್ಷಿಪ್ರದಲ್ಲಿಯೇ ಒಂದು ಒಳ್ಳೆಯ ಪರಿಣಾಮವನ್ನು ಉಂಟುಮಾಡಬಹುದೆಂದು ನಾವು ಭಾವಿಸುತ್ತೇವೆ.

ಆದಾವ ಕಾರಣದಿಂದಲೋ ಏನೋ, ಕನ್ನಡನಾಡಿನ ಐಕಮತ್ಯಕ್ಕೂ, ಉನ್ನತಿಗೂ ಇರುವಷ್ಟು ಎಡರು ತೊಡರುಗಳು ಭಾರತದ ಇನ್ನಾವ ಪ್ರಾಂತಕ್ಕೂ ಇಲ್ಲ ವೆಂದು ತೋರುತ್ತದೆ ಇಲ್ಲಿನ ರಾಜಕೀಯ ವಿಭಾಗಗಳು, ಇಲ್ಲಿನ ಸಾಮಾಜಿಕ ಗಡಿಬಿಡಿಗಳು, ಇಲ್ಲಿನ ಧಾರ್ಮಿಕ ಕಲಹಗಳು ಕರ್ಣಾಟಕದ ಪ್ರಗತಿಗೆ ಅಡಿಗಡಿಗೆ ತೊಂದರೆಯನ್ನುಂಟುಮಾಡುತ್ತಿವೆ ಇವುಗಳ ಪರಿಹಾರಕ್ಕಾಗಿ ಕರ್ಮಯೋಗಿಗಳೂ, ತ್ಯಾಗಶೀಲರೂ ಆದ ಕೆಲವರು ಪ್ರಯತ್ನಿಸುತ್ತಿದ್ದಾರೆ. ಇಂದಿನ ಭಾರತದ ವಾತಾವರಣವು ವಿಶಾಲವೂ, ಉದಾರವೂ ಆದ ತತ್ವಗಳಲ್ಲಿ ಬೆರೆತಿರುವುದರಿಂದ ಭವಿಷ್ಯವು ಶುಭಪ್ರದವಾಗಬಹುದೆಂದು ನಾವು ನಂಬಿಕೊಂಡಿದ್ದೇವೆ.

ಕರ್ಣಾಟಕಕ್ಕೆ ಆಗಬೇಕಾದ ಕೆಲಸಗಳು ಬಹಳವಾಗಿವೆ. ಮೊಟ್ಟಮೊದಲು ಬ್ರಿಟಿಷ್ ಕರ್ಣಾಟಕವು ಒಂದು ಪ್ರಾಂತವಾಗಬೇಕಾಗಿದೆ. ಒಂದು ಕರ್ಣಾಟಕ ವಿಶ್ವವಿದ್ಯಾನಿಲಯ, ಒಂದು ಶ್ರೇಷ್ಠ ನ್ಯಾಯ ಸ್ಥಾನ, ಒಂದು ದೊಡ್ಡ ಬಂದರು, —ಇವು ನಮಗೆ ಅವಶ್ಯ ಬೇಕಾಗಿವೆ ನಮ್ಮ ಪ್ರಾಚೀನ ಗ್ರಂಥಗಳೂ ಶಾಸನಗಳೂ ಮೊಟ್ಟ ಮೊದಲು ಪ್ರಕಟವಾಗಬೇಕಾಗಿವೆ. ಇದರಿಂದ ನಮ್ಮ ಸಾಹಿತಿಗಳ ಮತ್ತು ಸಂಶೋಧಕರ ದಾರಿ ಸುಗಮವೂ, ಸರಲವೂ ಆಗ್ಗುತ್ತದೆ ಕನ್ನಡ ಸಾಹಿತ್ಯ ಪರಿಷತ್ತು, ಕರ್ಣಾಟಕ ಇತಿಹಾಸ ಮಂಡಲ, ಕರ್ಣಾಟಕ ವರ್ತಕ ಸಂಘ, ಕರ್ಣಾಟಕ ಏಕೀಕರಣ ಸಂಘ ಮೊದಲಾದುವು ಏಕಮುಖವಾಗಿ ಕೆಲಸಮಾಡಬೇಕಾಗಿದೆ, ಈ ಎಲ್ಲ ಸಂಸ್ಥೆಗಳ, ಎಲ್ಲ ಸ್ಥಳಗಳ ಕರ್ಣಾಟಕ ಸಂಘಗಳ, ಮುಖ್ಯ ಉದ್ದೇಶವೂ ಕನ್ನಡಿಗರನ್ನು ಒಂದು ಗೂಡಿಸುವುದು ಹಾಗೂ ಮುಂದೆ ವರಿಸುವುದು—ಈ ವಿಷಯಗಳಲ್ಲಿಯೇ ಪರಿಣಮಿಸಬೇಕಾಗಿದೆ. ಈಗ ನಮ್ಮ ನಾಡಿನಲ್ಲಿರುವ ನಣ್ಣ ವುಟ್ಟ ಕಲಹಗಳೂ ಮನಸ್ತಾಪಗಳೂ ಬೇಗನೆ ಬಯಲಾಗಿ; ಕನ್ನಡಿಗರು ಕರ್ಮಯೋಗಿಗಳಾಗಿ, ಗಂಡುಗಲಿಗಳಾಗಿ, ತ್ಯಾಗಜೀವಿಗಳಾಗಿ, ಕಲಾಮಯರಾಗಿ, ಪ್ರತಿಭಾಶಾಲಿಗಳಾಗಿ, ಶ್ರೀಮಂತರಾಗಿ, ಧೀಮಂತರಾಗಿ, ಬಲವಂತರಾಗಿ, ಬಾಳುವಂತೆ ಕರ್ಣಾಟಕ ಮಾತೆಯು ಅನುಗ್ರಹಿಸುವಂತೆ ನಾವು ವ್ಯಾರ್ಥಿಸುತ್ತೇವೆ.

ಇಂದು ನಮ್ಮ ಕನ್ನಡ ದೇಶದಲ್ಲಿ ನಮಗೆ ದೊಡ್ಡ ಹಬ್ಬವು ಪ್ರಾಪ್ತವಾಗಿದೆ. ಅದು ನಮ್ಮ ನಾಡು ಹಬ್ಬವೆಂಬ ಮಹಾನವಮಿ; ಮಹಾನವಮಿಗೂ, ಕರ್ಣಾಟಕಕ್ಕೂ ಪೌರಾಣಿಕ ಕಾಲದಿಂದ ಸಂಬಂಧವುಂಟೆಂದು ತೋರುತ್ತದೆ. ಶ್ರೀಲೋಕವೀರನಾದ ಕಲಿಪಾರ್ಥನು ವಿಜಯದಶಮಿಯ ಶುಭದಿನ ಕೌರವರ ನೆರೆಯಲ್ಲಿದ್ದ ಗೋವುಗಳನ್ನು ಬಿಡಿಸಲು ಶಸ್ತ್ರ ಪ್ರಾಣಿಯಾಗಿ ಹೊರಟುದು ಈ ಕರ್ಣಾಟಕದಲ್ಲಿ.ಅಂದಿನ ವಿರಾಟರಾಜಧಾನಿಯಾದ ಇಂದಿನ ಹಾನುಗಲ್ಲಿನಲ್ಲಿ, ಅದು ಕಾರಣವೇ ವಿಜಯನ ಸಂಬಂಧವಾದ ವಿಜಯ ಪ್ರದವಾದ ಈ ವಿಜಯದಶಮಿಯು ಕನ್ನಡಿಗರಿಗೆ ಹೆಚ್ಚುಪ್ರಿಯವಾಯಿತೆಂದು ನಾವು ಭಾವಿಸಬಹುದಾಗಿದೆ ! ಮಹೋನ್ನತವಾದ ಕೀರ್ತಿಯನ್ನು ದಿಗಂತ ವಿಶ್ರಾಂತವನ್ನಾಗಿ ಮಾಡಿದವರು ವಿಜಯನಗರದ ಅರಸರು. ಆ ಸಂಪ್ರದಾಯವನ್ನು ಮುಂದುವರಿಸಿದವರು ಮೈಸೂರಿನ ರಾಜವೊಡೆಯರೇ ಮೊದಲಾದ ಭೂಪತಿಗಳು. ವಿಜಯದಶಮಿಯ ಮಹೋತ್ಸವವನ್ನು ಲೋಕ ವಿಖ್ಯಾತವಾಗುವಂತೆ ಮಾಡಿದವರು ರಾಜರ್ಷಿಗಳಾದ ಮೈಸೂರಿನ ಶ್ರೀನುನ್ನಾಲ್ವಡಿ ಕೃಷ್ಣರಾಜೇಂದ್ರ ಪ್ರಭುಗಳು ವಿಜಯದಶಮಿಯ ಮಂದುಭಯನ್ನು ದೇಶದ ಮೂಲೆಗಳಲ್ಲಿ ಹಬ್ಬಿಸಿದವರು ವೀರರಾದ ಕನ್ನಡಿಗರು. ಆದುದರಿಂದ ಈ ಮಹೋತ್ಸವವು ಕನ್ನಡಿಗರ ನಾಡು ಹಬ್ಬವೆನಿಸುವುದರಲ್ಲಿ ಔಚಿತ್ಯವುಂಟೆಂದು ನಾವು ಭಾವಿಸಬಹುದಾಗಿದೆ.

ಇಂತಹ ಶುಭಸಮಯದಲ್ಲಿ ನಮ್ಮ ಪ್ರಿಯವಾಚಕರಿಗೆ, ನಮ್ಮ ಕನ್ನಡ ಬಂಧುಗಳಿಗೆ, ನಮ್ಮ ಕನ್ನಡ ಕುಲದ ಅಣ್ಣತಮ್ಮಂದಿರಿಗೆ, ನಮ್ಮ ನಾಡಿನ ಅಕ್ಕತಂಗಿಯರಿಗೆ, ನಾಡಿನ ಗುರುಹಿರಿಯರಿಗೆ, ನಮ್ಮ ನಾಡಿನ ಪ್ರಭುಗಳಿಗೆ ನಾವು "ಸ್ವತಂತ್ರಕರ್ಣಾಟಕ" ದ ಮುಖದಿಂದ ನಮ್ಮ ಬಡಕಾಣಿಕೆಯನ್ನು ಒಪ್ಪಿಸಲು ಸಂಕಲ್ಪಿಸಿದ್ದೇವೆ. ಸ್ವತಂತ್ರಕರ್ಣಾಟಕದ ವಿಶೇಷ ಸಂಚಿಕೆಯು ಕರ್ಣಾಟಕದ ಘನತೆಗೂ, ನಾಡಹಬ್ಬದ-ಹಿರಿಮೆಗೂ, ನಮ್ಮ ಮಿಗಿಲಾದ ಉತ್ಸಾಹಕ್ಕೂ ತಕ್ಕುದಲ್ಲವೆಂಬುದನ್ನು ನಾವು ತಿಳಿದುಕೊಂಡೇ ಇದ್ದೇವೆ. ಆದರೂ "ಬೆಟ್ಟದಂತಹ ದೇವರಿಗೆ ಮುತ್ತಿನಷ್ಟು ನೈವೇದ್ಯ" ಎಂಬ ಗಾದೆಯಮಾತಿನಂತೆ, 'ಅಳಲು ಭಕ್ತಿ ಮಳಲು ನೇವೇ" ಎಂಬ ಜಾಣ್ಣುಡಿಯಂತೆ, ನಾವು ಈ ಕಾಣಿಕೆಯ ಮುಖದಿಂದ ನಮ್ಮ ಜನತೆಗೆ ಸೇವೆಯನ್ನು ಸಲ್ಲಿಸಲು ಉತ್ಸಾಹಿತರಾಗಿದ್ದೇವೆ. ಇದನ್ನು ದೇಶಭಾಷಾಭಿಮಾನಿಗಳು ಮಮತೆಯಿಂದಲೂ, ವಿಶ್ವಾಸದಿಂದಲೂ. ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇವೆ

ಕ್ಷಿಪ್ರದಲ್ಲಿಯೇ ಸ್ವತಂತ್ರಕರ್ಣಾಟಕವು ತನ್ನದೇ ಆದ ಒಂದು ಮುದ್ರಣಾಲಯವನ್ನು ಸ್ಥಾಪಿಸಿಕೊಂಡು-ಇತೋಪ್ಯತಿಶಯವಾದ ಉತ್ಸಾಹದಿಂದ ಹೆಚ್ಚೆಹೆಚ್ಚು ಕನ್ನಡಿಗರ ಸೇವೆಯನ್ನು ಮಾಡಬೇಕೆಂದೂ, ಇಂತಹ, ಇದಕ್ಕಿಂತಲೂ ವಿಗಿಲೆನಿಸುವಂತಹ ಹಲವು ವಿಶೇಷ ಸಂಚಿಕೆಗಳನ್ನು ಹೊರಡಿಸುವುದರ ಮೂಲಕ, ನಾಡಿನ ಸೇವೆಯನ್ನು ಮಾಡಬೇಕೆಂದೂ ಸಂಕಲ್ಪಿಸಿದೆ. ನಮ್ಮ ಈ ಪ್ರಯತ್ನಕ್ಕೆ ನಮ್ಮ ಪತ್ರಿಕೆಯ ವಾಚಕರ ಮತ್ತು ಪ್ರೋತ್ಸಾಹಕರ ಅಭಿಮಾನಿಗಳ, ಮಾನ್ಯಲೇಖಕರ ಸಹಾಯ ಸಹಾನುಭೂತಿಗಳು ಅತ್ಯಾವಶ್ಯಕರ ವಿಶಾಲ ಭಾರತಕ್ಕೆ, ನಮ್ಮ ಕನ್ನಡ ನಾಡಿಗೂ, ನಮ್ಮ ವಾಚಕ ಲೇಖಕವೃಂದಕ್ಕೂ, ಕನ್ನಡ ಸಂಸ್ಕೃತಿಯ, ಕನ್ನಡ ಭಾಷೆ ಸಾಹಿತ್ಯಗಳ

ಸಾಹಿತಿಗಳ ಪರಿಚಯ

ಪ್ರೊ॥ ಬಿ. ಎಂ. ಶ್ರೀಕಂಠಯ್ಯ

ಎಂ.ಎ., ಬಿ.ಎಲ್., ರವರು

ಶ್ರೀಮಾನ್ ಶ್ರೀಕಂಠಯ್ಯನವರನ್ನು ಪರಿಚಯ ಮಾಡಿಕೊಡುವುದು ಒಂದು ಬಗೆಯ ಸಾಹಸವೇ ಸರಿ. ಕನ್ನಡನಾಡಿನಲ್ಲಿ ಈಗ ಅವರ ಹೆಸರು ಮನೆಯ ಮಾತಾಗಿದೆ. ಕನ್ನಡ ಸಾಹಿತ್ಯವು ಅವರ ಸೇವೆಯನ್ನು ಬಹಳವಾಗಿ ಪಡೆದಿದೆ ಅವರು ಉಜ್ವಲ ಕನ್ನಡ ಪ್ರೇಮಿಗಳು; ಕೈಲಿ ಕನ್ನಡ ಬಾವುಟವನ್ನು ಹಿಡಿದು ದೇಶದ ತುಂಬ ಓಡಾಡುತ್ತಿದ್ದಾರೆ. ಅವರು ತಮಗೆ ಹತ್ತಿರುವ ಕನ್ನಡದ ಹುಚ್ಚನ್ನು ಕನ್ನಡಿಗರಿಗೆಲ್ಲಾ ಹತ್ತಿಸುತ್ತಿದ್ದಾರೆ. ಮೈಸೂರಿನ ಶ್ರೀಮನ್ಮಹಾರಾಜರವರು ಅವರ ದೇಶಸೇವೆಗೆ ಮೆಚ್ಚಿ "ರಾಜಸೇವಾಸಕ್ತ" ಎಂಬ ಘನವಾದ ಪ್ರಶಸ್ತಿಯನ್ನು ಅನುಗ್ರಹಿಸಿದ್ದಾರೆ ಇವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಒಳ್ಳೆಯ ಪಂಡಿತರು; ಮೇಲಾಗಿ ಕೊಡುಗೈ ದೊರೆಗಳು. ಈಗ ಪರಿಷತ್ತಿನ ಉಪಾಧ್ಯಕ್ಷರಾಗಿಯೂ, ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರರಾಗಿಯೂ ಜನಸೇವೆ ಮಾಡುತ್ತಿದ್ದಾರೆ. ಇವರ ಉತ್ಸಾಹವೂ ಕಾರ್ಯಶಕ್ತಿಯೂ ಇಂದಿನ ತರುಣರಿಗೆ ಮಾರ್ಗದರ್ಶಕವಾಗಿದೆ.

—❀—

ಪ್ರೊಫೆಸರ್ ಎಸ್. ಎಸ್.

ಬಸವನಾಳ್ ಎಂ.ಎ, ರವರು

ಇವರು ಉತ್ತರ ಕರ್ಣಾಟಕದಲ್ಲಿ ಸುಪ್ರಸಿದ್ಧ ವಿದ್ವಾಂಸರೆನಿಸಿದ್ದಾರೆ. ಲಿಂಗಾಯತ ಸಮಾಜದಲ್ಲಿ ಇವರು ಮಾಟ್ರುನೊದಲು ಎಂ.ಎ., ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಅತ್ಯಂತ ಸ್ವಾರ್ಧತ್ಯಾಗಿಗಳು. ಧಾರವಾಡದ ವೀರಶೈವ ವಿದ್ಯಾರ್ಥಿ ಸಂಸ್ಥೆಯ ತಾಯಿ ಬೇರಿನಂತಿದ್ದಾರೆ. ಧಾರವಾಡದ ರಾಜಾ ಲಖಮನ ಗೌಡ ಹೈಸ್ಕೂಲ್ ಬೆಳಗಾವಿಯ ಆರಟಾಲ್ಸ್ ಗಿಲಗಂಡಿ ಹೈಸ್ಕೂಲ್ ಮತ್ತು ಲಿಂಗರಾಜ ಕಾಲೇಜ್-ಇವುಗಳ ಸ್ಥಾಪನೆಯಲ್ಲಿ ಇವರ ಸೇವೆ ಬಹಳವಾಗಿ ಸಂದಿದ ಜೆನ್ನಬಸವ ಪುರಾಣ, ಪ್ರಭುಲಿಂಗಲೀಲೆ, ಶಬರಶಂಕರ ವಿಲಾಸ ಎಂಬ ಕನ್ನಡ ಕಾವ್ಯಗಳನ್ನು ವಿದ್ವಾಂಸರ ಸಹಾಯದಿಂದ ಅತ್ಯಂತ ಉತ್ತಮವಾಗಿ ಪ್ರಕಟಿಸಿರುತ್ತಾರೆ. ವರು ವೀರಶೈವ ಮಹಾಸಭೆಯ ಅಧ್ಯಕ್ಷರು; ಕೀರ್ತಿಯನ್ನು ಅಪೇಕ್ಷಿಸದೆ ಕೆಲಸಮಾಡುವ ಕನ್ನಡಿಗರಲ್ಲಿ ಇವರನ್ನು ಅಗ್ರಗಣ್ಯರೆನಿಸಬಹುದು

ಉದ್ಧಾರಕರಾದ ಮೈಸೂರಿನ ಕರ್ಣಾಟಕ ರತ್ನಸಿಂಹಾಸನಾಧೀಶ್ವರರಾದ ಶ್ರೀ ಕೃಷ್ಣರಾಜೇಂದ್ರ ಪ್ರಭುಗಳ ನಿರ್ಮಲವಾದ ಆಶ್ರಯಕ್ಕೂ ಮಂಗಲ ಪರಂಪರೆಯುಂಟಾಗುವಂತೆ ದಯಾಘನನಾದ ಪರಮಾತ್ಮನು ಅನುಗ್ರಹಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಭಾರತದಲ್ಲಿ ವಿಜಯದಶಮಿ

ವಿಜಯ ದಶಮಿಯೆಂದರೆ, ಬಾರತೀಯರಿಗೇ ಒಂದು ಬಗೆಯನಾಡುಹಬ್ಬ. ಕರ್ನಾಟಕ, ಆಂಧ್ರ, ಬಂಗಾಳ, ನೇಪಾಳ-ಮುಂತಾದ ಪ್ರಾಂತಗಳಲ್ಲಿಯೂ ನವರಾತ್ರಿ ಉತ್ಸವವನ್ನು ವಿಜೃಂಭಣೆಯಿಂದ ಸಾಗಿಸುತ್ತಾರೆ. ಆದರೆ ಆಚರಣೆಯ ಕ್ರಮ ಬೇರೆ. ಶಕ್ತಿ ಪೂಜಕರಾದ ಬಂಗಾಳಿಗಳು ನವರಾತ್ರಿಯ ಉತ್ಸವವನ್ನು ದುರ್ಗಾರಾಧನೆಯಲ್ಲಿ ಕಳೆಯುವರು. ಶಕ್ತಿಯ ಆರಾಧನೆಯಲ್ಲಿ ದಶಮಿಯ ದಿನ ಅವರ ಪೂರ್ವಜರು - ವಿಜಯಿಗಳಾದ್ದರಿಂದ 'ವಿಜಯದಶಮಿ' ಎಂದು ಅವರು ಕರೆಯುತ್ತಾರೆ. ಪಾಪಭೂಯಿಷ್ಠವಾದ ಈ ಜಗತ್ತಿನ ಹವ್ಯಾಸದಿಂದ ಬಹಿರ್ಮುಖರಾಗಿ, ಜಗತ್ತಿ ಸೃಷ್ಟಿಸ್ಥಿತ್ಯಾದಿ ಲೀಲಾತರಂಗಗಳಿಗೆ ಕಾರಣಕರ್ತೃವಾದ ಜಗನ್ಮಾತೆ -ಮಹಾದುರ್ಗೆಯಲ್ಲಿ ಅಂತರ್ಧಾನರಾಗಲು ಮಹಾತ್ಮರು ಯತ್ನಿಸಿ, ಕೃತಕೃತ್ಯರಾದುದರಿಂದ ಬಂಗೀಯರು ದುರ್ಗಾ ಪೂಜೆಯನ್ನು ಈ ಕಾಲದಲ್ಲಿ ವಿಶೇಷವಾಗಿ ಮಾಡುತ್ತಾರೆ.

ಬಂಗೀಯರಿಗೆ ಇದೊಂದು ಬಗೆಯ ಧಾರ್ಮಿಕ ಹಬ್ಬವಾಗಿರುವ ನಿಮಿತ್ತ ಅಲ್ಲಿನ ಶಾಲೆ-ಕಾಲೇಜುಗಳಿಗೆಲ್ಲ ಈಗ ಒಂದು ತಿಂಗಳು ರಜ.

ಂ ಂ ಂ

ಕನ್ನಡನಾಡಿನಲ್ಲಿಯೂ, ಆಂಧ್ರದೇಶದಲ್ಲಿಯೂ 'ವಿಜಯ ದಶಮಿಗೆ' ಒಂದೇ ಅರ್ಥವಿದೆ. ಆದರೆ ವಿಜಯ ದಶಮಿಗೆ ಕರ್ನಾಟಕದಲ್ಲಿರುವ ವ್ಯಾಪಕವಾದ ಅರ್ಥವು ಆಂಧ್ರದಲ್ಲಿ ಇಲ್ಲ. ನವರಾತ್ರಿಯ ಕಾಲದಲ್ಲಿ ಆಂಧ್ರರು ದೇವತಾರ್ಚನೆ, ವಿಶೇಷ ಉತ್ಸವಗಳು, ಇತ್ಯಾದಿ ಇತ್ಯಾದಿಯಾಗಿ ಹಲವು ಧರ್ಮ ಪ್ರವೃತ್ತಿಯಲ್ಲಿ ನಿರತರಾಗುತ್ತಾರೆ ಕನ್ನಡನಾಡಿನಲ್ಲಾದರೋ, ನವರಾತ್ರಿಯ ಕಾಲವು-ಕನ್ನಡಿಗರಿಗೆ ಒಂದು ವಸ್ತು ಪ್ರದರ್ಶನಕಾಲ. ಕನ್ನಡಿಗರ ಕಲಾಭಿರುಚಿ, ರಾಜಭಕ್ತಿಗಳನ್ನು ನವರಾತ್ರಿಯ ಉತ್ಸವಕಾಲದಲ್ಲಿ ಕಾಣಬಹುದು. ಪ್ರತಿಯೊಬ್ಬರೂ ಈ ಉತ್ಸವನವನ್ನು ವಿಜೃಂಭಣೆಯಿಂದ ನಡೆಯಿಸುವರು. ಯಾವಮನೆನೋಡಲಿ, ಶೃಂಗರಿಸಲ್ಪಟ್ಟಿರತ್ತದೆ; ಆ ಬೊಂಬೆಗಳ ಸೊಗಸೇನು, ಅಲಂಕಾರವೇನು ? ಅಲಂಕಾರ ಮಾಡುವುದರಲ್ಲಿ ಸ್ತ್ರೀಯರು ತೋರಿಸುವ ಸ್ಪರ್ಧೆನೋಡಲು ಆನಂದವಾಗುತ್ತದೆ. ಜತೆಗೆ ಕರ್ನಾಟಕದ ಅರಸುಮನೆತನಗಳಲ್ಲಿ ಮುಖ್ಯರಾದ ಮೈಸೂರು ಪ್ರಭುಗಳಿಗೆ ಇದು ಧಾರ್ಮಿಕ ಹಾಗೂ ರಾಷ್ಟ್ರೀಯ ಉತ್ಸವ. ಅವರ ಕುಲದೇವತೆ ಶಕ್ತಿಸ್ವರೂಪಿಣಿಯಾದ ಚಾಮುಂಡಿಕಾದೇವಿ. ಅವರ ಆಚಾರ ಸಂಪ್ರದಾಯವೆಲ್ಲ ವಿಜಯನಗರ ಪರಂಪರೆಗೆ ಸೇರಿದ್ದು. ಆದಕಾರಣ, ಅವರ ಆಚಾರ ಸಂಪ್ರದಾಯವೆಲ್ಲ ವಿಜಯನಗರ ಪರಂಪರೆಗೆ ಸೇರಿದ್ದು. ಆದಕಾರಣ ಅಭಿಮಾನ ದೇವತೆ ಚಾಮುಂಡಿಕಾದೇವಿ ಮತ್ತು ಪರಂಪರಾಗತ ಆಚರಣೆಗಳ ಫಲವಾಗಿ ಮೈಸೂರು ನವರಾತ್ರಿ ಉತ್ಸವದ ಪ್ರಧಾನ ಕ್ಷೇತ್ರವಾಗಿದೆ. ಈ ಉತ್ಸವದ ವಿತರಣೆ, ವೈಭವ, ಆದರ ಆಶ್ರಯದಲ್ಲಿ ನಡೆಯುವ ಹಲವು ಕಲಾ ಮತ್ತು ವಸ್ತು ಪ್ರದರ್ಶನಗಳು-ಕನ್ನಡಿಗರಿಗೆ ಹುರುಪನ್ನೂ ತಾಯ್ನಾಡಿನ ಅಭಿಮಾನವನ್ನೂ ಹುರುಪುಗೊಳಿಸುತ್ತಿವೆ.

ಂ ಂ ಂ ಂ

ಆಂಧ್ರ, ಮಹಾರಾಷ್ಟ್ರ, ತುಳುವ, ಮಧ್ಯಪ್ರಾಂತ, ಸಂಯುಕ್ತ ಪ್ರಾಂತಗಳಲ್ಲಿಯೂ ಶಕ್ತಿ ಪ್ರಧಾನ ಪೂಜಕರಿಗಲ್ಲ ಇದು ಪರಮೋತ್ಕೃಷ್ಟ ಹಬ್ಬವೆಂದು ಪರಿಗಣಿತವಾಗಿದೆ. ಆದರೆ, ನೇಪಾಳದಲ್ಲಿ ವಿಜಯದಶಮಿಗೆ ಇರುವ ಅರ್ಥವೇ ಬೇರೆ. ಅಲ್ಲಿ ಇದಕ್ಕೆ ರಾಷ್ಟ್ರೀಯ ಸ್ವರೂಪವಿಲ್ಲ. ಆದರೂ ಪ್ರತಿಯೊಬ್ಬ ಭೂರ್ಕರೂ ಇದನ್ನು ಆಚರಿಸುತ್ತಾರೆ. ಪಾಡ್ಯಮಿಯಿಂದ ಸಪ್ತಮಿಯವರೆಗೆ ಹೆಚ್ಚು ಕಲಾಪಗಳಲ್ಲ. ಆ ಕಾಲವನ್ನು ಸಂತೋಷದಿಂದ ಕಳೆಯುತ್ತಾರೆ. ಕಾಳರಾತ್ರಿಯ ದಿನ ಪ್ರತಿಯೊಬ್ಬರೂ ಒಂದೊಂದು ಆಡನ್ನು ಮಧ್ಯರಾತ್ರಿಗೆ ಸರಿಯಾಗಿ ದುರ್ಗಿಗೆ ಬಲಿಕೊಡುತ್ತಾರೆ. ಆ ರಾತ್ರಿಯೆಲ್ಲಾ ತಾಳ, ಮೇಳ, ಮದ್ದಳೆ, ಸಂಗೀತ, ನೃತ್ಯ, ಇವುಗಳಿಂದ ಕಾಲಕಳೆಯುತ್ತಾರೆ. ಮಾರನೆಯ ದಿನ ಮತ್ತೆ ಕಾಳಿಸುತ್ತಾರೆ. ಈ ಹಬ್ಬಕ್ಕೆಂದೇ ನಿರ್ಮಿತವಾದ ಭಯಂಕರಾಕಾರದ ಮಣ್ಣಿನ ಕಾಳಿಯ ಬೊಂಬೆಯ ಮುಂದೆ-ಈ ಬಲಿಯೆಲ್ಲ ನಡೆಯುವುದು !

ಈ ಬಲಿ ಕೊಡುವ ಸಮಯದಲ್ಲಿ ನಡೆಯುವ ಆಚರಣೆಯ ಕ್ರಮವನ್ನೂ ತಿಳಿಯುವುದಾವಶ್ಯಕ. ಪೂಜೆಯು ಆರಂಭವಾಗುವುದು ಕೋಳಿಯ ಬಲಿಯೊಂದಿಗೆ. ಅನಂತರ ಒಂದು ಜೊತೆ ಪಾರಿವಾಳಗಳನ್ನು ಬಲಿಕೊಡುವರು. ಎರಡು ಪಾರಿವಾಳಗಳನ್ನು ಬಲಿಕೊಟ್ಟರೆ, ಎರಡು ಪಾರಿವಾಳಗಳನ್ನು ಬಿಟ್ಟುಬಿಡಬೇಕು. ಅಂದರೆ, ಪಾಪದಿಂದ ವಿನಿರ್ಮುಕ್ತವಾದ ಜೀವಗಳೆಂದು ಅವರ ಭಾವನೆ, ಪಾರಿವಾಳ—ಕೋಳಿಗಳ ಬಲಿಯಾದನಂತರ ಮೇಕೆಯನ್ನು ಬಲಿಕೊಡುತ್ತಾರೆ. ಅನಂತರ ಎಮ್ಮೆಯೊಂದು ಬಲಿಯಾಗಲೇಬೇಕು. ಇದಾದಮೇಲೆ ಇತರ ಪ್ರಾಣಿಗಳ ವಧೆಯಾಗುತ್ತದೆ! ಸಾಮಾನ್ಯವಾಗಿ ಈ ಎಲ್ಲ ಪ್ರಾಣಿಗಳನ್ನೂ ಒಬ್ಬನೇ ವಧೆಮಾಡಬೇಕು.



ಕಿರೀಟದ ಉಪಾಂಗಗಳು. ಪಡಿಯಚ್ಚು 'ಕಲಾಮಂದಿರ' ದ ಕೃಪೆಯಿಂದ

ಬಲಿಗೆ ಪ್ರಾರಂಭ ಅಗಣಿತ ಅಡುಗಳು, ಕೋಣಗಳನ್ನು ಬಲಿಯಿಡುತ್ತಾರೆ, ಪ್ರಾಣಿಗಳನ್ನು ಬಲಿಯಿಡಲಾರದವರು ತೆಂಗಿನ ಕಾಯಿ, ಬಾಳೆಹಣ್ಣುಗಳನ್ನು ಅರ್ಪಿಸುತ್ತಾರೆ. ಅದರ ಮೇಲೆ ಕುಂಕುಮವನ್ನು ರಾಶಿ ರಾಶಿಯಾಗಿ ಸುರಿಯುತ್ತಾರೆ. ಮತ್ತೆ ಕೆಲವರು ಕೋಳಿಗಳನ್ನು ದುರ್ಗಿಗೆ ಸಮರ್ಪಿಸುತ್ತಾರೆ. ಇದಕ್ಕಿಂತ ಮುಖ್ಯವಾದ ಮಂತ್ರೊಂದು ಸಂಗತಿ. ಯಾವ ಪ್ರಾಣಿಯನ್ನು ವಧೆಮಾಡಬೇಕಾದರೂ, ಒಂದೇ ಏಟಿಗೆ ಕತ್ತರಿಸಬೇಕು. ಆದಕಾರಣ ಪ್ರಾಣಿಗಳನ್ನು ವಧಿಸುವವನು ಶಕ್ತಿವಂತನಾಗಿರಬೇಕು. ಅವನಿಗೆ ಪೂಜೆಯನಂತರ ಬಹುಮಾನಗಳು ದೊರೆಯುತ್ತವೆ.

ಈ ಪ್ರಾಣಿಗಳ ವಧೆಯ ಆರಂಭಕಾಲದಲ್ಲಿ ಎಂಟುಮಂದಿ, ಹತ್ತಿರದ ಗುಡ್ಡದ ಕಡೆಗೆ—ತಮ್ಮ ಬಂದೂಕುಗಳಿಂದ ಗುಂಡು ಬಾರಿಸುತ್ತಾರೆ. ಅನಂತರ ಪುರೋಹಿತರು ಪ್ರಾಣಿಗಳನ್ನು ವಧಿಸುವ ಕಾರ್ಯವು ಸಂಪೂರ್ಣವಾಗುವವರೆಗೆ ಮಂತ್ರಗಳನ್ನು ಹಾಡುತ್ತಾರೆ ಪ್ರಾಣಿಯೊಂದನ್ನು ಬಲಿಕೊಟ್ಟಕೂಡಲೇ, ಅದರ ದೇಹವನ್ನು ಕಾಳಿಯ ಮೂರ್ತಿಯ ಸುತ್ತ ಎಳೆದು ತರುವರು. ಆದರ ಸುತ್ತ ಸ್ತ್ರೀ ಪುರುಷರು ವಿವಿಧ ಬಣ್ಣದ ಉಡಿಗೆ ತೊಡಿಗೆಗಳನ್ನುಟ್ಟು, ನರ್ತಿಸುತ್ತಿರುವರು !!

ಭೂರ್ಕ ಸ್ತ್ರೀಯರೂ ಸಹ ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ವಧೆಗೆ ನಿಯಮಿತ ಪುರುಷನ ಸ್ತ್ರೀಗೆಈ ಸಮಯದಲ್ಲಿ ವಿಶೇಷ ಗೌರವ !!

ಈ ಉತ್ಸವಕ್ಕೆ ಭೂರ್ಕ ಸಿಪಾಯಿಗಳೂ ಬರುತ್ತಾರೆ. ಉತ್ಸವ ಸಮಯದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನು ಅಲಂಕಾರವಾಗಿ ಗುಂಪುಗುಂಪಾಗಿಡುವರು. ಕಾಳಿಯನಿಗ್ರಹದಸುತ್ತ ಕೈಕಟ್ಟಿ, ಉತ್ಸವವು ಮುಗಿಯುವವರೆಗೆ ನಿಂತಿರುವರು. ಈ ಕಾಲದಲ್ಲಿ ಕಾಳಿಕಾದೇವಿಯ ವಿಶೇಷ ಕೃಪೆ ತಮಗೆ ಉಂಟಾಗುತ್ತದೆಯೆಂಬುದೇ ಅವರ ಭಾವ.

ಈ ಬಲಿಯು ಮುಗಿದ ಮಾರನೆಯ ದಿನಕ್ಕೆ "ಟಿಕ" ಎಂದು ಹೆಸರು. ಯುವಕ-ಯುವತಿಯರು ಇದರಲ್ಲಿ ಭಾಗವಹಿಸುತ್ತಾರೆ. ವೃದ್ಧನಾದ ತಮ್ಮ ಸಂಬಂಧಿಕಳಾದ ಸ್ತ್ರೀಯಿಂದ ಅವರ ಆಶೀರ್ವಾದ ಹೊಂದುತ್ತಾರೆ. ಆ ಕಾಲದಲ್ಲಿ ಆ ವೃದ್ಧರು ಅವರ ತಲೆಯಮೇಲೆ ಮಂತ್ರಾಕ್ಷತೆಯನ್ನು ಹಾಕಿ, ಆಶೀರ್ವದಿಸಿ, ಮುಖಕ್ಕೆ ಕುಂಕುಮವನ್ನಿಡುವಳು. ಈ ಪದ್ಧತಿಯು ಬಹು ದಿನಗಳಿಂದ ನಡೆದುಬರುತ್ತಿದೆ. ಇಂದಿಗೂ ಯಾರೂ ತಪ್ಪದೆ ಈ ಕೆಲಸವನ್ನು ಮಾಡಲೇಬೇಕೆಂಬ ನಿಯಮವಿದೆ.

ಇತ್ತೀಚೆಗೆ ಹೊಸ ತತ್ವಗಳ ಪ್ರಸಾರದಿಂದ- ಪ್ರಾಣಿವಧೆಯು ಕಡಿಮೆಯಾದರೂ ಸಹ, ವಿಜಯದಶಮಿಯ ಸಮಯದಲ್ಲಿ ತಮ್ಮ ಪಾಪಗಳನ್ನು ನಿವೃತ್ತಿಗೊಳಿಸಲು ಶಾಕಾಹಾರಗಳನ್ನೇ ಸಮರ್ಪಿಸಿ, ಈ ಉತ್ಸವವನ್ನು ಹಲವರು ನಡೆಯಿಸುತ್ತಿದ್ದಾರೆ.

....—....

ಈ ವಿಜಯದಶಮಿ ಮಹೋತ್ಸವವನ್ನು ದಿಗಂತ ವಿಶ್ರಾಂತವನ್ನಾಗಿ ಮಾಡಿದವರು ವಿಜಯನಗರದ ರಾಯರು. ಇಂದು ಆ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವವರು ಮೈಸೂರಿನ ಒಡೆಯರು. ಈ ಮಹೋತ್ಸವದ ಅಂದಚೆಂದಗಳನ್ನು ಕಂಡು ಆನಂದಿಸುವವರು ವಿಶಾಲ ಭಾರತದ ಕೋಟಿಗಟ್ಟಲೆ ಜನರು !

—....—

ವಿಜಯ ದಶಮಿ

ಲೇಖಕರು:—ಆಯುರ್ವೇದಾಚಾರ್ಯ. ವೈದ್ಯಮಾರ್ತಾಂಡ ಭಿಷಗ್ರತ್ನ
ಸಾಹಿತ್ಯವಾರಿಧಿ ಶ್ರೀ ಶ್ರೀ ಪಂಡಿತ ಶಿವಕುಮಾರಸ್ವಾಮಿಗಳು,
ಶ್ರೀ ಮೃತ್ಯುಂಜಯ ಔಷಧಾಲಯ, ಕೊಟ್ಟಿಗೇಗಲ್ಲಿ, ಬೆಂಗಳೂರು ಸಿಟಿ.

ಧಾರ್ಮಿಕ ಭಾವನೆಯಿಂದ ಆಚರಿಸಲ್ಪಡುತ್ತಿರುವ ನವ್ಯಭಾರತೀಯರ ಹಬ್ಬಗಳಲ್ಲಿ ವಿಜಯದಶಮಿಯು ಬಹು ಮುಖ್ಯವಾದುದು. ವೀರ ಪ್ರಸವಿನಿಯಾದ ಭಾರತಮಾತೆಯ ವೀರಪುತ್ರರು ಮಾಡಿದ ವಿಜಯಯಾತ್ರೆಯ ಸ್ಮಾರಕ ರೂಪವಾಗಿ ಈ ಹೆಬ್ಬವು ಪ್ರತಿವರ್ಷದ ಶರದೃತುವಿನ ಆಶ್ವೀಜ ಶುದ್ಧ ಪಾಡ್ಯವು ಮೊದಲು ಒಂಬತ್ತು ದಿನಗಳವರೆಗೆ ಅನೇಕ ವಿಧಗಳಾದ ಪೂಜಾ, ಹೋಮ, ಜಪ, ಅನುಷ್ಠಾನ ಮುಂತಾದುವುಗಳು ವಿಧ್ಯುಕ್ತವಾಗಿ ಆಚರಿಸಲ್ಪಟ್ಟು, ಹತ್ತನೆಯ ದಿನವಾದ ದಶಮಿಯಲ್ಲಿ ಮುಗಿಸಲ್ಪಡುತ್ತದೆ. ಈ ಹಬ್ಬದ ಹುಟ್ಟುವಿಕೆಯು ಮೊಟ್ಟಮೊದಲು ದೇವಾಸುರ ಯುದ್ಧದ ಸಮಯದಲ್ಲಿ ಆಯಿತೆಂಬುದು ಪ್ರಸಿದ್ಧವಾಗಿದೆ. ಒಂದಾನೊಂದು ಸಮಯದಲ್ಲಿ ಶುಂಭ, ನಿಶುಂಭ, ಮಹಿಷಾಸುರ ಮುಂತಾದ ತಾಮಸ ಪ್ರಕೃತಿಯ ರಕ್ಕಸರು ಭೂಲೋಕ ಮತ್ತು ಸ್ವರ್ಗಲೋಕದಲ್ಲಿ ಅನೇಕ ಅತ್ಯಾಚಾರ ಅನಾಚಾರಗಳನ್ನು ನಡೆಯಿಸಿ ತಮ್ಮ ಕ್ರೂರ ಕಾರ್ಯದಿಂದ ಎಲ್ಲೆಡೆಯಲ್ಲಿಯೂ ಹಾಹಾಕಾರವನ್ನುಂಟುಮಾಡಿದರು. ಆಗ ಇವರ ಹಿಂಸೆಯನ್ನು ತಾಳಲಾರದೆ ದೇವತೆಗಳು ಜಗಜ್ಜನನಿಯಾದ ಮಹಾಶಕ್ತಿ ಸ್ವರೂಪಿಣಿಯಾದ ಮಹಾದೇವಿಯನ್ನು ಪ್ರಾರ್ಥಿಸಿದರು. ಸಂತುಷ್ಟಳಾದದೇವಿಯು " ಎಲ್ಲಿ ದೇವತೆಗಳೇ ನೀವೆಲ್ಲರೂ ಇದೇ ಶರದೃತುವಿನಲ್ಲಿ ಬರುವ ಆಶ್ವೀಜ ಶುಕ್ಲಪಕ್ಷದ ಪಾಡ್ಯಮಿಯ ದಿನದಲ್ಲಿ ಘಟಸ್ಥಾಪನೆಯನ್ನು ಮಾಡಿ ಒಂಬತ್ತು ದಿನಗಳವರೆಗೆ ನನ್ನ ಸಂಬಂಧವಾದ ಹೋಮ, ಪೂಜೆ, ಜಪ, ಮುಂತಾದ ಕರ್ಮಗಳನ್ನು ವಿಧ್ಯುಕ್ತವಾಗಿ ಆಚರಿಸಿ, ಹತ್ತನೆಯದಿನ ದಶಮಿಯಾ ತಿಥಿಯಲ್ಲಿ ಆ ಕರ್ಮಗಳನ್ನು ಸಮಾಪ್ತಿಗೊಳಿಸಿರಿ. ನಾನು ಕೂಡಲೇ ದುರ್ಗೆಯ ರೂಪದಿಂದ ಬಂದು ಆ ದುಷ್ಟ ರಾಕ್ಷಸರನ್ನು ದಮನ ಮಾಡುತ್ತೇನೆ " ಎಂದು ಆಜ್ಞಾಪಿಸಿದಳು ಇದು ದೇವೀ ಪುರಾಣದಲ್ಲಿ ಹೇಳಲ್ಪಟ್ಟಿದೆ.

ಜಗನ್ಮಾತೆಯು ಶರದೃತುವಿನ ಆಶ್ವೀಜ ಶುದ್ಧ ದಶಮಿಯಲ್ಲಿ ಅವತರಿಸಿ ಮಹಿಷಾಸುರ ಮುಂತಾದ ರಾಕ್ಷಸರ ವಧೆಯ ಕಾರ್ಯವನ್ನು ಆರಂಭಿಸಿ ಜಯಶೀಲಳಾಗಿ ಜಗತ್ತಿಗೆ ಸುಖವನ್ನುಂಟುಮಾಡಿದ ಕಾರಣದಿಂದಲೇ ' ವಿಜಯ ದಶಮಿ ' ಎಂಬ ಪ್ರಸಿದ್ಧವಾಯಿತು. ರೂಢಿಯಲ್ಲಿ ಜನಗಳು ಈ ಹಬ್ಬವನ್ನು ವಿಜಯ ದಶಮಿ, ನವರಾತ್ರಿ ಎಂಬ ಶಬ್ದಗಳಿಂದ ಕರೆಯುವುದು ಎಲ್ಲಾ ದೇಶಗಳಲ್ಲಿಯೂ ಸಮಾನವಾಗಿದೆ. ಆಶ್ವೀಜ ಶುಕ್ಲ ದಶಮಿಗೆ ವಿಜಯವೆಂಬ ವಿಶೇಷಣವು ಬಂದಿರುವುದಕ್ಕೆ ಚತುರ್ವರ್ಗ ಚಿಂತಾಮಣಿಯಲ್ಲಿರುವ

ಆಶ್ವಿನಸ್ಯ ಸಿತೇ ಪಕ್ಷೇ ದಶಮ್ಯಾಂ ತಾರಕೋದಯೇ । ಸಕಾಲೋ ವಿಜಯೋ ನಾಮ ಸರ್ವಕಾಮಾರ್ಥ ಸಾಧಕಃ

ಎಂಬ ಶ್ಲೋಕವು ಪ್ರಮಾಣವಾಗಿದೆ. ಆ ಶ್ರೀಜ ಮಾಸದ ಶುಕ್ಲ ಪಕ್ಷದ ದಶಮಿಯಲ್ಲಿ ನಕ್ಷತ್ರಗಳು ಹುಟ್ಟುವ ಕಾಲವು ಸಕಲ ಇಷ್ಟಾರ್ಥಗಳನ್ನೂ ನೆರವೇರಿಸುವ ವಿಜಯ ಕಾಲವೆಂದು ಸಿದ್ಧವಾಯಿತು. ಮತ್ತು ಜ್ಯೋತಿರ್ನಿಬಂಧವೆಂಬ ಗ್ರಂಥದಲ್ಲಿರುವ

ಈಷತ್ಸಂಧ್ಯಾಮತಿಕ್ರಾಂತಃ ಕಿಂಚಿ ದುದ್ಗಿನ್ನತಾರಕಃ । ವಿಜಯೋನಾಮ ಕಾಲೋಽಯಂ ಸರ್ವಕಾರ್ಯಾರ್ಥ ಸಿದ್ಧಿದಃ ॥

ಎಂಬ ಶ್ಲೋಕವೂಪ್ರಮಾಣವಾಗಿರುತ್ತದೆ. ಆದರೆ ಈ ವಿಜಯದಶಮಿಯಲ್ಲಿ ನಕ್ಷತ್ರ ವಿಶೇಷವು ಅವಶ್ಯವೆಂಬ ವಿಷಯದಲ್ಲಿ ಹೇಮಾದ್ರಿ ಮುಂತಾದ ಜ್ಯೋತಿಶ್ಶಾಸ್ತ್ರ ಗ್ರಂಥಗಳಲ್ಲಿ ಮತಭೇದವಿ ಎತ್ತದೆ. ಆಶ್ವೀಜ ಶುಕ್ಲ ದಶಮಿಗೆ ವಿಜಯದಶಮಿಯೆಂದು ಹೇಳುವಲ್ಲಿ ಮಾತ್ರ ಎಲ್ಲರೂ ಒಂದೇ ಹಾದಿಯನ್ನು ಹಿಡಿದಿರುತ್ತಾರೆ.

ನೆಟ್ಟನೊದಲು ಈ ವಿಜಯದಶಮಿಯ ಹಬ್ಬವನ್ನು ಜಾರಿಗೆ ತಂದವನು ಲೋಕಾಭಿರಾಮನಾದ ಶ್ರೀರಾಮಚಂದ್ರನು. ಈತನು ಲಂಕಾಧಿಪತಿಯಾದ ರಾವಣನ ವಿಜಯಕ್ಕಾಗಿ ಈ ಶುಭವುಹೂರ್ತದಲ್ಲಿ ಪ್ರಯಾಣ ಮಾಡಿ ಭಾರತ ಲಕ್ಷ್ಮಿಯಾದ ಸೀತಾದೇವಿಯನ್ನು ಪುನಃ ತಂದು ಭರತಭೂಮಿಯಲ್ಲಿ ನೆಲೆಗೊಳಿಸಿದನು. ಈ ಪದ್ಧತಿಯನ್ನು ಬಹುಃ ಕಾಲದಿಂದಲೂ ಕ್ಷತ್ರಿಯರು ವಿಜಯ ಯಾತ್ರೆಗಾಗಿ ಅನುಸರಿಸುತ್ತಾ ಬಂದಿರುತ್ತಾರೆ.

ಈ ಹೆಬ್ಬವನ್ನು ಬ್ರಾಹ್ಮಣಾದಿ ನಾಲ್ಕು ವರ್ಣದವರೂ ಬ್ರಹ್ಮಚಾರಿಯೇ ಮುಂತಾದ ನಾಲ್ಕು ಆಶ್ರಮಿಗಳೂ ಎಲ್ಲಾ ದೇಶಗಳಲ್ಲಿ ಸಾಮಾನ್ಯವಾಗಿ ಎಲ್ಲರೂ ಆಚರಿಸುತ್ತಾರೆ, ಈ ಹೆಬ್ಬದ ಆಚರಣೆಯು ಕಾಲಿಕಾದಿ ಪುರಾಣಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿರುತ್ತದೆ. ಪೂಜಾ, ಜಪ, ವುಂತಾದ ಕರ್ಮಗಳಿಗಾಗಿ ನವರಾತ್ರ ವೆಂಬ ಹೆಸರೇ ಎಲ್ಲೆಡೆಯಲ್ಲಿಯೂ ಉಪಯುಕ್ತವಾಗಿದೆ.

ಸಂಕಲ್ಪ ಪುರಸ್ಸರವಾಗಿ ಪಾಡ್ಯಮಿಯಲ್ಲಿ ಘಟಸ್ಥಾಪನೆಯನ್ನು ಮಾಡಿ ಆನಂತರ ವರುಣ ದೇವತೆಯನ್ನು ಪೂಜಿಸಿ ಹೊಸದಾಗಿ ಮಾಡಿಸಿದ ದುರ್ಗಾ ಪ್ರತಿಮೆಯಲ್ಲಿ ಮಹಾಮಾಯೆಯನ್ನು ಆವಾಹಿಸಿ ಪ್ರತಿದಿನದಲ್ಲಿ ಷೋಡಶೋಪಚಾರಗಳಿಂದ ನವರಾತ್ರಿಗಳವರೆಗೆ ದುರ್ಗಾ ಪೂಜೆಯನ್ನು ಮಾಡಬೇಕು. ಪೂಜೆಗಾಗಿ

ಜಯಂತೀ ಮಂಗಲಾ ಕಾಲೀ ಭದ್ರಕಾಲೀ ಕಪಾಲಿನೀ । ದುರ್ಗಾ ಕ್ಷಮಾಶಿವಾಧಾತ್ರೀ, ಸ್ವಾಹಾ ಸ್ವಧಾ ನಮೋಸ್ತುತೇ ॥ ಅಗಚ್ಛ ವರದೇ ದೇವಿ ದೈತ್ಯ-ದರ್ಪ-ನಿಷೂದಿನಿ । ಪೂಜಾಂ ಗೃಹಾಣ ಸುಮುಖೀ ನಮಸ್ತೇ ಶಂಕರ ಪ್ರಿಯೇ ॥

ಎಂಬ ಮಂತ್ರವನ್ನು ಉತ್ತರಖಂಡದಲ್ಲಿ ವಿಶೇಷವಾಗಿ ಉಪಯೋಗಿಸುತ್ತಾರೆ. ಮತ್ತು ಕಾಲಿಕಾ ಪುರಾಣದಲ್ಲಿ " ಓಂ ದುರ್ಗೇ ರಕ್ಷಿಣೀ ಸ್ವಾಹೇತಿ ಸರ್ವಮಂಗಲ ಮಾಂಗಲ್ಯ ಇತ್ಯಾದಿಭಿಃ ಸಂಪ್ರಾರ್ಥ್ಯ ಬಲಿದಾನಪಕ್ಷೇಮಾಷ ಭಕ್ಷೇನಕೂಷ್ಮಾಂ ಡೇನವಾ ಬಲಿದಾನಂ " ಎಂದು ಬಲಿದಾನದ ವಿಷಯವು ಸ್ಪಷ್ಟವಾಗಿರುತ್ತದೆ. ದುರ್ಗಾದೇವಿಯ ಬಲಿಗಾಗಿ ಉದ್ದಿನಿಂದ ಮಾಡಿದ ನೈವೇದ್ಯವನ್ನು ಆಧವಾ ಕುಂಬಳಕಾಯಿಯನ್ನು ಉಪಯೋಗಿಸಬೇಕೆಂದು ಹೇಳಿರುವುದರಿಂದ ಬಲಿಗಾಗಿ ನಿರಪರಾಧಿಗಳಾದ ಮೇಕೆ, ಕುರಿ, ಕೋಳಿ. ಕೋಣ-ಮುಂತಾದ ಮೂಕ ಪ್ರಾಣಿಗಳನ್ನು ಅರ್ಪಿಸಬೇಕೆಂದು ಸಿದ್ಧವಾಗುವುದಿಲ್ಲ. ಜಗಜನನಿಯು ತನ್ನ ಮಕ್ಕಳಲ್ಲಿ ಬಲಿಯನ್ನು ಬೇಡುವಳೆ ? ಪ್ರಾಣಿಗಳ ಬಲಿಯನ್ನು ಕೊಡದಿದ್ದರೆ ದೇವಿಯು ಕುಪಿತಳಾಗುವಳೆಂಬ ದೆದರಿಕೆಯನ್ನು ತಂದುಹಾಕಿದವರು ಘೋರ್ತರಾದ ಮಾಂಸಾಹಾರಿಗಳಲ್ಲದೆ ಯಾವ ಧರ್ಮಗ್ರಂಥದಲ್ಲಿಯೂ , ದೇವಿಯ ಬಲಿಗಾಗಿ ಪ್ರಾಣಿವಧೆಯನ್ನು ಹೇಳಲ್ಲ. ಪಾಪ ! ದೇವರ ನೆವದಿಂದ ನಿರಪರಾಧಿಗಳಾದ ಮೂಕ ಪ್ರಾಣಿಗಳನ್ನು ವಧೆ ಮಾಡತಕ್ಕವರನ್ನು ನರಪಿಶಾಚಿಗಳೆಂದು ಕರೆಯಲು ಯಾವ ಸಂಶಯವೂ ಇಲ್ಲ. ಯಾವಾಗಲೂ ಯಾವ ದೇವತೆಯೇಆಗಲಿ ತನ್ನ ಪ್ರೀತಿಯ ಮಕ್ಕಳನ್ನು ಬಲಿಗಾಗಿ ಬೇಡುವುದಿಲ್ಲವೆಂಬ ಅಂಶವನ್ನು ಎಲ್ಲರೂ ನೆನಪಿನಲ್ಲಿಡಬೇಕು ಇಲ್ಲವಾದರೆ ದೇವರ ಕೋಪಶಾಂತಿಗೆ ಬದಲಾಗಿ ದೇವರ ಕೋಪಕ್ಕೆ ಪಾತ್ರರಾಗಿ ಘೋರ ನರಕವನ್ನು ಅನುಭವಿಸಬೇಕಾಗುತ್ತದೆಂಬುದು ಸಾಕ್ಷಾತ್ ಜಗನ್ಮಾತೆಯ ಉಕ್ತಿಯಾಗಿರುತ್ತದೆ.

ಬ್ರಾಹ್ಮಣರು ಯಾವಾಗಲೂ ಕುಂಬಳಕಾಯಿಯನ್ನೇ ಬಲಿಗಾಗಿ ಉಪಯೋಗಿಸಬೇಕು. ಇತರರ ಕಬ್ಬು, ಕುಂಬಳಕಾಯಿ, ಉದ್ದಿನ ಪದಾರ್ಥ, ಶ್ರೀಫಲ (ಬಿಲ್ವದ ಹಣ್ಣು), ಇವುಗಳನ್ನು ಉಪಯೋಗಿಸಬೇಕು. ಮಹಾಶಕ್ತಿಯ ಪ್ರೀತಿ ಸಂಪಾದನೆಗಾಗಿ ನವರಾತ್ರಿಗಳವರೆಗೆ ಅಖಂಡ ದೀಪವನ್ನು ದೇವಿಯ ಸಮಾಪದಲ್ಲಿ ಉರಿಸುತ್ತಿರಬೇಕು. ಬಹಳ ಪರಿಶುದ್ಧವಾಗಿ ದುರ್ಗಾದೇವಿಯ ಪೂಜೆಯನ್ನು ಮಾಡುತ್ತ ನಿತ್ಯದಲ್ಲಿ ದುರ್ಗಾ ಸಪ್ತಶತಿಯ ಪಾಠವನ್ನು ನಿಯಮಪೂರ್ವಕವಾಗಿ ಮಾಡಬೇಕು. ಇದರಂತೆ ೯ ದಿನಗಳು ಮಾಡಿ ಹತ್ತನೆಯ ದಿನ ಸೂರ್ಯಾಸ್ತಮಯದಲ್ಲಿ ' ಅಪರಾಜಿತಾ ' ದೇವಿಯ ಪೂಜೆಯನ್ನು ಮಾಡಬೇಕು. ಅನಂತರ ಶಮಾಪೂಜೆ, ಸೀಮೋಲ್ಲಂಘನ (ಊರಿನ ಎಲ್ಲೆಯ ಹೊರಗೆ ಹೋಗಿಬರುವುದು) ಮುಂತಾದಕಾರ್ಯಗಳನ್ನು ಮಾಡಬೇಕು.

ದಶಮಿಯ ಸಾಯಂಕಾಲ ನಕ್ಷತ್ರಗಳು ಉದಯವಾಗುವ ಸಮಯದಲ್ಲಿ ಊರ ಹೊರಗೆ ಈಶಾನ್ಯ ದಿಕ್ಕಿನಲ್ಲಿ ಒಂದು ಶುದ್ಧವಾದ ಸ್ಥಳೇಶವನ್ನು ಗೋಮಯದಿಂದ ಪರಿಶುದ್ಧಮಾಡಿ ಚಂದನಾದಿಗಳಿಂದ ಅಷ್ಟದಳ ಕಮಲವನ್ನು ಬರೆದು ' ಮಮ ಕುಟುಂಬಸ್ಯ ಕ್ಷೇಮಸಿದ್ಧ್ಯರ್ಥಂ ಅಪರಾಜಿತಾ ಪೂಜನಂ ಕರಿಷ್ಯೇ ' ಎಂದು ಸಂಕಲ್ಪಿಸಿ ' ಅಪರಾಜಿತಾಯೈನಮಃ ' ಎಂಬ ಮಂತ್ರದಿಂದ ಆ ಕಮಲದ ಮಧ್ಯದಲ್ಲಿ ದೇವಿಯನ್ನು ಆವಾಹಿಸಿ ದಕ್ಷಿಣ ಬಲಭಾಗದಲ್ಲಿ ' ಕ್ರಿಯಾಶಕ್ತ್ಯೈನಮಃ ' ಎಂಬ ಮಂತ್ರದಿಂದಜಯಾದೇವಿಯನ್ನೂ, ಎಡಭಾಗದಲ್ಲಿ ' ಉಮಾಯೈನಮಃ ಎಂಬ ಮಂತ್ರದಿಂದ ವಿಜಯಾ ದೇವಿಯನ್ನು ಆಹ್ವಾನಿಸಿ ' ಜಯಾಯೈನಮಃ ' ವಿಜಯಾಯೈನಮಃ ' ಎಂಬ ಮಂತ್ರಗಳಿಂದ ಪೂಜಿಸಿ ದೇವಿಯನ್ನು ಪ್ರಾರ್ಥಿಸಬೇಕು. ಕ್ಷತ್ರಿಯರು 'ಮಮ ಯಾತ್ರಾಯಂ ವಿಜಯಾ ಸಿದ್ಧ್ಯರ್ಥಂ ' ಎಂದು ಸಂಕಲ್ಪಿಸಬೇಕು.

ವಾರದ ಕತೆ

ಭಯಂಕರ ಸೇಡು

ರಾಯರಕಾಲದ ಕತೆ

(ಬರೆದವರು:—ಶ್ರೀ ಎ ಆರ್. ದೊಡ್ಡಜೆಲೆ)

"ಪ್ರಮೀಳಾ"

ಉತ್ತರವಿಲ್ಲ.

" ಪ್ರಮಿಳಾ! ಪ್ರಮಿಳಾ"

" ಏನು ? "

" ಅಷ್ಟು ಕೋಪವೇ ನನಗೆ "

" ಏನು ಕೂಗಿದ್ದು ಮೊದಲು ತಿಳಿಸಿ"

" ಕ್ಷಮಿಸಿಸಿಕೊಳ್ಳಬೇಡ "

" ಹಾಗಾದರೆ ನಾನು ಮಾಡಿದಂಥಾ ಅಪರಾಧವೇನಾದರೂ ಏನು ? "

" ನೀವು ಮಾಡಿರುವ ಅಪರಾಧವು ಅಷ್ಟಿಷ್ಟಲ್ಲ. ಬಿಡಿಸಿ ಹೇಳುವುದಾದರೆ ನೀವು ಆ ವಿದ್ಯಾರಣ್ಯರಿಗೆ ಮಾಡಿದ ಅಪರಾಧವು ಅಷ್ಟಿಷ್ಟಲ್ಲ"

"ಪ್ರಮಿಳಾ, ಇದು ನಿನ್ನನ್ನು ಸನ್ಮಾನಿಸುವ ಕಾರ್ಯಕ್ರಮ ನನಗೆ ತನ್ನ ಪ್ರಿಯೆ ತಾನೇ ವಿಚಾರವೆಲ್ಲಾ ತಿಳಿಯುವುದು. ಆ ಹಿಂದೆ ಇದ್ದ ವಿದ್ಯಾರಣ್ಯರಿಗೂ ಈವಿದ್ಯಾರಣ್ಯರಿಗೂ ವಿಶೇಷ ವ್ಯತ್ಯಾಸವಿರುವುದು"

"ಏನೂ ಇಲ್ಲ; ಆ ವಿದ್ಯಾರಣ್ಯರೇ ಇವರೆಂದು ನಾನು ತಿಳಿದಿರುವೆನು" " ಹಾಗೂ ಸ್ತ್ರೀಯರು ಮೂರ್ಖರು" "ಗಂಡಸರು ವಿಚಾರ ವಿಹೀನರು "

(ಮನಸ್ಸಿನಲ್ಲಿ) ಇದೀಗ ಸಮಯವಲ್ಲ !! ಎಂದುಹೇಳಿ ಕೃಷ್ಣರಾಯನು ಅಂತಃಪುರದಿಂದ ಹೊರಟು ಹೋದನು.

ಈ ಮೇಲ್ಕಂಡ ವಾದವು ಕೃಷ್ಣರಾಯನಿಗೂ ಆತನ ನಿಜಕುಟುಂಬಿಯಾದ ಪ್ರಮಿಳಾದೇವಿಗೂ ನಡೆದ ಸಂಭಾಷಣೆಯಾಗಿತ್ತು.

ಮೇಲೆ ನಡೆದ ಸಂಭಾಷಣೆ ನಡೆದು ಇಂದಿಗೆ ಮೂರು ದಿನಗಳಾಗಿತ್ತು. ಇಂದು ವಿಜಯನಗರದಲ್ಲಿ ವಿಜಯದಶಮಿಯ ಮಹೋತ್ಸವ ರಾಜನ ಅರಮನೆಯಲ್ಲಂತೂ ವಿಶೇಷವೈಭವ. ಎಲ್ಲಲ್ಲಿಯೂ ದಾಸ ದಾಸಿಯರಷಡಗರ,ವಂದಿಮಾಗಧರು ರಾಜನ ಬಿರುದುಗಳನ್ನು ಹೊಗಳುತ್ತಿರುವರು. ಇಷ್ಟಾದರೂ ರಾಣಿಯು ಚಿಂತಾಕ್ರಾಂತಳಾಗಿಅಂತಃಪುರದ ಒಂದುಕೋಣೆಯಲ್ಲಿ ಕೂತಿದ್ದಾಳೆ. ದಾಸಿಯೊಬ್ಬಳು ಬಂದು "ತಾಯೇ ಇಂದು ವಿಜಯದಶಮಿ" ಸಾಯಂಕಾಲ ನಾಲ್ಕು ಘಂಟೆಯಾಗುತ್ತಾ ಬಂತು. ರಾಣಿಯವರು ಅಲಂಕಾರಯುತರಾಗಿ ಆಸ್ಥಾನದಲ್ಲಿ ರಾಜನೊಡನೆ ಮಂಡಿತರಾಗಿ ವಿಜಯದಶಮಿಯ ಶಮೀ ಪತ್ರವನ್ನು ಸ್ವೀಕರಿಸಬೇಕು. ಇಂಥಾದ್ದರಲ್ಲಿಚಿಂತಾಕ್ರಾಂತಳಾಗಿಹೀಗೆಕೂತುಕೊಂಡರೆ ಹೇಗೆತಾನೇ ಸಾಧ್ಯ; ಎಂದು ಉಸುರಿದಳು. ಪ್ರಮಿಳೆಯು ಈಗಯಾವುದಕ್ಕೂ ಸಮಯವಲ್ಲ ನನ್ನ ಮನಸ್ಸು ಸಮಾಧಾನವಾಗಿಲ್ಲ. ಶಮೀವತ್ಸೆಯನ್ನು ರಾಜನೊಬ್ಬನೇ ಸ್ವೀಕರಿಸಲಿ!! ಎಂದು ಕೋರವಾಕ್ಯಗಳಿಂದ ಉತ್ತರ ಕೊಟ್ಟಳು.

ಅಷ್ಟುಹೊತ್ತಿಗೆ ಹೊರಗಡೆಯಲ್ಲಿ ಏನೋ ಶಬ್ದವಾಪಂತಾಯಿತು. ರಾಣಿಯು ಸ್ವಾಮಿಗಳು ಒಂದರಿಂದು ತಿಳಿದು ದಾಸಿಯರನ್ನು ತಮ್ಮ ತಮ್ಮ ಕಾರ್ಯಗಳಲ್ಲಿ ನೆರವಾಗುವಂತೆ ಹೇಳಿ ತಾನು ಪಾದಪೂಜೆಗೆ ಸಿದ್ಧಳಾಗಿ ನಿಂತಳು.

ಜಟ್ಟಿಧಾರಿ, ಕೈಯಲ್ಲಿ ಅಭಯದಂಡ ಕಮಂಡಲು, ಮರದ ಪಾದರಕ್ಷೆ, ಕಾವೀಬಟ್ಟೆಯನ್ನು ಧರಿಸಿದ ಒಬ್ಬ ಸನ್ಯಾಸಿಯು ಒಳಗೆ ಬಂದನು. ಇದ್ದಕದ್ದಾ ಹಾಗೆಯೇ ಪ್ರಮಿಳೆಗೆ ನಗುಮುಖದಿಂದ ಮುಖವುಕೆಂಪಾಯಿತು. ಕೂಡಲೇ ಸ್ವಾಮಿಗಳ ಪಾದ ಪ್ರಕ್ಷಾಳನೆಯನ್ನು ಮಾಡಿ ಫಲಹಾರದ ಸಾಮಗ್ರಿಯನ್ನು ಸಿದ್ಧಪಡಿಸಿ "ಸ್ವಾಮಿಜೀ ತಾವು ಇಂದು ನನಗೆ ದರ್ಶನವನ್ನು ಕೊಟ್ಟದ್ದರಿಂದ ಕೃತಾರ್ಥಳಾದೆ ಇಂದು ವಿಜಯದಶಮಿ. ನನಗೆ ಶಮೀ ಪತ್ರವನ್ನು ದಯವಾಲಿಸಿ ನನಗೆ ಮುಕ್ತಿಸಾಧಕವಾದ ಪುರಾಣ ಶ್ರವಣಾದಿ ಹರಿಕಥಾ ಕಾಲಕ್ಷೇಪದಲ್ಲಿ ತಲ್ಲೀನಳಾಗಿ ಭಗವದನುಗ್ರಹದಿಂದ ಪುನೀತಳಾಗಿವಮಾಡಿರೆಂದು ಬೇಡುತ್ತೇನೆ"

" ತಥಾಸ್ತು "

ಸ್ವಾಮಿಯವರು ತಾವು ಭಗವನ್ನಾಮ ಕೀರ್ತನೆಯನ್ನು ಮಾಡುತ್ತಾ ಅದರ ಅರ್ಥವನ್ನು ಬಿಡಿಸಿಹೇಳುವ ಕಾಲದಲ್ಲಿ ಅಲ್ಲಿದ್ದ ದಾಸಿಯರ ಮುಖಗಳನ್ನೂ ಪ್ರಮಿಳೆ ಮುಖವನ್ನು ಆಪಕ್ಷಿಸಪದೇ ನೋಡುತ್ತಿದ್ದನು. ಅವನು ಆಡುತ್ತಿದ್ದ ಪ್ರತಿಯೊಂದು ಮಾತಿಗೂ ದ್ವಂದ್ವಾರ್ಥವಿತ್ತು.

ಆದರೆ ಈ ದ್ವಂದ್ವಾರ್ಥವು ಅವರಿಗೆ ಹೇಗೆತಾನೇ ಗೊತ್ತಾಗುತ್ತಿತ್ತು? ಪತಿವ್ರತೆತೆಯರಿಗೆ ಪತಿಭಕ್ತಿಯೊಂದು ವಿನಾ ಮತಾವುದು ತಿಳಿದೀತು ?

ಎಲ್ಲರೂ ಆನಂದದಲ್ಲಿ ನಿಮಗ್ನರಾಣಿಯನ್ನು ಕುರಿತು "ಪ್ರಮಿಳಾ, ನಾನು ಬಲು ನಿಶ್ಚಿಂತನಾಗಿದ್ದೇನೆ. ಹರಿಹರರಾಯ ಬುಕ್ಕರಾಯರ ಕಾಲಕ್ಕೆ ನನಗೆ ೬೫ ವರ್ಷಗಳಾಗಿದ್ದವು. ಇಂದಿಗೆ ನನಗೆ ೧೫೬ ನೇ ವರ್ಷ ನಡೆಯುತ್ತಿದೆ. ನನಗೆ ನಡೆಯಲು ತ್ರಾಣವಿಲ್ಲ ಆದ್ದರಿಂದ ನೀನು..... (ಸುತ್ತಲೂ ನೋಡಿ) ನೀನು ನನ್ನ ಮನೆಗೇ ಬಂದರೆ ಒಳ್ಳೆಯದು. ಆರೀತಿ ಮಾಡಿದರೆ ನಿನಗೂ ನನಗೂ ಕ್ಷೇಮ' ಎಂದನು

"ಪ್ರಮಿಳೆಯು ತಮ್ಮ ಇಷ್ಟದಂತೆ ನಡೆಯಲು ಸಿದ್ಧಳಿರುವಳು'ಎಂದು ಉತ್ತರ ಬಂತು. ಸ್ವಾಮಿಯು ಸಂತೋಷ ಮನಸ್ಕನಾಗಿ ಎನ್ನುತ್ತಾ ಹೊರಟು ಹೋದನು.

ಇದೇರೀತಿ ಸ್ವಲ್ಪ ದಿವಸಗಳು ನಡೆಯಿತು ಸ್ವಾಮಿಯವರು ತಮ್ಮ ಗುಟ್ಟನ್ನು ಯಾರಿಗೂ ಬಿಟ್ಟುಕೊಟ್ಟಿರಲಿಲ್ಲ. ತಮ್ಮ ಆಪ್ತಕಾರ್ಯದರ್ಶಿಯಾದ ಸುಂದರ ಶಾಸ್ತ್ರಿಯಿನಹ ಮತ್ತೆ ಯಾರಿಗೂ ಈ ಗುಟ್ಟು ತಿಳಿದಿರಲಿಲ್ಲ

ಆ ವಿದ್ಯಾರಣ್ಯನು ವತ್ಯಾರೂ ಆಗಿರದೆ ಕರ್ನಾಲ್ ರಾವ್ಬರಾಯನಾಗಿದ್ದನು ರಾಮರಾಯನೂ ರಾಣಿಯಾದ ಪ್ರಮಿಳೆಯನ್ನು ಅತ್ಯಂತವಾಗಿ ಪ್ರೀತಿಸಿದ್ದನು. ತನ್ನ ನಿಜಸ್ವರೂಪದಲ್ಲಿ ಹೋಗಿ ಅವಳಲ್ಲಿ ಪ್ರಣಯ ಭಿಕ್ಷೆಯನ್ನು ಕೇಳಿದಾಗ ಅನೇಕಸಲ ವಿಫಣ್ಣನಾಗಿದ್ದನು. ಆದ್ದರಿಂದ ಮತ್ತೆ ಯಾವ ಉಪಾಯದಲ್ಲಿಯಾದರೂ ಅವಳ ದೇಹ ಸ್ಪರ್ಶವನ್ನು ಹೊಂದಬೇಕೆಂಬ ಆಶೆಯನ್ನು ತೀರಿಸಿಕೊಳ್ಳಲು ಈ ವೇಷವನ್ನು ತಾಳುತ್ತಿದ್ದನು. ಇದು ಕೃಷ್ಣರಾಯನಿಗೆ ತಿಳಿಯದೆ ಇರಲಿಲ್ಲ. ಆದರೆ ಸೇನಾಪತಿಯ ಮೇಲೆ ಏಕಾ ಏಕಿ ಸೇಡು ತೀರಿಸಿಕೊಳ್ಳಲು ತಾನು ಇಷ್ಟಪಡಲಿಲ್ಲ. ಕಾರಣವಿಷ್ಟೆ ತಾನು ತನ್ನ ಜಸತಿಗೆ ತಿಳಿಯದಂತೆ ಮಂತಿಯ ಮಗನಾದ ರಾಜಮಣಿಯನ್ನು ಪ್ರೀತಿಸುತ್ತಿದ್ದನು. ಇದಕ್ಕೆ ರಾಜಮಣಿಯು ಒಪ್ಪಿದಳು ಮಂತ್ರಿಯು ಕುಡುಕನೂ ಜೂಜು ಕೋರನೂ ಆಗಿದ್ದರಿಂದ ಆತ ಸದ್ಯದಲ್ಲೆ ಹೆಸರಿಗೆ ಮಾತ್ರ ಕರ್ನಲ್ ರಾಪರಾಯನು ಮಂತ್ರಿಯಂತೆಯೇ ವರ್ತಿಸುತ್ತಿದ್ದನು. ಆದರೆ ಕೃಷ್ಣರಾಯನು ತನ್ನ ಶಕ್ತಿತ್ವನ್ನು ತೀರಿಸಿಕೊಳ್ಳಲು ಬಹು ಪ್ರಯತ್ನಪಟ್ಟನು. ಆದರೆ ಸಾಧ್ಯವಾಗಿಲಿಲ್ಲ.

ಹೀಗೆ ಕೆಲವು ದಿನಗಳು ನಡೆಯಿತು

ಒಂದು ದಿನ ಕಾಲಕ್ರಮದಂತೆ ವಿದ್ಯಾರಣ್ಯರ ಮನೆಗೆ ರಾಣಿ ಪ್ರಮಿಳಾದೇವಿಯು ಬಂದಳು ದಾಸಿಯರನ್ನು ಕಾರಣಾಂತರದಿಂದ 'ನೀವು ಹೊರಗಿರಿ' ಎಂದು ಆಜ್ಞಾಪಿಸಿ ರಾಣಿಯು ಸ್ವಾಮಿಯ ಗೃಹವನ್ನು ಪ್ರವೇಶಿಸಿದಳು. ಸ್ವಾಮಿಯವರು ಪೀಠದಲ್ಲಿ ಮಂಡಿತರಾಗಿದ್ದುದನ್ನು ಕಂಡು ಪ್ರಮಿಳೆಯು ಭಯಭಕ್ತಿಯಿಂದ ನಮಸ್ಕರಿಸಿದಳು. ಇಂದು ಯಾವುದೋ ಅಪಸಂಬಿಕೆಯ ಪಂಪ್ಪೇಶ್ವರನೇ ಪ್ರಮಿಳೆಯು ದಾಸಿಯರನ್ನು ಜೊರಕ್ಕೆ ಕಳುಹಿಸಿದುದು.

"ಕಲ್ಯಾಣಮಸ್ತು"ಎಂದು ಹೇಳುತ್ತಾ ವಿದ್ಯಾರಣ್ಯ ಸ್ವಾಮಿಗಳು ಆ ತುರದಲ್ಲಿ ಅಲಂಕಾರಮಾಡಿಕೊಂಡಿದ್ದ ಗಡ್ಡಮಾಸೆಯ ದೃಷ್ಟಿಸಿ ನೋಡುತ್ತಿದ್ದಳು. ಯಾರೂ ಇಲ್ಲವೆಂದು ತಿಳಿದು ಅತ್ತ ಇತ್ತ ನೋಡುತ್ತಿದ್ದ ಸೇನಾಪತಿಗೆ ಇವಳು ತನ್ನನ್ನೇ ದೃಷ್ಟಿಸಿ ನೋಡುತ್ತಿದ್ದಾಳೆಂಬ ವಿವೇಚನೆಯೇ ಹುಟ್ಟಲಿಲ್ಲ. ಇದಕ್ಕೆದ್ದಂತೆ ಅವನ ಗಡ್ಡವು ಜಾರಿ ಬಿತ್ತು. ಇದನ್ನು ನೋಡತ್ತಲೇ ತಟ್ಟನೆ ಪ್ರಮಿಳೆಯ ಹಿಂದಕ್ಕೆ ಸರಿದಳು. ದಿಗ್ಭ್ರಾಂತನಾದ ಸೇನಾಪತಿ ರಾಮರಾಯನು ಎದ್ದು ಬಾಗಿಲನ್ನು ಭದ್ರಪಡಿಸಲು ಬಂದನು. ಸಮಯಸ್ಫೂರ್ತಿಯಾಗಿ ಪ್ರಮಿಳೆಯು ಕೂಗಲು ಅನುವಾದಳು. ಆದರೆ 'ಧೈರ್ಯಂ ಸರ್ವತ್ರ ಸಾಧನಂ' ಎಂಬಂತೆ ಅಲ್ಲಿಂದ ತಪ್ಪಿಸಿಕೊಳ್ಳದಂತೆ ಅಲ್ಲಿಯೇ ನಿಂತು ಅವನನ್ನು ಬಲವಾಗಿ ಹಿಡಿದು ಅವನ ವೇಷ ಭೂಷಣವನ್ನೆಲ್ಲಾ ತಗೆದಳು ಅವನು ಸೇನಾಪತಿ ರಾಮರಾಯನಾಗಿ ಕಂಡುಬಂತು. ಕೂಡಲೇ ಕಡುಕೋಪದಿಂದ 'ಆಧಮಾ, ನಿನ್ನನ್ನು ಸೇನಾಪತಿ ಪಟ್ಟದಿಂದ ಮಂತ್ರಿಪದವಿಗೆ ಏರಿಸಿದುದರ ಪ್ರತಿಫಲವೋ ಇದು. ಪೂಜ್ಯರಾದ ವಿದ್ಯಾರಣ್ಯರೆಂದು ನಿನ್ನನ್ನು ನಾನು ನಂಬಿ ಭಕ್ತಿಯಿಂದ ಪೂಜಿಸಿದುದಕ್ಕೆ ಇದ್ದವರವೆಂದು ಭಾವಿಸಿದೆಯಾ. ಮೂಢಾ ! ಇಂದಿಗೆ ನಿನ್ನ ಬಾಳು ನನಗೆ ತಿಳಿಯಿತ್ತು ನಿನ್ನಲ್ಲಿ ಶಕ್ತಿಯಿದ್ದ ಪಕ್ಷದಲ್ಲಿ ನನ್ನನು ಜಯಿಸು' ಎಂದು ಕತ್ತಿಯನ್ನು ಹಿರಿದಳು. ಇಷ್ಟಾದರೂ ಸೇನಾಪತಿಯು ನಗುತ್ತಲೇ ಇದ್ದನು.

"ಪ್ರಮಿಳಾ, ಇಂದು ನೀನು ನನ್ನವಳಾಗು ಸಖಿಸುವೆ" ಎಂದು ಒಲವಂತ ಮಾಡಿದನು. ಆದರೂ ಆವನ ಮಾತುಗಳೇನೂ ಪ್ರಯೋಜನವಾಗಲಿಲ್ಲ. ಕೆರಳಿದ ಸಿಂಹಿಣಿಯಂತೆ ಪ್ರಮಿಳೆಯು ಕತ್ತಿಯನ್ನು ಅವನೆದೆಗೆ ಚುಚ್ಚಲು ಉದ್ಯುಕ್ತಳಾದಳು. ಆದರೆ ಅಷ್ಟರಲ್ಲಿ ಸೇನಾಪತಿ ರಾಮರಾಯ ಅವಳ ಕೈಯಿಂದ ಕತ್ತಿಯನ್ನು ಬಲಾತ್ಕಾರದಲ್ಲಿ ಕಿತ್ತುಕೊಂಡು "ಪ್ರಮಿಳಾ, ಇದು ಕೊನೆಯ ಮಾತು; ನೀನು ನನ್ನವಳಾಗುವೆಯಾ ಅಥವಾ ನಿನ್ನ ಪ್ರಾಣದ ಆಶೆಯನ್ನು ಬಿಡುವೆಯಾ ?"

'ರಾಮರಾಯರೇ, ನೀವು ನನ್ನ ಪ್ರಾಣವನ್ನಾದರೂ ತೆಗೆಯರಿ. ನಿಮ್ಮವಳು ಖಂಡಿತಾ ಆಗಲಾರೆ' ಅಷ್ಟು ಮಾತು ಆಡುವುದರೊಳಗಾಗಿ ಪ್ರಮಿಳೆಯ ಹೃದಯದಲ್ಲಿ ಕತ್ತಿಯು ನಾಟಿತ್ತು. ಅಷ್ಟರಲ್ಲಿ ಕೃಷ್ಣದೇವರಾಯರಿಗೆ ಈ ವಿಷಯ ತಿಳಿಯಿತು. ಕೃಷ್ಣದೇವರಾಯನು ತಾನೇ ಏನುಮಾಡಬಲ್ಲನು? ಆದರೂ ಸಹಾ ತನ್ನ ಮಾನವನ್ನು ಕಾಪಾಡಿಕೊಳ್ಳಲು ಆಯುಧಪಾಣಿಯಾಗಿ ರಭಸದಿಂದ ರಾಮರಾಯನನೇಲೆ ನುಗ್ಗಿದನು. ಆ ರಭಸಕ್ಕೇನೇ ರಾಮರಾಯನು ಕೆಳಗುರುಳಿದನು. ಕೃಷ್ಣದೇವರಾಯನು ತನ್ನ ಕತ್ತಿಯನ್ನು ರಾಮರಾಯನ ಎದೆಯಲ್ಲಿ ನಾಟಿ "ಕಪಟ ವಿದ್ಯಾರಣ್ಯಾ, ಇದೇ ರೀತಿ ಎಷ್ಟು ಸಂಸಾರಿಗಳಿಗೆ ವರಪ್ರದಾನ ಮಾಡಿರುವೆ? ನೀಚಾ, ಅಧಮಾ ಇಂದಿಗೆ ನಿನ್ನ ಆಶಾ ವೃಕ್ಷವು ಫಲಿಸಿತು. ಇಂದು ನಾನು ನಿಷ್ಕಂಟಕನಾದೆ' ಎಂದು ಉಸುರಿದನು.

ರಾಮರಾಯನು ಏನೋ ಮಾತನ್ನು ಆಡಬೇಕೆಂದಿದ್ದನು. ಅಷ್ಟರಲ್ಲಿ ಅವನ ಪ್ರಾಣವಾಯುವು ಹಾರಿಹೋಗಿತ್ತು.

ಂ ಂ ಂ

ಇಂದು ಕೃಷ್ಣದೇವರಾಯನ ಮನೆಯೊಳಗೆ ದೊಡ್ಡ ಔತಣವನ್ನೇರ್ಪಟ್ಟಿದೆ ಎಂದು ತನ್ನ ಯಜಮಾನನನ್ನು ಕೊಂದ ಕೃಷ್ಣದೇವರಾಯನಮೇಲೆ ಸೇಡು ತೀರಿಸಿಕೊಳ್ಳಲು ಸುಂದರಶಾಸ್ತ್ರಿಯು ಅಡುಗೆ ಮನೆಯೊಳಗೆ ಪ್ರವೇಶಿಸಿದನು. ಅಡುಗೆಯವನಿಗೆ ಒಂದು ಗಂಟುವರಹಗಳು ಬಿದ್ದುದಲ್ಲದೆ ಆದರ ಜೊತೆಯಲ್ಲಿ ಒಂದು ಸೀನೆಯೂ ಸಹ ಇತ್ತು.

ವಿಜಯನಗರ ಸಾಮ್ರಾಜ್ಯ

ಮತ್ತು

ಮೈಸೂರು ದೇಶ

ಲೇಖಕರು:—ಕೀರ್ತನಕೇಸರಿ, ಕವಿರತ್ನ ವೇಗಿ ಡಿ. ಶಿವಮೂರ್ತಿಶಾಸ್ತ್ರಿಗಳು
ಹುಲುಕುಂಟಿ, ತುಮಕೂರು.

ಕರ್ನಾಟಕದಲ್ಲಿ ಗಂಗ, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಯಾದವ, ವಿಜಯನಗರ ಎಂಬ ವಿಖ್ಯಾತವಾದ ಹಲವು ಸಾಮ್ರಾಜ್ಯಗಳು ಆಗಿ ಹೋಗಿವೆ ಇವುಗಳಲ್ಲಿ ವಿಜಯನಗರ ಸಾಮ್ರಾಜ್ಯವು ಹಲವು ಕಾರಣಗಳಿಂದ ಮಹತ್ವವನ್ನು ಪಡೆದಿದೆ. ಗಂಗರ ಆನೆ. ಕದಂಬರ ಸಿಂಹ, ಚಾಲುಕ್ಯರ ವರಾಹ, ರಾಷ್ಟ್ರಕೂಟರ ಗರುಡ, ಹೊಯ್ಸಳರ ಹುಲಿ, ಯಾದವರ ಪಕ್ಷಿರಾಜ, ಕಲಚುರ್ಯರ ವೃಷಭ ಲಾಂಛನಗಳಿಗಿಂತಲೂ ವಿದ್ಯಾನಗರದ ಸೂಕರ ಲಾಂಛನವು ಕನ್ನಡ ನಾಡಿನ ಹಿರಿಮೆಯನ್ನು ನಾನಾ ವಿಧದಲ್ಲಿ ಬೆಳಗಿಸಿದೆ. ಕನ್ನಡಿಗರು ಹಿಂದಿನ ವಿಖ್ಯಾತ ಸಾಮ್ರಾಜ್ಯಗಳನ್ನೆಲ್ಲಾ ಒಂದುವೇಳೆ ಮರೆತರೂ ಇತಿಹಾಸಕಾರರಿಂದ "ಎಂದೂ ಮರೆಯದ ಸಾಮ್ರಾಜ್ಯ" ವೆಂದು ಹೆಸರಾಗಿರುವ ವಿಜಯನಗರವನ್ನು ಮಾತ್ರ ಅಡಿಗಡಿಗೆ ಸ್ಮರಿಸಿಕೊಳ್ಳುತ್ತಲೇ ಇದ್ದಾರೆ. ವಿಜಯನಗರವು ಕನ್ನಡಿಗರ ಕಟ್ಟಕಡೆಯ ಸಾಮ್ರಾಜ್ಯ. ಹಿರಿಯ ಚೆಲುವಿನ ಸಾಮ್ರಾಜ್ಯ. ವಿಜಯನಗರವು ಹಿಂದಿನ ಸಾಮ್ರಾಜ್ಯಗಳಂತೆ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ, ಇತಿಹಾಸ ಲಲಿತಕಲೆಗಳಿಗೆ ಆಪಾರವಾಗಿ ಉತ್ತೇಜನ ಕೊಟ್ಟರುವುದಲ್ಲದೆ, ಹಿಂದೂ ಧರ್ಮ, ಸಮಾಜ, ಸಂಸ್ಕೃತಿಗಳ ಉನ್ನತಿಗಾಗಿ, ಉಳಿವಿಗಾಗಿ ವಿಪುಲವಾಗಿ ಪ್ರಯತ್ನಿಸಿದೆ. ಇದಕ್ಕಾಗಿಯೇ ಎರಡೂವರೆ ರತನಾನಗಳ ಕಾಲ ಯವನ ಯಮದಂತರ ಕೂಡೆ ಹೆಣಗಾಡಿದ ಕಡೆಗೂ ಈ ಪ್ರಯತ್ನದಲ್ಲಿಯೇ ವಿನಾಶವಾಗಿ ಕಾಲಗರ್ಭದಲ್ಲಿ ಅಡಗಿ ತೇಜೋಮಯವಾದ ತನ್ನ ಚರಿತ್ರೆಯಿಂದ ಜಗತ್ತನ್ನು ತಲೆದೂಗಿಸಿದೆ.

ಗಂಗರ ತಲಕಾಡು, ಕದಂಬರ ಬನವಾಸಿ ಹಾಯ್ಸಳರ ದ್ವಾರಸಮುದ್ರ, ಯಾದವರ ದೇವಗಿರಿ, ಚಾಳುಕ್ಯರ ಬಾದಾಮಿ, ಕಳಚುರ್ಯರ ಕಲ್ಯಾಣಿ, ರಾಷ್ಟ್ರಕೂಟರ ಮಾನ್ಯಖೇಟ ರಾಜಧಾನಿಗಳು ಕನ್ನಡಿಗರ ಸೈಪಿನ ತಾಣಗಳು. ವಿಜಯನಗರವೂ ಹೀಗೆಯೇ ಒಂದು ಗತವೈಭವದ ಬೀಡು. ಹಲವು ಮಹಿಮೆಯ ಗೂಡು, ಕನ್ನಡ ಸೌಭಾಗ್ಯದ ನಾಡು.

ವಿದ್ಯಾನಗರವು ಕರ್ನಾಟಕದ ಹಿಂದಿನ ಸಾಮ್ರಾಜ್ಯಗಳನ್ನು ಮರೆಸುವಷ್ಟು ವಿಖ್ಯಾತವಾಗಲು ಹಲವು ಕಾರಣಗಳಿವೆ ವಿರೂಪಾಕ್ಷನ ಸಾನ್ನಿಧ್ಯ, ವಿದ್ಯಾರಣ್ಯರ ಅನುಗ್ರಹ, ಹಿಂದೂಧರ್ಮದ ರಕ್ಷಣೆಗಾಗಿ ಈ ಅರಸರ ದೊಡ್ಡ ಮನಸ್ಸು, ಈ ರಾಯರ ಅಪ್ರತಿಮವಾದ ವರಾಕ್ರಮ ಇತ್ಯಾದಿಗಳು ಈ ರಾಜ್ಯದ ಹಿರಿಯತನಕ್ಕೆ ಮುಖ್ಯವಾದ ಕಾರಣ. ಗಂಗ ಕದಂಬಾದಿ ರಾಜ್ಯಗಳಂತೆ ಒಂದು ವ್ಯಕ್ತಿಯ ಕೃತಿಸ್ಫೆಗಾಗಿ, ಒಂದು ಕುಲದ ಪ್ರಭಾವಕ್ಕಾಗಿ ಯಾವನಾಪರೊಬ್ಬ ಶೂರನಿಂದ ವಿಜಯನಗರವು ಸ್ಥಾಪಿತವಾಗಿಲ್ಲ ಇದು ಪವಿತ್ರವಾದ ಸನಾತನ ಧರ್ಮದ ರಕ್ಷಣೆಗಾಗಿ ಮಹರ್ಷಿ ವಿದ್ಯಾರಣ್ಯರಿಂದಲೂ ಹುಕ್ಕಬುಕ್ಕರೆಂಬ ವೀರಕ್ಷತ್ರಿಯರಿಂದಲೂ ಸ್ಥಾಪಿತವಾಯಿತು ಚಾಲುಕ್ಯ ರಾಷ್ಟ್ರಕೂಟಾದಿಗಳು ತಂತಮ್ಮಲ್ಲಿಯೇ ತೊಡೆದಾಡಿದರ ವಿಜಯನಗರವು ವಿರುದ್ಧ ಸಂಸ್ಕೃತಿಯವರ ಕೂಡೆ ಸ್ವಧರ್ಮದ ರಕ್ಷಣೆಗಾಗಿ ಹೊಡೆದಾಡಿತು ಈ ಕಾರಣಗಳಿಂದ ವಿಜಯನಗರವು ಕನ್ನಡ ಸಾಮ್ರಾಜ್ಯಗಳ ಶಿರೋಮಣಿಯಾಗಿದೆ

ಹಲವು ಮಂದಿ ಚರಿತ್ರೆಕಾರರು ವಿಜಯನಗರದ ಸಂಸ್ಥಾಪನೆಯಿಂದ ಇಡೀ ಭಾರತವರ್ಷದಲ್ಲಿಯೇ ಹಿಂದೂಧರ್ಮದ ಜಾಗ್ರತಿಯಾಯಿತೆಂದೂ ವೇದಶಾಸ್ತ್ರಗಳು ಕಳೆಯೇರಿದುವೆಂದೂ ವಿಧರ್ಮಿಗಳಹಾವಳಿ ಕಡಿಮೆಯಾಯಿತೆಂದೂ ಹೇಳಿದ್ದಾರೆ. ಹಾಗೂ ಛತ್ರಪತಿ ಶಿವಾಜಿ ಮಹಾರಾಜನು ಮಹಾರಾಷ್ಟ್ರದಲ್ಲಿ ಮತ್ತೆ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಲು ವಿಜಯನಗರದ ಚರಿತ್ರೆಯು ಆವನಿಗೆ ಸ್ಫೂರ್ತಿಯನ್ನುಂಟುಮಾಡಿತೆಂದೂ ಅಪ್ರತ್ಯಕ್ಷ ರೀತಿಯಿಂದ ಈ ಕರ್ನಾಟಕ ಸಾಮ್ರಾಜ್ಯವು ಆ ಮಹಾರಾಷ್ಟ್ರ ಸಾಮ್ರಾಜ್ಯಕ್ಕೆ ಸಹಾಯವಾಯಿತೆಂದೂ ವಾದಿಸಿದ್ದಾರೆ.

ವಿಜಯನಗರದಲ್ಲಿ ಸ್ಮರಣಾರ್ಹರಾದ ಅರಸರು ಹಲವರು ಆಗಿಹೋಗಿದ್ದಾರೆ. ಮಹರ್ಷಿ ವಿದ್ಯಾರಣ್ಯ ಸ್ವಾಮಿಯ ಎಡಗೈ ಬಲಗೈಗಳಂತಿದ್ದ ಹುಕ್ಕಬುಕ್ಕರು ಕನ್ನಡ ನಾಡಿನ ರಾಮಲಕ್ಷ್ಮಣರು ಅಥವಾ ಭೀಮಾರ್ಜುನರು. ಈ ಸಹೋದರರ ಪರಾಕ್ರಮ, ಸ್ವಾಮಿಭಕ್ತಿ, ದೇಶಾಭಿಮಾನ, ಧರ್ಮಾಭಿಮಾನಿಗಳು ಶ್ಲಾಘನೀಯವಾದುವು. ಈ ವೀರ ಬಂಧುಗಳಿಲ್ಲದಿದ್ದರೆ ವಿದ್ಯಾರಣ್ಯರ ಸಂಕಲ್ಪವು ಮೂರ್ತಸ್ವರೂಪವನ್ನು ಹೊಂದುವುದು ಕಷ್ಟಸಾಧ್ಯವಾಗಿತ್ತು. ಯಜ್ಞ ವಿಘಾತಿಗಳ ವಿನಾಶ ಕಾರ್ಯದಲ್ಲಿ ವಿಶ್ವಾಮಿತ್ರನಿಗೆ ರಾಮಲಕ್ಷ್ಮಣರೂ ದುಷ್ಟಶಿಕ್ಷಣ ಶಿಷ್ಟ ರಕ್ಷಣಕಾರ್ಯದಲ್ಲಿ ಶ್ರೀ ಕೃಷ್ಣ ಪರಮಾತ್ಮನಿಗ ಭೀಮಾರ್ಜುನರೂ ನೆರವಾದಂತೆಹಕ್ಕಬುಕ್ಕರು ವಿದ್ಯಾರಣ್ಯನ ಎಡಗೈಬಲಗೈಗಳೆನಿಸಿ ಲೋಕ ವಿಖ್ಯಾತರಾದರು.

ರಾಯರ ಬುದ್ಧಿ

ಅರಸರಿಗೆ ಪರಾಕ್ರಮದಂತಯೇ ಧರ್ಮ ಬುದ್ಧಿಯೂ ಅತ್ಯಂತ ಮಹತ್ವದ ಗುಣ. ತ್ರೇತಾಯುಗದ ಶ್ರೀರಾಮ, ನಳ, ಹರಿಶ್ಚಂದ್ರ, ಯುಧಿಷ್ಠಿರಾದಿಗಳೂ ಇತಿಹಾಸ ಯುಗದ ಚಂದ್ರಗುಪ್ತ, ಅಶೋಕ, ಪೃಥ್ವೀರಾಜ, ಶಿವಾಜಿ ಶ್ರೀತಾನ ಸಿಂಹ, ಇಮ್ಮಡಿ ಪುಲಿಕೇಶಿ, ತ್ರಿಭುವನ ವಿಕ್ರಮಾದಿತ್ಯ ಮೊದಲಾದವರೂ ವರಾಶ್ರಮದಿಂದಲೇ ಅಲ್ಲದೆ ಧರ್ಮಬುದ್ಧಿಯಿಂದಲೂ ಹೆಸರಾಗಿರುವರು. ವಿದ್ಯಾನಗರದ ರಾಯರು ಈ ವಿಚಾರದಲ್ಲಿಯೂ ವಿಖ್ಯಾತರಾಗಿರುವರು.

ವಿದ್ಯಾನಗರದ ಅರಸರು ಧರ್ಮಬುದ್ಧಿಯುಳ್ಳವರೆಂಬುದಕ್ಕೆ ಅನೇಕ ಸತ್ಯ ಗುರು ವರ್ಯ ವಿದ್ಯಾರಣ್ಯರ ನೇತೃತ್ವದಲ್ಲಿ ರಾಜ್ಯ ಭಾರ ಮಾಡಿರುವುದೇ ಸಾಕ್ಷಿ. ತುಂಗ ಭದ್ರ, ಕಾವೇರೀ ನೊದಲಾದ ನದಿಗಳಲ್ಲಿ ಹಲವು ಕಾಲುವೆಗಳನ್ನು ಮಾಡಿಸಿ ರೈತರನ್ನು ಕಾವಾಡಿರುವುದೇ ಸಾಕ್ಷಿ. ಸಂಪಾ ವಿರೂಪಾಕ್ಷ, ವಿಜಯವಿಠಲ, ಯೋಗರಾಮ, ಭೋಗರಾಮ, ಹಜಾರರಾಮ, ವೀರಭದ್ರ, ಉಗ್ರನರಸಿಂಹ ಮೊದಲಾದ ಅಸಂಖ್ಯಾತ ಗುಡಿಗೋಪುರಗಳನ್ನು ಕಟ್ಟಿಸಿದುದೇ ಸಾಕ್ಷಿ. ಜೈನ, ಬೌದ್ಧ, ಲಿಂಗವಂತ, ವೈಷ್ಣವ ಮೊದಲಾದ ಎಲ್ಲ ಮತ ಪಂಗಡದವರಿಗೂ ಆಶ್ರಯವನ್ನು ಕೊಟ್ಟು ದೇವಾಲಯ, ಬಸದಿ ಮಠ ನೊದಲಾದುವುಗಳನ್ನು ಕಟ್ಟಿಸಿಕೊಟ್ಟುದೇ ಸಾಕ್ಷಿ. ತಮಗೆ ತಿರುಕರು ಕಡುವೈರಿಗಳೆನಿಸಿದ್ದರೂ ತಮ್ಮ ಇಸ್ಲಾಮಿ ಪ್ರಜೆಗಳಿಗಾಗಿ ತಮ್ಮ ಅರಮನೆಯ ಸಮೂಹದಲ್ಲಿಯೇ ಮಸೀತಿಯನ್ನು ಕಟ್ಟಿಸಿಕೊಟ್ಟು ಧರ್ಮ ಸಹಿಷ್ಣುತೆಯನ್ನು ತೋರಿದುದೇ ಸಾಕ್ಷಿ ಈ ಅರಸರ ಕಾಲದಲ್ಲಾದ ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕೊಟ್ಟ ಸಾವಿರಾರು ದಾನಶಾಸನಗಳು ಇವರ ಧರ್ಮಬುದ್ಧಿಗೆ ಹಿರಿದಾದ ಸಾಕ್ಷಿಯಾಗಿವೆ.

ಈ ಅರಸರ ಸಾಹಿತ್ಯ ಸೇವೆ

ಗುಣಗಣಮಿಲ್ಲದ ಕಾಲವುರುಷನ ವಕ್ತ್ರಕ್ಕೆ ಸಿಕ್ಕಿ ಎಷ್ಟೋ ರಾಜ್ಯ-ಸಾಮ್ರಾಜ್ಯಗಳು ಪುಡಿಪುಡಿಯಾದುವು ಆದರೆ ಆ ಅರಸರ ಕಾಲದಲ್ಲಾದ ಸಾಹಿತ್ಯ ಸಂಪತ್ತು ಮಾತ್ರ ಅವರ ಕೀರ್ತಿಯನ್ನು ಜಗತ್ತಿಗೆ ಸಾರುತ್ತಿದೆ. 'ಕವಿಯೇ ರಾಜನ ಕಣ್ಣೆಲೈ' ಎಂದು ಹೇಳಿರುವ ಕನ್ನಡ ಜಾಣ ವುಲಿಗೆರೆ ನೋಮಕವಿಗೆ ಈ ಗುಟ್ಟು ಗೊತ್ತಿರಬೇಕು.

ವಿಜಯನಗರದ ಅರಸರ ಕಾಲದಲ್ಲಿ ಅವಾರವಾದ ಸಾಹಿತ್ಯಸೇವೆಯಾಗಿದೆ. ಕನ್ನಡ ಸಂಸ್ಕೃತ, ತಮಿಳು ತೆಲುಗು ಭಾಷೆಗಳಲ್ಲಿ ಉತ್ತ್ಯತ್ತಮವಾದ ಅನೇಕ ಗ್ರಂಥಗಳು ಆ ರಾಜರ ಆಶ್ರಯದಲ್ಲಿಯೇ ಆದುವು.

ಅರಸರ ಕಲಾಪ್ರೇಮ

ವಿಜಯನಗರದ ಅರಸರು ಸಾಹಿತ್ಯ ಸೇವೆಗೇ ಅಲ್ಲದೆ ಶಿಲ್ಪ, ಚಿತ್ರ, ಸಂಗೀತ ನೊದಲಾದ ಲಲಿತಕಲೆಗಳಿಗೂ ಬಹಳ ವಾಗಿ ಉತ್ತೇಜನ ಕೊಟ್ಟಿದ್ದಾರೆ. ಅವರು ಚಾಲುಕ್ಯ ಹಾಗೂ ರಾಷ್ಟ್ರಕೂಟರಂತೆ, ಜಗದಾಶ್ಚರ್ಯಕರವಾದ ಹೊಯ್ಸಳರಂತೆ ಸಕಲಕಲಾಪೂರ್ಣವಾದ ಶಿಲ್ಪಕಾರ್ಯಗಳನ್ನು ಮಾಡಿಸಿಲ್ಲವಾದರೂ ಚಿತ್ರಕರವಾದ ಕಾರ್ಯಗಳನ್ನು ಬಹಳವಾಗಿ ಮಾಡಿಸಿದ್ದಾರೆ. ಹಂಪೆಯಲ್ಲಿರುವ ಶ್ರೀ ವಿರೂಪಾಕ್ಷ ಗುಡಿ ಮೊದಲಾದ ದೇವಾಲಯಗಳೂ, ಸಾಸಿವೆ ಗಣಪತಿ, ಉಗ್ರನರಸಿಂಹ, ಉದ್ದಾನ ವೀರಭದ್ರ, ಬಾಡಾಲಿಂಗ ಮೊದಲಾದ ವಿಗ್ರಹಗಳೂ, ಎಲ್ಲಕ್ಕಿಂತ ಈ ಅರಸ ಶಿಲ್ಪಿ ವಿದ್ಯಾಭಿಮಾನಕ್ಕೆ ಸಾಕ್ಷಿ. ಈ ಅರಸರ ವಂಶೀಯರೂ ಮಾಡಿರಿಸಿರುವ ವೆಂಕಟಗೊಂಜ, ಸುಧಾರ ಮೊದಲಾದ ಕಡೆ ಕಟ್ಟಿಸಿರುವ ದೇವಾಲಯಗಳೂ ಎಷ್ಟೋ ಕಲಾಪೂರ್ಣವಾಗಿವೆ.

ಮಹಾನವಮಿ ಮಹೋತ್ಸವ

ವಿಜಯನಗರ ಸಾಮ್ರಾಜ್ಯದ ಚರಿತ್ರೆಯಲ್ಲಿ ಪ್ರಸಿದ್ಧವಾದ ವಿಷಯಗಳಲ್ಲಿ ಮಹಾನವಮಿ ಮಹೋತ್ಸವವೊಂದು. ಈಗಲೂ ಹಾಳು ಹಂಪೆಗೆ ಹೋಗಿ ನೋಡಿ ಒರುವ ಸ್ಥಳಗಳಲ್ಲಿ ಮಹಾನವಮಿ ದಿಬ್ಬವೊಂದು ಈ ನೇದಿಕೆಯನ್ನು ನೋಡಿದ ಮಾತ್ರದಿಂದಲೇ ಪ್ರತಿಭಾತಾಲಿಯಾದ ವೀಕ್ಷಕನ ಮನಸ್ಸಿನಲ್ಲಿ ಆ ಕಾಲದ ಲೋಕವಿಖ್ಯಾತವಾದ ಮಹೋತ್ಸವದ ಕಲ್ಪನೆ ಯಾಗದಿರದು.

(೧೦ ನೇ ಪುಟ ನೋಡಿ)

ಎಲ್ಲರೂ ಊಟಕ್ಕೆ ಕೂತಿದ್ದಾರೆ. ಜತಿಧಿಗಳೆಲ್ಲರೂ ತಮ್ಮ ತಮ್ಮ ಆಸನಗಳಲ್ಲಿ ಮಂಡಿತರಾಗಿದ್ದಾರೆ. ಅಡಿಗೆಯವನು ಪದಾರ್ಥಗಳನ್ನೆಲ್ಲಾ ಬಡಿಸಿ ತುಪ್ಪ ಬಡಿಸುವಾಗ ಕೈ ನಡುಗುತ್ತಾ ಇದ್ದರೂ ಬಡಿಸಲು ಅನುವಾದ. ಕೈ ಜಾರಿ ಅದು ಕೃಷ್ಣದೇವರಾಯನ ಎಲೆಯಮೇಲೆ ಬಿತ್ತು. ದುರುಗುಟ್ಟಿ ಮುಖವನ್ನು ನೋಡಿದ. ರಾಜನಿಗೆ ಉತ್ತರವಾಗಿ 'ಏನೋ ಬಿಸಿಯಾಗಿತ್ತು, ಪಾತ್ರೆ ಬಿದ್ದುಹೋಯಿತು" ಎಂದು ಉತ್ತರ ಬಂತು. ಕೂಡಲೇ ಬೇರೆ ತುಪ್ಪವನ್ನು ತಂದು ಎಲ್ಲರಿಗೂ ಬಡಿಸಿದುದಾಯಿತು.

ಒಂದೆರಡು ತುತ್ತುಗಳನ್ನು ಕೃಷ್ಣದೇವರಾಯನು ಬಾಯಿಗೆ ಇಟ್ಟುಕೊಂಡಕೂಡಲೇ ಅವನಿಗೆ ತಲೆ ತಿರುಗಿದಂತಾಯಿತು. ಸುತ್ತ ಲೂ ಅವನಿಗೆ 'ಭಯಂಕರ ಸೇಡು' ಎಂಬ ಸದಗಳು ಕಾಣಬಂದುವು. ಹಾಗೆಯೇ ಅವನೂ ಕಣ್ಣುಮುಚ್ಚಿದನು.

॥ ಶ್ರೀರಸ್ತು ॥

ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರ ವಂಶಾವತರಣ

ವೈಭವ ಗದ್ಯ

ಸ್ವಸ್ತಿ ಶ್ರೀಮಚ್ಚಂದ್ರ ವಂಶ ಮುಕ್ತಾಫಲಾಯಮಾನ ಯದುಸಂತತಿ ಸಮುದ್ಭವದಾದಿಯದುಮಹಾರಾಜಕುಲಲಲಾಮಭೂತ ಬೃಹದ್ಬೆಟ್ಟ ಚಾಮರಾಜತನೂಜ ತಿಮ್ಮರಾಜಾತ್ಮಜ ಮಹಾಚಾಮರಾಜತನೂಭವ ಬೆಟ್ಟಚಾಮರಾಜನಂದನ ತಿಮ್ಮರಾಜಾಜ್ಞಾ ಪರಿಪಾಲಕಚಾಮರಾಜಪ್ರಿಯ ತನಯ ಬೆಟ್ಟಚಾಮರಾಜ ಕರುಣಾಕಟಾಕ್ಷ ಸಮಾಸಾದಿತ ಮಹಾರಾಜ್ಯಧುರೈಕತ್ಯ ಧೌರೇಯ ರಾಜಾಧಿರಾಜ ಕರ್ಣಾಟಕಜನಪದ ರಾಜ್ಯಲಕ್ಷ್ಮೀತಾಟಂಕಾಯಮಾನ ಮಹಿಶೂರ ನಗರ ಶ್ರೀರಂಗಪಟ್ಟಣಾಭಿಧ ಸುಧಾಸಂಸ್ಥಾನ ವಿದ್ಯೋತಮಾನ ದಿವ್ಯರತ್ನ ಸಿಂಹಾಸನಾರೂಢ ರಾಜಲಕ್ಷ್ಮಿಪಾಲ ಕುಲಾನಂದನ ಚಾಮುರಾಜಮಹೀಪಾಲ ಪರಿಪಾಲಿತ ಮಹಾರಾಜ್ಯ ಧುರಂಧರೇಮ್ಮಡಿ ರಾಜಸುತ ಸಂಪತ್ಪಲಾಯಿತ ಪಂಚರತ್ನ ನಿರ್ಮಾಣಧುರೀಣಾ ಪ್ರತಿಮಭುಜಬಲಪರಾಕ್ರಮ ಸಮುತ್ಸಾರಿತವೈರಿವರ್ಗ ರಣಧೀರ ಕಂಠೀರವ ನರಸಿಂಹರಾಜ ಮಹಾರಾಜ ಹೃದಯಾನಂದಕರ ಧರ್ಮೈಕನಿರತ ಮಾನಸ ದೊಡ್ಡದೇವರಾಜ ವರತನಯ ನವಕೋಟಿನಾರಾಯಣ ಸದಾಲಂಕೃತ ಸಮಸ್ತ ಮರ್ಯಾದಾದಿ ವ್ಯವಸ್ಥಾಪಕ ಚಿಕ್ಕದೇವರಾಜ ಮಹಾರಾಜಾತ್ಮಜ ಕಂಠೀರವ ಮಹಾರಾಜತನಯ ದೊಡ್ಡಕೃಷ್ಣರಾಜ ಕುಲೋದ್ಭವ ಚಾಮರಾಜ ಸಮಾಸಕ್ತ ರಾಜ್ಯಲಕ್ಷ್ಮೀ ಹೃದಯಾನಂದಕರೇಮ್ಮಡಿ ಕೃಷ್ಣರಾಜತನೂಜ ನಂಜರಾಜ ಮಹಾ ಸಾಮ್ರಾಜ್ಯ ಧುರಂಧರ ಬೆಟ್ಟಚಾಮರಾಜ ರಾಜ್ಯಲಕ್ಷ್ಮೀ ಹೃದಯಾನಂದಕರೇಮ್ಮಡಿ ಕೃಷ್ಣರಾಜತನೂಜ ನಂಜರಾಜಮಹಾಸಾಮ್ರಾಜ್ಯ ಧುರಂಧರ ಬೆಟ್ಟಚಾಮರಾಜರಾಜ್ಯಲಕ್ಷ್ಮೀಸ್ವಯಂವರವರಾಯಮಾಣ ಸರ್ವಜನ ಸುಕೃತಾನಂದರಾಶಿ ನಾರಾಶಿ ಕೌಸ್ತುಭಾಯಮಾನ ದೇವಬ್ರಾಹ್ಮಣ ಮನೋರಥ ಪರಿಪೂರಣ ಕಲ್ಪಶಾಖಿಶಾಖಾಯಿತಭುಜಲತಾಲಂಕೃತಶ್ರೀಮಚ್ಚಾಮುಂಡಿಕಾಂಬಾಚರಣವಿಂದ ಮಿಳಿಂದಾಯಮಾನ ಮಾನಸತತಾಸಮಾಸಾದಿತಸಮಸ್ತಪುರುಷಾರ್ಥ ಪರಿಶೋಭಿತ ಸತ್ಯಸಂಧ ಕೋಟಿ ಪಂಚಾಕ್ಷರೀಪುರ ಶ್ವರ್ಯಾ ಪರಿತೋಷಿತ ಶ್ರೀಕಂಠೇಶ್ವರ ಕರುಣಾಕಟಾಕ್ಷ ಪೂರ್ಣಪಾತ್ರ ಶ್ರೀಮನ್ಮುಮ್ಮಡಿ ಚಾಮರಾಜೇಂದ್ರ ಸಾರ್ವಭೌಮ ಧರ್ಮಪತ್ನೀ ಕೆಂಪನಂಜಮಾಂಬಾ ಗರ್ಭಸುಧಾಂಬುಧೌ ರಾಕಾಸುಧಾಕರಾಯಮಾನಾಃ ಸಪ್ತಮ ವೈವಸ್ವತ ಮನ್ವಂತರಾಷ್ಟಾವಿಂಶ ಮಹಾಯುಗಾನ್ತರ್ವರ್ತಿ ಕಲಿಯುಗ ಜೀವರತ್ನ ಲಕ್ಷ್ಮೀವ್ಯೂಹ ಸಂಖ್ಯೋಚಿತ ಶ್ರೀಮದ್ರಾಜ್ಯಾಂಗಧರಾಸಿಂಧು ಶಕೋಲ್ಲಸದಾನಂದವರ್ಷ ದಕ್ಷಿಣಾಯನ ಗ್ರೀಷ್ಮರ್ತು ಕಟಕಾಷಾಢ ಕೃಷ್ಣ ದ್ವಿತೀಯಾ ಚಂದ್ರವಾರ ಶ್ರವಣ ತಾರಾ ಪ್ರೀತಿಯೋಗತೈತುಲಕರಣದಿವಾಭಿಜಿನ್ಮುಹೂರ್ತಾನುಗುಣ ಮೃಗರಾಶಿ ಕನ್ಯಾಲಗ್ನೋದಯಾಖ್ಯ ಶೋಡಶ ಘಟಿಕಾಯಾಂ ಶಶಿಶುಕ್ರಾಂಗಾರಕ ಗುರುಮಂದ ವೃಷಭ ಮೃಗೇಂದ್ರತುಲಾಶಾಪರಾಶಿಯುತೇಷು ಬುಧಾರ್ಕರಾಹುಷು ಕರ್ಕಿಷ್ಟ ತೇಷು ಚಂದ್ರಕೇತೋರ್ಮಕರಸ್ಥಯೋ ರ್ವೃಶ್ಚಿಕಸ್ಥೇಚಮಾಂಶೌ ಏತಾದೃತೇಸುಸಮಯೇದ್ವಿಜುಜ ದಶಾಂತರೇ ಶ್ರೀಚಾಮುಂಡಿಕಾಂಬಾ ಮಹಾಪ್ರಸಾದ ಪರಿಕಲ್ಪಿತಾವತಾರಿಃ, ಸುಕೃತಿ ಸಂತತಿ ಚಿಂತಾಮಣಿಃ, ಶೌರ್ಯೋದಾರ್ಯ ಗಾಂಭೀರ್ಯ ಧೈರ್ಯಸ್ಥೈರ್ಯ ಜಾತುರ್ಯೈಶ್ವರ್ಯ ಸೌಂದರ್ಯ ವಿದ್ಯಾವಿನಯ ಶಕ್ತಿರಾಜನೀತಿ ತೇಜಸ್ಸಾಹಸಾದ್ಯನಂತ ಕಲ್ಯಾಣ ಗುಣಗಣರತ್ನ ರತ್ನಾಕರಾಯಮಾಣಃ, ಶಮದಮಕ್ಷಮಾದಯಾದಾಕ್ಷಿಣ್ಯಾದ್ಯಾತ್ಮಗುಣಾಲಂಕೃತಃ, ಸಿದ್ಧಾರ್ಥಿವರ್ಷರ ಜ್ಯೇಷ್ಠ ಕೃಷ್ಣ ತ್ರಯೋದಶೀಂದುವಾರ ರೋಹಿಣೀ ತಾರಾಕಲಿತ ಕನ್ಯಾಲಗ್ನ ಸುಮುಹೂರ್ತ ಕರ್ಣಾಟಕ ಮಹಾರಾಜ್ಯ ಪಟ್ಟಾಭಿಷಿಕ್ತಃ, ತುಲಾಪುರುಷ ಹಿರಣ್ಯಗರ್ಭ ಗೋಸಹಸ್ರ ವಸುಂಧರಾಗ್ರಹಾರಾದ್ಯನೇಕಮಹಾದಾನ ಸಮೇಧಮಾನ ಕೀರ್ತಿಮಂಜರೀಪುಂಜ ವಿರಾಜಿತ ಸಕಲ ದಿಙ್ಮಂಡಲಃ, ಅಧರೀಕೃತ ವಾಪೀಕೂಪತಟಾಕದೇವಾಲಯ ಗೋಪುರಾನ್ನಸತ್ರ ಸೋಪಾನ ಸರಿತ್ಸೇತುಮಂಟಪ ಧರ್ಮಶಾಲಾರಾಮಾದ್ಯನೇಕ ಧರ್ಮಸಂಸ್ಥಾಪನ ಧುರೀಣಃ, ರಜತಪೀತಪುರ ಸುಬ್ರಹ್ಮಣ್ಯಾದಿ ದಿವ್ಯಕ್ಷೇತ್ರ ದೇವತಾದರ್ಶನ ಸಮುದ್ರ ಪ್ರಮುಖ ಸಕಲ ತೀರ್ಥಯಾತ್ರಾಸ್ನಾನ ಪರಿಶುದ್ಧ ನಿಜಾಂತರಂಗಃ, ಶ್ರೀತತ್ವ ಸಿದ್ಧಾದ್ಯನೇಕಗ್ರಂಥ ನಿರ್ಮಾಣಪ್ರಕಾಶಿತ ಸಕಲ ಶಾಸ್ತ್ರಾರ್ಥ ವಾಂಡಿತ್ಯ ವೈಭವಃ, ಭುಜಲಕ್ಷ್ಮೀತ್ರಿಂಶೇಂದು ಪರಿಮಿತ ಶಕಾಬ್ದ ಸಂಗತ ರಾಜ್ಯಪಟ್ಟಾಭಿಷೇಕಾದಿ ಸಪ್ತಿತಮ ಸಿದ್ಧಾರ್ಥಿವರ್ಷ ಜ್ಯೇಷ್ಠಾಸಿತ ತ್ರಯೋದಶೀ ಭೌಮವಾರ ರೋಹಿಣೀ ಕನ್ಯಾಲಗ್ನಾಭಿಜಿನ್ಮುಹೂರ್ತ ಯಥಾಶಾಸ್ತ್ರವಿಹಿತ ವರ್ಷದಿವ್ಯಾಭಿಷೇಕ ಮಹೋತ್ಸವ ಸಮುತ್ಕ್ರೀಜಿತ ಜಗದ್ವಿಖ್ಯಾತ ಮಹಾರಾಜತೇಜಃಪ್ರಭಾವಃ, ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ಗೇಹಾವತಂಸ ಕರ್ಣಾಟಕ ಜನಪದಸಂಪದಧಿಷ್ಠಾನಭೂತಶ್ರೀಮನ್ಮಹಿಷೂರುಮಹಾಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲಪ್ರಮುಖನಿಖಿಲ ನಿಜ ರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನ ಸಿಂಹಾಸನಾರೂಢಃ, ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪೃಥ್ವಧವ್ರತಾಪಾಪ್ತಪೀಮವೀರ ನರವತಿ ಬಿರುದೆಂತೆಂಬರ ಗಂಡ ಚಂಡಪ್ರಚಂಡೋದ್ದಂಡ ರಿಪುತಿಮಿರ ಮಾರ್ತಾಂಡ ಲೋಕೈಕವೀರ ಯದುಕುಲವಯಃಪಾರಾವಾರ ಕಲಾನಿಧಿ ಶಂಖಚಕ್ರಾಂಕುಶಕಿಂಕಾರ ಮಕರಮತ್ಸ್ಯ ಶರಭಶಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತಃ, ಶ್ರೀಮಹಾವಿಷ್ಣುರಿವ ಜಗತ್ಪಾಲಕಃ, ಶಂಕರ ಇವ ಸರ್ವಜ್ಞಃ, ಷಣ್ಮುಖ ಇವ ಶಕ್ತಿಸಂಪನ್ನಃ, ಬೃಹಸ್ಪತಿರಿವ ಪ್ರಜ್ಞಾಶಾಲೀ, ಶ್ರೀರಾಮ ಇವ ಸುಕೀರ್ತಿವೈಭವಃ, ಶ್ರೀಕೃಷ್ಣ ಇವ ಭಕ್ತರಕ್ಷಕಃ, ಸುಬ್ರಹ್ಮಣ್ಯ ಇವ ಸದಾನ್ನದಾತಾ, ಸೂರ್ಯ ಇವ ತೇಜಸ್ವೀ, ಚಂದ್ರ ಇವ ಆಹ್ಲಾದಕರಃ, ಇಂದ್ರ ಇವ ಐಶ್ವರ್ಯಭೋಗಸಂಪನ್ನಃ, ಹಿಮಾಚಲ ಇವ ಧೈರ್ಯವಾ, ವೀರಭದ್ರ ಇವ ಶತ್ರುವಿಧ್ವಂಸೀ, ಕಾಲಾಗ್ನಿ ರುದ್ರ ಇವ ಪ್ರಚಂಡಕೋಪಃ, ಸಮುದ್ರ ಇವ ಗಾಂಭೀರ್ಯವಾ, ಬಲೀಂದ್ರ ಇವ ಔದಾರ್ಯವಾ, ಭೂಮಿರಿವ ಕ್ಷಮಾಸ್ವಿತಃ, ಹರಿಶ್ಚಂದ್ರ ಇವ ಸತ್ಯಪ್ರತಿಜ್ಞಃ, ಭೀಮ, ಇವ ಪ್ರತಿಜ್ಞಾತಾರ್ಥಸಾಧಕಃ, ಅರ್ಜುನ ಇವ ಧನುರ್ವಿದ್ಯಾವಿಕಾರದಃ, ಸಹದೇವ ಇವ ಭಾವಿಕಾರ್ಯಜ್ಞಾತಾ, ಚಿಂತಾಮಣಿರಿವ ಚಿಂತಿತಾರ್ಥ ಪ್ರದಾಯಕಃ ಕಲ್ಪವೃಕ್ಷ ಇವ ಸರ್ವಾಭೀಷ್ಟದಾಯಕಃ, ಆಕಾಶ ಇವ ನಿರ್ಲಿಪ್ತಃ, ಜನಕ ಇವ ಮಹಾಯೋಗೀ, ಧೃವ ಇವ ಬಾಲ್ಯಪ್ರಾಪ್ತ ಮಹಾರಾಜಪದಃ, ಮಾರ್ಕಂಡೇಯ ಇವ ದೀರ್ಘಾಯುಷ್ಮಾ, ಶ್ರೀ ಚಾಮುಂಡಾಪದಾಂಭೋಜ ಭೃಮರಾಯಿತಮಾನಸಃ, ಶ್ರೀಕಂಠೇಶ್ವರ ಪ್ರಸಾದಲಬ್ಧ ಸರ್ವಸಾಮ್ರಾಜ್ಯಶಾಲೀ, ಶಿವಪೂಜಾ ಬದ್ಧ ದೀಕ್ಷಾಧುರೀಣಃ, ಆತ್ರೇಯಗೋತ್ರಾಶ್ವಲಾಯನ ಸೂತ್ರಾಯಕ್ಯಾಖ್ಯಾನುವರ್ತೀ ನಂಜರಾಜವರ್ಮಾಭಿಧ ಮುಮ್ಮಡಿ ಶ್ರೀಕೃಷ್ಣರಾಜೇಂದ್ರ ಸಾರ್ವಭೌಮ ಸ್ಸರ್ವೋತ್ಕೃಷ್ಟೋ ಜಗದ್ವಿಖ್ಯಾತೋ ವಿರಾಜತೇ.

ಸಂತಾನಾಂಬುಜಮಧ್ಯಸ್ಥ ಸಿಂಹಾಸನಸಮಾಶ್ರಿತಃ ।
ಯದುರಾಯಾದಿ ಸಂಯುಕ್ತೋ ರಾಜತೇ ಕೃಷ್ಣಭೂಮಣಿಃ (ಪತಿಃ) ॥

ಧವಲಿತಸಿತಫಾಲಂ ರಮ್ಯರುದ್ರಾಕ್ಷನೇತ್ರಂ ।
ಕನಕಮಯಸುಚೇಲಂ ಕಾಮಧೇನುಯಜ್ಞಲೀಲಂ ॥
ಸದವನಪರತೀರ್ಥಂ ಜಾರುಚಾಮೇಂದ್ರಬಾಲಂ ।
ಹೃದಯಕಮಲಮಧ್ಯೇ ಸಂತತಂ ಭಾವಯಾಮಿ ॥

ಮೈಸೂರು ರತ್ನ ಸಿಂಹಾಸನದ ಪೂರ್ವ ಚರಿತ್ರೆ

ಬರೆದವರು;—ಶ್ರೀ ' ಕಲಾವಿಲಾಸಿ ' ಮೈಸೂರು.

ಮೈಸೂರಿನ ರತ್ನಸಿಂಹಾಸನವು ಧರ್ಮ ಪ್ರಭುವಾದ ಧರ್ಮರಾಜನು ಪ್ರತಿಷ್ಠಿಸಿದ ಸಿಂಹಾಸನವೆಂದು ಜಗದ್ವಿಖ್ಯಾತವಾಗಿದೆ. ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಪ್ರಾಂತಾಧಿಕಾರಿಯಾಗಿ (ವೈಸರಾಯ್) ಆಳ್ವಿಕೆ ನಡೆಯಿಸುತ್ತಿದ್ದ ಶ್ರೀರಂಗರಾಯನು-ಈ ಸಿಂಹಾಸನವನ್ನು ತನ್ನ ಅವಸಾನ ಕಾಲದಲ್ಲಿ ಮೈಸೂರಿನ ರಾಜಮನೆತನದವರಿಗೆ ದಯಪಾಲಿಸಿದನೆಂದು ಶ್ರೀ ರಾಮಕೃಷ್ಣರಾಯರು ಬರೆದಿರುವ ರಾಜವಂಶಾವಳಿಯಿಂದ ತಿಳಿಯುತ್ತದೆ. ಶ್ರೀರಂಗರಾಯನ ಅವಸಾನದ ವೇಳೆಗೆ ವಿಜಯ ನಗರದ ವೀರಶ್ರೀಯು ಕಳೆಗುಂದಿತ್ತು: ವಿಜಯ ನಗರದಿಂದ ಮುಸಲ್ಮಾನರಿಂದ ಪರಾಜಿತರಾದ ಹಿಂದೂ ಸಮ್ರಾಟರು-ಪೆನುಗೊಂಡೆಯಲ್ಲಿ ರಾಜ್ಯಭಾರ ಮಾಡುತ್ತಿದ್ದರು ; ಅಲ್ಲಿಗೂ ಮುಸಲ್ಮಾನ ಹಾವಳಿ ತಟ್ಟಿದ್ದರಿಂದ, ಅಲ್ಲಿದ್ದ ರತ್ನ ಸಿಂಹಾಸನವನ್ನು ತಿರುಪತಿಗೆ ಸಾಗಿಸಿದರೆಂದೂ, ಆಗ್ಯ ವಿಜಯ ನಗರದ ರಾಜಗುರುಗಳಿ ನಿಸಿದ್ದ ತಿರುಮಲೆ ತಾತಾಚಾರ್ಯರು ಅದರ ರಕ್ಷಣಾ ಕಾರ್ಯವನ್ನು ವಹಿಸಿ, ತಿರುಪತಿಯಲ್ಲಿ ಕೆಲವು ದಿನ ಕಾಪಾಡಿ, ಅನಂತರ ಭದ್ರವಾಗಿದ್ದ ಶ್ರೀರಂಗರಾಯನ ರಾಜಧಾನಿಯಾದ ಶ್ರೀರಂಗಪಟ್ಟಣಕ್ಕೆ ಅದನ್ನು ಸಾಗಿಸಿಕೊಂಡು ಬಂದರೆಂದೂ, ಈ ಉಪಕಾರ ಸ್ಮರಣೆಗಾಗಿ ತಿರುಮಲೆ ತಾತಾಚಾರ್ಯರನ್ನು ಗೌರವಿಸಿ ಹತ್ತಾರು ದತ್ತಿಗಳನ್ನು ಮೈಸೂರು ರಾಜ್ಯಕ್ಕೆ ಸೇರಿರುವ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅವರಿಗೆ ಕೊಟ್ಟರೆಂದೂ ಪರಂಪರಾಗತ ಕತೆಯು ತಿಳಿಸುತ್ತದೆ.

೦ ೦ ೦

ಶ್ರೀ ರಾಮಕೃಷ್ಣರಾಯರು ರಚಿಸಿದ 'ಮೈಸೂರು ರಾಜವಂಶಾವಳಿ' ಯಲ್ಲಿ ಈ ರತ್ನ ಸಿಂಹಾಸನವು ಧರ್ಮರಾಜನ ಕಾಲದಿಂದ ಮೈಸೂರರಸರ ಒಡೆತನಕ್ಕೆ ಬರುವವರೆಗೆ ಯಾರ ಯಾವ ಹತ್ತಿರ ಇತ್ತೆಂಬ ಬಗ್ಗೆ ವಿವರಗಳನ್ನು ಕೊಟ್ಟಿದ್ದಾರೆ.

ನಿವರ	ವರ್ಷ
೧. ಯುಧಿಷ್ಠಿರ ವಂಶದವರು	೧೧೧೫
೨. ಮಗಧದೇಶಾಧಿಪತಿಗಳು	೪೯೪
೩ ಜಯಂತಿಕದಂಬರಾಯ ವಂಶ	೨೪೨
೪. ವೈಷರಾಯ -ದುರ್ಮಿಶ್ರರಾಯ. ವಂಶ	೪೫೬
೫ ಕದಂಬವಂಶ	೫೯೪
೬. ವಿಕ್ರಮರಾಯ	೬೩
೭. ಮಾಳವ ವಿಕ್ರಮ	೪೧
೮. ಅಮಾತ್ಯ ಭಟ್ಟ	೩೦
೯. ಅವಂತಿ ಬೋಜದೇವ	೬೪
೧೦. ಅಭೀರ ಕುಲದರಸರು	೬೭೦
೧೧. ಹಳೇಬೀಡು ಬಲ್ಲಾಳರು	೯೮
೧೨ ಆನೆಗೊಂದಿಯ ಅಧಿಪರ ವಶದಲ್ಲಿದ್ದ ಅವಧಿ	೫೪
೧೩. ಓರಿಗಲ್ಲು ಪ್ರತಾಪರುದ್ರ ರಾಯನ ವಂಶ	೪೭೧
೧೪. ಪೆನಗೊಂಡ ಕಪಿಲರಾಯ—	೧೩
೧೫ ' ಡಿ ' —ಅತನನೆಲಮಾಳಿಗೆಯಲ್ಲಿದ್ದ ಅವಧಿ	೨
೧೬ ಹಕ್ಕನಾದಿಯಾಗಿನರಪತಿಕೃಷ್ಣದೇವರಾಯನವರೆಗೆ	೧೩೭
೧೭. ಅಳಿಯರಾಮರಾಜ-ತಿರುಮಲರಾಯ	೧೪
೧೮. ಹಿರಿಯ ಮಗಶ್ರೀರಂಗರಾಯ ವಂಶ.	೧೫೧

ಅಂತು ಶ್ರೀ ರಂಗರಾಯನವರಿಗೆ ಆಳಿದ ದೊರೆಗಳು ಈ ಸಿಂಹಾಸದ ಮೇಲೆ ಕುಳಿತು ಧರ್ಮಾಧಿಕಾರ ಮಾಡಿದ ಅವಧಿ ೪೭೧.

೦ ೦ ೦

ಶ್ರೀ ರಾಮಕೃಷ್ಣರಾಯರು ಈ ಅಂಶಗಳನ್ನು ಅರಮನೆಯ ಪುರಾತನ ಕಾಗದ ಪತ್ರಗಳು, ಶಾಸನಗಳು ಇವುಗಳಿಂದ ಆರಿಸಿ ತೆಗೆದಿದ್ದಾರೆ.

ಅಲ್ಲದೆ, ಈಗ ಮೈಸೂರಿನಲ್ಲಿರುವ ಸಿಂಹಾಸನವು ಅವರಂಗಜೇಬ್‌ಕೊಟ್ಟ ದಂತ ಸಿಂಹಾಸನವಲ್ಲವೆಂಬುದನ್ನು ಶಾಸನಾಧಾರಗಳಿಂದ ಸ್ಥಿರಗೊಳಿಸಿದ್ದಾರೆ. ಅವರ ಬರೆಹವನ್ನು ಇಲ್ಲಿ ಎತ್ತಿ ಕೊಡಲಾಗಿದೆ.

" ಮೈಸೂರು ಪ್ರಭುಗಳವರ ಸಿಂಹಾಸನವು ನೊಗಾಯಿ ಚಕ್ರವರ್ತಿ ಔರಂಗಜೇಬ್ ಪಾದಷಹರ ಕಾಲದ್ವಂಬ ಪ್ರತೀತಿಯೊಂದು ಕೆಲವೆಡೆನೆಲೆಸಿರುವುದು ಇದಕ್ಕೆ ತಕ್ಕ ಸಾಧನವೇನೂ ಕಂಡು ಬರುವುದಿಲ್ಲ. ಆ ಬಾದಷಹರವರು ನ ೧೬೮೯ ನೇ ಇಸವಿಯ ಸಮಯದಲ್ಲಿ ಮೈಸೂರು ದೊರೆಗಳಿಗೆ ಜಂತದ ಸಿಂಹಾಸನಾರೋಹಣವನ್ನು ಮಾಡುವ ಗೌರವವನ್ನು ಹೊಸದಾಗಿ ಕೊಟ್ಟಂತೆ ಹೇಳುತ್ತಾರೆಂದು ಮೇಜರ್ ವಿಲ್ಕ್ಸ್ ಸಾಹೇಬರು ನುಡಿದಿರುವರು. ಇದಕ್ಕೆ ಕಾರಣವೇನೂ ಕಾಣುವುದಿಲ್ಲ. ಮೈಸೂರು ನೃಪಾಲರಿಗೆ ಆ ಸಾರ್ವಭೌಮರು ಜಂತದ ಸಿಂಹಾಸನವನ್ನು ಕಳುಹಿಸಿಕೊಟ್ಟರೆಂದು " ಮೈಸೂರು ಚರಿತ್ರಸಾರ " ನೆಂಬ ಪುಸ್ತಕದಲ್ಲಿ ಬರೆದಿದೆ. ಆದಕ್ಕೂ ಆಧಾರವು ತಿಳಿಯುವುದಿಲ್ಲ. ಮೈಸೂರು ಪ್ರಭುಗಳವರ ಪುರಾತನ ಸಿಂಹಾಸನದ ಆನುಪೂರ್ವ್ಯವೃತ್ತಾಂತವನ್ನು ಆ ಗ ಲೇ ವಿವರಿಸಿದೆ. ಅದರಲ್ಲಿ ಹೇಳಿರುವಂತೆ ಔರಂಗ್‌ಜೇಬ್ ಪಾದಷಹರ ಪಿತಾಮಹರಾದ ಜಹಾಂಗೀರ್ ಚಕ್ರವರ್ತಿಯವರ ಸಮಕಾಲಿಕರಾಗಿ ಈ ಸೀಮೆಯ ದೊರೆಗಳಾಗಿದ್ದ ಶ್ರೀರಾಜ ಒಡೆಯರವರು ಇದನ್ನು ಆರ್ಜಿಸಿದವರು ಈ ಅರ್ಥವನ್ನು ತಿರುಮಕೂಡಲು ನರಸೀಪುರದಲ್ಲಿ ದೊ ರೆ ತಿ ರು ವ ೧೭೪೪ನೇ ಸಂವತ್ಸರದ ಶಾಸನದಲ್ಲಿರುವ

" ಸೋಽಯಂ ರಾಜನ್ಯಪಾಗ್ರಣೀ ಸ್ಥಿರುಮಲಕ್ಷ್ಮಾಪಾಲ ರಾಯಿಂಜವಾ ಜ್ಜಿತ್ವಾ ದೋರ್ಯುಗ ವಿಕ್ರಮಕ್ರಮ ಭರೈಃ ಶ್ರೀರಂಗ ಪುರ್ಯಾಂಸುಧೀಃ ॥
ಅರುಹ್ಯಾದ್ಭುತ ಚಿತ್ರರತ್ನ ಖಚಿತಂ ಪ್ರೋತ್ತುಂಗ ಸಿಂಹಾಸನಂ ।
ಸಾಮ್ರಾಜ್ಯ ಶ್ರಿಯಮಾಪತತ್ಪ ನಿಖಿಲ ಕ್ಷೋಣೀಶ-ವಂದ್ಯಾಂಘ್ರಿಕಃ

ಈ ಶ್ಲೋಕವು ಪರಿಪೋಷಿಸುತ್ತಿದೆ. ಶ್ರೀರಂಗ ಪಟ್ಟಣದ ತಾಲ್ಲೂಕಿನಲ್ಲಿ ದೊರೆತಿರುವ ಕ್ರಿ. ಶ. ೧೬೪೬ನೇ ವರ್ಷದ ಶಾಸನದಲ್ಲಿಯೂ-" ಜಯತು ಶ್ರೀಪತೇರ್ವಾನು ನೇತ್ರವಂಶಾಬ್ಧಿ ಚಂದ್ರಮಾಃಕಲಾಸಿದಿರುದಾರಶ್ರೀಃ ಕಂಠೀರವ ನೃಸಿಂಹರಾಟ ಶ್ರೀಮತ್ಪಶ್ಚಿಮ ರಂಗಪಟ್ಟಣವರೇ ಸಿಂಹಾಸನೇ ಸಂಸ್ಥುರಃ। ಮುಕ್ತಾಛತ್ರ ಸುವರ್ಣ ಮತ್ಸ್ಯ ಮಕರಾ ಕಾರೈಧ್ವಜೈಶ್ಚಿಹ್ನಿತಃ॥ ಎಂದುಹೇಳಿ ಮೈಸೂರರಸರು ರತ್ನ ಸಿಂಹಾಸನಾಧಿಪರಾಗಿದ್ದರೆಂಬ್ಲುದನ್ನು ಪರಿಪೋಷಿಸುತ್ತಿದೆ. ಇತೆಗೆ ಕ್ರಿ. ಶ. ೧೬೭೮ನೇ ವರ್ಷದಲ್ಲಿ ಚಿಕ್ಕದೇವರಾಜ ಒಡೆಯರವರೇ ಹಾಕಿಸಿಕೊಟ್ಟಿರುವ ಶಾಸನವೊಂದರಲ್ಲಿ.

" ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ-೧೬೦೦ ಸಂದವರ್ತಮಾನವಾದ ಕಾಲಯುಕ್ತಿ ಸಂವತ್ಸರದ ಆಷಾಢ ಶುದ್ಧ ೧೫ರಲ್ಲೂ ಬಿರುದಂತೆಂಬರಗಂಡ, ಲೋಕೈಕವೀರ, ಶ್ರೀಮನ್ಮಹಾರಾಜಾಧಿರಾಜಪರಮೇಶ್ವರ, ಪ್ರೌಢಪ್ರತಾಪಾಸಾಪ್ರತಿಮವೀರ, ನರಪತಿ ಶ್ರೀಚಿಕದೇವರಾಜ ಮಹಾರಾಜ ಒಡೆಯರಯ್ಯನವರುಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ಸೃಥ್ವೀ ರಾಜ್ಯಂಗೈಯುತ್ತಿರಲು...."

ಒಂದು ಒಕ್ಕಣಿಸಿರುವುದರಿಂದ ಮಹಾರಾಜರಾದ ಶ್ರೀ ಚಿಕ್ಕದೇವರಾಜ ಒಡೆಯರವರೇ ಸ್ವಯಂ ರತ್ನ ಸಿಂಹಾಸನಾಧಿಪರಾಗಿದ್ದರೆಂದು ವ್ಯಕ್ತಪಡುತ್ತಿದೆ. ಹೀಗೆ ವಿಚ್ಛಿತಿಯಿಲ್ಲದೆ ಇದುವರೆಗಾಗಲೇ ೩೦೦ ವರ್ಷಗಳಿಗೆ ಕಡಿಮೆಯಿಲ್ಲದೆ ಮೈಸೂರು ದೊರೆಗಳು ಈ ಧರ್ಮ ಸಿಂಹಾಸನಾರೂಢರಾಗಿ ಧರ್ಮರಾಜ್ಯ ಪರಿಪಾಲನೆಮಾಡುತ್ತಿರುವರು " (ರಾಜವಂಶಾವಳಿ ಪು. ೫೪-೫೬)

೦ ೦ ೦

ಸ್ವಭುಜಬಲ ಪರಾಕ್ರಮದಿಂದ ಯುಧಿಷ್ಠಿರ ಸಿಂಹಾಸನದ ಅಧಿಪತಿಯಾಗಿದ್ದ ಶ್ರೀರಂಗರಾಯನಿಂದ ರತ್ನಸಿಂಹಾಸನವನ್ನು ಪಡೆದು, ಆತನ ಮರಣಾನಂತರ-ಕ್ರಿ. ಶ. ೧೬೧೦ರಲ್ಲಿ-ಆ ಸಿಂಹಾಸನವನ್ನು ಶ್ರೀ ರಂಗರಾಯನ ಅಪೇಕ್ಷೆಯಂತೆ ಏರಿ, ಪಟ್ಟಾಭಿಷಿಕ್ತರಾದರು, ಆಗ ಮೈಸೂರರಸರ ಬಿರುದಾವಳಿಗೆ ವಿಜಯನಗರದ ಬಿರುದಾವಳಿಗಳೂ ಸೇರಿದುವು. ಅದುವರೆಗೆ ಮೈಸೂರಿನಲ್ಲಿ ' ನವರಾತ್ರಿ '- ಉತ್ಸವವು ಆಚರಣೆಯಲ್ಲಿರಲಿಲ್ಲ ; ವಿಜಯನಗರದರಸರ ಪ್ರತಿನಿಧಿಯಾಗಿದ್ದ ಶ್ರೀ ರಂಗರಾಯನು ಶ್ರೀರಂಗಪಟ್ಟಣದಲ್ಲಿ ಈ ಪದ್ಧತಿಯನ್ನು ಆಚರಣೆಗೆ ತಂದನು ಶ್ರೀ ರಂಗರಾಯನ ರತ್ನ ಸಿಂಹಾಸನವೇರಿದ ನಂತರ ಮೈಸೂರರಸರೂ ಪದ್ಧತಿಯನ್ನು ಮುಂದು ವರಿಸಿಕೊಂಡು ಬಂದಿದ್ದಾರೆ ಮೊದಲನೆಯ ದಸರಾ ಮಹೋತ್ಸವವನ್ನು ಮೈಸೂರು ಅರಸರು ನಡೆಯಿಸಿದ್ದು ಕ್ರಿ. ಶ. ೧೬೧೮ರಲ್ಲಿ, ಅಂದರೆ ಸುಮಾರು ಮೂರೂ ಕಾಲು ಶತಮಾನಗಳಿಂದ ಮೈಸೂರು ದಸರಾ ಮಹೋತ್ಸವವನ್ನು ನಿಲ್ಲಿಸದೆ - ರಾಷ್ಟ್ರೀಯ ಹಬ್ಬವೆಂದು ಭಾವಿಸಿ, ಭಕ್ತಿಯಿಂದಲೂ, ವಿಜೃಂಭಣೆಯಿಂದಲೂ ಆಚರಿಸುತ್ತ ಬರುತ್ತಿದೆ ಯುಧಿಷ್ಠಿರ ಧರ್ಮರತ್ನ ಸಿಂಹಾಸನಾಧಿಷ್ಠಿತರಾದ ಮೈಸೂರು ಅರಸರು-ಮಧ್ಯೆ ಹೈದರ್-ಟಿಪ್ಪುಗಳ ಅಧರ್ಮಕ್ಕೆ ಬಲಿಯಾಗಿ, ವನವಾಸವನ್ನು ಪಾಂಡವರಂತೆಯೇ ಅನುಭವಿಸಿದರು. ಧರ್ಮಕ್ಕೆ ಎಂದಿದ್ದರೂ ವಿಜಯವು ಸಿದ್ಧ! ಸತ್ಯಕ್ಕೆ ಎಂದಿದ್ದರೂ ಚ್ಯುತಿಬರಲಾತದು. ಮತ್ತೆ ಮೈಸೂರು ಅರಸರು-ರತ್ನಸಿಂಹಾಸನವನ್ನೇರಿ, ವಿಜಯಿಗಳಾಗಿ, ಕೀರ್ತಿಭಾಜನರಾಗಿ, ರಾಜ್ಯಪರಿಪಾಲನೆ ಮಾಡುತ್ತಿದ್ದಾರೆ.

" ಸಂತಾನಾಂಬುಜ ಮಧ್ಯಸ್ಥ ಸಿಂಹಾಸನ ಪದಾಶ್ರಿತಃ |
ಯದುರಾಯಾ ದಿಸಂಯುಕ್ತೋ ರಾಜತೇ ಕೃಷ್ಣ ಭೂಪಣಿಃ ॥

Badminton Rackets

FRESH STOCK

	Rs. a.
Club Special I	... 1 8
,, II	... 1 12
,, I	... 2 0
Special 'A'	... 2 8
Badminton Balls Doz.	... 6 12
,, ,, ,,	.. 7 8

If amount is sent in advance postage free.

H. N. RAO & BROS.

CHICKPET, BANGALORE CITY.

ನಿಜಾಂ ಕರ್ನಾಟಕವೂ ನಾಡಹಬ್ಬವೂ

(ಲೇಖಕರು:—ಶ್ರಿಯುತ ರಾಘವೇಂದ್ರ ಭೀಮಸೇನ ಮನಸಬ್ದಾರ್, ಹೈದರಾಬಾದ್)

"ಜಯಭುವನೇಶ್ವರಿ! ಜಯಜಾಮಂ ಡೇಶ್ವರಿ!" ಎಂದು ನಮ್ಮನಾಡನಾಡಿನ್ನ ನಲಿದಾಡಿ, ನಾಡಿನ ಗೀತೆಯನ್ನು ಹಾಡಿ ಹಾಡಿ, ನಾಡ ಗುಡಿಯನ್ನು ಹಾರಿಸುತ್ತಲಿರುವ ನಾವೆಲ್ಲರೂ ಒಂದು ಎಂಬುದಕ್ಕೆ ನಮ್ಮೀ ನಾಡಹಬ್ಬವೇ ಸಾಕ್ಷಿ. ಈ ಪರ್ವವನ್ನು ನಾವು ರಾಷ್ಟ್ರೀಯ ಪರ್ವವನ್ನಾಗಿ ಆಚರಿಸುತ್ತಿರುವುದು ಕೇವಲ ಇಂದಿನ ಮಾತಲ್ಲ., ಅಥವಾ ಶ್ರೀ ಗಜಾನನೋತ್ಸವವನ್ನು ಸಾಮಾಜಿಕವಾಗಿ ಆಚರಿಸಲು ಆರಂಭಮಾಡಿದ ನಮ್ಮ ಮಹರಾಷ್ಟ್ರೀಯ ಬಾಂಧವರ ಅನುಕರಣ ಎಂತಲೂ ಅಲ್ಲ. ಹೀಗೆ ತಿಳಿದವರು ಹಲವರುಂಟು. ಇದು ಅವರ ಆತ್ಮ ವಿಸ್ಮರಣೆ- ಈ ಹಬ್ಬದ ರಾಷ್ಟ್ರೀಯ ಸ್ವರೂಪದ ಮೂಲ ನಮ್ಮ ವಿಜಯನಗರದ ರಾಯರ ಕಾಲದಲ್ಲಿ; ರಾಯರ ಸಿಂಹಾಸನಕ್ಕೆ ಆಡಿಗಳ್ಗುಗಳಾಗಿ ಇಂದಿಗೂ ಮೈಸೂರಿನ ಅರಮನೆಯನ್ನು ಬೆಳಗುತ್ತಿರುವ ಕಡುಗಲಿಗಳಲ್ಲಿ ನಮ್ಮ ರಾಷ್ಟ್ರೀಯತೆಯ ಪರಂಪರೆ-ಉತ್ತರಭಾರತದಿಂದ ಇಳಿದು ದಕ್ಷಿಣವನ್ನು ತುಳಿಯು ಬಯಸಿದ ಆ ವೈದಿಕರನ್ನು ತಡೆಗಟ್ಟಲು ನಾವು ತೋರಿದ ಜೈತನ್ಯವೇ ನಮ್ಮ ಮಹಾರಾಷ್ಟ್ರೀಯ ಬಾಂಧವರ ಹೋರಾಟಕ್ಕೆ ಆದರ್ಶವಾಯಿತು. ಶೌರ್ಯ ಸಾಹಸಗಳಿಗೆ ತವರೂರೆನಿಸಿದ ವಿಜಯನಗರವು ನಮ್ಮದು; ಚೌಷಷ್ಟಿ ಕಲೆಗಳಿಗೆ ಅಭಿಮಾನ ದೇವತೆಯಾದ ಶ್ರೀಶಾರದಾಂಬೆಯು ಮೂರ್ತಿಮಂತವಾಗಿದ್ದಾಳೆ ನಮ್ಮ ಕೂಡಲಿಯಲ್ಲಿ. ಹೀಗಿರುವಾಗ ಮಹಾರಾಷ್ಟ್ರದವರು ಶ್ರೀವಿನಾಯಕನ ಹಬ್ಬವನ್ನು ಸಾಮುದಾಯಕವಾಗಿ ಮಾಡತೊಡಗಿದರೆಂದು ಈಗ ಕನ್ನಡಿಗರಿಗೆ ನಾಡಹಬ್ಬದ ಛಲಹಿಡಿದಿದೆಯೆಂದು ಹೇಳುವ ಮಹನೀಯರಿಗೆ ದೂರದಿಂದ ನಮಸ್ಕಾರ. ಗಣಪತಿಯು ನಮಗೆ ವೇದಮೂರ್ತಿ. ಒಳತಕ್ಕೆ ಮನ್ನಣೆ ಕೊಡುವುದು ಉಚ್ಚ ಸಂಸ್ಕೃತಿಯ ಕುರುಹು. ಅಂತೆಯೆ ಲೋಕಕ್ಕೇ ಮಾನ್ಯರಾದ ಕೈ ಬಾಲ ಗಂಗಾಧರ ತಿಲಕರವರು ಹಾಕಿದ ಮೇಲ್ಪಂಕ್ತಿಯೆಂದು ನಾವು ಶ್ರೀ ಗಜಾನನ ಉತ್ಸವವನ್ನು ಮಾಡಿದರೂ ತಪ್ಪೆಲ್ಲಿ? "ಪಾರತಂತ್ರ್ಯದ ಪಾಶ, ದೈನ್ಯಜೀವನದ ಮೋಹ, ಪರಸಂಸ್ಕೃತಿಯ ಮಾಯೆ ಇವು ಯಾವುವೂನಮ್ಮ ಆತ್ಮಬಲಕ್ಕೆ ಸೋಂಕಿಲ್ಲ. ಸೋಂಕಲಾರವು. ನಮ್ಮ ಆತ್ಮಬಲವು ನಮ್ಮ ಕೈಬಿಟ್ಟಲ್ಲ" ಎಂದು ಸಾರುವ ಮಹಾತ್ಮಾಜಿಯವರ ಅಮೃತವಾಣಿಯು ಸ್ವತಂತ್ರಭಾರತದಲ್ಲಿ ಅವಳ ಅಂಗವಾಗಿರುವ ಸ್ವತಂತ್ರಕರ್ನಾಟಕದ ಮಕ್ಕಳಾದ ನಮ್ಮಗಳಿಗೂ ನಮ್ಮದೇ ಆದ ಒಂದು ರಾಷ್ಟ್ರೀಯತೆಯಿದೆ; ನಮ್ಮದೇ ಆದ ಒಂದು ಸಂಸ್ಕೃತಿಯಿದೆ ಎಂಬ ಉಜ್ವಲ ಭಾವನೆಯು ನಮ್ಮಲ್ಲಿ ಮನೆಮಾಡಲೆಂದು ನಮ್ಮ ಹಿರಿಯ ಮುಂದಾಳುಗಳು ಆರಂಭಮಾಡಿದ ಈ ನಾಡಹಬ್ಬವು ನಮ್ಮದು.

ನಿಜಾಂ ಕನ್ನಡಿಗರಾದರೂ ಕನ್ನಡ ಮ್ಮನ ಗುಡಿಯಲ್ಲಿನ ಜೀವ ಜ್ಯೋತಿಗಳೇ. ನನಗೆ ನೆನಪಿರುವ ಮಟ್ಟಿಗೆ ಅಂದರೆ ೧೯೨೪ನೇ ಇಸವಿಯ ಆಗಸ್ಟ್ ತಿಂಗಳ ೧೫ನೇ ತಾರೀಖು ತರುಣರ ತಂಡದ ಯುವಕರು ಗುಂಪುಗುಂಪಾಗಿ ಕಾಣುತ್ತಿದ್ದರು. ನಿಜಾಂ ಕರ್ನಾಟಕದ ಏಳಿಗೆಯ ಇತಿಹಾಸದಲ್ಲಿ ಅಗ್ರಸ್ಥಾನಕ್ಕೆ ಶ್ರೀ ಬಿ. ಜೆ. ಚಿಮ್ಮನಿಗೆ ಅಂಗಡಿಯವರ ಒಂದು ಕೋಣೆ. ಅಲ್ಲಿ ನಾಡದೇವಿ —ಸಿರಿಗನ್ನಡ ದೇವಿಗೆ ನಮ್ಮ ನಿಜಾಂ ಕರ್ನಾಟಕಕ್ಕೆ ಬರಲು ಔತಣ ಕೊಡಲೆಂದು ಸೇರಿದ ನಾಗರಿಕರ ಸಭೆ. ಅದನ್ನೆಲ್ಲ ಈಗ ನೆನೆಸಿಕೊಂಡರೆ ಮಕ್ಕಳ ಕರೆಯನ್ನು ಕೇಳುವ ತಾಯಿಗೆ ಅದೆಷ್ಟು ತವಕ ಎಂದೆನಿಸುವುದು. ವರ್ಷ ತಿರುಗುವಷ್ಟರಲ್ಲಿ ನಮ್ಮ ಕುಲದೇವಿಯ ಕಳೆಯು ಅದೇ ಕೋಣೆಯಲ್ಲಿ ಮೂಡಿತು. ತನ್ನ ಕೊರಳದಾರದಲ್ಲಿ ಪದಕವಾಗಿ ಧರಿಸಿದ ನೃಪತುಂಗನ ನಾಮರೂಪದಲ್ಲಿ ಆ ಕಳೆಯನ್ನು ಕಾಣಿಸಿಕೊಂಡಳು; ಕೋಡ್ಯಾಕ್ ಕೆಂಪೆನಿಯ ಸಾಮಾನುಗಳಿಂದ ತುಂಬಿದ ಕೋಣೆಯೇ ಕನ್ನಡ ಕುಲಧರ್ಮಕ್ಕೆ ಸಾಕ್ಷೀಭೂತವಾಗಿ ಬೆಳೆಯುವ ಎಳೆಯ ಕನ್ನಡಿಗರಿಗೆ ನೃಪತುಂಗ ವಿದ್ಯಾಲಯವಾಯಿತು. ಆವಳ ದಿವ್ಯ ಕಳೆಯ ಬೆಳಕಿನಲ್ಲಿ ಅಲ್ಲಿನ ನಾಗರಿಕ ಮಾತೃಭಕ್ತಿಯು ಬೆಳೆಯಿತು. ತಾಯಿಯ ಸಾನ್ನಿಧ್ಯದಲ್ಲಿ ಮಕ್ಕಳ ಗುಂಪೂ ಬೆಳೆಯಿತು. ಕೋಣೆಯ ಕಟ್ಟಡವು ಸಾಲದಾಯಿತು

'ಮಕ್ಕಳಿರಾ!" ಎಂದಳು

"ಬಂದೆ ತಾಯಿ!" ಎಂದು ನಿಜಾಂ ಕನ್ನಡಿಗರಿಗ್ಲೆ ಇಂದು ಜೀವಜೀವಾಳವಾಗಿರುವ ದೇ. ಭ. ಜನಾರ್ಧನರಾಯರು ಕನ್ನಡದ ಏಳಿಗೆಗಾಗಿ ಕಂಕಣವನ್ನೇ ತೊಟ್ಟರು; ಶ್ರೀ ರಾಜಾಸಾಹೇಬ ಕಾವೇವಾನಕರ, ಪಂಡಿತ ರಾಮಾಚಾರ್ಯ ಮುಂತಾದ ಕನ್ನಡದಭಿಮಾನಿಗಳೂ ರಾಯರಿಗೆ ಬೆಂಬಲವಾದರು ವಿದ್ಯಾಲಯವು ಈಗ ಭವ್ಯ ಭವನದಲ್ಲಿ.

ಇದು ನಾಡಹಬ್ಬದ ಮಹಿಮೆ; ಹೆಬ್ಬವನ್ನು ಆಚರಿಸಬೇಕೆಂದು ಸಂಕಲ್ಪ ಮಾತ್ರ ಮಾಡಿದ ನಾಗರಿಕರಿಗೆ ಎಂಥ ಕಾರ್ಯ ಶಕ್ತಿ; ಇದು ದಂತಕಥೆಯಲ್ಲ; ಸತ್ಯಕಥನ. ಅಂದಿನಿಂದ ಇಂದಿಗೂ, ಪ್ರತಿವರ್ಷವೂ ಈ ಉತ್ಸವವು ಯಥಾಸಾಂಗವಾಗಿ ಜರುಗುತ್ತಲಿದೆ. ಬೆಂಗಳೂರಿನಿಂದ ಶ್ರೀ ಕೆ. ಸಂಪಟ್ಗಿರಿರಾಯರು, ವೈ. ಬಿ. ಎಂ. ಶ್ರೀ ಕಂಠಯ್ಯನವರು, ಶ್ರೀ ಆ. ನ. ಕೃಷ್ಣರಾಯರು, ಧಾರವಾಡದಿಂದ ಶ್ರೀ ಮುಗಳಿಯವರು, ಶ್ರೀ ಕೃಷ್ಣ ಕುಮಾರರು, ವೈ. ಜಾಗೀರದಾರರು ವೈ. ವಿ. ಕೆ. ಆರ್. ವಿ., ರಾಯರು ಮುಂತಾದ ಕರ್ನಾಟಕ ಭೂಷಣರು ಕನ್ನಡದ ಸವಿಸೊಬಗುಗಳನ್ನು ಬೀರಿರುವರು

ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಬಿದರೆ ಈ ನಾಲ್ಕು ಕನ್ನಡ ಜಿಲ್ಲೆಯ ತರುಣರಿಗೂ ನಾಡಹಬ್ಬವೆಂದರೆ ಜಪ್ಪೇ ಸಡಗರದ ಉಕ್ಕು; ತಾಲ್ಲೂಕು ತಾಲ್ಲೂಕಿನಲ್ಲಿಯೂ ನಾಡದೇವಿಯ ಮೆರವಣಿಗೆ ಈ ವಾರದಲ್ಲಿ; ಕುತುನೂರಿನ ವಿದ್ಯಾರಣ್ಯ ಪಾಠಶಾಲೆಯ ಸಂಸ್ಥಾಪಕರೂ, ಮುಖ್ಯ ಅಧ್ಯಾಪಕರೂ ಆಗಿರುವ ಶ್ರೀ. ದೇಸಾಯಿ ರಾಘವೇಂದ್ರರಾಯರ ನೇತೃತ್ವದಲ್ಲಿ ನಡೆಯುವ ನಾಡಹಬ್ಬವು ಅಲ್ಲಿನ ವಿದ್ಯಾರ್ಥಿಗಣಕ್ಕೂ ಗ್ರಾಮಸ್ಥರಿಗೂ ಆದೊಂದು ಸವಿಯೂಟ; ಇದೀಗ ವೃತ್ತಪತ್ರಗಳಲ್ಲಿ ಪ್ರಸಿದ್ಧವಾಗಿರುವಂತೆ ಶ್ರೀ. ದೇಸಾಯಿ ನಾನವ್ವನವರ ಸಾಹಸ ಫಲವಾಗಿ ಸುರವು ರದಲ್ಲಿ ಸಗ ಅತಿ ವಿಜೃಂಭಣೆಯಿಂದ ಜರುಗುತ್ತಲಿರುವ ಉತ್ಸವ, ಕಲಾಪ್ರದರ್ಶನ, ಗ್ರಂಥಪ್ರದರ್ಶನ, ಖಾದಿ ಪ್ರದರ್ಶನ ಮುಂತಾದ ಉತ್ಸವದ ಕಾರ್ಯಕ್ರಮವನ್ನು ತಿಳಿದು ಯಾವ ಕನ್ನಡಿಗನುತಾನೇ ಹಿರಿಹಿರಿ ಹಿಗ್ಗಲಿಕ್ಕಿಲ್ಲ! ಒಟ್ಟಿಗೆ ನಿಜಾಂ ಕನ್ನಡಿಗರಿಗೂ ನಾಡಹಬ್ಬವು ನಮ್ಮದೆಂಬ ಅಭಿಮಾನ; ಸದಭಿಮಾನದ ಸೊಲ್ಲಿಗೆ ತಕ್ಕಂತೆ ಅವರ ಜೀವನಕಳೆಯೂ ಬೆಳೆಯುತ್ತಿದೆ; ಅದು ಇಮ್ಮಡಿ ಮುಮ್ಮಡಿಯಾಗಿ ಬೆಳೆದು ನಾಡಿನ ಸಿರಿಗೆ ಕಾರಣವಾಗಲೆಂದು ನಾಡದೇವಿಯಲ್ಲಿ ಪ್ರಾರ್ಥನೆ.

———

೦ ೦ ೦

ಮೈಸೂರಿನಲ್ಲಿ ಕಾಂಗ್ರೆಸ್ ಚಳುವಳಿಯು ಅವ್ಯಾಹತವಾಗಿ ನಡೆಯುತ್ತಿದೆ. ಈಗಿನ ಆಂತರ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಈ ಬಗೆಯಾಗಿ ಚಳವಳಿಯಿರಲಾಗದೆಂದೂ, ಆದಕಾರಣ ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದೂ ಬೇಡಲು ವೀರಕೇಸರಿ ಶ್ರೀ ಸೀತಾರಾಮಶಾಸ್ತ್ರಿಗಳು ಮುಂತಾದ ಕೆಲವರು ಶಿವಮೊಗ್ಗ ನರೇಮನೆಯಲ್ಲಿರುವ ಶ್ರೀ ದಾನವ್ವನವರನ್ನೂ ಕಂಡಿದ್ದರು ಅಲ್ಲಿಂದ ಈಗ ವರ್ಧಾಯಾತ್ರೆ ಮಾಡಿದ್ದಾರೆ ಗಾಂಧಿಯವರಿಂದ ಈ ಬಗ್ಗೆ ಹೇಳಿಕೆಯಾಂದನ್ನು ಹೊರಡಿಸಬೇಕೆಂಬುದೇ ಎಲ್ಲರ ಆಶಯ

— ——

ವಿಶೇಷ ಸುದ್ದಿಗಳು

ಇದುವರೆಗೆ ಮೈಸೂರಿನಲ್ಲಿ ಸತ್ಯಾಗ್ರಹ ಕಾರಣಗಳಿಗಾಗಿ ಬಂಧಿತರಾದವರ ಸಂಖ್ಯೆ ೧೫೬೭: ಅದರಲ್ಲಿ ಇದುವರೆಗೆ ಕ್ಷಮಾಪಣೆ ಬೇಡಿದವರ ಸಂಖ್ಯೆ ೭೯. ದಾವಣಗೆರೆ ಪ್ರಾಂತದ ಕಾಂಗ್ರೆಸ್ ಡಿಕ್ಟೇಟರ್ ಆಗಿದ್ದವರೊಬ್ಬರಿಗೆ ಹಿಂದೆ ಕಳ್ಳತನಕ್ಕಾಗಿ ಶಿಕ್ಷೆಯಾಗಿತ್ತಂತೆ!!

೦ ೦ ೦

ಸೀಜ್‌ಫ್ರೀಡ್ ಲೈನಿನಲ್ಲಿ ಮಿತ್ರರಾಷ್ಟ್ರಗಳಿಗೂ, ಜರ್ಮನರಿಗೂ ಬಲವಾದ ಘರ್ಷಣವಿನ್ನೂ ಆಗಿಲ್ಲ: ಶೀಘ್ರದಲ್ಲಿಯೇ ಪರಿಸ್ಥಿತಿಯನ್ನು ನೋಡಿದರೆ, ಘರ್ಷಣವು ಸಿಡ್ನಿವೆಂದು ತೋತ್ತಾಗಿದೆ.

೦ ೦ ೦

ಅಮೆರಿಕನರ ಮೂಲಕ ಬ್ರಿಟ್-ಫ್ರಾನ್ಸ್‌ಗಳೊಡನೆ ಶಾಂತಿ ಸಂಧಾನ ನಡೆಸಲು ಜರ್ಮನರು ಹಾತೊರೆಯುವಂತಿದೆ. ಇದಕ್ಕೆ ತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಆದರೆ, ಸಂಗ್ರಾಮದಲ್ಲಿ ತೊಡಗಿರುವ ಮೂರು ರಾಷ್ಟ್ರಗಳೂ ತಮ್ಮ ಮಧ್ಯಸ್ಥಿಕೆ ಒಪ್ಪುವುದಾದರೆ, ನೋಡೋಣವೆಂದು ಅಮೆರಿಕವು ಹೇಳುತ್ತಿದೆ.

೦ ೦ ೦

ರಷ್ಯನರು, ಮಿತ್ರರಾಷ್ಟ್ರಗಳಿಗೂ ಜರ್ಮನಿಗೂ ಆಗುತ್ತಿರುವ ಸಂಗ್ರಾಮಕ್ಕೆ ಸಲಕ ರಣೆಗಳನ್ನು ಒದಗಿಸುತ್ತಾರೆಯೇ ವಿನಾ, ಜನಬಲಗಳನ್ನು ಒದಗಿಸಲಾರರೆಂದು ತುರ್ಕಿಯಿಂದ ಬಂದ ವಾರ್ತೆಯು ತಿಳಿಸುತ್ತದೆ.

೦ ೦ ೦

"ವಿಲ್ನ" ನಗರವನ್ನು ಹಿಂದೆ ಪೋಲರು ಸೇರಿಸಿಕೊಂಡಿದ್ದರು. ಪೋಲೆಂಡ್ ಪತನಾನಂತರ ಅದು ಜರ್ಮನರ ರಕ್ಷಣೆಗೆ ಬಂತು. ಈಗ ರಷ್ಯ ಜರ್ಮನಿ ಒಪ್ಪಂದದ ಪ್ರಕಾರ ವಿಲ್ನ ನಗರವನ್ನು ಇಸ್ತೋನಿಯಾ ದೇಶಕ್ಕೆ ಸೇರಬೇಕೆಂದು ತೀರ್ಮಾನಮಾಡಿ, ಅದರಂತೆ ಆದನ್ನು ಪ್ರತ್ಯೇಕ ಮಾಡಲಾಗಿದೆ.

೦ ೦ ೦

ಇದುವರೆಗೆ ಬ್ರಿಟಿಷರು ಶತ್ರುವರ್ಗಕ್ಕೆ ಸೇರಿದ ಹಡಗುಗಳಲ್ಲಿ ಜರ್ಮನಿಗೆ ಬರುತ್ತಿದ್ದ ಬಹಿಷ್ಕೃತ ವಸ್ತುಗಳ ಪೈಕಿ ೧,೭೫,೦೦೦ ಟನ್ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಅದರಲ್ಲಿ ಬಹು ಭಾಗ ತೈಲಗಳು, ಮತ್ತು ಮದ್ದು ತಯಾರು ಮಾಡಲು ತಕ್ಕ ವಸ್ತುಗಳು.

೦ ೦ ೦

ರಾಯಲ್ ಓಕ್ ಎಂಬ ಬ್ರಿಟಿಷ್ ಸಂಗ್ರಾಮ ನೌಕೆಯೊಂದನ್ನು ಜರ್ಮನರು ಮುಳುಗಿಸಿದರು. ಜರ್ಮನರ ೧೭ ಸಬಾ ಮೆರೀನ್‌ಗಳನ್ನು ಮಿತ್ರರಾಷ್ಟ್ರಗಳು ಮುಳುಗಿಸಿವೆ. ಜರ್ಮನಿಗೆ ರಷ್ಯದಿಂದ ಸಬ್ಸಿಡ್ಯೀಗಳು ಬರಲಿರುವ ಸಿಹಿಸುದ್ದಿ—ಅವು ಹೋದರೆ ನವ ಗೇಸಂತೆ ಎನ್ನುತ್ತಿದ್ದಾರೆ ಜರ್ಮನರು.

ಮಂಗಳ ಮಸಗಿತು ಮೈಸೂರರಮನೆ,—ಸಿಂಗರವಾಯಿತು ಮೈಸೂ,

ಆಳುವ ಮಹಾಸ್ವಾಮಿಯವರು

ವಿಜಯದಶಮಿಯ ವಿಜಯೋತ್ಸವ ನಡೆಸುತ್ತಿರುವ ಪ್ರಧಾನಪಾತ್ರಧಾರಿ

ಮೈಸೂರಿನಲ್ಲಿ ನವರಾತ್ರಿ ಉತ್ಸವವೆಂದರೆ, ಭಾರತೀಯರ್ಮಾರಿಗೆ ನೋಡಲು ಹಾತೊರೆಯುವಷ್ಟು ವೈಭವದಿಂದ ನೆರವೇರುತ್ತಿದೆ ಭಾರತದಲ್ಲಿರುವ ಈಟ್ ಸಂಸ್ಥಾನಗಳಲ್ಲಿ ತಮ್ಮ ವ್ಯಾಜೀನ ನರಂಪರೆಯನ್ನು ಮರೆಯದೆ, ತಮ್ಮ ಸಂಸ್ಕೃತಿಯನ್ನು ಉಜ್ಜೀವನಗೊಳಿಸಲು ಪ್ರಯತ್ನಿಸುತ್ತಿರುವವರಲ್ಲಿ ಮೈಸೂರಿನ ಅರಸರು ಅಗ್ರಗಣ್ಯರು ಅವರು ಪ್ರಪಂಚದ ಪರಿಶುದ್ಧ ಸಂಸ್ಕೃತಿಗೆ ಮೂರ್ತಿಸ್ವರೂಪರಾಗಿದ್ದಾರೆ ಅವರ ಜೀವನವು ಆ ಬಗೆಯಲ್ಲಿ ಹೊಂದಿ-ಬೆಳೆದು ಬಂದಿದೆ

ಂ ಂ ಂ

ಮೈಸೂರಿನಲ್ಲಿ ನವರಾತ್ರಿ-ರಾಷ್ಟ್ರೀಯ ಹಬ್ಬ ಆಶ್ಚರ್ಯಜನಕ ಶುದ್ಧ ಪಾಠ್ಯ ಮಿಯಿಂದ ಹಿಡಿದು ವಿಜಯದಶಮಿಯವರೆಗೆ—

ಸರ್ ಮಿರ್ಜಾ ಎಂ. ಇಸ್ಮಾಯಿಲ್ ರವರು,

ಮೈಸೂರಿನ ದಿವಾನರು.

ನಡೆಯುವ ಆ ಹಬ್ಬದ ವಿಶೇಷಣೆ ನಿಜವಾಗಿಯೂ ಪ್ರಶಂಸನೀಯವಾದದ್ದು ಪಾಠ್ಯಮಿಗೆ ಪೂರ್ವಭಾವಿಯಾಗಿಯೇ ಶುಭಮುಹೂರ್ತದಲ್ಲಿ ರತ್ನಸಿಂಹಾಸನವನ್ನು ಪೂಜೆಮಾಡಿ, ಅದನ್ನು ದರ್ಬಾರ್ - ಹಾಲಿನಲ್ಲಿ ಇಡುವರು; ಇಟ್ಟು ಅದಕ್ಕೆ ದೇವಯೋಗ್ಯ ಪುರಸ್ಕಾರಗಳು ನಡೆಯುವುವು ನವರಾತ್ರಿ ಉತ್ಸವ ಕಾಲದಲ್ಲಿ ವಿನಾ ಉಳಿದ ಕಾಲದಲ್ಲಿ ಆ ಸಿಂಹಾಸನವನ್ನು ಪ್ರಭುಗಳು ಉಪಯೋಗಿಸುವುದಿಲ್ಲ ಏಕೆಂದರೆ ಅದರ ಪವಿತ್ರತೆಗೆ ಭಂಗವೆಂದು ಹಲವರ ಮತ. ಆಚಾರವೂ ಇಲ್ಲ ಉಳಿದ ಕಾಲಗಳಲ್ಲಿ ಪ್ರಭುವರ್ಯರು ಉಪಯೋಗಿಸುವುದು ಭದ್ರಾಸನ ಮಾತ್ರ

ಂ ಂ ಂ

ಸಿಂಹಾಸನವನ್ನು ವಿರುವಾಗಲೂ ಸಹ ಪ್ರಭುಗಳು ಸ್ವಹಸ್ತದಿಂದ ನೇತ್ರೋತ್ಕ್ಷೀತಿಯಾಗಿ ಸಿಂಹಾಸನವನ್ನು ಪೂಜೆಮಾಡಿ, ಪ್ರದಕ್ಷಿಣ ನಮಸ್ಕಾರಾದಿಗಳನ್ನು ಸಮರ್ಪಿಸಿ, ಪ್ರಸಾದ ಸ್ವೀಕಾರಾನಂತರ ಸಿಂಹಾಸನಾರೋಹಣವನ್ನು ಮಾಡುತ್ತಾರೆ ಸಿಂಹಾಸನದಮೇಲೆ ವೀರಾಸನದಲ್ಲಿಯೇ ಪ್ರಭುವರ್ಯರು ಕುಳ್ಳಿರಬೇಕೆಂಬ ವಿಧಿಯಿದೆ; ವೀರಾಸನಾಸೀನ್ಹಿತ ಪ್ರಭುಗಳು ತಮ್ಮ ಪ್ರಜಾವರ್ಗ, ಅಧಿಕಾರಿಗಳು, ಸಚಿವವರ್ಗ, ಆಪ್ತಬಂಧುವರ್ಗ, ಸರದಾರರು, ಸಾಮಂತರು—ಮುಂತಾದವರಿಂದ ನಜರು-ಮುಜರುಗಳನ್ನು ಪಡೆಯುತ್ತಾರೆ ನಜರು-ಮುಜರುಗಳು ನಡೆಯುತ್ತಿರುವ ಕಾಲದಲ್ಲಿ ಹೊರಗಡೆ ಮುಂಭಾಗದಲ್ಲಿ ಕುಸ್ತಿ ಪಂದ್ಯಗಳು, ನೃತ್ಯಗಾನ, ಸಂಗೀತ, ಬಾಣಬಿರುಸುಗಳು, ವಿವಿಧ ವಿನೋದಾವಳಿಗಳು ನಡೆಯುತ್ತಿರುವುವು ಸಂಸ್ಥಾನದ ಅಶ್ವದಳ, ಪದಾತಿ, ಭಲ್ಲಿಯವರ್, ಗೋಲಂದಾಜು ಪಡೆ ಮುಂತಾದುವುಗಳು ಹೆಂಗಡೆ ಶಿಸ್ತಿನಿಂದ ನಿಂತು, ತಮ್ಮ ಅಧಿಪತಿ ರಾಜಭಕ್ತಿಯ ಕಾಣಿಕೆಯನ್ನು ಸಮರ್ಪಿಸುತ್ತವೆ.

ಂ ಂ ಂ

ಈ ಎಲ್ಲ ನಿದವಾದ ಆಚರಣೆಗಳಿಗೂ ಒಂದು ವಿಧವಾದ ಕ್ರಮವಿದೆ, ಶಿಸ್ತಿದೆ ಸಾಮಾನ್ಯವಾಗಿ ಒಂದು ನೂರು ರೂ ಮೇಲ್ಪಟ್ಟು ವೇತನವನ್ನು ಪಡೆಯುವ ಅಧಿಕಾರಿಗಳೆಲ್ಲರೂ ಒಂದುದಿನವಾದರೂ, ದರ ಬಾರಿಗೆ ಒಂದು, ಪ್ರಭುಗಳಿಗೆ ತಮ್ಮ ಭಕ್ತಿಯನ್ನು ಕಪ ಸಿಸಲೇಬೇಕೆಂಬ ಅಂಗವಿದೆ ಪ್ರಜಾಪ್ರಮುಖರು, ಅಹ್ವಾನಿತರು ಎಲ್ಲರೂ, ತಮ್ಮ ಗೌರವಾದ ಉಡುಗೊಡುಗೆಗಳಂದ ಬಂದು ಮಹಾರಾಜರನ್ನು ಓಲೈಸುತ್ತಿರಲು, ಆ ದೃಶ್ಯವನ್ನು ನೋಡಲು ಯಾರುತಾನೆ ಬಯಸುವುದಿಲ್ಲ?



ಮೈಸೂರು ರ

ಶ್ರೀ ಜ

ಂ ಂ ಂ

ಪಾಠ್ಯಮಿಯ ದಿವಸ ಪ್ರಭುಗ
ಮುಂಜಾನೆಯೇ ಎದ್ದು, ಮಂಗಳ
ದಿಂದ ಶುಚಿರ್ಭೂತರಾಗಿ, ಸಂಧ್ಯಾ
ನಾದಿ ಕರ್ಮಗಳನ್ನು ಮುಗಿಯಿಸಿಕೆ
ನವಗ್ರಹಪೂಜೆ, ದಾನ, ಇತ್ಯಾದಿ
ತರ, ಹವನ, ಹೋಮಗಳನ್ನು
ತ್ತಾರೆ. ಅನಂತರ ಕಂಕಣಧಾರಿ
ನಿರ್ವಿಘ್ನಲಾಂತರ್ಕರಣದಿಂದ ಸು
ವಸ್ತ್ರ ಭೂಷಣ, ಬಿರುದಾವಳಿಗಳ ಸ

ಶ್ರೀ ಕಂಠೀರವ ನರಸರಾ
ಒಡೆಯರ್ ಬಹದ್ದೂರ್
ಅವರು.

ಲಾಲ್ಯದಲ್ಲಿ ಆರೋಗ್ಯಲಾಭ
ಮಾಡಿರುವರು.

ನಾಲ್ಮಡಿ ಕೃಷ್ಣನ ಮೈಸೂರು

ಅಭಿಮಾನ ದೇವತೆ

ಡಿಕಾದೇವಿ

ಸೊತ್ತಾದ ಮುಹೂರ್ತದಲ್ಲಿ ಸಿಂಹಾಸನಾ
ರೋಹಣಕ್ಕೆ ಆಗಮಿಸುವರು. ಕಂಕಣಧಾ
ರಿಯಾಗಿ, ಮತ್ತೆ ವಿಜಯದಶಮಿಯ ದಿನ
ದರ ವಿಸರ್ಜನೆಯಾಗುವವರೆಗೆ, ಮಹಾ
ಜರಿಗೆ ಸಾಮಾನ್ಯ ಜಾತಿ ಸೂತಕಗಳು
ಲ್ಲನೇ ಇಲ್ಲವೆಂಬ ನಿರ್ಣಯ ಮಾಡಿ
ದ್ದರೆ. ನವರಾತ್ರಿ ಒಂಭತ್ತು ದಿನಗಳೂ
ಮಹಾರಾಜರವರು ದೀಕ್ಷಾಬದ್ಧರು.
ಂಹವಲ ಸಿಂಹಾಸನಾರೂಢರಾಗಿ, ನಜರು
ಮುಜರುಗಳನ್ನು ಪಡೆದರೇ ಅವರ ದೀಕ್ಷೆ
ಮುಗಿಯಿತೆಂದು ಯಾರೂ ಭಾವಿಸಬಾ
ರದು. ಅದಕ್ಕಿಂತ ಮಿಗಿಲಾದ ಕರ್ತವ್ಯ
ಳು ಬಲವಾಗಿವೆ. ಅರಮನೆಯಲ್ಲಿ ಸರ್ವ
ನ ಸುಖಕ್ಕಾಗಿ ನಡೆಯುವ ಜಪತಪ
ಳು, ಪೂಜೆಪುರಸ್ಕಾರಗಳು ಪಾರಾಯ
ಣಾದಿಗಳು—ಇವಕ್ಕೆಲ್ಲ ಪ್ರಭುಗಳು ಗಮ
ನಿಸಿಕೊಡುತ್ತಾರೆ. ದೀಕ್ಷಾ ಕಾಲದಲ್ಲಿ ಪ್ರಭು
ಗಳು ಏಕಭುಕ್ತರಾಗಿದ್ದು, ನಿಷ್ಠೆಯಿಂದ ಕಾಲ
ಕಳೆಯಬೇಕೆಂಬ ವಿಧಿಯನ್ನು ಅಕ್ಷರಶಃ
ಪಾಲಿಸುತ್ತಾರೆ.

o o o

ಕನ್ನಡಿಗರಿಗೆ ಹಾಗಿರಲಿ, ವಿಶಾಲ ಭಾರ
ತಕ್ಕೆ ಹಾಗೂ ವಿಶಾಲ ವಿಶ್ವಕ್ಕೇ ತನ್ನ
ಕಾಂತಿಯನ್ನು ಹರಡಿ, ದೇದೀಪ್ಯಮಾನ
ವಾಗಿ ಬೆಳೆದಿದೆ.

o o o

ದುರ್ಗಾಷ್ಟಮಿಯ ದಿನ ಅರಮನೆಯಲ್ಲಿ
ವಿಶೇಷ ಸಂಭ್ರಮ; ಚಾಮುಂಡೀ ದೇವಾ
ಲಯದಲ್ಲಿಯೂ ವಿಶೇಷ ಸಂಭ್ರಮ. ಚಾ
ಮುಂಡೀಕಾ ದೇವಿಯನ್ನು ನವರತ್ನ ಖಚಿ
ತ ಆಭರಣಗಳಿಂದ ಅಲಂಕರಿಸಿ, ಇಂದು
ದುರ್ಗಾ ದೇವಿಯ ಅಲಂಕಾರ ಮಾಡಿ,
ಪೂಜಿಸುತ್ತಾರೆ. ರಾಜ ಒಡೆಯರ ಕಾಲ
ದಿಂದ ಪರಂಪರಾಗತರಾಗಿ ನಡೆ
ದು ಬಂದಿರುವ ಅಮಲು ದೇವತೆಯ ಪೂ
ಜೆಯೂ ದುರ್ಗಾಷ್ಟಮಿಯಂದೇ ನಡೆಯು
ತ್ತದೆ. ಅರಮನೆಯಲ್ಲಿ ಈ ಅಮಲುದೇವತೆ
ಯ ಪೂಜೆಯೆಂದರೆ, ಬಹು ಕಟ್ಟುನಿಟ್ಟಾಗಿ
ನಡೆಯುತ್ತದೆ. ಈ ದೇವತೆಯ ಪೂಜೆ
ವಿಚಾರವಾಗಿ ಕಥೆಯೊಂದಿದೆ. ಶ್ರೀ ರಂಗ
ರಾಯನ ಮರಣಾನಂತರ ಆತನ ಧರ್ಮ
ಪತ್ನಿ ಆಲಮೇಲಮ್ಮನ ಬಳಿಯಲ್ಲಿದ್ದ ನವ
ರತ್ನ ಖಚಿತ ಆಭರಣಗಳನ್ನು ರಾಜಒಡೆ
ಯರು ಶ್ರೀರಂಗಪಟ್ಟಣದ ರಂಗನಾಯಕಿ
ಅಮ್ಮನವರಿಗೆ ಧರಿಸಲು ಕೇಳಿದರೆಂದೂ,
ಅವರು ಕೂಡದೆ, ಮೂಲಂಗೀ ಮಡುವನ್ನು
ಪ್ರವೇಶಿಸಿ, ಆತ್ಮಹತ್ಯ ಮಾಡಿಕೊಂಡ
ರೆಂದೂ ಪ್ರತೀತಿಯೊಂದಿದೆಯಷ್ಟೆ. ಹಾಗೆ
ಆಕೆಯು ಮೂಲಂಗೀ ಮಡುವನ್ನು ಪ್ರವೇ
ಶಿಸಿದ ನಂತರ, ಪ್ರತಿಬಂಧ ರೂಪದಲ್ಲಿ
ರಾಜಒಡೆಯರ ಮುಂದೆ ನಿತ್ಯವೂ ಕಾಣಿಸಿ
ಕೊಳ್ಳಲು ಆರಂಭವಾಯಿತಂತೆ. ಆಗ
ಆ ಪ್ರತಿಬಂಧದಿಂದ ವಿನಿರ್ಮುಕ್ತರಾಗಲು
ರಾಜಒಡೆಯರು, ಆ ಮೂಲಂಗಿ ಮಡು
ವನ್ನು ಹುಡುಕಿಸಿ, ಆಕೆಯ ಶಿಪೆ, ನಖಗ
ಳನ್ನು ಶೇಖರಿಸಿ, ಅದರಿಂದ ಅಲಂಕೃತ
ವಾದ ಮೃಣ್ಮಯ ಬೊಂಬೆಯನ್ನು ಪೂಜಿ
ಸಿ, ಇನ್ನು ಮುಂದೆ ನನ್ನ ವಂಶಪಾರಂಪ
ರ್ಯವಾಗಿ ಪ್ರತಿವರ್ಷವೂ ನವರಾತ್ರಿಯ
ವೇಳೆಯಲ್ಲಿ ಈ ಬಗೆಯಾಗಿ ಪೂಜೆ ನಡೆ
ಯುವಂತೆ ವ್ಯವಸ್ಥೆಪಿಸಲಾಗುತ್ತದೆ' ಎಂ
ದು ಕೇಳಿಕೊಂಡು ಆ ಪ್ರತಿಬಂಧ ಬಾಧೆ
ಯಿಂದ ನಿವೃತ್ತರಾದರಂತೆ. ಅದು ಅಂತೆ
ಕಂತೆಗಳ ಮಾತು. ಆದರೂ ಪಹಪಹ ಇಂ
ದಿಗೂ ಅರಮನೆಯಲ್ಲಿ ದುರ್ಗಾಷ್ಟಮಿಯ
ದಿವಸ ಅಮಲುದೇವತೆ ಪೂಜೆ ನಡೆಯು
ತ್ತದೆ. ದೊಡ್ಡದೊಂದು ನಿಗ್ರಹವಿನೆ;
ಅದರಬಳಿಅಲಮೇಲಮ್ಮನವರೆಂದುಹೇಳ
ಲಾಗಿರುವ ಕೇಶಪಾಶ, ಮತ್ತು ನಖಗ
ಳನ್ನೂ, ಶ್ರೀರಾಜಒಡೆಯರು ಪೂಜಿಸು
ತ್ತಿದ್ದ ಸ್ವರ್ಣಮಯ ಮೂರ್ತಿಯನ್ನೂ
ಆ ನಿಗ್ರಹದ ಬಳಿ ಇಡುತ್ತಾರೆ. ಅದಕ್ಕೆ
ವೇದೋಕ್ತ ರೀತಿಯಿಂದ ಪೂಜೆಗಳು ನಡೆ
ಯುತ್ತವೆ. ಆರುಬಗೆಯ ಅನ್ನ, ಆರು ಬಗೆ
ಯ ಭಕ್ಷ್ಯ, ಪಾಯಸ, ಪಕ್ವಸೋಪೇತ
ಖಾದ್ಯಗಳು ನಿವೇದನವಾಗುತ್ತವೆ. ಪೂಜೆ
ನಡೆಯುವುದು ದುರ್ಗಾಷ್ಟಮಿ ದಿನ ಅರ್ಧ
ರಾತ್ರಿಯ ಸಮಯದಲ್ಲಿ, ಅರಮನೆಯಾ
ಗಲಿ ಇರುವ ಮತ್ತು ಮೈಸೂರಿನ ಪಿ ಇರುವ
ಹಮುಂದಿ ಹೆಣ್ಣುಮಕ್ಕಳಿಗೆ ಈ ಸಮಯ
ದಲ್ಲಿ ವಸ್ತ್ರಾದ್ಯಲಂಕಾರಗಳನ್ನು ಶ್ರೀಮ
ನ್ಮಹಾರಾಜರವರು ದಾನಮಾಡಿ, ಅವರು
ದೇವಿಯ ಪೂಜೆಯಲ್ಲಿ ಭಾಗವಹಿಸಿ,

ಸಿಸ್ಸಾರ್ಥ ಜೀವನದಿಂದ ಬ್ರಿಟಿಷರ ಪ್ರೀತಿಯನ್ನು ಪಡೆದ ಗೆಳಿ,
ಮೈಸೂರು ಪುನಃ ಪ್ರತಿಷ್ಠಾಪನಾಚಾರ್ಯರೆನಿಸಿಕೊಂಡ
ಮುಮ್ಮಡಿ ಶ್ರೀ ಕೃಷ್ಣರಾಜಭೂಪಾಲರು



ಸ್ಮಸೂರಿನ ಶ್ರೀಮದ್ಯುವರಾಜ ಕುಮಾರರಾದ
ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಅವರು

ಮಂಗಳಾರತಿ, ತೀರ್ಥ ಪ್ರಸಾದಗಳನ್ನು ಸ್ವೀಕರಿಸುತ್ತಾರೆ

೦ ೦ ೦

ಮಹಾನವಮಿಯ ದಿವಸ ಆಯುಧದ ಪೂಜೆ; ಗಜಾಶ್ವ ಪೂಜೆ: ಅಂತಹ ವೈಭವಾನ್ವಿತ ಉತ್ಸವವು ಇನ್ನೆಲ್ಲಿಯೂ ನಡೆಯಲಾರದು. ಮಹಾರಾಜರೇ ಸ್ವತಃ ಬಂದು ಆಯುಧ ಪೂಜೆ, ಗಜಾಶ್ವಪೂಜೆಗಳನ್ನು ಮಾಡುತ್ತಾರೆ ಅನಂತರ ಮಲ್ಲರ ವಜ್ರಮುಷ್ಟಿಕಾಳಗ ಮಲ್ಲರ ಮೈಯಿಂದ ನೆತ್ತರು ಬೀಳುತ್ತದೆ; ಆಗ ಆ ನೆತ್ತರ ದರ್ಶನವಾದನಂತರ ಉಪಸಂಹಾರ ಪೂಜೆಗಳು ನಡೆದು, ಮಹಾನವಮಿ ಸಡಗರವು ಮುಗಿಯುತ್ತದೆ. ವಿಜಯದಶಮಿಯದಿನ ಬೆಳಗ್ಗೆ ವಿಶೇಷವೇನೂ ಇರಲಾರದು. ಮಧ್ಯಾಹ್ನ ಅಂಬಾರಿಯಲ್ಲಿ ಕುಳಿತು ಸಮಸ್ತ ವೈಭವಗಳೊಂದಿಗೆ ಬನ್ನಿಮಂಟಪಕ್ಕೆ ಹೋಗುತ್ತಾರೆ ಶಮಿವೃಕ್ಷ ಪೂಜೆಯಾಗುತ್ತದೆ, ಆ ಸಮಯದಲ್ಲಿ ಪುರೋಹಿತರು ವಂಶಾವಳಿಯನ್ನು ಹೇಳುತ್ತಾರೆ! ಯಥಾಕ್ರಮವಾಗಿ ಪೂಜೆ ಮಂಗಳಾರತಿ ಮುಗಿದನಂತರ ಪ್ರಸಾದವಿನಿಯೋಗವಾಗುತ್ತದೆ ಅನಂತರ ವೈಭವದೊಡನೆ ಪ್ರಭುಗಳು ಹಿಂತಿರುಗುತ್ತಾರೆ

೦ ೦ ೦

ಮೈಸೂರಿನಲ್ಲಿ ವಿಜಯದಶಮಿಯ ವೈಭವವನ್ನು ಕಣ್ಣಾರ ನೋಡಿ ಆನಂದಿಸಬೇಕು, ಬರೆದರೆ, ಅದರ ವೈಭವವು ಹೊರಬೀಳದು. ಪ್ರಾಚೀನ ಅರಸರಂತೆಯೇ ಮೈಸೂರಿನ ಪ್ರಭುಗಳೂ ಸಂಸ್ಕೃತಭಾಷಾಪ್ರೇಮಿಗಳು; ಸಂಸ್ಕೃತಿಯ ಪ್ರೇಮಿಗಳು. ಆಕಾರಣದಿಂದಲೇ ದ್ವಾದಶಿಯ ದಿನ ಸಂಸ್ಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ವಾಂಸರಿಗೆ ಸ್ವಹಸ್ತದಿಂದ ಪಾರಿತೋಷಕಗಳನ್ನು ದಯೆಪಾಲಿಸುತ್ತಾರೆ ಮೈಸೂರು ವಿಶ್ವವಿದ್ಯಾನಿಲಯವ ಘಟಿಕೋತ್ಸವಕ್ಕಿಂತ, ಸಂಪೂರ್ಣ ಭಾರತೀಯ ಪದ್ಧತಿಯಂತೆ ನಡೆಯತಕ್ಕ ಈ ಉತ್ಸವವು ನೋಡಬೇಕಾದದ್ದು ಎಷ್ಟೆಲ್ಲೂ ಔಚಿತ್ಯ ಸಂಪ್ರದಾಯ! ಭಾರತೀಯ ಪ್ರಾಚೀನಾರ್ಯರ ಸಂಪ್ರದಾಯವು ಇನ್ನೂ ಉಳಿದಿದೆಯೆಂದರೆ ಮೈಸೂರಿನಲ್ಲಿ; ಅದನ್ನು ನೋಡಬೇಕಾದರೆ ವಿಜಯದಶಮಿಯ ಸಮಯದಲ್ಲಿ ಎಂದು ವಿದೇಶೀಯರು ಹೇಳುವ ಮಾತ್ಕ ಅಕ್ಷರಶಃ ಸತ್ಯ.

ಈ ಉತ್ಸವಗಳೆಲ್ಲ ಆಗುವ ವೇಳೆಗೆ ಕುಲದ ಅಭಿಮಾನ ದೇವತೆ ಚಾಮುಂಡಿಕಾದೇವಿಯ ರಥೋತ್ಸವ ಮಹಾರಾಜರು ತಾವೇ ವಾದಚಾರಿಗಳಾಗಿ ಬಂದು, ದೇವಿಯ ಉತ್ಸವವನ್ನು ನೆರವೇರಿಸುತ್ತಾರೆ ಆಗ ಅವರ ಶ್ರದ್ಧೆ, ಭಕ್ತಿ ಅನುಪಮವಾದದ್ದು. ರಥೋತ್ಸವದನಂತರ ನಡೆಯುವ ತೆಪ್ಪೋತ್ಸವ ವೈಭವವನ್ನು ನೋಡಲು ಎರಡು ಕಣ್ಣು ಸಾಲದು ರಾಜರಾಜೇಶ್ವರಿಯೆನಿಸಿದ ಆ ಚಾಮುಂಡಾಂಬೆಯ ಭಕ್ತರಾದ ಮೈಸೂರರಸರ ಈ ದೈವಭಕ್ತಿ, ಪ್ರಜಾಪ್ರೇಮ, ಪ್ರಾಚೀನ ಮತ್ತು ಪವಿತ್ರ ಗತ ಸಂಸ್ಕೃತಿ ರಕ್ಷಣಾಸಕ್ತಿ ಇವು ಚಿರಕಾಲ ಬೆಳಗಲಿ.

—೦—

ನಾಡಹಬ್ಬದ ಪ್ರಯೋಜನ

ಬರೆದವರು:- ಶ್ರೀಯುತ ಆಲೂರು ವೆಂಕಟರಾಯರು.

ನವರಾತ್ರಿಯ ಹಬ್ಬವನ್ನು ಕರ್ನಾಟಕ ನಾಡ ಹಬ್ಬವನ್ನಾಗಿ ಭಾವಿಸಿ, ಆ ಹಬ್ಬವನ್ನು ಕರ್ನಾಟಕದ ಮುಖ್ಯ ಮುಖ್ಯ ಪಟ್ಟಣಗಳೂ ಈ ಕೆಲವು ವರ್ಷಗಳಿಂದ ಆಚರಿಸುತ್ತ ಬಂದಿರುವವಷ್ಟ ನಾಡಹಬ್ಬವೆಂದರೆ ಅದು ಒಬ್ಬಿಬ್ಬ ಮಹಾಪ್ರಭುಕ್ತಿಗಳ ಹುಟ್ಟಿದ ಹಬ್ಬವಲ್ಲ ಒಂದೆರಡು ಪಟ್ಟಣಗಳಲ್ಲಿ ಹೆಬ್ಬನಲ್ಲಿ, ಇಡೀ ಕರ್ನಾಟಕದ ಹೆಬ್ಬವು ಅದು ಕರ್ನಾಟಕದ ಜೀವನವನ್ನು ಕನ್ನಡಿಗರಲ್ಲಿ ಜಾಗ್ರತಿಗೊಳಿಸುವುದೇ ಆ ಹಬ್ಬದ ಮುಖ್ಯ ಉದ್ದೇಶವು ಆ ಉದ್ದೇಶವು ತೃಪ್ತಿಕರವಾಗಿ ನೆರವೇರಬೇಕಾದರೆ, ಅದನ್ನು ಕರ್ನಾಟಕದಲ್ಲಿರುವ ಸಕಲ ಪಟ್ಟಣಗಳೂ ಊರುಗಳೂ ಹಳ್ಳಿಗಳೂ ಕೂಡ ಆಚರಿಸಬೇಕು ನಾನೆಲ್ಲರೂ ಕನ್ನಡಿಗರು, ನಮ್ಮ ನಾಡು ಕರ್ನಾಟಕ, ಕರ್ನಾಟಕ ದೇವಿಯು ನಮ್ಮ ಇಷ್ಟದೈವತೆ, ಅಥವಾ ನಮ್ಮ ಬಿಂಬ ಮೂರತಿ. ಕರ್ನಾಟಕವು ನವ್ಯಕಾರ್ಯ ಪ್ರವೃತ್ತ ನಾವು ಭಾರತ ಮಾತೆಗೆ ಅರ್ಪಿಸುವ ಸೇವೆಯೆಲ್ಲವೂ ಕರ್ನಾಟಕದ ಮುಖಾಂತರವಾಗಿಯೇ ನಲ್ಲತಕ್ಕದ್ದು ಇವೇ ಮುಂತಾದ ವಿಚಾರಗಳೂ ಪ್ರತಿಯೊಬ್ಬ ಕನ್ನಡಿಗನಲ್ಲಿ ಹುಟ್ಟುವಂತ ಮಾಡುವುದಕ್ಕೆ ಈ ನಾಡಹಬ್ಬಕ್ಕಿಂತ ಹೆಚ್ಚು ಬಳಿತಾದ ಹಬ್ಬವು ಸಿಕ್ಕಲಾರದು ಈ ಹಬ್ಬದಲ್ಲಿ ಪ್ರತಿಯೊಬ್ಬ ಕನ್ನಡಿಗನು ಜಾತಿ, ಮತ ಇಂಥಗಳೆಂಬೀ ಯಾವತ್ತು ಭೇದಗಳನ್ನು ಮರತು ಬೆರೆಯಬಹುದು ಬೆರೆಯಬೇಕು ಇದ ಬ್ರಾಹ್ಮಣರೊಬ್ಬರ ಸೂತ್ರವಲ್ಲ, ಲಿಂಗಾಯಿತರೊಬ್ಬರಿಗೆ ಇವನ್ನು ಗುತ್ತಿಗೆ ಕೊಟ್ಟಿಲ್ಲಿ ಒಕ್ಕಲಿಗರ (ರಡ್ಡಿಜನರು) ಮತದವರೂ ಬ್ಬರೇ ಇದನ್ನು ಆಚರಿಸಬೇಕೆಂದಲ್ಲ ಸಕಲರೂ ಕರ್ನಾಟಕದ ಉದ್ಧಾರವನ್ನು ಸ್ವರ್ಣಗೊಳಿಸುವುದಕ್ಕಾಗಿ ಇದನ್ನು ಆಚರಿಸಬೇಕು ತಮ್ಮಲ್ಲಿ ಕರ್ನಾಟಕತ್ವದ ವ್ಯಾಪಿತವಾದ ಭಾವನೆಗಳನ್ನು ಉದ್ದೀಪಿಸಬೇಕು ತಮ್ಮಲ್ಲಿ ಕರ್ನಾಟಕತ್ವದ ವ್ಯಾಪಿತವಾದ ಭಾವನೆಗಳನ್ನು ಉದ್ದಿಶ್ಯಗೊಳಿಸುವುದೇ ಇದರ ಮುಖ್ಯ ಪ್ರಯೋಜನ. ಈ ಹಬ್ಬದ ಉಪಯೋಗವನ್ನು ಅನೇಕರು ಅನೇಕ ವಿಧದಿಂದ ಮಾಡಿಕೊಳ್ಳಬಹುದು. ಕನ್ನಡ ನುಡಿಯನ್ನು ಪ್ರೀತಿಸುವ ಸಾಹಿತಿಗಳೂ ಈ ಉತ್ಸವದ ಕೆಲವು ದಿನಗಳನ್ನ ಸಾಹಿತ್ಯದ ಉನ್ನತಿಗೆ ಮೀಸಲಾಗಿತೆಗೆಯಬಹುದು ಇತಿಹಾಸ ಸಂಶೋಧಕರು ಐತಿಹಾಸಿಕ ಪರಿಷತ್ತುಗಳನ್ನು ಕೂಡಿಸಿ, ಕನ್ನಡಿಗರ ದೇಹದಾರ್ಢ್ಯದ ವಿಚಾರವನ್ನು ಮಾಡಬಹುದು ಈ ಹಬ್ಬದಲ್ಲಿ ಅನೇಕ ವಿಧದ ಪ್ರದರ್ಶನಗಳನ್ನೇರ್ಪಡಿಸಬಹುದು. ಹೀಗೆ ೯—೧೦ ದಿವಸಗಳಲ್ಲಿ ನಾವು ತುಂಬಾ ಕಾರ್ಯಕ್ರಮಗಳನ್ನು ಇಟ್ಟು ದೇಶೋನ್ನತಿಗೆ ಬೇಕಾಗುವ ಅನೇಕ ಚಟುವಟಿಕೆಗಳಿಗೆ ಚಾಲನ ಕೊಡಬಹುದು ಈ ನಾಡಹಬ್ಬವೆಂದರೆ ಇಡೀ ಕರ್ನಾಟಕದಲ್ಲಿ ಪಾಸಿಸುವ ಸಕಲ ಕನ್ನಡಿಗರ ಹೃದಯಗಳನ್ನು ಕೇಂದ್ರೀಕರಿಸುವ ಹಬ್ಬವು, ಇಷ್ಟು ವ್ಯಾಪಕವಾದ ನಾಡ ಹಬ್ಬವನ್ನು ಕರ್ನಾಟಕದ ಹೊರತಾಗಿ ಯಾವ ಪ್ರಾಂತವೂ ಇನ್ನೂ ಸರಿಗೆ ಆಚರಣೆಯಲ್ಲಿ ತಂದಿರುವುದಿಲ್ಲ ಇದು ನಮ್ಮ ಕರ್ನಾಟಕದ ವೈಶಿಷ್ಟ್ಯವು ಇಂಥ ಹೆಬ್ಬವನ್ನು ಯಾರೂ ಯಾವ ಕಾರಣದಿಂದಲೂ ಮುಗ್ಗಗೊಡದಿತಮ್ಮ ಸ್ವಂತದ್ದೆಂಬುನ್ನತಿಗಾಗಿಯೂ. ತಮ್ಮಲ್ಲಿಯೂ ಭೇದಭಾವಗಳನ್ನು ಕಡಿವೆಮಾಡಿಕೊಳ್ಳುವದಕ್ಕಾಗಿಯೂ, ಸಕಲ ಕನ್ನಡಿರಲ್ಲಿ ಹೃದಯದಲ್ಲಿ ಕರ್ನಾಟಕತ್ವದ ವಿದ್ಯುತ್ಶಕ್ತಿನ್ನು ಸಂಜಲಿಸುವುದಕ್ಕೂ ಉಪಯೋಗಿಸಿಕೊಳ್ಳಬೇಕೆಂದೂ ನಾನಿ ನಾನಿ ಹೇಳುವುದೇ ಕನ್ನಡಿಗರೆಲ್ಲರಿಗೂ ನಾನು ಕೊಡುವ ಮುಖ್ಯ ಸಂದೇಶವು

ಶ್ರೀಯುತ ಸಿ ವೆಂಕಟಪ್ಪನವರ ತಂಪ ಶ್ರೀ ವೆಂಕಟಗೌಡರು ಇದೇ ತಿಂಗಳು ೧೪ನೇ ತಾ। ರವಿವಾರ ಸಮಾನ್ನ ಸ್ವಗೃಹದಲ್ಲಿ ಸ್ವರ್ಗವಾಸಿಗಳಾದರೆಂದು ತಿಳಿಸಲು ವ್ಯಸನಪಡುವೆವು

ವಿಜಯ ದಶಮಿ

—ಶ್ರೀ—

(ಭೋಗ ಷಟ್ಪದಿ)

ವಿಜಯ ದಶಮಿ ಬಂದುದೀಗ।
ವಿಜಯ ದಶಮಿ ಬರ್ಪುದೀಗ।
ಸುಜನರೆಲ್ಲ ನಾಡಹಬ್ಬವೆಂದು
ಹರ ಷದಿ ॥

ಭಜಿಸುತಿಹರು ಹಾಡುತಿಹರು।
ವಿಜಯವಾಗಲೆಮ್ಮ ಜನಕೆ।
ಭುಜಗಭೂಷಣ ಪರಮ ಶಿವನ ಕೃಪೆ
ಯೊಳೆನ್ನುತ ॥೧॥

ಅಂದು ವಿಜಯ, ಕುರು ನೃಪತಿಯು।
ಮಂದಮತಿಯ ತ್ರುರು ಕುಲವನು।
ಬಂಧಿಸಿರಲು, ಬಿಡಿಸಲವನು ದಶಮಿ
ದಿನದೊಳು ॥

ಸಂದ ವಿಜಯ ಯಾತ್ರೆ ವೈರಡ।
ಲಂದಿನಿಂದ ವಿಜಯ ದಶಮಿ।
ಯೆಂದು, ಶುಭದ ಪೆಸರು ಜಗದೆ
ರೂಢಿಯಾದುದು ॥೨॥

ಧೀರ ವಿಜಯ ನಗರದವರು।
ಭೂರಿ ವಿಭವದಿಂದಲಿದನು।
ಸಾರಿ ವಿಜಯದಶಮಿಯೆಂದು ನಡೆ
ಸುತಿರ್ದರು ॥

ಧೀರತನವನೀಯಲೆಮ್ಮ।
ವೀರ ಕನ್ನಡಿಗರಿಗೆನುತ।
ಮಾರಹರನ ಹಂಪೆಯಂಸ ಶಿವನ
ಪಾಡುತ ॥೩॥

—ಕವಿ ' ಶೂಲಪಾಣಿ '

ತಿದ್ದುಪಡಿ

" ವಿಜಯ ದಶಮಿ " ಎಂಬ ಲೇಖನವು, ಟಿನೆಯ ಸಂಚಿಕೆಯಿಂದ ೨೦ ನೆಯ ಪುಟಕ್ಕೆ ಮುಂದುವರಿದಿದೆ



ಬೆಳಗಾವಿಯ ಶ್ರೀವೀರಭದ್ರೇಶ್ವರ ಪ್ರೌಢಶಾಲೆಯಲ್ಲಿ ನೂತನವಾಗಿ ನಿರ್ಮಿಸಿರುವ ಸಭಾಭವನದ ಮುಂಭಾಗ

ಪ್ರಗತಿಪರ ಮೈಸೂರು

ಲೇಖಕರು:— ಶ್ರೀ ಪಿ. ಆರ್. ವೆಂಕಟೇಶನ್, ಪತ್ರಿಕೋದ್ಯಮಿ. ಬೆಂಗಳೂರು.

ವೈಸೂಂನ ಮಹಾಪ್ರಭುಗಳಾದ ಶ್ರೀ ಮನ್ನಾಲ್ವಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಳಳ ವರ್ಷಗಳಿಂದ ರಾಜ್ಯಾಡಳಿತವನ್ನು ನಿರ್ವಹಿಸಿ, ಮೈಸೂರಿಗೆ ಮಾದರಿ ಸಂಸ್ಥಾನವೆಂಬ ಕೀರ್ತಿಯನ್ನು ಗಳಿಸಿಕೊಟ್ಟಿದ್ದಾರೆ. ಬ್ರಿಟಿಷ್ ರಾಜಕಾರಣ ಚತುರರೂ ಮೈಸೂರು ಸಂಸ್ಥಾನವನ್ನು ಮಾದರೀ ಸಂಸ್ಥಾನವೆಂದು ಕರೆದಿದ್ದಾರೆ. ಮೈಸೂರಿನ ಪ್ರಜಾ ಸಂಖ್ಯೆಯು ೭೦ ಲಕ್ಷ. ಮೈಸೂರು ಸಂಸ್ಥಾನವು ಬ್ರಿಟಿಷ್ ಭಾರತದಲ್ಲಿಯ ಪ್ರಗತಿ ಪಥದಲ್ಲಿ ದಾವಿಸಿಕೊಂಡು ಮುಂದುವರಿದಿದೆ. ಭಾರತವು ವಿದ್ಯುಚ್ಛಕ್ತಿಯನ್ನು ಉಪಯೋಗಿಸುವ ಮೊದಲೇ ಮೈಸೂರು ಸಂಸ್ಥಾನವು ರಾಗರಂಜಿತವಾದ ವಿದ್ಯುದ್ದೀಪಗಳಿಂದ ರಾರಾಜಿಸುತ್ತಿದೆ. ಮೈಸೂರು ಶ್ರೀಗಂಧದ ಸಾಬೂನು, ಕಾಗದ, ಭದ್ರಾವತಿಯಲ್ಲಿ ತಯಾರಾಗುವ ಕಬ್ಬಿಣ ಮತ್ತು ಉಕ್ಕು, ಮಂಡ್ಯದ ಸಕ್ಕರೆ ಮೊದಲಾದ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸುತ್ತಿದ್ದಾರೆ. ಸಂಸ್ಥಾನದ ಎಲ್ಲಾ ಹಳ್ಳಿಗಳೂ (೧೬೫೦) ವಿದ್ಯುದ್ದೀಪಗಳಿಂದ ರಾರಾಜಿಸುತ್ತಿರಬೇಕೆಂಬುದು ನಮ್ಮ ಈಗಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರ ಆಶಯವಾಗಿದೆ. ಈ ಆಶಯವು ಶೀಘ್ರದಲ್ಲಿಯೇ ಈಡೇರುವುದೆಂದು ನಂಬಲಾಗಿದೆ. ನಮ್ಮ ಮೈಸೂರು ಸಂಸ್ಥಾನವು ಕೈಗಾರಿಕಾ ಪ್ರಗತಿಯಲ್ಲಿ ಇಷ್ಟು ಮುಂದುವರಿದಿರುವುದಕ್ಕೆ ನಮ್ಮ ಮಹಾಪ್ರಭುಗಳಾದ ಶ್ರೀಮನ್ ಮಹಾರಾಜರವರ ಮತ್ತು ಸಚಿವ ಶ್ರೇಷ್ಠರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರ ಉತ್ಸಾಹವೇ ಮುಖ್ಯ ಕಾರಣವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ನಮ್ಮ ಮಹಾಪ್ರಭುಗಳು ರಾಜ್ಯಾಡಳಿತದಲ್ಲಿ ಪ್ರಜೆಗಳಿಗೆ ಜವಾಬ್ದಾರಿಯನ್ನು ಕೊಡುತ್ತಿರುವರು. ಪ್ರಜಾಪ್ರತಿನಿಧಿಗಳನ್ನೊಳಗೊಂಡ ನ್ಯಾಯವಿಧಾಯಕ ಸಭೆಯಿರುವುದು. ಈ ಸಭೆಗೆ ದಿವಾನ್ ಸಾಹೇಬರವರು ಅಧ್ಯಕ್ಷತೆ ವಹಿಸುವರು. ಜನರ ಕಷ್ಟ ಸುಖಗಳು ಸರ್ಕಾರದವರ ಮನಕ್ಕೆ ಬರಲು ಪ್ರಜಾಪ್ರತಿನಿಧಿ ಸಭೆಯಿರುವುದು ಈ ಸಭೆಯು ಪ್ರಭುಗಳ ವರ್ಧಂತ್ಯುತ್ಸವ ಕಾಲದಲ್ಲಾಗಲಿ ನವರಾತ್ರಿ ಮಹೋತ್ಸವ ಕಾಲದಲ್ಲಿಯಾಗಲಿ ಮೈಸೂರಿನಲ್ಲಿ ನಡೆಯುವುದು ದಿವಾನರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸುವರು. ಮಹಾಪ್ರಭುಗಳು ಸಾರ್ವಜನಿಕರಿಗೆ ಉಪಯುಕ್ತವಾದ ಕಾರ್ಯಗಳಿಗೆ ವಿಶೇಷವಾಗಿ ಹಣವನ್ನು ವೆಚ್ಚಮಾಡುತ್ತಿರುವರು. ನಗರ ಸೌಂದರ್ಯದ ಕಡೆಗೆ ಪ್ರಭುಗಳ ಮತ್ತು ದಿವಾನ್ ಸಾಹೇಬರವರ ಸರ್ ಮಿರ್ಜಾ ಇಸ್ಮಾಯಿಲ್‌ರವರ ಗಮನವು ವಿಶೇಷವಾಗಿದೆ ಇದಕ್ಕೆ ನಮ್ಮ ರಾಜಧಾನಿಯಾದ ಮೈಸೂರು ಮತ್ತು ಬೆಂಗಳೂರು ನಗರಗಳ ಸೌಂದರ್ಯವೇ ಮುಖ್ಯ ಉದಾಹರಣೆಯಾಗಿದೆ

ಆದರ್ಶಸಚಿವಶ್ರೇಷ್ಠರು

ಈಗಿನ ದಿವಾನ್ ಸಾಹೇಬರವರು ಮಹಮ್ಮದೀಯರು. ಮಹಾಪ್ರಭುಗಳು ಸರ್ ಮಿರ್ಜಾ ಇಸ್ಮಾಯಿಲ್‌ರವರನ್ನು ತಮ್ಮ ಸಚಿವ ಶ್ರೇಷ್ಠರನ್ನಾಗಿ ಮಾಡಿಕೊಂಡು ಮತ ಸಹನೆಯನ್ನು ವ್ಯಕ್ತಪಡಿಸಿದ್ದಾರೆ. ಇದು ತುಂಬಾ ಪ್ರಶಂಸನೀಯವಾದದು. ಮೈಸೂರು ಸಂಸ್ಥಾನದ ಪ್ರಜೆಗಳ ಪ್ರೀತಿಯು ಗಮನಾರ್ಹವಾದುದು ಮತ್ತು ಪ್ರಶಂಸನೀಯವಾದುದು.

ಮುಖ್ಯ ಸಚಿವರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ನಮ್ಮ ಪ್ರಭುಗಳಂತೆಯೇ ವಿಶಾಲವಾದ ಮನೋಧರ್ಮದಿಂದ ಪ್ರಗತಿಪರ ದೃಷ್ಟಿಯುಳ್ಳವರಾಗಿರುವರು. ಭಾರತ ಮುಖಂಡರಾದ ಮಹಾತ್ಮಾಗಾಂಧಿಯವರ ಮಿತ್ರರು. ಮೈಸೂರು ಸಂಸ್ಥಾನದ ೭೦ ಲಕ್ಷ ಪ್ರಜೆಗಳ ಮತ್ತು ಮುಖ್ಯವಾಗಿ ಭಾರತದ ಮತ್ತು "ಪ್ರಪಂಚ"ದಲ್ಲಿರುವ ೧೩೦ ಕೋಟಿ ಪ್ರಜೆಗಳ ಪ್ರೀತಿಯನ್ನು ಸರ್ ಮಿರ್ಜಾರವರು ತಮ್ಮ ಸಹಜವಾದ ಮುಗುಳು ನಗೆಯಿಂದಲೂ ಮತ್ತು ಸರಳವಾದ ಮಾತಿನಿಂದಲೂ ಸಂಪಾದಿಸಿದ್ದಾರೆ ಫೆಡರಲ್ ಯೋಜನೆಯಲ್ಲಿ ದೇಶೀಯ ಸಂಸ್ಥಾನಗಳೂ ಬ್ರಿಟಿಷ್ ಭಾರತವೂ ಏಕೀಭವಿಸಿದಾಗ ಸರ್ ಮಿರ್ಜಾ ಇಸ್ಮಾಯಿಲ್‌ರವರಿಗೆ ಉನ್ನತ ಅಧಿಕಾರವು ದೊರೆಯುವುದೆಂಬ ನಂಬಿಕೆಯು ನನಗೆ ಇದೆ. ಆಗ ಅವರ ಕೀರ್ತಿಯು ಇನ್ನೂ ಅಗಾಧವಾಗುವುದು.

ಪ್ರಜೆಗಳ ಹಿತವನ್ನು ಸಾಧಿಸುವವರು

ಮೈಸೂರು ಸಂಸ್ಥಾನದಲ್ಲಿ ಕೋಮುವಾರು ಗಲಭೆಗಳು ಇಲ್ಲವೇ ಇಲ್ಲವೆಂದು ಹೇಳಬಹುದು ಮೈಸೂರು ಆಡಳಿತವು ಎಲ್ಲರಿಗೂ ಆದರ್ಶಪ್ರಾಯವಾಗಿದೆ. ಇಂಡಿಯ್ ನ್ಯಾಷನಲ್ ಕಾಂಗ್ರೆಸ್ಸಿನ ಎಲ್ಲ ನಾಯಕರುಗಳೂ ಪಂಡಿತ ಜವಹರಲಾಲ್ ನೆಹರೂರವರು, ಶ್ರೀ ಸಭಾಷ್ ಬಾಬುರವರು, ಮಹಾತ್ಮಾ ಗಾಂಧಿಯವರೂ ಕಾಂಗ್ರೆಸ್ ಮಂತ್ರಿಗಳೂ ಸರದಾರ್ ವಲ್ಲಭಾಯಿ ಪಟೇಲರೂ ಪಟ್ಟಾಭಿ ಸೀತಾರಾಮಯ್ಯನವರೂ ಮೊದಲಾದವರೂ ಮೈಸೂರಿನ ಆಡಳಿತವನ್ನು ಪ್ರಶಂಸಿಸಿರುವರು. ಸರ್ಕಾರೀ ಅಧಿಕಾರಿಗಳ ಸೇವಾಕಾಂಕ್ಷೆಯು ಪ್ರಶಂಸನೀಯವಾದುದು ಮೈಸೂರು ಸಂಸ್ಥಾನಕ್ಕೆ ಬೆನ್ನೆಲುಬಾಗಿರುವ ರೈತರಿಗೆ ಬೇಕಾದ ನಾನಾ ರೀತಿಯ ಸೌಲಭ್ಯಗಳನ್ನು ದಿವಾನರೂ, ಸಚಿವರುಗಳೂ ಮತ್ತು ಸರ್ಕಾರಿ ಅಧಿಕಾರಿಗಳೂ ಬಹಳ ಸಂತೋಷದಿಂದಲೂ, ಉತ್ಸಾಹದಿಂದಲೂ ನಿರ್ವಹಿಸುತ್ತಿರುವರು. ಮೈಸೂರು ಸಂಸ್ಥಾನಕ್ಕೆ ಬಂದು ಹೋದವರೂ, ಮತ್ತು ನಮ್ಮ ಸಂಸ್ಥಾನದ ಪ್ರಗತಿಯ ವಿಷಯವನ್ನು ಕೇಳಿದವರೂ ನಮ್ಮ ಪ್ರಭುಗಳನ್ನೂ ಮತ್ತು ಸಚಿವ ಶ್ರೇಷ್ಠರನ್ನೂ ಮೈಸೂರಿನ ಸೊಬಗನ್ನೂ ಅಧಿಕಾರಿಗಳ ಸೇವಾಕಾಂಕ್ಷೆಯನ್ನೂ ಕೊಂಡಾಡುತ್ತಿರುವುದು.-ಇಂದು ಮೈಸೂರಿನ ೭೦ ಲಕ್ಷ ಪ್ರಜೆಗಳಿಗೆ ಮಾತ್ರವಲ್ಲದೆ ಇಡೀ ಕರ್ನಾಟಕದಲ್ಲಿರುವವರಿಗೂ ಹೆಮ್ಮೆಯುಂಟುಮಾಡುವ ವಿಷಯವಾಗಿದೆ

ಮೈಸೂರಿನ ಪ್ರಭುವರ್ಯರು ಭಾರತದಲ್ಲಿರುವ ೬೦೦ ದೇಶೀಯ ಸಂಸ್ಥಾನದಲ್ಲಿರುವ ನರೇಂದ್ರರುಗಳಂತೆ ವಿಹಾರ ಸ್ಥಳಗಳಲ್ಲಿ ತಮ್ಮ ಹೆಚ್ಚು ಕಾಲವನ್ನು ಕಳೆಯದೆ ಪ್ರಜೆಗಳ ಪ್ರೀತಿಯನ್ನೂ ವಿಶ್ವಾಸವನ್ನೂ ಸಂಪಾದಿಸಲು ಪ್ರಯತ್ನಿಸುತ್ತಿರುವರು. ಇದಕ್ಕೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು.

ನಮ್ಮ ಶ್ರೀಮನ್ ಮಹಾರಾಜರವರೂ ಯೂರೋಪು ಖಂಡದ ನಾನಾ ಭಾಗಗಳಲ್ಲಿ ಒಂದೇ ಒಂದು ಬಾರಿ ನಮ್ಮ ದಿವಾನ್ ಸಾಹೇಬರೊಡನೆಯೂ ಮತ್ತು ಇತರ ಪರಿವಾರದೊಡನೆಯೂ ಸಂಚರಿಸಿ ವಿಶೇಷ ಅನುಭವವನ್ನು ಪಡೆದಿರುವರು. ನಮ್ಮ ಪ್ರಭುಗಳ ವಿಷಯದಲ್ಲಿ ಇಂಗ್ಲೆಂಡಿನ ಪ್ರಜೆಗಳಲ್ಲಿಯೂ ಮತ್ತು ಯೂರೋಪು ಖಂಡದ ಪ್ರಜೆಗಳಲ್ಲಿಯೂ ಇರುವ ಭಕ್ತಿ ವಿಶ್ವಾಸಗಳು ಅಪಾರವಾಗಿವೆ. ನಮ್ಮ ಪ್ರಭುಗಳಿಗೆ ಅವರು 'ರಾಜಋಷಿಗಳು' ಎಂಬ ಬಿರುದನ್ನು ದಯಪಾಲಿಸಿರುವರು. (ಸೇಂಟ್ಸ್ ರೂಲರ್) ಯೂರೋಪಿನಲ್ಲಿ ನವ್ಯ ಮಹಾಪ್ರಭುಗಳಿಗೆ ಯಾವ ರೀತಿಯ ಸ್ವಾಗತವು ದೊರೆಯಿತೆಂಬ ವಿಷಯವು ನಮ್ಮ ಸಂಸ್ಥಾನದಲ್ಲಿ ಪ್ರಕಟವಾದ "ಪ್ರಭ.ವರ್ಯರ ಯೂರೋಪು ಪ್ರವಾಸ" ಎಂಬ ಪುಸ್ತಕದಿಂದ ಗೊತ್ತಾಗುವುದು. ಇಂಗ್ಲೆಂಡಿನ ವೃತ್ತಪತ್ರಿಕೆಗಳು ನಮ್ಮ ಮಹಾರಾಜರವರ ವಿಷಯದಲ್ಲಿಯೂ ಮತ್ತು ನಮ್ಮ ದಿವಾನರ ವಿಷಯದಲ್ಲಿಯೂ ಅಪಾರವಾದ ಗೌರವವನ್ನು ಸೂಚಿಸಿದವು. ನಮ್ಮ ಪ್ರಭುಗಳೊಡನೆ ನಮ್ಮ ಶ್ರೀಮದ್ಯುವರಾಜರವರೂ ಸಹ ದಯಮಾಡಿಸಿದ್ದುದು ನಮ್ಮ ಪ್ರಭುಗಳಿಗೆ ಅನುಭವ ಪಡೆಯಲು ಹೆಚ್ಚು ಸಹಾಯವಾಯಿತೆಂದರೆ ಅತಿಶಯೋಕ್ತಿಯಾದೀತೆಲ್ಲ. ನಮ್ಮ ಪ್ರಭುಗಳ ವಿಷಯದಲ್ಲಿ ಚಕ್ರವರ್ತಿ ಸಾರ್ವಭೌಮರೂ ಮೇರೀ ಮಹಾರಾಣಿಯವರೂ ತೋರಿಸಿದ ವಿಶ್ವಾಸಗಳನ್ನು ನಿವರಿಸಲು ಬರೆವಣಿಗೆಯಿಂದ ಸಾಧ್ಯವಿಲ್ಲ ಅಂತೂ ನಮ್ಮ ಪ್ರಭುಗಳಿಗೆ ವಿಶೇಷ ರೀತಿಯ ಸ್ವಾಗತವು ಯೂರೋಪಿನ ಎಲ್ಲ ಕಡೆಗಳಲ್ಲಿಯೂ ದೊರೆಯಿತು.

ಶ್ರೀಮದ್ಯುವರಾಜರವರು

ನಮ್ಮ ಶ್ರೀಮದ್ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್‌ರವರಿಗೆ ವಿಶೇಷ ಅನುಭವ ವಿದೆ. ಅವರು ಸುಮಾರು ೮-೧೦ ಬಾರಿ ಯೂರೋಪಿನ ನಾನಾ ಭಾಗಗಳಲ್ಲಿಯೂ ಮತ್ತು ಪ್ರಪಂಚದ ನಾನಾ ಭಾಗಗಳಲ್ಲಿಯೂ ಸಂಚರಿಸಿ ಆಡಳಿತದಲ್ಲಿ ವಿಶೇಷ ರೀತಿಯ ಅನುಭವವನ್ನು ಪಡೆದಿರುವುದು ನಮ್ಮ ಸಂಸ್ಥಾನದ ಪ್ರಜೆಗಳಿಗೆ ವಿಶೇಷ ಸಹಾಯವಾಗಿದೆ. ನಮ್ಮ ಶ್ರೀಮದ್ಯುವರಾಜರವರು ಯೂರೋಪಿನ ನಾನಾ ಭಾಗಗಳಲ್ಲಿ ಪ್ರಜೆಗಳಿಗೆ ಯಾವ ರೀತಿಯ ಸೌಲಭ್ಯಗಳನ್ನು ಅಲ್ಲಿಯ ಸರ್ಕಾರಗಳು ಕಲ್ಪಿಸಿಕೊಟ್ಟಿವೆಯೆಂಬುದನ್ನು ತಿಳಿದು ಮೈಸೂರು ಸಂಸ್ಥಾನದಲ್ಲಿ ಇದಕ್ಕಿಂತಲೂ ನೂರು ಪಾಲು ಹೆಚ್ಚಾಗಿ ಸೌಕರ್ಯವು, ನಮ್ಮ ಮೈಸೂರು ಸಂಸ್ಥಾನದ ಪ್ರಜೆಗಳಿಗೆ ಉಂಟಾಗಬೇಕೆಂಬ ಇಚ್ಛೆಯು ಅವರಲ್ಲಿರುವುದು ಈ ವಿಶ್ವಾಸವನ್ನು ಅವರು ತಮ್ಮ ಅನೇಕ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ ಇದಕ್ಕಾಗಿ ಶ್ರೀಮದ್ಯುವರಾಜರವರು ತಮ್ಮ ಕೈಲಾದ ಸಹಾಯವನ್ನು ಮಾಡುತ್ತಿರುವರು ಶ್ರೀಮದ್ಯುವರಾಜರವರಿಗೆ ನಮ್ಮ ಪ್ರಭುಗಳ ವಿಷಯದಲ್ಲಿ ಅಪಾರವಾದ ಭಕ್ತಿವಿಶ್ವಾಸವಿದೆ. ಈ ನಿಜಾರವು ಶ್ರೀಮದ್ಯುವರಾಜರವರು ತಮ್ಮ ಕುಮಾರರೊಡನೆಯೂ ಮತ್ತು ರಾಜಪುನೆತನದವರೊಡನೆಯೂ ಯೂರೋಪಿನ ನಾನಾ ಭಾಗಗಳಲ್ಲಿ ಹಡಗು ಹತ್ತುವ ಮುನ್ನ ಬೊಂಬಾಯಿನ ರೇಡಿಯೋ ಸ್ವೀಪಸ್ಸಿನಿಂದ ಮಾಡಿದ ಭಾಷಣದಿಂದ ವ್ಯಕ್ತವಾಗುವುದು ಸಂಸ್ಥಾನದ ಪ್ರಜೆಗಳಿಗೆ ಶ್ರೀಮದ್ಯುವರಾಜರವರ ವಿಷಯದಲ್ಲಿ ಅಪಾರವಾದ ಭಕ್ತಿ ಇದೆ. ಶ್ರೀಮದ್ಯುವರಾಜರವರಿಗೆ ತಮ್ಮ ಪ್ರಜೆಗಳ ಸೇವೆ ಎಂದರೆ ಬಹಳ ಇಷ್ಟ. ಅದರಂತೆಯೇ ನಮ್ಮ ಶ್ರೀಮದ್ಯುವರಾಜ ಕುಮಾರಾದಿ ಶ್ರೀ ಜಯಚಾಮರಾಜ ಒಡೆಯರಲ್ಲಿಯೂ ಸಂಸ್ಥಾನದ ಪ್ರಜೆಗಳಿಗೆ ವಿಶೇಷವಾದ ಪ್ರೀತಿವಿಶ್ವಾಸವಿರುವುದು.

ಶ್ರೀಮದ್ಯುವರಾಜ ಕುಮಾರರು

ಶ್ರೀಮದ್ಯುವರಾಜ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರು ನಮ್ಮ ಸಂಸ್ಥಾನದ ಮುಂದಿನ ಆಳರಸರು. ಅವರು ಈಗಾಗಲೇ ಆಡಳಿತ ಶಿಕ್ಷಣ ಪಡೆಯುತ್ತಿರುವರು. ಅವರು ಮಂಡ್ಯ ಮತ್ತು ಚಾಮರಾಜನಗರ, ನಂಜನಗೂಡು, ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಜನರ ಕಷ್ಟ ಸುಖಗಳನ್ನು ವಿಚಾರಿಸಿದರು.

ಶ್ರೀಜಯಚಾಮರಾಜ ಒಡೆಯರವರ ಲ್ಲಿಯೂ ಪ್ರಜೆಗಳಿಗೆ ಅಚಲವಾದ ಭಕ್ತಿ ವಿಶ್ವಾಸವಿದೆ. ಅವರು ಆಡಳಿತದಲ್ಲಿ ಶಿಕ್ಷಣ ಪಡೆಯಲು ಕೊಂಚಕಾಲ ಜಪಾನ್ ದೇಶ ದಲ್ಲಿ ಸಂಚರಿಸಿ ಬಂದರು. ಇನ್ನೂ ಹೆಚ್ಚು ಆಡಳಿತ ಶಿಕ್ಷಣಪಡೆದು ಬರಲು ತಮ್ಮ ಮಾತಾ ಪಿತೃಗಳೊಡನೆಯೂ, ಮತ್ತು ಬಂಧು ಮಿತ್ರರೊಡನೆಯೂ, ಯೂರೋಪ್ ಖಂಡದ ನಾನಾ ಭಾಗಗಳಲ್ಲಿ ಸಂಚರಿಸಲು ಪ್ರಯಾಣ ಮಾಡಿರುವರು. ಶ್ರೀಜಯಚಾಮರಾಜಒಡೆಯರಿಗೂ ಸಹ ಮಹಾ ಪ್ರಭುಗಳಲ್ಲಿ ವಿಶೇಷವಾದ ಭಕ್ತಿಯಿದೆ. ಇವರನ್ನು ನವರಾತ್ರಿಮಹೋತ್ಸವಕಾಲದ ಲ್ಲಿಯೂ, ಮತ್ತು ವರ್ಧಂತ್ಯುತ್ಸವ ಕಾಲದಲ್ಲಿಯೂ, ನೋಡಬಹುದು.

ಪ್ರಭುಗಳ ದರ್ಶನ

ಮಹಾಪ್ರಭುಗಳ ದರ್ಶನವು ಬಹಳ ಸುಲಭವಾಗಿ ದೊರೆಯುವುದು. ಮೈಸೂರಿಗೆ ಬಂದು ತೋಗುವವರು ನಮ್ಮ ಶ್ರೀಮನ್‌ಮಹಾರಾಜರವರ ದರ್ಶನವನ್ನು ಪಡೆದೇ ಹೋಗುವರು. ಪ್ರಭುಗಳು ಎಲ್ಲರೊಡನೆಯೂ ಸರಳವಾಗಿಯೂ, ಪ್ರೀತಿಯಿಂದಲೂ ಮಾತನಾಡುವರು. ಅವರು ತಾವೇ ಮೋಟಾರನ್ನು ನಡೆಸಿಕೊಂಡು ನಗರದ ನಾನಾ ಭಾಗಗಳಲ್ಲಿ ಸಂಚರಿಸಿ ಜನರ ಕಷ್ಟ ಸುಖಗಳನ್ನು ತಿಳಿಯುತ್ತಿರುವರು. ಶ್ರೀಮನ್ ಮಹಾರಾಜರವರು ವಿದ್ಯಾವಂತರು, ಸಂಗೀತಾಭಿಮಾನಿಗಳು ಅವರ ಆಸ್ಥಾನದಲ್ಲಿ ಅನೇಕ ವಿದ್ವಾಂಸರುಗಳೂ ಮತ್ತು ಪ್ರಸಿದ್ಧ ಸಂಗೀತಗಾರರೂ ಇರುವರು. ಕಲೆಯಲ್ಲಿ ಪ್ರಭುಗಳಿಗೆ ಅಭಿರುಚಿ ಹೆಚ್ಚು. ಇದು ಮೈಸೂರು ಅರಮನೆಯನ್ನು ನೋಡುವುದರಿಂದ ವ್ಯಕ್ತವಾಗುವುದು, ಮೈಸೂರು ಅರಮನೆಯ ಹಿಂದಿನಕಾಲದ ವೀರರ ಚರಿತ್ರೆಯಿಂದಲೂ ಮಹಾರಾಜಾಧಿರಾಜರ ಚಿತ್ರಗಳಿಂದಲೂ ಅಲಂಕೃತವಾಗಿರುವುದು. ಅರಮನೆಯ ವೈಖರಿಯು ಬಹಳ ಪ್ರಶಂಸನೀಯವಾದುದು. ಮೈಸೂರುಅರಮನೆಯನ್ನು ಪ್ರತಿಯೊಬ್ಬರೂ ನೋಡಬೇಕಾದುದು 'ಇದರ ವೈಭವವು ನವರಾತ್ರಿ ಮಹೋತ್ಸವ ಮತ್ತು ವರ್ಧಂತ್ಯುತ್ಸವಗಳಲ್ಲಿ ವ್ಯಕ್ತವಾಗುವುದು.

ಮೈಸೂರಿನಲ್ಲಿ ವಿಶೇಷ ರೀತಿಯ ಸೌಲಭ್ಯಗಳು

ಮೈಸೂರು ಸಂಸ್ಥಾನವು "ಉದ್ಯಾನವನಗಳ ಸಂಸ್ಥಾನ" ವೆಂದುಖ್ಯಾತಿಪಡೆದಿದೆ ಮೈಸೂರಿನ ಪ್ರಜೆಗಳು ಸತ್ಯಶೀಲರು ಸಂಸ್ಥಾನದ ಸಂಪದಭಿವೃದ್ಧಿಗೆ ಪ್ರಜೆಗಳೂ ಸರ್ಕಾರದ ಅಧಿಕಾರಿಗಳೊಡನೆ ಸಹಕರಿಸಿ ಕೆಲಸಮಾಡುತ್ತಿರುವರು. ಸಂಸ್ಥಾನದಲ್ಲಿ ಹರಿಜನರಿಗೆ ವಿಶೇಷ ರೀತಿಯ ಸೌಕರ್ಯಗಳನ್ನು ಏರ್ಪಡಿಸಿರುವರು ಇದಕ್ಕಾಗಿ ಒಂದು ಸಲಹಾ ಸಮಿತಿಯನ್ನು ಮೈಸೂರು ಸರ್ಕಾರದವರು ನೇಮಿಸಿರುವರು. ಈ ಸಮಿತಿಯಲ್ಲಿ ಸುಮಾರು ಹತ್ತು ಮಂದಿ ಸದಸ್ಯರಿರುವರು. ಶ್ರೀಮನ್‌ಮಹಾರಾಜರವರ ದರ್ಬಾರಿನಲ್ಲಿ ಭಾಗವಹಿಸಲು ಪ್ರಭುಗಳು ಹರಿಜನರಿಗೆ ಅಪ್ಪಣೆಯಿತ್ತಿರುವರು. ಹರಿಜನರಿಗೆ ಪ್ರಭುಗಳಲ್ಲಿಯೂ ಮತ್ತು ಸಚಿವ ಶ್ರೇಷ್ಠರಾದ ಸರ್. ಮಿರ್ಜ ಎಂ. ಇಸ್ಮಾಯಿಲ್ ರವರಲ್ಲಿಯೂ ಇರುವ ಪ್ರೀತಿಯು ಅತೀವ ವಾದುದು. ಹರಿಜನರ ಆರೋಗ್ಯ ವಿಚಾರದಲ್ಲಿ ವಿಶೇಷ ರೀತಿಯ ಏರ್ಪಾಡನ್ನು ಸಚಿವಶ್ರೇಷ್ಠರು ಏರ್ಪಡಿಸಿರುವರು. ಹರಿಜನರ ಅಭಿವೃದ್ಧಿಗಾಗಿಯೇ ಮಧ್ಯವಾನ ನಿರೋಧ ಕಾರ್ಯವನ್ನು ವಿಶೇಷವಾಗಿ ಆಚರಣೆಗೆ ತರುತ್ತಿರುವರು. ಮಧ್ಯಪಾನ ನಿರೋಧ ಕಾರ್ಯದಲ್ಲಿ ನಮ್ಮ ಘನ ಸರ್ಕಾರದವರು ಮದರಾಸು ಸರ್ಕಾರದೊಡನೆವಿಶೇಷವಾಗಿಸಹಕರಿಸುತ್ತಿರುವರು. ಹರಿಜನರ ಏಳಿಗೆಯ ವಿಚಾರದಲ್ಲಿ ಮೊಟ್ಟಮೊದಲು ನಮ್ಮ ಶ್ರೀಮದ್ಯುವರಾಜರವರು ಪ್ರಯತ್ನಿಸಿದ್ದರು. ಹರಿಜನರು ನಮ್ಮ ಶ್ರೀಮದ್ಯುವರಾಜರವರನ್ನು ನಾನಾ ವಿಧವಾಗಿ ಸ್ತುತಿಸುತ್ತಿರುವರು. ಸಂಸ್ಥಾನದ ಆರೋಗ್ಯವನ್ನು ಕಾಪಾಡಲು ನಮ್ಮ ಘನಸರ್ಕಾರದವರೂ ಮತ್ತು ಪ್ರಜೆಗಳೂ ವಿಶೇಷವಾಗಿ ಪ್ರಯತ್ನಿಸುತ್ತಿರುವರು. ಇದು ತುಂಬಾ ಪ್ರಶಂಸನೀಯವಾದುದಾಗಿದೆ.

ಸಂಸ್ಥಾನದಲ್ಲಿ ಗ್ರಾಮ ಪುನರುಜ್ಜೀವನ ಕಾರ್ಯಗಳು

ಮೈಸೂರು ಸಂಸ್ಥಾನದಲ್ಲಿ ಗ್ರಾಮ ಪಂಚಾಯಿತಿಗಳು ಬಹಳ ಸಮರ್ಪಕವಾಗಿಯೂ, ಪ್ರಶಂಸನೀಯವಾಗಿಯೂ ಕೆಲಸಮಾಡುತ್ತಿದೆ. ಗ್ರಾಮ ಪುನರುಜ್ಜೀವನ ಕಾರ್ಯದಲ್ಲಿ ಮೈಸೂರು ಘನ ಸರಕಾರದವರು ಅತಿಶಯವಾದ ಆಸಕ್ತಿಯನ್ನು ತೋರಿಸುತ್ತಿರುವರು. ಮಾದರಿ ಗ್ರಾಮಗಳಲ್ಲಿ ಪಂಚಾಯಿತಿಹಾಲ್, ಉತ್ತಮವಾದ ಕೊಳಾಯಿ ನೀರಿನ ಸರಬರಾಯಿ ಮತ್ತು ಮಾದರೀ ಮನೆಗಳೂ ಏರ್ಪಟ್ಟಿರುವುವು. ಇವುಗಳನ್ನು ನೋಡುವುದರಿಂದ ಮನಸ್ಸಿಗೆ ಒಂದು ರೀತಿಯ ಆನಂದವುಂಟಾಗುವುದು ಗ್ರಾಮಸ್ಥರ ಮನೋರಂಜನೆಗೆ ರೇಡಿಯೋ ಸೌಕರ್ಯವನ್ನು ನಮ್ಮ ಘನ ಸರ್ಕಾರದವರು ಏರ್ಪಡಿಸಿರುವುದು ನಿಜವಾಗಿಯೂ ಗ್ರಾಮಸ್ಥರಿಗೆ ಸಂತೋಷವನ್ನುಂಟುಮಾಡಿದೆ. ಈ ರೇಡಿಯೋ ಪ್ರಾರಂಭೋತ್ಸವವನ್ನು ಬೋಂಬಾಯಿನ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಬಾಲಗಂಗಾಧರಖೇರ್ ರವರು ನೇರವೇರಿಸಿ ಮೈಸೂರು ಗ್ರಾಮಸೇವಾ ಕಾರ್ಯವನ್ನು ಪ್ರಶಂಸಿರುವರು. ಗ್ರಾಮ ಪುನರುಜ್ಜೀವನ ಕಾರ್ಯದಲ್ಲಿ ಸರ್ಕಾರೀಆಮಲ್ದಾರರವರೆಗೂ ಅಧಿಕಾರಿಗಳು ತೀವ್ರಾಸಕ್ತಿಯನ್ನು ವಹಿಸುತ್ತಿದ್ದಾರೆ ದಿವಾನರು ಮೊದಲುಗೊಂಡು ಎಲ್ಲಾ ಅಧಿಕಾರಿಗಳೂ ಗ್ರಾಮಾಭ್ಯುದಯ ಕಾರ್ಯಗಳಿಗೆ ಸಂಬಂಧಪಟ್ಟ ತಜ್ಞಶೀಲುಗಳನ್ನು ಸಹ ಗಮನಿಸಿ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವರು. ಅವರ ಏರ್ಪಾಟುಗಳಂತೂ ಪ್ರಶಂಸನೀಯವಾದುದು. ಅಧಿಕಾರಿಗಳೂ ಸಂಸ್ಥಾನದ ಹಳ್ಳಿಗಳ ಪುರೋಭಿವೃದ್ಧಿಯನ್ನೇ ಗಮನದಲ್ಲಿಟ್ಟು ಸರ್ಕಾರದವರ ಉದಾತ್ತವಾದ ಧ್ಯೇಯವನ್ನು ಗಮನದಲ್ಲಿಟ್ಟು ಕೆಲಸಮಾಡುತ್ತಿದ್ದಾರೆ. ಅಧಿಕಾರಿಗಳು ಗ್ರಾಮಸ್ಥರೊಡನೆ ಮಿಳಿತರಾಗಿ ನಿರಂತರವೂ ಸಂಸ್ಥಾನದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಗ್ರಾಮ ಪುನರುಜ್ಜೀವನ ವಿಷಯದಲ್ಲಿ ಸರ್ಕಾರಿ ಅಧಿಕಾರಿಗಳೇ ಜನರಿಗೆ ಮಾರ್ಗದರ್ಶಕರಾಗಿರುವರು. ಜಿಲ್ಲಾ ಸಮ್ಮೇಳನಗಳನ್ನು ನೇರಿಸಿ ಗ್ರಾಮಾಭ್ಯುದಯ ವಿಷಯಗಳನ್ನು ಚರ್ಚಿಸುವರು. ಕುಡಿಯುವ ನೀರಿನ ಸರಬರಾಯಿ ವಿಷಯದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ನಮ್ಮ ದಿವಾನ್ ಸಾಹೇಬರವರು ಏರ್ಪಡಿಸಿರುವುದರು. ಇದರಿಂದ ಗ್ರಾಮದವರ ಆರೋಗ್ಯವು ಹೆಚ್ಚಲು ಅನುಕೂಲವಾಗಿದೆ. ಹರಿಜನರಿಗಾಗಿಯೇ ಸುಮಾರು ಐಂಬತ್ತಂಂ ಬಾವಿಗಳನ್ನು ತೋಡಿಸಿರುವರು.

ಮೈಸೂರಿನ ಪ್ರಜೆ

ಪ್ರಕೃತಿ ಮಾತೆಯ ವರಪ್ರಸಾದದಿಂದ ಲಭಿಸಿರುವ ಸಂಪತ್ತಿಗೆ ಮಾತ್ರವೇ ಅಲ್ಲದೆ ಮೈಸೂರು ಸಂಸ್ಥಾನವು ದೇಶಾಭ್ಯುದಯ ಸಾಧನೆಗಾಗಿ ನಡೆದಿರುವ ಇತರ ಹಲವು ಕೆಲಸಕಾರ್ಯಗಳಿಗೂ ಸಹ ಪ್ರಸಿದ್ಧವಾಗಿದೆ.

ಭರತಖಂಡದಲ್ಲಿ ಉತ್ಪತ್ತಿಯಾಗುವ ಚಿನ್ನದ ಹೆಚ್ಚು ಭಾಗವು ಮೈಸೂರು ಸಂಸ್ಥಾನದಲ್ಲಿಯೇ ದೊರೆಯುವುದು ಮೈಸೂರಿನ ಶ್ರೀಗಂಧದ ಮರವು ಅದರ ವಾಸನೆಗೆ ಪ್ರಸಿದ್ಧವಾಗಿದೆ. ಇದರಎಣ್ಣೆಯು ಪ್ರಪಂಚದ ನಾನಾ ಭಾಗಗಳಲ್ಲಿ ಮಾರಾಟವಾಗಿ ಸರಕಾರಕ್ಕೆ ವಿಶೇಷವಾದ ಲಾಭವು ಬರುತ್ತಿದೆ. ಮೈಸೂರಿನಲ್ಲಿ ಹೊರೆಯುವ ಸುವಾಸನೆಯಾದ ಶ್ರೀಗಂಧದ ಮರವು ಪ್ರಪಂಚದಲ್ಲಿ ಹೆಸರುವಾಸಿಯಾಗಿ ವೆ. ೨೦ ನೇ ಶತಮಾನದಲ್ಲಿ ಮೈಸೂರು ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು ಮೊದಲು ಮಾಡಿದರು ಈ ರೀತಿ ವಿದ್ಯುಚಕ್ತಿಯನ್ನು ಉತ್ಪತ್ತಿಮಾಡುವ ಕಾರ್ಯವು ಭರತಖಂಡದಲ್ಲಿ ಮೈಸೂರುಸಂಸ್ಥಾನದೇ ಮೊದಲು. ಪ್ರಯತ್ನಿಸಿ ಪ್ಪತ್ತು. ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯು ಬ್ರಿಟಿಷ್ ಚಕ್ರಾಧಿಪತ್ಯದ ತ್ಯದಲ್ಲಿರುವ ಅತ್ಯಂತ ದೊಡ್ಡದಾದಸ್ಟು ಕಾರ್ಖಾನೆಗಳ ಪೈಕಿ ಎರಡನೆಯದಾಗಿದೆ. ಪೂರ್ವಾರ್ಧಗೋಳದಲ್ಲಿರುವ ಒಂದೇಒಂದು ಚಾಲ್‌ರೋಲ್ ಬ್ಲಾಸ್ಟ್ ಫರ್‌ನೇಸ್ ಮೈಸೂರಿನಲ್ಲಿಯೇ ಇದೆ. ಮೈಸೂರಿನಲ್ಲಿಕಚ್ಚಾ ರೇಷ್ಮೆಯು ಇತರ ಪ್ರದೇಶಗಳಿಗಿಂತ ಹೆಚ್ಚಾಗಿ ತಯ್ಯಾರಾಗುತ್ತಿದೆ. ಭರತಖಂಡದಲ್ಲಿ ಇನ್ನೆಲ್ಲಿಯೂ ಸ್ವಿಲ್ಕ್ ಕಾರ್ಖಾನೆಯು ಸ್ಥಾಪಿತವಾಗಿಲ್ಲ. ಮೈಸೂರಿನಲ್ಲಿಯೇ ಸ್ಥಾಪಿತವಾಗಿದೆ.

ಮೈಸೂರು ಕೆಮಿಕಲ್ ಮತ್ತು ಫರ್ಟ್ಯಿಲೈಸರ್ಸ್ ಕಂಪೆನಿಯವರು ಸ್ಥಾಪಿಸಿರುವ ಅಮೋನಿಯಾ ಪ್ಲಾಂಟು ಭರತಖಂಡದಲ್ಲೇ ಮೊಟ್ಟಮೊದಲನೆಯದಾಗಿದೆ. ಮೈಸೂರಿನ ಸರ್ಕಾರಿ ಕಾರ್ಖಾನೆಯು ಭರತಖಂಡದಲ್ಲಿ ಸರ್ಕಾರಿಯನ್ನು ತಯಾರು ಮಾಡುವ ಕಾರ್ಖಾನೆಗಳ ಪೈಕಿ ಅತ್ಯಂತ ದೊಡ್ಡದಾದುದು. ಕೃಷ್ಣರಾಜ ಸಾಗರದಲ್ಲಿರುವ ಬೃಂದಾವನವೆಂಬ ಉದ್ಯಾನವನವನ್ನು ಯೂರೋಪಿನ ವರ್ಸೈಲ್ಸ್‌ಗೆ ಹೋಲಿಸುತ್ತಾರೆ. ಸೌಂದರ್ಯಕ್ಕೆ ಇದಕ್ಕೆ ಸಮಾನವಾದ ಪ್ರದೇಶವು ಭರತಖಂಡದಲ್ಲಿ ಮತ್ತೊಂದಿಲ್ಲ. ವಿದ್ಯಾಭ್ಯಾಸದ ವಿಷಯದಲ್ಲಿ ತಮ್ಮಗೇ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಸಂಸ್ಥಾನಗಳ ಪೈಕಿ ಮೈಸೂರೇ ಮೊದಲನೆಯದಾಗಿದೆ. ವೈದ್ಯಸಹಾಯದ ವಿಷಯದಲ್ಲಿ ಮೈಸೂರು ಬಹಳ ಮುಂದುಬಂದಿದೆ ಬೆಂಗಳೂರು ನಗರದಲ್ಲಿರುವ ಮಿಂಟೋ ಆಸ್ಪತ್ರೆಯ ಅತ್ಯಂತ ಆಧುನಿಕ ಸಲಕರಣೆಗಳಿಂದ ಸುಸಜ್ಜಿತವಾಗಿದೆ ಎಂಬ ಖ್ಯಾತಿಯನ್ನು ಪಡೆದಿದೆ. ಮತ್ತು ಶ್ರೀವಾಣೀವಿಲಾಸ ಹೆರಿಗೆ ಆಸ್ಪತ್ರೆಯು ಭರತಖಂಡದ ಅತ್ಯಂತ ದೊಡ್ಡ ಆಸ್ಪತ್ರೆಗಳ ಪೈಕಿ ಎರಡನೆಯದಾಗಿದೆ.

ಕೊನೆಯದಾಗಿ ಪೂರ್ವಾರ್ಧ ಗೋಳದಲ್ಲೆಲ್ಲಾ ಅತ್ಯಂತ ಎತ್ತರವಾದ ಜಲಪಾತವೂ ಈಜಿಪ್ಟಿನ ಪಿಸ್ಸಿನ ವಿಗ್ರಹಗಳೆಲ್ಲವುಗಳಿಗಿಂತಲೂ ಎತ್ತರವಾದ ಮತ್ತು ಅತ್ಯಂತ ದೊಡ್ಡದಾದ ಶಿಲಾ ವಿಗ್ರಹವು ಗೋವ.ಶೇಶ್ವರ ಸ್ವಾಮಿ ವಿಗ್ರಹವು ಮೈಸೂರಿನಲ್ಲಿಯೇ ಇದೆ

ಈರೀತಿಯಲ್ಲಿ ಮೈಸೂರಿನ ಕೀರ್ತಿಯು ಇಡೀ ಪ್ರಪಂಚದಲ್ಲಿ ಹರಡಲು ಮೈಸೂರಿನ ಮಾಜಿ ದಿವಾನರಾದ ಸರ್. ಎಂ ವಿಶ್ವೇಶ್ವರಯ್ಯನವರ, ಮುಖ್ಯವಾಗಿ ಈಗಿನ ದಿವಾನರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರ ಅವರ ದೂರದೃಷ್ಟಿಯೂ, ಮಹಾ ಪ್ರಭುಗಳೂ, ಶ್ರೀಮದ್ಯುವರಾಜರವರೂ ಶ್ರೀಮದ್ಯುವರಾಜಕುಮಾರರೂ ಪ್ರಥಮ ಸ್ಥಾನದ ರಾಜಮಂತ್ರಿ ಪ್ರವೀಣ ಎನ್. ಮಾಧವರಾಯರೂ ದ್ವಿತೀಯ ಸಚಿವರಾದ ಶ್ರೀಯುತ ಕೆ ವಿ. ಆನಂತರಾಮನ್ ರವರೂ ಕಾರಣಭೂತರಾಗಿರುವರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

★★ 'ಸ್ವತಂತ್ರ ಕರ್ನಾಟಕ' ಶರಣ ಸಾಹಿತ್ಯಗಳನ್ನು ★★

ಎಲ್ಲಾ ಶಾಲೆಯವರೂ ತರಿಸಬಹುದು.

ಶಿಕ್ಷಣ ಶಾಖಾಧಿಕಾರಿಗಳ ಟಿ. ಬಿ. ಸಿ. ೬೬೫೯-೪೦
ತಾ|| ೨೨|೯೯ ನೇ ಸೆಪ್ಟಂಬರ್ ೧೯೩೯ ರ ಆಜ್ಞೆ

"ನೀವು ತಾ|| ೧೬-೮-೧೯೩೯ ರಲ್ಲಿ ನಿಮ್ಮ "ಶರಣ ಸಾಹಿತ್ಯ" (ಮಾಸಪತ್ರಿಕೆ) 'ಸ್ವತಂತ್ರ ಕರ್ನಾಟಕ' (ವಾರಪತ್ರಿಕೆ)-ಇವುಗಳನ್ನು ಹೈ, ಮಿಡ್ಲ್ ಮತ್ತು ಪ್ರೈಮರಿ ಸ್ಕೂಲುಗಳಿಗೆ ಶಿಫಾರಸು ಮಾಡಲು ದಿವಾನರವರಿಗೆ ಒರೆದ ಪತ್ರದ ಪ್ರಕಾರ-ಪ್ರೈಮರಿ ಸ್ಕೂಲುಗಳಿಗೆ ವಿನಾ, ಉಳಿದ ಹೈ, ಮಿಡ್ಲ್ ಮತ್ತು ನಾರ್ಮಲ್ ಸ್ಕೂಲುಗಳಿಗೂ ನಿಮ್ಮ "ಶರಣ ಸಾಹಿತ್ಯ ಮತ್ತು "ಸ್ವತಂತ್ರ ಕರ್ನಾಟಕ' ಪತ್ರಿಕೆಗಳನ್ನು ತರಿಸಬಹುದೆಂದು ಶಿಫಾರಸು ಮಾಡಲಾಗಿದೆ (ಸಹಿ) ಎ ಎನ್. ಗೋಪಾಲಯ್ಯರ್
(ಪೈರೆಕ್ಟರಿಗಾಗಿ)

(೮ನೇ ಪುಟದಿಂದ)

ಕಡೆಗಾಲ

ಕ್ರಿ. ಶ. ೧೫೫೬ ರಲ್ಲಿ ಸಂಸ್ಥಾಪಿತವಾಗಿ ಕ್ರಿ. ಶ. ೧೬೫೬ ರವರೆಗೂ ವೈಭವದಿಂದ ಬಾಳಿದ ಈ ಮಹಾಸಾಮ್ರಾಜ್ಯವು ಕ್ರಿ. ಶ ೧೫೬೫ ನೇ ವರ್ಷ ಕೃಷ್ಣಾತೀರದ ರಾಕ್ಷಸತಂಗಡಿ ರಣಭೂಮಿಯಲ್ಲಿ ವಿಜಯನಗರದ ರಾಯರಿಗೂ ಬಹಮನೀ ಪಂಚಸುಲ್ತಾನರಿಗೂ ನಡೆದ ಮಹಾಸಂಗ್ರಾಮದಲ್ಲಿ ಕೆಲಸಮಯದಲ್ಲಿಯೇ ಪರಾಜಿತವಾಗಿ ಹೋಗಿ ನಿರ್ನಾಮವಾಯ್ತು. ಗಂಗ—ಕದಂಬಾದಿ ಕನ್ನಡ ಸಮ್ರಾಟರ ಕಾಲದಿಂದ ಪ್ರಕಾಶಮಾನವಾಗಿದ್ದ ಕನ್ನಡನಾಡಿನ ಸೌಭಾಗ್ಯವು ನಿರ್ನಾಮವಾಯ್ತು. ಕರ್ನಾಟಕ ಸೌಭಾಗ್ಯ ಲಕ್ಷ್ಮಿಯು ಅಂದು ವನವಾಸಕ್ಕೆ ಹೋದವಳು ಇನ್ನೂ ಆ ಜ್ಞಾತವಾಸದಲ್ಲಿಯೇ ಇರುವಳು. ಕನ್ನಡಿಗರು ನಿರಾಶ್ರಿತರೂ ನಿಸ್ತೇಜರೂ ಆದರು. ಕನ್ನಡ ಸಾಹಿತ್ಯ ಸಂಸ್ಕೃತಿಗಳು ಕಳೆಗುಂದಿದವು. ಸಾರಾಂಶವೆಂದರೆ ಕರ್ನಾಟಕದ ಸರ್ವಸ್ವವೂ ನಾಶವಾಗಿ ಹೋಯಿತು. ವಿಜಯನಗರದ ಸಾಮ್ರಾಜ್ಯ ವಿನಾಶವಾದಮೇಲೂ ಆ ವಂಶೀಯರು ಚಂದ್ರಗಿರಿ, ಪೆನುಗೊಂಡೆಗಳಲ್ಲಿ ಕೆಲಕಾಲ ಆಳಿದರು. ಈಗಲೂ ಕಿಷ್ಕಿಂಧೆಯಲ್ಲಿ ಅಂದರೆ ಆನೆಗೊಂದಿಯಲ್ಲಿರುವ ಹಿಂದೂರಾಜರು ವಿಜಯನಗರದ ವಂಶೀಯರೆಂದೇ ತಿಳಿದುಬರುತ್ತದೆ

ಮೈಸೂರುದೇಶ

ವಿಜಯನಗರಕ್ಕೂ ಮೈಸೂರಿಗೂ ಏನು ಸಂಬಂಧವೆಂದು ಕೇಳುವವರೂ ಇದ್ದಾರೆ ಇತಿಹಾಸದ ಹಾಳೆಗಳನ್ನು ನೋಡುವಷ್ಟಾಹ ದವರಿಗೆ ಇವುಗಳ ಸಂಬಂಧವೇನೆಂಬುದು ತಿಳಿದೇ ಇವೆ ಆ ಮಹಾಸಾಮ್ರಾಜ್ಯಕ್ಕೂ ನಮ್ಮ ಮೈಸೂರು ದೇಶಕ್ಕೂ ಇರುವ ಸಂಬಂಧವನ್ನು ಸೂಚಿಸಿ ಈ ಬಗ್ಗೆ ನಮ್ಮ ಗಳ ಕರ್ತವ್ಯವೇನೆಂಬುದನ್ನು ತಿಳಿಸುವುದೇ ಈ ಲೇಖನದ ತಾತ್ಪರ್ಯವಾಗಿದೆ.

ವಿದ್ಯಾನಗರದ ಚರಿತ್ರೆಗೂ ಮೈಸೂರಿನ ಚರಿತ್ರೆಗೂ ನಿಕಟವಾದ ಸಂಬಂಧವಿದೆ ವಿಜಯನಗರವು ವಿನಾಶವಾಗುವವರೆಗೂ ಮೈಸೂರು ಅದಕ್ಕೆ ಸಾಮಂತವಾಗಿಯೇ ಇತ್ತು. ಆದರೆ ಪತನಾನಂತರ ಇತರ ಚಿಕ್ಕ ಪುಟ್ಟ ರಾಜ್ಯಗಳಂತೆ ಇದೂ ಸ್ವತಂತ್ರವಾಯ್ತು.

ವಿಜಯನಗರದ ರಾಜವಂಶೀಯನಾದ ಶ್ರೀರಂಗರಾಯನು ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದನು. ಆವನಿಗೆ ಚಿನ್ನುಫಣಿ ಎದ್ದ ಬದುಕಲಾರನೆಂದು ತಿಳಿದುಬಂದಾಗ ತನ್ನ ರಾಜ್ಯವನ್ನೂ ಸಿಂಹಾಸನವನ್ನೂ ಮೈಸೂರಿನ ರಾಜಒಡೆಯರಿಗೆ ಕೂಟ್ಟು ತಲಕಾಡಿಗೆ ಹೋದನೆಂಬುದು ಮೈಸೂರು ಚರಿತ್ರೆಯನ್ನೋದಿದವರಿಗೆ ಗೊತ್ತಿರುವ ವಿಚಾರ.

ಈಗ ಮೈಸೂರೂಡೆಯು ಅಲಂಕರಿಸಿರುವ ರತ್ನಸಿಂಹಾಸನವು ಯುಧಿಷ್ಠಿರನದೆಂದೂ ಅದು ಪರಂಪರಾಗತವಾಗಿ ವಿಜಯನಗರದ ರಾಯರ ಹಸ್ತಗತವಾಯ್ತೆಂದೂ ಆ ರಾಜ್ಯವು ವಿನಾಶವಾದ ಮೇಲೆ ಅದು ಶ್ರೀರಂಗರಾಯನ ಹಸ್ತಗತವಾಗಿ ಅವನಿಂದ ಮೈಸೂರು ರಾಜಒಡೆಯರಿಗೆ ಸೇರಿತೆಂದೂ ರಾಜಒಡೆಯರು ಕ್ರಿ. ಶ. ೧೬೧೦ ರಲ್ಲಿ ಆ ಪವಿತ್ರವಾದ ಕರ್ನಾಟಕ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದರೆಂದೂ ಮೈಸೂರು ರಾಜವಂಶಾವಳೀ ಚರಿತ್ರೆಯು ಹೇಳುತ್ತದೆ.

ಅದೃಷ್ಟವಂತರೂ ವೀರರೂ ಆದ ರಾಜ ಒಡೆಯರು ಶ್ರೀರಂಗರಾಯನಿಂದ ಸಿಂಹಾಸನವನ್ನು ಹೊಂದಿ ಪಟ್ಟಾಧಿಕಾರವಾದ ಮೇಲೆಯೇ ವಿಜಯನಗರದ ರಾಯರಂತೆ ವೈಭವದಿಂದ ನಿಜಯದಶಮಿಯ ಮಹೋತ್ಸವವನ್ನು ಮೈಸೂರಿನ ರಾಜಮನೆತನದಲ್ಲಿ ಪ್ರಾರಂಭಿಸಿದರು.

ವಿಜಯನಗರವು ಕ್ರಿ ಶ ೧೫೬೫ ರಲ್ಲಿ ಸ್ಥಾಪಿತವಾಯ್ತು. ಯದುರಾಯರು ಕ್ರಿ. ಶ ೧೫೯೯ ರಲ್ಲಿ ಮೈಸೂರಲ್ಲಿ ಪಟ್ಟಾಭಿಷಿಕ್ತರಾದರು. ಅಂದರೆ ವಿಜಯನಗರವು ಸ್ಥಾಪಿತವಾದ ೫೪ ವರ್ಷಗಳಮೇಲೆ ಮೈಸೂರು ಸ್ಥಾಪನೆಯಾಯಿತೆನ್ನಬಹುದು ವಿದ್ಯಾನಗರವು ಹಿಂದೆ ಹೇಳಿದಂತೆ ಕ್ರಿ ಶ. ೧೫೬೫ ರಲ್ಲಿ ವಿನಾಶವಾಯಿತು. ಮೈಸೂರು ಮಧ್ಯೆ ಗಂಡಾಂತರಗಳು ಬಂದರೂ ದೈವಾನುಗ್ರಹದಿಂದ ಇದುವರಿಗೂ ನಡೆದುಬರುತ್ತಿದೆ. ಅಲ್ಲದೆ ಬಾಲಚಂದ್ರನಂತೆ ಅಭಿವೃದ್ಧಿಯನ್ನು ಹೊಂದುತ್ತಿದೆ ಆದರೂ ನಾವು ವಿಜಯನಗರದ ಸಂಸ್ಥಿತಿಯನ್ನು ಮೈಸೂರಲ್ಲಿ ಕಾಣಬಹುದೆ. ಆ ರಾಯರ ವೈಭವದ ಕೆಲಭಾಗವನ್ನಾದರೂ ಮೈಸೂರು ಒಡೆಯರಲ್ಲಿ ನೋಡಬಹುದು

ವಿಜಯನಗರವು ಅಳಿದರೂ ಅದರ ಸಂಸ್ಕಾರವು ಮೈಸೂರಿನಲ್ಲಿ ಉಳಿದಿದೆ. ಆ ರಾಯರ ಸಿಂಹಾಸನನೇ ಮೈಸೂರು ಒಡೆಯರಿಂದ ಅಲಂಕೃತವಾಗುತ್ತಿದೆ ಅದರ ಪ್ರಭಾವದಿಂದಲೇ ಲೋಕವಿಖ್ಯಾತನಾದ ವಿಜಯನಗರದ ನವರಾತ್ರಿಮಹೋತ್ಸವದ ವೈಭವದ ಸಂಪತ್ತನ್ನೇ ನಾವಿಂದು ಮೈಸೂರಲ್ಲಿ ನೋಡುತ್ತಿದ್ದೇವೆ ಆ ಧಿಕಾರದಿಂದ ಮೈಸೂರು ವಿದ್ಯಾನಗರವನ್ನು ಹೋಲುವುದಿಲ್ಲವಾದರೂ ಪ್ರಭಾವದಲ್ಲಿಯೂ ಕೀರ್ತಿಯಲ್ಲಿಯೂ ರಾಜನೀತಿಯಲ್ಲಿಯೂ ಈ ನವ್ಯದೇಶವು ಆ ನಮ್ಮ ಸಾರ್ವಭೌಮ್ಯವನ್ನು ಸರಿಗಟ್ಟುತ್ತಿದೆ ವಿದ್ಯಾನಗರದಲ್ಲಿ ಧೀರ ಶ್ರೀ, ಮೈಸೂರಿನಲ್ಲಿ ಬುದ್ಧಿ ಶ್ರೀ ಅದು ಜ್ಞಾನಯುಗ, ಇದು ವಿಜ್ಞಾನಯುಗ, ಆಗ ಪಂಜಿನ ಬೆಳಕು, ಈಗ ವಿದ್ಯುತ್ಪ್ರಕಾಶ ಆದು ಭಂಗಾರವಿನಾಣ್ಯಗಳ ಯುಗ, ಇದು ಕಾಗದನಾಣ್ಯಗಳ ಯುಗ. ಆಗ ಅಂಗಡಿಗಳಲ್ಲಿ ರಾತ್ರಿರಾತ್ರಿಯಾಗಿ ರತ್ನ ವೈಡೂರ್ಯಗಳನ್ನು ಮಾರುತ್ತಿದ್ದರು; ಈಗ ಗಾಜಿನ ಸಾಮಾನುಗಳನ್ನೂ ಪೆಪ್ಪರಮೆಂಟು ಬಿಸ್ಕಟ್ಟುಗಳನ್ನೂ ಮಾರುತ್ತಿದ್ದಾರೆ ಅಂತು ಅದು ಪುರಾಣಯುಗ ಇದು ನವಯುಗ

— —

ಕನ್ನಡಿಗರ ವ್ಯಾಪಾರ

ಇಂದು ಕನ್ನಡನಾಡು ಎಲ್ಲ ಬಗೆಯಿಂದಲೂ ಮುಂದುವರಿಯಬೇಕೆಂಬ ಭಾವನೆ, ನಾಡಿನ ಜನರಲ್ಲಿ ಬೇರೂರಿದೆ ದೇಶದ ಎಲ್ಲಾ ಬಗೆಯ ಪ್ರಗತಿಗೆ ಮೂಲವಾದುದ ಸಂಪತ್ತು; ಆ ಸಂಪತ್ತನ್ನು ಗಳಿಸಲು ಕಾರಣವಾದುದು ವ್ಯಾಪಾರ. ಆದುದರಿಂದ ನಾಡಿನ ಉನ್ನತಿ ಅವನತಿಗಳು ಬಹುಮಟ್ಟಿಗೆ ಅಲ್ಲಿನ ವ್ಯಾಪಾರವನ್ನೇ ಅವಲಂಬಿಸಿದೆ ಪ್ರಕೃತದಲ್ಲಿ ನಮ್ಮ ಕನ್ನಡನಾಡು ಭಾರತದ ಇತರ ಪ್ರಾಂತಗಳಿಗಿಂತ ವ್ಯಾಪಾರದಲ್ಲಿ ಬಹಳ ಹಿಂದೆಬಿದ್ದಿದೆ. ಇದಕ್ಕೆ ಇಂದು ಕನ್ನಡನಾಡಿನಲ್ಲಿ ವಿಶಾಲವಾದ ಸಮುದ್ರ ವ್ಯಾಪಾರಕ್ಕೆ ಅನುಕೂಲವಾದ ಒಂದು ಬಂದರು ಇಲ್ಲದುದೇ ಕಾರಣವೆನಿಸಿದೆ. ಕರ್ನಾಟಕ ಏಕೀಕರಣವಾದ ಹೊರತು, ಸ್ವಾಭಾವಿಕವಾದ ಬಟ್ಟೆಳ, ಭಾರವಾರ, ಮಲ್ಪೆ, ಮೊದಲಾದ ಬಂದರು ಸ್ಥಳಗಳು ನಮ್ಮ ಅನುಕೂಲಕ್ಕೆ ತಕ್ಕಂತೆ ವರ್ತಿಸಲಾರವು ಒಂದು ಸುಮುಖ ವಾದ ಬಂದರು ನಮ್ಮ ನಾಡಿಗೆ ದೊರೆತ ಹೊರತು ದೇಶದ ಸಂಪತ್ತು ಮತ್ತು ವ್ಯಾಪಾರ ಹೆಚ್ಚಲಾರದು ನಾಡಿನ ಒಳದೇಶದ ವ್ಯಾಪಾರವೂ ಕೂಡ ವರನ್ಯಾಂತೀಯರ ಹಸ್ತಗತವಾಗಿದೆಯೆಂಬುವನ್ನು ನಾವು ಕರ್ನಾಟಕದ ಪ್ರತಿಯೊಂದು ಮುಖ್ಯಪಟ್ಟಣಗಳಲ್ಲಿಯೂ ನೋಡುತ್ತಿದ್ದೇವೆ. ಕಾದೆವಾಡಿಗಳು, ಗುಜರಾತಿಗಳು, ಮಾರವಾಡಿಗಳು ನಮ್ಮ ವ್ಯಾಪಾರವನ್ನೆಲ್ಲಾ ಹಸ್ತಗತಮಾಡಿಕೊಂಡಿದ್ದಾರೆ. ಪರಾಣರು ಲೇವಾದೇವಿಯ ವ್ಯವಹಾರದಲ್ಲಿ ಬಹಳ ಹಾವಳಿಮಾಡುತ್ತಿದ್ದಾರೆ. ಎಚ್ಚೆತ್ತ ಕರ್ನಾಟಕವು ಈ ಸಂದರ್ಭಗಳನ್ನೆಲ್ಲಾ ಗಮನಿಸಿ, ನಾಡಿನ ಸಂಪತ್ತನ್ನು ಉಳಿಸಲು ಎಲ್ಲ ಬಗೆಯಿಂದಲೂ ಪ್ರಯತ್ನಿಸುವುದು ಅವಶ್ಯ. ಕರ್ನಾಟಕ ವಣಿಕ್ ಸಂಘದವರೂ, ಮೈಸೂರು ವರ್ತಕ ಸಂಘವೂ, ಈ ವಿಚಾರವನ್ನು ಗಮನಿಸುವರೆ ?

———

ರಾಮದುರ್ಗದ ದುರಂತವಾದಮೇಲೆ

ರಾಮದುರ್ಗದ ಕಳೆದ ಏಪ್ರಿಲ್ ತಿಂಗಳ ದುರಂತ ಸ್ಮರಣವು ಈಗ ಕರ್ನಾಟಕ ಒಂದು ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ನ್ಯಾಯಮೂರ್ತಿ ದಾದರ ವಿಚಾರಣೆಯು ಅಲ್ಲಿನ ಅಶಾಂತಿಯನ್ನು ಹೋಗಲಾಡಿಸುವ ಬದಲು ಅದನ್ನು ಅಖಂಡಕರ್ನಾಟಕಕ್ಕೂ ಹಬ್ಬಿಸಿತು ಪರಿಸ್ಥಿತಿಯು ಹೀಗಾಗಲು ಕೆಲವು ಕರ್ನಾಟಕದ ಮುಖಂಡರೇ ಕಾರಣರೆಂದು ಈಗ ಎಲ್ಲರಿಗೂ ತಿಳಿದುಬಂದಿದೆ ಭಾರತದ ಇತರ ದೇಶೀಯ ಸಂಸ್ಥಾನಗಳಲ್ಲಾಗುವಂತೆಯೇ ರಾಮದುರ್ಗದಲ್ಲಿಯೂ ಪ್ರಜೆಗಳ ಚಳುವಳಿಯು ನಡೆದಿದೆ. ಅಲ್ಲಿನ ಅರಸರು ಬ್ರಾಹ್ಮಣರಾಗಿದ್ದ ಮಾತ್ರಕ್ಕೇ ಅಲ್ಲಿನ ಬಹು ಸಂಖ್ಯಾತ ಪ್ರಜೆಗಳಾಗಿ, ಚಳುವಳಿಯ ಮುಖಂಡರು ಲಿಂಗಾಯತರಾಗಿದ್ದುಮಾತ್ರಕ್ಕೇ ಅದು ವಿಶಾಲ ಭಾರತದ ಪರಿಸ್ಥಿತಿಗೆ ಭಿನ್ನವಾಗುವುದು ಯಾವ ನ್ಯಾಯ ? ಶ್ರೀ ದೇಶಪಾಂಡೆ ಶ್ರೀ ಹರ್ಡೀಕರ್ ಮೊದಲಾದ ಹಿರಿಯ ಕಾಂಗ್ರೆಸು ಮುಂದಾಳುಗಳು ಅರಸರ ಮತ್ತು ಪ್ರಜೆಗಳ ವಿಭಿನ್ನ ಮತಗಳನ್ನೇ ಮುಖ್ಯ ಕಾರಣವನ್ನಾಗಿ ಭಾವಿಸಿ, ದಾದರರ ದೃಷ್ಟಿಕೋನವನ್ನು ತಿಳಿಸಲಿಕ್ಕೆ ಕಾರಣರಾಗಿ, ತನ್ಮೂಲಕ ಕರ್ನಾಟಕದ ಶ್ರೀಅಂತಃಕಲಹಕ್ಕೆ ಆಸ್ಪದರಾಗಿರುವುದು ನಿಜವಾಗಿಯೂ ದಿಟ್ಟಿಸಿರವಾದ ಸಂಗತಿ ಈಗ ಉತ್ತರ ಕರ್ನಾಟಕದ ಎಲ್ಲ ಜಿಲ್ಲೆ ಮೊಡ್ಡ ಊರುಗಳಲ್ಲಿಯೂ ದಾದರರ ನಿರ್ಣಯವನ್ನು ಲಿಂಗವಂತರು ಅತ್ಯಂತ ಉಗ್ರವಾಗಿ ಪ್ರತಿಭಟಿಸುತ್ತಲೂ, ನಿತ್ಯ ಧರಣಿಯಲ್ಲೂ ಇದ್ದಾರೆ ಅಲ್ಲಿಯ ಕಾಂಗ್ರೆಸ್ ದುರೀಣರಲ್ಲಿಯೇ ಈ ಕಾರಣದಿಂದಲೇ ಇಬ್ಬಣವಾದಂತೆ ತೋರುತ್ತದೆ. ಈ ಪರಿಸ್ಥಿತಿಯೇ ಹೀಗೆಯೇ ಮುಂದುವರಿದರೆ, ಕರ್ನಾಟಕದ ಶುಭ ದಿನಗಳು ಕನಸಿನ ಮಾತಾಗುತ್ತವೆ ಆದುದರಿಂದ ದೇಶಹಿತೈಷಿಗಳು ಈ ಬಗ್ಗೆ ಒಂದು ಶಾಂತಿ ಸಮಾಧಾನಕ್ಕೆ ಬಂದು, ರಾಮದುರ್ಗದ ಅರಸರ ಮತ್ತು ಪ್ರಜೆಗಳ ಮಧ್ಯೆ ಬಾಂಧವ್ಯವನ್ನು ಹೊದಲಿನಂತೆ ಮಾಡಿ, ಸೌಮ್ಯವಸ್ಥೆಗೊಳಿಸಲು ನಾವು ಪ್ರಾರ್ಥಿಸುತ್ತೇವೆ ಇಲ್ಲವಾದರೆ ಶ್ರಮಸಂಗವು ಕಾರಣವಾಗಬಹುದೆಂದು ನಮಗೆ ತೋರುತ್ತದೆ. ದೇಶದ ದೈವ ಹೇಗಿದೆಯೋ ನೋಡಬೇಕು !

———

ಸರ್ ಮಿರ್ಜಾರವರ ದೇಶಾಭಿಮಾನ

ಮೈಸೂರಿನ ಮುಖ್ಯ ಮಂತ್ರಿಗಳಾದ ಆನರೇಬಲ್ ಉಲ್ಮುಲ್ಕ್ ಸರ್ ಎಂ. ವಿಜ್ಞಾ ಇಸ್ಮಾಯಿಲ್ ರವರು ಇಂದು ಓರ್ವ ಅಂತರ್ರಾಷ್ಟ್ರೀಯವ್ಯಕ್ತಿಯೆನಿಸಿದ್ದಾರೆ ಕರ್ನಾಟಕದಲ್ಲಿ ಹುಟ್ಟಿ ಬೆಳೆದವರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಕಳಿದರೆ, ಸರ್ ಮಿರ್ಜಾರವರಂತೆ ಕೀರ್ತಿಯನ್ನು ಗಳಿಸಿದವರು ಮತ್ತಾರೂ ಇಲ್ಲವೆಂದು ಹೇಳಬಹುದು ಅವರ ರಾಜನೀತಿಯ ಫಲವಾಗಿ ಅವರ ದೇಶಾಭಿಮಾನದ ಫಲವಾಗಿ ಮೈಸೂರು ಇಂದು ಭಾರತದಲ್ಲಿ ಪ್ರಖ್ಯಾತಿಯನ್ನು ಪಡೆದಿದೆ. ತಾ|| ೬-೫-೫೯ ನೇ ದಿನ ಬೆಂಗಳೂರಿನಲ್ಲಿ ಮೈಸೂರು ವರ್ತಕ ಸಂಘ ಭವನದಲ್ಲಿ ಇವರು ಮಾಡಿದ ಭಾಷಣವು ಅವರ ನಿರ್ಮಲವಾದ ದೇಶಾಭಿಮಾ

ನವನ್ನು ವ್ಯಕ್ತಪಡಿಸುತ್ತದೆ ಆ ಭಾಷಣದ ಒಂದು ಮುಖ್ಯವಾದ ವಿಷಯವನ್ನು ನಾವು ಮುಂದೆ ಸಂಗ್ರಹಿಸಿದ್ದೇನೆ.

"ಸ್ವದೇಶಾಭಿಮಾನವೆಂದರೆ ಅವರವರ ದೇಶವನ್ನು ಪ್ರೀತಿಸುವುದೆಂದೂ, ಅವರವರ ದೇಶವನ್ನೂ ಧನಬಲದಲ್ಲಿಯೂ ವಿದ್ಯಾಲಯದಲ್ಲಿಯೂ ದೊಡ್ಡದನ್ನಾಗಿ ಮಾಡುವುದೆಂದೂ ಅರ್ಥ. ಈ ಬಗ್ಗೆ ನಿಜವಾದ ದೇಶಾಭಿಮಾನವಿದ್ದರೆ, ಕಕ್ಷಿ ಪ್ರತಿಕಕ್ಷಿಗಳ ಭೇದಭಾವನೆಗೆ ಅವಕಾಶವೇ ಇರುವುದಿಲ್ಲ. ಆಲ್ಲದೆ ಅದು ಸೂತ್ರ ಪಂಗಡಗಳವರ ಮತ್ತು ಸಮಸ್ತ ಪಕ್ಷಗಳವರ ಗೌರವಕ್ಕೂ ಪಾತ್ರವಾಗಿರುತ್ತದೆ. ವ್ಯಕ್ತಿಗಳೆಲ್ಲ ನೆರೆಯಂತೆ ಮಾಯವಾಗುತ್ತಾರೆ ಸಂಸ್ಥಾನವು—ಅಂದರೆ ದೇಶವು ಮಾತ್ರ ಅವರಂತೆ ಅಶಾಶ್ವತವೆನಿಸದೆ, ಸ್ಥಿರವಾಗಿರುತ್ತದೆ. ಯಾರು ದೇಶದ ಸೇವೆಗಾಗಿ ಶ್ರಮಿಸಿದವರೋ, ಯಾರ ಸೇವೆಯಿಂದ ದೇಶವು ಸ್ಥಿರವಾಗಿ ಬಾಳುವುದಕ್ಕೆ ಸಹಾಯವಾಗುತ್ತದೋ, ಅವರೇ ನಿಜವಾದ ಪ್ರಜಾಧರ್ಮ ಪಾಲಕರು, ದೇಶಾಭಿಮಾನಿಗಳು, ಮೈಸೂರಿನ ಈ ವಾಣಿಜ್ಯ ಸಂಸ್ಥೆಯು ಈ ಬಗೆಯ ಕೆಲಸಗಳಲ್ಲಿ ಉದ್ಯುಕ್ತವಾಗಿದೆಯೆಂದು ನಾನು ತಿಳಿಯುತ್ತೇನೆ"

ಹಿಟ್ಲರನ ಸಿಂಹನಾದ

ಇಂದಿನ ಯೂರೋಪಿನ ಯುದ್ಧಕ್ಕೆ ಕಾರಣವೆನಿಸಿದ ಹರ್ ಹಿಟ್ಲರನು ತಾ|| ೬-೧೦-೩೯ನೇ ದಿನ ಬರ್ಲಿನಿನ ರೀಷ್ ಮಹಾ ಸಭೆಯಲ್ಲಿ ಒಂದು ಮಹತ್ವದ ಭಾಷಣವನ್ನು ಮಾಡಿದ್ದಾನೆ ಆದರ ಸಾರಂಶವೇನೆಂದರೆ,

"ಯೂರೋಪಿನ ಭದ್ರತೆಯ ವಿಚಾರವಿಮರ್ಶೆಗಾಗಿ ಎಲ್ಲದೇಶಗಳೂ ಸಮ್ಮೇಳನ ಸೇರಬೇಕು. ಅಲ್ಲಿ ಶಸ್ತ್ರಸನ್ಯಾಸವನ್ನು ಸ್ವೀಕರಿಸಬೇಕು. ಬ್ರಿಟ್ ಮತ್ತು ಫ್ರಾನ್ಸುಗಳಿಂದ ನಾವಿನ್ನೇನನ್ನೂ ಕೇಳುವುದಿಲ್ಲ. ಆದರೆ ಕಾಲೊನಿಗಳನ್ನು ಮಾತ್ರ ಬಿಡುವುದಿಲ್ಲ ಜರ್ಮನಿಯ ಶಾಂತಿ ಸಲಹೆಗೆ ಬ್ರಿಟ್ ಫ್ರಾನ್ಸುಗಳು ಕಿವಿಗೊಡದಿದ್ದರೆ, ಜರ್ಮನಿಯು ಪ್ರಪಂಚವಾಗಿ ಯುದ್ಧವನ್ನು ಮುಂದುವರಿಸುವುದು ಖಂಡಿತ ಕಳೆದ ಯುದ್ಧದ ಅನಂತರವಾದ ವರ್ಷಗಳ ಒಪ್ಪಂದದ ಕ್ರೂರದರ್ಪದಿಂದ ಪೋಲೆಂಡು ಹಂಗೇರಿ ಆವರ್ಸೆಲ್ಸ್ ಖರಾರನ್ನು ಧ್ವಂಸ ಮಾಡುವುದೇ ಜರ್ಮನಿಯ ಗುರಿ ಪೋಲೆಂಡ್ ದೇಶವನ್ನು ಸ್ಥಾಪಿಸಲಾಗುವುದು. ಇದಕ್ಕೆ ಜರ್ಮನಿಯೂ ರಷ್ಯವೂ ಭರವಸೆ ಕೊಡುವುವು ವಿಶ್ವದ ಶಾಂತಿ ಸಲಹೆಗೆ ಇವೇನನ್ನು ಕಡೆಯ ಮಾತುಗಳು"

ಎಂಬುದೇ ಅವನ ಗರ್ಜನೆಯ ಸಾರ ಈ ಮಾತುಗಳು ಇಂದು ಲೋಕದ ಆಗುಹೋಗುಗಳಿಗೆ ಒಹುಮಟ್ಟಿಗೆ ಕಾರಣವಾಗಿದೆಯೆಂದು ನಾವು ಭಾವಿಸಬಹುದಾಗಿದೆ ಶಾಂತಿಪ್ರಿಯವಾದ ಅಮೆರಿಕವು ಹಿಟ್ಲರನ ಈ ಸಲಹೆಗಳಿಗೆ ಮುನ್ನಣಿ ಕೊಡುವಂತೆ ತೋರುತ್ತದೆ. ಆದರೆ ಮಿತ್ರ ಪಕ್ಷದ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಇನ್ನುಮುಂದೆ ಹೇಗೆ ವರ್ತಿಸುತ್ತವೆಯೆಂಬುದನ್ನು ನಾವು ಈಗಲೇ ನಿರ್ಧರಿಸಲಾಗುವುದಿಲ್ಲ, ಯುದ್ಧವು ಹೀಗೆಯೇ ಮುಂದುವರೆದರೆ ಯೂರೋಪಿನ ಸರ್ವನಾಶದೊಂದಿಗೆ, ಪ್ರಪಂಚದ ಅವನತಿಯಾಗುವುದೆಂಬುದರಲ್ಲಿ ಸಂಶಯವಿಲ್ಲ. ಕರುಣಾಳುವಾದ ಭಗವಂತನು ರಕ್ತದ ಕಾಲುವೆಯಿಂದ ಯೂರೋಪನ್ನು ಪಾರುಗಾಣಿಸಲಿ, ಜಗತ್ತು ಶಾಂತಿಯ ಬೀಡಾಗಲಿ.

ವಿಮರ್ಶೆ

ಸಂಗೀತ ರತ್ನಾವಳಿ

ಕರ್ನಾಟಕದ ಸುಪ್ರಸಿದ್ಧ ವಿದ್ವಾಂಸರೂ ಅಭಿಮಾನಿಗಳೂ ಆದ ಶ್ರೀಮಾನ್ ಬೆನಗಲ್ ರಾಮರಾಯರಿಂದ ವಿರಚಿತವಾದ, ಬೆಂಗಳೂರು ಕರ್ನಾಟಕ ವಿಕೇಕರಣ ಸಂಘದಿಂದ ಪ್ರಕಟಿತವಾದ 'ಸಂಗೀತ ರತ್ನಾವಳಿ' ಎಂಬ ಗ್ರಂಥವು ನಮ್ಮ ಹಸ್ತಗತವಾಗಿದೆ. ಡೆಮ್ಮಿ ೧/೮ ಆಕಾರದ್ದೂ ೧೦೦ ಪುಟಗಳ ಈ ಗ್ರಂಥವು ಪ್ರತಿಯೊಬ್ಬ ಕನ್ನಡಿಗನಿಗೂ ಉಪಯುಕ್ತವಾದುದೆನಿಸಿದೆ. ಈ ಪುಸ್ತಕದಲ್ಲಿ ಕರ್ನಾಟಕಮಾತೆಯು ಪ್ರಕೃತಸ್ಥಿತಿಯನ್ನು ಬಣ್ಣಿಸುವ ಒಂಬತ್ತು ಪದಗಳಿವೆ. ಈ ಪ್ರತಿಯೊಂದು ಪದ್ಯವೂ ಕರ್ನಾಟಕ ಮಾತೆಯ ವಿಷಯದಲ್ಲಿ ಗ್ರಂಥಲೇಖಕರಿಗೆ ಇರುವ ಭಕ್ತಿ ವಿಶ್ವಾಸಗಳನ್ನು ಸ್ಪಷ್ಟಪಡಿಸುವುದಾಗಿವೆ ಈ ಪದ್ಯಗಳನ್ನು ಪ್ರತಿಯೊಬ್ಬ ಕನ್ನಡಿಗ ಸ್ತ್ರೀಪುರುಷರೂ ಕಂಠಪಾಠ ಮಾಡಿ ಹಾಡಬೇಕೆಂದು ಲೇಖಕರ ಬಯಕೆ. ಆಪೇಕ್ಷೆಯುಳ್ಳ ಮಂಜಿಯನ್ನೆಚ್ಚವನ್ನು ಮಾತ್ರ ಕೊಂಟ್ಟು ಪ್ರಕಾಶಕರಿಂದ ಈ ಗ್ರಂಥವನ್ನು ಉಚಿತವಾಗಿ ಪಡೆಯಬಹುದು ಈ ಪುಸ್ತಕದ ಕಾಗದ ಮುದ್ರಣ ಮೊದಲಾದ ಎಲ್ಲ ಬಾಹ್ಯ ಸೌಂದರ್ಯವೂ ಚೆನ್ನಾಗಿದೆ. ಇದರಲ್ಲಿ ಮೈಸೂರಿನ ಶ್ರೀಮನ್ಮಹಾರಾಜರ ದಿವಾನ್ ಸರ್. ಮಿರ್ಜಾ ರವರು ಶ್ರೀಬೆನಗಲ್ ರಾಮರಾಯರ ಶ್ರೀ ಚಾಮುಂಡಿಕಾ ದೇವಿಯ ಮತ್ತು ಕನ್ನಡ ನಾಡಿನ ಚಿತ್ರಗಳೆವೆ. ಕನ್ನಡಿಗರೆಲ್ಲರೂ ಸಂಗ್ರಹಿಸ ಬೇಕಾದ ಪ್ರಸ್ತಕ ದೇಶಕ್ಕೆ ಇಂತಹ ಒಳ್ಳೆಯ ಸೇವೆಯನ್ನು ಸಲ್ಲಿಸಿರುವುದಕ್ಕಾಗಿ ಶ್ರೀ ರಾಮರಾಯರಿಗೆ ವಂದನೆಗಳು

ವರ್ತಮಾನ ಸಂಗ್ರಹ

ದಕ್ಷಿಣ ಹಿಂದೂಸ್ತಾನದಲ್ಲಿ ವಿಪುಲವಾದ ಕೀರ್ತಿಯನ್ನು ಗಳಿಸಿರುವ ವಿನೋದರತ್ನಾಕರ ಜಿ ಹೆಚ್ ವೀರಣ್ಣನವರ ನಾಟಕ ಸಂಸ್ಥೆಯು ಈಗ ಕೋಲಾರದಜಿಲ್ಲಾ ರಾಬರ್ಟ್‌ಸನ್ ಪೇಟೆಯಲ್ಲಿ ತಮ್ಮ ಅಮೋಘವಾದ ನಾಟಕಗಳನ್ನು ಪ್ರದರ್ಶಿಸುತ್ತಿದೆ.

ಉತ್ತರ ಕರ್ನಾಟಕದಲ್ಲಿ ರಾಮದುರ್ಗದ ದುರಂತ ಪ್ರಕರಣದ ಪರಿಣಾಮವಾಗಿ ಉಂಟಾದ ಬ್ರಾಹ್ಮಣ-ವೀರಶೈವ ಸಮಾಜಗಳ ಮನಸ್ತಾಪದ ನಿಮಿತ್ತ, ಹಲವು ಸ್ಥಳಗಳ ನಾಡ ಹಬ್ಬದ ಉತ್ಸವವೂ, ಆದರ ವಿಧವಾದ ಕಾರ್ಯಕ್ರಮಗಳೂ ನಿಲ್ಲಿಸಲ್ಪಟ್ಟವೆಂದು ಕೇಳಿ ನಾವು ವಿಷಾದಿಸುತ್ತೇವೆ.

ಮೈಸೂರು ಕಾಂಗ್ರೆಸ್ಸಿಗೂ, ಸರಕಾರಕ್ಕೂ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಸರಿಪಡಿಸುವ ಸಲುವಾಗಿ ಶ್ರೀಮಾನ್ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು, ಶ್ರೀಮಾನ್ ಸಂಪಿಗೆ ವೆಂಕಟಪತಯ್ಯನವರು, ಕೆ. ಟಿ. ಸತ್ಯನಾರಾಯಣ ಶೆಟ್ಟರು, ಜೈಲಿನಲ್ಲಿರುವ ಮುಖಂಡರನ್ನು ಕಂಡು ವಿಚಾರವಿನಿಮಯ ಮಾಡಿ, ದೇಶದಲ್ಲಿ ಶಾಂತಿಸ್ಥಾಪನೆಗೆ ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬಂದಿದೆ. ಈ ಪ್ರಯತ್ನವು ಯಶಸ್ವಿಯಾಗಲೆಂದು ಹಾರೈಸುವೆವು.

ಸುಪ್ರಸಿದ್ಧ ವಿದ್ವಾಂಸರಾದ ವಿಜಾಪುರದ ರಾವ್ ಸಾಹೇಬ್ ಹಳಕಟ್ಟಿ ವಕೀಲರು 'ವಚನ ಶಾಸ್ತ್ರ ಸಾರ'ದ ಮೂರನೆಯ ಭಾಗವನ್ನು ಈಗತಾನೇ ಪ್ರಕಟಿಸಿ, ಕನ್ನಡಿಗರಿಗೆ ಮಹೋಪಕಾರಮಾಡಿದ್ದಾರೆ. ಅವರು ಈ ಹಿಂದೆ ಪ್ರಕಟಿಸಿರುವ "ವಚನ ಶಾಸ್ತ್ರ ಸಾರ"ದ ಒಂದು ಮತ್ತು ಎರಡನೆಯ ಭಾಗಗಳು ಕನ್ನಡ ಕವಿಚರಿತ್ರೆ" ಗಳಂತೆ ಕನ್ನಡ ಜನತೆಗೆ ಅತ್ಯಂತ ಉಪಯುಕ್ತವೆನಿಸಿವೆಯೆಂಬುದು ಎಲ್ಲರಿಗೂ ತಿಳಿದ ಮಾತಾಗಿದೆ.

ನಾಡಹಬ್ಬದ ಸಮಯದಲ್ಲಿ ನವಲಗುಂದದಲ್ಲಿ ಶ್ರೀಮನ್ನಿರಂಜನ ಬಸವಲಿಂಗಸ್ವಾಮಿಗಳು ಗವಿಮಠ, ಇವರ ನೇತೃತ್ವದಲ್ಲಿ ನೆರವೇರಬೇಕಾಗಿದ್ದ ಕನ್ನಡ ಸಾಹಿತ್ಯ ಸಮ್ಮೇಳನವು ಸದ್ಯಕ್ಕೆ ಮುಂದುವರಿಸಲಾಯಿತೆಂದು ಕೇಳುತ್ತೇವೆ.

ಸೊಲ್ಲಾಪುರದಲ್ಲಿ ಸುಮಾರು ೫೫ ವರುಷಗಳಿಂದ ಮರಾಠೀ ಮತ್ತು ಹಿಂದೀ ಭಾಷೆಗಳಲ್ಲಿ ನಡೆಸಲ್ಪಡುತ್ತಿರುವ "ಜೈನ ಬೋಧಕ" ಎಂಬ ಸಾಪ್ತಾಹಿಕ ಪತ್ರಿಕೆಯ ಸಂಪಾದಕರು, ಮುನಿವಿಹಾರಾಂಕ ಎಂಬ ಹೆಸರಿನಿಂದ ಒಂದು ಮಹತ್ವದ ವಿಶೇಷ ಸಂಚಿಕೆಯನ್ನು ಹೊರಡಿಸಿದ್ದಾರೆ ಅದರ ಬೆಲೆ ೨೦-೦ ಹಿಂದಿ 'ಕಲ್ಯಾಣ' ಮಾಸ ಪತ್ರಿಕೆಯ ವಿಶೇಷ ಸಂಚಿಕೆಯಂತೆ ಅದೇ ಆಕಾರದ ೨೫೦ ಪುಟಗಳ ದೊಡ್ಡ ಗ್ರಂಥ ಜೈನ ಧರ್ಮಕ್ಕೆ ಸಂಬಂಧಪಟ್ಟ ಹಲವು ಮಹತ್ವದ ವಿಷಯಗಳು, ಲೇಖನಗಳು, ವಿದ್ವಾಂಸರಿಂದ ಬರೆಯಲ್ಪಟ್ಟವೆ ಕೆಲವು ಜೈನಕ್ಷೇತ್ರಗಳ ಮತ್ತು ಮಹಾ ಪುರುಷರ ಚಿತ್ರಗಳಿಂದ ಈ ವಿಶೇಷ ಸಂಚಿಕೆಯು ಅಲಂಕೃತವಾಗಿದೆ ಸಂಪಾದಕರ ಈ ಮಹತ್ವಮಾದ ಕಾರ್ಯಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ

ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಾಡಹಬ್ಬದ ಸಲುವಾಗಿ ಈ ಮುಂದೆ ಹೇಳುವ ಕಾರ್ಯಕ್ರಮಗಳು ನಡೆದುವೆಂದು ಕೇಳುತ್ತೇವೆ

ತಾ|| ೧೩-೧೦-೩೯ ರಲ್ಲಿ ರಾಜಸೇವಾಸಕ್ತ ಪ್ರೊ|| ಬಿ ಎಂ ಶ್ರೀಕಂಠಯ್ಯನವರಿಂದ ಕನ್ನಡ ಬಾವುಟದ ಆರೋಹಣ ಮತ್ತು ನಾಡಹಬ್ಬದ ಮಹತ್ವ ಎಂಬ ಉಪನ್ಯಾಸ

ತಾ|| ೪೧೦-೩೯ರ ದಿನ ಶ್ರೀಮಾನ್ ಆಲೂರ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಬೆನಗಲ್ ರಾಮರಾಯರಿಂದ 'ಕರ್ನಾಟಕ ವಿಕೀಕರಣ' ಎಂಬ ಉಪನ್ಯಾಸ

ತಾ||೧೫-೧೦-೩೯ ರಲ್ಲಿ ಶ್ರೀಮಾನ್ ಆರ್ ಶ್ರೀನಿವಾಸಮೂರ್ತಿ ಬಿ ಎ, ಅವರ ಕರ್ನಾಟಕದಲ್ಲಿ ಧರ್ಮಗಳ ಸಾಮರಸ್ಯ ಎಂಬ ಉಪನ್ಯಾಸ, ಶ್ರೀಮಾನ್ ಬಿ. ಆರ್ ರಘುನಾಥರಾವ್ ಎಂ. ಎ ಎಲ್ ಎಲ್‌ಬಿ ಯವರಿಂದ ಕಾವ್ಯ ವಾಚನಮತ್ತು ಕನ್ನಡ ಬಾವುಟದ ಅವರೋಹಣ.

ಕನ್ನಡಿಗರ ಲೇಖನ ನೈಪುಣ್ಯ

ನಿಡುಮಾಮಿಡಿ ಮಠದ ಶ್ರೀ ಚೆನ್ನಬಸವರಾಜೇಂದ್ರ ಮಹಾಸ್ವಾಮಿಗಳವರು ಶರಣ ಸಾಹಿತ್ಯ ವಿಶೇಷ ಸಂಚಿಕೆಯ 'ಸನ್ಯಾಸ ಜೀವನವೂ ವೀರಶೈವ ಧರ್ಮವೂ' ಎಂಬ ಡೆಮ್ಮಿ ೭। ಪುಟಗಳ ಲೇಖನವೊಂದನ್ನು ಪೋಸ್ಟ್ ಕಾರ್ಡಿನ ಒಂದೇ ಮಗ್ಗುಲಲ್ಲಿ ಬರೆದಿದ್ದಾರೆಂಬ ಸಂಗತಿಯು ಈ ಹಿಂದೆಯೇ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದೆ ಇದು ಆಶ್ಚರ್ಯಕರವಾದ ಬರವಣಿಗೆಯೇ ಸರಿ.

ಇಂಥ ಇನ್ನೊಂದು ಆಶ್ಚರ್ಯಕರವಾದ ಬರವಣಿಗೆಯನ್ನು ಗದಗಿನ ಶ್ರೀ ಬಳ್ಳಾರಿ ಬಸವಪ್ಪನವರ ಮಕ್ಕಳಾದ ಶ್ರೀ ಗುರುಸಿದ್ದಪ್ಪನವರು ಒರೆದಿದ್ದಾರೆ. ಪೋಸ್ಟ್ ಕಾರ್ಡಿನ ಎಂಟರಲ್ಲಿ ಇಂಚು ಅಗಲ ೫॥ ಇಂಚ್ ಉದ್ದ ಇದ್ದ ಕಾಗದದಲ್ಲಿ ಶರಣ ಸಾಹಿತ್ಯ ವಿಶೇಷ ಸಂಚಿಕೆಯಲ್ಲಿಯ 'ಬಸವ ಗೀತ ಮತ್ತು ಭಗವದ್ಗೀತೆ ಎಂಬ ಡೆಮ್ಮಿ ೭॥ ಪುಟಗಳ ಲೇಖನವನ್ನು ಒರೆದಿದ್ದಾರೆ. ಇನ್ನೂ ಕಾಲು ಇಂಚಿನಷ್ಟು ಸ್ಥಳ ಉಳಿದಿದೆ. ಇದರಲ್ಲಿ ಸುಮಾರು ೭೦೦೦ ಅಕ್ಷರಗಳವೆ.

ಇಷ್ಟು ಸೂಕ್ಷ್ಮವಾಗಿ ಬರೆದಿದ್ದರೂ ಸ್ಪಷ್ಟವಾಗಿ ಓದಲು ಬರುವಂತಿದೆ. ಇದು ಕೈಯಿಂದ ಒರೆದುವೆಂದು ತಟ್ಟನೆ ಗೊತ್ತಾಗುವುದಿಲ್ಲ ಇದು ನಿಜವಾಗಿಯೂ ಆಶ್ಚರ್ಯಕರವಾದ ಬರವಣಿಗೆಯೇ ಸರಿ

ಇದರಿಂದ ನಮ್ಮ ಕನ್ನಡ ಲಿಪಿಯು ಎಷ್ಟು ಸುಗಮವಾದುದೆಂಬ ಒಂದು ಹೆಮ್ಮೆಯೂ ಕನ್ನಡಿಗರಿಗುಂಟಾಗುವುದಾಗಿದ ಇಂಥ ಲೇಖನವನ್ನು ಇಷ್ಟು ಚಿಕ್ಕ ಸ್ಥಳದಲ್ಲಿ ದೇವನಾಗರೀ ಲಿಪಿಯಿಂದ ಬರೆಯುವುದು ಶಕ್ಯವೇ ? ಎಂದೆಂದಿಗೂ ಶಕ್ಯವಿಲ್ಲ. ಅಂತೂ ಇದೊಂದು ಅಚಿನಂದನೀಯವಾದ ಬರವಣಿಗೆ ಕನ್ನಡಿಗನಿಗೆ ಅಭಿಮಾನದ ಸಂಗತಿ.

—ಓರ್ವ ಕನ್ನಡಿಗ

ಈ ವಾರದ ತೆರೆ-ಮರೆಯಲ್ಲಿ

ನಿಮ್ಮ ನಿಮ್ಮ ಅದೃಷ್ಟಸ್ವರೂಪವು ಹೇಗಿದೆ ?

(ಜ್ಯೋತಿಷ್ಯರು:--ಅರಮನೆಖಿಲ್ಲೆದ್‌ದಾರ್ ಬ್ರಂಃ ಶ್ರೀ॥ ಸಿದ್ಧಾಂತಿ ವೀರಭದ್ರ ಶಾಸ್ತ್ರಿಗಳು, ಆಸ್ಥಾನ ವಿದ್ವಾನ್, ರೇಣುಕ ವಿಲಾಸ, ತುಮಕೂರು.

ತಾ॥ ೨೦-೧೦-೩೯ ರಿಂದ ೨೭-೧೦-೧೯೩೯ರವರೆಗೆ

ಮೇಷರಾಶಿ

ಮನಸ್ಸು ಸುಧಾರಣೆಯನ್ನು ಹೊಂದದು. ಆದಾಯ—ವ್ಯಯ ಸಮಾನ. ಸಾಲದ ತೊಂದರೆ ಅಪಾರ. ಜನಸಾಮಾನ್ಯದಲ್ಲಿ ಕೀರ್ತಿ. ನೌಕರರು ಅಜಾಗರೂಕತೆಯಿಂದ ತಾಪತ್ರಯ ಪಡುತ್ತಾರೆ. ಈವಾರ ವ್ಯಸನನೇ ಅವಾರ. ವಿದ್ವಜ್ಜನರ ಭೇಟಿ. ಉಷ್ಣರೋಗದಿಂದ ನರಳುತ್ತೀರಿ. ವ್ಯಯದ ಕೋಟಲೆ ಸಹನಾತೀತ. ಶತ್ರುಗಳು ತಣ್ಣಗಿರುವರು. ಕೋರ್ಟು ಕಛೇರಿ ಕಾರ್ಯಗಳು ಮುಂದೆ ಬೀಳುತ್ತವೆ. ವ್ಯಾಪಾರಿಗಳಿಗೆ ಹರ್ಷಯೋಗ. ತೃಷಿಕರಿಗೆ ತೊಂದರೆ; ವಿದ್ಯಾರ್ಥಿಗಳಿಗೆ ಹರ್ಷ. ನಿಮ್ಮ ಯತ್ನಕಾರ್ಯಗಳು ಗರು—ಶುಕ್ರವಾರಗಳಂದು ಆಗುತ್ತವೆ. ಆಪ್ತೇಷ್ಟರ ದರ್ಶನ.

ವೃಷಭರಾಶಿ

'ಅತಿಯಾಶೆ ಗತಿಕೆಡಿಸಲಿದೆ'; ಆಪ್ತೇಷ್ಟವರ್ಗದವರಿಂದ ಆಹ್ವಾನ. ಮನೆಯಲ್ಲಿ ಜಗಳವು ಬೆಳೆಯುವ ಸಂಭವ. ಸಂತಾನದ ಸಲುವಾಗಿ ಧನವ್ಯಯ. ಮನೆಯ ಹೆಂಗುಸರಿಗೆ ಉದರ ಬೇನೆ. ಸಹೋದರರಿಗಾಗಿ ಚಿಂತೆ. ಮನೆಯವರ ಆರೋಗ್ಯವು ನೆಟ್ಟಗಿರಲಾರದು. ಹಣದ ಅಡಚನೆ ಅಪಾರ. ಸಟ್ಟಾ ವ್ಯಾಪಾರದವರಿಗೆ ನಿಳಿಗೆಯಿದೆ. ಸ್ಥಿರಸ್ವತ್ತಿನ ವಿಚಾರವಾಗಿ ಯೋಚನೆ. ಪ್ರವಾಸಗಾರರಿಗೆ ನಿರೀಕ್ಷಿತ ಫಲ ದೊರೆಯದು. ಅನ್ಯಸ್ಥಳದ ಪತದಿಂದ ಹೆಚ್ಚಿನ-ಸಂಗತಿ ತಿಳಿಯಲಿದೆ ಯತ್ನಕಾರ್ಯವು ಅರ್ಧಾಂತಿಕ. ಸಮಾಜದಲ್ಲಿ ಮಾನ್ಯತೆ. ಕೋರ್ಟು ಕಾರ್ಯದಲ್ಲಿ ಸುಮುಖವಾರ್ತೆ.। ಭಾನು—ಸೋಮವಾರಗಳಂದು ಯತ್ನಕಾರ್ಯ ಸಿದ್ಧಿ.

ಮಿಥುನರಾಶಿ

ನೆನೆಸುತ್ತಿರುವ ಕಾರ್ಯವು ಮುಗಿಯುವ ಕಾಲ ಬಂದಿದೆ. ಯೋಚನೆಯು ಎಲ್ಲೆ ಮೀರಿದೆ. ಮನೆಯವರ ಆರೋಗ್ಯವು ಕೆಡಲಿದೆ. ಪಿತ್ತೋಷ್ಣ ಬಾಧೆಯಿಂದ ನರಳುತ್ತೀರಿ. ಹಣದ ತಾಪತ್ರಯ ವಚನ ಭ್ರಷ್ಟತ್ವ. ಮನೆಯಲ್ಲಿ ಜಗಳ. ಭೂಮಿ ಕಾಣಿಕೆಗಳ ಯೋಚನೆಯಿಂದ ಸೊರಗಿರುತ್ತೀರಿ. ರೋಷಗೊಂಡು ಯಾವಕಾರ್ಯದಲ್ಲಿಯೂ ಈವಾರ ಕೈಯಿಡಬೇಡಿ. ಆರಂಭಗಾರರಿಗೆ ಯೋಚನಾ ತರಂಗಗಳುಂಟಾಗಲಿದೆ. ವಣಿಜರಿಗೆ ಲಾಭ. ನಂಬಿ ಮಾಡುವ ಕೆಲಸದಲ್ಲಿ ವಂಚಕತನ. ಶತ್ರುಗಳ ತಂತ್ರವು ಸಾಗಲಾರದು ಭರವಸೆಯಮಾತು. ಸದ್ಯಕ್ಕೆ ಸಾಗದು ನಿಮ್ಮ ಯತ್ನಕಾರ್ಯವು ಸೋಮ—ಮಂಗಳವಾರಗಳಂದು ಫಲಿಸುತ್ತದೆ.

ಕರ್ಕಾಟಕರಾಶಿ

ಯೋಚನಾ ತರಂಗಗಳಿಗೆ ಬಲಿಯಾಗುತ್ತಿರುವಿರಿ. ಹಣದ ಎಡರು; ಬರುವ ಹಣಕ್ಕೆ ವಿಘ್ನ. ಮನಸ್ಸಿಗೆ ಕೊರತೆಯು ತಪ್ಪದು. ನಿದ್ದೆಹತ್ತದು ಋಣದ ಬೇನೆ ಹೆಚ್ಚುತ್ತಿದೆ. ಕೋರ್ಟು ಕಛೇರಿ ಕಾರ್ಯಗಳು ಮುಂದೆ ಬೀಳುತ್ತವೆ. ಸಟ್ಟಾ ವ್ಯಾಪಾರದಿಂದ ಹೆಚ್ಚು ಫಲ ದೊರೆಯದು. ವಿದ್ಯಾರ್ಥಿಗಳು ಹರ್ಷದಿಂದ ಕಾಲಯಾಪನೆ ಮಾಡುತ್ತಾರೆ. ಪಾಮರರಿಗಾಗಿ ದಯತೋರಿಸುತ್ತೀರಿ. ವಚನ ಭ್ರಷ್ಟರಾಗತಕ್ಕ ಕಾಲವಿದು. ನೊತನ ಗೆಳೆಯರ ಸಹವಾಸ. ಅಧಿಕಪ್ರಸಂಗದಿಂದ ಕೇಡು. ಸಂಸಾರದಲ್ಲಿ ಜಗಳ. ದಾಕ್ಷಿಣ್ಯಕ್ಕೆ ಬಲಿಯಾಗತಕ್ಕ ಸಂಭವ. ನಿಮ್ಮವರಿಂದ ಈವಾರ ಆಮಂತ್ರಣವಿದೆ ನಿಮ್ಮ ಯತ್ನಕಾರ್ಯವು ಭಾನು—ಸೋಮವಾರಗಳಂದು ಪಕ್ವವಾಗುತ್ತದೆ.

ಸಿಂಹರಾಶಿ

ನೂತನಕಾರ್ಯಗಳಿಗೆ ಇದು ಸರಿಯಾದ ಕಾಲವಲ್ಲ. ಅತ್ಯಾಶೆಗೆ ಬಲಿಯಾಗುತ್ತೀರಿ. ಯಾವುದಕ್ಕೂ ಕಪಿಮುಷ್ಟಿ ಮಾಡಬೇಡಿ. ಚಿಲ್ಲರೆ ಪ್ರವಾಸಯೋಗವಿದೆ. ಪಿತ್ತೋಷ್ಣದಿಂದ ನರಳುತ್ತೀರಿ. ನೌಕರರು ಬೇಸತ್ತುಹೋಗುತ್ತಾರೆ. ಪ್ರಸಕ್ತವಾದ ವಿಶೇಷಾಂಶವೊಂದು ನಡೆಯಲಿದೆ. ಮನೆಯವರು ನಿಮ್ಮ ಅಂಕೆಯಲ್ಲಿರುವುದಿಲ್ಲ. ಸರ್ಕಾರಿ ಕಾರ್ಯಗಳಲ್ಲಿ ಹರ್ಷ. ವ್ಯಾಪಾರಿಗಳಿಗೆ ಸಾಕಾದಷ್ಟು ಆದಾಯವಿರಲಾರದು. ಸಾಲದ ಕೊರಗು ಅವಾರ. ಪ್ರವಾಸಗತರು ಹಿಂತಿರುಗುತ್ತಾರೆ. ಸಂತಾಪಕರವಾದ ಖಾತೆ-ಬರಲಿದೆ. ಸ್ನೇಹಿತರು ಮೋಸಮಾಡುತ್ತಾರೆ. ಆಪ್ತೇಷ್ಟವರ್ಗ ಸಮಾಗಮ. ನಿಮ್ಮ ಯತ್ನಕಾರ್ಯವು ಶಕ್ರವಾರ ಆಗಲಿದೆ

ಕನ್ಯಾರಾಶಿ

ಮನದ ಆಶಯವು ಫಲಿಸುವ ಕಾಲ. ಆರ್ಥಿಕ ಬಿಕ್ಕಟ್ಟು ಅಪಾರ. ಹಣಗಾರರಿಗೆ ಚಿಂತೆಯವಾರ. ಆಶ್ರಿತರು ವಂಚಿಸುತ್ತಾರೆ. ಮನೆಯಲ್ಲಿ ಕಲಹ. ಮಕ್ಕಳ ಸಲುವಾಗಿ ಕೊರಗು. ಸಾಲದಚಿಂತೆ ಬೆಳೆಯುತ್ತಿದೆ ನಂಬಿಕೆ ಭಂಗ. ನಿಮ್ಮ ಚಲನವಲನಗಳಲ್ಲಿ ಅರಿವಿರಲಿ. ಆಯಾಸವು ಅವಾರ. ಕೋರ್ಟುಕಾರ್ಯಗಳಲ್ಲಿ ಹರ್ಷ. ವಿದ್ಯಾರ್ಥಿಗಳಿಗೆ ಯಶಸ್ಸು ನೆಂಟರಿಂದ ವಂಚನೆ. ಅಕಾಲ ಸಂಚಾರದಿಂದ ಕೇಡು. ಜೋರಭಯ. ಗುರು ಶುಕ್ರವಾರಗಳಂದು ವಿಶೇಷ ಸಂಗತಿ ಜರುಗಲಿದೆ. ಆಪ್ತೇಷ್ಟರ ಸಮಾಗಮ.

ತುಲಾ ರಾಶಿ

ಯೋಚನೆಗಳೆಲ್ಲ ಅರ್ಧಾಂತಿಕವಾಗುತ್ತವೆ. ದುಡ್ಡಿನ ತೊಂದರೆ ಹೇಳತೀರದು. ಮನಕ್ಕೆ ತ್ರಾಸ ಅಪಾರ. ಜನಸಾಮಾನ್ಯದಲ್ಲಿ ಕೀರ್ತಿ. ಅತ್ಯಾಶೆಯಿಂದ ಅಧಿಕ ಶ್ರಮ. ಆದಾಯ—ವ್ಯಯಸಮಾನ. ಶತ್ರುಜಯ. ಕೋರ್ಟುಕಾರ್ಯಗಳು ಮುಂದೆ ಬೀಳುತ್ತವೆ. ನಿರೀಕ್ಷಿತ ಧನಕನಿನ ಗಂಟು. ಈವಾರ ಸಂತಾಪಕರವಾರ್ತೆಯೊಂದು ಬರಲಿದೆ. ವಾಹನ ಭಯ. ವಿದ್ಯಾರ್ಥಿಗಳಿಗೆ ಹರ್ಷ. ಮನೆಯವರ ಆರೋಗ್ಯವು ನೆಮ್ಮದಿಯಾಗಿರಲಾರದು. ಮಕ್ಕಳಿಗಾಗಿ ಧನವ್ಯಯ. ಮರ್ಯಾದೆಯನ್ನು ಪರೀಕ್ಷಿಸುವಂತಹ ಸನ್ನಿವೇಶ ವ್ಯಾಪಾರಗಾರರಿಗೆ ನೆವ್ಮದಿಯಿದೆ. ಬುಧ—ಗುರುವಾರಗಳಂದು ವಿಜಯವಾರ್ತೆ.

ವೃಶ್ಚಿಕ ರಾಶಿ

ಮನಸ್ಸಿನ ಬಯಕೆಯು ಈಡೇರುತ್ತಿದೆ. ಗಣ್ಯವ್ಯಕ್ತಿಗಳ ಸಂದರ್ಶನ. ಉದಾತ್ತ ವಿಚಾರ ಸಾಧನೆಯತ್ನ. ಜನಾನುವಿಚಾರವಾಗಿ ಯೋಚನೆ ಅತಿಶಯ ಕಾರ್ಯವೊಂದು ಈವಾರ 'ನಡೆದುಹೋಗುತ್ತದೆ ಅಕಾಲನಿದ್ರೆ ರಾಜದರ್ಶನ ಮಾಯಾವಸ್ತುಗಳಿಗೆ ಮನಸೊಲುವ ಸನ್ನಿವೇಶ. ಸಟ್ಟಾ ವ್ಯಾಪಾರಗಾರರಿಗೆ ಲಾಭ. ಪಡ್ರಸೋವೇತ ಭೋಜನ. ದೂಷಣೆಗೆ ಒಳಗಾಗುತ್ತೀರಿ. ಹೆಂಗುಸಿಗೆ ಉದರಬೇನೆ. ವಿದ್ಯಾರ್ಥಿಗಳಿಗೆ ಉತ್ಸಾಹಯೋಗ. ಸ್ತ್ರೀಯರ ಮನೋಗತವರಿಯದೆ ಕಂಗೆಡುತ್ತೀರಿ ಶನಿ—ಭಾನುವಾರಗಳಂದ್ರು ಆಶಯವು ಫಲಿಸುವ ಯೋಗವಿದೆ

ಧನೂರಾಶಿ

ಕಾರ್ಯಗಳಿಗೆ ವಿಘ್ನ. ದಣಿಗೆರಡು ಬಗೆಯುವ ಸಂಭವ. ಆಶ್ರಿತರು ಅವಿಧೇಯರಾಗುತ್ತಾರೆ. ಮನೆಯಲ್ಲಿ ಜಗಳ-ಮಕ್ಕಳ ನೆಮ್ಮದಿಗೆ ಭಂಗ ಪ್ರಕೃತಿ ಕೆಡಲಿದೆ ವ್ಯಾಪಾರಗಾರರಿಗೆ ಸಾಮಾನ್ಯಲಾಭ ಅಕಾಲಸಂಚಾರ. ವಿದ್ಯಾಜೀವಿಗಳಿಗೆ ಅಂತಕಸರಂಪರೆ. ಲಿಕ್ಷಪತ್ರದಲ್ಲಿ ಕ್ರಮತಪ್ಪುತ್ತೀರಿ. ಸ್ನೇಹಿತರಿಂದ ಆಹ್ವಾನ ಬರಲಿದೆ. ಬರುವಹಣ ಕನಸಿನ ಗಂಟಾಗುತ್ತದೆ ಮೂಲಾ ನಕ್ಷತ್ರದ ಸ್ತ್ರೀಯರು ಗರ್ಭಿಣಿಯಾಗುತ್ತಾರೆ. ಸಾಲಗಾರರ ಕೋಟಲೆ. ಖರ್ಚಿನ ಪ್ರಸಂಗಗಳಿಗೆ ಮಿತಿಯೇ ಇಲ್ಲ! ಕೋರ್ಟು—ಕಛೇರಿ ಕಾರ್ಯಗಳು ಮುಂದೆಬೀಳುತ್ತವೆ. ಪವಿತ್ರ ಸ್ಥಳಗಳ ಸಂದರ್ಶನ ಗುರು—ಶುಕ್ರವಾರಗಳಂದು ನಿಮ್ಮ ಹಂಬಲಿಕೆ ನೆರವೇರುತ್ತದೆ

ಮಕರರಾಶಿ

ಕಾರ್ಯಗಳೊಂದೂ ಕೈಗೂಡವು. ಈವಾರ ವಿಶೇಷ ಘಟನೆಯೊಂದು ನಡೆಯಲಿದೆ. ಆತಿಯಿಂದ ಕೊರಗುತ್ತೀರಿ; ಫಲವು ಮಾತ್ರ ಕನಸಿನ ಗಂಟು ದಣಿಗೆ ವಂಚನೆ ಭಾಗಸ್ಥರ ಮೋಸಕ್ಕೆ ಬಲಿಯಾಗುತ್ತೀರಿ. ಯಾವ ಕಾರ್ಯವನ್ನೂ ರಂಭಿಸಲಿ, ಜಿಗುಪ್ಸೆ ಹಣದ ಅಭಾವ. ಅಪಾರ ಆಪ್ತೇಷ್ಟರ ಆಗಮನ—ಸರ್ಗ ಮನ. ಮಕ್ಕಳ ಆರೋಗ್ಯ ನೆಟ್ಟಗಿರಲಾರದು ನಿಮ್ಮ ಕುಟುಂಬಕ್ಕೆ ಉದರಬೇನೆ. ಜೋರದೃಷ್ಟಿ ಕಾರ್ಯನಷ್ಟ ಶ್ರವಣ ನಕ್ಷತ್ರದ ಸ್ತ್ರೀಯರಿಗೆ ಸಂತಾನಯೋಗ ಅನೀತಿಕಾರ್ಯದಲ್ಲಿ ಅತಿಯಾಡುವ ಸಂಭವ. ಅತ್ತೆ—ಸೊಸೆಯರಿಗೆ ಜಗಳ ಸರಸದ ಮಾತುಗಳೇ ಅಂಗುಕವಾಗುತ್ತವೆ ರಾಜಕಾರ್ಯದಲ್ಲಿ ಬೇಸರ. ಶನಿ—ಭಾನುವಾರಗಳಂದು ಸುಗಮವಾದ ವಾರ್ತೆ

ಕುಂಭರಾಶಿ

ಆಲೋಚನೆಗಳು ಸುಧಾರಣೆಗೆ ಬರುತ್ತವೆ. ಬರುವ ಹಣಕ್ಕೆ ಅಡಚನೆ. ಮನೆಯ ಗೂಢವಿಷಯಗಳು ಬೆಳಕಿಗೆ ಬರಲಿವೆ ಸ್ತ್ರೀಯರಿಗೆ ಗರ್ಭಕೋಶದಬೇನೆ. ದಾಕ್ಷಿಣ್ಯಕ್ಕೆ ಒಲಿಯಾಗುತ್ತೀರಿ. ನಂಬಿಕೆದ್ರೋಹ. ಮನಸ್ಸಿಗೆ ಅವಾರ ಆಯಾಸ ಕುಟುಂಬದಲ್ಲಿ ಒಡಕು. ವ್ಯಾಪಾರಗಾರರಿಗೆ ತೇಜೋವೃದ್ಧಿ ಚರಸ್ಥಿರಾಸ್ತಿ ಗೊಂದಲ. ಕರ್ತರ ಮನಸ್ಸು ಕೆಡಲಿದೆ ಸರ್ಕಾರಿ ಕೆಲಸದಲ್ಲಿ ವಿಜಯವಾರ್ತೆ ವಿಶ್ವಾಸದಲ್ಲಿ ಕೊರಳು ಕುಯ್ಯುವ ಕಾರ್ಯವನ್ನು ಮಾಡುತ್ತಿರುವಿರಿ. ಶನಿ—ಭಾನುವಾರಗಳಂದು ಕಾರ್ಯ ವಿಜಯ

ಹೀಗೆ ಪೂಜೆಯನ್ನು ಪೂರೈಸಿ ಊರಿನ ಎಲ್ಲೆಯ ಹೊರಗೆ ಹೋಗಿರುವ (ಈಶಾನ್ಯ ದಿಕ್ಕಿನಲ್ಲಿದ್ದರೆ ಉತ್ತಮ) ಬನ್ನಿಯ ಗಿಡವನ್ನು ಪೂಜಿಸಬೇಕು

ಅಮಂಗಲಾನಾಂ ಶಮನೀಂ ಶಮನೀಂ ದುಷ್ಕೃತಸ್ಯಚ। ದುಃ ಸ್ವಪ್ನ ನಾಶಿನೀಂ ಧನ್ಯಾಂ ಪ್ರಪದ್ಯೇ ಹಂ ಶಮೀಂ ಶುಭಾಂ॥ ಶಮೀ ಶಮಯತೇ ಪಾಪಂ ಶಮೀ ಶತ್ರು ವಿನಾಶಿನೀ। ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ॥

ಇತ್ಯಾದಿ ಮಂತ್ರಗಳಿಂದ ಶಮೀ ವೃಕ್ಷವನ್ನು ಷೋಡಶೋಪಚಾರದಿಂದ ಪೂಜಿಸಿ ಪ್ರಾರ್ಥಿಸಬೇಕು. ಅನಂತರ ಪ್ರಸಾದ ರೂಪವಾಗಿ ಅದರ ಎಲೆಗಳನ್ನು ಸಂಗ್ರಹಿಸಿ ಇಷ್ಟ ಮಿತ್ರ ಬಾಂಧವರಿಗೆ ಅರ್ಪಿಸಿ ತಮ್ಮ ತಮ್ಮ ಪ್ರೇಮವನ್ನು ವ್ಯಕ್ತಗೊಳಿಸಬೇಕು ಈ ಹಬ್ಬದಲ್ಲಿ ಒಬ್ಬರನ್ನೊಬ್ಬರು ಅತಿ ಪ್ರೇಮದಿಂದ ಆಲಿಂಗಿಸುವುದೂ ಹಸ್ತಲಾಘವನ್ನು ಕೊಡುವುದೂ ಮುಂತಾದ ಪ್ರೀತಿ ವಿಶ್ವಾಸಗಳನ್ನು ಸೂಚಿಸುವ ಪದ್ಧತಿಯು ಉತ್ತರ ಖಂಡದಲ್ಲಿ ವಿಶೇಷವಾಗಿರುತ್ತದೆ.

ಈ ಹಬ್ಬವು ಸಂಪೂರ್ಣ ಭರತಖಂಡದಲ್ಲಿ ಆಚರಿಸಲ್ಪಡುತ್ತದೆ. ಆದರಲ್ಲಿಯೂ ರಾಜಪೂತ್ ದೇಶದಲ್ಲಿ ಮತ್ತು ಕಲ್ಕತ್ತಾ ಕಾಶಿಗಳಲ್ಲಿ ವಿಶೇಷರೀತಿಯಿಂದ ಬಹು ಉಲ್ಲಾಸದಿಂದ ಆಚರಿಸಲ್ಪಡುತ್ತದೆ ಕಲ್ಕತ್ತೆಯ ಉತ್ಸವಕ್ಕಿಂತಲೂ ಕಾಶಿಯ ಉತ್ಸವವೇ ಬಹು ರಮಣೀಯವಾಗಿರುತ್ತದೆ. ಬಂಗಾಲಿಗಳು ಕೇವಲ ಕಾಳೀದೇವಿಯ ಉಪಾಸನರಾದುದರಿಂದ ಈ ಹಬ್ಬವನ್ನು ಅತಿಭಕ್ತಿ, ಉಲ್ಲಾಸ, ಗಳಂಡ ವಿಶೇಷ ಖರ್ಚಿನೊಡನೆ ಒಂಬತ್ತು ದಿನಗಳವರೆಗೆ ಜಪ,ಅನುಷ್ಠಾನ, ದಾನ, ಹೋಮ, ಮುಂತಾದ ಕರ್ಮಗಳ ಮೂಲಕ ಅತಿವೈಭವದಿಂದ ಆಚರಿಸುತ್ತಾರೆ.

ಒಂದೊಂದು ದುರ್ಗಾಮೂರ್ತಿಗೆ ನೂರಾರು ರೂಪಾಯಿಗಳನ್ನು ಕೊಟ್ಟು ಮಾಡಿಸಿ ಅದಕ್ಕೆ ನಾನಾವಿಧವಾಗಿ ಅಲಂಕರಿಸಿ ವಿಜಯದಶಮಿಯ ಸಾಯಂಕಾಲದಲ್ಲಿ ಉತ್ಸವದೊಡನೆ ತಂದು ಪರಮಪಾವನವಾದ ಗಂಗಾಮಾತೆಯ ಉದರದಲ್ಲಿ ಐಕ್ಯಮಾಡುತ್ತಾರೆ. ಈ ವಿಧವಾದ ಉತ್ಸವಗಳು ಆದಿನದಲ್ಲಿ ಸುಮಾರು ೫೦೦ಕ್ಕೆ, ಕಡಿಮೆ ಇಲ್ಲದಂತೆ ಗಂಗಾನದಿಗೆ ಬರುತ್ತವೆ. ಚಿಲ್ಲರೆಯಾಗಿ ಬರುವ ಸಣ್ಣ ಉತ್ಸವಗಳು ಅಸಂಖ್ಯವಾಗಿರುತ್ತವೆ. ಆ ವಿಜಯದಶಮಿಯಲ್ಲಿನ ವಂಗೀಯದ ಆನಂದವನ್ನು ನೋಡಿದವರಿಗೆ ಗೊತ್ತೇ ಹೊರತು ಬರೆಯಲು ಸಾಧ್ಯವಿಲ್ಲ. ಒಟ್ಟಿನಮೇಲೆ ಆದಿನವು ಜಗನ್ಮಾತೆಯಾದ ದುರ್ಗಾದೇವಿಯ ಸಾಕ್ಷಾತ್ಕಾರದ ದಿನವೆಂದು ಹೇಳಬಹುದು

ವಿಜಯದಶಮಿಯಲ್ಲಿ ಶಮಿವೃಕ್ಷದ ಪೂಜೆಯು ಬಹುಮುಖ್ಯವಾದುದು ಶಮೀ ಪೂಜೆಯು ದುರ್ಗಾದೇವಿಪೂಜೆಯು ಸ್ವರೂಪವೇ ಆಗಿದೆ. ರಣಯಾತ್ರೆಗೆ ಹೊರಡುವ ಶ್ರೀರಾಮಚಂದ್ರನು ಶಮೀಪೂಜೆಯನ್ನು ಮಾಡಿ ಜಯಶೀಲನಾದನು ಗುಪ್ತವಾಸವನ್ನು ಮಾಡಿದ ಸಮಯದಲ್ಲಿ ಅರ್ಜುನನ ಆಯುಧಗಳನ್ನು ಶಮೀವೃಕ್ಷವೇ ಕಾಪಾಡಿತು. ಈ ಕಾರಣದಿಂದಲೇ ಭಾರತೀಯರು ಶಮೀಪೂಜೆಯ ಮೂಲಕವಾಗಿ ವಿಜಯದಶಮಿಯನ್ನು ಆಚರಿಸುತ್ತಾರೆ. ನಮ್ಮನ್ನಾಳುವ ರಾಜರ್ಷಿಗಳಾದ ಕೃಷ್ಣರಾಜ ಪ್ರಭುಗಳು. ಜಗನ್ಮಾತೆಯಾದ ಶ್ರೀ ಚಾಮುಂಡಾಂಬಿಕೆಯ ಪೂಜೆಯನ್ನೂ ಶಮೀ ಪೂಜೆಯನ್ನೂ ಅನನ್ಯ ಸಾಧಾರಣ ವೈಭವದಿಂದ ಪ್ರತಿವರ್ಷದಲ್ಲಿ ನೆರವೇರಿಸುತ್ತಿರುವರಾದುದರಿಂದ ಆ ಮಹಾಪ್ರಭುಗಳೂ ಆವರ ಪ್ರಜೆಗಳೂ ಚಾಮುಂಡಾಂಬಿಕೆಯ ಮಹಾಪ್ರಸಾದದಿಂದ ಅತ್ಯಂತ ಸುಖಿಗಳಾಗಿರುವರು ಇಂತಹ ನಮ್ಮ ರಾಜರ್ಷಿಗಳು ಸಪರಿವಾರರಾಗಿ ಚಿರಂಜೀವಿಗಳಾಗಿರುವಂತೆ ವಿಜಯದಶಮಿಯ ಅಧಿದೇವತೆಯಾದ ಶ್ರೀ ಚಾಮುಂಡಾಂಬಿಕೆಯು ಆಶೀರ್ವದಿಸಲಿ

ಇತಿಶಿವಂ.

....

ಪುತ್ತೂರಿನ ನಾಡಹಬ್ಬ

....

ನಾಡಹಬ್ಬದ ಸಲುವಾಗಿ ಪುತ್ತೂರಿನಲ್ಲಿ. ಈ ಕೆಳಗೆ ಕಂಡಂತೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಅಕ್ಟೋಬರ್ ೧೯೫೯

	ಉಪನ್ಯಾಸಗಳು	ವಿನೋದಗಳು
೧೩	ಬ್ರಿಟಿಷ್ ಸಾಮ್ರಾಜ್ಯತ್ವ ಶ್ರೀ ನಾ ಕಸ್ತೂರಿ, ಎಂ. ಎ., ಮೈಸೂರು	ಅಲ್ಲಾವುದ್ದೀನ್ (ನೃತ್ಯ)
೧೪	ವಿಜಯ ನಗರದ ದಿನಗಳು ಶ್ರೀ ಹೆಚ್. ರಾಮರಾಯರು, ಮಂಗಳೂರು.	ಗೊಂದಲಿಟ
೧೫	ಚೀನದ ಸಂಸ್ಕೃತಿ ಶ್ರೀ ಹನುಮಂತರಾವ್, ಕೊಣ್ಣೂರು ಎಂ ಎ. ಬಿಜಾಪುರ (ಶ್ರೀ ಮಧುಲಿಂಗ-ಹಲಸಂಗಿ)	ಬಿಜಾಪುರದ ಲಾವಣಿಗಳು
೧೬	ಆರೋಗ್ಯ ಜೀವನ ಪ್ರೊ ಕೆ. ವಿ. ಐಯರ್, ಬೆಂಗಳೂರು	ಇಸ್ಪೀಟು ಗುಲಾಮ [ಗದ್ಯ ನಾಟಕ]
೧೭	ಸಾಹಿತ್ಯದಲ್ಲಿ ವಿಡಂಬನ, ವ್ಯಂಗ್ಯ, ಅಪಹಾಸ, ಯಾಗ ಪಶು ಪರಿಹಾಸಗಳ ಸ್ಥಾನ ಶ್ರಿ ಜಿ. ಪಿ ರಾಜರತ್ನಂ, ಎಂ, ಎ. ಬೆಂಗಳೂರು	[ದೃಶ್ಯಾವಳಿ]
೧೮	ಸಾರಜನಕ ಶ್ರೀ. ಎಚ್. ಸುಬ್ಬಾ ಜೋಯಿಸ್ ಎಂ. ಎಸ್. ಸಿ. ಬೆಂಗಳೂರು [ಗದ್ಯ ನಾಟಕ]	ಒಂದೇ ಹಾಡು
೧೯	ಭರತ ಖಂಡದ ಆರ್ಥಿಕ ಸಮಸ್ಯೆಗಳು ಶ್ರೀ. ವಿ. ಸೀತಾರಾಮಯ್ಯ ಎಂ ಎ ಬೆಂಗಳೂರು	ಹಿಂದಿನಕಾಲ [ಗೀತಾ ನಾಟಕ]
೨೦	ಪಾಶ್ಚಾತ್ಯರಿಂದ ನಮಗೇನು ಲಾಭ? ಸರ್ ಟಿ. ವಿಜಯರಾಘವಾಚಾರ್ಯರವರು	ಸೀತಾಪಹರಣ [ಕಿನ್ನರ ನೃತ್ಯ]
೨೧	ಅನ್ನಸಮಸ್ಯೆ ಶ್ರೀ ದ ರಾ ಬೇಂಧ್ರೆ ಎಂ. ಎ. ಧಾರವಾಡ	ಭಾರತ ವಚನ [ಶ್ರೀ ಸುಪತ್ಯುಮಾ ರಾಚಾರ್ಯರಿಂದ]
೨೨	ನಾಳಿನ ಸಂಸ್ಕೃತಿ ಶ್ರೀ. ವಿ. ಕೃ. ಗೋಕಾಕ್ ಎಂ. ಎ ಸಾಂಗ್ಲಿ	ಸೀತಾಪಹರಣ (ಪುನರಾವರ್ತನೆ)

ಪ್ರತಿನಿತ್ಯವೂ:—ಹುಡುಗರ ವ್ಯಾಯಾಮ ಪ್ರದರ್ಶನವೇರ್ಪಡಿಸಲಾಗಿತ್ತು.

ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು ಎಂ. ಎಂ.

ಇವರನ್ನು ಮೈಸೂರು ಸರ್ಕಾರದವರು ಎಕ್ಸೈಸ್ ಕಮಿಷನರ್ ಆಗಿನೇಮಿಸಿದ್ದಾರೆ

....

ಗುಹೇಶ್ವರನ ಗುಟ್ಟು

ಪೌರಾಣಿಕರು ಗೃಹಸ್ಥಾಶ್ರಮಶ್ರೇಷ್ಠವೆನ್ನುತ್ತಾರೆ. ಆಧುನಿಕರು ಬ್ರಹ್ಮಚರ್ಯಮಿಗಿಲೆನ್ನುತ್ತಾರೆ. ಹಾಗಾದರೆ, ಇನ್ನು ಮುಂದೆ ಸ್ತ್ರೀಪುರುಷರೆಲ್ಲರೂ ಬ್ರಹ್ಮಚರ್ಯವ್ರತವನ್ನು ಕೈಕೊಳ್ಳುವುದೇ ಲೇಸು ಅಲ್ಲಿಂದ ಮುಂದೆ ಬ್ರಹ್ಮಚಾರಿ ಗಾಂಧಿಯವರು ಸ್ವರಾಜ್ಯವನ್ನು ಯಾರಿಗೆ ಗಳಿಸುವರೆಂಬುದು ಒಂದು ಸ್ವಾರಸ್ಯವಾದ ಗುಟ್ಟು.

ಕರ್ನಾಟಕದ ಒಂದೂರಿನಲ್ಲಿ ಒಬ್ಬ ದೊಡ್ಡ ಬ್ರಹ್ಮಚಾರಿಗಳಾಗಿದ್ದಾರೆ. ಆವರ ದೊಂದು ದೊಡ್ಡ ಕಾರ್ಯಾಲಯವಿದೆ ಆದರ ಮುಂದೆ "ಬಾಲಬ್ರಹ್ಮಚಾರಿ..... ಅಂಡ್ ಸನ್ಸ್" ಎಂಬ ಹಲಗೆಯಿದೆ. ಬ್ರಹ್ಮಚಾರಿಗಳಿಗೆ ಮಕ್ಕಳಾಗುವ ಸಂಭವವಿಲ್ಲ! ಆದರೆ ಈ ಬಾಲಬ್ರಹ್ಮಚಾರಿಗಳ "ಅಂಡ್ ಸನ್ಸ್" ಯಾವುದು?

ಬ್ರಹ್ಮನಲ್ಲಿ ವ್ಯವಹರಿಸುವವನನ್ನು ಬ್ರಹ್ಮಚಾರಿಯೆಂದು ವೇದಾಂತಿಗಳು ಕರೆಯುತ್ತಾರೆ. ಬ್ರಹ್ಮನ ಗಂಧವೇ ಇಲ್ಲದೆ, ಹಲವರು ತಮ್ಮನ್ನು ಬ್ರಹ್ಮಚಾರಿಗಳೆಂದು ಕರೆದುಕೊಳ್ಳುತ್ತಾರೆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವರಾದುದರಿಂದ ತಾವು ಬ್ರಹ್ಮಚಾರಿಗಳಾಗಬಾರದೇಕೆಂದು ಅವರು ಸಮಾಧಾನ ಹೇಳುತ್ತಾರೆ. ಹಾಗಾದರೆ, ಬ್ರಹ್ಮಾಂಡದೊಳಗಣ ಕಲ್ಲು, ಮುಳ್ಳು, ಮರಮಂಡಿ, ಹಕ್ಕಿ ಹಾವು, ಮೊದಲಾದುವುಗಳೆಲ್ಲ "ಬ್ರಹ್ಮಚಾರಿ" ಗಳಾಗಬಾರದೇಕೆಂದು ಗುಹೇಶ್ವರನ್ನ ಸ್ಮರಿಸುತ್ತಾನೆ.

—ಶಿವಶಕ್ತಿ

(ಹಿಂದಿನ ಪುಟದಿಂದ)

ಮಾನರಾತಿ

ಆಶೆಯು ಫಲಿಸದೆ ಸೊರಗುವಿರಿ. ನಂಬಿದವರಿಗೆ ಎರಡು ಬಗೆಯುವಿರಿ. ಯುಕ್ತಿಯುಕ್ತ ವಿಮರ್ಶೆ ನಡೆಸದೆ ಕಾರ್ಯಸಾಗಿಸಿ ಕೆಡುತ್ತಿರುವಿರಿ. ಕರ್ಮಭ್ರಷ್ಟ ಜೀವನ. ಮನೆಯಲ್ಲಿ ಗಡಿಬಿಡಿ ಕೋರ್ಟು ಕೆಲಸ ಮುಂದೆ ಬೀಳುತ್ತದೆ. ಹಿರಿಯರ ವಿಚಾರದಲ್ಲಿ ಕ್ಲೇಶ. ಪ್ರಕೃತಿ ಕೆಡುತ್ತದೆ ಜೋರಭೇತಿ ಪಶ್ಚಾತ್ತಾಪಕರ ವಾರ್ತೆ ಬರಲಿದೆ. ಲೇವಾದೇವಿಯಲ್ಲಿ ತೊಡಕು. ಇಷ್ಟಮಿತ್ರರಿಂದ ಆಹ್ವಾನ ಬುಧ—ಗುರುವಾರಗಳಂದು ನಿಮ್ಮ ಹಂಬಲವು ರೂಪಾಂತರಗೊಳ್ಳಲಿದೆ.

ಕೆಲವು ಕನ್ನಡಿಗರ ಪರಿಚಯ

ಶ್ರೀಯುತ ಆಲೂರ ವೆಂಕಟರಾಯರು

ಕನ್ನಡನಾಡಿನಲ್ಲಿ ಇಂದು ಉಂಟಾಗಿರುವ ಕನ್ನಡ ಕುಲದ ಅಭಿಮಾನದ, ಏಕೀಕರಣ ಮನೋಭಾವ ಧರ್ಮ ಸಮನ್ವಯಬುದ್ಧಿ, ಇತ್ಯಾದಿ ಎಲ್ಲ ಭಾವನೆಗಳಿಗೂ ಬುನಾದಿಯವರೆಂದರೆ ಶ್ರೀಮಾ ಆಲೂರ ವೆಂಕಟರಾಯರು.' ಜಯಕರ್ನಾಟಕ 'ದ ಮುಖದಿಂದ ಅವರು ಅಖಂಡ ಕರ್ನಾಟಕದಲ್ಲಿ ಜಯದುಂದುಭಿಯನ್ನು ಅತ್ಯಂತ ಉತ್ಸಾಹದಿಂದ. ಬಾರಿಸಿದರು. ಕನ್ನಡಿಗರಿಗೆ ನವಜೈತನ್ಯವನ್ನುಂಟುಮಾಡುವ ಸಲುವಾಗಿ ' ನವಚೇತನ ಗ್ರಂಥಮಾಲೆ ' ಯನ್ನು ಪ್ರಕಟಿಸಿ ಲೋಕೋಪಕಾರ ಮಾಡಿದರು. ಲೋಕಮಾನ್ಯರ ಗೀತಾ ರಹಸ್ಯವನ್ನು ತಿರುಳುಗನ್ನಡದಲ್ಲಿ ಬರೆದರು. ಉಪನಿಷತ್ಸಾರಭೂತವಾದ ಗೀತೆಯನ್ನೇಲೆ,''ಗೀತಾ ಭಾವ ಪ್ರದೀಪ " "ಗೀತಾಪ್ರಕಾಶ " ಮೊದಲಾದ ಹಲವು ಮಹತ್ವದ ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಅಳವಾದ ಜ್ಞಾನ; ಗಲಭೆಯಿಲ್ಲದ ಪಾಂಡಿತ್ಯ; ವಿಶಾಲವಾದ ಮನಸ್ಸು, ನಿರುಪಮಸೇವಾತತ್ಪರತೆ, ಜೀವನದಲ್ಲೆಲ್ಲಾ ಕರ್ನಾಟಕದ ತನ್ಮಯತೆ, ಇವುಗಳು ಆಲೂರರ ವೈಶಿಷ್ಟ್ಯವೆಂದು ಹೇಳಬಹುದು. ಇಂದು ಶ್ರೀಮಾನ್ ಆಲೂರರು ಜನತೆಯ ಸೇವೆಯನ್ನು ಮಾಡಿ ನಾಡಿಗೆ ಜಾಣ್ಮಾಡಿಗಳನ್ನು ಹೇಳಹೇಳಿ ಕನ್ನಡಿಗರ ಅವ್ಯವಸ್ಥೆಯನ್ನು ನೋಡಿ ನೋಡಿ, ಕುಂದಿ ಕಂದಿ, ಕಾಡಿ ಬೇಡಿ, ಬಸವಳಿದು ಬೆಂಡಾಗಿ ನಿರಾಶೆಯಿಂದ ಅಂತರ್ಮುಖಿಗಳಾಗಿರುವರು. ಇಂದು ಅವರು ಅನಾಸಕ್ತಿಯೋಗಿಗಳು. ಅವರಿಂದ ಕುಷ್ಮಿಪೂರ್ತಿಯು ಸಮಯಸನ್ನಿಹಿತವಾಗಿದೆ. ಕನ್ನಡದ ಅಭಿಮಾನಿಗಳೆಲ್ಲರೂ ಅವರ ಸೇನೆಗೂ, ವಿದ್ವತ್ತಿಗೂ ಉಚಿತವಾದ ಕಾಣಿಕೆಯನ್ನು ಸಲ್ಲಿಸುವುದವಶ್ಯವೆಂದುನಮ್ಮ| ಬೆನ್ನಹ.

ಡಾ|| ಎಂ. ಎಚ್. ಕೃಷ್ಣ ಎಂ.ಎ. ಡಿ. ಲಿಟ್ಟರವರು

ಇವರು ಮೈಸೂರು ಪ್ರಾಚೀನ ವಸ್ತು ಸಂಶೋಧನಾಶಾಖೆಯ ಅಧ್ಯಕ್ಷರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಶಾಸ್ತ್ರಾಚಾರ್ಯರು ಉಜ್ವಲ ಕರ್ನಾಟಕಾಭಿಮಾನಿಗಳು. ಈಗ ಅವರು ಒಂದು ಉತ್ತಮವಾದ ಕನ್ನಡ ನಕ್ಷೆಯನ್ನು ಕನ್ನಡಿಗರ ಉಪಯೋಗಕ್ಕಾಗಿ ತಯಾರುಮಾಡಿದ್ದಾರೆ. ಮೈಸೂರು ಪ್ರಾಚೀನ ಲಿಪ್ಯನ್ವೇಷಣ ಶಾಖೆಯಿಂದ ಹತ್ತೆಂಟು ಉಪಯುಕ್ತವಾದ ವಾರ್ಷಿಕ ವರದಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಮಕ್ಕಳಿಗೆ " ಹಿಂದೂ ಚರಿತ್ರೆಸಾರ ". ವನ್ನು ಬರೆದುಕೊಟ್ಟಿದ್ದಾರೆ. ಕನ್ನಡದಲ್ಲಿಯೂ, ಇಂಗ್ಲೀಷಿನಲ್ಲಿಯೂ ಹಲವು ಮಹತ್ವದ ಲೇಖನಗಳನ್ನು ಬರೆದಿದ್ದಾರೆ. ವಿದ್ಯೆ, ವಿನಯ, ಔದಾರ್ಯ ಮೊದಲಾದ ಗುಣಗಳಿಂದ ಇವರನ್ನು ಹೋಲುವವರು ವಿಶಾಲಕರ್ನಾಟಕದಲ್ಲಿ ನಾಲ್ಕೈದು ಮಂದಿಗಿಂತ ಹೆಚ್ಚು ಮಂದಿ ಸಿಗಲಾರರೆಂದು ತೋರುತ್ತದೆ.

ಪ್ರೊ|| ಎ. ಎನ್. ಉಪಾಧ್ಯೆ ರವರು ಎಂ.ಎ., ಕೊಲ್ಲಾಪುರ.

ಇವರು ಕನ್ನಡನಾಡಿನ ಒಬ್ಬ ಸುಪ್ರಸಿದ್ಧ ವಿದ್ವಾಂಸರು. ಕೊಲ್ಲಾಪುರದ ರಾಜರಾಮ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ ಭಾಷಾಶಾಸ್ತ್ರ ಮತ್ತು ಕನ್ನಡ, ಸಂಸ್ಕೃತ ಮೊದಲಾದ ಸಾಹಿತ್ಯಗಳಲ್ಲಿ ಒಳ್ಳೆಯ ಪಂಡಿತರೆನಿಸಿದ್ದಾರೆ. ಇವರು ಜೈನಧರ್ಮಾಯರು. ಮೊದಲಿನಿಂದಲೂ ಜೈನರು ಕನ್ನಡ ಅಭಿಮಾನಿಗಳೆಂಬುದಕ್ಕೆ ಇವರು ನಿದರ್ಶನವೆನಿಸಿದ್ದಾರೆ ಇವರಿಗೆ ಮುಂಬಯಿ ವಿಶ್ವವಿದ್ಯಾನಿಲಯದಿಂದ (ಡಾಕ್ಟರ್ ಆಫ್ ಲಿಟ್ರೇಚರ್) ಎಂಬ ಪದವಿಯನ್ನು ದಯಪಾಲಿಸಿರುವರೆಂದು ಕೇಳಿ ನಾವು ಸಂತೋಷಿಸುತ್ತೇವೆ.

ಬಿ ಎ. ಸಾಲೆತ್ತೂರ್

ಡಾ|| ಬಿ. ಎ. ಸಾಲೆತ್ತೂರ್

ಇವರು ಸುಪ್ರಸಿದ್ಧರಾದ ಕನ್ನಡ ವಿದ್ವಾಂಸರು ಸಾರಸ್ವತ ಬ್ರಾಹ್ಮಣರು. ಪುಣೆಯ ಸರ್ ಪರುಶುರಾಂ ಭಾವುಕಾಲೇಜಿನಲ್ಲಿ ಇತಿಹಾಸ ಶಾಸ್ತ್ರದ ಅಧ್ಯಾಪಕರಾಗಿದ್ದಾರೆ. ವಿಜಯನಗರ ಕಾಲದ ಚರಿತ್ರೆಯನ್ನು ಕುರಿತು ಇಂಗ್ಲೀಷಿನಲ್ಲಿ ಕೆಲವು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ ಇವರು ' ದಕ್ಷಿಣ ಹಿಂದೂಸ್ಥಾನದಲ್ಲಿ ವೀರ ಶೈವ ಸ್ಥಾನ ' ಎಂಬ ವಿಷಯವಾಗಿಯೂ " ಹಿಂದೂದೇಶವೂ ಜೈನಧರ್ಮವೂ " ಎಂಬ ವಿಷಯವಾಗಿಯೂ ಇಂಗ್ಲೀಷಿನಲ್ಲಿ ಎರಡು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ವರು 'ಶರಣಸಾಹಿತ್ಯ' ಮತ್ತು 'ಸ್ವತಂತ್ರಕರ್ನಾಟಕ' ದ ಭಿಮಾನಿಗಳೆಂದು ಹೇಳಲು ನಮಗೆ ಸಂತೋಷವಾಗುತ್ತದೆ.



ಪ್ರೊ|| ಎಸ್. ಎಸ್.

ಬಸವನಾಳರು, ಎಂ, ಎ

ಕೆಲವು ಕನ್ನಡಿಗರ ಪರಿಚಯ

ಶ್ರೀಯುತ ಆಲೂರ ವೆಂಕಟರಾಯರು

ಕನ್ನಡನಾಡಿನಲ್ಲಿ ಇಂದು ಉಂಟಾಗಿರುವ ಕನ್ನಡ ಕುಲದ ಅಭಿಮಾನದ, ಏಕೀಕರಣ ಮನೋಭಾವ ಧರ್ಮ ಸಮನ್ವಯಬುದ್ಧಿ, ಇತ್ಯಾದಿ ಎಲ್ಲ ಭಾವನೆಗಳಿಗೂ ಮೂಲಾದಿಯವರೆಂದರೆ ಶ್ರೀಯುತ ಆಲೂರ ವೆಂಕಟರಾಯರು. 'ಜಯಕರ್ನಾಟಕ' ದ ಮುಖದಿಂದ ಅವರು ಅಖಂಡ ಕರ್ನಾಟಕ ದಲ್ಲಿ ಜಯದುಂದುಭಿಯನ್ನು ಅತ್ಯಂತ ಉತ್ಸಾಹದಿಂದ ಬಾರಿಸಿದರು. ಕನ್ನಡಿಗರಿಗೆ ನವಚೈತನ್ಯವನ್ನುಂಟುಮಾಡುವ ಸಲುವಾಗಿ 'ನವಜೀವನ ಗ್ರಂಥಮಾಲೆ' ಯನ್ನು ಪ್ರಕಟಿಸಿ ಲೋಕೋಪಕಾರ ಮಾಡಿದರು. ಲೋಕಮಾನ್ಯರ ಗೀತಾ ರಹಸ್ಯವನ್ನು ತಿರುಳುಗನ್ನಡದಲ್ಲಿ ಬರೆದರು. ಉಪನಿಷತ್ಸಾರಭೂತವಾದ ಗೀತೆಯನ್ನೇಲೆ, 'ಗೀತಾ ಭಾವ ಪ್ರದೀಪ' "ಗೀತಾಪ್ರಕಾಶ" ಮೊದಲಾದ ಹಲವು ಮಹತ್ವದ ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಆಳವಾದ ಜ್ಞಾನ; ಗಲಭೆಯಿಲ್ಲದ ಪಾಂಡಿತ್ಯ; ವಿಶಾಲವಾದ ಮನಸ್ಸು, ನಿರುಪನುಸೇವಾತತ್ಪರತೆ, ಜೀವನದಲ್ಲೆಲ್ಲಾ ಕರ್ನಾಟಕದ ತನಟಿಯತೆ, ಇವುಗಳು ಆಲೂರರ ವೈಶಿಷ್ಟ್ಯವೆಂದು ಹೇಳಬಹುದು. ಇಂದು ಶ್ರೀಮಾನ್ ಆಲೂರರು ಜನತೆಯ ಸೇವೆಯನ್ನು ಮಾಡಿ ನಾಡಿಗೆ ಜಾಣ್ಣುಡಿಗಳನ್ನು ಹೇಳಿಹೇಳಿ ಕನ್ನಡಿಗರ ಅನ್ಯವಶ್ಯೆಯನ್ನು ನೋಡಿ ನೋಡಿ, ಕುಂದಿ ಕೆಂದಿ, ಕಾಡಿ ನಾಡಿ, ಬಸವಳಿದು ಬೆಂಡಾಗಿ ನಿರಾಶೆಯಿಂದ ಅಂತರ್ಮುಖಿಗಳಾಗಿರುವರು. ಇಂದು ಅವರು ಅನಾಸಕ್ತಿಯೋಗಿಗಳು. ಆವರಿಗಿಂತು ಷಷ್ಟಿಪೂರ್ತಿಯು ಸಮಯಸನ್ನಿಹಿತವಾಗಿದೆ ಕನ್ನಡದ ಅಭಿಮಾನಿಗಳೆಲ್ಲರೂ ಅವರ ಸೇವೆಗೂ, ವಿದ್ವತ್ತಿಗೂ ಉಚಿತವಾದ ಕಾಣಿಕೆಯನ್ನು ಸಲ್ಲಿಸುವುದವಶ್ಯವೆಂದುನಮ್ಮ ವಿನ್ನಹ.

ಡಾ॥ ಎಂ. ಎಚ್. ಕೃಷ್ಣ ಎಂ.ಎ. ಡಿ. ಲಿಟ್ ರವರು

ಇವರು ಮೈಸೂರು ಪ್ರಾಚೀನ ವಸ್ತು ಸಂಶೋಧನಾಶಾಖೆಯ ಅಧ್ಯಕ್ಷರು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಶಾಸ್ತ್ರಾಚಾರ್ಯರು ಉಜ್ವಲ ಕರ್ನಾಟಕಾಭಿಮಾನಿಗಳು. ಈಗ ಅವರು ಒಂದು ಉತ್ತಮವಾದ ಕನ್ನಡ ನಕ್ಷೆಯನ್ನು ಕನ್ನಡಿಗರ ಉಪಯೋಗಕ್ಕಾಗಿ ತಯಾರುಮಾಡಿದ್ದಾರೆ. ಮೈಸೂರು ಪ್ರಾಚೀನ ಲಿಪ್ಯನ್ವೇಷಣ ಶಾಖೆಯಿಂದ ಹತ್ತೆಂಟು ಉಪಯುಕ್ತವಾದ ವಾರ್ಷಿಕ ವರದಿಗಳನ್ನು ಪ್ರಕಟಿಸಿದ್ದಾರೆ. ಕನ್ನಡ ಮಕ್ಕಳಿಗೆ "ಹಿಂದೂ ಚರಿತ್ರೆಸಾರ" ವನ್ನು ಬರೆದುಕೊಟ್ಟಿದ್ದಾರೆ. ಕನ್ನಡದಲ್ಲಿಯೂ, ಇಂಗ್ಲೀಷಿನಲ್ಲಿಯೂ ಹಲವು ಮಹತ್ವದ ಲೇಖನಗಳನ್ನು ಬರೆದಿದ್ದಾರೆ. ವಿದ್ಯೆ, ವಿನಯ, ಔದಾರ್ಯ ಮೊದಲಾದ ಗುಣಗಳಿಂದ ಇವರನ್ನು ಹೋಲುವವರು ವಿಶಾಲಕರ್ನಾಟಕದಲ್ಲಿ ನಾಲ್ಕೈದು ಮಂದಿಗಿಂತ ಹೆಚ್ಚು ಮಂದಿ ಸಿಗಲಾರರೆಂದು ತೋರುತ್ತದೆ.

ಪ್ರೊ॥ ಎ. ಎನ್. ಉಪಾಧ್ಯೆ ಎಂ.ಎ., ಕೊಲ್ಲಾಪುರ.

ಇವರು ಕನ್ನಡನಾಡಿನ ಒಬ್ಬ ಸುಪ್ರಸಿದ್ಧ ವಿದ್ವಾಂಸರು ಕೊಲ್ಲಾಪುರದ ರಾಜರಾಮ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ. ಭಾಷಾಶಾಸ್ತ್ರ ಮತ್ತು ಕನ್ನಡ, ಸಂಸ್ಕೃತ ಮೊದಲಾದ ಸಾಹಿತ್ಯಗಳಲ್ಲಿ ಒಳ್ಳೆಯ ಪಂಡಿತರೆನಿಸಿದ್ದಾರೆ. ಇವರು ಜೈನಧರ್ಮಿಯರು. ಮೊದಲಿನಿಂದಲೂ ಜೈನರು ಕನ್ನಡ ಅಭಿಮಾನಿಗಳೆಂಬುದಕ್ಕೆ ಇವರು ನಿದರ್ಶನವೆನಿಸಿದ್ದಾರೆ ಇವರಿಗೆ ಮುಂಬಯಿ ವಿಶ್ವವಿದ್ಯಾನಿಲಯದಿಂದ (ಡಾಕ್ಟರ್ ಆಫ್ ಲಿಟ್ರೇಚರ್) ಎಂಬ ಪದವಿಯನ್ನು ದಯಪಾಲಿಸಿರುವರೆಂದು ಕೇಳಿ ನಾವು ಸಂತೋಷಿಸುತ್ತೇವೆ.

ಪ್ರೊ॥ ಎ.ಎನ್. ಉಪಾಧ್ಯೆ ರವರು ಎಂ.ಎ, ಎಲ್, ಡಿ,

ಎರಡು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ವರು 'ಶರಣಸಾಹಿತ್ಯ' ಮತ್ತು 'ಸ್ವತಂತ್ರಕರ್ನಾಟಕ' ದ ಭಿಮಾನಿಗಳೆಂದು ಹೇಳಲು ನಮಗೆ ಸಂತೋಷವಾಗುತ್ತದೆ.

ಬಿ ಎ. ಸಾಲೆತ್ತೂರ್

ಡಾ॥ ಬಿ. ಎ. ಸಾಲೆತ್ತೂರ್

ಇವರು ಸುಪ್ರಸಿದ್ಧರಾದ ಕನ್ನಡ ವಿದ್ವಾಂಸರು. ಸಾರಸ್ವತ ಬ್ರಾಹ್ಮಣರು. ಪುಣೆಯ ಸರ್ ಪರುಶುರಾಂ ಭಾವುಕಾಲೇಜಿನಲ್ಲಿ ಇತಿಹಾಸ ಶಾಸ್ತ್ರದ ಅಧ್ಯಾಪಕರಾಗಿದ್ದಾರೆ. ವಿಜಯನಗರ ಕಾಲದ ಚರಿತ್ರೆಯನ್ನು ಕುರಿತು ಇಂಗ್ಲೀಷಿನಲ್ಲಿ ಕೆಲವು ಮಹತ್ವದ ಗ್ರಂಥಗಳನ್ನು ಬರೆದಿದ್ದಾರೆ. ಇವರು 'ದಕ್ಷಿಣ ಹಿಂದೂಸ್ಥಾನದಲ್ಲಿ ವೀರಶೈವ ಸ್ಥಾನ' ಎಂಬ ವಿಷಯವಾಗಿಯೂ "ಹಿಂದೂದೇಶವೂ ಜೈನಧರ್ಮವೂ" ಎಂಬ ವಿಷಯವಾಗಿಯೂ ಇಂಗ್ಲೀಷಿನಲ್ಲಿ

ಪ್ರೊ॥ ಎಸ್. ಏಸ್.

ಬಸವನಾಳರು, ಎಂ.ಎ

ಸೌ||ಕುಮಾರಿ ಅಂಗಡಿಯವರು,

ಬಿ. ಎಸ್.ಸಿ.,

ಧಾರವಾಡದಲ್ಲಿ ವ್ಯವಸಾಯ ಖಾತೆಯ ಂದು ದೊಡ್ಡ ಅಧಿಕಾರ ಸ್ಥಾನದಲ್ಲಿರುವ ೀರ್ಮಾ ಶಂಕರಪ್ಪ ಅಂಗಡಿ ಇವರ ಸುಪು ್ರ. ಸೌ|| ಗಂಗಾ ದೇವಿಯವರು ಬಿ.ಎಸ್.ಸಿ, ಹೈಸೆಕೆಂಡ್ ಕ್ಲಾಸಿನಲ್ಲಿ ಪ್ರಥಮಸ್ಥಾನ ಪಡೆದಿದ್ದಾರೆ. ಕಾಲೇಜಿ ನಲ್ಲಿ ಪ್ರಥಮಸ್ಥಾನ ಪಡೆದಿದ್ದಾರೆ ಈಗ ಅದೇ ಕಾಲೇಜಿನಲ್ಲಿ ವಿದ್ಯಾರ್ಥಿ ಫೆಲೋ ಷಿಪ್ ಆಗಿ ಓದಿದ್ದಾರೆ ಕನ್ನಡದ ಅಭಿ ಮಾನಿಗಳು ಮತ್ತು ಕರ್ನಾಟಕ ಸಂಘದ ಮುಖ್ಯ ಸದಸ್ಯರಾಗಿದ್ದಾರೆ. ಕೇವಲ ಚಿಕ್ಕ ವಯಸ್ಸಿನಲ್ಲಿ ವಿದ್ವತ್ತನ್ನೂ ಕೀರ್ತಿ ಯನ್ನೂ ಗಳಿಸಿ, ನಮ್ಮ ನಾಡಿಗೆ ಗೌರವ ವನ್ನುಂಟುಮಾಡಿದ ಸೌ||ಕುಮಾರಿ ಗಂಗಾ ದೇವಿ ಅಂಗಡಿಯವರನ್ನು ನಾವು ಅಭಿ ನಂದಿಸುತ್ತೇವೆ

—೦೦—

ಸೌ|| ಕುಮಾರಿ ಸುಶೀಲಮ್ಮ,

ಎಂ-ಎಸ್.ಸಿ , ರವರು

ಇವರು ಬೆಂಗಳೂರಿನಲ್ಲಿರುವ ರಿ|| ಅಮಲ್ದಾರ್, ಶ್ರೀಮಾ ಬಿ ಲಿಂಗಯ್ಯ ನವರ ಮಗಳು ಇವರು ಎಂ ಎಸ್.ಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಈಗ ಬೆಂಗಳೂರಿನಲ್ಲಿರುವ ಮಹಾರಾಣಿಯ ವರ ಕಾಲೇಜಿನಲ್ಲಿ ಸಸ್ಯಶಾಸ್ತ್ರದ ಉಪ ನ್ಯಾಸಕರಾಗಿದ್ದಾರೆ.

'ಶರಣಸಾಹಿತ್ಯ' ಮತ್ತು 'ಸ್ವತಂ ತ್ರ ಕರ್ನಾಟಕ' ಪತ್ರಿಕೆಗಳಲ್ಲಿ ಕೆಲವು ಮಹತ್ವ ಲೇಖನಗಳನ್ನ ಒರೆದಿದ್ದಾರೆ ಈಗ ಸಾಹಿತ್ಯಪರಿಷತ್ತಿನ ಸ್ತ್ರೀ ಶಾಖೆಯ ಗೌರವ ಕಾರ್ಯದರ್ಶಿಗಳಾಗಿ ಕೆಲಸ ಮಾಡಲು ಉತ್ಸಾಹದಿಂದ ಮುಂದೆ ಬಂ ದಿದ್ದಾರೆ ಇವರ ಈ ದೇಶಭಿವಾನೇವೆ ಯು ಯಶಸ್ವಿಯಾಗಲೆಂದು ಪ್ರಾರ್ಥಿಸು ತ್ತೇವೆ

ಸೌ|| ಕುಮಾರಿ ಎಚ್ ಎಂ

ಪಾರ್ವತಮ್ಮ ಬಿ.ಎ.,

ಇವರು ಕಂಪಲಾಪುರದ ರೆವಿನ್ಯೂ ಇನ್ಸ್‌ಪೆಕ್ಟರಾಗಿರುವ ಶ್ರೀಮಾ ಮಂಜಪ್ಪ ನವರ ಸುಪುತ್ರಿ. ಕೇವಲ ತಮ್ಮ ೧೭ ವರ್ಷ ವಯಸ್ಸಿನಲ್ಲಿ ಬಿ.ಎ, ಡಿಗ್ರಿ ಪಡೆದಿ ದ್ದಾರೆ. ಈ ವರುಷ ಎಂ ಎ, ಪರೀಕ್ಷೆಗೆ ಕುಳಿತುಕೂಂಡಿದ್ದಾರೆ ಇವರು ಕನ್ನ ಡದ ಅಭಿಮಾನಿಗಳು 'ಶರಣಸಾಹಿತ್ಯ' ವಿಶೇಷ ಸಂಚಿಕೆಯಲ್ಲಿ 'ಒಸನೇಶ್ವರನೂ ಸ್ತ್ರೀಯರ ಉನ್ನತಿಯೂ' ಎಂಬ ಬಗ್ಗೆ ಒಂದು ಮಹತ್ವದ ಲೇಖನವನ್ನು ಬರೆದಿ ದ್ದಾರೆ ಇವರಿಂದ ಮುಂದೆ ದೇಶಕ್ಕೂ, ಸಮಾಜಕ್ಕೂ ಹೆಚ್ಚು ಉಪಕಾರವಾಗ ಬಹುದೆಂದು ನಾವು ನಿರೀಕ್ಷಿಸುತ್ತೇವೆ

ಸೌ|| ಕುಮಾರಿ ಸುಶೀಲಮ್ಮನವರು ಎಂ.ಎಸ್.ಸಿ.

(೩ನೇ ಪುಟದಿಂದ)

ಲೋಕದಲ್ಲಿ ಪರ್ವತಗಳಲ್ಲಿ ಹಿಮಾಲ ಯವು ದೊಡ್ಡದು. ಸಾಗರಗಳಲ್ಲಿ ಪೆಸಿ ಫಿಕ್, ಪಟ್ಟಣಗಳಲ್ಲಿ ಲಂಡ್, ನದಿಗಳಲ್ಲಿ ಅಮೆಜ್ಞಾ, ಜಲವಾತಗಳಲ್ಲಿ ಗೇರ ಸೊಪ್ಪ ಮರುಭೂಯಲ್ಲಿ ಸಹಾರಾ ದೊಡ್ಡವು ಮನುಷ್ಯಗಲ್ಲಿ ಮಾತ್ರ ಮಹಾತ್ಮಗಾಂಧಿ ದೊಡ್ಡವರು

||೧೧||

ಸ್ವಾಮಿರಾಮು ತೀರ್ಥರು ಲೋಕದ ಎಲ್ಲ ಮಾನವರನ್ನೂ ಗುಣಶೀಲಗಳ ದೃಷ್ಟಿಯಿಂದ ಐದು ಗುಂಪುಗಳಾಗಿವಿಂಗಡಿ ಸಿದ್ದಾರೆ ತಿಲಾವರ್ಗ, ಸಸ್ಯವರ್ಗ ಪ್ರಾಣಿ ವರ್ಗ, ಮನುಷ್ಯವರ್ಗ, ಮತ್ತು ದೇವ ವರ್ಗ ಎಂಬುದಾಗಿ ಈ ೫ ವರ್ಗಗಳಲ್ಲಿ ನಾವು ಯಾವ ವರ್ಗಕ್ಕೆ ಸೇರಿದವರೆಂ ಬುದನ್ನು ತಾವು ತಾವೇ ಒಮ್ಮೆಯಾ ದರೂ ವಿಚಾರಿಸಿಕೊಳ್ಳುವುದೇ ಒಳ್ಳೆಯದು.

||೧೨||

ಕನ್ನಡನಾಡಿನ ಮಕ್ಕಳು ಈ ಮುಂದೆ ಹೇಳುವ ಹಿರಿಯ ಕನ್ನಡಿಗರ ಪರಿಚ ಯಮಾಡಿಕೊಳ್ಳುವುದು ಒಳ್ಳೆಯದೆಂದು ಗುಹೇಶ್ವರನು ಹೇಳುತ್ತಾನೆ 'ಗತವೈಭ ವ'ದ ಆಲೂರು 'ವಚನ ಶಾಸ್ತ್ರ' ದ ಹಳ ಕಟ್ಟಿಯವರು, ಅರ್ಧಶಾಸ್ತ್ರದ ಶಾಮಶಾಸ್ತ್ರಿ ಗಳು, 'ಕಲಾನಿವಾಸದ' ಶಿಲ್ಪಿ ಸಿದ್ಧಾಂ ತಿಗಳು, "ನಾದಲೀಲೆಯ ಬೇಂದ್ರೆಯ ವರು, ಸಣ್ಣ ಕತೆಗಳ ಶ್ರೀನಿವಾಸರು, ಕನ್ನಡ ಬಾವುಟದ ಶ್ರೀಯವರು, ಕನ್ನಡ ಭೂಪಟದ ಕೃಷ್ಣರು ಏಕೀಕರಣದ ಬೆನ ಗಲ್ಲರು, 'ಅಂತರಾತ್ಮನ' ದಿವಾಕರರು, ಪಂಪಕವಿಯ ತಿಮ್ಮಪ್ಪಯ್ಯನವರು, ಅಕ್ಷ ರಪ್ರಚಾರದ ದೇವುಡುರವರು, 'ಸಂತಾನ ವಿಜ್ಞಾನ'ದ ಭಾರಧ್ವಾಜರು, ಹಿಂದೂ ಸಂಘಟನೆ, ಮಂಜಪ್ಪನವರು, ಪಾಂಚ ಜನ್ಯದ ಪುಟ್ಟಪ್ಪನವರು, ಶ್ಲೋಕ ಸಂಗೀತ ಕಳಲೆಯವರು, ಸಿಂಹನಾದದ ಮುದವೀ ಡುರವರು

||೧೩||

ಕನ್ನಡನಾಡಿನಲ್ಲಿ ಓದುವವರಿಗಿಂತ ಒರೆಯುವವರು ಹೆಚ್ಚು; ಕೊಳ್ಳುವವರಿ ಗಿಂತ ಓದುವವರು ಹೆಚ್ಚು ಉಣ್ಣುವವ ರಿಗಿಂತ ಉಣ್ಣದವರೂ ಹೆಚ್ಚು, ಕಪ್ಪ ಪಡುವವರಿಗಿಂತ ಕೀರ್ತಿ ಗಳಿಸುವವರು ಹೆಚ್ಚು. ಸಾಯುವವರಿಗಿಂ ತ ಹುಟ್ಟುವವರು ಹೆಚ್ಚು. ಜೀವವಿದ್ದರೂ ಸಾಯುವವರು ಹೆಚ್ಚು ತತ್ವವಿಲ್ಲದ ಸತ್ಪಿ ಕಗಳು ಹೆಚ್ಚು. ತತ್ವವುಳ್ಳ ವಪ್ರಿಕಾ ಕರ್ಮ ವುಗಳ. ಮಾತ್ರ ಹೆಚ್ಚು. "ನನ್ನದು ಈ ಕನ್ನಡನಾಡು"

||೧೪||

ಹಿಂದೂಸ್ಥಾನದಲ್ಲಿ ಲಕ್ಷಗಟ್ಟಲೆ ಸನ್ಯಾ ಸಿಗಳಿದ್ದಾರೆ ಅವರೆಲ್ಲರೂ ಕಾಷಾಯಾಂ ಬರಗಳಿಂದ ವಿಜೃಂಬಿಸಿದರಾಗಿ ಹಂಪೆಯ ಗೋಪುರದಂತಹ ಜಡೆಗಳಿಂದಲೂ, ಗಿ ಜಗನ ಗೂಡಿನಂತವ ಗಡ್ಡಗಳಿಂದಲೂ ವಿಜೃಂಭಿಸಿದರಾಗಿ, ಪ್ರತ್ಯಕ್ಷ ವರಮೇಶ್ವರ ನಂತೆ ತೋರುತ್ತಾರೆ ಪ್ರಪಂಚಸುಖವ ನ್ನು ತೃಣೀಕರಿಸುತ್ತಾ ಧರ್ಮಸೇವೆಗೆ ಕಂಕಣ ಕಟ್ಟಿದ್ದಾರೆ ಕೋಟ್ಯಗಟ್ಟಲೆ ಕಾಣಿಕೆ ಹೊಡೆಯುತ್ತಾರೆ ಆದರೆ ಈಮ ಹಾ ಮಹಾ ಪ್ರಭೃತಿಗಳೆಲ್ಲ ಹೈದರಾಬಾ ದಿನ ಸತ್ಯಾಗ್ರಹದಲ್ಲಿ ಎಲ್ಲಿ ಹೋಗಿದ್ದ ರೆಂದು ಗುಹೇಶ್ವರನನ್ನು ಕೆಲವರು ಪ್ರಶ್ನಿ ಸಿದ್ದಾರೆ ಯಾರಿಗೆ ಗೊತ್ತು ಅವರವರ ತಾಪತ್ರಯ? ಇವರೆಲ್ಲರೂ ಕೈಲಾಸಕ್ಕೆ ಹೋಗಿದ್ದಿರಬಹುದೆಂದು ಗುಹೇಶ್ವರನು ತರ್ಕಿಸುತ್ತಾನೆ

||೧೫||

ಕನ್ನಡಿಗರು ಸ್ತ್ರೀತ್ವವನ್ನು ಗೌರವಿಸು ವವರು; ಸ್ತ್ರೀಯರನ್ನು ದೇವತೆಯೆಂದು ಪೂಜಿಸುವವರು—ಎಂಬುದು ಬಹುದಿನ ಸದಿಂದ ತಿಳಿದುಬಂದ ವಿಚಾರ ಇದಕ್ಕೆ ಈ ಮುಂದೆ ಹೇಳುವ ಕರ್ನಾಟಕಾಭಿ ಮಾನ ದೇವತೆಗಳೇ ಸಾಕ್ಷಿ ಮೈಸೂರಿನ ಚಾಮುಂಡಿ, ಹಂಪಯ ಪಂಪಾಬಿಕೆ, ಬಾದಾಮಿಯ ಬನಶಂಕರಿ, ಕೊಲ್ಲಾಪು ರದ ಮಹಾ ಲಕ್ಷ್ಮಿ, ಸೌದತ್ತಿಯ ಎಲ್ಲಮ್ಮ ಗುಡ್ಡಾಪುರದ ವರದಾನಿ ಗುಡ್ಡಮ್ಮ, ಚಂದ್ರಗುತ್ತಿಯ ರಣಾಂಕಾದೇವಿ, ಕುಮ ಟಿಯ ಶಾಂತಾ ಕಾಮಾಕ್ಷಿ, ಸಿರಸಿಯ ಮಾರಿಕಾಂಬ, ಶೃಂಗೇರಿಯ ಶಾರದಾ ದೇವಿ,ಕೋಲಾರದ ಕೋಳಾಲಮ್ಮ,

||೧೬||

ಮಹಾನವಮಿಯ ಹಿಂದೂ ದೇಶದ ತುಂಬಾ ಉತ್ಸಾಹದಿಂದ ಎಲ್ಲ ಹಿಂದುಗಳೂ ಆಚರಿಸುವ ಹಬ್ಬ ಆದರೆ ಕನ್ನಡಿಗರಿಗೆ ಮಾತ್ರ ಇದು ನಾಡುಹಬ್ಬ. ಏಕೆಂದರೆ ಇರು ಹುಟ್ಟಿದ್ದು ಕರ್ನಾಟಕದಲ್ಲಿ ಇ ಕ್ಕೆ ಅಂದಿನ ಕರ್ನಾಟಕದ ಅರಸನಾ ವಿರಾಟನ ಆಶ್ರಯದಲ್ಲಿದ್ದ ಅರ್ಜುನನೆ ನಮಿತ್ತ. ಆದುದರಿಂದಲೇ ಇದಕ್ಕೆ ವಿಜ ಯದಶಮಿ ಎಂಬ ಹೆಸರು

ಸೌ|| ಕುಮಾರಿ ಪಾರ್ವತಮ್ಮ

ನವರು ಬಿ.ಎ,

ಕರ್ನಾಟಕ ವಿದ್ಯಾವರ್ಧಕ ಸಂಘ ೧೨೨ ಧಾರವಾಡ.

THE HUBLI GAZETTE FRIENDS COTTAGE HUBLI.

With the Cotton Market Supplement

ಹುಬ್ಬಳ್ಳಿ ಗಜೆಟ್ The Hubli Gazette

ಸಂಪಾದಕರು ಡಾ. ನಾ. ಸು ಹರ್ಡೀಕರ
ಸಹಸಂಪಾದಕರು ಶ್ರೀ ರಾ ವೆ ಕೆರಗುದರಿ

ಪುಟ ೩೨ | ಬೆಲೆ ಅರ್ಧ ಆಣೆ

ಸಂಪುಟ ೩ | ಶನಿವಾರ, ೧೫-೨-೧೯೪೧ | Saturday 15-2-1941 | ಸಂಚಿಕೆ ೨

AN OFFER

The Manager of "THE HUBLI GAZETTE" has received a proposal of sale of an extensive ground and factory in complete working order under the following conditions:

He is in a position to assure that the factory is one of the few in the town which actively work. It is situated in a prominent part of the city and is near the existing cotton market.

Offer:— (1) The ground of the factory measuring about two acres at Rs. 500/- par gunta.

(2) Factory with all machinery and plant in perfect working order and buildings and structures at 40% of the total investments thereon, though the normal value for second hand machinery, etc., in good working order is 50%.

Terms - (1) Only offers for wholesale purchase of land, structures and machinery all together will be entertained. No offer for purchase of piecemeal plots or the ground and machinery separately shall be considered.

(2) The intending purchasers will have to satisfy the Manager of "The Gazette" about their *bona fides* before he can give further information and details of the offer. Enquiries by post should be accompanied by addressed & stamped envelopes. This offer stands up to 15th March 1941

All enquiries personal or through correspondence to be made with the Manager.

Friends Cottage,
Hubli, 14-2-1941

Manager,
THE HUBLI GAZETTE

Reg. No. B. 4255

ಆಡ್ಮಿನಿಸ್ಟ್ರೇಟರರ ವರದಿ

ಬೆಲೆ ಅರ್ಧ ಆಣೆ

ಹುಬ್ಬಳ್ಳಿ ಗೆಜೆಟ್

The Hubli Gazette

೧ ಮತ್ತು ೧೫ನೆಯ ತಾರೀಖುಗಳಲ್ಲಿ ಪ್ರಕಟವಾಗುವ ನಿರ್ದಾಕ್ಷಿಣ್ಯ ಸ್ವತಂತ್ರ ಪತ್ರಿಕೆ

ಸಂಪಾದಕರು: ಡಾ. ನಾ. ಸು. ಹರ್ಡೀಕರ ಸಹ ಸಂಪಾದಕರು: ಶ್ರೀ. ರಾ. ವೆ. ಕರಗುದರಿ

ಸಂಪುಟ ೯] ಶನಿವಾರ, ತಾ. ೧೫-೨-೪೧ Saturday, 15-2-41 [ಸಂಚಿಕೆ ೨

ಆಡ್ಮಿನಿಸ್ಟ್ರೇಟರರ ಸನ್ನಿಧಿಯಲ್ಲಿ

೧] ತತ್ವವು ಸಾಮಾನ್ಯವಾಗಿರಬೇಕು

ತಮ್ಮ ಮನೆಗಳಿಗೆ ನಳಗಳನ್ನು ತೆಗೆದುಕೊಳ್ಳದೆ, ಸಾರ್ವಜನಿಕ ನಳಗಳಿಂದಲೇ ತಮ್ಮ ಕಾರ್ಯಗಳನ್ನು ಸಾಗಿಸಿಕೊಳ್ಳುವ ಪ್ರಘಾತವು ಹುಬ್ಬಳ್ಳಿ ಪಟ್ಟಣದಲ್ಲಿ ಬಹಳವಾಗಿದ್ದದ್ದರಿಂದ, ಸಾರ್ವಜನಿಕ ನಳಗಳ ಸಂಖ್ಯೆಯನ್ನೇ ಕಡಿಮೆ ಮಾಡುವ ಘೋರ ವಿಷಯವನ್ನು ಆಡ್ಮಿನಿಸ್ಟ್ರೇಟರರ ಆಡಳಿತವು ಇಟ್ಟುಕೊಂಡಿದ್ದ ಮಾತು ನಮಗೆ ಗೊತ್ತಿತ್ತು. ಆದಕ್ಕನುಸಾರವಾಗಿ ಅವರು ಊರೊಳಗೆ ಅನೇಕ ಕಡೆಗಿದ್ದ ಸಾರ್ವಜನಿಕ ನಳಗಳನ್ನು ಕಿತ್ತೊಗೆದದ್ದೂ ನಮಗೆ ಗೊತ್ತುಂಟು. ಆದರೆ ಈ ಘೋರಣವನ್ನು ಎಲ್ಲ ಕಡೆಗೆ ಒಂದೇಸವನೆ ಹಚ್ಚಿದ್ದುಂಡುಬರಲಿಲ್ಲ ಯಾಕಂದರೆ, ಹಳೇ ಹುಬ್ಬಳ್ಳಿಯಲ್ಲಿ ಒಂದು ಫರ್ಲಾಂಗಿನಷ್ಟು ಜಾಹೆ ಉದ್ದವಾಗಿರದ ಒಂದೇ ಒಂದು ಗಲ್ಲಿಯಲ್ಲಿ ಎರಡು ತೋಟಿಯ ಸಾರ್ವಜನಿಕ ನಳಗಳೂ ಲ ಬೋರಿಂಗಬಾವಿಯೂ ಇದ್ದದ್ದು ಮತ್ತು ಅವುಗಳಿಂದ ಗಲ್ಲಿಯ ಜನರು ಅವ್ಯಾಹತವಾಗಿ ನೀರು ತುಂಬುತ್ತಿದ್ದದ್ದು ನೋಡಲು ದೊರೆಯತ್ತದೆ. ಇದೇ ಪ್ರಕಾರ, ಯಲ್ಲಾಪುರದ ಭಾಗದ ಒಂದು ಓಣಿಯಲ್ಲಿ ಕೇವಲ ನೂರಾರು ಘೂಟನ ಅಂತರದಲ್ಲಿ ಮು ಬೋರಿಂಗ ಭಾವಿಯು ಳ ರ್ವಜನಿಕ ನಳಗಳೂ ಇವೆ. ಇನ್ನೂರೆ ಕಡೆಗೆ ಸಹ ಈ ಹಾಡು ಇದ್ದದ್ದು ಣಿಸುತ್ತದ. ಇವುಗಳ ಸಂಬಂಧದಲ್ಲಿ ಮ್ಯುನಿಸಿಪಾಲಿಟಿಯವರು ಅಲಕ್ಷ ಮಾಡಿರುವುದಕ್ಕೆ ಕಾರಣವೇನೋ ತಿಳಿದು.

ತತ್ವಕ್ಕನುಸಾರವಾಗಿ ಕಾರ್ಯ ಮಾಡುವುದೆಂದರೆ, ಅದು ಸರ್ವರಿಗೂ ಮಾನ್ಯವಾಗಿರಬೇಕು ಇಲ್ಲದೇ ಇದ್ದರೆ ಪಕ್ಷಪಾತದ ದೋಷಕ್ಕೆ ಗುರಿಯಾಗಲಾಗುವುದೆಂಬ ಮಾತನ್ನು ಮುನಸಿಪಾಲಿಟಿಯವರು ಮರೆಯ ಕೂಡದು.

೦ ೦ ೦

೨] ನಮಗೆ ಹೊಟ್ಟೆಯುರಿ ಇಲ್ಲ

ಹೀಗೆ, ಇಂತಹ ಓಣಿಗಳಲ್ಲಿ ಹೆಚ್ಚು ನೀರು ಬರುತ್ತದೆಂದು ಹೇಳಿದರೆ, "ಇನ್ನೊಬ್ಬರಿಗೆ ಅನುಕೂಲವಿದ್ದದ್ದನ್ನು ಕೆಡಿಸುವ ಬುದ್ಧಿಯೇಕೆ ನಿಮಗಿರಬೇಕು?" ಎಂದು ಯಾರಾದರೂ ನಮಗೆ ಕೇಳಬಹುದು. ಪಾಪ! ಅವರಿಗೆ ಹೆಚ್ಚು ನೀರು ಸಿಕ್ಕರೆ ನಮಗೇಕೆ ಹೊಟ್ಟೆ ಉರಿಯಬೇಕು? ನಾವೆಂದಿಗೂ ಹೀಗೆ ಇಚ್ಚಿಸುವುದಿಲ್ಲ. ಆದರೆ ಎಲ್ಲರಿಗೂ ನೀರು ಸಿಗಬೇಕೆಂಬುವ ಮಾತನ್ನು ನಾವು ಮರೆಯಕೂಡದು. ಇಡೀ ಊರಿಗೆ ಸಾಕಾಗುವಷ್ಟು ನೀರನ್ನು ಕೊಟ್ಟಬಳಿಕ ಹೆಚ್ಚಾದರೆ ಅದನ್ನು ಬೇಕಾದವರಿಗೆ ಕೊಡಲಿ ಅದೂ ಕೂಡ ಮ್ಯುನಸಿಪಾಲಿಟಿಯ ಕರ್ತವ್ಯದ ದೃಷ್ಟಿಯಿಂದ ತಪ್ಪೇ ಆಗುವುದು. ಯಾಕಂದರೆ, ಇಂಥವರಿಗೇ ಹೆಚ್ಚು ನೀರು ಏಕೆ ಕೊಡಬೇಕು ಎಂಬ ಪ್ರಶ್ನೆಯು ಬಂದೇ ಬರುವುದು. ಅದಕ್ಕೂ ಪಕ್ಷಪಾತದ ಬಣ್ಣವು ಹಚ್ಚಲ್ಪಡದೆ ಇರಲಿಕ್ಕಿಲ್ಲ.

ಹುಬ್ಬಳ್ಳಿಯಲ್ಲಿ ನೀರಿನ ಅಭಾವದಿಂದ ಬೊಬ್ಬೆಯಿಡುವುತ್ತಿರುವದು ಹಲವೆಡೆಗೆ ನಡೆದೇ ಇದೆ. ಇದಕ್ಕೆ ಗಂಟೇಕೇರಿ ಕ್ರಿಶ್ಚನ್ ಕಾಲನಿ, ಭಾರತಮಿಲ್ಲಿನ ಹತ್ತಿರಿನ ಕ್ರಿಶ್ಚನ್ ಕಾಲನಿಯ ಮಂಗಳ ಓಣಿ, ದೇಶಪಾಂಡೆ ನಗರ, ಹಳೇಹುಬ್ಬಳ್ಳಿಯ ಬಾಗಾರಪೇಟೆಗಳು ಸಾಕ್ಷಿಯಾಗಿವೆ. ತತ್ವವನ್ನು ಒಂದೇ ಸೆವನೆ ಎಲ್ಲೆಡೆಗೆ ಹಚ್ಚದಿದ್ದ ಮೂಲಕ ಕೆಲವರನ್ನು ಗೋಳಿಗೆ ಗುರಿಮಾಡಿದ, ಇನ್ನು ಕೆಲವೆಡೆಗೆ ಮೊದಲಿದ್ದ ಅನವಶ್ಯಕ ಅನುಕೂಲತೆಗಳನ್ನು ಹಾಗೇ ಸಾಗಿಸಿದ ಪಾಪವು ಮ್ಯುನಸಿಪಾಲಿಟಿಗೆ ತಟ್ಟದೆ ಇರಬಹುದೇ?

ಈ ದೃಷ್ಟಿಯಿಂದ ನಾವು ಮೇಲಿನ ಪ್ರದೇಶಗಳನ್ನು ಬೆರಳಿನಿಂದ ತೋರಿಸಿದ್ದೇವೆ

೦ ೦ ೦

೩] ತಾತ್ಕಾಲಿಕ ವ್ಯವಸ್ಥೆ ಬೇಕು

ಊರಲ್ಲಿ ಎಲ್ಲೆಡೆಗೆ ಸಾಕಷ್ಟು ನೀರು ಸರಬರಾಜು ಸುವ ಯೋಜನೆಯು ಸಿದ್ಧವಾಗುತ್ತಿದೆ, ಅದು ಕಾರ್ಯದಲ್ಲಿ ಬರುವವರೆಗೆ ಹಲ ಕೆಲವು ಭಾಗಗಳಿಗೆ ನೀರಿನ ತೊಂದರೆಯು ತಪ್ಪಿದಲ್ಲ ಎಂದು ಮ್ಯುನಸಿಪಾಲಿಟಿಯವರು ಅನ್ನಬಹುದು. ಆದರೆ ಆ ಯೋಜನೆಯು ಸಿದ್ಧವಾಗಿ, ಅದಕ್ಕೆ ಸರಕಾರದ ಮಾನ್ಯತೆ ದೊರೆತು, ಬೇಕಾದ ಮಡ್ಡು ಸಿಕ್ಕು ಅದು ಕಾರ್ಯದಲ್ಲಿ ಬರಬೇಕಾದರೆ ಬಹಳ ಅವಧಿಯು ಬೇಕಾಗಬಹುದು. ಅಲ್ಲಿಯ ವರೆಗೆ, ಹುಬ್ಬಳ್ಳಿಯಲ್ಲಿ ಇಂದು ನೀರಿನ ಅಭಾವದಿಂದ ತೊಂದರೆ ಪಡುತ್ತಿರುವವರು ಹಾಗೆಯೇ ಬಾಯಿಬಿಡುತ್ತ ಕೂಡ್ರಬೇಕೇ? ಅವರಿಗೆ ತಾತ್ಕಾಲಿಕ ನೀರಿನ ಪೂರೈಕೆಯನ್ನು ಮಾಡುವುದು ಅನಿವಾರ್ಯವಲ್ಲವೇ? ಅದರ ಅಭಾವದಲ್ಲಿ, ಅವರು ಜನರಲ ವಾಟರ ಟ್ಯಾಕ್ಸನ್ನು ಕೊಡಲು ನಿರಾಕರಿಸಿದರೆ ಅದು ತಪ್ಪೆನಿಸುವುದೇ?

೦ ೦ ೦

೪] ವಿದ್ಯುದ್ದೀಪಗಳು

ವಿದ್ಯುದ್ದೀಪಗಳು ಎಂದು ಬರುವವು? ವರ್ತಮಾನಪತ್ರದಲ್ಲಿ ಪ್ರಸಿದ್ಧವಾದ ಸಂಗತಿಯ ಅರ್ಥವೇನು? ಎಂದು ಬಹು ಜನರು ಕೇಳುತ್ತಿದ್ದಾರೆ ನಮಗೂ ಹೇಳಿ ಹೇಳಿ ನಾಕಾದ ಮೂಲಕ ಇಲ್ಲಿ ಬರೆದು ಬಿಡುವುದೇ ಲೆಸೆಂದು ತೋರುತ್ತದೆ

ಇಲ್ಲಿಯ ವಿದ್ಯುತ್ ಕಂಪನಿಯವರು ಸದ್ಯಕ್ಕೆ ಊರಲ್ಲಿಯ ಜನರ ಮನೆಗಳಿಗೆ ದೀಪಗಳನ್ನು ಕೊಡುವುದಕ್ಕಾಗಿ ಸುಮಾರು ೭೦೦ ಕಂಬಗಳನ್ನು ನಿಲ್ಲಿಸಿದ್ದಾರೆ ಅವುಗಳ ಮೇಲೆ ಒಂದೊಂದರಂತೆ ದೀಪಗಳನ್ನು ಬೀದಿಯ ಬೆಳಕಿಗಾಗಿ, ಇನ್ನು ಆರುತಿಂಗಳಲ್ಲಿ ಅವರು ಹಚ್ಚಬೇಕು ಉಳಿದ ಕಡೆಗೆ ಹೊಸದಾಗಿ ಕಂಬಗಳನ್ನು ಹಾಕುವ ಕಾರ್ಯವನ್ನು ಆ ಮೇಲೆ ಮಾಡುತ್ತ ಹೋಗಬೇಕು ಈ ದೀಪಗಳಿಗಾಗಿ ವೆಚ್ಚವಾಗುವ ಪ್ರತಿಯೂನಿಟ್ಟಿಗೆ ಎಷ್ಟು ಹಣವನ್ನು ಮ್ಯುನಸಿಪಾಲಿಟಿಯವರು ಕಂಪನಿಗೆ ಕೊಡಬೇಕೆಂಬದನ್ನು ಸರಕಾರೀ ಪಂಚರು ಹೇಳುವರು ಅದಕ್ಕೆ ಮ್ಯುನಸಿಪಾಲಿಟಿಯವರು ಮತ್ತು ಕಂಪನಿಯವರು ಒಪ್ಪಿಕೊಳ್ಳಲೇಬೇಕು ಎಂದು ಗೊತ್ತಾಗಿದೆ.

ಆದ್ದರಿಂದ ತೀರ ಕಡಿಮೆಯೆಂದರೆ ಒಂಡೆರಡು ತಿಂಗಳಲ್ಲಿ ಒಳ್ಳೇ ಹೆಚ್ಚೆಂದರೆ ಆರು ತಿಂಗಳಲ್ಲಿ ಹುಬ್ಬಳ್ಳಿಯ ಕೆಲವು ಬೀದಿಗಳಿಗೆ (ಸದ್ಯಕ್ಕೆ ಕಂಪನಿಯ ಕಂಬಗಳಿದ್ದಲ್ಲಿ) ವಿದ್ಯುದ್ದೀಪಗಳ ಬೆಳಕು ಹೊರೆಯುವುದು.

ಏನೇ ಆದರೂ ಈ ಅವಧಿಯು, ಮ್ಯುನಸಿಪಾಲಿಟಿ ಮತ್ತು ವಿದ್ಯುತ್ ಕಂಪನಿಗಳು ತಮ್ಮ ತಮ್ಮಲ್ಲಿಗೆ ಇಟ್ಟುಕೊಳ್ಳುವ ಸಂಬಂಧಗಳ ಮೇಲೆ ಅವಲಂಬಿಸಿದೆ. ಮ್ಯುನಸಿಪಾಲಿಟಿಯವರು ಊರಲ್ಲಿಯ ದೀಪಗಳ ವಿಷಯದಲ್ಲಿ ಸಂಪೂರ್ಣ ನಕಾಶ ಮೊದಲಾದದ್ದನ್ನು ಇನ್ನುಮೇಲೆ ಸಿದ್ಧ ಮಾಡಿಕೊಡುವ ಹಾದಿಯನ್ನು ನೋಡದೆ, ಕಂಪನಿಯವರು, ಊರಲ್ಲಿಯ ಪ್ರಮುಖ ಬೀದಿಗಳಲ್ಲಿಯ ಒಂದೊಂದನ್ನೇ ತೆಗೆದುಕೊಂಡು ಈ ಕಾರ್ಯವನ್ನು ಬೇಗನೆ ಮುಂದುವರಿಸಬೇಕಾಗಿ ನಮ್ಮ ಸೂಚನೆ.

೦ ೦ ೦

೫] ಮೊದಲೇ ಜಾಗ್ರತೆ ಬೇಕು

ದೇಶವಾಂಡೆ ನಗರದಲ್ಲಿ ಕೆಲವೊಬ್ಬರು ತಮ್ಮ ವ್ಹಾಟನ ಷ್ಟಿಕಿಂತ ಹೆಚ್ಚು ನೆಲೆಯ ಮೇಲೆ ಕಟ್ಟಡ ಕಟ್ಟಕೊಂಡಿದ್ದಾರೆಂಬ ಕೇಳುತ್ತೇವೆ. ಇದಕ್ಕೆ ಮ್ಯುನಸಿಪಾಲಿಟಿಯವರೇ ವರವಾನಿಗೆ ಕೊಟ್ಟಿದ್ದಾರಂತೆ.

ಇದೇನು ತಿಳಿದೂ ತಿಳಿದೂ ಆಗಿರುವುದೋ ಅಥವಾ ಗೊತ್ತಾಗದೆ ಸಂಭವಿಸಿರುವುದೋ? ಎಂಬದನ್ನು ವಿಚಾರಿಸಬಹುದೇ? ಯಾಕಂದರೆ ಆ ಮೇಲೆ ಎಷ್ಟೋ ದಿವಸಗಳ ತರುವಾಯ ಈ ಬಗ್ಗೆ ಆಕ್ಷೇಪವನ್ನು ಮ್ಯುನಸಿಪಾಲಿಟಿಯವರು ತೆಗೆದರೆ, ಇಂದು ತಬೀಬಲ್ಯಾಂಡಿನಲ್ಲಿಯ ಮನೆಗಳ ವಿಷಯಕ್ಕೆ ನಡೆದ ಗೊಂದಲದಂತೆ ಅದಾದರೂ ಪರಿಣಮಿಸಬಹುದು ಮೊದಲೇ ಜಾಗ್ರತೆ ಬೇಡವೇ?

ನೀಲಗಿರಿಯ ಪರ್ವತದಲ್ಲಿ ಬೆಳೆಯುವ
ಉತ್ಕೃಷ್ಟ
ಹಾಯಲ್ಯಾಂಡ್ ಟೀ
ಯನ್ನೇ ಉಪಯೋಗಿಸಿರಿ
ಸ್ಟಾಕಿಸ್ಟ ★
S. D. MORAB, HUBLI.

WE LEAD
and others follow in all the branches of
PHOTOGRAPHY
Why not Come in for a sitting today only ?
NATIONAL STUDIO GADAG
THE NATIONAL PHOTO ART STUDIO
Radhakrishnapet, HUBLI.
KODAK Photo Material always available

ಬಿ. ಡಿ. ಘೋಡಕೆ ಮತ್ತು ಬ್ರದರ್ಸ
ಮ್ಯಾನುಫ್ಯಾಕ್ಚರರ್ಸ ಮತ್ತು ಎಂಜಿನಿಯರ್ಸ, ಹುಬ್ಬಳ್ಳಿ
ನಮ್ಮಲ್ಲಿ—
- ಒಕ್ಕಲಿಗರಿಗೆ ಲಾಭದಾಯಕವೆಂದು ಖ್ಯಾತಿಪಡೆದ "ಭಾರತ" ಕುಳಗಳು, ಕಬ್ಬಿಣ ರಂಟೆಗಳು, ಕುಳಗಳು, ಗಡಗಡಿಗಳು
- ಅಕ್ಕಿ ಮತ್ತು ಭತ್ತದ ಗಿರಣಿಗಳು, ಆಯಿಲ್ ಎಂಜಿನ್‌ಗಳು,
- ವಿದ್ಯಾರ್ಥಿಗಳಿಗೆ ಬೇಕಾಗುವ ಡಂಬೆಲ್ಸ್, ಲೇಜೀಮು ಮೊದಲಾದ ಆಟದ ಸಾಮಾನುಗಳು,
- ಎಲ್ಲ ಮಶಿನರಿ ಸ್ಪೇರ ಪಾರ್ಟಗಳು ಮತ್ತು ಎಲ್ಲ ಆಕಾರದ ಬೆಲ್ಟ ಪಟ್ಟಾಗಳು

ಯೋಗ್ಯ ಬೆಲೆಗೆ ದೊರೆಯುತ್ತವೆ.
ಮರಾಠಾ ಗಲ್ಲಿ .... ಹುಬ್ಬಳ್ಳಿ

ದಿನೇ ದಿನೇ ಬೆಳೆಯುತ್ತಿರುವ ಹುಬ್ಬಳ್ಳಿಯ ಬಡತನ

ಇದಕ್ಕೆ ತಡೆಹಾಕುವ ಉಪಾಯ

ಜನ್ಮದಿನ ಸಂಚಿಕೆಗಾಗಿ ಬಂಡ ಲೇಖ

ಲೇ:— ಶ್ರೀ ಆರ್. ಎಲ್. ಅಮಟೆ ಬಿ. ಎ, ಎಲೆಲ್ ಬಿ. ಹುಬ್ಬಳ್ಳಿ

ಕರ್ನಾಟಕದ ಅತಿ ಮಹತ್ವದ ಪಟ್ಟಣಗಳಲ್ಲಿ ಹುಬ್ಬಳ್ಳಿಯು ಒಂದಾಗಿದೆ. ಆದರೆ ಇದರ ಸ್ಥಿತಿಯನ್ನು ಸುಧಾರಿಸಲು ಯಾವ ಸಂಘಟಿತ ಪ್ರಯತ್ನಗಳೂ ನಡೆದಿಲ್ಲ. ಈ ತರಹದಅಲಕ್ಷ್ಯಕ್ಕೆ ಅನೇಕ ಕಾರಣಗಳುಂಟು ನಮ್ಮ ಮೂರ್ಖದ ಪ್ರೇಮಂತಿಕೆಯು ಹೋಗಿದ್ದರೂ ಅದು ಇದ್ದಾಗ್ಗೆ ಇದ್ದಂತೆಯೇ ನಾವು ಜೀವನವನ್ನು ಇಂದು ಕೂಡ ನಾಗಿಸಿರುವುದು ಇಂದಿನ ಬಡತನದ ಬೆಳವಣಿಗೆಗೆ ಮತ್ತೊಂದು ಕಾರಣವಾಗಿದೆ ಆಡಂಬರವೇ ಈಗಿನ ಜೀವನದ ಮುಖ್ಯಾಂಗವಾಗಿದೆ. ಎಷ್ಟು ದಿನಸ ಈ ಸ್ಥಿತಿಯು ನಡೆದೀತು ? ಇದಕ್ಕೂ ಕರಿಣವಾದ ಸ್ಥಿತಿಯು ಬರುವ ಮೊದಲು ನಾವು ಎಚ್ಚತ್ತು ಸಂಘಟಿತರಾಗಿ ನಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದು ಶ್ರೇಯಸ್ಕರವಾಗಿದೆ.

ಹುಬ್ಬಳ್ಳಿಯಲ್ಲಿ ಹಲಕೆಲವರು ಶ್ರೀಮಂತರು ಇದ್ದಾರೆ ಅಂದ ಮಾತ್ರಕ್ಕೆ ಇಡೀ ಹುಬ್ಬಳ್ಳಿಯು ಶ್ರೀಮಂತವಿರುವುದೆಂದು ಅನ್ನಬಹುದೇ ? ಜನಸಾಮಾನ್ಯರ ಸ್ಥಿತಿಯು ಸುಸಂಪನ್ನವಾಗಿರಬೇಕು ಅಂದರೆ ಆ ಪಟ್ಟಣವು ಸುಸಂಪನ್ನವಾಗಿದೆಯೆಂದು ಅನ್ನಲು ಬರುತ್ತದೆ

ಹಿಂದಿನ ಕಾಲದಲ್ಲಿ ಈ ತರಹದ ಸಾಮಾನ್ಯವಾದ ಸಮೃದ್ಧಿಯು ನೆಲೆಗೊಂಡಿತ್ತು. ಆಗಿನ ಕಾಲದ ಜನರು ಮಿತವ್ಯಯಿಗಳಾಗಿದ್ದುದೇ ಅದರ ಮುಖ್ಯ ಕಾರಣವಾಗಿದೆ. ಇಂದು ಹಳ್ಳಿಗಳಲ್ಲಿ ಕಂಡು ಬರುವ ವ್ಯಸನಗಳು ಆಗ್ಗೆ ಪಟ್ಟಣಗಳಲ್ಲಿ ಕೂಡ ಇದ್ದಿಲ್ಲ ತೀರ ಕ್ಷುಲ್ಲಕವಾದ ಚಹಾದ ಚಟವನ್ನೇ ತೆಗೆದುಕೊಂಡರೆ ಅದು ದೇಶದ ಮೂಲೆಮೂಲೆಗಳನ್ನು ಹೊಕ್ಕು ಜನರನ್ನು ಹಿಂಡಿ ಹಿಪ್ಪೆ ಮಾಡಿ ಮಹಾ ಭಯಾನಕ ಸ್ಥಿತಿಯನ್ನು ಉಂಟು ಮಾಡಿದ್ದು ಆಶ್ಚರ್ಯವಲ್ಲವೇ ? ಪಟ್ಟಣದಲ್ಲಿ ಅಲ್ಪಸ್ವಲ್ಪ ಸಂಬಳದಿಂದ ಜೀವಿಸುವವರಿಗೆ ಈ ಮಾತು ಅಷ್ಟೊಂದು ಬಾಂಬಿಸಲಿಕ್ಕಿಲ್ಲ. ಆದರೆ ದಿವಸಕ್ಕೆ ೧॥—೨ ಆಣೆ ಗಳಿಸುವ ಬಡ ಕೂಲಿಕಾರನೂ ಕೂಡ ಪ್ರತಿ ದಿವಸ ಅರ್ಧ ಆಣೆಯನ್ನು ಚಹಾದ ಸಲುವಾಗಿ ವೆಚ್ಚ ಮಾಡುತ್ತಿರುವುದು ತೀರ ಶೋಚನೀಯ ಸಂಗತಿಯಾಗಿದೆ

ರೇಲ್ವೆ ಮೋಟಾರುಗಳ ಮೂಲಕ ಇಂದು ಪಟ್ಟಣ ಮತ್ತು ಹಳ್ಳಿಗಳಲ್ಲಿ ಬಳಕೆಯು ಹೆಚ್ಚಾಗಿದೆ ಪಟ್ಟಣಕ್ಕೆ ಬಂದ ಹಳ್ಳಿಗನು ಅಲ್ಲಿಯ ಹೊಳಪಿಗೆ ಮೋಸ ಹೋಗುವುವು ಸ್ವಾಭಾವಿಕವಾಗಿದೆ. ಮತ್ತು ಅಲ್ಲಿಯ ಎಲ್ಲ ಚಟಗಳು ಅವನಲ್ಲಿ ಸೇರಿ ಹೋಗಿವೆ.

ಮೊದಲು ಇಂತಹ ವಾತಾವರಣ ಇಲ್ಲದ್ದರಿಂದ ಪ್ರತಿ ಹಳ್ಳಿಯಲ್ಲಿ ಕೂಡ ಕ್ಷುಲ್ಲಕತರ ರೂಪಾಯಿಗಳುಳ್ಳ ಅನೇಕ ಶ್ರೀಮಂತರು ದೊರೆಯುತ್ತಿದ್ದರು ಅವಲ್ಲಿಯ ಹಣವು ಹರಿದು ಹಂಚಿ ಹೋಲು ಮಾರ್ಗವಿದ್ದಿಲ್ಲ

ಇತ್ತ ಕಡೆಗೆ ನಮ್ಮ ಜೀವನದ ಅವಶ್ಯಕತೆಗಳು ಮಿತಿಯಿಲ್ಲದೆ ಬೆಳೆಯತೊಡಗಿವೆ ಮಕ್ಕಳಿಗೆ ಅವಶ್ಯವಾದ ತಿಕ್ಷಣದ ವೆಚ್ಚವು ಕೂಡ ಇಂದು ಬಹಳವಾಗಿ ಬೆಳೆದಿದೆ ಸಮಾನತ್ವದ ರೋಗವೊಂದು ನಮಗೆ ಇಂದು ಗಂಟು ಬಿದ್ದಿದೆ ಹಿರಿಯ ಕಿರಿಯರೆಂಬ ಭೇದಭಾವವಿಲ್ಲದೆ ನಮ್ಮಲ್ಲಿ ಎಲ್ಲರಲ್ಲಿಯೂ ಎಲ್ಲ ತರಹದ ಜಟಗಳು ಕಂಡು ಬರುತ್ತಿವೆ ಸ್ತ್ರೀ-ಪುರುಷರಲ್ಲಿಯ ಭೇದಭಾವಗಳು ಕೂಡ ಬಹುಶಃ ಎಲ್ಲವೂ ಹೋಗಲು ಇನ್ನು ಬಹಳ ದಿವಸ ಹಿಡಿಯುವಂತೆ ತೋರುವುದಿಲ್ಲ ನಾಟಕ ಸಿನೇಮಾಗಳಲ್ಲಿ ಅಥವಾ ಇನ್ನಿತರ ಕಾರ್ಯಕಲಾಪಗಳ ಪ್ರಸಂಗಗಳಲ್ಲಿ ಸ್ತ್ರೀ—ಪುರುಷರ ಸಲುವಾಗಿ ಬೇರೆ ಬೇರೆ ಸ್ಥಳದ ಏರ್ಪಾಡು ಮಾಡುವುದು ಮುಂಬಯಿಯಂತಹ ಸುಧಾರಣೆಯ ಏಖರಕ್ಕೆ ಮುಟ್ಟಿದ ಸ್ಥಳಗಳಲ್ಲಿ ಅವಶ್ಯಕವಾಗಿ ತೋರುತ್ತಿಲ್ಲ. ಈ ಸ್ಥಿತಿಯು ಹುಬ್ಬಳ್ಳಿಯಂತಹ ಊರಿಗೂ ಕ್ರಮೇಣ ಬಂದರೆ ಅಥವಾ ಈಗಾಗಲೇ ಬಂದಿದ್ದರೆ ಆಶ್ಚರ್ಯವೇನು ? ಹೀಗಿದ ಪ್ರಗತಿ ಅಥವಾ ಸುಧಾರಣೆಯ ವೇಗದ ಚಿತ್ರವು

ಇನ್ನು, ಗೃಹಜೀವನವು ಸಾರ್ವಜನಿಕ ಜೀವನದ ಪರಿಣಾಮಗಳನ್ನು ಹೊಂದದೆ ಬಿಟ್ಟಿಲ್ಲ ಮನೆಯ ಒಡೆಯನಿಗೆ ಅಕ್ಕಿಯ ಅನ್ನ ಉಳಿದವರಿಗೆ ಜೋಳದ ರೊಟ್ಟಿ ದೊರೆಯುವ ಹಿಂದಿನ ದಿನಗಳು ನಮಗೆ ಇನ್ನೂ ಮರತಿಲ್ಲ. ಒಂದೇ ಜೋತರ ಜೋಡನ್ನು ಸಮಾರಂಭದ ಕಾಲದಲ್ಲಿ ತಂದೆಮಕ್ಕಳಿಬ್ಬರೂ ನರತಿಯಂತೆ ಉಪಯೋಗಿಸುತ್ತಿದ್ದುದನ್ನೂ ನಾವು ಬಲ್ಲೆವು ಹೀಗೆಂದ ಮಾತ್ರಕ್ಕೆ ಇಂದಿನ ಜೀವನವನ್ನು ಹಿಂದಿನದಕ್ಕೆ ಮಾರ್ಪಡಿಸಬೇಕೆಂದು ನಾನು ಹೇಳಲಾರೆನು. ಅದು ಸಾಧ್ಯವೂ ಇಲ್ಲ

ಜಗತ್ತಿನಂತೆ ಮನುಷ್ಯನೂ ಬದಲಾಗುತ್ತ ಹೋಗುವನು. ಆದರೆ ಆ ಪ್ರಮಾಣದಲ್ಲಿ ನಮ್ಮ ಉತ್ಪನ್ನವೂ ಬೆಳೆಯಬೇಕಲ್ಲವೇ ? ಅದಕ್ಕೆ ಯೋಗ್ಯ ಉಪಾಯವನ್ನು ಕಂಡು ಹಿಡಿಯುವುದೇ ನಮ್ಮ ಮುಂದಿರುವ ಪ್ರಶ್ನೆಯಾಗಿದೆ

ಉತ್ಪನ್ನವು ಬೆಳೆಯಬೇಕಾದರೆ ನಮ್ಮ ವ್ಯಾಪಾರೋದ್ಯೋಗಗಳು ಊರ್ಜಿತ

೭ ನೇ ಪುಟ ನೋಡಿರಿ

ಹೋದದ್ದು ಅಧಿಕಾರವಲ್ಲ; ಅದನ್ನು ದುರುಪಯೋಗ ಮಾಡುವ ಶಕ್ತಿಯು

ಲೇ : ಶ್ರೀ. ಆರ್. ಎಸ್. ಹುಕ್ಕೇರಿಕರ, ಧಾರವಾಡ

ಜನ್ಮದಿನ ಸಂಚಿಕೆಗಾಗಿ ಬಂದ ಲೇಖನವು

ಮುಂಬಯಿ ಪ್ರಾಂತದಲ್ಲಿ ಆಳಿದ ಕಾಂಗ್ರೆಸ ಮಂತ್ರಿಮಂಡಳವು ಅನೇಕ ಮಹತ್ವದ ಕಾಯಿದೆಗಳನ್ನು ನಿರ್ಮಾಣ ಮಾಡಿತು ಇವುಗಳಲ್ಲಿಯ ಅನೇಕ ಕಾಯಿದೆಗಳ ಮೂಲಕ, ಅದು ಕಾಂಗ್ರೆಸ ವಿರೋಧಿಗಳ ಮತ್ತು ಕಾಂಗ್ರೆಸ್ಸೇತರರ ಮನಸ್ಸನ್ನು ನೋಯಿಸಬೇಕಾಯಿತು ಆದರೆ ಕಾಂಗ್ರೆಸ್ ಸಭಾಸದರೇ ಈ ಮಂತ್ರಿಮಂಡಲವನ್ನು ನಿಷೇಧಿಸುತ್ತಿರುವದೂ ಅದನ್ನು ಮತ್ಸರಪೂರ್ವಕವಾಗಿ ವಿರೋಧಿಸುತ್ತಿರುವದೂ ಆಶ್ಚರ್ಯಕರ ಸಂಗತಿಯಾಗಿದೆ ಒಂದು ಕಾಯಿದೆಯ ವಿಷಯದಲ್ಲಂತೂ ತಮಗಾದ ಅಸಮಾಧಾನವನ್ನು ವ್ಯಕ್ತ ಮಾಡುವದಕ್ಕಾಗಿ ಇವರು ತಮಗೆ ದೊರೆತ ಒಂದು ಸಂಧಿಯನ್ನು ಕೂಡ ಉಪಯೋಗ ಮಾಡದೆ ಬಿಟ್ಟಲ್ಲ ಈ ಕಾಯಿದೆಯು ಅವರ ಮಹತ್ವದ ಅಧಿಕಾರಗಳನ್ನೇ ಕಸಿದುಕೊಂಡಿದೆಯೆಂಬುದು ಅವರ ಅಭಿಪ್ರಾಯವಾಗಿದೆ

೧೯೪೬ನೇ ಇಸ್ವಿಯ ಮುಂಬಯಿ ಪ್ರಾಥಮಿಕ ಶಿಕ್ಷಣದ ಕಾಯಿದೆಯ ಮೇರೆಗೆ, ಆಗಿನ ಸರಕಾರದ ವಶದಲ್ಲಿದ್ದ ಎಲ್ಲ ಪ್ರಾಥಮಿಕ ಶಾಲೆಗಳು ಮ್ಯುನಿಸಿಪಾಲಿಟಿಯ ಇಲ್ಲವೆ ಜಿಲ್ಲಾ ಲೋಕಲ್ ಬೋರ್ಡುಗಳ ಕಡೆಗೆ ಕೊಡಲ್ಪಟ್ಟವು ಜನರ ಪ್ರತಿನಿಧಿಗಳ ಕೈಯ್ಯಲ್ಲಿ ಶಿಕ್ಷಣ ವಿಭಾಗವನ್ನು ಕೊಟ್ಟರೆ, ಶಿಕ್ಷಣದ ತರಗತಿಯಲ್ಲಿ ತೀವ್ರವಾಗಿ ವೈಶಾಲ್ಯವೂ ಸುಧಾರಣೆಯೂ ಉಂಟಾಗುವದೆಂಬಬೇ ಈ ಕಾಯಿದೆಯ ಹಿಂದಿನ ಉದ್ದೇಶವಾಗಿತ್ತು ಲೋಕಪ್ರತಿನಿಧಿಗಳು, ಒತ್ತಾಯದ ಮತ್ತು ಸಾರ್ವತ್ರಿಕ ಶಿಕ್ಷಣವನ್ನು ಪ್ರಾರಂಭಿಸಲು ಎಲ್ಲ ಬಗೆಯಿಂದ ಯತ್ನಿಸುವರೆಂದೂ, ಜನರ ಒಪ್ಪಿಗೆಯಿಂದ ಹೆಚ್ಚು ದುಡ್ಡು ಸಂವಾದಿಸಿ ಶಿಕ್ಷಣದಲ್ಲಿ ಎಲ್ಲಿ ಆಧುನಿಕ ಸುಧಾರಣೆಯನ್ನು ಮಾಡುವರೆಂದೂ ನಿರೀಕ್ಷಿಸಲಾಗಿತ್ತು. ಆದರೆ ಪ್ರಾಂತದಲ್ಲಿಯ ಜನರ ಬಹುಭಾಗದ ಪ್ರತಿನಿಧಿಯಾದ ಕಾಂಗ್ರೆಸ ಮಂತ್ರಿಮಂಡಲಕ್ಕೆ ೧೯೪೬ನೇ ಇಸ್ವಿಯ ಕಾಯಿದೆಯನ್ನು ನಿರ್ಮಿಸಿದವರು ಇಟ್ಟುಕೊಂಡಿದ್ದ ಆತಿಯು ನಿಷ್ಫಲವಾಗಿರುವದೇಬುದೂ, ಮತ್ತು ಈ ಪದ್ಧತಿಯನ್ನು ಹಾಗೆಯೇ ಸಾಗಗೊಟ್ಟರೆ, ಈ ಪ್ರಾಂತದಲ್ಲಿಯ ಸಂದಿ-ಮೂಲಿಗಳಲ್ಲಿ ಸಾಕ್ಷರತೆಯನ್ನು ಹುಟ್ಟಿಸುವದಕ್ಕೆ ಅನೇಕ ತಲೆಗಳು ಕಳೆಯಬೇಕಾಗುವದೆಂಬುದೂ ತಿಳಿದು ಬಂದಿತು ಎಲ್ಲಕ್ಕೂ ಮೊದಲಿನ ಲೋಕಪ್ರತಿನಿಧಿ ಕಾಯಿದೆ ಮಂಡಲ ಸಭಾಸದರಾದ ಇವರು, ಜನರ ನೈತಿಕ, ಸಾಮಾಜಿಕ, ಮಾನಸಿಕ ಮತ್ತು ಆರ್ಥಿಕ ಪ್ರಗತಿಯನ್ನು ಆದಷ್ಟು ಬೇಗನೆ ಸಾಧಿಸುವಂತಹ ಕಾಯಿದೆಗಳನ್ನು ನಿರ್ಮಾಣ ಮಾಡುವದು ತಮ್ಮ ಕರ್ತವ್ಯವಾಗಿರುವದೆಂದು ಅವರು ಆಲೋಚಿಸಿದರು

ಈ ಉದ್ದೇಶದಿಂದ, ಅವರು ಪ್ರೌಢ ಶಿಕ್ಷಣದ ಯೋಜನೆಯನ್ನು ಪ್ರಾರಂಭಿಸಿದರು, ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವ ಪ್ರಯತ್ನಗಳಿಗೆ ಉತ್ತೇಜನ ಕೊಟ್ಟರು. ಶಾರೀರಿಕ ಶಿಕ್ಷಣಕ್ಕಾಗಿ ಅಭ್ಯಾನ ವರ್ಗಗಳನ್ನು ತೆರದರು, ಗ್ರಂಥಾಲಯದ ಆಂದೋಲನಕ್ಕೆ ಸಹಾಯ ಕೊಟ್ಟರು, ತಮ್ಮ ಇಚ್ಛಿತ ಉದ್ದೇಶವನ್ನು ಸಾಧಿಸಲು ಅನೇಕ ಇತರ ಹೆಜ್ಜೆಗಳನ್ನು ಇಟ್ಟರು ೧೯೪೬ನೇ ಇಸ್ವಿಯ ಪ್ರಾಥಮಿಕ ಶಿಕ್ಷಣ ಕಾಯಿದೆಯನ್ನು ತಿದ್ದುವದು ಈ ಹೆಜ್ಜೆಗಳಲ್ಲಿ ಒಂದಾಗಿತ್ತು ಈ ಕಾಯಿದೆಯಲ್ಲಿ ಹಲಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಆದರೆ ಶಿಕ್ಷಕರನ್ನು ನಿಯಮಿಸಿಕೊಳ್ಳುವ ಮತ್ತು ಬೇರೆ ಬೇರೆ ಸ್ಥಳಗಳಿಗೆ ಅವರನ್ನು ಕಳುಹಿಸುವ (ವರ್ಗ) ಅಧಿಕಾರವನ್ನು ಆ್ಯಡ್ಮಿನಿಸ್ಟ್ರೇಟಿವ್ವ ಆಫೀಸರರಿಗೆ ಕೊಟ್ಟದ್ದು ಮತ್ತು ಈ ಅಧಿಕಾರಗಳನ್ನು ಸರಕಾರದ ಅಧಿಕಾರದ ವಶಕ್ಕೆ ಕೊಟ್ಟದ್ದು, ಆಕ್ಷೇಪಗಾರರ ದೃಷ್ಟಿಯಿಂದ ತೀರ ಮಹತ್ವದ ತಿದ್ದುಪಡಿಯಾಗಿದೆ ಅಂದರೆ, ಸದ್ಯಕ್ಕೆ ಆ್ಯಡ್ಮಿನಿಸ್ಟ್ರೇಟಿವ್ವ ಆಫೀಸರರು ಸರಕಾರದ ವಶಕ್ಕೆ ಹೋಗಿದ್ದಾರೆ ಮತ್ತು ಆವರ (ಆ್ಯ ಆ ರ) ಸಂಬಳ ಮತ್ತು ಪ್ರಗತಿಗಳನ್ನು ಸರಕಾರವೇ ನಿಯಂತ್ರಿಸುತ್ತದೆ ಈ ಆಫೀಸರರ ಕಾರ್ಯವು ಅಸಮಾಧಾನಕಾರಕವಿರುವದೆಂದು ಕಂಡು ಬಂದರೆ, ಜೋರ್ಡುಗಳ ಸಲಹೆಯ ಮೇರೆಗೆ ಅವರನ್ನು ಬೇರೆ ಸ್ಥಳಗಳಿಗೆ ಹಾಕಲಾಗುವದು

ಬೋರ್ಡುಗಳು ಶಿಕ್ಷಣದ ಘೋರಣನನ್ನು ಗೊತ್ತು ಮಾಡುವವು, ಆದಾಯ ವೆಚ್ಚದ ಮುಂಗಡ ಪತ್ರಿಕೆಗಳನ್ನು ಸಿದ್ಧ ಮಾಡುವವು ಮತ್ತು ಸುಕ್ಷಳ ಪರಿಸ್ಥಿತಿಗೆ ತಕ್ಕಂತೆ ಪುಸ್ತಕಗಳನ್ನು ಹಚ್ಚುವವು. ಆದ್ದರಿಂದ, ಶಿಕ್ಷಣವನ್ನು ವಿಸ್ತಾರಗೊಳಿಸುವ ಮತ್ತು ಸುಧಾರಿಸುವ ಅಧಿಕಾರವು ಇನ್ನೂ ಬೋರ್ಡುಗಳಿಗೆ ಇದ್ದೇ ಇದೆ. ನಿಜವಾಗಿಯೂ ಶಿಕ್ಷಣದ ಪ್ರಗತಿಯನ್ನು ಬಯಸುವವರು ತಿದ್ದುಪಡಿ ಹೊಂದಿದ ಕಾಯಿದೆಯ ಬಗ್ಗೆ ಆಕ್ಷೇಪಗೊಳ್ಳುವ ಕಾರಣವೇ ಇಲ್ಲ ಆದರೆ, ಸ್ಕೂಲ ಬೋರ್ಡಿನ ಸಭಾಸದರಲ್ಲಿ ಬಹಳ ಜನರು ಈ ದೃಷ್ಟಿಯಿಂದ ತೀರ ಸ್ವಲ್ಪ ಅಭಿರುಚಿ

೯ ನೇ ಪುಟ ನೋಡಿರಿ

ಏಶಿಯಾಟಿಕ್ ವಿಮಾ ಕಂಪನಿ



ಭದ್ರತೆಯ ಪ್ರಗತಿಪರ ವಿಮಾ ಸಂಸ್ಥೆಯೆಂದು
೫ ಮೂ ತಜ್ಞರು ಹೇಳಿರುತ್ತಾರೆ

ಈ ವರೆಗಾದ ವಿಮಾ ಕಾರ್ಯ	ರೂ. ೨,೫೦,೦೦೦,೦೦
ಪಾಲಿಸಿದಾರರಿಗೆ ಕೊಟ್ಟ ಹಣ	,, ೭,೦೦,೦೦೦
ಸರಕಾರದಲ್ಲಿಯ ತೇವು ಮತ್ತು ಆಧಾರ ಪತ್ರದ ಹಣ	,, ೫,೪೦,೫೫೪
ಒಟ್ಟು ಆಸ್ತಿ	,, ೧೫,೪೮,೭೦೪
ವಿಮಾ ರಕ್ಷಣನಿಧಿ	,, ೧೧,೪೮,೪೯೬
ವಾರ್ಷಿಕ ಉತ್ಪನ್ನ	,, ೫,೨೧,೧೪೬

ಈ ಕಂಪನಿಯಿಂದ ಇದುವರೆಗೆ ೨೫೦೦೦ ಸಂಸಾರಗಳಿಗೆ ರಕ್ಷಣೆ ಸಿಕ್ಕಿದೆ ಹಿಂದುಸ್ತಾನದಲ್ಲಿಯ ಕಂಪನಿಗಳಲ್ಲಿ ಇದು ಪ್ರಥಮ ಶ್ರೇಣಿಯದೂ ಸುರಕ್ಷಿತವಾದುದೂ ಆಗಿದೆ

ಅಖಿಲ ಕರ್ನಾಟಕದ ವಿಮಾ ಸಂಸ್ಥೆಗಳಲ್ಲಿ ಮೊದಲನೇ ವಿಮಾ ಕಂಪನಿಯೆಂದರೆ ಏಶಿಯಾಟಿಕ್

ಹೆಚ್ಚಿನ ವಿವರಗಳಿಗೆ ಬರೆಯಿರಿ-

ಏಶಿಯಾಟಿಕ್ ಗವ್ಹರ್ನಮೆಂಟ ಸೆಕ್ಯೂರಿಟಿ ಲೈಫ್ ಅಶ್ಯೂರನ್ಸ ಕಂ. ಲಿ. (ಬೆಂಗಳೂರ)

ಕರ್ನಾಟಕ ಆಫೀಸ- ಮಾರ್ಕೆಟ ರೋಡ, ಧಾರವಾಡ

ಕೇಶ ಸೌಂದರ್ಯವನ್ನು ಮರಳಿ ಪಡೆಯಿರಿ

★ ಕೂದಲು ಉದುರುವದು
★ ಅಕಾಲದಲ್ಲಿ ಕೂದಲು ಬೆಳ್ಳಗಾಗುವದು
★ ಕೂದಲು ಬೆಳೆಯದೆ ಬೋಳಾಗುವದು

ಇವೆಲ್ಲಕ್ಕೆ ಒಂದೇ ಒಂದು ಉಪಾಯವಾದ

ಮುಕುಲ

ಎಂಬ ಸುವಾಸಿಕ ತೈಲವನ್ನು ಉಪಯೋಗಿಸಿ ಕೇಶ ಸೌಂದರ್ಯವನ್ನು ಮರಳಿ ಪಡೆಯಿರಿ.

ಆಯುರ್ವೇದಾಶ್ರಮ ಫಾರ್ಮಸಿ ಲಿ.,
ಅಹಮ್ಮದನಗರ

ಕರ್ನಾಟಕ ಶಾಖೆ:- ಸ್ಟೇಶನ್ ರೋಡ, ಹುಬ್ಬಳ್ಳಿ

SHRI DHOOTAPAPESHWAR PANVEL LTD Panvel.

ಹುಬ್ಬಳ್ಳಿ ಕೇಂದ್ರ—

ಯುನಾಯಿಟೆಡ್ ಏಜನ್ಸೀಜ.....ಹಾಸ್ಪಿಟಲ್ ರೋಡ

ಭುವನೇಂದ್ರ ಪ್ರೋಡಕ್ಟ್ಸ ಲಿಮಿಟೆಡ್,

ವಂಡ್ಕರ ಬಿಲ್ಡಿಂಗ, ಮರಾಠಾಗಲ್ಲಿ, ಹುಬ್ಬಳ್ಳಿ.

ಮನೋವಿಕಾರ ಮೆದುಳಿನ ದುರ್ಬಲತೆ ನಿದ್ರಾನಾಶ

ಇವುಗಳ ಮೇಲೆ ಅತ್ಯಂತ ಗುಣಕಾರಿ

ಹಿಮಸಾಗರ ತೈಲ

ಗುಣದಲ್ಲಿ ಸಂಪೂರ್ಣ ಸಮಾಧಾನ

ಮತ್ತು ಅತಿ ಶ್ರೇಷ್ಠವೆಂದು ಪ್ರಸಿದ್ಧಿಹೊಂದಿದ ಈ ತೈಲವನ್ನು
ಉಪಯೋಗಿಸಿ ಸುಖಶಾಂತಿಯನ್ನು ಪಡೆಯಿರಿ

ನಮ್ಮ ಏಜಂಟರ ಮತ್ತು ಸ್ಟಾಕಿಸ್ಟರ ಕಡೆಗೆ ಸಿಗುವವು—

BHUVANENDRA PRODCTS Ltd.,
WANDKAR BUILDING
MARATHAGALLI, HUBLI.

ಹುಬ್ಬಳ್ಳಿಯ ಮುಂದಿನ ನೆಮ್ಮದಿಯ ಚಿಂತನೆ

[ಜನ್ಮದಿ ಸಂಜೆಗೆಗಾಗಿ ಬಂದ ಲೇಖ]

ಬರೆದವರು: ಶ್ರೀ. ಎಸ್. ಎ. ಪಿ. ಬೆಂಗಳೂರ

ಕರ್ನಾಟಕ ಪ್ರಹಸನ ಪ್ರಸಿತಾಮಹ ಕೈಲಾಸಂ ಅವರು ಬರೆದಿರುವ 'ಹೋಂ ರೂಲ್' ನಾಟಕವನ್ನು ನಾನು ಮೊತ್ತ ಮೊದಲು ಓದಿದಾಗ, ನಾಟಕಕಾರರು ಏಕಕಾಲದಲ್ಲಿ ಎರಡು ಕ್ಷೇತ್ರಗಳ ಸುಧಾರಣೆಗೆ ಜನರನ್ನು ಪ್ರೇರಿಸುವ ಉದ್ದೇಶವನ್ನು ನಾಟಕದಲ್ಲಿ ವ್ಯಕ್ತಿಸಿರುವದನ್ನು ಮನಗಂಡೆ ಈ ಉದ್ದೇಶದಲ್ಲಿ ಒಂದಂಶ ಗೃಹಸ್ವರಾಜ್ಯದ ಆಂತರಂಗಕ್ಕೆ ಸಂಬಂಧಿಸಿದ್ದು. ಇನ್ನೊಂದಂಶ ಸ್ವದೇಶೀಯ ಸ್ವರಾಜ್ಯದ ವಿಶಾಲ ರಂಗಕ್ಕೆ ಸಂಬಂಧಿಸಿದ್ದು. ಮೊದಲನೆಯದರ ಬಗ್ಗೆ ಹೊರಡುವ 'ನೀತಿ' ಯನ್ನು ಸಂಸಾರ ತಾವತ್ಕಯ ಗಳಲ್ಲಿ ಸಿಕ್ಕಿ ತೊಳಲುವವರ ಚಿತ್ತಕ್ಕೆ ಬಿಟ್ಟು ಸ್ವದೇಶೀಯ ಸ್ವರಾಜ್ಯ ಸಂಸ್ಥೆಗಳ ಏಳಿಗೆಗೆಂದು ಸಾಹಿತಿ ಕೈಲಾಸಂ ಅವರು ರಾಜಕೀಯ ಮುಂಪಾಳುಗಳ ಮುಂದಿಟ್ಟಿರುವ ಸಲಹೆ ಸೂಚನೆಗಳು ಪ್ರಕೃತ ನಮ್ಮ ಪರ್ಯಾಲೋಚನೆಗೆ ಬರುವದು ಉಚಿತ ನಮ್ಮ ನಾಡಿನ ಪೌರಸಭೆಗಳು ಭಾಗ್ಯವಂತರಿಗೆ 'ಸ್ವರ್ಗತುಲ್ಯವಾಗಿಯೂ ಬಡವರಿಗೆ ನರಕದ ರೋಗಿಯಾಗಿಯೂ' ಇರಬಾರದೆಂಬ ತತ್ವವನ್ನೊಪ್ಪಿಕೊಳ್ಳುವ ವರೆಲ್ಲಿ ಹೋಂ ರೂಲಿನಂಥ ಸಮಸ್ಯಾ ನಾಟಕಗಳ ಮತ್ತು ಚಲಚ್ಚಿತ್ರಗಳ ಸೃಷ್ಟಿಗೆ ಹೆಚ್ಚು ಹೆಚ್ಚು ಬೆಂಬಲ ಕೊಡುವರೆಂಬುದರಲ್ಲಿ ಸಂದೇಹವಿಲ್ಲ

ಪೌರಸಭಾ ಸದಸ್ಯರಾದವರು ಊರಿನ ಅತ್ಯಂತ ಹೊಲಸಾದ ಸ್ಥಳದಲ್ಲಿ ಮನೆ ಮಾಡಿಕೊಂಡು, ತಮ್ಮ ಸದಸ್ಯತ್ವದ ಅವಧಿ ಪೂರ್ತಿಯಾಗುವವರೆಗೆ, ಪೌರಸೌಕರ್ಯ ವಿಲ್ಲದ ಜನ ಎಷ್ಟು ಕಷ್ಟವಡುವರೆಂಬುದನ್ನು ಸ್ವಾನುಭವದಿಂದ ತಿಳಿದು ತಾವು ಊಳಿಗ ಮಾಡಬೇಕಾದ ಊರಿನ ನೆಮ್ಮದಿಯಾಗಲು ಹೇಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂಬುದೇ ಕೈಲಾಸಂ ಅವರ ನಾಟಕದಿಂದ ಹೊರಡುವ 'ನೀತಿ'. ಆದರೆ ಈ ನೀತಿ, ನಗೆಯ ಹೊದಿಕೆಯಲ್ಲಿ ಬೂದಿ ಮುಚ್ಚಿದ ಕೆಂಡವಾಗಿ ಕೂತಿರುವದರಿಂದ ಅದು ನಮ್ಮ ದೃಷ್ಟಿಯನ್ನು ಹೆಚ್ಚಾಗಿ ಸೆಳೆದಿಲ್ಲ. ಆದರೇನು, ನತ್ಯ ಕ್ಕೆ ಚ್ಯುತಿಯಿಲ್ಲ

ಹುಬ್ಬಳ್ಳಿಯ ಮಟ್ಟಿಗೆ ಕೈಲಾಸಂ ಅವರ 'ಹೋಂ ರೂಲ್' ನಾಟಕದ ಉಪಾಯ, ಊರನ್ನು ಉದ್ಧಾರ ಮಾಡ ಹೊರಟು ಅತ್ಯೋದ್ಧಾರ ಮಾಡಿಕೊಂಡ ಹಿಂದಿನ ಪೌರಸಭಾ ಸದಸ್ಯರನ್ನು ಬಾಧಿಸಲಿಲ್ಲವೆಂದು ವಿಷಾದದಿಂದ ಹೇಳಲೇ ಕಾಗಿದೆ.

ಈಗ ಹುಬ್ಬಳ್ಳಿಯಲ್ಲಿ ಹೊಸ ಆಡಳಿತ ವ್ಯವಸ್ಥೆ ಬಂದು, ಊರಿನ ಸುಧಾರಣೆ ಕ್ರಮವಾಗಿ ಮುಂದುವರಿಯುತ್ತಿರುವದು ಸಂತೋಷದ ಸಂಗತಿ. ಆದರೆ, ಹುಬ್ಬಳ್ಳಿಯಂಥ ದೊಡ್ಡ ಪಟ್ಟಣ-ಹುಬಳ್ಳಿ ಎಂಬ ಸೊಗಸಾದ ಹಸರನ್ನು ಹೊತ್ತು, ಪೌರಭವನ್ನು ಎಚ್ಚೆತ್ತೆಗಳಿಗೂ ಬೀರಬೇಕಾದ ನಗರ-ಹೊಲಸಿನ ಕೂಪವಾಗಿ, ಮನುಷ್ಯರಾದವರು ಜೀವಿಸಲು ಅನರ್ಹವಾಗುವ ಮಟ್ಟಿಗೆ ಆದರ ಪೌರಾಡಳಿತ ಹದಗೆಟ್ಟು, ಸರಕಾರದವರು ಹುಬ್ಬಳ್ಳಿಗರಿಗೆ ಇದ್ದ ನಾಗರಿಕ ಹಕ್ಕನ್ನು ತಾತ್ಕಾಲಿಕವಾಗಿ ತಡೆಹಿಡಿದು ಸ್ವದೇಶೀಯ ಸ್ವರಾಜ್ಯವನ್ನು ಇಲ್ಲವಾಗಿಸಬೇಕಾಗಿ ಬಂದದ್ದು ನಿಜವಾಗಿ ಒಂದು ರುದ್ರಘಟನೆ (Tragedy). 'ಸುಖಸ್ಯಾನಂತರಂ ದುಃಖಂ| ದುಃಖಸ್ಯಾನಂತರಂ ಸುಖಂ' ಎಂಬ ಹಳೆಯ ಹೇಳಿಕೆಯ ಮರ್ಮದಿಂದ ಹಣ್ಣಾದ ನಮ್ಮ ಜನದೈಹೃದಯ. ಸದ್ಯದ ಅನಿವಾರ್ಯ ಪ್ರಸಂಗವನ್ನು ತಾತ್ಕಾಲಿಯಿಂದ ನುಂಗಿಕೊಂಡಿದ್ದು, ಬೇಗ ಹುಬ್ಬಳ್ಳಿ 'ಪೌರಸಭೆ' ಯಾಗಿ ಮುಂದೆ 'ಕಾರ್ಪೊರೇಷನ್' ಪ್ರತಿಷ್ಠೆ ಗಳಿಸಲಾರದೆ? ಎಂಬ ವಿಶ್ವಾಸದಿಂದ ಜನ ಧೈರ್ಯ ಗೊಂಡು ತಮ್ಮ ಕನಸನ್ನು ನನಸಾಗಿ ಮಾಡಿಕೊಳ್ಳಲು ತಕ್ಕಂತೆ ಜಾಗೃತರಾಗಿ ಕರ್ತವ್ಯನಿಷ್ಠರಾಗಲೆಂಬುದೇ ಎಲ್ಲರ ಹಾರೈಕೆಯಾಗಿದೆ.

ಈಗ ಅಡ್ಮಿನಿಸ್ಟ್ರೇಟರ್ ಶ್ರೀಮಾನ್ ಪಿ. ಎಲ್ ಬೆಣ್ಣೆಯವರ ಮಡಿಲಲ್ಲಿ ಹುಬ್ಬಳ್ಳಿಯ ಮುಂದಿನ ನೆಮ್ಮದಿ ಬಿದ್ದಿದೆ ಅವರು ತಮ್ಮ ಸುಧಾರಣೆಯ ಚಕ್ರವನ್ನು ಇನ್ನೆಷ್ಟು ವೇಗವಾಗಿ ನಡಿಸಿ ಅದಷ್ಟು ಬೇಗ ಸರಕಾರದವರ ಬಾಯಿಂದ ಈ ಮಾತುಗಳನ್ನು ಆಡಿಸಿಯಾರೆಂದು ಹುಬ್ಬಳ್ಳಿಯ ಪ್ರತಿ ನಾಗರಿಕನೂ ಆಶಿಸುತ್ತಿರುವಲ್ಲಿ ಆಶ್ಚರ್ಯವಿಲ್ಲ.

"ಹುಬ್ಬಳ್ಳಿಯ ನಾಗರಿಕರೆ, ನಾವು ಇದುವರೆಗೆ ನಿಮ್ಮ ಊರನ್ನು ನಮ್ಮ ಮಡಿಲಲ್ಲಿ ಹಾಕಿಕೊಂಡಿದ್ದು, ನಿಮ್ಮ ಸಲುವಾಗಿಯೇ ಕೆಲವು ವರ್ಷ ಸುಧಾರಣೆಗಳನ್ನು ನಡೆಸಿದ್ದೇವೆ ಈಗ ಸಿದ್ಧಿಸಿರುವ ಸುಧಾರಣೆಗಳು ನಿಮ್ಮ ಮುಂದಿನ ಶ್ರೇಯಸ್ಸಿಗೆ ಬಂಡವಾಳವಾಗಲಿ. ಇನ್ನು ನಿಮ್ಮ ಹಕ್ಕುಗಳನ್ನು ಉಪಯೋಗಿಸುತ್ತ ಹೋಗಿರಿ. ನಿಮ್ಮ ಊರಿನ ಅಡಳಿತಕ್ಕೆ ಇನ್ನು ನೀವೇ ಹೊಣೆ. ಹಿಂದಿನ ಚರಿತ್ರೆ ಮರಳಿ ನಡೆಯದಂತೆ ಎಚ್ಚರಿಕೆ ವಹಿಸಿ ಚೆನ್ನೆದಂಥ ಸ್ಮತಿನಿಧಿಗಳನ್ನು ಮುಂಚೂಣಿಗೆ ಬಿಟ್ಟು, ಅವರ ಕೈಯಲ್ಲಿ ಸ್ಥಳೀಯ ಸ್ವರಾಜ್ಯಸೂತ್ರ ಇಡಿಯ ಊರಿನ ಮಂಗಳಸೂತ್ರವಾಗುವಂತೆ ನೋಡಿಕೊಳ್ಳಿರಿ."

ಸರಕಾರದವರು ಬೇಗ ಇಂಥ ಧೈರ್ಯದ ಮಾತುಗಳನ್ನಾಡಿ ಹುಬ್ಬಳ್ಳಿಯ ಇತಿಹಾಸದಲ್ಲಿ ಬರಬಾರದಿದ್ದ ಕಳಂಕದ ಆಧ್ಯಾಯವನ್ನು ಮುಗಿಸಿ ಮುಂದಿನ ನೆಮ್ಮದಿಯ ದಿನಗಳ ನಾಂದಿಯನ್ನು ಹಾಡಲಿ!

ಆದರೆ ಏತನ್ಮಧ್ಯೆ ಅಡ್ಮಿನಿಸ್ಟ್ರೇಟರರವರು ತಮ್ಮ ಇದುವರೆಗಿನ ತಾತ್ಕೆಯನ್ನು

ಸವೇ ಪುಟ ನೋಡಿರಿ

ಹುಬ್ಬಳ್ಳಿಯ ಮುಂದಿನ ನೆಮ್ಮದಿಯ ಚಿಂತನೆ

೪ ನೇ ಪುಟದಿಂದ ಮುಂದರಿದುದು

ಇನ್ನೂ ಹೆಚ್ಚಿಸಿಕೊಂಡು ಊರಿನವರಿಗೆ ಸಹಕಾರವನ್ನು ಧಾರಾಳವಾಗಿ ಕೊಡಲು ಅನುಕೂಲದ ದಿನಗಳು ಬೇಗ ಸನ್ನಿಹಿತವಾಗುವಂತೆ ಮಾಡುವ ಭಾಗ್ಯ ಆವರದಾಗಿದೆ.

ಈ ಸಂದರ್ಭದಲ್ಲಿ 'ಹುಬ್ಬಳ್ಳಿ ಗೆಜೆಟ್' ಪತ್ರಿಕೆಯು ಊರಿನ ಪ್ರಗತಿಗೆ ಮಾರಕ ಯಂತ್ರವಾಗಿ, ಅತ್ತ ಅಡ್ಮಿನಿಸ್ಟ್ರೇಟರರಿಗೆ ಜನರ ಬೇಡಿಕೆಗಳನ್ನು ತಿಳಿಸುತ್ತ, ಇತ್ತ ಜನರಿಗೆ ಅಡ್ಮಿನಿಸ್ಟ್ರೇಟರರಿಂದ ನಡೆದ ಕೆಲಸಗಳೆಷ್ಟೆಂಬುದನ್ನು ವರದಿ ಮಾಡುತ್ತ ತಬ್ಬರ ನಡುವಣ 'ವ್ಯಾಖ್ಯಾನಕಾರ' ರಂತಿರುವುದನ್ನು ನಾವು ಸಂತೋಷದಿಂದ ನೆನೆಯಬೇಕಾಗಿದೆ "ಹುಬ್ಬಳ್ಳಿ ಗೆಜೆಟ್" ಬರುವ ದಿನಗಳಲ್ಲಿ ವಹಿಸುವ ದಾತ್ರದಿಂದ ಊರಿನ ಮಂಗಳ ಬೇಗ ಸಿದ್ಧಿಸಲಿ, ಮತ್ತು ಈ ಪತ್ರಿಕೆಯಿಂದ ಜನಗಳ ಮತ್ತು ಅಡ್ಮಿನಿಸ್ಟ್ರೇಟರರ ಮಧ್ಯೆ ಇರಬೇಕಾದ ಸಂಬಂಧ

"ಸಹ ವೀರ್ಯಂ ಕರವಾವಹೈ...
ಮಾವಿದ್ವಿಷಾವಹೈ ....."

ಎಂಬ ಹಿರಿಯ ಹೊನ್ನುಡಿಯಲ್ಲಿ ಕಾಣುವ ಸಂಬಂಧದಂತಾಗಲಿ.

ಈ ಲೇಖನವನ್ನು ಮುಗಿಸುವುದಕ್ಕೆ ಮುಂಚೆ ಎರಡು ಅಂಶಗಳನ್ನು ಎದುರೆದುರು (Juxta Position) ಇಟ್ಟು ಹುಬ್ಬಳ್ಳಿಯ ಮುಂದಿನ ನೆಮ್ಮದಿಗಾಗಿ ಮತ್ತೊಮ್ಮೆ ಪ್ರಾರ್ಥಿಸಿ ನನ್ನ ಲೇಖನಿಯನ್ನು ಕೆಸೆಗೆ ಬಿಡುತೇನೆ

ಮೊದಲನೆಯದಾಗಿ, ಹುಬ್ಬಳ್ಳಿಯ ನಾಗರಿಕರನ್ನು ಈ ಕೆಳಗೆ ಕಂಡ ಐದು ಪ್ರಶ್ನೆಗಳು ಬಾಧಿಸಬೇಕಾಗಿದೆ

೧ ನಾವು ಕೊಡುವ ಕಂದಾಯ ಅಥವಾ ತೆರಿಗೆಗೆ ನಮಗೆ ಬರುವ ಪ್ರತಿಫಲವೇನು ?

೨ ನಾವು ಕೊಡುವ ಹಣದ ಸದ್ವಿನಿಯೋಗವಾಗುತ್ತಿದೆಯೆ ? ಯಾವ ಕಾರಣಗಳಿಗಾಗಿ ಎಷ್ಟು ವೆಚ್ಚ ?

೩ ಈಗ ಪೌರಸಭೆಯ ಆಡಳಿತದಲ್ಲಿ ಅಗತ್ತಿರುವ ಜಮಾ ಖರ್ಚ್ ಮೊದಲಿನಂತೆ ಎರಸೇರಿಲ್ಲವೆ ನಡೆಯುತ್ತಿದೆಯೆ ?

೪ ನಮ್ಮ ಕಲ್ಯಾಣವನ್ನು ಕುರಿತ ಪ್ರಶ್ನೆಗಳಾಗಿ ನಾವು ಎಲ್ಲಿಗೆ ಯಾರ ಬಳಿ ಹೋಗಬೇಕು ?

೫ ಇಂಥ ಪ್ರಶ್ನೆಗಳಿಗೆ ಪೌರಸಭೆಯವರು ಸರಿಯಾದ ಉತ್ತರ ಕೊಡಬೇಕಾದುದು ಅವರ ಧರ್ಮವಲ್ಲವೆ ? ಅವರು ಹಿಡಿದಿರುವ ತಕ್ಕಡಿ ನ್ಯಾಯಬದ್ಧವಾಗಿ ಸ್ಥಿರ ಕಾರಣದಿಂದಲೋ ಮತ್ತಾವ ಕಾರಣದಿಂದಲೋ ನಮ್ಮ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಸಂಪಾದಿಸುವ ಯೋಗ್ಯತೆ (ಅಥವಾ ಹಕ್ಕು) ನನಗೂ ನನ್ನ ನೆರೆಹೊರೆಯವರಿಗೂ ನಿರಾಕರಿಸಲ್ಪಟ್ಟರೆ ಇನ್ನು ಸ್ವರಾಜ್ಯ ಎಂಬುದು ಆಕಾಶಕುಸುಮ ಎಂಬ ಪದಕ್ಕೆರುವ ಒಂದು ಅರ್ಥವಾಗದೆ ?

ಎರಡನೆಯದಾಗಿ ಅಡ್ಮಿನಿಸ್ಟ್ರೇಟರರ ಕಣ್ಮುಂದೆ ಈ ಕೆಳಗೆ ಕಂಡ ಪ್ರತಿಜ್ಞೆಗಳಿದ್ದರ ಲೇಸು

ನಾನು ಪೌರಸಭಾಧಿಕಾರಿಯಾದರೆ—

ತಕ್ಷಣ ನಾನು ಮಾಡಿಯಬೇಕಾದ ಊರಿನ ಸಂಯಾದ ನಕ್ಷೆಯನ್ನು ಬರೆಯಿಸಿ, ಊರಿನ ಪ್ರತಿಯೊಂದು ಬೀದಿ ಮೂಲೆಗಳನ್ನು ಚೆನ್ನಾಗಿ ತಿಳಿದುಕೊಳ್ಳಲು ಯತ್ನಿಸುವೆನು

೨ ಜನಗಳ ಆರೋಗ್ಯ ಜೀವನಕ್ಕೆ ಇರುವ ವಿಘ್ನಗಳ ಪಟ್ಟಿಯೊಂದನ್ನು ಕಯಾರಿಸಿ ಅವುಗಳ ನಿವಾರಣೆಗಾಗಿ ಹಗಲಿರುಳೂ ಚಿಂತಿಸುವೆನು

೩ ತೆರಿಗೆದಾರರಿಗೆ ತುಂಬಾ ಬೆಳಕು ಪರಿಶುದ್ಧವಾದ ನೀರು, ಊರಿನ ಹೊಲಸು ನೀರು, ಹರಿಯಲು ಧಾರಾಳವಾದಚರಂಡಿ(ಗಟಾರ), ಓಡಾಡಲು ಸ್ವಚ್ಛವಾದ ರಸ್ತೆಗಳು ಇವುಗಳ ವ್ಯವಸ್ಥೆ ಮಾಡುವೆನು

೪ ಜನಗಳು ಕೊಡುವ ಹಣದ ಸದ್ವಿನಿಯೋಗವೇ, ನನ್ನ ಆಡಳಿತದ ಸೂತ್ರವಾಗುವಂತೆ ಪ್ರಯತ್ನಿಸುವೆನು

೫ ಊರಿನ ಒಟ್ಟು ಸೌಂದರ್ಯವನ್ನು ಹೆಚ್ಚಿಸುವ ಸರಳವಾದ, ಗಾಳಿ ಬೆಳಕುಗಳ ಲೋಪಕ್ಕೆ ಎಡೆಕೊಡದ ವಸ್ತು ಶಿಲ್ಪವನ್ನೇ 'ಗೃಹಯೋಜನೆ'ಯಲ್ಲಿ ಮೊದಲು ಮಾನ್ಯ ಮಾಡುವೆನು

೬ ಪೌರಸಭೆಯ ಮಡಿಲಲ್ಲಿ ಬಿದ್ದಿರುವ ಪೌರರ ಬಹುಮುಖವಾದ ಶ್ರೇಯಸ್ಸನ್ನು ನೈರ್ಮಲ್ಯ ಪ್ರಸಾರ, ಆರೋಗ್ಯವರ್ಧನೆ, ತಿಳಿವು ನಲಿವುಗಳ ಸ್ಥಾಪನೆ ಸಾಧಿಸಲು ನನ್ನ ಶಕ್ತಿಯಿದ್ದ ಮಟ್ಟಿಗೂ ಹೆಣಗುವೆನು ಜನರ ತಾಳ್ಮೆಯು ನನ್ನ ಸೇವಾರಥದ ತೇಜಿಯಾಗಿ ಅವರ ಏವೇಳೆಯುತವಾದ ಸಹಕಾರವು ಸಾರಥ್ಯವನ್ನು ಮಾಡುವಂತೆ ನಾನು ಅವರನ್ನು ಒಲಿಸಿಕೊಳ್ಳಲು ಪ್ರಯತ್ನಿಸುವೆನು"

ರಾಣೇಬೆನ್ನೂರ ಮ್ಯುನಸಿಪಾಲಿಟಿ

ತಾ ೩೧-೧-೪೧ ರಂದು ನಡೆದ ಈ ಮ್ಯುನಸಿಪಾಲಿಟಿಯ ಅಧ್ಯಕ್ಷ ಪದದ ಆಯ್ಕೆ ನಡೆದು, ಕಳೆದ ೧೨ ವರ್ಷಗಳಿಂದ ಸತತವಾಗಿ ಅಧ್ಯಕ್ಷರಾಗಿದ್ದ ಶ್ರೀ ಎಸ್ ಕೆ ಬಣಗಾರ ಇವರೇ ಪುನಃ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದರು ಉಪಾಧ್ಯಕ್ಷಸ್ಥಳಕ್ಕೆ ಶ್ರೀ ಕೆ ಎಮ್ ಹರಪನಹಳ್ಳಿ ವಕೀಲರು ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ

ಅಪ್ಪಟವಾದ ಕೊಬ್ಬರಿ ಎಣ್ಣೆಯನ್ನೇ ಕೊಳ್ಳಿರಿ

ಕಶ್ಮಲಗಳು ಹಾಗು ನೊಣ ಮುಂತಾದ ಕ್ರಿಮಿಗಳು ಸೇರಲು ಸಾಧ್ಯವಿಲ್ಲದ, ಮೊಹರು ಮಾಡಿದ ಡಬ್ಬಿಗಳಲ್ಲಿ ದೊರಕುವ ತಾತಾರವರ ಕೊಬ್ಬರಿ ಎಣ್ಣೆಯನ್ನೇ ಕೊಳ್ಳಿರಿ. ದೊಡ್ಡ ಡಬ್ಬಿಯನ್ನು ಕೊಂಡು ಹಣವನ್ನು ಉಳಿಸಿರಿ.

ತಾತಾರವರ ಕೊಬ್ಬರಿ ಎಣ್ಣೆ

A TATA PRODUCT

ಹಸ್ತಸ್ಪರ್ಶವಿಲ್ಲದೆ ಬಹಳ ನಿರ್ಮಲವಾದದ್ದು

ಶುದ್ಧ ಸ್ವದೇಶಿ—ತಾತಾರವರ ತಯಾರಿಕ

½, 1½, 3 ಮತ್ತು 36 ಪೌಂಡುಗಳ ಡಬ್ಬಿಗಳಲ್ಲಿ ದೊರಕುವುದು

ಟಾಮ್‌ಕೋ ಸೇಲ್ಸ ಡಿಪಾರ್ಟಮೆಂಟ್, ಸೋಪ್ಪಬಾಕ್ಸ ಶಿಖರ, ಮುಂಬಯಿ

NOTE

Along with this Issue is given a suppliment on "THE HUBLI COTTON MARKET" consisting of 16 pages from 1 to 16 besides the Cover. —Editor.

ಹುಬ್ಬಳಿ ಗಜೆಟ್ಟ
The Hubli Gazette
Saturday, 15—2—41

Administrator's Report

Dr. N. S. Hardiker

The short notes prepared by the Administrator of the Hubli Municipality on the progress of improvements in the City during the past 6 months ending with December 1940 and on the schemes under way make interesting reading. Interesting details of various proposed schemes also have been provided. We have to wait and see how soon and how far the progress will be made along the lines chalked out.

Nowadays all civic administrations aim at buildings to standard designs to augment the City's beauty. No citizen can therefore claim any immunity on the plea that he has a right to build as he pleases, on his own. None will contest one s rights to property or his liberty to build to his tastes. But it is his duty also to contribute to the society's well being. A comprehensive and at the same time practical standard for buildings in the city should be evolved by our Municipality to insist on the property owners to conform to them. In doing so, the economic resources and capacity should be carefully taken into accont so that the bye-laws are capable of admini stration without hardship.

Regular line of streets, provision of conservancy lines, slum clearance etc., all come under the category of non-recurring items in the financial parlance. These items have to be provided for, year after year and carried out to set plans.

The beautification of the city will also not be achieved by construction of houses on the present uncongested area in the cotton market The 'open' is definitely pleasing to the eyes of a visitor to the City That this 'open' is not kept clean and tidy is another matter The rows of houses built in this open will only add to the congestion of the city in a non congested area of our city

The tendency now amongst the people who can afford is always to go in for dwellings far away from the din and bustle of city life Costly sites will not be purchased for house building The contemplated beautification of the city will therefore not be realised Many plots will remain unsold and out of some that may be sold a few may remain unbuilt upon It is therefore necessary in the interest of all concerned that the sponsors of the proposal should carry a while before disturbin the conditions in the area s that no hasty and irremediabl action is taken and one of th thriving businesses of the cit affected beyond repair

ಹುಬ್ಬಳ್ಳಿ ಕಾಟನ್ ಮಾರ್ಕೆಟ

ಸ್ಥಳಾಂತರದ ಪರಿಣಾಮಗಳು

ಜಿನ್, ಪ್ರೆಸ್ಸುಗಳ ಒಡೆಯರು ಮತ್ತು ದಲಾಲರ ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಸತ್ತು ಜನ ಶಹರ್ಸಿಯ. ಶ್ರೀ ರಾಂದ ರಾ ಬಿ ಎಸ್ ಡಿ ಮಾನವಿ, ಎಸ್. ವ್ಹಿ. ತಿರೂರ, ವ್ಹಿ ಜಿ. ನಿಸನೆಟ್, ಆರ್ ಕೆ ಶೀವಡೆ, ಡಿ. ಎಮ್ಸ್. ಗಬ್ಬಾ, ಆರ್. ಎಸ್. ಗೋಳೀಕೇರಿ ಮತ್ತು ಜಿ. ಬಿ. ಪಟೀಲ ಈ ಏಳು ಗೃಹಸ್ಥರು ತಾ. ೩೦—೧—೧೯೪೧ನೇ ದಿನಸ ಧಾರವಾಡ ಕಲೆಕ್ಟರರ ಮುಂದೆ ಪಟ್ಟ ಅಭಿಪ್ರಾಯದ ಸಾರಾಂಶವು ಈ ಕೆಳಗೆ ಕೊಡಲ್ಪಟ್ಟಿದೆ. ಈ ಕಾಲಕ್ಕೆ ಮ್ಯುನಸಿಪಾಲಿಟಿಯ ಅಧಿಕಾರಿಗಳೂ ಇದ್ದರು —ಸಂಪಾದಕ

ಹುಬ್ಬಳ್ಳಿಯ ಕಾಟನ ಮಾರ್ಕೆಟ್ಟು ಸದ್ಯದ ಸ್ಥಳದಲ್ಲಿ ಇರಲೆ ನೆಯ ಇಸ್ವಿಯ ಸುಮಾರಕ್ಕೆ ಅಂದರೆ ಇಂ ವರ್ಷಗಳ ಮೇಲ್ಪಟ್ಟ ಅವಧಿಯ ಹಿಂದೆ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಹುಬ್ಬಳ್ಳಿ ಮ್ಯುನಸಿಪಾಲಿಟಿಯು, ಗರ್ಜ ರಲ್ಲಿ ಮತ್ತು ಗರ್ಜಿಗಿ ಒಂ ರಲ್ಲಿ ಹೀಗೆ ಎರಡು ಸಲ, ಇದನ್ನು ಅಲ್ಲಿಂದ ಕಿತ್ತಲು ಇಚ್ಛಿಸಿತು ಸಾಧಕಬಾಧಕ ವಿಚಾರಗಳನ್ನು ಗಮನಿಸಿ, ಹುಬ್ಬಳ್ಳಿ ಪಟ್ಟಣದ ಅಭಿವೃದ್ಧಿ ಮತ್ತು ಅವನತಿಗೆ ಬಹುಮಟ್ಟಿಗೆ ಕಾರಣವಾದ ಹತ್ತಿ ವ್ಯಾಪಾರಕ್ಕೆ ಈ ಮಾರ್ಕೆಟ್ಟನ್ನು ಸ್ಥಳಾಂತರಿಸುವುದು ಸಹಾಯಕಾರಿಯಾಗುವುದಿಲ್ಲವೆಂದು ನಿರ್ಧರಿಸಿ ಎರಡೂ ಪ್ರಸಂಗಗಳಲ್ಲಿ ಈ ಯೋಜನೆಯನ್ನು ಬಿಟ್ಟುಬಿಟ್ಟರು ಮಾರ್ಕೆಟ್ಟಿನ ಇಂದಿನ ಸ್ಥಳವನ್ನು ಮಾರಿದರ ಅದರಿಂದ ಮ್ಯುನಸಿಪಾಲಿಟಿಗೆ ಬಹಳ ಹಣವು ಬರುವುದೆಂದೂ ಆ ಹಣದಿಂದ ರಾಬರ್ಟಸನ್ನ ಮಾರ್ಕೆಟ್ಟನ್ನು ಕಟ್ಟಿಸುವಂತಹ ಕಾರ್ಯಕ್ಕೆ ಪ್ರಯೋಜನವಾಗುವುದೆಂದೂ ಕೆಲವು ಜನರು ಮ್ಯುನಸಿಪಾಲಿಟಿಯ ಸದ್ಯದ ಆಡಳಿತಕ್ಕೆ ೧೯೩೯ ನೇ ಇಸ್ವಿಯ ನವೆಂಬರ ತಿಂಗಳಲ್ಲಿ ಸೂಚಿಸಿದ್ದರಿಂದ, ಮ್ಯುನಸಿಪಾಲಿಟಿಯವರು ಪುನಃ ಮೂರನೆಯ ಸಲ ಈ ನಿರ್ಧಾರವನ್ನು ಎತ್ತಿದ್ದಾರೆ.

೧] ಇದು ಲಾಭಕರವೇ ?

ಈಗ ಸೂಚಿಸಲ್ಪಟ್ಟ ಸ್ಥಳವು ಊರ ಹೊರಗೆ ಇದ್ದು ಅದು ತಗ್ಗಾದ, ತಂಪುಳ್ಳ, ಜಾಲುಳುಳ್ಳ ಮತ್ತು ಜಳಜ್ವರರೋಗಜನಕ ವಾದಂಥದಿದೆ. ಕಾಟನ್ ಮಾರ್ಕೆಟ್ಟಿಗೆ ತಕ್ಕಂತೆ ಅದನು ಮಾರ್ಪಡಿಸುವುದಕ್ಕೆ, ಮ್ಯುನಸಿಪಾಲಿಟಿಯವರು ಹೇಳುವಂತೆ ಎಲ್ಲ ಆಧುನಿಕ ಸೌಕರ್ಯಗಳನ್ನು ಅದಕ್ಕೆ ಜೋಡಿಸುವುದಕ್ಕೆ ಬಹಳ ಹಣವು ವೆಚ್ಚ ಮಾಡಲ್ಪಡಬೇಕಾಗುವುದು ಈ ಪ್ರದೇಶವು ತಗ್ಗಾಗಿರುವುದರಿಂದ ಅದನ್ನು ತುಂಬಬೇಕಾಗುವುದು. ನೀರನ್ನು ಹೊರಗೆ ಹಾಕುವುದಕ್ಕಾಗಿ ಹರಿಗಳನ್ನು ಕಟ್ಟಬೇಕಾಗುವುದು, ಬೀದಿಗಳನ್ನು ನಿರ್ಮಿಸಬೇಕಾಗುವುದು ಮತ್ತು ಇತರ ಅನೇಕ ಸುಧಾರಣೆಗಳನ್ನು ಮಾಡಬೇಕಾಗುವುದು. ಅಂದರೆ, ತಿರಕಾರಾಮ ಕೆರೆಯ ಹತ್ತಿರಿನ ಈ ತಗ್ಗು ಪ್ರದೇಶವು ತಕ್ಕಸ್ಥಿತಿಗೆ ಬರುವುದು. ಈಗಿನ ಮಾರ್ಕೆಟ್ಟಿನ ಸ್ಥಳವನ್ನು ಮಾರುವುದರಿಂದ ಬರಬಹುದೆಂದು ನಿರೀಕ್ಷಿಸಲ್ಪಟ್ಟ ಹಣವು, ಹೊಸ ಸ್ಥಳವನ್ನು ಸಿದ್ಧಗೊಳಿಸುವುದಕ್ಕಾಗಿ ವೆಚ್ಚ ಮಾಡಲ್ಪಡಬೇಕಾಗುವುದು. ಆದರೆ ಆ ಸ್ಥಳವನ್ನು ಪುನಃ ನಿರ್ಮಿಸುವುದಕ್ಕೆ ಸಂಬಂಧಪಟ್ಟ ಸ್ಪಷ್ಟವಾದ ಯೋಜನೆಗಳು ಇನ್ನೂ ಸಿದ್ಧವಾಗಿಲ್ಲ

ಸದ್ಯದ ಮಾರ್ಕೆಟ್ಟಿನ ಬಹು ಭಾಗವು, ವಿಶೇಷತಃ ಗುಳಕಪ್ಪನ ಕೆರೆಯ ಹತ್ತಿರಿನ ಮತ್ತು ಸುತ್ತುಮುತ್ತಲಿನ ಭಾಗವು, ಶಾಶ್ವತವಾದ ಕಟ್ಟಡಗಳನ್ನು ಕಟ್ಟುವುದಕ್ಕೆ ಅಯೋಗ್ಯವಾಗಿರುವುದೆಂದು ಮ್ಯುನಸಿಪಾಲಿಟಿಯೇ ಅಭಿಪ್ರಾಯವಿರುವುದರಿಂದ ಸದ್ಯದ ಮಾರ್ಕೆಟ್ಟಿನ ಸ್ಥಳವನ್ನು ಮಾರುವುದರಿಂದ ಎಷ್ಟು ಹಣವು ಬರುವುದೆಂಬುದು ಇನ್ನೂ ಗೊತ್ತಾಗಿಲ್ಲ. ಇಷ್ಟೇ ಅಲ್ಲದೆ, ಅದನ್ನು ಮಾರುವುದಕ್ಕೆ ಬಹಳ ತೊಳಕು ಹಿಡಿಯುವುದು, ಅದಾದ ಮೇಲೂ ಕೂಡ ಅದರಿಂದ, ಮ್ಯುನಸಿಪಾಲಿಟಿಯು ನಿರೀಕ್ಷಿಸಿದಷ್ಟು ಹಣವು ಬರುವುದೇ ಎಂಬ ಬಗ್ಗೆ ಸಂಶಯವಿದೆ ಇದರ ಪ್ರತಿ ಗುಂಟೆಗೆ ೪೦೦—೫೦೦ ರೂ. ಗಳು ಬರುವವೆಂದು ಮ್ಯುನಸಿಪಾಲಿಟಿಯು ಇಟ್ಟುಕೊಂಡಿದ್ದರೂ, ನಿಜವಾಗಿ ಬರುವುದು ಇದಕ್ಕೂ ಬಹಳ ಕಡಿಮೆಯಾಗುವುದು. ತೀರಾನ್ನೆ ಮ್ಯುನಸಿಪಾಲಿಟಿಯವರೇ, ಮೆಸರ್ಸ್ ಅರ್ಜನ ಖಿಮಜಿ ಮತ್ತು ಕಂಪನಿ ಇವರಿಂದ ಗುಂಟೆಗೆ ೫೫೦ ರೂ ಯಂತೆ ಕೆಲವು ಪ್ರದೇಶವನ್ನು ಕೊಂಡಿದ್ದಾರೆ. ಬಹು ಮಹತ್ವದ ಭಾಗವಾದ ಸ್ಟೇಶನ್ ರೋಡಿನ ಮೇಲೆ ಈ ಬೆಲೆಯು ಬಂದಬಳಿಕ, ಸದ್ಯದ ಕಾಟನ್ ಮಾರ್ಕೆಟ್ಟಿನಲ್ಲಿಯ ಸ್ಥಳವು ಇದಕ್ಕೂ ಬಹಳ ಕಡಿಮೆ ಬೆಲೆಗೆ ಮಾರಲ್ಪಡುವುದೆಂಬುದು ಸ್ಪಷ್ಟವಾದದ್ದು.

೨] ವ್ಯಾಪಾರಸ್ಥರ ಸಂಕಟ

ಮುಗ್ಗಟ್ಟಿನ ಈ ದಿನಸಗಳಲ್ಲಿ, ಹತ್ತಿಯ ಬೆಲೆಯು ಬಹಳವಾಗಿ ಬಿದ್ದು ಹೋದದ್ದರಿಂದ ಹತ್ತಿಯ ವ್ಯಾಪಾರವು ಬಹಳ ಹಾನಿಕರವಾಗಿದೆಯೆಂಬದನ್ನು ಎಲ್ಲರೂ ಒಪ್ಪುವರು ಈ ವ್ಯಾಪಾರದ ಮೇಲೆ ಅವಲಂಬಿಸಿದ್ದ ಮತ್ತು ಅದರಲ್ಲಿ ಸಂಬಂಧವುಳ್ಳ ದಲಾಲರು, ಮ್ಯುನಸಿಪಾಲಿಟಿಯಿಂದ ಬಾಡಿಗೆಗೆ ಹಿಡಿದ ಮತ್ತು ಸದ್ಯದ ಕಾಟನ ಮಾರ್ಕೆಟ ಪ್ರದೇಶದಲ್ಲಿರುವ ಸ್ಥಳಗಳಿಗೆ ಎರವಾದರೆ, ಹೊಸ ಸ್ಥಳದಲ್ಲಿ ಅವರು ಭೂಮಿಯ ತುಂಡುಗಳನ್ನು ಕೊಳ್ಳಬೇಕಾಗುವುದು ಮತ್ತು ವ್ಯಾಪಾರವನ್ನು ಸಾಗಿಸುವುದಕ್ಕಾಗಿ ಈಗಿದ್ದಂಥವುಗಳನ್ನು ಕೆಡವಿ ಹೊಸ ಕಟ್ಟಡ, ಗುದಾಮು, ಜಪ್ಪರಿಗೇ ಮೊದಲಾದವುಗಳನ್ನು ಕಟ್ಟಿಸಬೇಕಾಗುವುದು ಲಕ್ಷಗಟ್ಟಲೆ ದುಡ್ಡು ಹಿಡಿಯುವ ಈ ಕಾರ್ಯವನ್ನು ಕೈಕೊಳ್ಳುವುದು ಅವರಿಗೆ ಸಾಧ್ಯವೇ ಇಲ್ಲ. ಸದ್ಯದ ಕಟ್ಟಡಗಳ ಮತ್ತು ಗುದಾಮುಗಳ ಸಾಮಗ್ರಿಗಳು, ಅವುಗಳ ಒಡೆಯರಿಗೆ ಹೊಸ ಸ್ಥಳಕ್ಕಾಗಿ ಕೂಡ ಉಪಯೋಗ ಬೀಳಬಹುದೆಂದೂ ಆದ್ದರಿಂದ ಹೊಸ ಕಟ್ಟಡಗಳಿಗೆ ಸಂಬಂಧವಾಗಿ ಕೆಲವೊಂದು ಸ್ವಲ್ಪ ಹೆಚ್ಚಿನ ನೆಚ್ಚವನ್ನು ಅವರು ಮಾಡಬೇಕಾಗುವುದೆಂದೂ, ಮಾರ್ಕೆಟ್ಟನ್ನು ಕಿತ್ತುವ ಯೋಜನೆಯನ್ನು ಪುರಸ್ಕರಿಸುವವರಲ್ಲಿ ಕೆಲವರು ಹೇಳುತ್ತಾರೆ ಕಟ್ಟಡಗಳನ್ನು ಕೆಡವಿದ ನಂತರ ಅವುಗಳಲ್ಲಿಯ ಕೆಲವು ತಗಡು ಗಳ ಹೊರತು ಮತ್ತಾವುದೂ ಕೈಗೆ ಹತ್ತುವುದಿಲ್ಲವಾದ್ದರಿಂದ ಅವರ ಅಂಬೋಣದರಲ್ಲಿ ಬಹಳ ತಥ್ಯವಿಲ್ಲ ಇದಲ್ಲದೆ ಈ ಕಾರ್ಯಕ್ಕೆ ಬಹಳ ಶ್ರಮ, ವೇಳೆ, ಲಕ್ಷ ಮತ್ತು ಮುಂದು ಹತ್ತುವವು. ಈಗಿನ ಕಾಲದಲ್ಲಿ ವಲಾಲರಿಗೆ ಅದನ್ನು ಸೂಚಿಸುವದು ಸಾಧ್ಯವಿಲ್ಲ.

೩] ಹೊಸ ಸ್ಥಳದ ಲಾಭಗಳು

ಮೇಲೆ ಹೇಳಿದಂತೆ, ತಿರಕಾರಾಮ ಕೆರೆಯ ಬೈಲು ತಗ್ಗಾದದ್ದೂ ಜವುಳುಳ್ಳದ್ದೂ ಇದ್ದು, ಜಳಜ್ವರದ ರೋಗದ ಬೀಡಾಗಿದೆ. ಸುಗ್ಗಿಯಲ್ಲಿ ಮತ್ತು ಇತರ ವೇಳೆಯಲ್ಲಿ, ಅಲ್ಲಿಯೇ ಇದ್ದು ಬಹಳ ದಿವಸಗಳನ್ನು ಕಳೆಯಬೇಕಾಗಿದ್ದ, ಊರೊಳಗಿಂದ ಮತ್ತು ಹೊರಗಿನಿಂದ ಇಲ್ಲಿಗೆ ಬರುವ ಜನರಿಗೆ ಸ್ವಾಭಾವಿಕವಾಗಿ ಉತ್ಸಾಹವುಂಟಾಗಲಾರದು. ಇದೇ ಕಾರಣಕ್ಕಾಗಿ, ಮಾರ್ಕೆಟ್ಟಿಗೆ ತಮ್ಮ ಹತ್ತಿಯನ್ನು ತರುವ ರೈತರು ಈ ಸ್ಥಳವನ್ನು ಮೇಲಿಂದ ಮೇಲೆ ಸಂದರ್ಶಿಸಲು ಮತ್ತು ಅಲ್ಲಿ ಬಹು ವೇಳೆ ನಿಲ್ಲಲು ಹಿಂಜರಿಯುವರು.

ಅಲ್ಲಿಗೆ ರೇಲ್ವೆ ದಾರಿಯ ಒಂದು ಶಾಖೆಯನ್ನು ದೊರಕಿಸಬೇಕೆಂದೂ ಒಂದು ವಿಚಾರವಿದೆ. ಆದರೆ ಅದು ಕೂಡ ಸಂಶಯಾಸ್ಪದವಾಗಿದೆ ಈ ವ್ಯವಸ್ಥೆಯಾಗದಿದ್ದರೆ, ಹೊಸ ಸ್ಥಳವು ಹುಬ್ಬಳ್ಳಿ ರೇಲ್ವೆ ಸ್ಟೇಶನ್ನಿನಿಂದ ಬಹಳ ದೂರವಾಗುವುದರಿಂದ ಬಹಳ ಕೊಂದರೆಯಾಗುವುದು. ಈ ಮತ್ತು ಇತರ ದೃಷ್ಟಿಗಳಿಂದ ಸದ್ಯಕ್ಕೆ ಇದ್ದ ಮಾರ್ಕೆಟ್ಟು ಮಧ್ಯೆ ವರ್ತಿಯಾಗಿದೆ. ಮತ್ತು ಹತ್ತಿಯ ವ್ಯವಹಾರಕ್ಕೆ ಅನುಕೂಲವಾಗಿದೆ. ಸ್ಟೇಶನ್ ಮತ್ತು ಕಾಟನ್ ಮಾರ್ಕೆಟ್ಟುಗಳ ನಡುವೆ ಹೆಚ್ಚು ದೂರವಿದ್ದಂತೆ ಹೆಚ್ಚಿನ ಓಡಾಟ ಮತ್ತು ಒಯ್ಯುವ ವೆಚ್ಚದ ಮೂಲಕ ಹತ್ತಿಯ ವ್ಯಾಪಾರದ ಮೇಲೆ ಹೆಚ್ಚಿನ ಭಾರವು ಬೀಳುವುದು ಇದು ಕೊನೆಯಲ್ಲಿ ರೈತನ ಮೇಲೆ ಪರಿಣಾಮ ಮಾಡುವುದು.

ಹೊಸ ಸ್ಥಳವು, ಊರಲ್ಲಿಯ ಬ್ಯಾಂಕುಗಳು ಮತ್ತು ಇತರ ವ್ಯವಹಾರದ ಸ್ಥಳಗಳಿಂದ ದೂರವಿರುವುದರಿಂದ ಅನನುಕೂಲವುಳ್ಳದ್ದಾಗಿದೆ. ಬ್ಯಾಂಕು ಮತ್ತು ವ್ಯವಹಾರದ ಸ್ಥಳಗಳನ್ನು ವ್ಯಾಪಾರಸ್ಥರು ಮತ್ತು ರೈತರು ಅವಶ್ಯವಾಗಿ ಸಂದರ್ಶಿಸಬೇಕಾಗುವುದು

೪] ಇತರ ತೊಂದರೆಗಳು

ಹೊಸ ಸ್ಥಳವು ತಗ್ಗಾಗಿರುವುದರಿಂದ, ಬಹಳ ಮುಳೆಯು ಬೀಳಲು, ಗರ್ಜ—೪೨ ನೇ ಇಸ್ವಿಯಲ್ಲಿ ತೆಗೆದ ಮತ್ತು ಇದೇ ಪುರವಣಿಯಲ್ಲಿ ಬೇರೆ ಕಡೆಗೆ ಕೊಟ್ಟ ಫೋಟೋದಲ್ಲಿ ಕಾಣುವಂತೆ, ತಿರಕಾರಾಮ ಕೆರೆಯ ಆಚೆಗೆ, ಆಳವಾದ ನೀರಿನಲ್ಲಿ ಮುಳುಗಿ ಹೋಗುವುದು ಆ ಸ್ಥಿತಿಯು ಇಂದಿಗೂ ಅಲ್ಲಿ ಇದೆ. ಈ ಮಾತನ್ನು, ಹೆಚ್ಚಾಗಿ ನುಳೆ ಬೀಳುವ ಸಮಯದಲ್ಲಿ ಅಲ್ಲಿಗೆ ಹೋಗಿ ಮನಗಾಣಬಹುದು. ಹುಬ್ಬಳ್ಳಿಯಲ್ಲಿ ಹತ್ತಿಯ ವ್ಯವಹಾರವು ಮಳೆಗಾಲದಲ್ಲಿ ಕೂಡ ನಡೆಯುತ್ತಿರಲೆ ಎಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮೇಲಿಂದ ಮೇಲೆ: ಬೀಳುವ ದೊಡ್ಡ ಮಳೆಗಳ ವಿಷಯಕ್ಕಂತೂ ಹೇಳುವುದೇ ಬೇಡ. ಈ ಭಾಗದ ಹತ್ತಿಯ ಸುಗ್ಗಿಯ ಒಂದು ಪ್ರಶಿಷ್ಟ್ಯವನ್ನು ನಾವು ಇಲ್ಲಿ ಮರೆಯುವಂತಿಲ್ಲ. ಮಾರ್ಚ ಅಥವಾ ಎಪ್ರಿಲ್ ತಿಂಗಳಿನಿಂದ ಅಕ್ಟೋಬರ ತಿಂಗಳವರೆಗಿನ ದೀರ್ಘವಾದ ಅವಧಿಯಲ್ಲಿ ಇದು ನಡೆಯುತ್ತದೆ. ಆದರೆ ಗುಜರಾತ ಮತ್ತು ಖಾನದೇಶಗಳಲ್ಲಿ ಇದು ನವೆಂಬರದಿಂದ ಫ್ಯಾರಂಭವಾಗಿ ಮಾರ್ಚ ತಿಂಗಳಿಗೆ ಮುಗಿದು ಹೋಗುತ್ತದೆ. ಇದರಿಂದ ಅದಕ್ಕೆ ತಳಳಯ ಬಾಧೆಯಾಗುವುದಿಲ್ಲ. ಅಲ್ಲದೆ ಇಲ್ಲಿ ಹತ್ತಿಯು ದಿನಸ, ವಾರ, ತಿಂಗಳುಗಟ್ಟಲೆ ಕೂಡಿ ಬೀಳುತ್ತದೆ. ಖಾನದೇಶ ಗುಜರಾತಗಳಲ್ಲಿ ಹಾಗಾಗುವುದಿಲ್ಲ. ಆದ್ದರಿಂದ ತೇವು ಮತ್ತು ಇತರ ಹವೆಯ ಹೆಚ್ಚುಕಡಿಮೆಗಳಿಂದ ಅದರ ಮೇಲೆ ಪರಿಣಾಮವಾಗುವುದು ಸ್ವಾಭಾವಿಕವಾಗಿದೆ ಈ ಪರಿಣಾಮದ ಮೇಲೆ ಹತ್ತಿಯ ಬಣ್ಣ ಮತ್ತು ತರಗತಿಯು ಅವಲಂಬಿಸಿರುತ್ತವೆ. ಈಗ ಮಾರ್ಕೆಟ್ಟು ಹೋಗಬೇಕೆಂದು ಗೊತ್ತಾದ ಸ್ಥಳದಲ್ಲಿ ಇವುಗಳ ಮೇಲೆ ಪರಿಣಾಮವಾಗುವ ಸಂಭವವು ಬಹಳವಾಗಿದೆ. ಹಾಗಾದಲ್ಲಿ ಹತ್ತಿಯ ಬೆಲೆಯು ಇನ್ನೂ ಇಳಿಯುವುದು ಮತ್ತು ಅದರಿಂದ ರೈತನ ಉತ್ಪನ್ನವು ಕಡಿಮೆಯಾಗುವುದು.

೫] ಇಂದಿನ ಸ್ಥಳವು ಸಾಲುವಂತಿಲ್ಲ

ಹತ್ತಿಯ ವ್ಯವಹಾರವನ್ನು ಸಾಗಿಸುವುದಕ್ಕೆ, ಹತ್ತಿ ಮತ್ತು ಅರಳೆಯನ್ನು ಒಟ್ಟುವುದಕ್ಕೆ, ರೈತರಿಗೆ ಮತ್ತು ಚಕ್ಕಡಿಯವರಿಗೆ ವಿಶ್ರಾಂತಿ ತೆಗೆದುಕೊಳ್ಳುವುದೇ ಮೊದಲಾದ ಪ್ರಸಂಗಗಳಿಗಾಗಿ ಸ್ಥಳ ಕೊಡುವುದಕ್ಕೆ ಈಗಿನ ಮಾರ್ಕೆಟ್ಟು ಸಾಕಷ್ಟು ವಿಶಾಲವಾಗಿರುವುದಿಲ್ಲವೆಂದು, ಅದನ್ನು ಅಲ್ಲಿಂದ ಕಿತ್ತಬೇಕೆಂಬ ಸ್ವವಸವರು ಅನ್ನುತ್ತಾರೆ. ಈ ಅಭಿಪ್ರಾಯವು ಹೊಳ್ಳಾದದ್ದೂ ತೀರ ಮಹತ್ವವಿಲ್ಲದ್ದೂ ಆಗಿದೆ. ಹುಬ್ಬಳ್ಳಿಗೆ

೪೦ ಸಾವಿರದಿಂದ ಒಂದು ಲಕ್ಷ ಗಂಟುಗಳು ಬರುತ್ತಿದ್ದಾಗ್ಗೆ ವ್ಯವಹಾರವು ಸಾಗಿಸಲ್ಪಟ್ಟಶೆಂಬದನ್ನು ನಾವು ನೋಡುತ್ತಿದ್ದೇವೆ. ೪೦ ರಿಂದ ೫೦ ಸಾವಿರದ ವರೆಗೆ ಗಂಟುಗಳು ಬರುತ್ತಿರುವ ಈ ಸಮಯದಲ್ಲಿ ಅದು ಏಕೆ ಸಾಲಲಾರದು? ಹುಬ್ಬಳ್ಳಿಯ ಹತ್ತಿಯ ವ್ಯಾಪಾರವು ಇಂದಿಗಿಂತ ಹೆಚ್ಚು ಇದ್ದ ೧೯೨೯ನೆಯ ಇಸ್ವಿಯ ವರೆಗೆ ಮೊದಲಿನ ಮಾರ್ಕೆಟ್ಟಿನ ಕ್ಷೇತ್ರವು ಕೇವಲ ೫ ಎಕರೆ ಇತ್ತು. ಸ್ವಲ್ಪೇ ದಿವಸಗಳ ತರುವಾಯ ಸುತ್ತಲಿನ ಪ್ರದೇಶಗಳನ್ನು ಕೂಡಿಸಿ ಅದನ್ನು ೧೮ ಎಕರೆಗಳನ್ನಾಗಿ ಮಾಡಲಾಯಿತು ನಮ್ಮ ಅಭಿಪ್ರಾಯದಲ್ಲಿ ಇಲ್ಲಿಲ್ಲ ಪ್ರದೇಶವನ್ನು ಚನ್ನಾಗಿ ರಚಿಸಿದಲ್ಲಿ ಮತ್ತು ಯೋಗ್ಯ ಅನುಕೂಲತೆಗಳನ್ನು ಅದಕ್ಕೆ ಒದಗಿಸಿದಲ್ಲಿ ಅದೇ ಒಂದು ಯೋಗ್ಯವಾದ ಮಾರ್ಕೆಟ್ಟು ಆಗಬಹುದಾಗಿದೆ

ಆದರೆ ಮಾರ್ಕೆಟ್ಟನ್ನು ಹೊಸ ಸ್ಥಳಕ್ಕೆ ಒಯ್ಯುವ ಆಯೋಗ್ಯತೆ, ಸ್ವೇತಪ್ಪನಿಂದ ಮಾತ್ರವಿರುವುದು, ಅನುಕೂಲತೆಗಳ ಅಭಾವವೇ ಮೊಹಲಾದವುಗಳ ಮೂಲಕ ವಾರ್ಷಿಕ ವ್ಯವಹಾರವು ಇನ್ನೂ ಇಳಿಯಬಹುದಾಗಿದೆ. ವಿಜಾಪೂರ್ ಕಾಟನ ಮಾರ್ಕೆಟ್ಟಿನ ಉದಾಹರಣೆಯನ್ನು ಇಲ್ಲಿ ನಾವು ಕೊಡಬಹುದು. ಆ ಮಾರ್ಕೆಟ್ಟು ಕೆಲವು ಕಾಲದ ಹಿಂದೆ ಅದರ ಮೂಲ ಸ್ಥಳದಿಂದ ಕಿತ್ತಲ್ಪಟ್ಟಿತೆಂದೂ ಆ ಮೂಲಕ ಅಲ್ಲಿಯ ವ್ಯಾಪಾರವು ಕುಂದಿತೆಂದೂ ತಿಳಿಯುತ್ತದೆ. ಇದೆನ್ನು ತಿಳಿದು ಅದನ್ನು ಪುನಃ ಮೂಲ ಸ್ಥಳಕ್ಕೆ ಒಯ್ಯಲ್ಪಟ್ಟಿತು. ಆದರೆ ಆಷ್ಟರಲ್ಲಿ ಬೇರೆ ಸ್ಥಳಗಳಿಗೆ ಹೋದ ವ್ಯಾಪಾರವು ತಿರುಗಿ ಬರಲೇ ಇಲ್ಲ.

೬] ಇಂದಿನ ಅನುಕೂಲತೆಗಳು

ಹೊರಗೆ ಕಳುಹಿಸಲ್ಪಡುವ ಮೊದಲು ಹತ್ತಿಯು ಆರಿಯಲ್ಪಡಬೇಕಾಗುವುದು ಮತ್ತು ಗಂಟು ಗಳಲ್ಲಿ ಕಟ್ಟಲ್ಪಡಬೇಕಾಗುವುದು. ಹುಬ್ಬಳ್ಳಿ ಮತ್ತು ಕೇಶ್ವಾಪೂರಗಳಲ್ಲಿ ಇಂದು ಇರುವ ಆರಿಯುವ ಮತ್ತು ಗಂಟುಗಟ್ಟುವ ಕಾರಖಾನೆಗಳಲ್ಲಿ ಬಹಳ ಕಾರಖಾನೆಗಳು ಇಂದಿನ ಕಾಟನ್ ಮಾರ್ಕೆಟ್ಟು ಮತ್ತು ರೇಲ್ವೆ ಸ್ಟೇಶನ್ನಿನ ಸುತ್ತಲೂ ಇರುತ್ತವೆ. ಹೊಸ ಸ್ಥಳದ ಹತ್ತಿರ ಇರುವ ಸ್ವಲ್ಪ ಫ್ಯಾಕ್ಟರಿಗಳು ತೀರ ಕಡಿಮೆ ಕಾರ್ಯಶಕ್ತಿಯವಿವೆ. ಈ ಪುರವಣಿಯ ಬೇರೆಡೆಯಲ್ಲಿ ಪ್ರತ್ಯೇಕವಾಗಿ ಕೊಟ್ಟ ಅಂಕಿ ಸಂಖೆಗಳಿಂದ ಈ ಮಾತು ಸ್ಪಷ್ಟವಾಗುವುದು.

ದೊಡ್ಡ ಮತ್ತು ಬಹಳ ಫ್ಯಾಕ್ಟರಿಗಳು ಹತ್ತಿರವೇ ಇರುವುದರಿಂದ ವ್ಯಾಪಾರಸ್ಥರ ಓಡಾಟದ ವೆಚ್ಚವು ಉಳಿಯುತ್ತದೆ. ಮತ್ತು ಅವರು ಸ್ವಲ್ಪೇ ವೆಚ್ಚದಲ್ಲಿ ಸುಲಭವಾಗಿ ಫ್ಯಾಕ್ಟರಿ, ರೇಲ್ವೆ ಸ್ಟೇಶನ್, ಪೋಸ್ಟಾಪೀಸ ಬ್ಯಾಂಕ ಮೊದಲಾದವುಗಳಿಗೆ ಹೋಗಿ ಬರಲು ಅನುಕೂಲವಾಗುತ್ತದೆ.

೭] ಹತ್ತಿಯ ವ್ಯಾಪಾರವೂ ಮ್ಯುನಸಿಪಾಲಿಟಿಯೂ

ಬರುವ ಮತ್ತು ಹೋಗುವ ಹತ್ತಿಯ ಅಂಡಿಗೆ ಗಂಟುಗಳ ಮೇಲೆ ಮತ್ತು ಹತ್ತೀಕಾಳಿನ ಚೀಲಗಳ ಮೇಲೆ ದೊರೆಯುವ ನುಂಕದ ಮೂಲಕ ಮ್ಯುನಸಿಪಾಲಿಟಿಗೆ ದೊಡ್ಡ ಉತ್ಪನ್ನವು ಬರುತ್ತದೆ ಹೊರಗೆಹೋಗುವ ಅಂಡಿಗೆ, ಗಂಟು ಮತ್ತು ಹತ್ತೀಕಾಳಿನ ಚೀಲಗಳ ಮೇಲೆ ನುಂಕ ತಗೆದುಕೊಳ್ಳುವುದಕ್ಕೆ ೧೯೩೫ನೇ ಇಸ್ವಿಯ ಸುಮಾರಕ್ಕೆ ಮ್ಯುನಸಿಪಾಲಿಟಿಯು ಪ್ರಾರಂಭಿಸಿತು. ಅದಕ್ಕೂ ಮೊದಲು ಅದು ಇದ್ದಿಲ್ಲ. ಹತ್ತಿಯ ವ್ಯವಹಾರದ ಏರಿಳಿತಗಳ ಮೇಲೆ ಹುಬ್ಬಳ್ಳಿಯ ಇತರ ವ್ಯವಹಾರಗಳು ಪ್ರತ್ಯಕ್ಷವಾಗಿ ಅವಲಂಬಿಸಿವೆಯೆಂಬದು ಗೊತ್ತಿದ್ದೆ ಮಾತಾಗಿದೆ. ಆದ್ದರಿಂದ ಪಟ್ಟಣದ ಬೆಳವಣಿಗೆಯ ವಿಷಯದಲ್ಲಿ ಮ್ಯುನಸಿಪಾಟಿಯು ಕೊಡುವಷ್ಟೇ ಗಮನವನ್ನು ಹತ್ತಿಯ ವ್ಯಾಪಾರದಲ್ಲಿ ಅದು ಕೊಡಬೇಕಾದುದು ಅವಶ್ಯವಾಗಿದೆ ಹತ್ತಿಯ ವ್ಯವಹಾರಸ್ಥರು ಮತ್ತು ಅದಕ್ಕೆ ಸಂಬಂಧಪಟ್ಟ ಜನರು ಸ್ವಾಭಾವಿಕವಾಗಿ, ಮ್ಯುನಸಿಪಾಲಿಟಿಯಿಂದ ವ್ಯಾಪಾರೀ ಅನುಕೂಲತೆಗಳನ್ನು ಹೊಂದಬಯಸುತ್ತಾರೆ. ಮಾರ್ಕೆಟ್ಟು ಒಂದು ಅನನುಕೂಲವಾದ ಸ್ಥಳಕ್ಕೆ ಒಯ್ಯಲ್ಪಟ್ಟರೆ ಇಂದು ಅವರಿಗಿರುವ ಸ್ವಾಭಾವಿಕವಾದ ಮತ್ತು ಇತರ ಸೌಕರ್ಯಗಳಿಗೆ ಅವರು ಎರವಾಗುತ್ತಾರೆ.

೮] ಓಡಾಟವು ಬಹಳವಾಗಿದೆಯೇ ?

ಹೊಸ ಸ್ಥಳಕ್ಕೆ ಒಯ್ಯಲ್ಪಡುವುದಕ್ಕೆ ಅನುಕೂಲವಾಗಿ ಘುಂಡಿಡಲ್ಪಡುತ್ತಿರುವ ಅಭಿಪ್ರಾಯಗಳಲ್ಲಿ ಕಾಟನ ಮಾರ್ಕೆಟ್ಟಿನ ಇಂದಿನ ಸ್ಥಳದ ಮೂಲಕ ಸುಗ್ಗಿಯಲ್ಲಿ ಓಡಾಟವು ಬಹಳವಾಗುತ್ತವೆಂಬದು ಒಂದಾಗಿದೆ. ವಾದದ ದೃಷ್ಟಿಯಿಂದ ಇತರ ವ್ಯೆದ್ಯೋಗಿಕ ಪಟ್ಟಣಗಳಲ್ಲಾಗುವಂತೆ ಸುಗ್ಗಿಯ ಕಾಲದಲ್ಲಿ ಓಡಾಟವು ಹೆಚ್ಚಿರುವುದೆಂದು ಒಪ್ಪಿದರೂ ಮಾರ್ಕೆಟ್ಟನ್ನು ತಿರಕಾರಾಮನ ಕೆರೆಯ ಹತ್ತಿರ ಒಯ್ದರೂ ಕೂಡ ಇದು ನಿಲ್ಲಲಾರದು. ಯಾಕೆಂದರೆ ಹತ್ತಿ ಮತ್ತು ಅರಳೆಯ ಗಂಟುಗಳನ್ನು ಹೇರಿಕೊಂಡು ಮಾರ್ಕೆಟ್ಟಿಗೆ ಸುಗ್ಗಿಯಲ್ಲಿ ಬರುವ ಸಾವಿರಾರು ಚಕ್ಕಡಿಗಳು ಪಟ್ಟಣದ ಬೀದಿಗಳಲ್ಲಿಯೇ ಹಾಯ್ದು ಇಂದಿನಂತೆ ಬರಬೇಕಾಗುವುದು. ಇದಲ್ಲದೆ ಆಗ್ಗೆ ಹೊಸ ಮಾರ್ಕೆಟ್ಟು ಮತ್ತು ರೇಲ್ವೆ ಸ್ಟೇಶನ್ನು ಮತ್ತು ಹೆಚ್ಚಿನ ಕಾರ್ಯಶಕ್ತಿಯ ಜಿನ್ನು ಮತ್ತು ಪ್ರೆಸ್ಸುಗಳ ನಡುವಿನ ಅಂತರವು ಈಗಿನ ಕಿಂತ ಹೆಚ್ಚಾಗುವುದು. ಚಕ್ಕಡಿಗಳು ಮತ್ತು ಮೋಟಾರ ಲಾರಿಗಳು ಹೆಚ್ಚು ದೂರ ಹೋಗಬೇಕಾಗುವುದರಿಂದ ಓಡಾಟಕ್ಕೆ ಇನ್ನೂ ಹೆಚ್ಚು ಕೊಂದರೆಯಾಗುವುದು. ಹುಬ್ಬಳ್ಳಿಗೆ ಬರುವ ಹತ್ತಿಯ ಚಕ್ಕಡಿಗಳು ಹೆಚ್ಚಾಗಿ ಧಾರವಾಡದ ನಿಟ್ಟಿನಿಂದ ಬರುತ್ತಿರದೆ ಉಳಿದ ಮೂರು ದಿಕ್ಕುಗಳಿಂದ ಪ್ರವೇಶ ಮಾಡುತ್ತವೆ. ಈ ದೃಷ್ಟಿಯಿಂದ, ಮತ್ತು ಪೋಸ್ಟ ಆಫೀಸು ತಿರ ಕಾರಾಮ ಕೆರೆಯ ನಡುವಿನ ಪ್ರಾಂತಕ್ಕೆ ಮೊಗರ್ದ ಭಾಗವೊಂದೇ ಪ್ರಮುಖ ದಾರಿಯು ಆಗುವುದರಿಂದ ಹೊಸ ಸ್ಥಳಕ್ಕೆ ಮಾರ್ಕೆಟ್ಟನ್ನು ಒಯ್ದರೆ ಓಡಾಡಕ್ಕೆ ಹೆಚ್ಚು ಆತಂಕವುಂಟಾಗುವುದು

೯] ವಿಚಿತ್ರ ಕಾರಣ

ಸದ್ಯದ ಮಾರ್ಕೆಟ್ಟಿನಲ್ಲಿ ಕಟ್ಟಡಗಳುಳ್ಳ ಬಹಳ ಜನ ದಲಾಲರ ಮತ್ತು ಅದರ ಸುತ್ತಲೂ ಇರುವ ಫ್ಯಾಕ್ಟರಿಗಳ ಒಡೆಯರ ಹಿತದದೃಷ್ಟಿಯಿಂದ ಮ್ಯುನಸಿಪಾಲಿಟಿಯ ಸದ್ಯದ ಆಡಳಿತದೊಡನೆ ಚರ್ಚೆ ಮಾಡಿದಾಗ್ಗೆ ಮ್ಯುನಸಿಪಾಲಿಟಿಯವರು "ಓಹೋ ಅದರಲ್ಲೇನಿದೆ ? ಅವರಿಗೆ ಬೇಕಾದಷ್ಟು ಲಾಭವು ಸಿಕ್ಕಿದೆ. ಅವರು ಇಂದು ತಮ್ಮ ಫ್ಯಾಕ್ಟರಿಗಳನ್ನು ಬೇರೆಡೆಗೆ ಒಯ್ಯಬಹುದು. ಅದಕ್ಕಾಗಿ ಅವರಿಗೆ ತೀರ ಸ್ವಲ್ಪ ನೆಚ್ಚವು ಬರುವುದು" ಅಂದರು. ಎಂತಹ ವಿಲಕ್ಷಣ ವಿಚಾರವಿದು ! ಅದೆಂದಾದರೂ ವ್ಯವಹಾರ್ಯವಾಗಿಬಹುದೇ? ಜಿನ್ನಿಂಗ ಮತ್ತು ಪ್ರೆಸ್ಸಿಂಗ ಫ್ಯಾಕ್ಟರಿಗಳನ್ನು ಅವುಗಳ ಸದ್ಯದ ಸ್ಥಳದಿಂದ ಕಿತ್ತಿ, ಬೇರೆಡೆಗೆ ಒಯ್ಯುವುದಕ್ಕೆ ಬಹಳ ನೆಚ್ಚವು ಬರುವುದಿಲ್ಲವೆಂಬುದು ವಿಚಾರಕ್ಕೆ ಹರಿಯದ ಮಾತು. ಹಾಕಿದ ಮೂಲ ಧನದ ಮೇಲಿನ ಯೋಗ್ಯ ಬಡ್ಡಿಯಷ್ಟನ್ನು ಕೂಡ ದುಡಿಯದ ಮತ್ತು ಅವ್ಯಾಹತವಾದ ಹಾನಿಯ ಮೂಲಕ ಮುಚ್ಚಲ್ಪಡುವ ಸ್ಥಿತಿಯಲ್ಲಿರುವ ಅನೇಕ ಫ್ಯಾಕ್ಟರಿಗಳು ಹುಬ್ಬಳ್ಳಿಯಲ್ಲಿರುವ ಸಂಗತಿಯನ್ನು ಅವರು ಬಹಳ ಆಭವನ್ನು ಹೊಂದಿರುವರು ಎಂದು ಹೇಳುವ ವಿಚಾರವು ದುರ್ಲಕ್ಷಿಸುತ್ತದೆ.

ಕಟ್ಟಡ ಮತ್ತು ಯಂತ್ರಗಳೊಡನೆ ಫ್ಯಾಕ್ಟರಿಗಳನ್ನು ಸದ್ಯದ ಸ್ಥಳದಿಂದ ಹೊಸ ಪ್ರದೇಶಕ್ಕೆ ಒಯ್ಯುವುದೆಂದರೆ ಎಲ್ಲವನ್ನೂ ಹೊಸದಾಗಿ ಕಟ್ಟಬೇಕಾಗುವುದು. ಅನೇಕ ವರ್ಷಗಳಿಂದ ಸದ್ಯದ ಫ್ಯಾಕ್ಟರಿಗಳು ಆಯಾ ಸ್ಥಳಗಳಲ್ಲಿವೆ. ಮತ್ತು ಅವುಗಳ ಕಟ್ಟಡಗಳ ಮತ್ತು ಯಂತ್ರಗಳ ಸಂಬಂಧವಾಗಿ ಸಂಪೂರ್ಣವಾದ ಹಾನಿಗೆ ಗುರಿಯಾಗದೆ, ಅವು ಅಲ್ಲಿಂದ ಕೀಳಲ್ಪಡಲಾರವು. ಅವುಗಳ ಯಂತ್ರಗಳು ನಿಲ್ಲಿಸಲ್ಪಟ್ಟ ಸ್ಥಿತಿಯಲ್ಲಿರುವುದರಿಂದ ಅದೇ ಸ್ಥಿತಿಯಲ್ಲಿ ಮಾತ್ರ ಕೆಲಸ ಮಾಡುವಂಥವಿವೆ. ಕಟ್ಟಡಗಳ ಸ್ಥಿತಿಯೂ ಅದೇ ಮಾದರಿಯದಾಗಿದೆ. ಒನ್ಮೆ ಅವುಗಳನ್ನು ಬಿಚ್ಚಿಬಿಟ್ಟರೆ ಅವುಗಳಲ್ಲಿಯ ಬಹಳ ಭಾಗದ ಬೆಲೆ ಮತ್ತು ಉಪಯುಕ್ತತೆಗಳು ಏನೂ ಉಳಿಯುವುದಿಲ್ಲ. ಯಂತ್ರಗಳ ಭಾಗಗಳನ್ನು ಹೊಸದಾಗಿ ಹಾಕಬೇಕೆಂದರೆ ಅದು ಇಂದು ಯುದ್ಧದ ಮೂಲಕ ಸಾಧ್ಯವಿಲ್ಲವಿವೇ ಅಲ್ಲದೆ ಯುದ್ಧದ ನಂತರ ಕೂಡ ಕೆಲವು ವರ್ಷಗಳ ವರೆಗೆ ಆಗುವಂತಿಲ್ಲ. ತತ್ಪಿಷಯಕವಾದ (ಟೆಕ್ನಿಕಲ್) ವಿಶೇಷತಃ ಯಾಂತ್ರಿಕ ವಿಷಯದ ಜ್ಞಾನವಿಲ್ಲದವರಿಗೆ ಈ ಮಾತು ತಿಳಿಯುವುದಿಲ್ಲ.

೧೦] ಅನಿಷ್ಟ ಪರಿಣಾಮಗಳು

ಪಟ್ಟಣದಲ್ಲಿಯ ನಷ್ಟಣಿಯನ್ನು ಕಡಿಮೆ ಮಾಡುವುದಕ್ಕಾಗಿ ಕಾಟನ್ ಮಾರ್ಕೆಟ್ಟನ್ನು ಅದರ ಸದ್ಯದ ಸ್ಥಳದಿಂದ ಕಿತ್ತಿದರೆ ಪಟ್ಟಣದ ಮೇಲೆ ಅದರ ಮೇಲೆ ತೀರ ಮತ್ತೊಂದು ತರಹದ ಪರಿಣಾಮವಾಗುವುದು. ಔದ್ಯೋಗಿಕ ಕೇಂದ್ರಗಳು ಅವುಗಳ ಮೂಲ ಸ್ಥಾನಗಳಿಂದ ತೆಗೆಯಲ್ಪಟ್ಟಾಗ್ಗೆ ಈ ತರಹದ ಅನುಭವವು ಜನರಿಗೆ ಬಂದಿದೆ ಅವುಗಳ ಸುತ್ತಲಿನ ಪ್ರದೇಶಗಳು ಬಹಳ ಕಾಲದ ವರೆಗೆ ಬರಿದಾಗಿ ಬೀಳುವವು ಮತ್ತು ಈ ಅವಧಿಯಲ್ಲಿ ಕಾಲಮಾನಗಳಲ್ಲಿ ವ್ಯತ್ಯಾಸಗಳುಂಟಾದರೆ ಅವುಗಳ ಬೆಲೆಯು ಕಡಿಮೆಯಾಗಿಹೋಗುವುದು. ದಟ್ಟಣೆಯು ಹೋಗಿ ಬೆಳವಣಿಗೆಗಾಗಿ ಸಿದ್ಧತೆಯಾಗುವುದರ ಸ್ಥಳದಲ್ಲಿ, ಹೊಸ ಹುಬ್ಬಳ್ಳಿಯ ಕ್ಷೇತ್ರವು ಹಳೇ ಹುಬ್ಬಳ್ಳಿಯ ಸ್ಥಿತಿಗೆ ಬರಬಹುದಾದ ಸಂಭವವಿದೆ. ಹಳೇ ಹುಬ್ಬಳ್ಳಿಯು ಒಂದಾನೊಂದು ಕಾಲದಲ್ಲಿ ಪಟ್ಟಣದ ಮಧ್ಯೆ ಸ್ಥಳವಾಗಿತ್ತು. ಇಂದು ಅದರ ಬೆಲೆಯೇ ಕಳೆದುಹೋಗಿದ್ದರಿಂದ ಯಾವ ರೀತಿಯಿಂದಲೂ ಅದು ಬೆಳೆಯುತ್ತಿಲ್ಲ. ಕಾಟನ್ ಮಾರ್ಕೆಟ್ಟಿನ ಕ್ಷೇತ್ರದಲ್ಲಿ ಪಟ್ಟಣದ ಬೆಳವಣಿಗೆಯನ್ನು ಮಾಡುವ ವಿಚಾರವನ್ನು ಇಟ್ಟುಕೊಳ್ಳದೆ ಇತರ ಪಟ್ಟಣಗಳಲ್ಲಿ ನಡೆದಿರುವಂತೆ, ಸದ್ಯದ ಪಟ್ಟಣದ ಹೊರಗೆ ವಿಸ್ತರೀಕರಣವು ನಡೆಯುವಂತೆ ಮಾಡುವುದು ಆರೋಗ್ಯ ಮತ್ತು ಇತರ ಕಾರಣಗಳ ದೃಷ್ಟಿಯಿಂದ ಹೆಚ್ಚು ಒಳ್ಳೆಯದಾಗಿದೆಯೆಂದು ಇಲ್ಲಿ ಸೂಚಿಸಬಹುದಾಗಿದೆ.

೧೧] ಕೊನೆ

ಈ ವಿಚಾರಕ್ಕೆ ಸಂಬಂಧವಾದ ಸಾಧಕ—ಬಾಧಕ ಸಂಗತಿಗಳ ವಿಷಯದಲ್ಲಿ ಇದು ವರೆಗೆ ಮಾಡಲ್ಪಟ್ಟ ಚರ್ಚೆಯಿಂದ ಈ ಸಮಸ್ಯೆಯು ಸುಲಭವಾಗಿ ಮತ್ತು ಒಮ್ಮೆಲೇ ಬಗೆಹರಿಯುವಂಥದಲ್ಲವೆಂಬುದು ಸ್ಪಷ್ಟವಾಗುವುದು. ಈ ನೋದಲು ಮ್ಯುನಸಿಪಾಲಿಟಿಯು ಈ ವಿಚಾರವನ್ನು ಎರಡುಸಲ ಬಿಡಬೇಕಾಯಿತು. ೧೯೩೫ನೆಯ ಇಸ್ವಿಯಲ್ಲಿ ಸರಕಾರದವರು ಕೂಡ ಈ ವಿಚಾರವನ್ನು ಬಿಟ್ಟು ಬಿಡುವುದಕ್ಕೆ ಮ್ಯುನಸಿಪಾಲಿಟಿಗೆ ತಿಳುಹಿಸಿದ್ದರೆಂದು ತಿಳಿಯುತ್ತದೆ. ಸ್ಥಳಾಂತರಿಸುವ ಈ ವಿಚಾರವು ಪುನಃ ಈಗಿನ ಇಂತಹ ಅಯೋಗ್ಯ ಸಮಯದಲ್ಲಿ ಏಕೆ ಪುನಃ ಎತ್ತಲ್ಪಟ್ಟಿದೆಯೋ ತಿಳಿಯದು. ವ್ಯಾಪಾರಕ್ಕೆ ಈ ದಿವಸಗಳು ಅನನುಕೂಲವಾಗಿವೆ ಯಾವುದೇ ಹೊಸ ಸಾಹಸಕ್ಕೆ ತಪ್ಪದೆ ವಿರೋಧಿಸುವ ಸಂಗತಿಯೆಂದರೆ ಅದೇ ಆಗಿದೆ

ಸದ್ಯದ ಮಾರ್ಕೆಟ್ಟಿನ ಸ್ಥಳವನ್ನು, ಮನೆಗಳನ್ನು ಕಟ್ಟುವುದಕ್ಕೆ ಮಾಡಿದರೆ ಅದರಿಂದ ಮ್ಯುನಸಿಪಾಲಿಟಿಗೆ ಬಹಳ ಲಾಭವಾಗುವುದೆಂಬ ಮತ್ತು ಈ ಸ್ಥಳವನ್ನು ಕಚ್ಚಡಗಳಿಗಾಗಿ ಉಪಯೋಗಿಸಿದರೆ ಅದರಿಂದ ಪಟ್ಟಣದ ಸೌಂದರ್ಯ ಬೆಳವಣಿಗೆಗೆ ಸಹಾಯಕಾರಿಯಾಗುವುದೆಂಬ ಎಡು ಮುಖ್ಯ ಕಾರಣಗಳನ್ನು ಈ ಸೂಚನೆಯ ಪುರಸ್ಕರ್ತರು ನುಂಬೆ ಇಡುತ್ತಾರೆ. ಇವೆರಡೂ ಪ್ರಶ್ನೆಗಳಿಗೆ ಚನ್ನಾಗಿ ಉತ್ತರಕೊಡಲಾಗಿದೆ. ಈಗಿನ ಮಾರ್ಕೆಟ್ಟಿನಲ್ಲಿಯ ಭಾಗಗಳು ಹಾಹಾ ಅನ್ನುತ್ತಿ

—೭ ನೇ ಪುಟ ನೋಡಿರಿ

Is Shifting of Cotton Market Advisable?

By: Captain Dr. C J. Prabhakar

In the issue of the 26th January last of the Hubli Gazette I read in the Municipality's Administration report that the Municipality was awaiting the Commissioner's sanction for the shifting of the Hubli Cotton Market The Gazette also invited through the same issue public opinion on the problem Hence I am writing the following lines -

As far as my knowledge goes since the low and unsuitable place near the Tirkaram Tank was proposed for the location of the market, I have heard almost all people directly or indirectly concerned in the matter saying that the selection of the said site is most unhappy and it would tell upon the whole trade and even the civic life of Hubli More than a decade has passed since the proposal was last dropped and matters have worsened during the last 15 years There is nothing to show that things have changed or improved to reconsider and support the scheme that was once investigated into, and abandoned as unsuitable

I see that the Municipal Administrator proposes to raise sufficient capital for Robertson market by selling open spaces in the city which are very few or even nil and particularly through the sale of the present cotton market area by public auction It is true that some plots in the city have been lately purchased for building purposes Rs 500/ per gunta But when a vast area like that of a cotton market is taken out for sale it is doubtful whether it would fetch such a high price When the offers are made by purchasers prices increase But when proposals for sale come from the sellers prices dicrease This is commonsense Besides the whole area is obviously not going to be purchased by one or two persons alone but it will have to be made into plots for purchase by innumerable purchasers I have heard people say that only the upper portion which is about one third of the present cotton market area is fit for permanent buildings the remaining two thirds being comparatively unsuited for permanent structures As such the whole land cannot bring the anticipated amount to the Municipality Besides roads and bylanes in this area will take away at least 2 to 3 acres and the actual area available for sale will be less than now supposed

As far the proposed site beyond the Tirkaram tank the less said the better The cost of levelling, filling, constructing pucca roads and drains, water supply arrangements and so on will involve an enormous capital It is therefore clear that whatever may be got through sale of the present market site will have to be burried in the proposed site Eventually what will be the gain to the Municipality? In my opinion it would be impossible to accomplish everything on the new site within a small expenditure It is only a genious brain that might achieve the impossible

There may be some persons including even an expert in some line who might advise that the proposed area of more than 50 acres may be made suitable providing all facilities within a few thousands But when we see that a single drain about 15 years back on that very site took Rs 30,000/- it would be quite an under estimate Even experts fail not unoften in their estimates The Back Bay Scheme of Bombay was prepared not by laymen but by greater experts. What has been the result? Let not such a folly repeat itself in Hubli is my desire

The Municipality has already wasted a huge amount on the construction of a mere gutter over 15 years back and the tax payers' money is thus ill spent. My fear is that the tax payers' hard earned money is most likely going to be wasted again, if the proposal is insisted upon notwithstanding the above facts

With regard to development of the city I think it should be outside the business centres in free air and open area The site of the present cotton market is not suitable for such development from that point of view.

These are my views on the matter in question and though I claim no expert knowledge it is my firm belief that the proposed scheme would do no good towards the future of the city.

ಹುಬ್ಬಳ್ಳಿ ಕಾಟನ್ ಮಾರ್ಕೆಟ್

ಈ ಪುಟದಿಂದ ಮುಂದರಿದುದು

ದರೊಳಗೆ ಮಾರಲ್ಪಡುವವೆನ್ನುವ ಮ್ಯುನಸಿಪಾಲಿಟಿಯ ನಿರೀಕ್ಷಣೆಗೆ ಈಗಿನ ಆರ್ಥಿಕತೊಂದರೆಯ ನಿಶ್ಚಯವಾಗಿ ವಿರೋಧಮಾಡುವುದರಿಂದ ಈ ಮಾರ್ಕೆಟ್ಟಿನ ಸ್ಥಳವನ್ನು ಮಾರುವುದರಿಂದ ಮ್ಯುನಸಿಪಾಲಿಟಿಗೆಲಾಭವಾಗುವುದಿಲ್ಲವೆಂಬದನ್ನು ಸಂಶಯಬರದಹಾಗೆ ಸಿದ್ಧಮಾಡಲಾಗಿದೆ ಇಷ್ಟೇ ಅಲ್ಲದೆ ಹೊಸ ಸ್ಥಳವನ್ನು ಕಾಟನ ಮಾರ್ಕೆಟ್ಟಿಗೆ ತಕ್ಕಂಥದನ್ನಾಗಿ ಮಾಡಲು ಬಹಳ ವೆಚ್ಚವು ಹಿಡಿಯುವುದು. ಈ ವ್ಯತ್ಯಾಸದಿಂದ ವ್ಯಾಪಾರೀ ಸಂಬಂಧಗಳಿಗೆ ಅನವಶ್ಯಕವಾದ ಹಾನಿತಟ್ಟುತ್ತದೆ. ಸಮಯದಲ್ಲಿ ಅದನ್ನು ಅವರು ತಡೆದುಕೊಳ್ಳುವುದು ಅಶಕ್ಯವಾಗಿದ.

ಕಾಟನ ಮಾರ್ಕೆಟ್ಟಿನಲ್ಲಿರುವ ಬೈಲು ಭಾಗದಲ್ಲಿ ಮನೆಗಳನ್ನು ಕಟ್ಟಿದರೆ ಪಟ್ಟಣದ ಸೌಂದರ್ಯವೂ ಸಾಧಿಸುವುದಿಲ್ಲ ಅಲ್ಲಿಯ ಬೈಲು ಪ್ರದೇಶವು, ಪಟ್ಟಣವನ್ನು ಸಂದರ್ಶಿಸುವ ಯಾವುದೇ ವ್ಯಕ್ತಿಗೆ ಆನಂದವನ್ನುಂಟು ಮಾಡತಕ್ಕಂಥದಾಗಿದೆ. ಆದರೆ ಈ ಬೈಲು ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಇಡಲ್ಪಟ್ಟಲ್ಲವೆಂಬದು ಮತ್ತೊಂದು ವಿಷಯವಾಗಿದೆ ಈ ಬೈಲಿನಲ್ಲಿ ಮನೆಗಳ ಸಾಲುಗಳನ್ನು ಕಟ್ಟಿದರೆ, ನಮ್ಮ ಪಟ್ಟಣದ ದಟ್ಟವಿರದ ಭಾಗದಲ್ಲಿ ದಟ್ಟಣೆಯನ್ನುಂಟುಮಾಡಿದಂತಾಗುತ್ತದೆ

ಪಟ್ಟಣ ಜೀವನಡಗದ್ದಲ ಗೊಂದಲಗಳಿಂದ ದೂರವಿರುವ ಮನೆಗಳನ್ನು ಹಿಡಿಯುವುದನ್ನೇ ಇಂದಿನ ಹಣವುಳ್ಳವರು ಇಚ್ಛಿಸುತ್ತಾರೆ. ಬಹಳ ಬೆಲೆಯುಳ್ಳ ಪ್ರದೇಶಗಳು ಮನೆಗಳನ್ನು ಕಟ್ಟುವುದಕ್ಕಾಗಿ ಕೊಳ್ಳಲ್ಪಡುವುದಿಲ್ಲ ಆದ್ದರಿಂದ ಪಟ್ಟಣವನ್ನು ಸುಂದರಗೊಳಿಸಬೇಕೆಂದಿಟ್ಟುಕೊಂಡಿಕುವ ಉದ್ದೇಶವು ಸಾಧಿಸಲಾರದು. ಅನೇಕ ಭಾಗಗಳು ಮಾರಲ್ಪಡದೆ ಉಳಿಯುವವು ಮತ್ತು ಮಾರಲ್ಪಡಬಹುದಾದ ಕೆಲವುಗಳಲ್ಲಿ ಸ್ವಲ್ಪ ಭಾಗಗಳು ಕಟ್ಟಡಗಳನ್ನು ಕಾಣದೆ ಉಳಿಯಬಹುದು ಆದ್ದರಿಂದ ಈ ಹೊಸ ವ್ಯವಸ್ಥೆಯ ಪುರಸ್ಕರ್ತರು ಸಂಬಂಧಪಟ್ಟ ಎಲ್ಲರ ಕಲ್ಯಾಣಕ್ಕಾಗಿ ಈ ಕ್ಷೇತ್ರದಲ್ಲಿಯ ಸ್ಥಿತಿಯನ್ನು ಕೆದಿಸುವ ಮೊದಲು ಸ್ವಲ್ಪ ತಡೆಯಬೇಕು ಅಂದರೆ ತಾತ್ಕಾಲಿಯಲ್ಲದ ಮತ್ತು ಉಪಾಯಬಾಹ್ಯವಾದ ಕಾರ್ಯಕ್ಕೆ ತಡೆಹಾಕಿದಂತಾಗುವುದು ಮತ್ತು ಪಟ್ಟಣದ ಬೆಳೆಯುತ್ತಿರುವ ಉದ್ಯೋಗಗಳಲ್ಲಿ ಒಂದಾದುದಕ್ಕೆ ಉಂಟಾಗುತ್ತಿರುವ ಮತ್ತು ಆ ಮೇಲೆ ಸರಿಪಡಿಸಿಕೊಳ್ಳಲು ಅವಕಾಶವಿಲ್ಲದಂತಹ ಆಘಾತವನ್ನು ತಪ್ಪಿಸಿದಂತಾಗುವುದು

ಪಟ್ಟಣದ ಬೆಳವಣಿಗೆಯು ಊರ ಹೊರಗೆ ಆಗುವದು ಲೇಸಲ್ಲವೇ ?

ಲೇಃ— ಶಾ ಭವಾನಜಿ ಕೇಶವಜಿ
ಹತ್ತಿ ಅರಳಿ ವ್ಯಾಪಾರಸ್ಥರು

ಬಹುತಶವಾಗಿ ಪಟ್ಟಣದ ಬೆಳವಣಿಗೆಯು (City development) ಊರ ಮಧ್ಯದಲ್ಲಿ ಆಗುವದಕ್ಕಿಂತ ಊರ ಹೊರಗೆ ಆಗುವದು ಕಂಡುಬರುತ್ತದೆ. ಆರೋಗ್ಯ, ಸ್ಥಳದ ವಿಸ್ತೀರ್ಣತೆ, ಹವೆ ಮುಂತಾದವುಗಳ ದೃಷ್ಟಿಯಿಂದ ಹೊಸ ನ್ಯನೆ, ಬಂಗಲೆ ಮುಂತಾದವುಗಳನ್ನು ಕಟ್ಟಿಸುವವರು ಊರ ಮಧ್ಯದಲ್ಲಿ ಕಟ್ಟಿಸದ ಊರ ಹೊರಗೆ ಕಟ್ಟಿಸುವರು. ಈಗಿನ ಕಾಟನ್ ಮಾರ್ಕೆಟ್ಟಿನ ಸ್ಥಳದಲ್ಲಿ ಕಟ್ಟಿಸಿದರೂ ಮುಂದೆ ಹಲವು ವರ್ಷಗಳ ತರುವಾಯ ಅಲ್ಲಿಯೂ ದಟ್ಟ ವಸತಿಯಾಗಿ ತಿರುಗೊಮ್ಮೆ ದಟ್ಟ ವಸತಿಯನ್ನು (Congestion) ಕಡಿಮೆ ಮಾಡುವ ಪ್ರಶ್ನೆಯು ಉದ್ಭವಿಸುವದು ಅಂದ

ಮೇಲೆ ಈಗಿನಿಂದಲೇ ಊರ ಮಧ್ಯದಲ್ಲಿ ಹೊಸ ಕಟ್ಟಡಗಳನ್ನು ಕಟ್ಟಿಸುವದಕ್ಕಿಂತ ಊರ ಹೊರಗೆ ಸಾಕಷ್ಟು ವಿಸ್ತೀರ್ಣ ಸ್ಥಳವಿರುವಲ್ಲಿ ಕಟ್ಟಿಸಲು ಉತ್ತೇಜನ ಕೊಡುವದು ಒಳಿತಲ್ಲವೇ ? ಈಗಿನ ಕಾಟನ್ ಮಾರ್ಕೆಟ್ಟನ್ನು ಊರ ಹೊರಗೆ ಕಳಿಸಿದರೆ ವ್ಯಾಪಾರ ಉದ್ಯೋಗಗಳ ಮುಖ್ಯ ಹಾಗು ಅದರ ಮೇಲೆ ಅವಲಂಬಿಸಿದ ಕೇಂದ್ರಗಳು ಕ್ರಮೇಣ ಊರ ಹೊರಗೆ ಹೋಗುವವು ಆನಂತರ ಊರಲ್ಲಿಯ ಈಗಿನ ಸ್ಥಳ, ಕಟ್ಟಡ ಮುಂತಾದವುಗಳ ಬೆಲೆಯು ಕಡಿಮೆ ಯಾಗುವದು ಇಷ್ಟೇ ಏಕೆ ? ಈಗಿನ ಕಾಟನ್ ಮಾರ್ಕೆಟ್ಟಿನ ಸ್ಥಳದಲ್ಲಿ ಮನೆ, ಅಂಗಡಿ, ಚಾಳು ಮುಂತಾದವುಗಳನ್ನು ಕಟ್ಟಿಸಿ ಅವುಗಳಲ್ಲಿ ಮೂಲಧನ (ಬಂಡವಲು) ತೊಡಗಿಸಲಿಚ್ಛಿಸುವವರ ಉದ್ದೇಶವಾದರೂ ಸಫಲವಾಗಬಹುದೇ ? ಏಕೆಂದರೆ ವ್ಯಾಪಾರ ಉದ್ಯೋಗ ಕೇಂದ್ರಗಳು ಹೊರಗೆ ಹೋದಮೇಲೆ ಕಟ್ಟಡಗಳಿಗೆ ಈಗ ಅಪೇಕ್ಷಿಸಿದ ಬೆಲೆ, ಬಾಡಿಗೆ ಬರಲಿಕ್ಕಿಲ್ಲ ಕಾಟನ್ ಮಾರ್ಕಟ್ಟು ಹೊರಗೆ ಹೋಗಬೇಕೆನ್ನುವವರು ಈ ದೃಷ್ಟಿಯಿಂದಲೂ ವಿಚಾರಿಸುವದವಶ್ಯವು. ಮುನಸೀಪಾಲಿಟಿಯವರೂ ಇದನ್ನು ಮನಗಾಣಬೇಕು

IS IT NOT HAZARDOUS?

ARE COTTON DEALERS PROSPERING?

By: Mr. R. L. Amte, B. A., LL. B

When I hear that the Cotton Market is proposed to be removed from its present site three problems appear before me.

1. Are the Dalals and others connected with Hubli Cotton trade in a position to bear the expense of the new venture?

2. What will be the return if money spent on the existing market in form of buildings, godowns, sheds, etc., is allowed to go waste by demolishing them and if fresh investment is to be made in newly constructing the same on the proposed site?

3. What will be its effect on the general prosperity of the city?

I shall answer each of the above questions one by one.

Regarding the first, none need be in doubt. Cotton trade as a whole has suffered every where in these parts and particularly so in Hubli. Dalals and all others connected therewith have been financially hard hit. If we ask them in confidence they relate their plight. I have concrete instances of their unenviable lot. I have my own godown and open space on lease in the existing market. In and before 1923 the same used to be rented by a Dalal on Rs. 500/- per year. But recently the same godown and space have been able to fetch me only Rs. 300/- per year. This is due to the most unfavourable financial condition of the Dalals who cannot afford ever to pay rents as in the past. Even these Rs. 300/- being unbearable for a single Dalal-tenant he has sublet a portion of it to another. This is not a unique instance but same is the tale with many others in this market. What does this indicate? Under these circumstances, can those who have got their own buildings in the present market demolish them and construct new ones on the proposed site? Or can those who are going to hire godowns in the new market pay high rents? Any body would emphatically say "No".

A Two-fold Loss

Re. Question No. 2, it is obvious that it will be a two-fold loss to destroy what exists to-day in the present market and create everything newly in the proposed one. It may be argued that many of the buildings in the market are now old and therefore they may be demolished. This argument is unentertainable in these days of economic stringency. Whatever their condition may be the buildings standing to-day serve the necessary purpose and it would be a folly to demolish them and ask their owners to construct new ones until and unless affluent conditions return, which is quite indefinite. Now let us see what will be the yield on the new buildings, if at all they are constructed on the proposed site. As stated above the rent-paying capacity of the tenants is fast declining. Taxes are annually increasing Building-projects in these days and for years to come will cost enormously above what they would have normally done The rates of even ordinary screws since the outbreak of war have increased from 0—3—6 to 0—14—0 per gross and corrugated iron-sheets from their normal price of Rs. 9 – per cwt. have shot up to Rs 22/- This clearly reveals the extraordinary heavy investment required to be made in buildings, in these days. What will be the return of interest on the capital? I know of concrete instances where not even 4% of interest is realised on investments of buildings in Hubli. The Hubli Electricity Company's rent of building-Account reveals the same, though their buildings are quite new pucca and provided with all modern amenities and facilities in healthy and beautiful surroundings. When such is the fact who would blindly invest lakhs of rupees on buildings in the proposed market? Thus it is doubtful whether a sufficient number of persons would dare to invest in buildings on the proposed site.

General Effect

Re. Question No. 3, one can easily foresee that on account of the above two-fold loss Hubli will be the poorer. Even if some people think of erecting new buildings on the proposed site huge amount of material will have to be brought especially corrugated iron-sheets, steel-beams, angle irons and enormous quantity of other things at high price from outside, which is locally unproduceable and unavailable. To that extent would Hubli be poorer as money will be drained off from here!

Again is there any assurance that the present cotton trade will not be adversely affected in any way by the shifting of the market? None. In my opinion if the market is shifted to a site doubtful about its suitability, Hubli's cotton trade may decline. The Godown rent, chargeable to the cultivator will have to be necessarily increased, by the Dalals, due to rise in their initial building investment, or due to heavy rent that they would be made to pay There are already other markets gradually rising up outside Hubli and each of them may take away some share even from the existing cotton business in this city. It is undeniable that on this business mainly depend all other trades so much so that a year of decline in Hubli's cotton dealings directly brings down all other kinds of business.

When such is the case we have to take a warning from the above before considering any step towards the shifting of the market.

ಇದು ಅಪಾಯಕರವಲ್ಲವೇ?

ಹತ್ತಿ ವ್ಯಾಪಾರಸ್ಥರು ಬಲಗೊಳ್ಳುತ್ತಿರುವರೇ?

ಅವರು ಹೊಸ ಭಾರಗಳನ್ನು ಹೊರಬಲ್ಲರೇ?

ಲೇ:- ಶ್ರೀ. ಆರ್. ಎಲ್. ಅಮಟೆ, ಬಿ ಎ, ಎಲ್ಎಲ್. ಬಿ. ಹುಬ್ಬಳ್ಳಿ.

ಕಾಟನ್ ಮಾರ್ಕೆಟ್ಟು ಅದರ ಸದ್ಯದ ಸ್ಥಳದಿಂದ ಕಿತ್ತಲ್ಪಡುವುದಿದೆಯೆಂಬುದನ್ನು ಕೇಳಿದೊಡನೆ ನನ್ನ ಮುಂದೆ ಮೂರು ಸಮಸ್ಯೆಗಳು ತಲೆದೋರುತ್ತವೆ:—

೧) ದಲಾಲರ ಮತ್ತು ಹುಬ್ಬಳ್ಳಿಯಲ್ಲಿಯ ಹತ್ತಿಯ ವ್ಯಾಪಾರಕ್ಕೆ ಸಂಬಂಧಪಟ್ಟವರು, ಹೊಸ ಸಾಹಸದ ವೆಚ್ಚವನ್ನು ಹೊರುವ ಸ್ಥಿತಿಯಲ್ಲಿರುವರೇ?

೨) ಕಟ್ಟಡಗಳ, ಗುದಾಮುಗಳ, ಪೆಡ್ಡುಗಳ ರೂಪದಲ್ಲಿ ಸದ್ಯದ ಮಾರ್ಕೆಟ್ಟಿಗಾಗಿ ವೆಚ್ಚ ಮಾಡಿದ ಹಣವನ್ನು ಅವುಗಳನ್ನು ಕೆಡವಿಬಿಟ್ಟು ಹಾಳು ಮಾಡಿದರೆ, ಮತ್ತು ಹೊಸ ಸ್ಥಳದಲ್ಲಿ ಅವುಗಳನ್ನು ಹೊಸದಾಗಿ ಕಟ್ಟುವುದಕ್ಕೆ ಪುನಃ ದುಡ್ಡನ್ನು ಹಾಕಿದರೆ ಏನು ಪ್ರಯೋಜನ?

೩) ಪಟ್ಟಣದ ಸಾಮಾನ್ಯ ಏಳ್ಗೆಯ ಮೇಲೆ ಅದರ ಪರಿಣಾಮವೇನಾಗುವುದು?

ಮೇಲಿನ ಪ್ರಶ್ನೆಗಳಲ್ಲಿ ಒಂದೊಂದನ್ನೇ ತೆಗೆದುಕೊಂಡು ನಾನು ಉತ್ತರ ಕೊಡುತ್ತೇನೆ.

ಮೊದಲನೇದರ ಬಗ್ಗೆ ಯಾರೂ ಸಂಶಯಪಡಬೇಕಾದುದಿಲ್ಲ. ಈ ಭಾಗಗಳಲ್ಲಿ ವಿಶೇಷತಃ ಹುಬ್ಬಳ್ಳಿಯಲ್ಲಿ ಹತ್ತಿಯ ವ್ಯಾಪಾರಕ್ಕೆ ಒಟ್ಟಿನ ಮೇಲೆಯೇ ಹಾನಿತಟ್ಟಿದೆ. ದಲಾಲರು ಮತ್ತು ಇದಕ್ಕೆ ಸಂಬಂಧಪಟ್ಟ ಇತರರು ಆರ್ಥಿಕ ಸಂಕಟಕ್ಕೀಡಾಗಿದ್ದಾರೆ. ವಿಶ್ವಾಸದಿಂದ ಅವರನ್ನು ಕೇಳಿದರೆ ತಮ್ಮ ಕಥೆಯನ್ನು ಅವರು ಹೇಳುವರು. ಅವರ ಶೋಚನೀಯ ವಿಷಯದ ಸ್ಪಷ್ಟವಾದ ಉದಾಹರಣೆಗಳು ನನ್ನ ಕಡೆಗಿವೆ. ಸದ್ಯದ ಮಾರ್ಕೆಟ್ಟಿನಲ್ಲಿ ನನ್ನ ಸ್ವಂತದ ಗುದಾಮು ನಾನು ಬಾಡಿಗೆಯಿಂದ ತೆಗೆದುಕೊಳ್ಳಲ್ಪಟ್ಟ ಬೈಲು ಸ್ಥಳವೂ ಉಂಟು. ೧೯೨೩ ನೇ ಇಸ್ವಿಯಲ್ಲಿ ಮತ್ತು ಇದಕ್ಕೂ ಮೊದಲು ಓರ್ವ ದಲಾಲರು ಅದಕ್ಕೆ ವರ್ಷಕ್ಕೆ ೫೦೦ ರೂಪಾಯಿ ಬಾಡಿಗೆ ಕೊಡುತ್ತಿದ್ದರು. ಆಮೇಲೆ ಆ ಗುದಾಮೂ ಬೈಲು ಸ್ಥಳವೂ ಪ್ರತಿವರ್ಷ ೩೦೦ ರೂ.ಯ ಬಾಡಿಗೆಯನ್ನು ಮಾತ್ರ ಕೊಡುತ್ತಿವೆ. ಇದಕ್ಕೆ ದಲಾಲರ ತೀರ ಕನಿಷ್ಟವಾದ ಆರ್ಥಿಕ ಪರಿಸ್ಥಿತಿಯು ಕಾರಣವಾಗಿದೆ. ಅವರು ಹಿಂದಿನಂತೆ ಬಾಡಿಗೆಯನ್ನು ಸಹ ಕೊಡುವುದಕ್ಕೆ ಸಮರ್ಥರಾಗಿಲ್ಲ. ಈ ನೂರು ನೂರು ರೂಪಾಯಿಗಳ ಭಾರವನ್ನು ಹೊರುವುದಕ್ಕೆ ಓರ್ವರೇ ದಲಾಲರಿಗೆ ಆಗದ್ದರಿಂದ ಅವರು ಆದರ ಒಂದು ಭಾಗವನ್ನು ಬೇರೊಬ್ಬರಿಗೆ ಬಾಡಿಗೆಗೆ ಕೊಟ್ಟುಕೊಂಡಿದ್ದಾರೆ.

ಇಂತಹ ಉದಾಹರಣೆಯು ಇದೊಂದೇ ಎಂದಲ್ಲ; ಈ ಮಾರ್ಕೆಟ್ಟಿನಲ್ಲಿಯ ಇತರರಲ್ಲಿಯ ಅನೇಕರ ಪರಿಸ್ಥಿತಿಯು

೨೨ ನೇ ಪುಟ ನೋಡಿರಿ

Removal Beneficial

"Well-Designed Market An Ornament & A Necessity"

Mr. D. G. Madiman one of the five representatives of Dalals sent the following letter to the Collector as he could not personally be present. -Editor

At the outset, I may make it clear that my personal interests are not in any way involved in this case and I look at the subject purely from the point of prosperity of cotton trade of this place and the well-being of cultivators

I am emphatically of the opinion that the whole planning of the present cotton market is antiquated and badly needs recasting; but cramped space does not admit it. The godowns have been located in a haphazard manner and without any deliberate planning. Most of them are over quarter of a century old, and being of **Kutcha** material it is high time that they were pulled down and rebuilt. Mud huts is the description which some of the godowns call for. Few godowns have enough accommodation with the result that when the season is at its height, the cotton and cuppas docras have to be stacked in places not intended for the purpose, namely, verandahs and the open space in front of the godowns thus exposing the goods to the ravages of the elements and to pilfering. None of the godowns have walled compounds where the cultivators who bring their goods for sale can "park" their carts, tether their bullocks, and themselves squat or lie at ease after a tired journey from their villages. The lack of space is so keenly felt that many Dalals carry on with godowns of corrugated iron sheets put up on the low lying, marshy place on the bank of the Gulkavva Tank, which does much to spoil the quality of goods stored there. Only lately these latter D als have been served with notices by Hubli Municipality to vacate the plots of land on which the godowns are put up, as the whole site is being prepared for playground for school boys. This has placed the Dalals in an unenviable position as they can find no suitable plots of land any where in the neighbourhood for putting up their godowns. For want of space some Dalals have been renting extra godowns, at very high rates, in ginning and pressing factories (which are not working) far removed from the market place. By all this it is the poor cultivator who is ultimately hit, as it is he who is saddled for no fault of his, with all expenses which the Dalals incur. Another thing is, the present market is practically in the heart of the City, thus greatly adding to the congestion of traffic in season.

For a trade which is the backbone of the City's prosperity, a well designed market is an ornament and a necessity. The new site chosen is in my opinion well suited for bold planning as it has unlimited area. Commodious godowns, each with a walled compound, and situated at safe intervals, can be built there. This will also contribute its quota to the scheme of extending and beautifying the City which the Municipal Administration has taken in hand. No inconvenience will, I am sure, be felt, by removing the market to the new site, in point of ginning and pressing, since there are as many ginning and pressing factories around the new site as there are near the present site The proximity of a pressing or a ginning factory to the market is not the only consideration which brings work to the factory. Even now, factories farther away from the market are often times more busy than those near the market. It is the rebate allowed by the management of a factory which in most cases brings work to the Factory. Generally, the factories situated farther away offer more rebate to neutralise any disadvantages caused to their constituents by way of their having to incur more cartage etc. By removing the market to the new site, no extra cartage will be incurred by cultivators either, as they mostly bring the goods for sale in their own carts, and even in the case of hired carts, as they come from a distance of many miles, covering a few hundred yards more to the new market than at present will be of no account It may also be argued that the new site is more distant from the bazaar and that the cultivators coming to this market will be inconvenienced in having to walk a longer distance for buying their necessities of life. But it is true that Shops exist for the people and not vice versa. Where hundreds of people assemble and where opportunities abound of doing business, Shops and other amenities will spring up overnight. In course of time there will grow up a new town as new houses are built and people move to stay there, thus relieving the congestion in the City. It is heard, but I doubt it, that the new site is infested by white ants. But even this danger can be easily overcome by taking necessary precautions, as has been done on the present site.

Some tend to express the opinion that arrivals of cuppas and cotton to this market will decline by ahe removal of the market to the new site While I do not wish to go into the motives with which they are actuated, I can say with certainty that the removal by itself will not and cannot affect arrivals of goods to this market. For the last many years, arrivals have been steadily declining and one of the main reasons for this is that pressing factories have been started and marketing facilities have been provided even in the smaller places, such as Nargund, Savanur, Haveri, Ranebennur and last but not least Dharwar Another reason has been the unreasonably high ginning and pressing rates prevailing at Hubli. The actual cost incurred for pressing a bale is only Rs 2—8—0, against which the Press Factory owners were charging Rs. 5—8—0 per bale to their constituents, which exhorbitant rate was further increased to Rs. 7—4—0 on the outbreak of war on the ground that prices of pressing materials had gone up. The Press Factory owners could extort like this by forming a Pool Combination among themselves, which enabled even those who did not care to work their Factories to earn by way of their share in the Pool money not less than Rs. 8000/- per year each. The Gin Factory owners also have formed a like combination and through this a gin factory owner even by keeping his factory silent could earn as much as Rs. 175/- per gin on the total number of gins in the factory, per year. This Policy of Gin and Press Factory owners ultimately hit the cultivator, because the Buyer (exporter), in order to offset the high pressing and ginning charges, naturally offered a lower rate for the cultivator's stuff than he would otherwise have done. It is only at the end of 1939—40 season, the Press Factory owners compelled to reduce their pressing charges to Rs. 4—4—0 per bale (along with them the gin factory owners have reduced the gin ning charges to Rs. 4—10—(per nug) because a new Pressing Factory has been started a Dharwar, the owner of which refused to join the Pool Combination and offered to the constituents a reasonable pressing rate So much injury has been caused by this extortionist policy of the local Gin and Press Factory owners that the surrounding markets have prospered at the cost of this market and as an instance I may quote the Gadag market which year after year attracted more goods of cultivators and it now surpasses even Hubli market. It is my opinion therefore that in the interests of the cotton trade of this place, the Government should fix the upper limit of Ginning and Pressing Rates.

In conclusion, I also wish to say that should it be finally decided to shift the market to the new site, the Government should recommend to the Municipality to pay reasonable compensation to those who now own standing godowns on the present site. It will also greatly help matters if the Municipality undertakes to build godowns for the Dalals on the new site recovering half the estimated building cost in a lump sum

See page 10

ಸ್ಥಳಾಂತರವು ಲಾಭಕರವು

ಸುಯೋಜಿತ ಮಾರ್ಕೆಟು ಭೂಷಣಾವಹವು, ಅವಶ್ಯಕವು

ದಲಾಲರ ಜನರು ಪ್ರತಿನಿಧಿಗಳಲ್ಲಿ ಓರ್ವರಾದ ಶ್ರೀ ಡಿ. ಜಿ. ಮಡಿಮನ್ನ ಇವರಿಗೆ ಕಲೆಕ್ಟರರಕಡೆಗೆ ಸ್ವತಃ ಹೋಗಲು ಆಗಲಿಲ್ಲವಾದ್ದರಿಂದ ಈ ಕೆಳಗಿನ ಪತ್ರವನ್ನು ಇಂಗ್ರಜಿಯಲ್ಲಿ ಅವರಕಡೆಗೆ ಕಳುಹಿಸಿದರು. —ಸಂಪಾದಕರು

ಈ ವಿಷಯದಲ್ಲಿ ನನ್ನ ವೈಯಕ್ತಿಕ ಸಂಬಂಧವು ಏನೂ ಇರುವದಿಲ್ಲವೆಂದೂ ಕೇವಲ ಈ ಊರ ಕಾಟನ್ ವ್ಯಾಪಾರದ ಅಭಿವೃದ್ಧಿ ಮತ್ತು ರೈತರ ಕಲ್ಯಾಣಗಳ ದೃಷ್ಟಿಯಿಂದ ಇದರ ಕಡೆಗೆ ನಾನು ನೋಡುವವನಾಗಿರುವೆನೆಂದೂ ಪ್ರಾರಂಭದಲ್ಲಿ ಸ್ಪಷ್ಟಮಾಡಬಯಸುತ್ತೇನೆ.

ಸದ್ಯದ ಕಾಟನ್ ಮಾರ್ಕೆಟ್ಟಿನ ರಚನೆಯು ಪ್ರಾಚೀನ ಕಾಲದ್ದಿರುವುದೆಂದೂ ನಾನು ದೃಢವಾಗಿ ಅಭಿಪ್ರಾಯಪಡುವವನಾಗಿದ್ದೇನೆ ಆದರೆ ನಿರ್ಬಂಧನೆಗೆ ಒಳಪಟ್ಟಂತಹ ಸ್ಥಳದಲ್ಲಿ ಅದು ಯಶಸ್ವಿಯಾಗಲಾರದು ಗುದಾಮುಗಳು ಯಾವುದೇ ಪೂರ್ವ ಆಲೋಚನೆಯ ಯೋಜನೆಯಿಲ್ಲದ ಬೇಕಾದ ಹಾಗೆ ಕಟ್ಟಲ್ಪಟ್ಟವೆ ಅವುಗಳಲ್ಲಿಯ ಬಹಳ ಕಟ್ಟಡಗಳು ೫೫ ವರ್ಷಗಳ ಹಿಂದಿನವೂ ಕಲ್ಲು ಮಣ್ಣಿನ (ಕಚ್ಚಾ) ವು ಇದ್ದು ಇವ್ಹರಲ್ಲಿಯೇ ಅವು ಕೆಡವಲ್ಪಟ್ಟು ಪುನಃ ಕಟ್ಟಲ್ಪಡ ಬೇಕಾಗಿತ್ತು. ಕೆಲವು ಗುದಾಮುಗಳು ಮಣ್ಣಿನ ಗುಡಿಸಲುಗಳು ಎಂದೆನಿಕೊಳ್ಳಲು ಯೋಗ್ಯವಾಗಿವೆ ಸಾಕಷ್ಟು ಸ್ಥಳವು ಸ್ವಲ್ಪೇ ಗುದಾಮುಗಳಲ್ಲಿ ಮಾತ್ರ ಇದೆ ಆದ್ದರಿಂದ ಭರ ವ್ಯಾಪಾರದ ಕಾಲದಲ್ಲಿ, ಹತ್ತಿ ಆರಳೆಯ ಅಂಡಿಗೆಗಳು ಕಟ್ಟಿ, ಗುದಾಮುಗಳ ಮುಂದಿನ ಬೈಲುಗಳಂತಹ ಇಡಬಾರದ ಸ್ಥಳದಲ್ಲಿ ಒಟ್ಟಲ್ಪಡುತ್ತವೆ ಹೀಗೆ ಒಡಲ್ಪಟ್ಟ ಹತ್ತಿ ಅಥವಾ ಆರಳೆಯು ನಿಸರ್ಗಜನ್ಯವಾದ ಹಾನಿಗೆ ಮತ್ತು ಕಳವುಗಳಿಗೆ ಗುರಿಯಾಗುವುದು ಹತ್ತಿಯನ್ನು ಮಾರಾಟಕ್ಕಾಗಿ ತರುವ ರೈತರು ತಮ್ಮ ಚಕ್ಕಡಿಗಳನ್ನು ಬಿಡಲಿಕ್ಕೆ, ಎತ್ತುಗಳನ್ನು ಕಟ್ಟಲಿಕ್ಕೆ ಹಳ್ಳಿಗಳಿಂದ ಪ್ರವಾಸಮಾಡಿದ ಮೂಲಕ ಆದ ದಣುವು ಆರಿಸಿಕೊಳ್ಳಲು ಕೂಡ್ರಲಿಕ್ಕೆ ಇಲ್ಲವೆ ಅಡ್ಡಾಗಲಿಕ್ಕೆ ಸ್ಥಳದ ಅನುಕೂಲ ಮಾಡಿಕೂಡೋಣವೆಂದರೆ ಯಾವ ಗುದಾಮುಗಳಿಗೂ ಗೋಡೆಗಳಿಂದ ಆವರಿಸಲ್ಪಟ್ಟ ಪ್ರದೇಶವಿಲ್ಲ ಸ್ಥಳದ ಸಂಕೋಚವು ಬಹಳವಿದ್ದದ್ದರಿಂದ, ಎಷ್ಟೋ ದಲಾಲರು, ಗುಮಾಸ್ತನ ಕರಯ ದಂಡೆಯ ಮೇಲೆ, ತಗ್ಗಾದ ಮತ್ತು ತಂವುಳ್ಳ ಸ್ಥಳದಲ್ಲಿ ತಗಡಿನ ಗುದಾಮುಗಳನ್ನು ಕಟ್ಟಿಕೊಂಡು ಕೆಲಸ ಸಾಗಿಸುತ್ತಾರೆ ಅಲ್ಲಿ ಇಟ್ಟ ಸರಕಿನ ತರಗತಿಯು ಕೆಡುವುದಕ್ಕೆ ಒಹಳ ಆಸ್ಪದವಿರುತ್ತದೆ ಅದೆಲ್ಲ ಸ್ಥಳವನ್ನು ಶಾಲೆ ಹುಡುಗರಿಗೆ ಆಟವಾಡುವುದಕ್ಕಾಗಿ ಬಿಡ್ಡ ಮಾಡುವವರಿದ್ದವ್ದರಿಂದ, ಅಲ್ಲಿ ಹೊಸ ಗುದಾಮುಗಳನ್ನು ತೆಗೆಯಬೇಕೆಂದು ದಲಾಲರಿಗೆ ಹುಬ್ಬಳ್ಳಿ ಮ್ಯುನಸಿಪಾಲಿಟಿಯವರು ಮೊನ್ನೆ ಮೊನ್ನೆ ತಿಳಿಸಿದ್ದಾರೆ ಸುತ್ತು ಮುತ್ತಲಿನಲ್ಲಿ ಎಲ್ಲಿಯೂ ಗುದಾಮುಗಳನ್ನು ಕಟ್ಟಲು ದಲಾಲರಿಗೆ ಜಕ್ಕ ಸ್ಥಳ ಗಳು ಸಿಗುವಂತಿಲ್ಲದ್ದರಿಂದ ಅವರಿಗೆ ಆ ಮೂಲಕ ಬಹಳ ಕಷ್ಟಮಯ ಸ್ಥಿತಿ ಯುಂಟಾಗಿದೆ ಸ್ಥಳದ ಅಭಾವದ ಮೂಲಕ, ಕೆಲವು ದಲಾಲರು, ಮಾರ್ಕೆಟ್ಟಿನಿಂದ ದೂರವಿರುವ ಮತ್ತು ಕೆಲಸ ವಿಲ್ಲದೆ ಇರುವ ಜಿನ್ನಿಂಗ ಮತ್ತು ಪ್ರೆಸಿಂಗ್ ಫ್ಯಾಕ್ಟರಿಗಳೆಲ್ಲಿ ಬಹಳ ಹೆಚ್ಚಿನ ಬಾಡಿಗೆ ಕೊಟ್ಟು ಹೆಚ್ಚು ಗುದಾಮುಗಳನ್ನು ಹಿಡಿಯುತ್ತಿದ್ದಾರೆ ಇದರಿಂದ ಕೊನೆಯಲ್ಲಿ ಬಡ ರೈತನಿಗೆ ಪೆಟ್ಟು ಕೂಡುತ್ತದೆ. ದಲಾಲರಿಗೆ ಬರುವ ಎಲ್ಲ ವೆಚ್ಚವನ್ನು ಏನೂ ಕಾರಣವಿಲ್ಲದೆ ಅವರು ಹೊರಬೇಕಾಗುತ್ತದೆ ಮತ್ತೊಂದು ವಿಷಯವೆಂದರೆ, ಸದ್ಯದ ಮಾರ್ಕೆಟ್ಟು ಪಟ್ಟಣದ ಮಧ್ಯದಲ್ಲಿರುವುದರಿಂದ, ಸುಗ್ಗಿಯ ಕಾಲದಲ್ಲಿಯ ಓಡಾಟವು ಮತ್ತಿಷ್ಟು ದಟ್ಟಣೆಯುಳ್ಳದ್ದಾಗುವುದಕ್ಕೆ ಕಾರಣವಾಗುತ್ತದೆ

ಪಟ್ಟಣದ ಅಭಿವೃದ್ಧಿಯ ಮೂಲವಾದ ವ್ಯವಹಾರಕ್ಕಾಗಿ ಒಂದು ಚನ್ನಾದ ಯೋಜನೆಯಿಂದ ಸಿದ್ಧವಾದ ಪೇಟೆ (ಮಾರ್ಕೆಟ್ಟು) ಯಿರುವುದು ಭೂಷಣಾಸ್ಪದವೂ ಅವಶ್ಯಕವೂ ಆಗಿದೆ ಆರಿಸಲ್ಪಟ್ಟ ಹೊಸ ಸ್ಥಳವು ಅಮರ್ಯಾದಿತವಾಗಿ ವಿನ್ಯಾರವಾಗಿರುವುದರಿಂದ ಬೇಕಾದಂತಹ ಯೋಜನೆಯನ್ನು ಕೈಕೊಳ್ಳುವುದಕ್ಕೆ ತೀರ ಯೋಗ್ಯವಾಗಿದೆಯೆಂದು ನನ್ನ ಅಭಿಪ್ರಾಯವಿದೆ. ವಿಶಾಲದಾದ ಆವಾರದ ಗೋಡೆಗಳುಳ್ಳ, ಸಂರಕ್ಷಣೆಗೆ ಅನುಕೂಲವಾದಷ್ಟು ನಡುವೆ ಸ್ಥಳಗಳನ್ನು ಬಿಟ್ಟು ಗುದಾಮುಗಳನ್ನು ಅಲ್ಲಿ ಕಟ್ಟಬಹುದು. ಮ್ಯುನಸಿಪಾಲಿಟಿಯವರು ಕೈಕೊಂಡ ಪಟ್ಟಣದ ವಿಸ್ತರೀಕರಣ ಮತ್ತು ಸೌಂದರ್ಯವರ್ಧನೆಯ ಕಾರ್ಯಕ್ಕೆ ಇದರಿಂತ ಅಂಶತಃ ಸಹಾಯವಾಗುವುದು ಹತ್ತಿಯನ್ನು ಆರಯುವ ಮತ್ತು ಗಂಟು ಕಟ್ಟುವುದಕ್ಕೆ ಈಗಿನ ಮಾರ್ಕೆಟ್ಟನ್ನು ಹೊಸ ಸ್ಥಳಕ್ಕೆ ಒಯ್ಯುವುದರಿಂದ ಯಾವುದೇ ತರಹದ ಅನಾನುಕೂಲತೆಯು ನಿಶ್ಚಯವಾಗಿ ಆಗಲಾರದು ಯಾಕಂದರೆ, ಇಂದಿನ ಮಾರ್ಕೆಟ್ಟಿನ ಸುತ್ತಲೂ ಇರುವಂತೆ ಹೊಸ ಸ್ಥಳದ ಸುತ್ತಲೂ ಕೂಡ ಅಷ್ಟೇ ಜಿನ್ನಿಂಗ ಮತ್ತು ಪ್ರೆಸ್ಸಿಂಗ ಕಾರಖಾನೆಗಳವೆ ಜಿನ್ನಿಂಗ ಮತ್ತು ಪ್ರೆಸ್ಸಿಂಗ ಫ್ಯಾಕ್ಟರಿಗಳು ಮಾರ್ಕೆಟ್ಟಿನ ಹತ್ತರ ಇದ್ದ ಮಾತ್ರ ಕ್ಕೇನೇ ಅವುಗಳಿಗೆ ಕೆಲಸವು ಸಿಗುತ್ತ ದೆಂದು ಹೇಳಲು ಬರಲಾರದು ಇಂದು ಕೂಡ, ಮಾರ್ಕೆಟ್ಟಿನ ಹತ್ತರಿರುವ ಕಾರ ಖಾನೆಗಳಿಗಿಂತ ದೂರ ಇರುವಂಥವುಗಳಿಗೆ ಅನೇಕ ಸಲ ಹೆಚ್ಚು ಕೆಲಸವು ದೊರೆಯುತ್ತದೆ ಫ್ಯಾಕ್ಟರಿಗಳು ಕೊಡುವ ಮುರಿತ (ರಿಬೇಟು) ದ ಹಣದ ಮೂಲಕನೇ ಅವುಗಳಿಗೆ ಬಹಳ ಸಲ ಕೆಲಸವು ದೊರೆಯುತ್ತಿರುತ್ತದೆ ಸಾಮಾನ್ಯವಾಗಿ ದೂರ ಇರುವ ಫ್ಯಾಕ್ಟರಿಗಳು, ತಮ್ಮಲ್ಲಿಗೆ ಬರುವವರಿಗೆ ಹತ್ತುವ ಹೆಚ್ಚಿನ ಚಕ್ಕಡಿ ಬಾಡಿಗೆ ಮೊದಲಾದವುಗಳ ನಿವಾರಣೆಗಾಗಿ ಹೆಚ್ಚು ಮುರಿತವನ್ನು ಕೊಡುವವು ಮಾರ್ಕೆಟ್ಟನ್ನು ಹೊಸ ಸ್ಥಳಕ್ಕೆ ಒಯ್ದರೆ ರೈತರಿಗೆ ಹೆಚ್ಚಿನ ಚಕ್ಕಡಿ ಬಾಡಿಗೆಯು ಬರುವುದಿಲ್ಲ ಯಾಕಂದರೆ, ಅವರು ಬಹುತರ ತಮ್ಮ ಗಾಡಿಗಳಲ್ಲಿಯೇ ಸರಕನ್ನು ತರುವರು ಒಂದು ನೇಳೆ ಅವರು ಬಾಡಿಗೆ ಚಕ್ಕಡಿಗಳಲ್ಲಿ ತಂದರೂ, ಅನೇಕ ಮೈಲುಗಳ ದೂರದಿಂದ ಬರುವ ಆ ಚಕ್ಕಡಿಗಳು ಇಂದಿನ ಮಾರ್ಕೆಟ್ಟಿನಿಂದ ಹೊಸ ಮಾರ್ಕೆಟ್ಟನ ನಡುವಿರುವ ಸ್ವಲ್ಪ ದಾರಿಯನ್ನು ಕ್ರಮಿಸಿದರೆ ಅದರಿಂದ ಏನೂ ಹೆಚ್ಚುಕಡಿಮೆಯಾಗುವುದಿಲ್ಲ ಹೊಸ ಸ್ಥಳವು ಪೇಟೆಯಿಂದ ಹೆಚ್ಚು ದೂರ ಇರುವುದೆಂದೂ ಹೀಗೆ ಬರುವ ರೈತರಿಗೆ ತಮಗೆ ಬೇಕಾಗುವ ಸಾಮಾನುಗಳನ್ನು ಕೊಳ್ಳುವುದಕ್ಕಾಗಿ ಅನನುಕೂಲವಾಗುವುದೆಂದೂ ಅನ್ನಬಹುದು. ಆದರೆ ಜನರಿಗಾಗಿ ಅಂಗಡಿಗಳಿರುವವೇ ವಿನಾ ಅಂಗಡಿಗಳಿಗಾಗಿ ಜನರಿರುವುದಿಲ್ಲವೆಂಬದನ್ನು ಮರೆಯಕೂಡದು ನೂರುಗಟ್ಟಲೆ ಜನರು ಕೂಡುವ ವ್ಯವಹಾರಕ್ಕೆ ಅನುಕೂಲವಾದ ಪರಿಸ್ಥಿತಿ ಇರುವ ಸ್ಥಳದಲ್ಲಿ ಅಂಗಡಿಗಳೂ ಇತರ ಅನುಕೂಲತೆಗಳೂ ಬೆಳಗು ಹರಿಯುವುದರೊಳಗಾಗಿ ಬಂದುನಿಲ್ಲುವವು ಸ್ವಲ್ಪೇ ಅವಧಿಯಲ್ಲಿ, ಅಲ್ಲಿ ಮನೆಗಳು ಕಟ್ಟಲ್ಪಡುವುದರಿಂದ, ಒಂದು ಪಟ್ಟಣವೇ ಸಿದ್ಧವಾಗುವುದು ಅದರಿಂದ ಪಟ್ಟಣದ ದಟ್ಟಣೆಯು ಕಡಿಮೆಯಾಗುವುದು ಹೊಸ ಸ್ಥಳದಲ್ಲಿ ಗೆದ್ದಲಿಗಳ ಹಾವಳಿಯಾಗುವುದೆಂದು ಕೇಳಲ್ಪಡುತ್ತದೆ, ನನಗೆ ಮಾತ್ರ ಹಾಗೆನಿಸುವುದಿಲ್ಲ ಆದರೆ ಇಂದಿನ ಸ್ಥಳದಲ್ಲಿ ಮಾಡಿದಂತೆ, ಅವಶ್ಯಕ ಮುಂಜಾಗ್ರತೆಯ ಉಪಾಯಗಳಿಂದ ಈ ತೊಂದರೆಯನ್ನು ಕೂಡ ನೀಗಬಹುದು

ಹೊಸ ಸ್ಥಳಕ್ಕೆ ಮಾರ್ಕೆಟ್ಟನ್ನು ಒಯ್ಯುವುದರಿಂದ ಹತ್ತಿ ಆರಳೆಗಳ ಬರು ವಿಕೆಯ ಪ್ರಮಾಣವು ಕಡಿಮೆಯಾಗುವುದೆಂದು ಕೆಲವರು ಅಭಿಪ್ರಾಯಪಡುತ್ತಾರೆ ಹೀಗೆ ಅವರು ಅನ್ನುತ್ತಿರುವುದರ ಉದ್ದೇಶದ ಕಡೆಗೆ ನಾನು ನೋಡದೆ ಕೇವಲ ಸ್ಥಳಾಂತರ ಮಾಡುವುದರಿಂದಲೇ ಮಾರ್ಕೆಟ್ಟಿಗೆ ಬರುವ ಸರಕಿನ ಮೇಲೆ ಪರಿಣಾಮವಾಗುವುದಿಲ್ಲ ಮತ್ತು ಆಗ ಲಾರದೆಂದು ನಾನು ಖಂಡಿತ ಹೇಳಬಲ್ಲೆ ಕಳೆದ ಅನೇಕ ವರ್ಷಗಳಿಂದ ಇಲ್ಲಿಗೆ ಬರುವ ಸರಕಿನ ಪ್ರಮಾಣವು ಒಂದೇ ಸವನೇ ಕಡಿಮೆಯಾಗುತ್ತಿದೆ ಇದಕ್ಕೆ ಇರುವ ಕಾರಣಗಳಲ್ಲಿ ಮುಖ್ಯವಾದುದಂದರೆ, ಇದಕ್ಕೂ ಸಣ್ಣ ಸ್ಥಳಗಳಾದ ನರಗುಂದ, ಸವಣೂರ್, ಹಾವೇರಿ, ರಾಣೇಬೆನ್ನೂರ ಮತ್ತು ಧಾರವಾಡದಂತಹ ಊರುಗಳಲ್ಲಿ ಗಂಟು ಕಟ್ಟುವ ಕಾರಖಾನೆಗಳು ಫ್ಯಾರಂಭಿಸಲ್ಪಟ್ಟವೆ ಮತ್ತು ವ್ಯಾಪಾರದ ಸೌಕರ್ಯಗಳು ಒದಗಿಸಲ್ಪಟ್ಟವೆ ಅರಿಯುವುದಕ್ಕೆ ಮತ್ತು ಗಂಟು ಕಟ್ಟುವುದಕ್ಕೆ ಹುಬ್ಬಳ್ಳಿಯಲ್ಲಿ ತೆಗೆದುಕೊಳ್ಳುತ್ತಿರುವ ಅಸಮಂಜಸ ಪ್ರಮಾಣದ ದುಡ್ಡೇ ಮತ್ತೊಂದು ಕಾರಣವಾಗಿದೆ ಒಂದು ಗಂಟನ್ನು ಕಟ್ಟುವುದಕ್ಕೆ ನಿಜವಾಗಿ ರೂ ೨-೮-೦ ವೆಚ್ಚವು ಬರುತ್ತದೆ. ಆದರೆ ಇಲ್ಲಿಯ ಫ್ಯಾಕ್ಟರಿಯವರು ಅದಕ್ಕೆ ರೂ. ೫-೮-೦ ತೆಗೆದುಕೊಳ್ಳುತ್ತಿದ್ದರು ಅದನ್ನು ಮುಂದೆ ರೂ ೭-೪-೦ ಗೆ ಏರಿಸಿದರು ಯುದ್ಧದ ಮೂಲಕ ಈ ಸಂಬಂಧವಾದ ಯಾಂತ್ರಿಕ ಸಲಕರಣೆಗಳ ಬೆಲೆಯು ಏರಿದೆಯೆಂದು ಅದಕ್ಕೆ ಕಾರಣ ಹೇರಿಸಿದರು ಮೂಲ ಕಾಂಬಿನೇಶನ್ ಎಂಬ ಒಂದು ಸಂಘವನ್ನು ಮಾಡಿಕೊಂಡದ್ದರಿಂದ ಪ್ರೆಸ್ಸುಗಳ ಒಡೆಯರು ಹೀಗೆ ಹಣವನ್ನು ಸೆಳೆಯುವುದಕ್ಕೆ ಅನುಕೂಲವಾಯಿತು ಈ ಸಂಘದಲ್ಲಿ ಪ್ರತಿಯೊಬ್ಬರು ವರ್ಷಕ್ಕೆ ೮೦೦೦ ರೂಪಾಯಿಗಳಿಗೆ ಕಡಿಮೆಯಾಗದಷ್ಟು ಹಣವನ್ನು ಆದರ ಸಭಾಸದರಾಗಲು ಕೊಡಬೇಕಾಗುತ್ತಿತ್ತು ತಮ್ಮ ಫ್ಯಾಕ್ಟರಿಗಳನ್ನು ನಡೆಯಿಸದಿದ್ದರೂ ಸಂಘದ ಮೂಲಕ

ಇನ್ನೂ ಪುಟ ನೋಡಿರಿ

Removal Beneficial

From page 9

before the work is actually taken in hand, and the reamainin amount of cost by easy instalments later

I understand that you Honour has asked the Press Factory owners to send their five representatives to discuss the matter of the shifting of the market For aught I know, the persons selected represent only one shade of opinion, as there are divergent views on the subject among Press Factory owners also I also think that the opinion of the Press Factory owners should not count for much in this, as they are not directly connected with the interests of the cultivators and any opinion they may give is sure to be actuated only by selfish motives

New Site.

AN IDEAL PLACE

We give below the representation made to the Colletor by Messrs. C. M. Handigolmath, G. S. Neeli, L. Patil, Khimji and V. D. Manvi on 21st of January 1941. -Editor

We the representatives of some ginning and pressing factories of Hubli propose that the present cotton market should be shifted to the new site for the following grounds:-

1. The present cotton market site being in the centre of the city is exposed to risks of fire.

2. There are dwelling houses round about the present cotton market and if there is any fire there is no safety for those houses and inmates. In fact the present cotton market is in the centre of the city.

3. We know that there are innumerable rats in the kappas go-downs in the cotton market At a time when plague is prevalent in the city the cotton market being in the centre of the city is dangerous to the health and safety of the people.

4 The present cotton market cannot accommodate the big cotton trade of the city. In the present market there is no space at all for the villagers or cotton growers to park their carts and bullocks after the docras are unloaded. The dalals engage every year go downs of the surrounding factories for major period of the year to store their cotton and kappas docras. (See page 15)

ಸ್ಥಳಾಂತರಿಸುವುದೇ ಯೋಗ್ಯವು

ಲೇ: ಶ್ರೀ. ಚಿಕ್ಕವೀರಯ್ಯನವರು ಚಿಕ್ಕನೀರಮಠ ಹುಬ್ಬಳ್ಳಿ

ಹುಬ್ಬಳ್ಳಿಯ ಕಾಟನ್ ಮಾರ್ಕೆಟ್ಟನ್ನು ಈಗಿದ್ದ ಸ್ಥಳದಿಂದ ಸ್ಥಳಾಂತರಿಸಬೇಕೆಂದು, ಅನೇಕ ಪ್ರಮುಖ ವ್ಯವಹಾರಸ್ಥರೂ ಸುತ್ತಮುಮ್ಮಲಿನ ರೈತ ಜನರೂ ಪ್ರಯತ್ನಿಸುತ್ತಿರುವುದು ಸರ್ವಶ್ರುತವಷ್ಟೇ? ಇದಕ್ಕೆ ವಿರೋಧವಾಗಿ ಕೆಲ ವ್ಯವಹಾರಸ್ಥರೂ ಕಾರಖಾನೆ ಮತ್ತು ಕಟ್ಟಡಗಳಲ್ಲಿ ಹಣ ತೊಡಗಿಸಿದ ಭಾಂಡವಲು ಗಾರರೂ ಮಾರ್ಕೆಟ್ಟಿನ ಸ್ಥಳವು ಇದ್ದಲ್ಲಿಯೇ ಇರಬೇಕೆಂದು ವಾದಿಸುತ್ತಿರುವುದೂ ಬೈಲಿಗೆ ಬಂದಿದೆ. ಈ ಎರಡು ಪಕ್ಷದವರ ಅಭಿಪ್ರಾಯದಲ್ಲಿ ಹೋಲಿಕೆ ಇರಲಾರದು.

ಈಗಿದ್ದ ಮಾರ್ಕೆಟ್ಟಿನ ಸುತ್ತಲೂ ಕಾರಖಾನೆಗಳನ್ನು ಕಟ್ಟುವಾಗ್ಗೆ ಊರು ಇಷ್ಟೊಂದು ಭರಾಟೆಯಿಂದ ಬೆಳೆದು ಕಾರಖಾನೆ ಹಾಗು ಈಗಿನ ಮಾರ್ಕೆಟ್ಟಿನ ಸ್ಥಳದ ಸುತ್ತಲೂ ಇಷ್ಟೊಂದು ದಟ್ಟಣೆ ಯಾಗುವುದೆಂದು ಯಾರೂ ಎಣಿಸಿದ್ದಿಲ್ಲ. ಈಗ ಊರು ಬೆಳೆದು ಊರಲ್ಲಿರುವ ಜನರಿಗೆ ಸ್ಥಳ ಸಾಕಾಗದಂತೆ ಆಗಿದೆ. ಆದ್ದರಿಂದ ಈಗಿದ್ದ ಸ್ಥಳದಿಂದ ಕಾಟನ್ ಮಾರ್ಕೆಟ್ಟಿನ ಸ್ಥಳವನ್ನು ಊರ ಹೊರಗೆ ಒಯ್ಯುವುದು ಪಟ್ಟಣದ ಸಾರ್ವತ್ರಿಕ ಹಿತದ ದೃಷ್ಟಿಯಿಂದ ಯೋಗ್ಯವಿದೆಯೆಂದು ಹೇಳಬಹುದು.

ಲಕ್ಷಗಟ್ಟಲೆ ಮುಡ್ಡು ಹಾಕಿ ಕಾರಖಾನೆಗಳನ್ನು ಕಟ್ಟಿಸಿದ ಬಾಂಡವಲಗಾರರಿಗೆ, ಮಾರ್ಕೆಟ್ಟಿನ ಸ್ಥಳವು ಕಾರಖಾನೆಗಳಿಂದ ದೂರ ಹೋಗುವದರಿಂದ ಹತ್ತಿ ಆರೆಯಿಸುವ ಹಾಗು ಗಂಟು ಕಟ್ಟಿಸುವ ಗಿರಾಕಿಗಳೂ ಕಡಿಮೆಯಾಗಬಹುದೆಂದು ಅನ್ನಬಹುದು. ಆದರೆ ಕಾಂಬಿನೇಶನ್ ಪದ್ಧತಿಯಿಂದ ಎಲ್ಲರಿಗೂ ಲಾಭವಾಗುವಂತೆ ಮಾಡಬಹುದಲ್ಲವೇ? ಇನ್ನು ಸುತ್ತು ಮುತ್ತಲಿನ ಕಟ್ಟಡಗಳಿಗೆ ಯಾವ ರೀತಿಯಿಂದಲೂ ಬೆಲೆ ಕಡಿಮೆಯಾಗುವದೆಂದು ಅಂಜುವ ಕಾರಣವಿಲ್ಲ. ಏಕಂದರೆ ಈಗಿನ ಸ್ಥಳವು ಎತ್ತರದ ಮೇಲಿದ್ದು ಜನರು ವಾಸಿಸಲು ಯೋಗ್ಯವಾಗಿದೆ ಮತ್ತು ರೇಲ್ವೆ ಸ್ಟೇಶನ್ನಿಗೆ ಸಮೀಪವಾಗಿದೆ. ಆದ್ದರಿಂದ ಅಲ್ಲಿ ಕಟ್ಟಡಗಳಿಗೆ ಸ್ಥಳವು ಮೀಸಲಾಗಿಡಲ್ಪಟ್ಟರೆ ಕಟ್ಟಡಗಳ ಹಾಗು ಸ್ಥಳದ ಬೆಲೆಯು ಏರುವದೆಂದು ಹೇಳಬಹುದು.

ಹೊಸ ಸ್ಥಳವು ಮಧ್ಯ ವಸತಿಯಾಗುವದಿಲ್ಲವೆಂದು ಬ್ಯಾಂಕ, ರೇಲ್ವೆ ಸ್ಟೇಶನ್ ಊಟದ ಮನೆಗಳು ಸಮೀಪವಾಗುವದಿಲ್ಲವೆಂದು ಗೃಹಿಸುವುದು ಭ್ರಮೆಯಾಗಬಹುದು. ಏಕಂದರೆ ಈಗಿನ ಕಾಟನ್ ಮಾರ್ಕೆಟ್ಟು ಹೊಸ ಸ್ಥಳಕ್ಕೆ ಸ್ಥಳಾಂತರಿಸಲ್ಪಟ್ಟರೆ ರೇಲ್ವೆ ಕಂಪನಿಯವರು ಆದ ಕ್ಕಾಗಿಯೇ ಬೇರೊಂದು ಸ್ಟೇಶನ ಕಟ್ಟಿಸಬೇಕೆಂಬ ವಿಚಾರದಲ್ಲಿ ಇರುವರೆಂದು ತಿಳಿದಿದೆ. ಬ್ಯಾಂಕು ಮೊದಲಾದವುಗಳು ಈ ಕಡೆಗೆ ಬರಲೂ ಪ್ರಯತ್ನ ಮಾಡುವವು. ಊಟ ಉಪಹಾರ ಗೃಹಗಳಂತೂ ಬೇಕಾದಷ್ಟು ತರಲ್ಪಡುವವು. ಇದರಿಂದ ಊರು ಬೆಳೆದಂತಾಗಿ ಹುಬ್ಬಳ್ಳಿ ಪಟ್ಟಣದ ಉನ್ನತಿ ಹೆಚ್ಚಿ ಬಡ ಕೂಲಿ ಕಾರರ ವರ್ಗಕ್ಕೆ ಕೂಲಿಕುಂಬಳಿ ಸಿಕ್ಕು ಹೊಸ ಬಾಂಡವಲುಗಾರರಿಗೆ ತಮ್ಮ ದುಡ್ಡನ್ನು ದುಡಿಸಲು ಸಮಯ ದೊರಕೆದಂತಾಗುವುದು. ವ್ಯಾಪಾರಸ್ಥರೂ ಮುಖ್ಯ ದಲಾಲರೂ ತಮ್ಮ ಅಂಗಡಿ ಮತ್ತು ಕಚೇರಿಗಳಿಂದ ದೂರ ಹೋಗ ಬೇಕಾಗುವ ಕಾರಣವೂ ಉಳಿಯುವುದಿಲ್ಲ. ಇಂಥ ವ್ಯಾಪಾರಸ್ಥರಿಗೆ ದಲಾಲರಿಗೆ, ಕಚೇರಿಗಳಿಗೆ ವಸತಿಗಳಿಗೆ ಚಲೋ ಹವೆಯಲ್ಲಿ ಕಟ್ಟಡಗಳು ಕಟ್ಟಲ್ಪಡುವವು. ಈಗ ಊರಲ್ಲಿಯೇ ಮನೆ ಇದ್ದ ವ್ಯಾಪಾರಸ್ಥರಿಗೆ ಸಹ ಹವೆಯಲ್ಲಿ ಹೋಗಿ ಬರಲು ಅನಾಯಾಸವಾಗಿ ಸಮಯ ದೊರೆತಂತಾಗುವದು. ಇದರಿಂದ ಶ್ರೀಮಂತ ವ್ಯವಾಹರಸ್ಥರದೂ ಆರೋಗ್ಯವು ಸುಧಾರಿಸುವುದೆಂದು ಹೇಳಬಹುದಲ್ಲವೇ?

ಹೊಸ ಸ್ಥಳವು ಜವುಳು ಭೂಮಿಯಾಗಿದೆ ಎಂದೂ ಅಲ್ಲಿ ಇರುವಮೂಲಕ ಶೈತ್ಯವೇರುವುದೆಂದೂ ಕೆಲವರು ಹೇಳಬಹುದು. ಇದು ಒಣ ಕಲ್ಪನೆ. ಏಕೆಂದರೆ ಅಲ್ಲಿ ಮುನಸಿಪಲ್ ಬರೋದವರು, ಮಾರ್ಕೆಟ ಸ್ಥಳ ಮಾಡಬೇಕಾದರೆ ಸರಕಾರಿ ಆರೋಗ್ಯಾಧಿಕಾರಿಗಳಿಂದ ಆ ಸ್ಥಳವನ್ನು ಪರೀಕ್ಷಿಸಿ ಎಂಜನಿಯರರಿಂದ ಮಾಲು ಕೆಡದಂತೆಯೂ ತೇವು ಏರದಂತೆಯೂ ಮಾಡಿಸದಿರಲಾರರು. ಸಮುದ್ರವನ್ನು ಹುಗಿದು ಪಟ್ಟಣವನ್ನು ಕಟ್ಟಿಸುತ್ತಿರುವಾಗ, ಇಷ್ಟು ವ್ಯವಸ್ಥೆಯನ್ನು ಮಾಡುವದು ಆಶ್ಚರ್ಯವಲ್ಲ. ಹೊಸ ಮಾರ್ಕೆಟ್ಟು ಸ್ಥಳವು ಹೊಸ ಪದ್ಧತಿಯ ಪ್ರಕಾರ ನಿರ್ಮಿಸಲ್ಪಡುವುದರಿಂದ ರೈತರ ಮಾಲಿಗೆ ಯಾವ ಅಪಾಯವೂ ಆಗದೆ ಈಗಿನ ವಖಾರಗಳಲ್ಲಿಯಕ್ಕಿಂತಲೂ ಸುರಕ್ಷಿತವಾಗಿರಬಹುದು.

ಈಗಿದ್ದ ಮಾರ್ಕೆಟ ಸ್ಥಳವು ಅತಿ ಸ್ವಲ್ಪವಿದ್ದು ಎಷ್ಟೋ ಅಂಗಡಿಗಳು ಗುಳಕನ್ನನ ಕೆರೆಯ ಬೈಲಿನಲ್ಲಿ ಅತಿ ತೆಗ್ಗಾದ ಪ್ರದೇಶದಲ್ಲಿ ಇರುವವು. ಅಲ್ಲಿ ಸ್ವಚ್ಛ ಹವೆಯೂ ಬರುವಂತೆ ಇಲ್ಲ. ಈಗಿನ ಮಾರ್ಕೆಟ್ಟಿನ ಸ್ಥಳವೂ ಚಿಕ್ಕದಿರುವದರಿಂದ ಮಾಲು ತಂದ ರೈತರ ಗಾಡಿಗಳು ನಿಲ್ಲಲು ಬಿಸಿಲು ಮಳೆಗಳಿಂದ ದನ ಕರಗಳನ್ನು ರಕ್ಷಿಸಲು ಯಾವ ವ್ಯವಸ್ಥೆ ಇಲ್ಲ ಈ ಪ್ರಕಾರವಾಗಿ ಸೂರ್ಯನ ಬಿಸಲಿನಲ್ಲಿಯೂ 'ಸೋ' ಎಂದು ಧಾರೆ ಗಟ್ಟಿ ಸುರಿಯುತ್ತಿರುವ ಮಳೆಯಲ್ಲಿಯೂ ರೈತರು ಮತ್ತು ಎತ್ತು ಚಕ್ಕಡಿಗಳು ನಿಂತಿದ್ದನ್ನು ಎಷ್ಟೋ ಸಾರೆ ಈಗಿನ ಮಾರ್ಕೆಟ್ಟಿನ ಸ್ಥಳದಲ್ಲಿ ಕಾಣಬಹುದು. ಇಲ್ಲಿಂದ ಬೇರೆ ಸ್ಥಳಕ್ಕೆ ಸ್ಥಳಾಂತರವಾದರೆ ಇವೆಲ್ಲವುಗಳಿಗೆ ಅನುವು ಮಾಡಿಕೊಡಲು ಸಾಧ್ಯವಾಗುವುದು. ಈಗಿನ ಮಾರ್ಕೆಟ್ಟು ಸ್ಥಳದಲ್ಲಿ ಸುತ್ತಲೂ ವಾಸಿಸುವ ಮನೆಗಳಿರುವದರಿಂದಲೂ ಕಾರಖಾನೆಗಳು ಬಹಳ ಸಮೀಪವಿರುವುದರಿಂದಲೂ ಬೆಂಕಿಯ ಭಯವು ಹೆಚ್ಚಾಗಿದೆ, ಮತ್ತು ರೈತರ ಮಾಲಿನ ಮೇಲಿನ ಬೆಂಕಿಯ ವಿಮೆಯ ವಿಷಯದಲ್ಲಿ ಹೆಚ್ಚಾಗಿ ವೆಚ್ಚವು ಬರುತ್ತದೆ. ಆದ್ದರಿಂದ ಮಾರ್ಕೆಟ್ಟಿ ಸ್ಥಳವು ಈಗಿನ ಸ್ಥಳದಿಂದ ಊರ ಹೊರಗೆ ಸ್ಥಳಾಂತರಿಸಲ್ಪಟ್ಟರೆ ಬೆಂಕಿಯ ಭಯವು ಕಡಿಮೆಯಾಗುವದಲ್ಲದೆ ವಿಮೆಯ ವೆಚ್ಚವೂ ಕಡಿಮೆಯಾಗಬಹುದು. ಈಗಿರುವಲ್ಲಿ

೧೨ ನೇ ಪುಟ ನೋಡಿರಿ

Cotton Market.

Present Site Ample

By: Mr. V. G. Sisnet

Surely 14 acres which dealt comfortably with a lac of bales is ample to deal with existing needs; . . . . . The Markets Act will benefit Hubli just as much wherever the market is situated . . . . . .

One of the main points now put forward is that Government intend to apply the Agricultural Produce Markets Act, 1939, to Hubli and that if this is done the present site will not be large enough to accommodate the grain and other markets as well as cotton.

There is nothing in the Act saying that all markets must be situated in one place although it is understandable that if this were so, control would be easier and the administration possibly less expensive At the same time one feels sure that it is not Government's intention to penalise a part of the community on the grounds of a slight extra expense alone.

If the Markets Act is brought into force, why, therefore, shouldn't the present market site still be used after making necessary improvements ?

Surely 14 acres which dealt comfortably with a lac of bales is ample to deal with existing needs; this is admitted but those in favour of the removal state that if the markets Act is applied there will be an increase in the quantity of cotton coming to Hubli and cite Bailhongal as an example.

The decrease in cotton at Hubli which may partly be accounted for by mismanagement of the market is **mainly due** to the erection of presses at

(See page 14)

ಇದು ಅಪಾಯಕರವಲ್ಲವೇ?

೬ನೇ ಪುಟದಿಂದ ಮುಂದರಿದುದು

ಇದೇ ಮಾದರಿಯದಾಗಿದೆ. ಇದು ಏನನ್ನು ತೋರಿಸುತ್ತದೆ? ಇಂತಹ ಪರಿಸ್ಥಿತಿಯಲ್ಲಿ, ಸದ್ಯದ ಮಾರ್ಕೆಟ್ಟಿನಲ್ಲಿ ತಮ್ಮ ಸ್ವಂತದ ಕಟ್ಟಡಗಳುಳ್ಳಂಥವರು, ಅವುಗಳನ್ನು ಕೆಡವಿ, ಹೊಸ ಸ್ಥಳದಲ್ಲಿ ಪುನಃ ಅವುಗಳನ್ನು ಕಟ್ಟಬಲ್ಲರೇ? ಅಥವಾ ಹೊಸ ಮಾರ್ಕೆಟ್ಟಿನಲ್ಲಿ ಗುದಾಮುಗಳನ್ನು ಬಾಡಿಗೆಗೆ ತೆಗೆದುಕೊಳ್ಳುವವರು ಹೆಚ್ಚಿನ ಬಾಡಿಗೆಯನ್ನು ಕೊಡಬಲ್ಲರೇ? ಬೇಕಾದವರು 'ಇಲ್ಲ'ವೆಂದು ಧಾರಳವಾಗಿ ಹೇಳಬಹುದು

ದ್ವಿಗುಣಿತ ಹಾನಿ

ಎರಡನೆಯ ಪ್ರಶ್ನೆಯ ವಿಷಯವಾಗಿ ಹೇಳುವುದಾದರೆ, ಸದ್ಯದ ಮಾರ್ಕೆಟ್ಟಿನಲ್ಲಿ ಇಂದು ಇರುವುದನ್ನು ನಾಶ ಮಾಡಿ ಹೊಸ ಸ್ಥಳದಲ್ಲಿ ಎಲ್ಲವನ್ನೂ ಪುನಃ ಕಟ್ಟುವುದು ದ್ವಿಗುಣಿತ ಹಾನಿಯನ್ನುಂಟು ಮಾಡುವಂಥದೆಂಬುದು ಸ್ಪಷ್ಟವಿದೆ ಮಾರ್ಕೆಟ್ಟಿನಲ್ಲಿಯ ಅನೇಕ ಕಟ್ಟಡಗಳು ಹಳೆಯವಾಗಿದ್ದದ್ದರಿಂದ ಅವುಗಳನ್ನು ಕೆಡವಬಹುದೆಂದು ಯಾರಾದರೂ ಅನ್ನಬಹುದು ಆರ್ಥಿಕ ಬಿಗಿತದ ಈಗಿನ ದಿವಸಗಳಲ್ಲಿ ಈ ವಿಚಾರಕ್ಕೆ ಎಡೆಗೊಡುವುದು ಸಾಧ್ಯವಿಲ್ಲ ಸಮೃದ್ಧಿಯುಕ್ತವಾದ ದಿವಸಗಳು ಎಂದು ಬರುವವೋ ಹೇಳಬರುವಂತಿಲ್ಲ ಇಂದಿನ ಕಟ್ಟಡಗಳು ಬೇಕಾದ ಸ್ಥಿತಿಯಲ್ಲಿದ್ದರೂ ಅವಶ್ಯಕ ಪ್ರಯೋಜನವನ್ನು ಅವು ಕೊಡುತ್ತಿವೆ ಅವುಗಳನ್ನು ಕೆಡವಿ ಹೊಸವುಗಳನ್ನು ಕಟ್ಟುವುದಕ್ಕೆ ಅವುಗಳ ಒಡೆಯರಿಗೆ ಹೇಳುವುದೆಂದರೆ ದಡ್ಡತನವೇ ಸರಿ ಗೊತ್ತಾದ ಸ್ಥಳದಲ್ಲಿ ಹೊಸ ಕಟ್ಟಡಗಳನ್ನು ಕಟ್ಟಿಸಿದರೆ ಅವುಗಳಿಂದ ಬರುವ ಉತ್ಪನ್ನವಾದರೂ ಎಷ್ಟಾಗುವುದೆಂಬದನ್ನು ನೋಡೋಣ ಮೇಲೆ ಹೇಳಿದಂತೆ ಬಾಡಿಗೆಯಿಂದಿರುವ ಜನರ ಬಾಡಿಗೇ ಕೊಡುವ ಶಕ್ತಿಯು ವೇಗದಿಂದ ಕಡಿಮೆಯಾಗುತ್ತಿದೆ ಪ್ರತಿವರ್ಷ ಕರಭಾರವು ಹೆಚ್ಚುತ್ತಿದೆ ಕಟ್ಟಡಗಳ ನಿರ್ಮಾಣದ ಕಾರ್ಯಕ್ಕೆ ಶಾಂತ ವಾತಾವರಣದಲ್ಲಿ ಹಿಡಿಯುವುದಕ್ಕಿಂತ ಇಂದು ಬಹಳ ಹೆಚ್ಚು ವೆಚ್ಚವು ಹತ್ತುವುದು ಸಾಮಾನ್ಯವಾದ ತಿರುಪುಮೊಳೆ (ಸ್ಕ್ರೂ)ಗಳ ಬೆಲೆಯುಕೂಡ ಯುದ್ಧದ ಪ್ರಾರಂಭವಾದನಂತರ ಪ್ರತಿ ೧೫೪ ಕ್ಕೆ (ಗ್ರೋಸ್) ೩॥ ಆಣೆಯಿಂದ ೧೪ ಆಣೆಗೆ ಏರಿದೆ. ಮತ್ತು ಮುರಿಗೆಯ ತಗಡು (ಕಾರೂಗೇಟೆಡ್ ಆಯರ್ನ್ ಷೀಟ್ಸ್)ಗಳ ಬೆಲೆಯು ಮೊದಲು ಒಂದು ಹಂಡ್ರೆಡ್ ನೇಟಿಗೆ ೯ ರೂ. ಇದ್ದದ್ದು ಇದು ೩೨ ರೂ. ಆಗಿದೆ ಇಂದು ಕಟ್ಟಡಗಳ ಸಲುವಾಗಿ ಸುರುವಬೇಕಾದ ಹೆಚ್ಚಿನ ಹಣದ ವಿಷಯವನ್ನು ಇಂದು ಸ್ಪಷ್ಟಗೊಳಿಸುತ್ತದೆ. ಹಾಕಿದ ಹಣದ ಮೇಲೆ ಬರುವ ಬಡ್ಡಿಯ ಪ್ರಮಾಣವು ಹುಬ್ಬಳ್ಳಿಯಲ್ಲಿ ಕಟ್ಟಡಗಳ ಮೇಲೆ ಹಾಕಿದ ಬಡ್ಡಿಗಿಂತ್ಕೆ ಕಿರಪ್ಪು ಕೂಡ ಬಡ್ಡಿಯು ಹುಟ್ಟದಿರುವ ಉದಾಹರಣೆಗಳನ್ನು ನಾನು ಬಲ್ಲೆನು. ಹುಬ್ಬಳ್ಳಿ ಇಲೆಕ್ಟ್ರಿಸಿಟಿ ಕಂಪನಿಯು ಬಾಡಿಗೆಯಿಂದ ಕೊಡುತ್ತಿರುವ ಕಟ್ಟಡಗಳು ಹೊಸವು, ಗಚ್ಚುಗಾರಿಯಿಂದ ಕಟ್ಟದಂಥವು, ಎಲ್ಲ ಆಧುನಿಕ ಅನುಕೂಲತೆಗಳಿಂದ ಕೂಡಿದಂಥವು ಮತ್ತು ಆರೋಗ್ಯಮಯ ಸುಂದರ ನೆರೆ ಹೊರೆಯಲಿ ಇದ್ದಂದವು ಆಗಿದ್ದರೂ, ಅವುಗಳಿಂದ ಬರುವ ಬಾಡಿಗೆ ಹಣದ ಲೆಕ್ಕವು ಇದೇ ಮಾತನ್ನು ತೋರಿಸುತ್ತದೆ. ಹೀಗಿರುವಾಗ್ಗೆ, ಹೊಸ ಮಾರ್ಕೆಟ್ಟಿನ ಸ್ಥಳದಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಯಾರು ಲಕ್ಷಗಟ್ಟಲೆ ರೂಪಾಯಿಗಳನ್ನು ಹಾಕಿಯಾರು? ಈ ಮೇರೆಗೆ, ಆ ಸ್ಥಳದಲ್ಲಿ ಕಟ್ಟಡಗಳ ಮೇಲೆ ದುಡ್ಡು ಹಾಕುವುದಕ್ಕೆ ಸಾಕಷ್ಟು ಜನರು ಧೈರ್ಯ ಮಾಡುವರೆಂಬ ಮಾತು ಸಂಶಯಾಸ್ಪದವಾಗಿದೆ

ಸಾಮಾನ್ಯ ಪರಿಣಾಮ

ಮೂರನೆಯ ಪ್ರಶ್ನೆಯ ವಿಷಯವಾಗಿ ಹೇಳುವುದಾದರೆ, ಮೇಲೆ ಹೇಳಿದ ದ್ವಿಗುಣಿತವಾದ ಹಾನಿಯ ಮೂಲಕ ಹುಬ್ಬಳ್ಳಿಯು ಹೆಚ್ಚು ದರಿದ್ರವಾಗುವುದೆಂಬದು ಯಾವನಿಗೂ ತಿಳಿಯುವಂತಿದೆ ಹೊಸ ಸ್ಥಳದಲ್ಲಿ ಕೆಲವು ಜನರು ಹೊಸ ಕಟ್ಟಡಗಳನ್ನು ಕಟ್ಟಿಸಲು ವಿಚಾರ ಮಾಡಿದರೂ, ವಿಶೇಷತಃ ತಗಡು, ಉಕ್ಕಿನ ತೊಲೆ. ಕೋನಾಕೃತಿಯ ಪಟ್ಟಿಗಳನ್ನು ಮತ್ತು ಬಹಳ ಪ್ರಮಾಣದಲ್ಲಿ ಇತರ ವಸ್ತುಗಳನ್ನು ಹೊರಗಿನಿಂದ ಬಹಳ ಹೆಚ್ಚಿನ ಬೆಲೆ ಕೊಟ್ಟು ಕರಿಸಬೇಕಾಗುವುದು ಇವುಗಳು ಇಲ್ಲಿಯೇ ದೊರೆಯಲಾರವು ಮತ್ತು ಉತ್ಪನ್ನ ಮಾಡಲ್ಪಡಲಾರವು ಇಲ್ಲಿಂದ ದುಡ್ಡು ಹೊರಗೆ ಹರಿದು ಹೋಗುವದರಿಂದ ಹುಬ್ಬಳ್ಳಿಯು ಆ ಪ್ರಮಾಣದಲ್ಲಿ ಹೆಚ್ಚೆಚ್ಚು ದರಿದ್ರವಾಗುವುದು

ಮತ್ತು ಮಾರ್ಕೆಟ್ಟನ್ನು ಕಿತ್ತುವುದರಿಂದ, ಇಲ್ಲಿ ನಡೆಯುತ್ತಿರುವ ಹತ್ತಿಯ ವ್ಯಾಪಾರಕ್ಕೆ ಯಾವುದೇ ರೀತಿಯ ಹಾನಿಯುಂಟಾಗುವುದಿಲ್ಲವೆಂದು ಯಾರಾದರೂ ಆಶ್ವಾಸನೆ ಕೊಡಬಲ್ಲರೇ? ಇಲ್ಲ ಖಾತ್ರಿತೆಯ ಬಗ್ಗೆ ಸಂಶಯ ಸ್ಥಿತಿಯಲ್ಲಿರುವ ಸ್ಥಳಕ್ಕೆ ಮಾರ್ಕೆಟ್ಟನ್ನು ಒಯ್ದರೆ ಹುಬ್ಬಳ್ಳಿಯ ಹತ್ತಿಯ ವ್ಯಾಪಾರವು ಅಧೋಗತಿಗೆ ಇಳಿಯುವುದೆಂದು ನನ್ನ ಅಭಿಪ್ರಾಯ ಕಟ್ಟಡಗಳಿಗಾಗಿ ದಲಾಲರು ಹಾಕಬೇಕಾದ ಪ್ರಾರಂಭದ ದುಡ್ಡು ಅಥವಾ ಅವರು ಕೊಡಬೇಕಾಗುವ ಹೆಚ್ಚಿನ ಬಾಡಿಗೆಯ ಮೂಲಕ, ರೈತರಿಂದ ತೆಗೆದುಕೊಳ್ಳಲ್ಪಡುವ ಗುದಾಮುಗಳ ಬಾಡಿಗೆಯು ಅವಶ್ಯವಾಗಿ ದಲಾಲರಿಂದ ಬೆಳೆಯಿಸಲ್ಪಡಬೇಕಾಗುವುದು ಹುಬ್ಬಳ್ಳಿಯ ಹೊರಗೆ ಇರುವ ಇತರ ಮಾರ್ಕೆಟ್ಟುಗಳು ಈಗಾಗಲೇ ಕ್ರಮವಾಗಿ ಬೆಳೆಯುತ್ತಿವೆ ಸದ್ಯಕ್ಕೆ ಇರುವ ಈ ಪಟ್ಟಣದಲ್ಲಿಯ ಹತ್ತಿಯ ವ್ಯಾಪಾರದ ಕೆಲವು ಭಾಗವನ್ನು ಅವುಗಳಲ್ಲಿಯ ಪ್ರತಿಯೊಂದು ಒಯ್ಯಬಹುದು. ಇದರ ಮೇಲೆ ಇತರ ಎಲ್ಲ ವ್ಯಾಪಾರಗಳು ಮುಖ್ಯವಾಗಿ ಅವ

ಸ್ಥಳಾಂತರವು ಲಾಭಕರವು

೧೦ನೇ ಪುಟದಿಂದ ಮುಂದರಿದುದು

ಸ್ಥಳಾಸದರಿಗೆ ಒಟ್ಟಿನ ಲಾಭದ ಭಾಗವು ದೊರೆಯುವುದಕ್ಕೆ ಸಾಧ್ಯವಾಯಿತು ಹತ್ತಿ ಅರೆಯುವ ಕಾರಖಾನೆಯವರು ಈ ಸ್ಥಳಾಂತರದ ಒಂದು ಸಂಘವನ್ನು ಮಾಡಿಕೊಂಡಿದ್ದಾರೆ ಇದರ ಮೂಲಕ ಯಾವುದೇ ಜಿನ್ನಿಂಗ್ ಫ್ಯಾಕ್ಟರಿಯವರು ತಮ್ಮ ಫ್ಯಾಕ್ಟರಿಯನ್ನು ನಡೆಯಿಸದೆ, ತಮ್ಮಲ್ಲಿಯ ಅರೆಯುವ ಯಂತ್ರಗಳ ಲೆಕ್ಕದ ಮೇಲಿಂದ ಪ್ರತಿಯೊಂದು ಜಿನ್ನಿಗೆ ಪ್ರತಿ ವರ್ಷಕ್ಕೆ ೧೬೫ ರೂ ಯಷ್ಟನ್ನು ಹೊಂದಲು ಸಾಧ್ಯವಾಯಿತು ಜಿನ್ ಮತ್ತು ಪ್ರೆಸ್ ಫ್ಯಾಕ್ಟರಿಗಳ ಒಡೆಯರ ಈ ಧೋರಣದಿಂದ ಕೊನೆಯಲ್ಲಿ ರೈತನಿಗೆ ಹಾನಿಯಾಯಿತು ಯಾಕೆಂದರೆ, ಹೊರಗೆ ಕಳಿಸುವುದಕ್ಕೆ ಅರಳೆಯನ್ನು ಕೊಳ್ಳುವವರು, ಎರಿದ ಅರಯುವ ಮತ್ತು ಗಂಟು ಕಟ್ಟುವ ವೆಚ್ಚವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ರೈತನ ಹತ್ತಿಗೆ ನೊದಲಿಗಿಂತ ಕಡಿಮೆ ಬೆಲೆಯನ್ನು ಸ್ವಭಾವಿಕವಾಗಿ ಕೊಡಹತ್ತಿದನು ೧೯೩೯-೪೦ನೇ ವರ್ಷದ ಸುಗ್ಗಿಯ ಅಂತ್ಯದಲ್ಲಿ ಮಾತ್ರ, ವೈಸ್ಸುಗಳ ಒಡೆಯರು ಒಂದು ಗಂಟು ಕಟ್ಟುವುದಕ್ಕೆ ತೆಗೆದುಕೊಳ್ಳುವ ದುಡ್ಡಿನ ಪ್ರಮಾಣವನ್ನು ರೂ ೪-೪-೦ ಇಳಿಸಲೇಬೇಕಾಯಿತು ಅರಯುವ ಯಂತ್ರದವರೂ ಪ್ರತಿ ನೂರಕ್ಕೆ ರೂ. ೦—೧೦—೦ ಗಳನ್ನು ತೆಗೆದುಕೊಳ್ಳಹತ್ತಿದರು. ಧಾರವಾಡದಲ್ಲಿ ಒಂದು ಹೊಸ ಗಂಟು ಕಟ್ಟುವ ಯಂತ್ರವು ಹಾಕಲ್ಪಟ್ಟದ್ದು ಮತ್ತು ಅದರ ಒಡೆಯರು ಈ ಸಂಘಕ್ಕೆ ಕೊಡಲು ನಿರಾಕರಿಸಿದ್ದು ಮೇಲಿನ ಸ್ಥಿತ್ಯಂತರಕ್ಕೆ ಕಾರಣವಾಯಿತು ಧಾರವಾಡದವರು ಗಂಟು ಕಟ್ಟುವುದನ್ನು ಯೋಗ್ಯ ಬೆಲೆಗೆ ತೆಗೆದುಕೊಂಡು ಮಾರಹತ್ತಿದರು ಸ್ಥಾನಿಕ ಜಿನ್ ಮತ್ತು ಪ್ರೆಸ್ಸುಗಳ ಒಡೆಯರ ಈ ತರಹದ ದುಡ್ಡು ಜಗ್ಗುವ ಧೋರಣೆಯಿಂದಾದ ಹಾನಿಯ ಮೂಲಕ, ಇಲ್ಲಿಯ ಪೇಟೆಯ ಹೊಟ್ಟೆಯ ಮೇಲೆ ಕಾಲು ಕೊಟ್ಟು ಸುತ್ತಲಿನ ಪೇಟೆಗಳು ಅಭಿವೃದ್ಧಿ ಹೊಂದಿದವು ಉದಾಹರಣೆಗಾಗಿ ಗದಗು ಮಾರ್ಕೆಟ್ಟನ್ನು ನಾನು ತೊರಿಸ ಬಹುದು. ಅದು ವರ್ಷ ವರ್ಷಕ್ಕೆ ರೈತರಿಂದ ಹೆಚ್ಚೆಚ್ಚು ಸರಕನ್ನು ಆಕರ್ಷಿಸಿತಲ್ಲದೆ ಇಂದು ಹುಬ್ಬಳ್ಳಿಯ ಪೇಟೆಯನ್ನು ಸಹ ಮೀರಿಸುವಂತಾಗಿದೆ ಆದ್ದರಿಂದ ನನ್ನ ಅಭಿಪ್ರಾಯದಲ್ಲಿ, ಈ ಸ್ಥಳದ

ಲಂಬಿಸಿನೆಯೆಂಬದು ನಿರ್ವಿವಾದವಾದ ಮಾತು ಅಂದರ, ಹುಬ್ಬಳ್ಳಿಯ ಹತ್ತಿಯ ವ್ಯವಹಾರದಲ್ಲಿ ಒಂದು ವರ್ಷ ಇತರ ಹವುಂಟಾದರೆ ಅದರ ಮೂಲಕ ಸ್ವತ್ಯಕ್ಷವಾಗಿ ಉಳಿದ ಎಲ್ಲ ತರಹದ ವ್ಯವಹಾರಗಳು ಕಡಿಮೆ ಸ್ಥಿತಿಗೆ ಬರುವವು

ಹೀಗಿರಲು, ಮಾರ್ಕೆಟ್ಟನ್ನು ಸ್ಥಳಾಂತರಿಸುವ ಬಗ್ಗೆ ಯಾವುದೇ ಮಾರ್ಗದ ಆಲೋಚನೆ ಮಾಡುವ ಮೊದಲು, ಮೇಲಿನ ಸಂಗತಿಗಳ ಮೂಲಕ ನಾವು ಎಚ್ಚರ ಗೊಳ್ಳಬೇಕಾಗಿದೆ

ಹತ್ತಿಯ ವ್ಯಾಪಾರದ ಹಿತದ ದೃಷ್ಟಿಯಿಂದ ಸರಕಾರದವರು, ಅರೆಯುವ ಮತ್ತು ಗಂಟು ಕಟ್ಟುವ ಹೆಚ್ಚಿನ ಬೆಲೆಯ ಪ್ರಮಾಣವನ್ನು ಗೊತ್ತು ಮಾಡಬೇಕು

ಕೊನೆಯಲ್ಲಿ ನಾನು ಹೇಳಬಯಸುವ ವೇನಂದರೆ, ಹೊಸ ಸ್ಥಳಕ್ಕೆ ಈ ಮಾರ್ಕೆಟ್ಟನ್ನು ಒಯ್ಯಜೇಕೆಂದು ನಿಶ್ಚಯವಾದರೆ ಇಂದಿನ ಮಾರ್ಕೆಟ್ಟಿನಲ್ಲಿ ಗುದಾಮುಗಳನ್ನು ಇರುವವರಿಗೆ ಹಾನಿ ತುಂಬಿ ಕೊಡುವ ದ್ರವ್ಯವನ್ನು ಯೋಗ್ಯವಾಗಿ ಕೊಡುವಂತೆ ಸರಕಾರದವರು ನ್ಯೂನಸಿಪಾಲಿಟಿಗೆ ಸಲಹೆ ಕೊಡಬೇಕು ಹೊಸ ಸ್ಥಳದಲ್ಲಿ ನ್ಯೂನಸಿಪಾಲಿಟಿಯವರು ದಲಾಲರಿಗಾಗಿ ಗುದಾಮುಗಳನ್ನು ಕಟ್ಟಿಸಲು ಮುಂದೆ ಬಂದರೆ ಈ ವಿಷಯದಲ್ಲಿ ಬಹಳ ಅನುಕೂಲವಾಗುವುದು ಅವುಗಳಿಗೆ ಹತ್ತಬಹುದಾದ ಹಣದ ಅರ್ದವನ್ನು ಕೆಲಸವು ಪ್ರಾರಂಭವಾಗುವ ಮೊದಲೇ ತೆಗೆದುಕೊಳ್ಳಬಹುದು ಮತ್ತು ಉಳಿದ ದ್ರವ್ಯನ್ನು ಸುಲಭವಾದ ಕಂತುಗಳಲ್ಲಿ ಮುಂದೆ ತೆಗೆದುಕೊಳ್ಳುತ್ತ ಹೋಗಬಹುದು.

ಮಾರ್ಕೆಟ್ಟನ್ನು ಸ್ಥಳಾಂತರಿಸುವ ಸಂಬಂಧದಲ್ಲಿ ಚರ್ಚೆ ಮಾಡಲು ಪ್ರೆಸ್ ಫ್ಯಾಕ್ಟರಿಗಳ ಐದೈದು ಪ್ರತಿನಿಧಿಗಳನ್ನು ತಾವು ಕರೆದಿರುವಿರಾಗಿ ನನಗೆ ತಿಳಿದಿದೆ ನನಗೆ ತಿಳಿದ ಮಟ್ಟಿಗೆ ಹೀಗೆ ಆರಿಸಿ ಬರುವವರು ಅಭಿಪ್ರಾಯದ ಒಂದು ದೃಷ್ಟಿಯ ಪ್ರತಿನಿಧಿಗಳಾಗಿರುತ್ತಾರೆ. ಯಾಕೆಂದರೆ ಪ್ರೆಸ್ ಫ್ಯಾಕ್ಟರಿಗಳ ಒಡೆಯರಲ್ಲಿ ಕೂಡ ಈ ವಿಷಯದಲ್ಲಿ ಪರಸ್ಪರ ವಿರೋಧಿಗಳಾದ ಅಭಿಪ್ರಾಯಗಳಿವೆ ಪ್ರೆಸ್ ಫ್ಯಾಕ್ಟರಿಗಳ ಒಡೆಯರು ರೈತರ ಹಿತಕ್ಕೆ ಪ್ರತ್ಯಕ್ಷವಾಗಿ ಸಂಬಂಧಪಟ್ಟಿರುವುದಿಲ್ಲ ಮತ್ತು ಅವರು ಕೊಡುವ ಯಾವುದೇ ಅಭಿಪ್ರಾಯವು ಸ್ವಾರ್ಥಪರವಾದ ಉದ್ದೇಶದಿಂದ ಕೂಡಿರುವುದು ಖಂಡಿತವಾದದ್ದು ಆದ್ದರಿಂದ ಈ ವಿಷಯದಲ್ಲಿ ಅವರು ಕೊಡುವ ಅಭಿಪ್ರಾಯಕ್ಕೆ ಅಷ್ಟೊಂದು ಮಹತ್ವವು ಕೊಡಲ್ಪಡಬಾರದೆಂದು ನನ್ನ ಅಭಿಪ್ರಾಯವಿದೆ

ಸ್ಥಳಾಂತರಿಸುವದೇ ಯೋಗ್ಯವು

೧೧ನೇ ಪುಟದಿಂದ ಮುಂದೆಸಾಗಿದ್ದು

ಬೆಂಕಿ ಹತ್ತಿದರೆ ಊರಿನ ಎಷ್ಟೋ ಭಾಗವು ಬೆಂಕಿಯ ಆಳವಿನಲ್ಲಿ ಬರುವ ಸಂಭವವಿದೆ ಊರ ಹೊರಗಾದರೆ ಈ ಭಯವೇ ಬರದು ಮಾರ್ಕೆಟ್ಟನ ಮಟ್ಟಿಗೆ ನೀರಿನ ಸೌಕರ್ಯವನ್ನು ಮುನಿಸಿಪಲ್ ಬರೋದವರು ಒದಗಿಸಿ ಕೊಡುವರು, ಮತ್ತು ಹೊಸಪದ್ಧತಿಯ ಮೇಲೆ ಇದು ಕಟ್ಟಲ್ಪಡುವದರಿಂದ ಯಾವಾಗಾದರೊಮ್ಮೆ ಬೆಂಕಿಯು ಅಕಸ್ಮಾತ್ತಾಗಿ ಇದಕ್ಕೆ ಹತ್ತಿದರೆ ಅದರ ಇತರ ಭಾಗಕ್ಕೆ ಬೆಂಕಿಯ ಭಯ ಬರುವುದಿಲ್ಲ

ಇವೆಲ್ಲವುಗಳನ್ನು ವಿಚಾರ ಮಾಡಿದರೆ ಈಗಿನ ಕಾಟನ್ ಮಾರ್ಕೆಟ್ಟಿನ ಸ್ಥಳವು ಊರ ಹೊರಗೆ ಸ್ಥಳಾಂತರಿಸಲ್ಪಡುವುದೇ ಯೋಗ್ಯವೆಂದು ತೋರುವುದು

Statement of work and capacity of Factories in HUBLI

No	Name of Ginning Factories	No of Gins	Last 5 years' Total work Nugs	Annual average Nugs	Remarks	Approximate Annual Percentage
	Against Removal					
	The Swadeshi Ginning Factory	40	21469	4293		Work of the factories who are against
2	The N H Belgaumvalla Ginning Factory	29	19683	3936		removal 70 p c.
3	The Karnatak Manufacturing Co., Ltd ,	21	14829	2965		For removal 14 p c.
4	The Doongersi Jivraj Patel Ginning Factory	21	5364	1052		Neutral 16 p c.
5	The Arjan Khimji Ginning Factory	20		2500	Started working in 1940 after past several years' silence	100 p c.
6	The Nutan Chandrodaya Ginning Factory	16	6444	1288		
7	The Dhanjibhai B Patel Ginning Factory	16	nil	nil	Silent at present	
8	The Hubli Ginning & Trading Co , Ltd.	15	6655	1331		
9	The V C Bannurmath G & P Factory	14	nil	nil	, ,,	
10	The Sirur Ginning Factory	10	6364	1272		
11	The Gujarat Manufacturing Co , Ltd	10	nil	nil	,, ,,	
12	The Gangadhar Shamji Ginning Factory	9	1461	292		
13	Shri Datta Ginning Factory	4	3600	900	4 years' total work 3600 nugs	
		225	85869	19829		
	For Removal					
1	The N. Hirachand Lakhamsey G & P Factory	21	5187	1037		
2	The B C Neeli Ginning Factory	18	nil	nil	Silent at present in the Receivers charge	
3	The V D Manvi Ginning Factory	12	nil	nil	Not working	
4	The Ramdas Darbar Ginning Factory	11	6911	1727	Figures obtained up to April 1940	
5	The B S Neeli Ginning Factory	10	6172	1234		
		72	18270	3998		
	Neutral					
1	The Bharat Spinning & Weaving Co , Ltd	31	13440	2688		
2	The Deccan Pressing & Ginning Co , Ltd	24	6808	1361		
3	The Dahan Devichand Ginning Factory	16	1345	269		
		71	21593	4318		

No	Names of Pressing Factories	Last 5 years total work Bales	Annual average Bales	Remarks	Approximate Annual Percentage
	Against Removal				
1	The Swadeshi Pressing Factory	25000	5000	Approximate figures	Work of the Factories who
2	The V C Bannurmath Gin & Psg Factory	11000	2200	Work in 1934–35	are against removal 64%
3	The West's P tent Pressing Co	44566	8913		For removal 19%
4	The Victoria Pressing Factory	32206	8051	4 year's total work 32206 nugs	Neutral 17%
5	The N H Belgaumvalla Gin & Psg Factory	30951	6190		100%
6	The Holiyappa Bulla Pressing Factory	533	533	Restarted work in 1940	
7	The Arjan Khimji G & Pressing Factory			Silent	
8	The Gadag Mahalaxmi Pressing Factory			,,	
		144256	30887		
	For Removal				
1	The Math Pressing Factory	31088	6217		
2	The N Hirachand Lakhamsey G & P. Factory	11247	2811		
3	The New Mofussil Coy Ltd in liquidation			Closed for the last 20 years	
		42335	9028		
	Neutral				
1	The Bharat Spinning & Weaving Co Ltd	22329	4465		
2	The Deccan Ginning & Pressing Co , Ltd	17655	3531		
		39984	7996		

Following are the current rates of pressing and it may be seen from the same whether the Factories in Hubli charge higher than those in the neighbouring places These figures are obtained from the Custodians of Combinations.

Place	Rate per Bale	Place	Rate per Bale
Davangere	Rs 8—1—0	Bijapur	Rs. 6—0—0
Gadag	8—1—0	Ranebennur	6—0—0
Chitaldrug	8—0—0	Hubli	4—4—0
Bagalkot	6-12—0	Dharwar	4—4—0

ಯುದ್ಧ ಕಾಲದಲ್ಲಿ ಹೊಸ ಯೋಜನೆಗಳೇ ?

ಲೇ— ಶ್ರೀ ಲಕ್ಷ್ಮಣ ಶಾಕರಸಿ

೧೯೩೬—೩೭ ರಲ್ಲಿ ವ್ಯಾಪಾರಸ್ಥರ ಹಾಗೂ ಇತರರ ಕೈಯಲ್ಲಿ ದುಡ್ಡು ಇದ್ದಾಗ್ಗೆ ಹೊಸ ಯೋಜನೆಗಳನ್ನು ಕೈಕೊಂಡಿದ್ದರೆ ಅದು ಕೆಲವು ಮಟ್ಟಿಗೆ ವ್ಯವಹಾರ್ಯವೆಂದು ಅನ್ನಿಬಹುದಾಗಿತ್ತು ಈಗ ಎಲ್ಲರಿಗೂ ಆರ್ಥಿಕ ಅವನತಿಯ ಕಾಲ ಒದಗಿದೆ ಎಲ್ಲಿ ನೋಡಿದಲ್ಲಿ ಹಾನಿ ಯಾವ ವ್ಯಾವಾರದಲ್ಲಿಯೂ ಲಾಭವೇ ಕಡಿಮೆ ಇಲ್ಲವೇ ಇಲ್ಲವೆಂದರೂ ಸಲ್ಲುವುದು ಹತ್ತಿ ಆರಳಿಯ ವ್ಯಾಪಾರಸ್ಥರ ಮಾತಂತೂ ಹೇಳಲಸಾಧ್ಯವು ರೈತರ ಪರಿಸ್ಥಿತಿಗಳಂತೂ ಎಲ್ಲಕ್ಕೂ ಮೀರಿ ಮೀರಿ ಕೆಟ್ಟಿವೆ ಯಾವದೇ ಹೊಸ ಯೋಜನೆಯನ್ನು ಕೈಕೊಳ್ಳುವ ಸಾಮರ್ಥ್ಯ ಅವರಲ್ಲಿಲ್ಲ ಇಷ್ಟೇ ಅಲ್ಲ ಅಪ್ರತ್ಯಕ್ಷವಾಗಿ ಅವರಿಗೆ ಸಂಬಂದಿಸಿರುವ ಯಾವ ಯೋಜನೆಯಾದರೂ ಕೈಕೊಳ್ಳಲ್ಪಡುತ್ತದೆಂದರೆ ಅದರಿಂದ ತಮಗೆ ಎಲ್ಲಿ ನಷ್ಟ ಬಡೆಯುತ್ತದೋ ಎಂಬ ಅಂಜಿಕೆಯು ಅವರಿಗುಂಟಾಗುತ್ತದ ಇದ್ದವ್ದನ್ನೇ ಹೀಗಾದರೂ ಕಾಯ್ದುಕೊಂಡು ಹೋದರೆ ಸಾಕಾಗಿದೆ ಯುದ್ಧದ ನೂಲಕ ಈ ಪರಿಸ್ಥಿತಿಯು ಮುತ್ತು ಅಂಜಿಕೆಯು ಮತ್ತಷ್ಟು ಬೆಳೆದಿದೆ ಯುದ್ಧವು ಎಷ್ಟು ವರ್ಷ ನಡೆಯುವದೆಂಬದು ಅನಿಶ್ಚಿತವು ಒಂದು ವೇಳೆ ೩ ವರ್ಷಗಳಲ್ಲಿ ನಿಂತರೂ ದೇಶದ ಆರ್ಥಿಕ ಪರಿಸ್ಥಿತಿಯು ಹಲವು ವರ್ಷಗಳವರೆಗೆ ಸುಧಾರಿಸಲಿಕ್ಕಿಲ್ಲವಷ್ಟೇ ಅಲ್ಲದೆ ಇದಕ್ಕೂ ಹೆಚ್ಚು ಕೆಡುವದು ಇದು ಹಿಂದಿನ ಅನುಭವದಿಂದ ಹೇಳಬೇಕಾಗಿದೆ

ಈ ಯುದ್ಧ ಕಾಲದ ಪರಿಸ್ಥಿತಿಯಂತೂ ವಿಚಿತ್ರವಿದೆ ಹಿಂದಿನ ಯುದ್ಧ ಕಾಲದಲ್ಲಿ ಹಿಂದುಸ್ತಾನದ ವ್ಯಾಪಾರಸ್ಥರಿಗೂ ಉದ್ಯೋಗಸ್ಥರಿಗೂ ಕೆಲಕಾಲ ಲಾಭವಾಗಿತ್ತು ಆದರೆ ಅನೇಕ ಕಾರಣಗಳ ಮೂಲಕ ಈ ಸಾರೆಯ ಯುದ್ಧಕಾಲದಲ್ಲಿ ಹೆಚ್ಚಿನ ಲಾಭವಂತೂ ಇಲ್ಲೇ ಇಲ್ಲ. ಹಾನಿ ಮಾತ್ರ ಬೆಳೆಯುತ್ತ ನಡೆದಿದೆ ೧೯೩೯-೪೦ ರ ಉದಾಹರಣೆಗಳನ್ನು ನೋಡಿದರೆ ಹುಬ್ಬಳ್ಳಿಯ ಹತ್ತಿ ಆರಳಿ ವ್ಯಾಪಾರಸ್ಥರಲ್ಲಿ ಲಾಭ ಹೊಂದಿದವರು ಬಹಳೇ ವಿರಳ ೬ನೇಕರಿಗೆ ಹೇಳಲಸಾಧ್ಯವಾದಷ್ಟು ಹಾನಿಯಾಗಿದ ದಲಾಲರ ಗತಿಯಾದರೂ ಬೇರೆಯಿಲ್ಲ ಎಂದಬಳಿಕ ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲ ಇದ್ದ ಅವರ ಗುದಾಮು, ಕಡೆ ಮುಂತಾದ ಕಟ್ಟಡಗಳನ್ನು ಕೆಡವಿ ಊರ ಹೊರಗೆ ಹೊಸ ಸ್ಥಳವನ್ನೂ ಕ್ರಯಕ್ಕೆ ತಕ್ಕೊಂಡು ಕಟ್ಟಡಗಳನ್ನು ಕಟ್ಟಲು ಅವರು ಹೇಗೆ ಸಮರ್ಥರಾಗಬೇಕು ? ಯುದ್ಧ ಕಾಲದಲ್ಲಿ ಹೊಸ ಯೋಜನೆಗಳನ್ನು ಕೈಕೊಳ್ಳುವುದಂದರೆ ಗಾಯದ ಮೇಲ ಬರೆ ಕೊಟ್ಟಂತೆಯೇ ಸರಿ ಆದ್ದರಿಂದ ಯುದ್ಧ ಮುಗಿಯುವವರಗ ಹಾಗೂ ಅನುಕೂಲ ಆರ್ಥಿಕ ಪರಿಸ್ಥಿತಿಯು ಒದಗಿ ಕಟ್ಟಡ ಹಾಗೂ ಇನ್ನಿತರ ಕೆಲಸಗಳಿಗೆ ಬೇಕಾಗುವ ಸಾಮಾನುಗಳ ಬೆಲೆಯು ಹಿಂದಿನಪ್ರಮಾಣಕ್ಕೆ ಬರುವವರೆಗಾದರೂ ಈ ಯೋಜನೆಯನ್ನು ಬದ್ಧಿಗಿರಿಸುವುದು ಯೋಗ್ಯವೂ ಅವಶ್ಯಕವೂ ಆಗಿದ

ಗುಳಕವ್ವನ ಕೆರೆಯ ಬೈಲು ಮಾರಿ ಬರಬಹುದಾದ ಹಣವೆಷ್ಟು ?

ಲೇ ಮೆ ಆರ್ಜನ ಪಿಮಾಜಿ ಮತ್ತು ಕಂ.

ಈಗಿನ ಕಾಟನ ಮಾರ್ಕೆಟ್ಟನ್ನು ಊರ ಹೊರಗೆ ಸ್ಥಳಾಂತರಿಸಲು ಎರಡು ಮುಖ್ಯ ಕಾರಣಗಳು ತೋರಿಸಲ್ಪಡುತ್ತವೆ ಮಾರ್ಕೆಟ್ಟನ ಭೂಮಿ ಮುನಸೀಪಾಲಟಿಯಒಡೆತನದ್ದು ಅದು ಕಳೆದ ೫೦ ವರ್ಷಗಳಿಂದ ದಲಾಲರಿಗೆ ವಾರ್ಷಿಕ ಭೂಭಾಡೆಯ ಕರಾರಿನಿಂದ ಕೊಡಲ್ಪಡುತ್ತ ಬಂದಿದೆ ಅದನ್ನು ಈಗ ಮನೆ, ಚಾಳು, ಅಂಗಡಿ ಮುಂತಾದವುಗಳನ್ನು ಕಟ್ಟಲು ಕ್ರಯಕ್ಕೆ ಮಾರಿದರೆ ಅದರಿಂದ ಹೇರಳ ಹಣ ಮುನಸೀಪಾಲಟಿಗೆ ಸಿಗುವದು ಇದರಿಂದ ರಾಬರ್ಟಸನ್ ಮಾರ್ಕೆಟ ಮುಂತಾದ ಯೋಜನೆಗಳನ್ನು ಕೈಕೊಳ್ಳಲು ಅನುಕೂಲವಾಗುವದೆಂಬ ಒಂದು ಕಾರಣವು ಕೇಳಿ ಬರುತ್ತದೆ ಆದರೆ ಈಗಿನ ಕಾಟನ ಮಾರ್ಕೆಟ್ಟಿನ ೧೪ ಎಕರೆಗಳಲ್ಲಿ ೫ ಎಕರಗಳಷ್ಟು (ಮಾತ್ರ) ಸ್ಥಿರವಾದ ಕಟ್ಟಡಗಳನ್ನು ಕಟ್ಟಲು ಯೋಗ್ಯವಿದೆ ಉಳಿದ ೯ ಎಕರೆಗಳು ಅಂಥ ಕಟ್ಟಡಗಳನ್ನು ಕಟ್ಟಲು ಯೋಗ್ಯವಿಲ್ಲದ್ದರಿಂದ ಅದಕ್ಕೆ ಯೋಗ್ಯ ಗಿರಾಕಿಗಳು ಸಿಗುವದು ದುಸ್ತರವು ಈ ಭೂಮಿಯಲ್ಲಿ ಕಟ್ಟಡಗಳು ಬಿರುಕು ಬಿಡುವ ಸಂಭವವಿದ್ದು ಅದರಿಂದ ಕಟ್ಟಡಗಳಲ್ಲಿ ಹಣ ತೊಡಗಿಸುವವರಿಗೆ ಹಾನಿಯಾಗುವದು. ಎತ್ತರದ ಮೇಲಿರುವ ೫ ಎಕರೆಗಳಿಗೂ ಒಮ್ಮೆಲೇ ಗಿರಾಕಿಗಳು ಸಿಗುವದು ಸಂಶಯಾಸ್ಪದವಿದೆ ಮುನಸೀಪಾಲಟಿಯ ಅಪೇಕ್ಷೆಯಂತೆ ಗುಂಟೆಗೆ ೫೦೦ ರೂಪಾಯಿ ಕೊಟ್ಟು ಈ ೫ ಎಕರೆಗಳನ್ನು ಕ್ರಯಕ್ಕೆ ತಕ್ಕೊಳ್ಳಬೇಕಾದರೆ ೫ ಎಕರೆ ಭೂಮಿಯ ಕ್ರಯವೇ ೧೨,೦೦೦ ರೂಪಾಯಿ ಆಗುವದು ಯುದ್ಧದ ಮೂಲಕ ಕಟ್ಟಡದ ಎಲ್ಲ ಸಾಮಾನುಗಳು ಹಾಗೂ ಕೂಲಿ ದರಗಳು ತುಟ್ಟಿಯಾಗಿರುವದರಿಂದ ಇಷ್ಟು ವಿಸ್ತಾರವಾದ ಭೂಮಿಯ ಮೇಲೆಲ್ಲ ಮನೆ, ಚಾಳು ಅಂಗಡಿ ಮುಂತಾದವುಗಳನ್ನು ಕಟ್ಟಿಸಲು ಲಕ್ಷಾಂತರ ರೂಪಾಯಿಗಳು ಬೇಕಾಗುವವು ಶಾಂತ ಕಾಲದಲ್ಲಿ ತಗಲುವದಕ್ಕಿಂತ ಕನಿಷ್ಟ ೧೫ ಪಟ್ಟು ಹೆಚ್ಚು ವಚ್ಚವು ಈ ದಿವಸದಲ್ಲಿ ತಗಲುವದು ಅಂದಬಳಿಕ ಹಾಕುವ ಮೂಲಧನ (ಬಂಡವಲ)ದ ಮೇಲೆ ಬಹಳೇ ಕಡಿಮೆ ಬಡ್ಡಿ ಬರುವದು ಇದೆಲ್ಲವನ್ನು ವಿಚಾರಿಸಿದರೆ ಈ ಭೂಮಿಗೆ ಅಪೇಕ್ಷಿಸಿದ ಬೇಡಿಕೆ ಬರುವದೆಂತು ? ಉಳಿದ ೯ ಎಕರೆಗಳ ಮಾತಂತೂ ದೂರೇ ಉಳಿಯಿತು

ಕಳೆದ ಮಹಾಯುದ್ಧದ ಕಾಲದಲ್ಲಿಯೂ ಹಾಗೂ ಅದರ ತರುವಾಯ ಹಲವು ವರ್ಷಗಳ ವರೆಗೆ ಕಟ್ಟಿಸಿದ ಕಟ್ಟಡಗಳಿಗೆ ಅವುಗಳು ಬಹಳ ತುಟ್ಟಿ ಬಿದ್ದದ್ದರಿಂದ ಸಿಗುವ ವಾರ್ಷಿಕ ಉತ್ಪನ್ನವು ಬಹಳೇ ಕಡಿಮೆ ಬಂದು ಈಗಲೂ ಅದರ ಬಗ್ಗೆ ಅನೇಕರು ಹಳಹಳಿಸುತ್ತಿರುವ ಉದಾಹರಣೆಗಳು ಸಾಕಷ್ಟಿವೆ ಜನರ ಕೈಯಲ್ಲಿ ಈ ದಿವಸಗಳಲ್ಲಿ ಹಿಂದಿನಂತೆ ದುಡ್ಡು

ಕಾಟನ ಮಾರ್ಕೆಟ್ಟು ಚಂದಕಾಣಬೇಕಲ್ಲವೇ ?

ಲೇ—ಶ್ರೀ ಧನಜಿ ಮುಲಜಿ
ಹತ್ತಿ ಆರಳಿ ವ್ಯಾಪಾರಸ್ಥರು, ಹುಬ್ಬಳ್ಳಿ

ಹುಬ್ಬಳ್ಳಿ ಹತ್ತಿ ಆರಳಿ ಪೇಟೆಯು ಅಂದವಾಗಿಯೂ, ಅಚ್ಚುಕಟ್ಟಾಗಿಯೂ ಇರುವದು ಕರ್ನಾಟಕದ ಪ್ರಥಮ ಪಟ್ಟಣವೆಸಿಸಿಕೊಳ್ಳುವ ಹುಬ್ಬಳ್ಳಿಗೆ ಭೂಷಣಾಸ್ಪದವು ಈಗಿನ ಮಾರ್ಕೆಟ್ಟು ಹಾಗಿರುವದಿಲ್ಲ ಅದರ ಗೋಡೆಯು ಎಲ್ಲೆಲ್ಲಿಯೂ ಕುಸಿದುಬಿದ್ದಿರುವದು ಗುದಾಮುಗಳಾಗಲೀ ಜರೆ ಕಟ್ಟಡಗಳಾಗಲೀ ಸುಂದರವಾಗಿಲ್ಲ ಹೊಸ ಸ್ಥಳದಲ್ಲಿ ಎಲ್ಲವೂ ಹೊಸದಾಗುವದರಿಂದ ಇಡೀ ಪೇಟೆಯು ಶೋಭಿಸುವದು ಇದೆಲ್ಲ ನಿಜ ಆದರೆ ದುಡ್ಡೇ ದೊಡ್ಡಪ್ಪನಲ್ಲವೇ ? ಏನೂ ವೆಚ್ಚ ಮಾಡದೆ ಇದೆಲ್ಲವಾಗುತ್ತಿದ್ದರೆ ಪ್ರತಿ ಒಬ್ಬನಿಗೂ ಅದು ಬೇಕಾಗಿತ್ತು ಆದರೆ ಈಗಿನ ಕಾಲದಲ್ಲಿ ಮುನಸೀಪಾಲಿಟಿಯ ಕಡೆಗಾಗಲೀ, ವ್ಯಾಪಾರಸ್ಥರ ಕೈಯಲ್ಲಾಗಲೀ ಸಾಕಷ್ಟು ದುಡ್ಡು ಎಲ್ಲಿಂದ ಬರಬೇಕು ? ಗುದಾಮು, ಶೆಡ್ಡುಗಳನ್ನು ಕಟ್ಟಿಸಿಕೊಳ್ಳುವುದು ದಲಾಲರ ಕೆಲಸ ಅದಕ್ಕೆ ಹೇರಳ ಹಣ ಬೇಕಾಗುವುದು. ಅದೇ ಮೇರೆಗೆ ಮುನಸೀಪಾಲಿಟಿಯು ಕೇವಲ ಒಂದು ಕರ್ಚಾ ಗಟಾರ ಕಟ್ಟಿಸಿ ಒಂದೆರಡು ರಸ್ತೆಗಳನ್ನು ಮಾಡಿದರೆ ಕಾರ್ಯವಾದಂತಾಗಲಿಕ್ಕೆಲ್ಲ ಅಪೇಕ್ಷಿಸಿದಂತೆ ಇಡೀ ಪೇಟೆಯು ಅಚ್ಚುಕಟ್ಟಾಗಿಯೂ, ಆಧುನಿಕ ಸ್ವರೂಪದ್ದೂ ಆಗಬೇಕಾದರೆ ಮುನಸೀಪಾಲಿಟಿಯು ಅಪಾರ ಹಣ ವೆಚ್ಚಮಾಡಬೇಕಾಗುವದು ಈ ಕೆಲಸವು ಹತ್ತಿಪ್ಪತ್ತು ಸಾವಿರಗಳಿಂದಾಗುವದಲ್ಲ ಈಗಿನ ದಿವಸದಲ್ಲಿ ಇಂಥ ಕೆಲಸಗಳಲ್ಲಿ ಹೇಗೆ ಅಳತೆಗೆಟ್ಟು ವೆಚ್ಚ ಮಾಡಬೇಕಾಗುತ್ತದೆಂಬದು ಎಲ್ಲರಿಗೂ ಗೊತ್ತು

ಹಿಂದಿನ ಮುನಸೀಪಾಲಿಟಿಯವರು ೧೯೩೬-೩೭ ರಲ್ಲಿ ತಿರಕಾರಾಮ ಕೆರೆಯ ಜವಳಿನಲ್ಲಿ ಕಟ್ಟಿಸಿದ ಮತ್ತು ಈಗ ನಿರುಪಯೋಗಿಯಾದ ಒಂದೇ ಒಂದು ಗಟಾರಕ್ಕೆ ೩೦,೦೦೦ ರೂಪಾಯಿ ವೆಚ್ಚ ಮಾಡಬೇಕಾಯಿತು ಇದರ ಮೇಲಿಂದ ಹೊಸ ಪ್ರದೇಶಗಳಲ್ಲಿ ನವಸೃಷ್ಟಿಯನ್ನು ನಿರ್ಮಿಸುವುದೆಂದರೆ ಅದೆಷ್ಟು ವೆಚ್ಚದ ಮಾತಾಗಿರಬೇಕೆಂಬದು ಸಹಜ ತಿಳಿಯುವ ಪಂತಿದೆ

ಈಗ ಯೋಜನೆಯನ್ನು ಮಾಡುವವರು ಎಲ್ಲ ಕೆಲಸವು ೨೦-೨೫ ಸಾವಿರದೊಳಗೆ ಆಗುವದೆಂದು ಕಲ್ಪಿಸಬಹುದು. ಆದರ ಒಮ್ಮೆ ಕಾರ್ಯ ಕೈಕೊಂಡಮೇಲೆ ಅದು ತೀರುವತನಕ ಪ್ರಾರಂಭದಲ್ಲಿ ಮಾ

ಇಲ್ಲ ಒಬ್ಬಿಬ್ಬರ ಕೈಯಲ್ಲಿದ್ದರೂ ಅವರು ಅದನ್ನು ಇಂಥ ಯೋಜನೆಗಳಲ್ಲಿ ತೊಡಗಿಸುವಾಗ ಎಲ್ಲವನ್ನೂ ವಿಚಾರಿಸದೆ ತೊಡಗಿಸಲಾರರು ಅಂದಬಳಿಕ ಈಗಿನ ಮಾರ್ಕೆಟ್ಟಿನ ಇಡೀ ಭೂಮಿಯು ಒಮ್ಮೆಲೇ ಮಾರಲ್ಪಟ್ಟು ಅದರ ಕ್ರಯರೂಪನಾಗಿ ಲಕ್ಷಾನುಲಕ್ಷ ರೂಪಾಯಿಗಳು ಬರುವ ದೆಂದು ತಿಳಿಯುವದು ಅನ್ಯಾಯವಹಾರ್ಯವು

ಡಿದ ಲೆಕ್ಕವೆಲ್ಲ ಮೀರಿದಪ್ಪಿಹೋಗಿ ಅನೇಕ ಪಟ್ಟು ಹೆಚ್ಚು ವ್ಯಯವಾಗುವುದು. ಕೆಲವೇ ಹಳೇ ಬೀದಿಗಳನ್ನು ಸ್ವಲ್ಪ ಸುಧಾರಿಸುವದಕ್ಕಾಗಿ (ಡಾಂಬರ ರಸ್ತೆಗಳಲ್ಲ ಈ ಡಾಂಬರ ರಸ್ತೆಗಳಿಗೆ ತಗಲಿದ ಖರ್ಚ ಸಾವಿರ ಬೇರೆ) ಮುನಸೀಪಾಲಟಿಯು ೧೭,೫೦೦ ರೂಪಾಯಿ ನೊನ್ನೆ ನೊನ್ನೆ ವೆಚ್ಚ ಮಾಡಬೇಕಾಯಿತು ಅಂದ ಬಳಿಕ ಆ ಜವಳಿನಲ್ಲಿ ಎಲ್ಲವನ್ನೂ ಹೊಸದಾಗಿ ತಯಾರಿಸಲು ಎಷ್ಟು ಖರ್ಚಾಗಬಹುದೆಂಬದನ್ನು ಊಹಿಸಬಹುದು

ಮೇಲೆ ಹೇಳಿದಂತೆ ಮಾರ್ಕೆಟ್ಟು ಅಂದಕಾಣಬೇಕೆಂಬ ತತ್ವವು ಎಲ್ಲರಿಗೂ ಮಾನ್ಯನಿದ್ದರೂ ವೆಚ್ಚದ ಅಂದಾಯವು ಎಲ್ಲಕ್ಕೂ ಮುಂದಿರುವದರಿಂದ ಮತ್ತು ಸದ್ಯಕ್ಕೆ ಯಾರಿಗೂ ಅನುಕೂಲ ಆರ್ಥಿಕ ಪರಿಸ್ಥಿತಿ ಇಲ್ಲದಿರುವುದರಿಂದ ಇಡೀ ಯೋಜನೆಯನ್ನು ಬದಿಗಿರಿಸಬೇಕಾಗುತ್ತದೆ

Present Site Ample

Continued from page 11

Savanur and Nargund, these presses are bound to attract a certain quantity of cotton grown round their vicinity due to the saving in cartage, so that however efficient the Markets Act may be, one can never hope to build up the Hubli Market to a lac of bales which it previously dealt with and the hoped for increase in bales caused by the Markets Act may well be offset in the near future by the erection of a new press at Annigeri which as already stated is bound to secure a certain quantity of work The Markets Act will benefit Hubli just as much wherever the market is situated, provided there is space enough and as already pointed out no very great increase can be hoped for. Therefore, the present site is ample

Once it is understood that the necessity for removal through lack of space does not exist, other points may be considered viz –

(1) Will the removal damage existing interests ?

(2) Do the general public consider removal necessary for town improvement ?

(3) Will the extra cost to Government through having the Cotton Market separate be so great that they would feel justified in severely damaging the interests of those affected ?

Items (1) and (2) have already been discussed and written about and as regards item (3) the writer is not in a position to comment

An ideal place

Continued from page 11

5. The present site if sold would fetch a very good price and the amount realised thereon can be utilised with advantages for public utility purposes like construction of the Robertson Market etc. which are of urgent necessity.

6. The presumption that the transport expenses would increase if the market is shifted is not correct Because the cotton growers bring their cotton in their own carts

7. The kappas carts would come directly to the market from outside the city and thus lessen traffic accidents.

8 The proposed site is an ideal place for the new market as it is outside the city proper with all the advantages of wide area and suitable for proper planning and consequent freedom from congestion for construction of go-downs from fire.

9. Removal of the present market does not lead to the lepression of the trade.

10 Our friends (owners of factories surrounding the present market) say that they would be involved into heavy loss by removing and setting up their machinery near the proposed market if the present market is removed. For this we have to say that hey need not remove their machineries to the new site Because, the ginning and pressing factories that are now far away from the present market, are working very well. If the present market were to be shifted to the new site, their position would be the same as those factories that are now at a distance from the present market and there is no reason why they would claim to be placed in a more advantageous position than others.

11. The cotton trade will not be inconvenienced by the shifting of the market in respect of ginning and pressing as there are about the same number of ginning and pressing factories around the proposed site. For information we give below the list of ginning and pressing factories surrounding the proposed and the present markets.

Ginning Factories.

Present Cotton Market

	No. of Gins.
1. N. H Belgaumwalla	29
2 Karnatak Ginning	21
3. Hubli Ginning and Trading Company	15
4. Gujrat Mfg. Co.	10
5. Kale Ginning	4
6. Arjun Khimji & Co.	20
	99

Proposed Cotton Market

	No. of Gins.
1. Bharat Mills Co.	31
2. Deccan Ginning	24
3. N. Hirachand Lakhamsi	21
4. B. C. Neeli	18
5. Dhanjibhai Patel	16
6. Dahaji Devichand	16
7. V D. Manvi	12
8. B. S. Neeli	10
9. Sirur Ginning	10
10. Darbar Ginning	11
	169

Keshwapur Group Ginning

1. Dongarsi Jivraj	21
2. Nutan Chandrodaya	16
3. V. C. Bannurmath	14
4. Gangadhar Shamji	9
	60

Pressing Factories.

Present cotton Market

1. N. H. Belgaumwalla
2. Victoria Pressing
3. West Patent Press
4. Arjun Khimji & Co.
5. Mahalaxmi
6. H. Bulla

Proposed Cotton Market.

1. Bharat Mills co.
2. Math Press
3. New Mofussil
4. Deccan Pressing Co.
5. N. Hirachand Lakhamsu

(Keshwapur. Bannurmath Pressing Factory)

The distance from Keshwapur to both the sides being the same they need not be taken into account.

ಸ್ಥಳಾಂತರದಿಂದ

ಯಾವ ಹಾನಿ ಇಲ್ಲ

ಸ್ಥಳಾಂತರಿಸಬೇಕೆನ್ನುವ ದಲಾಲರ ಪ್ರತಿನಿಧಿಗಳಾದ ಶ್ರೀ. ಚನ್ನಬಸಪ್ಪ ಬೆಂಡಿಗೇರಿ ಹಾಗೂ ಶ್ರೀ. ಸಂಗಪ್ಪ ಕೊರವಿ ಇವರು ಕಲೆಕ್ಟರರಿಗೆ ಒಪ್ಪಿಸಿದ ಮನವಿಯಿದು — ಸಂಪಾದಕ

ತಮ್ಮ ಸೂಚನೆಯ ಮೇರೆಗೆ ನಾವು ನಮ್ಮ ಅಭಿಪ್ರಾಯಗಳನ್ನು ಕೆಳಗಿನಂತೆ ತಮ್ಮ ಗಮನಕ್ಕೆ ತರಲನೇಸ್ಸಿಸುವೆವು.

ಕಾಟನ್ ಮಾರ್ಕೆಟನ್ನು ಹೊಸ ಜಾಗೆಗೆ ಒಯ್ಯಲು ಒಪ್ಪದವರಲ್ಲಿ ಕೆಲವು ಜಿನ್ ಹಾಗು ಪ್ರೆಸ್ಸುಗಳ ಒಡೆಯರು ಇರುವರು. ಅವರು ಕೊಡುವ ಕಾರಣಗಳಲ್ಲಿ ವ್ಯಾಪಾರದ ಮುಗ್ಗಟ್ಟು ಹಾಗು ಈ ಸ್ಥಳಾಂತರದ ಮೂಲಕ ಆಗುವ ಸದ್ಯದ ಕಾಟನ್ ಮಾರ್ಕೆಟ್ಟಿನ ಸುತ್ತಲಿನ ಫ್ಯಾಕ್ಟರಿಗಳ ನಾಶ ಇವೆರಡಾಗಿವೆ.

ಇನ್ನು ವ್ಯಾಪಾರಿ ಮುಗ್ಗಟ್ಟು ನಿಜವಾಗಿಯೇ ಇರುವದೋ ಇಲ್ಲವೋ ಎಂಬುದನ್ನಿಷ್ಟು ನೋಡುವಾ. ೧೯೧೪ ರಿಂದ ೧೯೩೪ರ ವರೆಗೆ ಹುಬ್ಬಳ್ಳಿ ಕಾಟನ್ ಮಾರ್ಕೆಟ್ಟಿಗೆ ಬಂದ ಹತ್ತಿ ಗಂಟುಗಳ ಸರಾಸರಿಯು ೭೫,೦೦೦ ದಷ್ಟಿದೆ. ಆಗ ಅಲ್ಪತಂತುವಿನ ಹತ್ತಿಯು ವಿಜಾಪುರ ಜಿಲ್ಲೆ, ಮೊಗಲಾಯಿ, ಹರಿಹರ, ಡಾವಣಗೇರಿ, ಖಾನದೇಶ, ಇರಾಣ ಹಾಗು ತೆಹರಾನಗಳಿಂದಲೂ (ಮಿಲ್ ಫ್ಲಾಯ್) ಹತ್ತಿಯು ಮದ್ರಾಸ ಮುಂಬಯಿಗಳಿಂದಲೂ ತರಿಸಲ್ಪಟ್ಟು ಅವುಗಳ ಬೆರಿಕೆಯಿಂದ ಶುದ್ಧ ಕುಮಟಾ ಹತ್ತಿಯು ಹುಬ್ಬಳ್ಳಿ ಹತ್ತಿಪೇಟೆಗೆ ೨೫-೩೦ ಸಾವಿರ ಗಂಟುಗಳಷ್ಟು ಬರುತ್ತಿತ್ತು. ಕುಮಟಾ ಹತ್ತಿಯ ಶ್ರೇಷ್ಠ ಗುಣವು ಅಳಿದು ಪರದೇಶ ವ್ಯಾಪಾರಿಗಳ ಹಾಗು ಉಪಯೋಗಿಸುವವರ ಬಹುದಿನದ ಮೆಚ್ಚಿಗೆಯನ್ನು ಅದು ಕಳೆದುಕೊಂಡಿತು. ಒಂದು (ಕ್ಯಾಂಡಿ) ನಗಕ್ಕೆ ಮುಂಬಯಿಯಲ್ಲಿ ಬಡೋಚ ಹತ್ತಿಗಿಂತ ೧೫-೨೦ ರೂ. ಕಡಿಮೆ ಬರುತ್ತಿತ್ತು. ಇದರಿಂದ ಹತ್ತಿ ಬೆಳೆಯುವವರಿಗೆ ಅಪಾರ ಹಾನಿಯಾಯಿತು. ಗಿರಣಿಗಳ ಹಾಗು ಪರದೇಶ ವ್ಯಾಪಾರಿಗಳ ಬಿನ್ನಹದ ಮೇರೆಗೆ ಈ ಬೆರಿಕೆಯನ್ನು ನಿಲ್ಲಿಸಬೇಕೆಂಬ ವಿಷಯವನ್ನು ವಿಚಾರಿಸಿ ವರದಿಯನ್ನೊಪ್ಪಿಸಲು ಸರಕಾರವು ೧೯೧೬ರಲ್ಲಿ ಒಂದು ಕಮೀಟಿಯನ್ನು ನಿಯಮಿಸಿತು. ಈ ಕಮೀಟಿಯು ಕೂಲಂಕಷ ವಿಚಾರಣೆ ನಡೆಸಿ ಕುಮಟಾ ಹತ್ತಿಯ ಕ್ಷೇತ್ರದ ಸಂರಕ್ಷಣೆಗಾಗಿ ಹತ್ತಿ ನಿಯಂತ್ರಣ ಕಾಯಿದೆಯ ಅತ್ಯವಶ್ಯವೆಂದು ಅಭಿಪ್ರಾಯಪಟ್ಟರು ಸರಕಾರವಾದರೂ ಕೃಷಿಖಾತೆಯ ಸಲಹೆ ಪಡೆದು ೧೯೨೪ ರಲ್ಲಿ ಸಾತಾರಾದಿಂದ ದಕ್ಷಿಣಕ್ಕೆ ಚಳಗೇರಿಯ ವರೆಗೂ ಪೂರ್ವಕ್ಕೆ ಆಲೂರವರೆಗೂ ಕುಮಟಾ ಹತ್ತಿ ಕ್ಷೇತ್ರವೆಂದು ನಿರ್ದಿಷ್ಟಗೊಳಿಸಿತು.

ಅಂದಿನಿಂದ ಕುಮಟಾ ಹತ್ತಿಯು ತುಂಬಾ ಸುಧಾರಿಸಿ ಮುಂಬೈ ಮದ್ರಾಸಗಳಲ್ಲಿ ಅದಕ್ಕೆ ವ್ಯಾಪಕತ್ವವು ದೊರೆಯಹತ್ತಿತು. ಮತ್ತು, ಭಡೋಚ ಹೆಜ್ ಕಂಟ್ರ್ಯಾಕ್ಟದಲ್ಲಿ ಅದಕ್ಕೆ ಕಾಯಿದೆಬದ್ಧ ಸ್ಥಾನವು ವ್ಯಾಪ್ತವಾಯಿತು. ಇದಕ್ಕೂ ಮೊದಲು ಅದು "ಸದರ್ನ್" ಎಂಬ ಡೆಡ್‌ಪೆಜ್ ಕಂಟ್ರಾಕ್ಟದ ಸದರಿನಲ್ಲಿ ಎಣಿಸಲ್ಪಡುತ್ತಿತ್ತು. ಬೀಜಗಳ ಸುಧಾರಣೆ ಹಾಗು ಪ್ರಸಾರ ಕ್ಕೋಸುಗ ಕೃಷಿಖಾತೆಯು ಬೀಜದ ಫಾರ್ಮುಗಳನ್ನು ಪ್ರಾರಂಭಿಸಿತು. ಇದಕ್ಕೋಸುಗ ಇಂಡಿಯನ್ ಸೆಂಟ್ರಲ್ ಕಾಟನ್ ಕಮೀಟಿಯು ಒಂದುಲಕ್ಷ ರೂ. ಗಳ ವರೆಗೆ ಧಾರಾಳವಾದ ಧನಸಹಾಯವನ್ನೊದಗಿಸುತ್ತಿದೆ. ಜನರು ಹೆಚ್ಚೆಚ್ಚು ಸುಧಾರಿಸಿದ ಹತ್ತಿಯನ್ನು ಬೆಳೆಯಹತ್ತಿದರು. ಈಗ ಹತ್ತಿಯನ್ನು ಬೆಳೆಯುವ ಒಟ್ಟು ಕ್ಷೇತ್ರವು ಧಾರವಾಡ ಜಿಲ್ಲೆಯಲ್ಲಿ (ನೆರೆಯ ಸಂಸ್ಥಾನಗಳು ಹಾಗು ನಿಜಾಮಹದ್ದಿಯಲ್ಲಿಯ ಪರವಾನಿಗೆ ಪಡೆದ ಕ್ಷೇತ್ರಸಹಿತ) ೮,೦೦,೦೦೦ ಎಕರೆಗಳಷ್ಟಿದೆ. ಅಂದರೆ ೧೯೨೪ರಕ್ಕಿಂತ ಮೊದಲಿನ ಸಂಖ್ಯೆಯ ಇಮ್ಮಡಿಯಾಗಿದೆ.

ಕಾಟನ್ ಕಂಟ್ರೋಲ ಆಕ್ಟದ ಪರಿಣಾಮವಾಗಿ ಹುಬ್ಬಳ್ಳಿಯು ಹೊರಗಿನಿಂದ ಬರುತ್ತಿದ್ದ ಅಲ್ಪ ತಂತುವಿನ ಸುಮಾರು ೩೦ ಸಾವಿರ ಗಂಟುಗಳಷ್ಟು ಹತ್ತಿಯನ್ನು ಕಳೆದುಕೊಂಡರೂ ಅದಕ್ಕೆ ತನ್ನ ಕ್ಷೇತ್ರದಲ್ಲಿಯೇ ಅಷ್ಟೇ ಹತ್ತಿಯು ಕೃಷಿ ಖಾತೆಯ ಪ್ರಯತ್ನದಿಂದ ದೊರೆಯುತ್ತಿದೆ. ಈಗ ಜಯವಂತ ಹತ್ತಿಗೆ ಭಡೋಚ ದರದ ಮೇಲೆ ೪೦-೫೦ ರೂ. ಬರುವದು. ಇದರಿಂದ ಹತ್ತಿ ಬೆಳೆಯುವವರಿಗೆ ಮೊದಲಿಗಿಂತ ಮುಂಬಯಿ ಒಂದು ಖಂಡಿಗೆ (೭೮ ಮಣ) ೪೦ ರೂ. ಹೆಚ್ಚಿಗೆ ದೊರೆತಂತಾಗುವದೆಂದು ಹೇಳಲಡ್ಡಿಯಿಲ್ಲ. ೧೯೨೪ ರಿಂದ ೧೯೩೯ ರ ವರೆಗೆ ಬಂದ ಸರಾಸರಿ ಹತ್ತಿಗಂಟುಗಳ ಸಂಖ್ಯೆಯು ೫೮,೦೦೦ ಇರುವದು. ಕಾಂಬಿನೇಶನ್ ಪ್ರೆಸ್ಸಿನ ನಿಕ್ಕಿ ಅಂಕಿಯು ೧೯೪೦ ರಲ್ಲಿ ೪೫ ಸಾವಿರವಿದೆ. ಅದರಲ್ಲಿ ಸ್ವದೇಶಿ, ಟಾಟಾ, ಭಾರತ, ಮುಂಬಯಿ ಬಣ್ಣದ ಗಿರಣಿಗಳು ಮಾಡಿದ ಸುಮಾರು ೧೨,೦೦೦ ಗಂಟುಗಳು ಸೇರಿಲ್ಲ. ಇದಲ್ಲದೆ ಸುಮಾರು ೧೦,೫೦೦ ಗಂಟುಗಳು ಧಾರವಾಡ, ಡಾವಣಗೆರೆ, ಬೈಲಹೊಂಗಲ ಮತ್ತು ಗೋಕಾಕಗಳಿಗೆ ಕಳಿಸಲ್ಪಟ್ಟವೆ. ಹೀಗೆ ಹುಬ್ಬಳ್ಳಿಯಲ್ಲಿ ನೂರಾಟವಾದ ಒಟ್ಟು ಗಂಟುಗಳ ಸಂಖ್ಯೆಯು (ಶಿಲ್ಕು ಉಳಿದ ೪೦೦೦ ಗಂಟು ಸಹಿತ) ೭೦,೦೦೦ ಗಂಟುಗಳಾಗಬಹುದು. ೧೯೨೪ ರ ಮೊದಲು ಸರಾಸರಿಯು ೭೫,೦೦೦ ವಿದ್ದಿತು ಈಗ

...ಯ ಭಟ್ಟಿ ನೋಡಿರಿ

ಯಾವ ಹಾನಿ ಇಲ್ಲ

ಜಾಹೀರಾತಿನ ಪ್ರತಿಯಿಂದ

೭೦,೦೦೦ ಇರುವದು. ೫೦೦೦ ಗಂಟುಗಳ ಅಂತರವೇನೂ ಆಷ್ಟೊಂದು ಮಹತ್ವ ದ್ದಲ್ಲ.

ಪ್ರೆಸ್ ಮತ್ತು ಜಿನ್ ಫ್ಯಾಕ್ಟರಿ ಒಡೆಯರು ಜಿನಿಂಗ ಮತ್ತು ಪ್ರೆಸಿಂಗ ಕಾಂಬಿನೇಶನ್ ಮಾಡಿಕೊಂಡು ಹೆಚ್ಚಿನ ಧಾರಣಿಯನ್ನು ಕಾಯುತ್ತ ಬಂದಿರುವರು. ಜಿನಿಂಗ ಮತ್ತು ಪ್ರೆಸಿಂಗದ ಹೆಚ್ಚಿನ ಧಾರಣಿಯನ್ನು ಅನುಲಕ್ಷಿಸಿ ಕೊಂಡು ಕೊಳ್ಳುವವರು ಹತ್ತಿಗೆ ಹೆಚ್ಚು ಬೆಲೆಯನ್ನು ಕೊಡಮಾಡದಿರುವದು ಸ್ವಾಭಾವಿಕವಾಗಿದೆ. ಆದುದರಿಂದ ಹತ್ತಿ ಬೆಳೆಯುವವರಿಗೆ ಒಂದುಖಂಡಿಗೆ ಮುಂಬಯಿಗಿಂತಲೂ ೧೦, ೧೫ ರೂ. ಕಡಿಮೆ ದೊರೆಯುವದು. ಹುಬ್ಬಳ್ಳಿಯಲ್ಲಿರುವ ಜಿನಿಂಗ ಹಾಗೂ ಪ್ರೆಸ್ಸಿಂಗ ದರದಮೂಲಕ ಸವಣೂರ, ಶಾಕೇಬೆನ್ನೂರ ನರಗುಂದ ಹಾಗು ಧಾರವಾಡಗಳಲ್ಲಿ ಪ್ರೆಸಿಂಗ ಫ್ಯಾಕ್ಟರಿಗಳು ನಿರ್ಮಾಣವಾದವು. ಈ ಫ್ಯಾಕ್ಟರಿಗಳ ಒಡೆಯರು ದರಗಳನ್ನಿಳಿಸಿದರು ಇದರಿಂದ ಪೇಟೆಗೆ ಬರುತ್ತಿದ್ದ ಹತ್ತಿಯು ಮೇಲಿನ ಊರುಗಳಿಗೆ ಒಯ್ಯಲ್ಪಡಹತ್ತಿತು. ಅಂದರೆ ಹುಬ್ಬಳ್ಳಿಗೆ ಬರುತ್ತಿದ್ದ ಹತ್ತಿಯೆಲ್ಲ ಅತ್ತ ಹೊರಳಿತು.

ಈ ಸುತ್ತಮುತ್ತಲಿನ ಫ್ಯಾಕ್ಟರಿಗಳಲ್ಲಿ ಪ್ರತಿವರ್ಷವೂ ಸುಮಾರು ೫೫೦೦೦ ಗಂಟುಗಳು ಕಟ್ಟಲ್ಪಡುವವು. ಸುತ್ತು ಮುತ್ತು ಈ ಫ್ಯಾಕ್ಟರಿಗಳಲ್ಲದಿದ್ದರೆ ಈ ೫೫ ಸಾವಿರ ಗಂಟುಗಳು ಹುಬ್ಬಳ್ಳಿ ಪೇಟೆಗೆ ಬರಬಹುದಾಗಿತ್ತು. ಆದರಿಂದ ಒಟ್ಟು ಗಂಟುಗಳ ಸಂಖ್ಯೆಯು ೧೫ ಸಾವಿರಕ್ಕೆ ನಿರುತ್ತಿತ್ತು. ಅಂದಬಳಿಕ ಹತ್ತೀ ವ್ಯಾಪಾರದ ಮುಗ್ಗಟ್ಟಿಗೆ ಮುಖ್ಯವಾಗಿ ಧಾರವಾಡ ಜಿನಿಂಗ ಹಾಗು ಪ್ರೆಸಿಂಗ ದರಗಳೇ ಕಾರಣವಾಗಿವೆ. ವ್ಯಾಪಾರದ ಮುಗ್ಗಟ್ಟು ಎಂದು ಅವರನ್ನು ವ ಕಾರಣವು ತೀರಾ ನಿರಾಧಾರವಾದುದು

ಇನ್ನು ಎರಡನೆಯ ಕಾರಣ ಹೊಸ ಜಾಗೆಗೆ ಕಾಟನ್ ಮಾರ್ಕೆಟನ್ನು ಒಯ್ಯುವದರಿಂದ ಸದ್ಯದ ಮಾರ್ಕೆಟಿನ ಸುತ್ತಲಿರುವ ತಮ್ಮ ಫ್ಯಾಕ್ಟರಿಗಳು ಅಳಿದುಹೋಗುವವೆ ಮು ಅವರ ಅಭಿಪ್ರಾಯ. ಆದರೆ ಸದ್ಯದ ಕಾಟನ್ ಮಾರ್ಕೆಟಿನಿಂದ ಬಹು ದೂರವಿರುವ ಜಿನಿಂಗ ಫ್ಯಾಕ್ಟರಿಗಳು ಒಳ್ಳೇ ಸ್ಥಿತಿಯಲ್ಲಿ ಸಾಗಿವೆ. ಮಾರ್ಕೆಟಿನ ಸಮೀಪದ ಜಿನಿಂಗ ಫ್ಯಾಕ್ಟರಿಗಳಷ್ಟೇ ಹತ್ತಿಯನ್ನು ಇವು ನುರಿಸುವವು ದೂರದ ಪ್ರೆಸ್ ಫ್ಯಾಕ್ಟರಿಗಳೂ ಸಮೀಪದ ಪ್ರೆಸ ಫ್ಯಾಕ್ಟರಿಗಳಷ್ಟೇ ಗಂಟಗಳನ್ನು ಕಟ್ಟುವವೆ. ಆದುದರಿಂದ ಮೇಲಿನ ವಿಧಾನಕ್ಕೆ ತಳಬುಡವಿಲ್ಲೆನ್ನಬಹುದು.

ಫ್ಯಾಕ್ಟರಿಗಳ ಒಡೆಯರು ಕಾಂಬಿನೇಶನ್ ಮಾಡಿಕೊಂಡು ಬಹು ದಿನಗಳಿಂದ ಅತಿ ಲಾಭವನ್ನು ಪಡೆಯುತ್ತಿರುವರು ಸದ್ಯದ ಕಾಟನ್ ಮಾರ್ಕೆಟ್ಟು ಮುಂಗಾರಿ ಮಳೆಯಿಂದ ಹತ್ತಿಯನ್ನು ಸರಂಕ್ಷಿಸಲು

An Untimely Venture

Sjt. S. V. Sirur

Representing M/s N. A Sirur

New projects or ventures, if they are to be successful require to be undertaken only at proper times. The proposed removal of cotton market to the Tirkaram Tank-bed outside the town is in the first place most inadvisable on account of the unsuitable and unhealthy site. Moreover this is not the time to make new plans, calculations, schemes etc., obviously due to the most unfavourable trade and economic conditions. The present war has added to the unfavourability. I know of schemes that have proved successful as they were undertaken at proper time and proper place. Schemes of the same nature ventured upon at improper place and improper time have utterly failed There are concrete instances of this statement. A housing scheme in Bombay proved beneficial as it was outlined and carried out during a favourable period. But another housing scheme of the same nature and proportion entirely failed in the Bombay suburban district as it was planned and undertaken at unfavourable times. The former scheme has not only achieved its original goal and gives good return or investment but has also proved an object lesson to the subsequent projects. But the latter on the contrary served as a warning to those who ventured without due consideration to time and place.

Here we have to take a note from the above and see whether the time and place to plan the shifting of the cotton-market from its present convenient site to a doubtful one is advisable. Again, we have to consider why such a proposal in 192[illegible] was abandoned even after spending a huge amount of about Rs. 30,000/- on a drain at the Tirkaram Tank bed There have been no reasons in favour of the proposal now after a lapse of 15 years during which period if there has been any change it has been more unfavourable to undertake any new scheme. Under such circumstances would it be advisable to finally chalk out any new scheme until normal times return? No! Not under any circumstaces !!

ಅಸಮರ್ಥವಿದೆಯೆಂಬ ಮಾತನ್ನು ಅರಿತೂ ಕೂಡಾ ಈ ಫ್ಯಾಕ್ಟರಿ ಒಡೆಯರು ನಗರದ ವ್ಯಾಪಾರಾಭಿವೃದ್ಧಿಗೆ, ನಗರ ಸ್ವಚ್ಛತೆಗೆ ಹಾಗೂ ನಗರಸುಧಾರಣೆಗಳಿಗೆ ಅಡ್ಡಗಾಲು ಹಾಕುತ್ತಿರುವದು ವಿಷಾದಕರವು. ಸದ್ಯದ ಮಾರ್ಕೆಟಿಗೆ ಸಮೀಪವಿದ್ದು ೮—೧೦ ಸಾವಿರ ವಾರ್ಷಿಕ ಲಾಭದ ಭರವಸೆಯಿರುವ ಈ ಫ್ಯಾಕ್ಟರಿಗಳು ಕಾಟನ್ ಮಾರ್ಕೆಟಿನಲ್ಲಿ ಸ್ಥಳ ಸಂಕೋಚದ ಲಾಭ ಪಡೆದು ತಮ್ಮ ತಮ್ಮ ವಖಾರಗಳನ್ನು ಪ್ರೆಸ್ಸುಗಳನ್ನು ಹತ್ತಿ ದಲಾಲರಿಗೆ ಭಾರಿ ಬಾಡಿಗೆಗೆ ಕೊಡುತ್ತಿರುವರು. ಈ ವೆಟ್ಟು ಕೊನೆಗೆ ಹತ್ತಿ ಬೆಳೆಯುವವರಿಗೇ ಬೀಳುವದು. ಈ ಪ್ರಕಾರ ಈ ಫ್ಯಾಕ್ಟರಿಗಳಿಗೆ ಬರುತ್ತಿರುವ ವಾರ್ಷಿಕ ಆದಾಯವು ೧೦೦೦ ರಿಂದ ೩೦೦೦ ಕ್ಕೆ ಹೋಗುವದು.

ಕೊನೆಗೆ ನಾವು ಬೇಡಿಕೊಳ್ಳುವದೇನಂದರೆ ಮೇಲಿನ ಸಂಗತಿಗಳನ್ನೆಲ್ಲ ಪರ್ಯಾಲೋಚಿಸಿ ಬಹು ದಿನಗಳಿಂದ ನೆನೆಗುದಿಗೆ ಬಿದ್ದ ಈ ಕಾಟನ್ ಮಾರ್ಕೆಟ ಸ್ಥಳಾಂತರಕ್ಕೆ ತಾವು ಆಜ್ಞೆ ಹೊರಡಿಸಬೇಕಾಗಿ ಬಿನ್ನವಿಸುತ್ತೇವೆ. ಭಾವೀ ಮಾರ್ಕೆಟಿನ ಸ್ಥಳವು ಸ್ವಚ್ಛ ಹನೆಯ ಪ್ರದೇಶವು. ಆರೋಗ್ಯಕರವಾಗಿದ್ದು ೫೨ ಎಕರೆ ವಿಸ್ತೀರ್ಣವಾಗಿದೆ ಇದರ ಸುತ್ತಲು ದೇಶಪಾಂಡೆ ನಗರ, ಕೊಯೆನ್ ಬಂಗ್ಲೆ, ಡಿಸ್ಪ್ರಿಕ್ಟ ಬಂಗ್ಲೆ, ಮತ್ತು ವೆಸ್ಟ ಪೇಟಂಟ ಪ್ರೆಸ್‌ದ ಮ್ಯಾನೇಜರರೂ ಈ ವಿಹತ ಹೊಸ ಯೋಜನೆಗೆ ವಿರೋಧಿಸುವವರ ಮುಂದಾಳುಗಳೂ ಆದ ಮಿ ಸಿಸ್ನೆಟ್ ಇವರಬಂಗ್ಲೆಗಳೂ ಇರುವವು.

ಇದು ಸರಕಾರಿಣವಲ್ಲ

ಶ್ರೀ. ವೀರಪ್ಪ ಚನಮಲ್ಲಪ್ಪ ನೂಲ್ವಿ

ಬಿ. ಕಟಿಗಿ ಮತ್ತು ನೂಲ್ವಿ ಈ ಅಂಗಡಿಯ ಭಾಗೀದಾರರು

ಮುಂಬಯಿ ಸರಕಾರದವರು ಹುಬ್ಬಳ್ಳಿ ಮಾರ್ಕೆಟಿಗೆ ಮಾರ್ಕೆಟ ಆ್ಯಕ್ಟನ್ನು ಅನ್ವಯಿಸಿದರೆ ಸದ್ಯದ ಸ್ಥಳವು ಕಡಿಮೆ ಯಾಗುವದೆಂದು ಕೆಲವರು ಅನ್ನುವರು. ಏಕೆಂದರೆ ಹತ್ತಿ ಅರಳೆ ಮಾರ್ಕೆಟು ಮತ್ತು ರೋಕ ಧಾನ್ಯದವಸಗಳ ಪೇಟೆಯೂ ಒತ್ತಟ್ಟಿಗಿರಬೇಕೆಂದು ಕೆಲವರ ತಿಳುವಳಿಕೆಯಾಗಿದೆ. ಆದರೆ ಕಾಯಿದೆಯಲ್ಲಿ ಹಾಗೇನೂ ಇಲ್ಲ. ಹತ್ತಿ ಅರಳೆಯ ಪೇಟೆಯು ಮತ್ತು ಧಾನ್ಯದವಸಗಳ ಪೇಟೆಯು ಬೇರೆ ಬೇರೆ ಇರಲು ಯಾವದೇ ಆತಂಕವಿಲ್ಲ ಒಂದು ವೇಳೆ ಎರಡೂ ಒಂದಕ್ಕೊಂದು ತಾಗಿ ಇಲ್ಲನೇ ಒಂದೇ ಸ್ಥಳದಲ್ಲಿ ಇದ್ದರೆ ಆವೆರಡನ್ನೂ ನಿಯಂತ್ರಿಸಲು ಸರಕಾರೀ ಮಾರ್ಕೆಟ ಅಧಿಕಾರಸ್ಥರಿಗೆ (Market Officer) ಅನುಕೂಲವಾಗುವದು ನಿಜ ಆದರೆ ಒಬ್ಬಿಬ್ಬ ಅಧಿಕಾರಸ್ಥರ ಅನುಕೂಲತೆಗಾಗಿ ಎರಡೂ ಪೇಟೆಗಳು ಒತ್ತಟ್ಟಿಗಿರಬೇಕೆನ್ನುವದು ಅಸಮಂಜಸವು ಸರಕಾರದವರಾದರೂ ಹೀಗೆ ಎಂದೂ ಜಿನ್ನಲಿಕ್ಕಿಲ್ಲ ಹತ್ತಿ ಅರಳೆಯ ಹಾಗೂ ರೋಕ ಧಾನ್ಯ ದವಸಗಳ ವ್ಯಾಪಾರಸ್ಥಳಗಳನ್ನು ಬದಲಾಯಿಸುವದರಿಂದ ಅವುಗಳ ಭವಿಷ್ಯವು ಎಲ್ಲ ದೃಷ್ಟಿಯಿಂದ ಅನಿಶ್ಚಿತವೆಂದು ಕಂಡು ಬರುತ್ತಿರುವಾಗ ಹಾಗೂ ಈಗಿನ ಪರಿಸ್ಥಿತಿಯಲ್ಲಿ ಅವುಗಳನ್ನು ಸ್ಥಳಾಂತರಿಸುವದು ಪ್ರತಿಕೂಲವೆಂದೆನಿಸುವಾಗ ಯಾರೂ ಈ ವಿಷಯದಲ್ಲಿ ಆಗ್ರಹಹಿಡಿಯಲಾರರು. ಮಾರ್ಕೆಟ ಆ್ಯಕ್ಟು ಅನ್ವಯಿಸಿದರೂ ಈಗಿನ ೧೪ ಎಕರೆಯ ಕಾಟನ ಮಾರ್ಕೆಟಿನ ಸ್ಥಳವು ೪೦,೦೦೦-೫೦,೦೦೦ ಗಂಟಿನ ವ್ಯಾಪಾರಕ್ಕೆ ಸಾಕಷ್ಟಿದೆ. ಆದರಲ್ಲಿ ಸ್ವಲ್ಪ ವೆಚ್ಚದಿಂದ ಸುಧಾರಣೆ ಮಾಡಿದರೆ ಮಾರ್ಕೆಟ ಆ್ಯಕ್ಟಿಗೆ ಬಾಧೆ ಬರದಂತೆ ಕೆಲಸ ಮಾಡಲು ಎಲ್ಲ ಅನುಕೂಲತೆಗಳು ಅಲ್ಲಿ ಒದಗುವವು.

ಮಾರ್ಕೆಟ ಆ್ಯಕ್ಟ ಹುಬ್ಬಳ್ಳಿ ಪೇಟೆಗೆ ಅನ್ವಯಿಸಿದರೆ ಎಲ್ಲ ಹತ್ತಿ ಅರಳೆ ವ್ಯಾಪಾರವು ಕೇವಲ ಲಿಲಾವಿನಿಂದಲೇ ನಡೆಯಬೇಕಾಗುವದು. ಲಿಲಾವು ಆಗಬೇಕಾದರೆ ಎಲ್ಲ ಹತ್ತಿ ಅರಳೆ ಅಂಡಿಗಿಗಳನ್ನು ತರಗತಿಯ ಪ್ರಕಾರ ನಿಟ್ಟು ಹಚ್ಚಬೇಕಾಗುವದು. ಆದ್ದರಿಂದ ಬಹಳೇ ವಿಸ್ತೀರ್ಣ ಸ್ಥಳವು ಅವಶ್ಯವಿರುವದೆಂಬ ಕಲ್ಪನೆಯು ಅನೇಕ ಜನರಲ್ಲಾಗಿರುತ್ತದೆ. ಆದರೆ ಈ ಕಾಯಿದೆಯ ಯಾವ ಕಲಮಿನಲ್ಲಿಯೂ ಲಿಲಾವಿನಿಂದಲೇ ಹತ್ತಿ ಅರಳೆಯನ್ನು ನೂರಬೇಕಾಗುವದೆಂದು ಹೇಳಿರುವದಿಲ್ಲ ಗುಪ್ತರೀತಿಯಿಂದ (ಉದಾಹರಣಾರ್ಥವಾಗಿ ಈಗಿನ ಸದ್ಧತಿಯ ಪ್ರಕಾರ ಕೈವಸ್ತ್ರದ ಕೆಳಗೆ ಕೈಹಾಕಿ ಧಾರಣಿ ನಿಶ್ಚಯಿಸುವ ಪದ್ಧತಿಯು) ಧಾರಣಿ ರರಾಯಿಸಬಾರದು ಉಳಿದರೀತಿಯಿಂದ ವ್ಯವಹಾರವಾಗಬೇಕು ಎಂಬ ನಿಯಮ ಮಾತ್ರ ಈ ಕಾಯಿದೆಯಲ್ಲಿರುವದು. ಆದ್ದರಿಂದ ಕಾಟನ ಮಾರ್ಕೆಟಿಗೆ ಅತಿ ವಿಸ್ತೀರ್ಣ ಬಯಲುಗಳಿರಬೇಕೆಂಬದು ಆವಶ್ಯಕವಲ್ಲ. ಈ ದೃಷ್ಟಿಯಿಂದ ನೋಡಿದರೆ ಈಗಿರುವ ಮಾರ್ಕೆಟಿನ ಸ್ಥಳವು ಮಾರ್ಕೆಟ ಕಾಯಿದೆ ಅನ್ವಯಿಸಿದ ನಂತರ ಕೂಡ ಸಹಜವಾಗಿ ಸಾಲುವದೆಂದು ಕಂಡು ಬರುವದು. ಇಂದ ಬಳಿಕ ಸ್ಥಳ ಕಡಿಮೆ ಎಂದು ಇಂಥ ಪ್ರತಿಕೂಲ ಪರಿಸ್ಥಿತಿಯಲ್ಲಿ ಮಾರ್ಕೆಟನ್ನು ಬೇರೆ ಕಡೆಗೆ ಒಯ್ಯಲು ಕಾರಣವಿಲ್ಲ

Estimates often go wrong

Shri I. V. Wali
Representing
M/s V. D. Wali firm

I hear from different versions from different quarters about the estimated costs of making the proposed site an up-to date Cotton Market. Some say that Rs. 20,000/- might be enough while others talk that not even Rs 50,000/- would suffice for the whole work from beginning to end. Thus there seems confusion I therefore try to clear the point.

Some rough estimates might have been made by the proposers of the scheme. But these must have been based on wrong calculations. Now every material has gone high in price in some cases even by cent per cent and it is not known when the prices would come to a normal standard. It is doubtful whether the proposers have taken into consideration that they will have to slope the whole area on one side thereby making it easy for rain water to drain off. Unless this is done how can the area be made dry which now being very low gets flooded with water during rains and even when there are occasional heavy showers? Besides, estimates in such new and big projects many a time go wrong.

Though in the beginning it is expected that a project undertaken can be completed within a specified estimate, the actual total expense incurred at the end enormously exceeds the original figure. This is the usual experience even in taking to a finish an ordinary building or structure. The proposed scheme after all is an experiment where everything will have to be newly created. Experts conversant only with a particular line see only in a particular angle. They do not see all the sides of the question. Thus an expert who may be consulted over suitability of the proposed site may say that though the site at present may not be suitable it can be made suitable. But he does not consider the question of the cost and the other expert who is consulted about costs does not consider whether the total costs would be bearable for those on whom they ultimately fall. Again, both of these experts know little about all the sides of the particular trade or business for whose betterment the scheme is to be undertaken. Thus the advice given by one expert in a particular line at a particular time does not reconcile with the advice given and the estimates made by another expert in another line at a different time. Eventually the whole difficulty and total costs at the end become staggering and confound all. The proposed scheme to make the unsuitable site of Tukaram Tank suitable for an up-to-date Cotton Market is likely to be of the same kind and hence more caution is necessary.

ರೇಲ್ವೇ ಸೌಕರ್ಯ

ಶ್ರೀ. ಗುರುಶಿದ್ದಪ್ಪ ಬಸಪ್ಪ ಉಪ್ಪಿನ
ಶ್ರೀ. ಶಿವಪ್ಪ ವ ಗುರುಶಿದ್ದಪ್ಪ ಉಪ್ಪಿನ
ಈ ಆಂಗಡಿಯ ಒಡೆಯರು.

ಯಾವದೇ ವ್ಯಾಪಾರಕ್ಕೆ ಇಲ್ಲವೆ ಉದ್ಯೋಗಕ್ಕೆ ರೇಲ್ವೇ ಸ್ಟೇಶನು ಸಮೀಪ ವಿದ್ದಷ್ಟು ಅನುಕೂಲ ಮತ್ತು ಲಾಭದಾಯಕವು. ಈ ದೃಷ್ಟಿಯಿಂದ ಈಗಿನ ಕಾಟನ ಮಾರ್ಕೆಟು ಸ್ಟೇಶನಿಗೆ ಬಹಳೇ ಸಮೀಪ ವಿರುವದು ಆದರೆ ಅದನ್ನು ಸ್ಟೇಶನ ದಿಂದ ದೂರ ಊರ ಹೊರಗೆ ಸ್ಟೇಶನದ ವಿರುದ್ಧ ದಿಕ್ಕಿಗೆ ಒಯ್ಯುವ ಕಲ್ಪನೆಯು ತುಂಬಾ ಆಶ್ಚರ್ಯಕರವು. ಇದನ್ನು ಕೇವಲ ಹತ್ತಿ ಅರಳಿ ಆಂಡಿಗೆ ಗಂಟುಗಳ ಬರಹೋಗುವಿಕೆಯ ನಲುವಾಗಿ ಮಾತ್ರ ವಲ್ಲ ಆದರೆ ವ್ಯಾಪಾರಕ್ಕೆ ಸಂಬಂಧಿಸಿದ ಅನೇಕಾನೇಕ ಜನರ ಸೌಕರ್ಯದ ದೃಷ್ಟಿ ಯಿಂದಲೂ ನೋಡಬೇಕಾಗಿದೆ. ರೇಲ್ವೇ ಸ್ಟೇಶನದ ಸಾಮೀಪ್ಯವು ವ್ಯಾಪಾರ ಉದ್ಯೋಗಗಳಿಗೆ ಅವಶ್ಯಕವೆಂದೆನಿಸಿ ಬೇರೆ ಊರುಗಳಲ್ಲಿ ಅನೇಕ ನೆಟ್ಟಿಗಳು ಸಾಧ್ಯ ವಿದ್ದರೆ ಸ್ಟೇಶನಕ್ಕೆ ಸಮೀಪ ತರಲ್ಪಡುತ್ತಿ ರುವಾಗ ಹುಬ್ಬಳ್ಳಿಯ ಹತ್ತಿ ಅರಳಿಯ ವೇಟೆಯನ್ನು ದೂರ ಒಯ್ಯುವ ವಿಚಾರವು ಅಚ್ಚರಿಯನ್ನೆಂಟುಮಾಡುವಂತಹದು.

ತಿರಕಾರಾಮ ಕೆರೆಯ ಬೈಲಿನಲ್ಲಿ ಒಯ್ಯಬೇಕೆಂದಿದ್ದ ಮಾರ್ಕೆಟಿಗಾಗಿ ರೇಲ್ವೇ ಕಂಪನಿಯವರು ಒಂದು ಪ್ರತ್ಯೇಕ ಸ್ಟೇಶನವನ್ನು ಕೊಡುವರೆಂದು ಭಾವನೆ ಇತ್ತು. ಆದರೆ ಇತ್ತಲಾಗಿ ಕಂಪನಿಯ ವರು ಇದರಿಂದ ತಮಗೇನೂ ಲಾಭವಿಲ್ಲದೆ ಹೆಚ್ಚಿನ ಖರ್ಚು ಮಾತ್ರ ಬರುವದೆಂಬ ದನ್ನು ಕಂಡು ಈ ವಿಚಾರವನ್ನು ಸದ್ಯಕ್ಕೆ ಬದಿಗಿರಿಸಿದಂತೆ ಕಾಣುತ್ತದೆ. ಕಾಟನ ಮಾರ್ಕೆಟು ಊರ ಹೊರಗೆ ಒಯ್ಯುವದ ರಿಂದ ಇಲ್ಲಿಯ ವ್ಯಾಪಾರವೆಲ್ಲ ಬೆಳೆದು ರೇಲ್ವೇಗೆ ಹೆಚ್ಚು ಲಾಭವಾಗುವದೆಂದು ಯಾರಾದರೂ ಪೂರ್ಣಧೈರ್ಯದಿಂದ ಎದೆ ತಟ್ಟು ಹೇಳಬಲ್ಲರೋ? ಅದು ಯಾರಿಗೂ ಸಾಧ್ಯವಿಲ್ಲ. ಇದರ ಬದಲು ಕಡಿಮೆಯಾ ದೀತೋ ಏನೆಂಬದೇ ಸಂಶಯ. ಇಂಥ ಪರಿಸ್ಥಿತಿಯಲ್ಲಿ ರೇಲ್ವೇಯವರು ಏಕೆ ಇಲ್ಲದ ಖರ್ಚು ಮಾಡಿಕೊಳ್ಳುವರು? ಮಾರ್ಕೆಟು ಈಗಿದ್ದಲ್ಲಿ ಉಳಿದರೂ ರೇಲ್ವೇ ಕಂಪನಿ ಯವರಿಗೆ ಆಪ್ಟೇ. ಊರ ಹೊರಗೆ ಜವಳಿ ನಲ್ಲಿ ಆಟ್ಟಲ್ಪಟ್ಟರೂ ಆಪ್ಟೇ. ಎಲ್ಲಿದ್ದರೂ ಈಗಿನ ರೇಲ್ವೇ ಸ್ಟೇಶನಕ್ಕೆ ಬರುವದು.

ಇದರಿಂದ ವ್ಯಾಪಾರಸ್ಥರಿಗೂ, ದಲಾಲರಿಗೂ ಹಾಗೂ ರೈತರಿಗೂಕೂಡ ಹೆಚ್ಚು ಅನಾನುಕೂಲತೆಯಾಗುವದು ಪರಿಣಾಮತಃ ಖರ್ಚು ಹೆಚ್ಚಾಗಿ ಅದರ ಪೆಟ್ಟು ಕೊನೆಗೆ ರೈತನಿಗೇ ತಗಲುವದು. ಇದನ್ನು ವಿಚಾರಸಬೇಕೆಲ್ಲವೇ? ಈ ದೃಷ್ಟಿಯಿಂದ ನೋಡಿದರೆ ಹತ್ತಿ ಅರಳಿ ವೇಟೆಯು ಈಗಿದ್ದಲ್ಲಿಯೇ ಇರುವದು ಒಳಿತು.

It is the intelligent public that go in for quality goods.

Why not introduce your goods to the intelligent buyer?

We help you to do so.

ADVERTISE

IN

The Hubli Gazette

(The Popular fortnightly devoted to the civic affairs of the Province.)

for Particulars please write to:

Fraunds Cottage
Hubli.

The MANAGER.

ಬೆಲೆ ಒಂದಾಣೆ

ಸಮ್ಮೇಳನಾಂಕ

ನವಭಾರತ

ಸಾಪ್ತಾಹಿಕ

೧೯೪೪

ಮಂಗಳೂರಲ್ಲಿ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ

ಪ್ರತಿನಿಧಿಕ ಸಮ್ಮೇಳನ

ಗತಿಸಿದ ಫೆಬ್ರವರಿ ತಾ ೧೯ ಮತ್ತು ೨೦ ಮಂಗಳೂರಿನ ಇತಿಹಾಸದಲ್ಲಿ, ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ, ಎರಡು ಪ್ರಧಾನ ದಿನಗಳು ಐದನೆಯ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ ಆ ದಿನಗಳಲ್ಲಿ ಮಂಗಳೂರಲ್ಲಿ ಜರಗಿತು ಭಾರತದ ಒಬ್ಬ ಸುಪ್ರಸಿದ್ಧ ಪತ್ರಿಕೋದ್ಯೋಗಿಯೂ ಮಬ್ರಾಸಿನ "ಪ್ರದೇಶ ಮಿತ್ರನ್" ತಮಿಳು ದೈನಿಕದ ಸಂಪಾದಕರೂ ಆಗಿರುವ ಶ್ರೀ ಸಿ ಆರ್ ಶ್ರೀನಿವಾಸನರು ಸಮ್ಮೇಳನದ ಅಧ್ಯಕ್ಷರಾಗಿದ್ದರು ಮೈಸೂರು ಪ್ರಾಂತದ ಬೆಂಗ

ಸಮ್ಮೇಳನದ ಅಧ್ಯಕ್ಷರನ್ನು ರೈಲ್ವೇಸ್ಟೇಶನಿನಲ್ಲಿ ಸ್ವಾಗತಿಸುವ ದೃಶ್ಯ. ಸ್ವಾಗತಾಧ್ಯಕ್ಷ ಶ್ರೀ. ವಿ. ಎಸ್. ಕುಡ್ವಾ, ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀ ಎಚ್ ಆರ್. ನೋಹರ ಇವರನ್ನು ಈ ಚಿತ್ರದಲ್ಲಿ ಕಾಣಬಹುದು.

ಳೂರು, ಮೈಸೂರು, ಕಾನಕಾನ ಹಳ್ಳಿ ಆರಕಾಲ ಗೂಡು, ಚಿಕ್ಕಮಗಳೂರು ಶಿಂಗೇರಿ, ಹಾಸನ, ಸಕಲೇಶಪುರ, ಚೆನ್ನರಾಯಪಟ್ಟಣ, ಹೊಳೆನರಸೀಪುರ ಧಾರವಾಡದ ಹುಬ್ಬಳ್ಳಿ, ಕಾರವಾರ, ಬೆಳಗಾವಿ ಈ ಸ್ಥಳಗಳಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಬೆಳ್ತಂಗಡಿ, ನೀಲೇಶ್ವರ, ಕಾಸರಗೋಡು— ಈ ಊರು ಗಳಿಂದಲೂ ಪ್ರತಿನಿಧಿಗಳು ಎಂದು ಸಮ್ಮೇಳನದಲ್ಲಿ ಭಾಗವಹಿಸಿದರು ಪ್ರತಿನಿಧಿಗಳ ಸಂಖ್ಯೆ ಒಟ್ಟು ೨೫೦ರಷ್ಟಿತ್ತು

ರೈಲು ನಿಲ್ದಾಣದಲ್ಲಿ

ಅಧ್ಯಕ್ಷೆ ಶ್ರೀ ಸಿ ಆರ್. ಶ್ರೀನಿವಾಸನರು ತಾ ೧೮ನೆ ಶುಕ್ರವಾರ ಸಂಜೆಯ ಪ್ಯಾಸೆಂಜರ್ ಗಾಡಿಯಲ್ಲಿ ಮದರಾಸಿನಿಂದ ಬಂದು ಮಂಗಳೂರನ್ನು ಸೇರಿದರು ಸ್ವಾಗತಾಧ್ಯಕ್ಷರಾದ ಶ್ರೀ ವಿ ಎಸ್ ಕುಡ್ವರು, ಸ್ವಾಗತ ಕಾರ್ಯದರ್ಶಿ ಶ್ರೀ ಕಯ್ಯಾರ ಕಿಂಞಣ್ಣ ರೈ, ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಎಚ್ ಭೀಮ ರಾಯರು, ಶ್ರೀಯುತರು ಎ ಬಿ ಶೆಟ್ಟಿ, ಕೆ ಆರ್ ಆಚಾರ್, ಮೋಹರೆ ಹಣ ಮಂತರಾಯ, 'ಡಿಪ್ರೆಸ್ಡ್ ಕ್ಲಾಸಸ್ ಮಿಶನಿ'ನ ವೆಂಕಟರಾಮನ್ ಮೊದಲಾದವರು ಶ್ರೀ ಶ್ರೀನಿವಾಸನರನ್ನು ಇದಿರ್ಗೊಂಡರು ಸ್ವಾಗತಾಧ್ಯಕ್ಷರು ಸಮ್ಮೇಳನಾಧ್ಯಕ್ಷರಿಗೆ ಹೂಮಾಲೆ ತೊಡಿಸಿದರು.

ಬಳಿಕ ಸಪತ್ನೀಕರಾಗಿ ಬಂದಿದ್ದ ಅಧ್ಯಕ್ಷರನ್ನು ಅವರ ವಸತಿ ಗೃಹಕ್ಕೆ ಕರದೊಯ್ಯಲಾಯಿತು

ಪ್ರತಿನಿಧಿಗಳ—ಆಹ್ವಾನಿತರ ಆಗಮನ

ಪ್ರತಿನಿಧಿಗಳು ಆ ಸಂಜೆಯೇ ಹಲವೆಡೆಗಳಿಂದ ಒದತೊಡಗಿದ್ದರು ಸಂಜೆ ಮೈಸೂರಿನ ಬಸ್ಸು, ಪ್ರತಿನಿಧಿಗಳನ್ನೂ ಪತ್ರಿಕಾ ಪ್ರದರ್ಶನದ ಉದ್ಘಾಟನಗಾಗಿ ಬಂದಿದ್ದ ಬಂಗಳೂರಿನ 'ದೈನಿ ನ್ಯೂಸ್' ಸಂಪಾದಕರಾದ ಶ್ರೀ ಪಿ ಆರ್ ರಂಮಯ್ಯ ಅವರನ್ನೂ ವಿಚಾರ ವಿನಿಮಯ ಕೂಟಗಳನ್ನು ಜರಗಿಸಲು ಒಂದಿದ್ದ ಮೈಸೂರಿನ ಶ್ರೀಯುತರು ವಿ ಸೀತಾರಾಮಯ್ಯ ಮತ್ತು ಎಸ್ ವಿ ಶ್ರೀನಿವಾಸ ರಾವ್ ಅವರನ್ನೂ ಹೊತ್ತು ತಂದಿತು ಪ್ರತಿನಿಧಿಗಳೆಲ್ಲರೂ ತಮಗಾಗಿಯೇ ಏರ್ಪಟ್ಟಿದ್ದ ವಸತಿ ಗೃಹದಲ್ಲಿ ಇಳಿದುಕೊಂಡರು ಹತ್ತಿರದಲ್ಲಿಯೇ ನವಭಾರತ ಕಾರ್ಯಾಲಯಕ್ಕೆ ತಾಗಿಕೊಂಡು ಸ್ವಾಗತ ಸಮಿತಿಯವರು ತಮ್ಮ ಕಾರ್ಯಾಲಯವನ್ನು ತೆರೆದಿದ್ದರು

ಸಮ್ಮೇಳನದ ಅಧ್ಯಕ್ಷರನ್ನು ಭುವನೇಂದ್ರ ಸಭಾಮಂದಿರ [ಸಮ್ಮೇಳನ ಜರಗಿದ ಸ್ಥಳ] ಕ್ಕೆ ಕರೆದೊಯ್ಯುವ ದೃಶ್ಯ ಸ್ವಾಗತಾಧ್ಯಕ್ಷ ಶ್ರೀ ವಿ ಎಸ್. ಕುಡ್ವಾ ಮತ್ತು ಸ್ವಾಗತ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಕೆ ಕೆ. ರೈ, [ಹಿಂದೆ ನಿಂತವರು] ಇವರನ್ನು ಕಾಣಬಹುದು.

ಬೆಲೆ ೧ಂಪೈಸೆ

ಸಮ್ಮೇಳನಾಂಕ ನವಭಾರತ ೧೯೪೪
ಸಾಪ್ತಾಹಿಕ

ಮಂಗಳೂರಲ್ಲಿ

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನ

ಪ್ರತಿನಿಧಿಕ ಸಮ್ಮೇಲನ

೧೯ನೆಯ ಫೆಬ್ರವರಿ ತಾ ೧೯ ಮತ್ತು ೨೦ ಮಂಗಳೂರಿನ ಇತಿಹಾಸದಲ್ಲಿ, ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿ, ಎರಡು ಪ್ರಧಾನ ದಿನಗಳು ಐದನೆಯ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಲನ ೨ ದಿನಗಳಲ್ಲಿ ಮಂಗಳೂರಲ್ಲಿ ಜರಗಿತು. ಭಾರತದ ಒಬ್ಬ ಸುಪ್ರಸಿದ್ಧ ಪತ್ರಿಕೋದ್ಯೋಗಿಯೂ ಮದ್ರಾಸಿನ "ಸ್ವದೇಶ ಮಿತ್ರನ್" ತಮಿಳು ದೈನಿಕದ ಸಂಪಾದಕರೂ ಆಗಿರುವ ಶ್ರೀ ಸಿ. ಆರ್ ಶ್ರೀನಿವಾಸನರು ಸಮ್ಮೇಲನದ ಅಧ್ಯಕ್ಷರಾಗಿದ್ದರು. ಮೈಸೂರು ಪ್ರಾಂತದ ಬೆಂಗ



ಸಮ್ಮೇಳನದ ಅಧ್ಯಕ್ಷರನ್ನು ರೈಲ್ವೇಸ್ಟೇಶನಿನಲ್ಲಿ ಸ್ವಾಗತಿಸುವ ದೃಶ್ಯ. ಸ್ವಾಗತಾಧ್ಯಕ್ಷ ಶ್ರೀ. ವಿ. ಎಸ್. ಕುಡ್ವಾ, ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಶ್ರೀ ಎಚ್. ಆರ್. ಮೋಹರೆ ಇವರನ್ನು ಈ ಚಿತ್ರದಲ್ಲಿ ಕಾಣಬಹುದು

ಳೂರು, ಮೈಸೂರು, ಕಾನಕಾನಹಳ್ಳಿ ಅರಕಾಲಗೂಡು, ಚಿಕ್ಕನುಗಳೂರು, ಶೃಂಗೇರಿ, ಹಾಸನ, ಸಕಲೇಶಪುರ, ಚೆನ್ನರಾಯಪಟ್ಟಣ, ಹೊಳಸರಸೀಪುರ, ಧಾರವಾಡದ ಹುಬ್ಳಿ, ಕಾರವಾರ, ಬೆಳಗಾವಿ ಈ ಸ್ಥಳಗಳಿಂದಲೂ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಬೆಂತ್ತಂಗಡಿ, ಸೀಲೇಶ್ವರ, ಕಾಪರಗೋಡು— ಈ ಊರು ಗಳಿಂದಲೂ ಪ್ರತಿನಿಧಿಗಳು ಬಂದು ಸಮ್ಮೇಳನದಲ್ಲಿ ಭಾಗವಹಿಸಿದರು. ಪ್ರತಿನಿಧಿಗಳ ಸಂಖ್ಯೆ ಒಟ್ಟು ೨೫೦ರಷ್ಟಿತ್ತು.

ರೈಲು ನಿಲ್ದಾಣದಲ್ಲಿ

ಅಧ್ಯಕ್ಷ ಶ್ರೀ ಸಿ ಆರ್. ಶ್ರೀನಿವಾಸನರು ತಾ ೧೮ನೆ ಶುಕ್ರವಾರ ಸಂಜೆಯ ಗಾಡಿಯಲ್ಲಿ ಮದರಾಸಿನಿಂದ ಬಂದು ಮಂಗಳೂರನ್ನು ಸೇರಿದರು ಸ್ವಾಗತಾ ಧ್ಯಕ್ಷರಾದ ಶ್ರೀ ವಿ ಎಸ್ ಕುಡ್ವರು ಸ್ವಾಗತ ಕಾರ್ಯವರ್ಶಿ ಶ್ರೀ ಕಯ್ಯಾರ ಕಿಂಞಣ್ಣ ರೈ, ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಎಚ್. ಭೀಮರಾಯರು, ಶ್ರೀಯುತರು ಎ. ಬಿ ಶೆಟ್ಟಿ, ಕೆ ಆರ್. ಆಚಾರ್, ಮೋಹರೆ ಹಣಮಂತರಾಯ, 'ಡಿಸ್ಟ್ರಿಕ್ಟ್ ಕ್ಲಾಸಸ್ ಮಿಶನಿ'ನ ವೆಂಕಟರಾಮನ್ ಮೊದಲಾದವರು ಶ್ರೀ ಶ್ರೀನಿವಾಸನರನ್ನು ಇದಿರ್ಗೊಂಡರು ಸ್ವಾಗತಾಧ್ಯಕ್ಷರು ಸಮ್ಮೇಲನಾಧ್ಯಕ್ಷರಿಗೆ ಹೂಮಾಲೆ ತೊಡಿಸಿದರು.

ಒಳಿಕ ನವತ್ನೀಕರಾಗಿ ಒಂದಿದ್ದ ಅಧ್ಯಕ್ಷರನ್ನು ಅವರ ವಸತಿ ಗೃಹಕ್ಕೆ ಕರದೊಯ್ಯಲಾಯಿತು

ಪ್ರತಿನಿಧಿಗಳ—ಆಹ್ವಾನಿತರ ಆಗಮನ

ಪ್ರತಿನಿಧಿಗಳು ಆ ಸಂಜೆಯೇ ಹಲವೆಡೆಗಳಿಂದ ಬರತೊಡಗಿದ್ದರು. ಸಂಜೆ ೨ನೆಸೊರಿನ ಒನ್ನು, ಪ್ರತಿನಿಧಿಗಳನ್ನೂ ಪತ್ರಿಕಾ ಪ್ರದರ್ಶನದ ಜಂಟ್ಲೆಮನ್ನಿಗಾಗಿ ಒಂದಿದ್ದ ಬಂಗಳೂರಿನ 'ಡೈಲಿ ನ್ಯೂಸ್' ಸಂಪಾದಕರಾದ ಶ್ರೀ ಪಿ ಆರ್. ರಾಮಯ್ಯ ಅವರನ್ನೂ ವಿಚಾರ ವಿನಿಮಯ ಕೂಟಗಳನ್ನು ಜರಗಿಸಲು ಒಂದಿದ್ದ ಮೈಸೂರಿನ ಶ್ರೀಯುತರು ವಿ ಸೀತಾರಾಮಯ್ಯ ಮತ್ತು ಎಸ್. ವಿ ಶ್ರೀನಿವಾಸ ರಾವ್ ಅವರನ್ನೂ ಹೊತ್ತು ತಂದಿತು. ಪ್ರತಿನಿಧಿಗಳೆಲ್ಲರೂ ತಮಗಾಗಿಯೇ ಏರ್ಪಟ್ಟಿದ್ದ ವಸತಿ ಗೃಹದಲ್ಲಿ ಇಳಿದುಕೊಂಡರು ಹತ್ತಿರದಲ್ಲಿಯೇ 'ನವಭಾರತ' ಕಾರ್ಯಾಲಯಕ್ಕೆ ತಾಗಿಕೊಂಡು ಸ್ವಾಗತ ಸಮಿತಿಯವರು ತಮ್ಮ ಕಾರ್ಯಾಲಯವನ್ನು ತೆರೆದಿದ್ದರು.

ಸಮ್ಮೇಳನದ ಅಧ್ಯಕ್ಷರನ್ನು ಭುವನೇಂದ್ರ ಸಭಾಸದನ ಸಮ್ಮೇಳನ ಜರಗಿದ ಸ್ಥಳಕ್ಕೆ ಕರೆದೊಯ್ಯುವ ದೃಶ್ಯ. ಸ್ವಾಗತಾಧ್ಯಕ್ಷ ಶ್ರೀ. ವಿ ಎಸ್. ಕುಡ್ವಾ ಮತ್ತು ಸ್ವಾಗತ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಕೆ.ಕೆ. ರೈ, [ಹಿಂದೆ ನಿಂತವರು ಇವರನ್ನು ಕಾಣಬಹುದು.

ಶನಿವಾರ ತಾ. ೧೯!

ಪತ್ರಿಕಾ ಪ್ರದರ್ಶನದ ಉದ್ಘಾಟನೆ

ಸಮ್ಮೇಳನದ ದಿವಸ ಪೂರ್ವಾಹ್ನ ೧೦ ಘಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲ್‌ನಲ್ಲಿ ಆರಂಭವಾಯಿತು.

ಸ್ವಾಗತಾಧ್ಯಕ್ಷ ಶ್ರೀ। ವಿ ಎಸ್. ಕುಡ್ವರು, ಪತ್ರಿಕಾಪ್ರದರ್ಶನವನ್ನು ತೆರೆಯ ಬೇಕೆಂದು ಶ್ರೀ। ಪಿ ಆರ್. ರಾಮಯ್ಯ ಅವರನ್ನು ಕೇಳಿಕೊಂಡರು. ಕನ್ನಡ ಪತ್ರಿಕೆ ಗಳ ಕುರಿತು, ಕನ್ನಡ ಪತ್ರಿಕೋದ್ಯಮದಲ್ಲಿ ಆಗಬೇಕಾಗಿರುವ ಪ್ರಗತಿಯ ಕುರಿತು ಮುಕ್ಕಾಲು ತಾಸಿನ ತನಕ ವಿದ್ವತ್ಪೂರ್ಣ ಭಾಷಣವಿತ್ತು, ಶ್ರೀ। ರಾಮಯ್ಯ ಅವರು ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ। ಕೋ. ಶಿ. ಕಾರಂತರು ಸ್ವಾಗತ ಸಮಿ ತಿಯ ಪರವಾಗಿ ಧನ್ಯವಾದಗಳನ್ನರ್ಪಿಸಿದರು.

[ಪತ್ರಿಕಾ ಪ್ರದರ್ಶನದ ಉದ್ಘಾಟನಾ ಭಾಷಣ ಇನ್ನೊಂದೆಡೆ ಅಚ್ಚಾಗಿದೆ.]

ಆರಂಭ ಅಧಿವೇಶನ

ಅನಂತರ ಸಮ್ಮೇಳನದ ಅಧಿವೇಶನವು ಆರಂಭವಾಯಿತು. ಶ್ರೀ. ಶಿವರಾವ ಕಾರಂತರು ಅಧ್ಯಕ್ಷ ಸ್ಥಾನ ವಹಿಸಬೇಕೆಂದು ಶ್ರೀ. ಸಿ. ಆರ್. ಶ್ರೀನಿವಾಸನರನು ಕೇಳಿಕೊಂಡರು. ಶ್ರೀಯುತರು ಬಿ. ಎನ್. ಗುಪ್ತ ಮತ್ತು ಹಣಮಂತರಾವ್ ನೋಹರ–ಅವರು ಅನುಮೋದಿಸಿ ಮಾತನಾಡಿದರು.

'ನವಭಾರತ'ದಲು ಪಸಂಪಾದಕ ಶ್ರೀ। ಬಿ. ವಿ. ಬಾಳಿಗರ ಪ್ರಾರ್ಥನಾ ನಂತರ ಶ್ರೀ। ವಿ. ಎಸ್. ಕುಡ್ವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದೇಶೀಯ ಭಾಷೆಗಳ ಪತ್ರಿಕೆಗಳ ಬೆಳವಣಿಗೆಯನ್ನು ವಿವರಿಸಿ ದರು. [ಈ ಎರಡೂ ಭಾಷಣಗಳು ಪ್ರತ್ಯೇಕ ಪ್ರಕಟನಾಗಿವೆ.]

ಶುಭ ಸಂದೇಶಗಳು

ಅನಂತರ ಸಮ್ಮೇಳನಕ್ಕೆ ಒಳಿತನ್ನು ಕೋರಿ ಬಂದಿದ್ದ ಸಂದೇಶಗಳನ್ನು ಸ್ವಾಗತ ಕಾರ್ಯದರ್ಶಿ ಶ್ರೀ। ಕುಳುಕುಂದ ಶಿವರಾಯರು ಓದಿದರು. ಧಿಲ್ಲಿಯ ಶ್ರೀ। ಬಿ. ಶಿವರಾವ್, ಶ್ರೀ। ಸದ್ವೃತ್ತನ ಹಳ್ಳಿ ಕೃಷ್ಣ ಶರ್ಮಾ, ಪರ್ಯಾಯ ಪುತ್ತಿಗೆ ಮಠ ಮತ್ತು ಫಲಿಮಾರು ಮಠದ ಸ್ವಾಮಿಗಳು, ಶ್ರೀಯುತರು ಆರ್. ವಿ. ಜಾಗಿರದಾರ, ರಂ. ಶ್ರೀ. ಮುಗಳಿ, ಆಲೂರ ವೆಂಕಟರಾವ್, ಕೇರಳದ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ। ಕೃಷ್ಣ ಪಿಳ್ಳೈ, ನೀಲೇಶ್ವರದ ರಾಜಾಸ್ ಹೈಸ್ಕೂಲಿ ನವರು, ಕಡೇಕಾರ್ ರಾಜಗೋಪಾಲ ಕೃಷ್ಣರಾವ್, ಬೆಟಗೇರಿ ಕೃಷ್ಣ ಶರ್ಮಾ ಮೊದಲಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದರು.

ಅಭಿನಂದನ ಕಾರ್ಯದರ್ಶಿ ಸಮಿತಿಯ ಕಾರ್ಯದರ್ಶಿ ಸಂಯುಕ್ತ ಸಭೆಯು [illegible] ಅಭಿನಂದನೆಯನ್ನಿತ್ತು.

ವಿವಿಧ ಸಂಸ್ಥೆಗಳಿಗೆ ಭೇಟಿ

ಮಧ್ಯಾಹ್ನ ೩–೩೦ ಘಂಟೆಗೆ ಶ್ರೀ। ಶ್ರೀನಿವಾಸನರೂ ಪರಪುರುಗಳಿಂದ ಸಮ್ಮೇಳನಕ್ಕೆ ಒಂದಿದ್ದ ಪ್ರತಿನಿಧಿಗಳೂ ಮಂಗಳೂರಿನ ವಿವಿಧ ಸಂಸ್ಥೆಗಳನ್ನು ಸಂದ ರ್ಶಿಸಿದರು. ಮಿಜಾರ್‌ಕಾರರ ಗೇರು ಬೀಜದ ಕಾರ್ಖಾನೆ ಆಲ್ಬುಕರ್ಕರ ಹಂ ಚಿನ ಕಾರ್ಖಾನೆ, ಕೆನರಾ ಬೇಂಕ್, ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಮೊದ ಲಾದ ಸಂಸ್ಥೆಗಳಿಗೆ ಭೇಟಿ ಕೊಟ್ಟರು.

ಉಪಾಹಾರ ಕೂಟ

ಸಾಯಂಕಾಲ ಆರು ಘಂಟೆಗೆ ಭುವನೇಂದ್ರ ಹಾಲ್‌ನಲ್ಲಿ ಶ್ರೀಮತಿ ಕಮಲಾ ದೇವಿ ಛಟ್ಟೋಪಾಧ್ಯಾಯರು ಶ್ರೀ. ಸಿ. ಆರ್. ಶ್ರೀನಿವಾಸನರನ್ನೂ ಪ್ರತಿನಿಧಿಗ ಳನ್ನೂ ಗೌರವಿಸುವುದಕ್ಕಾಗಿ ಸತ್ಕಾರ ಕೂಟವನ್ನೇರ್ಪಡಿಸಿದರು

ವಿಷಯ ನಿರ್ಣಾಯಕ ಸಮಿತಿ ಸಭೆ

ತಾ. ೧೯ರಂದು ರಾತ್ರೆ ವಿಷಯ ನಿರ್ಣಾಯಕ ಸಮಿತಿಯ ಸಭೆಯು ಶ್ರೀ। ಆರ್. ರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸ್ವಾಗತ ಸಮಿತಿಯು ವಾಗಿ ಮುಂದಿಡಲ್ಪಟ್ಟದ್ದ ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಹೊಸ ಘಟನಾ ವಳಿಯ ಕುರಿತು ನಿರ್ಧಾರಕ್ಕೆ ಬರಲು ಆರು ಮಂದಿಯ ಒಂದು ಸಮಿತಿಯ ರಚನೆ ಯಾಯಿತು. ಮಧ್ಯ ರಾತ್ರೆಯ ಬಳಿಕ ಈ ಉಪ ಸಮಿತಿಯ ಸಭೆ ಜರಗಿ ಕೆಲವು ತಿದ್ದುಪಡಿಗಳೊಡನೆ ಘಟನೆಯನ್ನು ಸ್ವೀಕರಿಸಲಾಯಿತು.

ರವಿವಾರ ತಾ. ೨೦

'ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ'

ಮರುದಿನ—ರವಿವಾರ ಪ್ರಾತಃ ೬॥ ಘಂಟೆಗೆ ಭುವನೇಂದ್ರ ಹಾಲ್‌ನಲ್ಲಿ "ಪತ್ರಿಕೋದ್ಯಮದಲ್ಲಿ ಪ್ರಾವೀಣ್ಯ" ಎಂಬ ವಿಷಯದ ಕುರಿತು ವಿಚಾರವಿನಿಮಯ-ಸಮನ್ವಯ ಕೂಟ ಜರಗಿತು. ಶ್ರೀ। ವಿ. ಸೀತಾರಾಮಯ್ಯ ಎಂ. ಎ, ಅವರು ಮೊದಲು ಮಾತನಾಡಿದರು. ಶ್ರೀಯುತರು ಪಿ. ಆರ್. ರಾಮಯ್ಯ, ಶಿವರಾಮ ಕಾರಂತ, ಕಡಂಗೋಡ್ಲು ಶಂಕರ ಭಟ್ ಮತ್ತು ಎ. ನಂಜುಂಡರಾವ್ ಇವರು ಬೇರೆ ಬೇರೆ ವಿಷಯಗಳನ್ನೆತ್ತಿ ಮಾತನಾಡಿದರು. [ಪೂರ್ಣ ವಿವರ ಇನ್ನೊಂದೆಡೆ ಪ್ರಕಟವಾಗಿದೆ.]

[ಪುಟ ೧೭ನ್ನು ನೋಡಿರಿ]

THE PROGRESS OF THE **"POPULAR"** IS IN EVERY ASPECT A CONCRETE PROOF OF THE BUSINESS ACUMEN AND ENTERPRISE OF **KARNATAKA.** THE **"POPULAR"** IS THE PIONFER OF LIFE ASSURANCE IN BRITISH KARNATAKA. WITH AN EFFICIENT MANAGEMENT, SOLICITOUS TO BOTH THE POLICYHOLDER AND AGENT, IT HAS CARVED FOR ITSELF A DESERVING PLACE IN INDIAN INSURANCE

IN TAKING UP THE REPRESENTATION OF **"POPULAR"** EITHER AS A AGENT, SPECIAL AGENT OR DISTRICT AGENT, YOU PROMOTE THE SUCCESS OF A **KARNATAKA LIFE OFFICE**

1943: *New Business Rs. 10.40.000. Life Fund Rs. 3.80.000*

INVESTMENT IN GOVERNMENT AND APPROVED SECURITIES EXCEED THE REQUIREMENTS OF THE INSURANCE ACT 1938

THE

Popular Insurance Co. Ltd.

Head Office:- - - - - -**Mangalore, S. India**

"ಕರ್ನಾಟಕದಲ್ಲಿ ಚೇತನಭರಿತವಾದ ಪತ್ರಿಕೋದ್ಯಮ ಬೆಳೆಯಬೇಕು"

ಪತ್ರಿಕಾಶಕ್ತಿ ಇನ್ನಷ್ಟು ಜನಮಾನ್ಯ, — ಇನ್ನಷ್ಟು ಶಕ್ತಿಪೂರ್ಣ, —
ಇನ್ನಷ್ಟು ಉತ್ಪತ್ತಿದಾಯಕ ಹಾಗು ಗೌರವಪೂರ್ಣವಾಗುವ
--------- ಶುಭ ದಿನ ಬೇಗನೆ ಉದಯಿಸಲಿ! ----

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದಲ್ಲಿ

ಸ್ವಾಗತಾಧ್ಯಕ್ಷ ಶ್ರೀ। ವಿ. ಎಸ್. ಕುಡ್ವರ ವಿಚಾರಪರಿಪ್ಲುತ ಭಾಷಣ

ಪತ್ರಿಕೋದ್ಯೋಗಿ ಸಹೋದರರೇ ಮತ್ತು ಮಿತ್ರರೇ.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತಿನ ಸ್ವಾಗತ ಸಮಿತಿಯ ಪರ ವಾಗಿ ನಿಮಗೆಲ್ಲರಿಗೆ ಈ ಸ್ಥಳಕ್ಕೆ ಪ್ರೇಮಪೂರ್ವಕ ಸ್ವಾಗತ ಬಯಸುವೆ. ಈ ಕಷ್ಟದ ದಿನಗಳಲ್ಲಿ ಒಂದೂರಿಂದ ಮತ್ತೊಂದೂರಿಗೆ ಪ್ರಯಾಣಮಾಡುವರೆ ಏನೆಲ್ಲಾ ತೊಂದರೆ ಗಳಿವೆ ಎಂಬುದನ್ನು ಪ್ರತ್ಯಕ್ಷ ಅರಿತಿರುವೆನಾದುದರಿಂದ, ಇಂದು ಇಲ್ಲಿ ಸಭೆ ಸೇರಿ, ಈ ಪರಿಷತ್ತಿನ ವಿಚಾರ ವಿನಿಮಯಗಳಲ್ಲಿ ಭಾಗವಹಿಸಲು ಕೂಡಿದ ನೀವು ಹಲವು ತೊಂದರೆಗಳನ್ನೂ ಎಡರು ತೊಡರುಗಳನ್ನೂ ಹಾಯ್ದುಕೊಂಡು ಬಂದಿರುವಿರೆಂಬು ದನ್ನು ನಾನು ಗ್ರಹಿಸಬಲ್ಲೆ! ಆದರೆ ಈ ತೊಂದರೆತೊಡಕುಗಳ ಕಷ್ಟಗಳಿಗಿಂತಲೂ ಈ ಪರಿಷತ್ತಿನ ಅವಶ್ಯಕತೆಯು ಎಷ್ಟೋ ಮಿಗಿಲಾಗಿದೆಯೆಂದು ನಮಗೆಲ್ಲರಿಗನ್ನಿಸಿತು ಪರಿಷತ್ತಿನ ಈ ದಿನಗಳಲ್ಲಿ ನಿಮಗೊದಗಬಹುದಾದ ಅಸೌಕರ್ಯ ಮತ್ತು ತೊಂದರೆ ಗಳನ್ನು ನಿಮ್ಮ ಔದಾರ್ಯ ಹಾಗು ನಿಸ್ಸೀಮ ಪ್ರೇಮವು ಮರೆತು ಸ್ವಾಗತ ಸಮಿತಿ ಯನ್ನು ಕ್ಷಮಿಸುವುದೆಂದೂ ಮುಂದಾಗಿಯೇ ಗ್ರಹಿಸಿದ್ದೇವೆ ಈ ಕರಿಣ ದಿನಗಳಲ್ಲಿ ಪತ್ರಿಕೋದ್ಯೋಗಿ ಪರಿಷತ್ತನ್ನು ಜರಗಿಸುವುದರ ಮಹತ್ವವೇನೆಂಬುದನ್ನು ಬೇರೆ ಒತ್ತಿ ಹೇಳುವ ಆವಶ್ಯವಿಲ್ಲ ಅಂತೂ ಪರಿಷತ್ತಿಗೆ ಅತಿಥಿಗಳಾಗಿ ನೀವು ಬಂದುದೇ ಅದೊಂದು ದೊಡ್ಡ ಗೌರವವೆಂದು ಮಂಗಳೂರಿನ ನಾಗರಿಕರಾದ ನಾವು ಎಣಿಸು ತ್ತೇವೆ.

ಸೌಂದರ್ಯದ ಗನಿಯಂತಿರುವ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕೇಂದ್ರ ವಾಗಿರುವ ಮಂಗಳೂರು ಪಟ್ಟಣವು, ರೈಲು ರಸ್ತೆಯ ಅಭಾವದಿಂದಾಗಿ ಕರ್ನಾಟ ಕದ ಇತರ ಭಾಗಗಳೊಡನೆ ಸಂಪರ್ಕವಿಲ್ಲದೆ ದೂರ ಉಳಿದಿದೆಯಾದರೂ, ಪ್ರತಿ ಯೊಬ್ಬರೂ ಆವಶ್ಯ ಸಂದರ್ಶಿಸಬೇಕಾದ ಸ್ಥಳಗಳಲ್ಲಿ ಅದೊಂದು ಎಂಬುದನ್ನು ನೀವು ಬಲ್ಲಿರಷ್ಟೆ ಬಹು ಪ್ರಾಚೀನ ಕಾಲದಿಂದಲೂ ವಾಣಿಜ್ಯ ಚಟುವಟಿಕೆಗಳಿಗೆ ಹೆಸರು ಹೊಂದಿದ ಪ್ರಸಿದ್ಧ ಬಂದರ ಇದು. ಇಂದು ಅದು ಕರ್ನಾಟಕದ ಪ್ರಮುಖ ಬಂದರನ್ನೆನಿಸಿಕೊಂಡಿದೆ ಕರ್ನಾಟಕದ ಅಮದು ರಫ್ತುಗಳನ್ನು ಮಲಬಾರದ ಕಡೆಗೆ ತಿರುಗಿಸದೆ ಈ ಬಂದರವ ಕಡೆಗೇನೆ ಕೇಂದ್ರಿಕರಿಸಿದರೆ ಮಂಗಳೂರು ತನ್ನ ವಾಣಿಜ್ಯ ಚಟುವಟಿಕೆಗಳನ್ನು ಇನ್ನಷ್ಟಿಗೊಳಿಸಬಹುದು. ಮಂಗಳೂರು ಒಂದು ಪ್ರಸಿದ್ಧ ಶಿಕ್ಷಣ ಕೇಂದ್ರವೂ ಆಗಿದೆ—ಇಲ್ಲಿ ಒಂದನೇ ತರಗತಿಯ ಎರಡು ಕಾಲೇಜು ಗಳೂ, ಎರಡನೇ ತರಗತಿಯ ಒಂದು ಕಾಲೇಜೂ, ಸ್ತ್ರೀಯರಿಗಾಗಿ ಒಂದು ಟ್ರೈನಿಂಗ್ ಕಾಲೇಜೂ ಮತ್ತು ಹಲವು ಹೈಸ್ಕೂಲ್‌ಗಳೂ ಇವೆ ಇತರ ಎಲ್ಲ ಕಡೆಗಳಿಗಿಂತ ಸ್ತ್ರೀ ಶಿಕ್ಷಣವು ಇಲ್ಲಿ ಹೆಚ್ಚು ಪ್ರಗತಿ ಹೊಂದಿದೆ ಗೇರು ಜದ ಕೈಗಾರಿಕೆ ಮತ್ತು ಹಂಚಿನ ಕೈಗಾರಿಕೆ ಇವು ನಮ್ಮ ಪಟ್ಟಣದ ಉನ್ನತಿಗೆ ರಣವಾಗಿವೆ

ಕನ್ನಡ ಪತ್ರಿಕೋದ್ಯಮಕ್ಕೆ ಮತ್ತು ಮುದ್ರಣ ಕೈಗಾರಿಕೆಗೆ ನಮ್ಮ ಜಿಲ್ಲೆಯು ಟ್ಟ ಪ್ರೋತ್ಸಾಹವು ಅಪಾರ ಎಂಬುದನ್ನು ಅಭಿಮಾನಪೂರ್ವಕವಾಗಿ ನಾವು ಳಬಲ್ಲೆವು ಜಿಲ್ಲೆಯ ಮುದ್ರಣ ಇತಿಹಾಸದಲ್ಲಿ ಮೊಟ್ಟಮೊದಲಿನ ಹಾಗು ಅತ್ಯು ಷ್ಟ ರೀತಿಯ ಮುದ್ರಣಕ್ಕ ಹೆಸರು ಹೊಂದಿದ ಬಾಸೆಲ್ ಮಿಶನ್ ಮುದ್ರಣಾ ಸುವ ಗಳಾಂಗಿರಲ್ಲೇ ಇಲ್ಲಿ ಸ್ಥಾಪಿಸಲ್ಪಟ್ಟಿತು ಅಂದಿನಿಂದ ಈ ತನಕ ಅಸಂಖ್ಯ ಮುದ್ರಣಾಲಯಗಳು ಇಲ್ಲಿ ತಲೆ ಎತ್ತಿ, ಪ್ರತಿಯೊಂದೂ ಉತ್ತಮ ಮುದ್ರಣ ಮತ್ತು ಕೈತ್ಕೃಷ್ಟ ರಚನೆಗೆ ಹೆಸರು ಹೊಂದಿರುತ್ತದ

ಪತ್ರಿಕೋದ್ಯಮವು ಇಲ್ಲಿಯ ಜನರನ್ನು ಹಲಕಾಲದ ಹಿಂದಯೇ ತನ್ನ ಕಡೆಗೆ ಕರ್ಷಿಸಿತ್ತು ಮೊದಲನೇ ಕನ್ನಡ ಪತ್ರಿಕೆಯು ಗುಳಿಂರಲ್ಲ ಇಲ್ಲಿ ಪ್ರಕಟವಾಯಿತು ನಮ್ಮ ಜಿಲ್ಲೆಯಲ್ಲಿ ತಲೆಯೆತ್ತಿದ ವೃತ್ತಪತ್ರಿಕೆಗಳ, ಮಾಸ ಪತ್ರಿಕೆಗಳ ಮತ್ತು ದೈನಿಕ ಗಳ ಪಟ್ಟಿಯೊಂದನ್ನು ತಯಾರಿಸಲು ಯತ್ನಿಸಿದರೆ ನನ್ಮನ್ನೇ ನಾವು ಮರೆಯ ಬೇಕಾದೀತು—ಅಷ್ಟು ದೊಡ್ಡದಿದೆ ಆ ಸಂಖ್ಯೆ ಹಲಕಾಲದ ತನಕ ಬೇರೆ ಯಾವ ಪ್ರಾಂತ್ಯಗಳೊಡನೆಯೂ ಯಾವ ಸಂಪರ್ಕವೂ ಇಲ್ಲದೆ ಸಂಪೂರ್ಣ ಪ್ರಭಕ್ಷರಿಸಲ್ಪಟ್ಟಿವರಂ ತಿದ್ದು ಇಲ್ಲಿಯ ಪತ್ರಿಕೋದ್ಯೋಗಿಗಳು ದುಡಿದರು ಹೀಗಾಗಿ ಇಲ್ಲಿಯ ಪತ್ರಿ ಕೋದ್ಯಮಕ್ಕೆ ತನ್ನದೇ ಆದ ಒಂದು ಪ್ರತ್ಯೇಕ ರೂಪ ಬರುವಂತಾಯ್ತು ಈ ಸಂದ ರ್ಭದಲ್ಲಿ, ನಮ್ಮ ಜಿಲ್ಲೆಯ ಪತ್ರಿಕೋದ್ಯಮದ ಬೆಳವಣಿಗೆಗೆ ಅವಿರಾಮ ಶ್ರಮ ವಹಿಸಿ ದುಡಿದ ದಿವಂಗತ ಶ್ರೀ ವಿ ಎಸ್ ಕಾಮತ್, ಕರೋಡಿ ಸುಬ್ಬರಾವ್, ಪಂಜೆ ಮಂಗೇಶರಾವ್ ಮತ್ತು ಎಮ್. ಎನ್ ಕಾಮತ್ ಇವರ ಸ್ಮರಣೆಗೆ ಲಬಿನಂದನೆ ಸಲ್ಲಿಸದಿದ್ದರೆ ನಾನು ಕರ್ತವ್ಯ ವಿಮುಖನಾಗ ನೆನು ಇಂದು ಕೂಡಾ ತನಗೆ ಪ್ರತಿಸ್ಪರ್ಧಿ ಇಲ್ಲವೆನ್ನುವಂತೆ ನಿರಾಜಮಾನವಾಗಿ ಮೆರೆಯುವ ಕನ್ನಡ-ಇಂಗ್ಲಿಷ್ ಅರ್ಧಕೋಶವನ್ನು ರೆವರೆಂಡ್ ಕಿಟ್ಟೆಲ್‌ರು ಸಂವಾದಿಸಿದುದು, ಮುದ್ರಿಸಿ ದುದು ಮತ್ತು ಪ್ರಕಟಿಸಿದುದು ಮಂಗಳೂರಿನಲ್ಲಿಯೇ ಎಂಬುದನ್ನು ಮರೆಯಲಿಕ್ಕಾ ಗುತ್ತದೆಯೇ?

ಕರ್ನಾಟಕದಲ್ಲಿ ಪತ್ರಿಕೋದ್ಯಮವು ಇನ್ನೂ ರೂಪ ರಚನೆಯಲ್ಲಿಯೇ ಇದೆ ಕೆಲವು ದುಸ್ತರವಾದ ತೊಂದರೆಗಳು ಇಲ್ಲಿಯ ಪತ್ರಿಕೋದ್ಯಮದ ಅಭಿವೃದ್ಧಿಗೆ ಕಲ್ಲು ಹಾಕಿವೆ—ನಮ್ಮ ಪರಿಸ್ಥಿತಿಯ ವೈಶಿಷ್ಟ್ಯವಾದ ತೊಂದರೆಗಳವು ನಮ್ಮಲ್ಲಿ ತೋರುವ ಒಂದು ದೊಡ್ಡ ಕುಂದು ಯಾವುದಂದರೆ, ಕನ್ನಡ ಭಾಷೆಯು ವ್ಯವಹಾರ ದಲ್ಲಿರುವ ಸಮಗ್ರಕ್ಷೇತ್ರವು ಸಾಂಸ್ಕೃತಿಕ ದೃಷ್ಟ್ಯಾ ಒಂದೇ ಆಗಿದ್ದರೂ, ರಾಜಕೀಯ ಪ್ರಭೇದಗಳು ಅದನ್ನು ಒಂದು ಸಮಸ್ಯಾತ್ಮಕ ರೀತಿಯಲ್ಲಿ ವಿಚ್ಛಿನ್ನವಾಗಿರಿಸಿರುತ್ತವೆ. ಕನ್ನಡ ಪ್ರಾಂತ್ಯವು ವಿಭಜಿಸಲ್ಪಟ್ಟಿದೆ—ಉತ್ತರ ಕನ್ನಡವು ಮುಂಬಯಿ ಆದಿ ಪತ್ಯದ ಒಂದು ಭಾಗವಾಗಿದ್ದು ಕೆಲವು ಮೇಲಣ ಘಟ್ಟ ಸೀಮೆಗಳನ್ನೂ ಒಳಗೊಂಡಿದೆಯಾದರೆ, ದಕ್ಷಿಣ ಕನ್ನಡವು ಮದ್ರಾಸು ಆದಿಸತ್ಯದಲ್ಲಿ ಪ್ರತ್ಯೇಕ ಸಲ್ಪಟ್ಟ ಸದಸ್ಯನಂತಿದ್ದು ಏಕಾಕಿಯಾಗಿದೆ! ಕೊಡಗು ಕಮಿಶನರರ ಪ್ರಾಂತ್ಯ! ಮೈಸೂರು ಹಿರಿಯ ಸಾಂಸ್ಥಾನಿಕ ರಾಜ್ಯ! ಕರ್ನಾಟಕದ ಕೆಲವು ಭಾಗಗಳು ಬೇರ್ಪಟ್ಟು ನಿಜಾಮ್ ರಾಜ್ಯಕ್ಕೆ ಸೇರಿಸಲ್ಪಟ್ಟಿವೆ ಕೊಳ್ಳೆಗಾಲವು ಮರಳು ಕಾಡಿ ನಲ್ಲಿ ಕಾಣಸಿಗುವ ಹಸುರು ಭೂಮಿಯಂತಿದೆ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಯ ಕೆಲವು ಭಾಗಗಳು ತೆಲುಗು ಪ್ರಾಂತ್ಯದ ಮಧ್ಯದಲ್ಲಿ ಸಿಲುಕಿಕೊಂಡಿವೆ ಉಳಿದ ಕೆಲವು ಕನ್ನಡ ಭಾಗಗಳು ಬೇರೆಬೇರೆಯಾಗಿ ಚೂರುಚೂರುಗಳಾಗಿ ಸಾಂಸ್ಥಾನಿಕ ರಾಜ್ಯಗಳಾಗಿ ಬಿಟ್ಟು, ವರಿಸ್ಥಿತಿಯು ಮತ್ತೂ ನಿಕೃಷ್ಟವಾಗಿದೆ ಹೀಗೆ ಕರ್ನಾಟಕವು ಇಂದು ಒಂದು ಬರಿಯ ಧ್ಯೇಯ ಮತ್ತು ಕನಸು ಆಗಿ ನಿಂತಿದೆ ಈ ರೀತಿಯ ಭಿನ್ನರಾಜ್ಯಾಡಳಿತಗಳ ಭಿನ್ನಹಿತಗಳ ಕಾರಣದಿಂದ ಯಾವುದೊಂದು ಪತ್ರಿಕೆಯೂ ಕರ್ನಾಟಕದ ಸಮಗ್ರ ಜನಸಮುದಾಯಕ್ಕೆ ವಾಚನೀಯವಾಗುವುದಿಲ್ಲ, ಕಾರಣ, ಯಾವ ಪತ್ರಿಕೆಯನ್ನೂ ಸಮಗ್ರ ಕರ್ನಾ ಟಕಕ್ಕೆ ವಾಚನೀಯವಾಗುವಷ್ಟು ವಿಶಾಲವಾಗಿ ಮಾಡಲಿಕ್ಕೆ ಸಾಧ್ಯವಾಗ ವುದಿಲ್ಲ ಈ ದೊಡ್ಡ ಸವ ನ್ಯಯೂ ಎಲ್ಲಾ ಕಾರ್ಯಶಾಲಿ ಪತ್ರಿಕೋ ದ್ಯೋಗಿಗಳ ತಲೆ ಕಡಿಸಿತು ಅದರಿಂದಾಗಿ ಕರ್ನಾಟಕವಲ್ಲಿ ಬೇವರ ವೈಯಕ್ತಿಕ ಪತ್ರಿಕೆಗಳು ಮಾತ್ರ ಉಳಿಯ ನಂತಾಯ್ತು ಹೊರತು ಸಮಗ್ರ ಕರ್ನಾಟಕಕ್ಕೆ ಪತ್ರಿಕೋದ್ಯಮವನ್ನು ಪ್ರತಿಬಿಂಬಿಸುವ ಒಂದು ಸಾಧನ ಶಕ್ತಿ ರಚನೆಯಾಗಲಿಲ್ಲ ಮೈಸೂರು ಪತ್ರಿಕೆಯೂ ಮೈಸೂರು ರಾಜ್ಯದ ಭಾಗ ಮಾಡಲ್ಲುದು ಧಾರವಾಡವ ಒಂದು ಪತ್ರಿಕೆಯು ಮುಂಬಾಯಿ ಕರ್ನಾಟಕದನ್ನ

ಅಭಿವ್ಯಾಯಗಳಿಗೆ ಸ್ವರ ಕೊಡಬಲ್ಲುದು, ಆದರೆ ದಕ್ಷಿಣ ಕನ್ನಡದ ಒಂದು ಸ್ವತ ಪತ್ರಿಕೆಯು ಬೆಳ್ಳಾರಿ ನಾಗರಿಕರ ಜೀವನದ ಅಂಚನ್ನೂ ಮುಟ್ಟುವಂತಿಲ್ಲ–ದೌರ್ಭ ಗ್ಯವಶಾತ್ ರಾತಿನೀತಿಗಳಲ್ಲಿ ನಮಗೆ ತೀರಾ ನಮ್ಮಾಸದಲ್ಲಿರುವ ಉತ್ತರ ಕನ್ನಡದವರ ಕುರಿತು ಕೂಡಾ ಅದು ಹೇಳುವಂತಿಲ್ಲ ಇದೊಂದು ವಿಷಾದಾಂಶ ನಾಚಕವೆನ್ನ ಬೇಕಾಗಿದೆ—ಕೇವಲ ವಿಷಾದವಲ್ಲ, ವಿಷಾದದ ಪರಮಾವಧಿ! ಸಮಗ್ರ ಕರ್ನಾಟಕವನ್ನು ಒಟ್ಟುಗೂಡಿಸುವ ಈ ಘನ ಸಮಸ್ಯೆಯಿನ್ನು ಒಂದಲ್ಲ ಒಂದು ದಿನ ನಾವು ಬಿಡಿಸಲೇ ಬೇಕು – ಎಷ್ಟು ಬೇಗನೆ ಅದನ್ನು ಬಿಡಿಸಲು ಯತ್ನಿಸುತ್ತೇವೊ ಅಷ್ಟು ಒಳ್ಳೆಯದು.

ಕರ್ನಾಟಕದಲ್ಲಿ ಜೀವನಭರಿತವಾದ, ಜೀವಕಳೆ ತುಂಬಿ ತುಳುಕುತ್ತಿರುವ ಪತ್ರಿಕೋದ್ಯಮವು ಬೆಳೆಯದಿರಲು ವಿಘ್ನಕಾರಿಯಾದ ಮತ್ತೊಂದು ಎಡರು—ವ್ಯವಹಾರಸೌಕರ್ಯಗಳ ಅಭಾವ ಈ ನಮ್ಮ ಪ್ರಮುಖ್ಯ ಶಹರಿಗೆ ಬರಲಿಕ್ಕೆ ಕಷ್ಟತೊಡಕುಗಳನ್ನು ಈಗಾಗಲೇ ಸ್ವತಹ ಅನುಭವಿಸಿಬಂದಿರುವ ನಿಮಗೆ, ಕರ್ನಾಟಕದ ಪತ್ರಿಕೆಗಳು ಓದುಗರನ್ನು ಶೀಘ್ರ ವೇಗದಿಂದ ಏಕೆ ಸೇರಲಾರವು ಎಂಬುದನ್ನು ನಾನು ಪ್ರತ್ಯೇಕ ವಿವರಿಸಬೇಕಾಗಿಲ್ಲ ಕರ್ನಾಟಕದಲ್ಲಿ ರೈಲುಂಸ್ತೆಗಳ ವಿತರಣ ಹೇಗಾಗಿದೆ ಎಂಬುದರ ಕುರಿತು ಒಂದು ಮಾತು ಹೇಳುವುದಿದ್ದರೆ, ಈ ಕಡೆ ಇನ್ನು ಆಗಬೇಕಾದ ಯತ್ನ ಈ ವರೆಗೆ ಆದುದಕ್ಕಿಂತ ಅತ್ಯಧಿಕ ಬಾಕಿಯಿದೆ ಎನ್ನಬೇಕಾಗುವುದು. ಆ ಯತ್ನವು ಪೂರ್ಣತೆ ಹೊಂದಿ, ನಮ್ಮೆಲ್ಲಾ ಪಟ್ಟಣಗಳಿಗೆ ರೈಲು ರಸ್ತೆಯ ಸೌಕರ್ಯ ಸೌಲಭ್ಯ ಒದಗಿ, ಕನ್ನಡ ಪತ್ರಿಕೆಗಳಿಗೆ ಶೀಘ್ರಗತಿಯಲ್ಲಿ ಸುದ್ದಿ ಮುಟ್ಟಿಸಲನುವಾಗುವ ಆ ಸುದಿನವು ಬೇಗನೆ ಉದಯಿಸಲೆಂದು ನಾವು ಇಚ್ಛಿಸುತ್ತೇವೆ. ವ್ಯವಹಾರದ ವೇಗವು ಹೆಚ್ಚಾಗದೆ ಸುದ್ದಿಗಳು ಮತ್ತು ಅಭಿಪ್ರಾಯಗಳು ಜನರ ಮನಮುಟ್ಟುವಂತಿಲ್ಲ

ಕರ್ನಾಟಕದಲ್ಲಿ ಪತ್ರಿಕೋದ್ಯಮವು ಇನ್ನೂ ಶೈಶವಾವಸ್ಥೆಯಲ್ಲಿದೆ. ಈ ಮಹತ್ವದ ಹಾಗು ಗೌರವಪೂರ್ಣವಾದ ಉದ್ಯೋಗದ ಕಡೆ ವಿಚಕ್ಷಣಮತಿಗಳು ಇನ್ನೂ ಸೆಳೆಯಲ್ಪಟ್ಟಿದಿಲ್ಲ. ಪತ್ರಿಕೋದ್ಯೋಗಿಗಳರದ ಪತ್ರಿಕೆಗಳು ಇವೆ ನಮ್ಮಲ್ಲಿ ಕೆಲವು ಬರೀ ಅಲ್ಪ ಜ್ಞಾನವಿರುವ, ಉದ್ಯಮಕ್ಕೆ ಸಾಕಷ್ಟು ಉಪಕರಣಗಳಿರದ ಕೆಲಸಗಾರರಿಂದ ನಡೆಯುತ್ತಿವೆ ಕೆಲವು ಪತ್ರಿಕೆಗಳು. ಅನುಕೂಲವಾದ ಸಂದರ್ಭಗಳು ದೊರೆಯದೆ ತಮ್ಮ ಪ್ರತಿಭೆಯನ್ನು ತುಳ್ಕುಹಿಡಿಯಲು ಬಿಟ್ಟು, ಇತರ ಉದ್ಯೋಗಗಳನ್ನು ಸೇರಿ, ಅಪರೂಪ ಸಮಯಗಳಲ್ಲಿ ಈ ಪವಿತ್ರಕ್ಷೇತ್ರದಲ್ಲಿ ತಮ್ಮ ದರ್ಶನವನ್ನೀಯುವ ಅವಿಕಸಿತ ಪತ್ರಿಕಾವ್ಯವಸಾಯಿಗಳೂ ಬಹುಮಂದಿ ಇದ್ದಾರೆ. ಸಾರ್ವಜನಿಕರ ಪ್ರೋತ್ಸಾಹದ ಅಭಾವವೇ ಪ್ರಗತಿಯನ್ನು ಹಿಂದೂಡಲಿಕ್ಕೆ ಮತ್ತೊಂದು ಕಾರಣವೆನ್ನಬೇಕಾಗಿದೆ. ಹಲವು ವೃತ್ತಪತ್ರಿಕೆಗಳು ಮತ್ತು ಮಾಸಪತ್ರಿಕೆಗಳು ಪ್ರತಿ ವರ್ಷವೆಂಬಂತೆ ತಲೆ ಎತ್ತುತ್ತವೆ, ಆದರೆ ವಿಷಾದವೆಂದರೆ ಅವುಗಳಲ್ಲಿ ಹಲವು ವರ್ಷಾಂತ್ಯದ ವರೆಗೂ ಬಾಳುವುದಿಲ್ಲ ಶಿಶು ಮರಣ ಸಂಖ್ಯೆಯು ಕರ್ನಾಟಕ ಪತ್ರಿಕಾಪ್ರಪಂಚದಲ್ಲಿ ಕಾಣುವಷ್ಟು ಲೋಕದ ಇನ್ನಾವ ಕಡೆಯಲ್ಲಿಯೂ ಕಾಣಲಾರವು!

ಇಷ್ಟಾದರೂ ಪತ್ರಿಕೋದ್ಯೋಗಿಗಳು ತಮ್ಮ ಉದ್ಯೋಗದ ಮೇಲಣ ಅಸಾಧಾರಣ ಮಮತೆಯಿಂದ, ನೋಲಿಂದ ಮೇಲೆ ಒರುವ ಎಲ್ಲಾ ಅವಾಂತರಗಳಿಗೆ ಭುಜಕೊಟ್ಟು, ದೇಶದಲ್ಲಿ ಪತ್ರಿಕೋದ್ಯಮಕ್ಕೆ ಹಿರಿಯಸ್ಥಾನ ದೊರೆಯಬೇಕೆಂದು ಅವಿರಾಮ ಯತ್ನ ನಡೆಸುತ್ತಿರುವುದು ಪ್ರಶಂಸನೀಯವಾಗಿದೆ ನಮ್ಮ ಪತ್ರಿಕೋದ್ಯಮದ ಪ್ರಗತಿಯ ಹಾದಿಯಲ್ಲಿ 'ಸಂಯುಕ್ತ ಕರ್ನಾಟಕ' ಮತ್ತು 'ತಾಯ್ನಾಡು' ಗಳಂತಹ ದೈನಿಕಗಳು ಮೈಲುಕಲ್ಲಿನಂತಿವೆ ಎಂದರೆ ಅತಿಶಯೋಕ್ತಿಯಾಗಲಾರದು.

ಪತ್ರಿಕೋದ್ಯಮವು ಅದಕ್ಕೆ ತಕ್ಕುದಾದ ಸ್ಥಾನದಲ್ಲೇರುವಂತೆ ಮಾಡುವ ಕಾರ್ಯಭಾರವು ಪತ್ರಿಕೋದ್ಯೋಗಿಗಳದು ಆ ಕಾರ್ಯಭಾರದಲ್ಲಿ ಪತ್ರಿಕೋದ್ಯೋಗಿಗಳು ಭಗೀರಥ ಯತ್ನಗಳನ್ನು ನಡೆಸಿಯೇ ತೀರಬೇಕು ಆದರ ಸಾಧನೆಗಾಗಿ ಹಾದಿ ಹುಡುಕುವುದು, ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವುದು ಇಂದು ನಮ್ಮ ಕರ್ತವ್ಯವಾಗಿದೆ ಸಾರ್ವಜನಿಕರ ಬೆಂಬಲ ಮತ್ತು ಪ್ರೋತ್ಸಾಹವನ್ನು ನಾವು ಹೇಗೆ ಪಡೆಯಬಹುದು, ಪತ್ರಿಕೆಗಳು ಪ್ರಜೆಗಳ ಜವಾಬ್ದಾರಿಕೆಯನ್ನು ಅವರ ಅಭಿಪ್ರಾಯಗಳ ಸ್ವರವನ್ನು ಪ್ರತಿಬಿಂಬಿಸುವ ಸಾಧನಗಳನ್ನಾಗಿ ಮಾಡುವುದು ಹೇಗೆ, ಜನರು ಅವುಗಳನ್ನು ತಮ್ಮವೆಂದೇ ತಿಳಿಕೊಂಡು ಅವುಗಳ ಕಡೆಗೆ ಆಕರ್ಷಿತರಾಗುವಂತೆ ಮಾಡುವುದು ಹೇಗೆ ಈ ಎಲ್ಲಾ ಪ್ರಶ್ನೆಗಳಿಗ ಇಂದು ನಾವು ಉತ್ತರ ಕಂಡುಹಿಡಿಯಬೇಕಾಗಿದೆ

ಇಂದು ಜಗತ್ತಿನ ರಾಜಕೀಯ ಅಂಗರಚನೆಯಲ್ಲಿ ಪತ್ರಿಕೋದ್ಯಮಕ್ಕೆ ಒಂದು ಪ್ರಮುಖ್ಯ ಸ್ಥಾನವಿದೆ ಅದು ನಾಗರಿಕರ ಹಕ್ಕಿನವುಗಳಾದ ಚತುಸ್ಸ್ವಾತಂತ್ರ್ಯಗಳಲ್ಲಿ ನಾಲ್ಕನೆಯದಾಗಿದೆ, ಸಾರ್ವಜನಿಕರ ಅಂತರಾಳದ ಕರಯದು, ಅದೊಂದು ಪ್ರತಿಬಿಂಬ, ಸಾರ್ವಜನಿಕ ಅಭಿಪ್ರಾಯದ ಕನ್ನಡಿ, ಎಣಿಸಲ್ಪಡತಕ್ಕ(ಎಣಿಕೆಗೆ ಅರ್ಹವಾದ) ಶಕ್ತಿ ಎಲ್ಲಾ ಪತ್ರಿಕೋದ್ಯೋಗಿಗಳು ಒಂದಾಗಿ, ಕರ್ನಾಟಕದಲ್ಲಿನ ಪತ್ರಿಕಾ ರಕ್ತಿಯನ್ನು ಇನ್ನಷ್ಟು ಜನಪಾತ್ಯ ಇನ್ನಷ್ಟು ರಕ್ತಪ್ರಗಾ ಇನ್ನಷ್ಟು ಉತ್ಪಾದಿಸಾಮಕ ಹಾಗು ಗೌರವಪೂರ್ಣವನ್ನಾಗಿ ಮಾಡಲು ಸಂಘಟಿತ ಕಾರ್ಯರಂಗಕ್ಕಿಳಿಯಲಿ ಕೃತಕೃತ್ಯರಾದರೆ ಅಂದಿನ ಶಬ್ದಿನವು ಎಷ್ಟೊಂದು ಮಹತ್ವ ಪೂರ್ಣವೆನಿಸೀತು!

ಕನ್ನಡದ ಪತ್ರಿಕೋದ್ಯಮಿಗಳು ಬಿಡಿಸಲಿರುವ ಸಮಸ್ಯೆಗಳು ಸ್ಫೂರ್ತಿಯ ಬುಗ್ಗೆಯಂತಿರುವವರಲ್ಲ, ಕೂಡ ಸಿದ್ಧಾಲೆಗೊಳಿಸಬಹುದಾದಷ್ಟು ಕರಿಣವಾಗಿವೆ. ಇದನ್ನು ನಾವು ತಿಳಿದರೆ, ನಾವು ಆಗಾಗ ನೀರಿ ಇವುಗಳನ್ನು ಚರ್ಚಿಸಿ ಶೀರ್ಮಾನದ ಬಗ್ಗೆ ಪ್ರಯತ್ನಿಸುವ ಅವಶ್ಯಕತೆಯು ಸ್ವತಹ ವಿದಿತವಾಗುವುದು ಅವುಗಳಲ್ಲಿ ಕೆಲವನ್ನು ಮಾತ್ರ ಎತ್ತಿ ನಿಮ್ಮ ವೀರ್ಮಾನದ ಬಗ್ಗೆ ನಾನಿಲ್ಲಿ ಚರ್ಚಿಸುತ್ತೇನೆ.

ಇಂದು ಕರ್ನಾಟಕದಲ್ಲಿ ಪತ್ರಿಕೋದ್ಯಮವು ಲಾಭದಾಯಕ ಉದ್ಯೋಗವಾಗಿ ಕಂಡುಬರುವುದಿಲ್ಲ ಪತ್ರಿಕೆಗಳಲ್ಲಿ ಹಲವು, ಅಸ್ಥಿರ ಜೀವನ ನಡೆಸಿಕೊಂಡಿವೆ ಎಂದರೆ ತಪ್ಪಾಗದು—ಅರ ಹೊಟ್ಟೆಯಲ್ಲಿ ಜೀವಧಾರಣೆ ಮಾಡಿಕೊಂಡಿರುವ ಪತ್ರಿಕೆಗಳೂ ನಮ್ಮಲ್ಲಿವೆ ಉದ್ಯೋಗಗಳಲ್ಲಿ ಸಾಹಸಮಯ ಉದ್ಯೋಗವೆನಿಸಿಕೊಂಡಿದ್ದರೂ ವ್ಯಾಪಾರ ದೃಷ್ಟಿಯಲ್ಲಿ ಬಹಳ ನಿರಾಶಾಜನಕ ವಹಿವಾಟು ಆಗಿ ಬಿಟ್ಟಿದೆ ಪತ್ರಿಕೋದ್ಯಮ ತಲೆಯಲ್ಲಿಯೂ ಹಸಿವೆ ಹೊಟ್ಟೆಯಲ್ಲಿಯೂ ಹಸಿವೆ ಇರುವಾಗ ಆಲೋಚನಾಶಕ್ತಿ ಯಾರಿಗೂ ಬರಲಾರದು. ಪತ್ರಿಕಾ ಪ್ರತಿನಿಧಿಗೆ ತನ್ನ ಕಾರ್ಯವನ್ನು ವಿಚಕ್ಷಣತೆಯಲ್ಲಿ ನಡೆಸುವರೆ ಸಮಾಜದಲ್ಲಿ ಯೋಗ್ಯ ಸ್ಥಾನಮಾನಗಳು ಸಿಗಬೇಕು ಪತ್ರಿಕೋದ್ಯಮವು ಲಾಭದಾಯಕ ಉದ್ಯೋಗವಾಗಿಲ್ಲಾದಾದರೆ ಯೋಗ್ಯತೆಯುಳ್ಳ ಮಂದಿ ಅದರ ಕಡೆಗೆ ಆಕರ್ಷಿತರಾಗಲಾರರು. ವಾಚಕರ ಮತ್ತು ಜ್ಯಾಹೀರಾತುದಾರರ ಸಂಖ್ಯೆಯನ್ನು ವೃದ್ಧಿಗೊಳಿಸಿ ಪತ್ರಿಕೋದ್ಯೋಗದ ಆರ್ಥಿಕ ಸ್ಥಿತಿಯನ್ನು ಊರ್ಜಿತಗೊಳಿಸಲು ಇಂದು ನಾವೆಲ್ಲರೂ ಯತ್ನಿಸಬೇಕಾಗಿದೆ.

ಅಂತೆಯೇ ಪತ್ರಿಕೋದ್ಯೋಗಿಗಳಿಗೆ ಅಗತ್ಯವಿರುವ ಸಾಧನಗಳನ್ನು ಒದಗಿಸಿಕೊಡಲು ನಾವು ಮರೆಯಬಾರದು ಇಂದು ನಮ್ಮಲ್ಲಿಯ ಪತ್ರಿಕೋದ್ಯೋಗಿಗೆ ನಾವು ಒದಗಿಸಿಕೊಡುವ ಜ್ಞಾನವು ಕೇವಲ ಅನುಭವಸಿದ್ಧ ಪ್ರಕೃತಿಯದು ಇವರನ್ನು ತರಬೇತಿಗೊಳಿಸುವ ಯಾವ ರೀತಿಯ ವ್ಯವಸ್ಥೆಯೂ ನಮ್ಮ ವಿಶ್ವವಿದ್ಯಾಲಯಗಳಲ್ಲಿಲ್ಲ ನಮ್ಮಲ್ಲಿಯ ಪತ್ರಿಕೋದ್ಯೋಗಿಗೆ ತನ್ನ ಭಾಷಾಜ್ಞಾನ ವಿಕಾಸಗೊಳಿಸಲನುಗುಣವಾಗುವ ಯೋಗ್ಯ ಕನ್ನಡ ಪುಸ್ತಕಗಳ ಸಂಗ್ರಹ ಇಲ್ಲನೆ ಇತರ ಪರಿಪಾಕ ಸಾಹಿತ್ಯ ಸಿಗುವುದಿಲ್ಲ. ಪತ್ರಿಕಾಕಾಯಿದಗಳಾವುವು, ಮಾನನಷ್ಟ ಕಾಯಿದೆಯನ್ನೆಯ ಬರುವ ವಿಷಯಗಳಾವುವು, ಕೊಪಿರೈಟ್ ಅಕ್ಟ ಅಂದರೇನು, ಪತ್ರಿಕೆಯ ಅಂಗರಚನೆ ಹೇಗಿರಬೇಕು–ಇತ್ಯಾದಿ ವಿಷಯಗಳನ್ನು ತಿಳಿಯಬೇಕಾದರೆ ಅವನು ಸ್ವಯಂಶಿಕ್ಷಣದ ಮೇಲೆ ಅವಲಂಬಿಸಿರಬೇಕಲ್ಲದೆ, ಅವನಿಗೆ ಬೇರೆ ತರಬೇತಿ ಇಲ್ಲ. ಇದು ಖಂಡಿತವಾಗಿಯೂ ಪತ್ರಿಕೋದ್ಯಮದ ಭಾವೀ ಬೆಳವಣಿಗೆಗೆ ಅಷ್ಟೊಂದು ಚೆನ್ನಾಗಿ ಒಪ್ಪುವುದಿಲ್ಲ. ಆದುದರಿಂದ ವೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಕಂಡು, ಪತ್ರಿಕೋದ್ಯೋಗದ ಕುರಿತು ಹೇಳಿಕೊಡುವ ಒಂದು ಪ್ರತ್ಯೇಕ ವಿಭಾಗವನ್ನು ಅವರ ಪಾರಕ್ಯದಲ್ಲಿ ಸೇರಿಸಿಕೊಳ್ಳಲು ಕೇಳಿಕೊಳ್ಳುವುದು ಅತ್ಯಗತ್ಯವಿದೆ ಬ್ರಿಟಿಷ್ ಕರ್ನಾಟಕಕ್ಕೆ ತನ್ನದೇ ಆದ ಒಂದು ವಿಶ್ವವಿದ್ಯಾಲಯ ಇರುವುದಿಲ್ಲ ಕರ್ನಾಟಕ ವಿಶ್ವವಿದ್ಯಾಲಯವೊಂದು ಸ್ಥಾಪನೆಯಾಗಬೇಕೆಂಬ ಚಳವಳಿಕ್ಕೆ ಬೆಂಬಲಕೊಡುವುದು ಅತ್ಯವಶ್ಯವಲ್ಲವೇ? ಈ ಪರಿಷತ್ತು ಪತ್ರಿಕಾವ್ಯವಸಾಯದಲ್ಲಿ ಒಂದು ವಿದ್ಯಾಂಗವನ್ನು ರಚಿಸಬೇಕು; ಆಗಾಗ್ಗೆ ಪರೀಕ್ಷೆಗಳನ್ನೆರ್ಪಡಿಸಿ ಉತ್ತೀರ್ಣರಾದವರಿಗೆ ಯೋಗ್ಯತಾ ಪತ್ರಗಳನ್ನು ಕೊಡಬೇಕು ಮತ್ತು ಪತ್ರಿಕೋದ್ಯೋಗಕ್ಕೆ ಸಂಬಂಧಪಟ್ಟ ವಿಷಯಗಳ ಮೇಲೆ ಕನ್ನಡದಲ್ಲಿ ಪುಸ್ತಕಗಳನ್ನು ಪ್ರಕಟಿಸಬೇಕು ಎಂಬಿತ್ಯಾದಿ ಯೋಗ್ಯ ಸಲಹೆಯೊಂದು ಈ ಪರಿಷತ್ತಿನ ಮುಂದೆ ಬಂದಿದೆ. ಆ ಸಲಹೆಯನ್ನು ನಾನು ಮನಃಪೂರ್ವಕ ಒಪ್ಪುತ್ತೇನೆ.

ಪತ್ರಿಕೆಯನ್ನು ಆಕರ್ಷಕ ಮತ್ತು ಜನಪ್ರೀತವನ್ನಾಗಿ ಮಾಡುವುದು ಹೇಗೆ ಎಂಬ ವಿಷಯವನ್ನು ನಾವು ತೀವ್ರ ಚರ್ಚಿಸಬೇಕಾಗಿದೆ. ಕರ್ನಾಟಕದಲ್ಲಿ ಪ್ರಕಟಿತೋತ್ಸವ ಆಚರಿಸುವ ಭಾಗ್ಯವಪಡೆದ ಪತ್ರಿಕೆಗಳು ಕೇವಲ ಕೆಲವೇ ಹಿತಕರವಾದ ಹಾಸ್ಯರಸವನ್ನು ಹೇಗೆ ಒದಗಿಸಿಕೊಡಬೇಕು, ಹೃದಯದ ಅಹ್ಲಾದದಿಂದ ಪ್ರೇರಿತವಾದ ನಗು ಹುಟ್ಟಿಸುವಂತೆ ಹೇಗೆ ಮಾಡಬಹುದು, ನಿಜವಾದ ಜ್ಞಾನವನ್ನು ಓದುಗರಿಗೆ ಹೇಗೆ ತಿಳಿಸಬಹುದು, ಉಪಯುಕ್ತ ವಿಷಯಗಳನ್ನು ದೋಷರಹಿತವಾಗಿ ಹೇಗೆ ಒದಗಿಸಬಹುದು, ದ್ವೇಷರಹಿತವಾದ ಅಭಿಪ್ರಾಯಗಳಿಗೆ ಹೇಗೆ ರೂಪು ಕೊಡಬಹುದು ಎಂಬುದನ್ನು ಪತ್ರಿಕೆಗಳು ಚೆನ್ನಾಗಿ ಗಮನಿಸುವುದೊಳ್ಳಿತು ಪತ್ರಿಕೆಗಳು ತಮಗೆ ಶಿಕ್ಷಣ ಕೊಡಬಲ್ಲುವು, ತಮ್ಮ ಜ್ಞಾನವಿಕಾಸಕ್ಕೆ ಸಹಾಯಮಾಡಬಲ್ಲುವು ಮತ್ತು ತಮಗೆ ಮನರಂಜನೆಯನ್ನೂ ಒದಗಿಸಬಲ್ಲವು ಎಂಬುದು ಜನರಿಗೆ ಮನ್ವಾದರೆ ಮಾತ್ರ ಅವರಿಗೆ ಪತ್ರಿಕೆಗಳ ಪ್ರಯೋಜನವೇನೆಂಬುದು ತಿಳಿಯುವುದು ಪತ್ರಿಕೆಗಳ ಕಡೆಗೆ ಅವರು ಆಕರ್ಷಿತರಾಗುವರು ಈ ಎಲ್ಲಾ ವಿಷಯಗಳ ಸಾಧ್ಯವಾಗಬೇಕಾದರೆ ಯೋಗ್ಯ ವ್ಯವಸ್ಥೆ ಹಾಗು ವಿಚಾರಪರಣಿ ಅವಶ್ಯವಿದೆ. ಯಾವುದೊಂದು ವ್ಯವಹಾರದಲ್ಲೂ ವ್ಯವಸ್ಥೆ ಅತ್ಯವಶ್ಯ—ಅಂತೆಯೇ ಎಲ್ಲಾ ತರದ ಶಿಕ್ಷಣಗಳಿಗೆ ವಿಚಾರವು ಬೇಕು ಪತ್ರಿಕೆಗಳ ಜೀವನ ಹಾಗು ಅಸ್ತಿತ್ವವು ಅಸ್ಥಿರವಾಗಿರುವ ಈ ಕಾಲಕ್ಕೆ ಮುಂದೆ ಪೂರ್ವಪರಿಯ ಹಲವು ಪತ್ರಿಕೆಗಳನ್ನು ಹೊರಡಿಸಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದು ಸ್ವರ್ವಗೆ ತೊಡಗಿ ಒಂದು ಇನ್ನೊಂದರ ಮುಂದೆ ಕಡಿಮೆಯಾಗಲು ಯತ್ನಿಸುವುದು ಇದು ಕೇವಲ ಹುಚ್ಚುತನ ಎನ್ನಬೇಕಾಗುತ್ತದೆ ಎಂದಲು ಪತ್ರಿಕೋದ್ಯೋಗಿಗಳಿಗೂ ಇನ್ನೂ ಬೇಕಾಗುವಂತಹ ಇತರ ಹಲವು ಉಪಯುಕ್ತ ವಿಷಯಗಳನ್ನು ಪ್ರಸ್ತಾಪಿಸಬಹುದಾಗಿದೆ—ಉದಾಹರಣೆ

ಗಾಗಿ ವ್ಯಂಗ್ಯಚಿತ್ರಗಳನ್ನು ಬರೆಯುವುದು, ಸಾಹಸಕಾರ್ಯಗಳ ಕುರಿತು ಬರೆಯುವುದು ಚಿತ್ರಗಳ ಕುರಿತಾದ ಜ್ಞಾನ ವೃದ್ಧಿಗೊಳಿಸುವುದು, ಸ್ರಯಾಣಗಳ ಕುರಿತಾದ ರಮ್ಯ ವಿಷಯಗಳನ್ನು ಬರೆಯುದು. ಪ್ರಕೃತಿ ಜೀವನ ಚಿತ್ರಿಸುವುದು, ಸಂಶೋಧನೆ ಇತ್ಯಾದಿ ಹಲವಾರು ಕಾರ್ಯಕ್ಷೇತ್ರಗಳಲ್ಲಿ ಅವರು ತಮ್ಮ ಛಾಪ್ಗೆ ತೋರಿಸಬಹುದು. 'ನೆಶನಲ್ ಜೊಗ್ರೆಫಿಕಲ್ ಮೆಗಜಿನ್', 'ಲೈಫ್', ಕರ್ರೆಂಟ್ ಹಿಸ್ಟರಿ', ಟೈಮ್ಸ್', 'ದಿ ಲಿಟರರಿ ಡೈಜೆಸ್ಟ್', 'ಚಿಲ್ಡ್ರನ್ಸ್ ನ್ಯೂಸ್ ಪೇಪರ್' ಇತ್ಯಾದಿ ಪರರಾಷ್ಟ್ರ ಗಳ ಪತ್ರಿಕೆಗಳನ್ನು ಓದಿದರೆ ಈ ಎಲ್ಲಾ ವಿಷಯಗಳ ಕುರಿತು ವಿಪುಲ ಜ್ಞಾನವನ್ನು ನಾವು ಸಂಗ್ರಹಿಸಬಹುದಾಗಿದೆ. ಹೀಗೆ ಬೇರೆ ಬೇರೆ ವೈಶಿಷ್ಟ್ಯವಿರುವ ಬೇರೆ ಬೇರೆ ಪತ್ರಿಕೆಗಳನ್ನು ಪ್ರಚಲಿಸುವುದರ ಪ್ರಯೋಜನಗಳನ್ನು ನಾವು ಪರಿಶೀಲಿಸಿ ನೋಡ ಬಹುದೆಂದು ನನಗೆ ಅನ್ನಿಸುತ್ತಿದೆ.

ಅಖಿಲ ಕರ್ನಾಟಕದಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸುದ್ದಿ ಮುಟ್ಟಿಸಲು 'ವಾರ್ತಾವಾಹಕ ಸಂಸ್ಥೆ'ಯೊಂದು ಅಗತ್ಯ ವ್ಯವಸ್ಥೆಯಾಗಬೇಕು. ಈ ಪ್ರಶ್ನೆಯನ್ನು ಪತ್ರಿಕೋದ್ಯೋಗಿಗಳು ಮುಖ್ಯತಃ ಚರ್ಚಿಸಬೇಕಾಗಿದೆ. ಪತ್ರಿಕೆಗಳು ಈ ೯ಡೆ ವೈಯಕ್ತಿಕ ಯತ್ನಗಳನ್ನು ನಡೆಸಿದರೆ ಸಾಲದು—ಅದಕ್ಕೊದಗಬಹುದಾದ ಖರ್ಚಿನ ಪರಿಮಾಣ ಅಮಿತವಿದೆ. ಆದರೆ ಕರ್ನಾಟಕದ ಎಲ್ಲಾ ಪತ್ರಿಕೆಗಳು ಒಂದಾಗಿ ಒಗ್ಗಟ್ಟಿನಿಂದ ಎಲ್ಲರಿಗೂ ಅನ್ವಯಿಸುವಂತೆ ಒಂದು ಸಾಮಾನ್ಯ ವಾರ್ತಾಕಚೇರಿ ವ್ಯವಸ್ಥೆಗೊಳಿಸುವುದಾದರೆ, ಆ ಯೋಜನೆಯು ಪತ್ರಿಕಾ ವ್ಯವಸಾಯದ ಬೆಳವಣಿಗೆಗೆ ಬಹು ಮಟ್ಟಿಗೆ ಸಹಾಯವಾದೀತೆಂದು ನಾನು ಧೈರ್ಯದಿಂದ ಹೇಳಬಲ್ಲೆ.

ಲಿಪಿ ಸುಧಾರಣೆಯ 'ಪ್ರಶ್ನೆ, ಕನ್ನಡ ಟೈಪ್‌ರೈಟರ್, ಲಿನೋಟೈಪ್ಸ್, ಮೊನೋ–ಟೈಪ್ ಮತ್ತು ರೋಟರಿ ಇವುಗಳನ್ನು ಬೆಳಕಿಗೆ ತರುವ ಯೋಜನೆ, ಈ ಮಹತ್ವದ ವಿಷಯಗಳನ್ನೂ ನಾವು ಚರ್ಚೆಗೊಳಪಡಿಸದಿದ್ದರೆ ಇಂದಿನ ನಮ್ಮ ವಿಚಾರವಿನಿಮಯಗಳು ಪೂರ್ಣತೆ ಹೊಂದುವಂತಿಲ್ಲ ಈಗಿನ ಕೆಲ್ಸ್‌ಟನ್ ಕಾಲದ ಹಳೇ ಮಾದರಿಯ ಮೊಳೆ ವಿತರಣ ಮತ್ತು ಮುದ್ರಣಗಳಿಗೆ ಅಂಟಿಕೊಂಡರೆ ತಮ್ಮ ವ್ಯವಸಾಯವನ್ನು ಕಾರ್ಯಕ್ಷಮವಾಗಿ ನಡೆಸಲಾಗುವುದಿಲ್ಲ ಎಂಬ ಭಾವನೆ ಇಂದು ಹಲವು ಮಂದಿ ಪತ್ರಿಕೋದ್ಯೋಗಿಗಳಲ್ಲಿ ಮನೆಮಾಡಿಕೊಂಡಿದೆ ಕನ್ನಡ ಲಿಪಿಯು ಬಹಳ ಕಷ್ಟಕಾರಕವಾಗಿದೆ. ವೇಗ ಮತ್ತು ಕಾರ್ಯಕ್ಷಮತೆಯನ್ನು ಅದು ತಡೆಯುತ್ತದೆ ಒಂದು ಫೊಂಟ್‌ದಲ್ಲಿ ೫೫೦ ಬೇರೆ ಬೇರೆ ಮೊಳೆಗಳು ಬೇಕಾಗಿರುವ ಈ ಲಿಪಿಯಿಂದ ನಾವು ಎಷ್ಟು ವೇಗ ಸಾಧಿಸಬಹುದು? ಇದೇ ಲಿಪಿಯನ್ನು ನಾವು ಗಟ್ಟಿಮಾಡಿದರೆ ಕನ್ನಡ ಟೈಪ್‌ರೈಟರನ್ನು ತಯಾರಿಸುವ ಯೋಜನೆಯು ಕೇವಲ ಆಕಾಶ ಕುಸುಮವಾಗಿ ಉಳಿಯಬಹುದು. ಮೊನೋಟೈಪ್ ಮತ್ತು ಲೀನೊ ಟೈಪ್‌ಗಳನ್ನು ಈಗಿನ ಲಿಪಿಯ ಬಗ್ಗೆ ರಚಿಸುವುದು ಅಸಾಧ್ಯವಾದುದರಿಂದ ನಮ್ಮ ಲಿಪಿಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಶೋಧಿಸಿ ಕ್ರಮಪಡಿಸುವುದೇ ನಮಗೆ ಉಳಿದ ಮಾರ್ಗ ಇಲ್ಲವೆ ನಾವು ನಮ್ಮ ಭಾಷೆಗೆ ರೋಮನ್ ಲಿಪಿಯನ್ನು ಗೊತ್ತುಹಚ್ಚಿ ಈ ಕ್ಷೇತ್ರದಲ್ಲಿ ಬರುವ ಎಲ್ಲಾ ಅಡಚಣೆಗಳನ್ನು ಗೆದ್ದರಾಗ ಬಹುದೇ? ಎಲ್ಲ ಭಾಷೆಗಳು ರೋಮನ್ ಲಿಪಿಯನ್ನೇ ಪ್ರಯೋಗಕ್ಕೆ ತಂದು, ಈ ಭಾಗದ ಅನಾವಶ್ಯಕ ಶ್ರಮವನ್ನು ನಿವಾರಿಸಿದರೆ ತುಂಬಾ ಒಳಿತಲ್ಲವೇ? ಈ ವಿಷಯವನ್ನು ನಿರನುಭೂತಿಯಿಂದ ಇಂದು ನಾವು ಚರ್ಚಿಸಬೇಕಾಗಿದೆ. ರೋಮನ್ ಲಿಪಿಯನ್ನು ವ್ಯವಹರಣೆಯಲ್ಲಿ ತರುವುದಿದ್ದರೆ ಹಲವು ಪ್ರಯೋಜನಗಳಿವೆ—ಆದುದರಿಂದ ರೋಮನ್ ಲಿಪಿಯನ್ನು ಪ್ರಯೋಗಕ್ಕೆ ತರುವ ಸಲಹೆಯನ್ನು ತಿರಸ್ಕರಿಸುವುದು ಸುಲಭವಿಲ್ಲ; ಇಲ್ಲವೆ ನಮ್ಮ ಲಿಪಿಯನ್ನೇ ರೋಮನ್ ಲಿಪಿಯ ಗುಣಗಳಿಗನ್ವಯವಾಗುವಂತೆ ಮಾರ್ಪಾಟಗೊಳಿಸಲು ಸಾಧ್ಯ ಉಂಟೇ ಎಂಬುದನ್ನೂ ನಾವು ಯೋಚಿಸಬಹುದು.

ಸಮಯ ವಿಸಾರುತ್ತಿದೆ. ನಿಮ್ಮ ಅಮೂಲ್ಯ ಸಮಯದ ಅಧಿಕಾಂಶವನ್ನು ನನ್ನೀ ಭಾಷಣ ಕೇಳುವುದರಲ್ಲಿಯೇ ವಿನಿಯೋಗಿಸುವಂತೆ ಮಾಡಲು ನಾನು ಭಯಸುವುದಿಲ್ಲ. ಆದರೆ ನಮ್ಮೆಲ್ಲರನ್ನು ಇಂದು ಎದುರಿಸುವ ಶೀಘ್ರ ಸಮಸ್ಯೆಗಳ ಕುರಿತು ಒಂದೆರಡು ಮಾತುಗಳನ್ನು ಇಲ್ಲಿ ಹೇಳದೆ ನಿರ್ವಾಹವಿಲ್ಲ. ಇಂದು ಜಗತ್ತು ಪ್ರಳಯಕಾರೀ ಯುದ್ಧದ ಬೇಗೆಯಿಂದ ಕರಗುತ್ತಿದೆ ಯುದ್ಧದ ನಿಕೃಷ್ಟ ಕಾಲ, ಅತೀನ ಗಂಡದ ಕಾಲವು ಕಳೆಯಿತು—ಪ್ರಜಾಪ್ರಭುತ್ವದ ತತ್ವಗಳು ನಿರಂಕುಶವಾದದ ಧ್ಯೇಯಗಳನ್ನು ಜಯಿಸಿ ಉಗ್ರ ಶಿಖರವನ್ನೇರುವ ಕಾಲ ತೀರಾ ಸನಿಹದಲ್ಲಿದೆ ಎಂದು ನಾವು ಆತಿಸಲೇ? ನಾಜೀ ಅಭಿಯೋಗವನ್ನು ತಡೆದು ತಮ್ಮ ಮಾತೃದೇಶವನ್ನು ರಕ್ಷಿಸಿದ ಸೋವಿಯಟ್ ರಷ್ಯದ ಯಶಸ್ವೀ ಪ್ರತಿಭಟನೆಯು ಈ ಯುದ್ಧದ ಅತ್ಯಂತ ಉಲ್ಲೇಖನೀಯ ಘಟನೆಯಾಗಿ ಬಾಳುವುದರಲ್ಲಿ ಸಂದೇಹವಿಲ್ಲ ಯುದ್ಧವು ಭಾರತದ ಲ್ಲಿರುವ ನಮಗೆ ಹೊಸ ಸಮಸ್ಯೆಗಳನ್ನು ತಂದೊಡ್ಡಿದೆ. ಪ್ರೆಸ್ ಕಾಯಿದೆಗಳು, ಪ್ರಿ–ಸೆನ್ಸರ್‌ಶಿಪ್ ಇವೇ ಮುಂತಾದ ಕಾನೂನುಗಳ ಶೃಂಖಲೆಯಿಂದ ಇಂದು ತಮ್ಮಲ್ಲಿಯ ಪತ್ರಿಕಾ ವ್ಯವಸಾಯವು ಬಿಗಿಯಲ್ಪಟ್ಟಿದೆ ಈ ನಿರ್ಬಂಧಗಳು ಯುದ್ಧ ಮತ್ನಾಗಳ ಅವಶ್ಯಕತೆಯನ್ನು ನಿಸಾರದಂತೆ ನೋಡಿಕೊಳ್ಳುವುದು ಪತ್ರಿಕೋದ್ಯೋಗಿಗಳಾದ ನಮ್ಮ ಕರ್ತವ್ಯವಾಗಿರುತ್ತದೆ. ನಾವು ಯಾವಾಗಲೂ ಎಚ್ಚರ ನಿಂದಿದ್ದು, ಪತ್ರಿಕೆಗಳ ಹಕ್ಕನ್ನು ಕಾಪಾಡಲು ಭಗೀರಥ ಯತ್ನ ನಡೆಸುವ ಅಖಿಲ ಭಾರತ ಪತ್ರಿಕಾ ಸಂವಾದಕರ ಪರಿಷತ್ತಿಗೆ ಸಂಪೂರ್ಣ ಬೆಂಬಲವನ್ನು ನೀಡಬೇಕು

ಶಾಂತಿಯ ನಂತರ ಬರುವ ಜಗತ್ತಿನಲ್ಲಿ ಪತ್ರಿಕೆಗಳು ಪ್ರಾಮುಖ್ಯ ವಾತ್ರ ವಹಿಸಲಿದೆ ಯುದ್ಧಾನಂತರದ ವಿಶ್ವ ಪುನರ್ರಚನೆಯ ಯೋಜನೆಗೆ ಪತ್ರಿಕೆಗಳು ಉತ್ತಮ ಸಲಹೆಗಳನ್ನು ನೀಡಬಹುದು ಮತ್ತು ಭಾರತ ದೇಶದಲ್ಲಿ ಸ್ವಾತಂತ್ರ್ಯದ ಸ್ರವೇಶವಾಗುವಾಗ—ಆ ಶುಭ ದಿನ ಬಹಳ ದೂರವಿರದೆಂದು ನಾನು ಆಶಿಸುತ್ತೇನೆ—ಸ್ರಜೆಗಳಿಗೆ ಆ ಸ್ವಾತಂತ್ರ್ಯ ಸವಿಯನ್ನು ಉಣ್ಣಿಸುವ ಕಾರ್ಯಭಾರವನ್ನು ಪತ್ರಿಕೆಗಳು ಹೊತ್ತುಕೊಳ್ಳಬೇಕು ನಿರ್ಭಯವಾಗಿ, ನಿರ್ದಾಕ್ಷಿಣ್ಯವಾಗಿ, ಜಾತೀಯ ಪಕ್ಷಪಾತ ಕೈಡೆಗೊಡದೆ, ಉತ್ತಮ ವಿಚಾರಗಳಿಗೆಲ್ಲಾ ಪತ್ರಿಕೆಗಳು ಬೆಂಬಲಕೊಡಬೇಕು.

ಇವು ಮತ್ತು ಇನ್ನು ಹಲವು ಪ್ರಶ್ನೆಗಳು ಪರಿಷತ್ತಿನ ಮುಂದೆ ಬರಬಹುದು. ಇಲ್ಲಿ ನಡೆದ ಚರ್ಚೆಯ ಫಲರೂಪವಾಗಿ ಪತ್ರಿಕೆಗಳನ್ನು ಸಮಾಜದ ಒಂದು ಪ್ರಮುಖಾಂಗವನ್ನಾಗಿ ಮಾಡಲು ಸಾಧ್ಯವಾಗುವುದಾಗಿಯೂ ನಮ್ಮ ಪರಸ್ಪರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಾಗಿಯೂ ನಾನು ಆಶಿಸುತ್ತೇನೆ

ಈ ಪರಿಷತ್ತನ್ನು ಜರಗಿಸಲು ನಮಗೆ ನೆರವಾದವರಿಗೆಲ್ಲಾ ಧನ್ಯವಾದಗಳನ್ನು ಸಿರ್ಸುವ ಗೆಲವಿನ ಕಾರ್ಯವನ್ನು ಈಗ ನಾನು ನೆರವೇರಿಸಬೇಕಾಗಿದೆ. ಶ್ರೀ ಪಿ. ಆರ್. ಶ್ರೀನಿವಾಸನರು ಇಂದಿನ ಈ ಸಮಾರಂಭಕ್ಕೆ ಅಧ್ಯಕ್ಷರಾಗಲು ಸಮ್ಮತಿಸಿದುದು ಸ್ವಾಗತ ಸಮಿತಿಯ ಭಾಗ್ಯವೆಂದೇ ನಾವು ತಿಳಿಯುತ್ತೇವೆ. ಭಾರತದಲ್ಲಿ ಪತ್ರಿಕಾ ವ್ಯವಸಾಯದ ಬೆಳವಣಿಗೆಗೆ ನಮ್ಮ ಸನ್ಮಾನ್ಯ ಅಧ್ಯಕ್ಷರಷ್ಟು ಅವಿರಾಮ ಸೇವೆ ಸಲಿಸಿದವರು ಕೆಲವೇ ಮಂದಿ ರಾಷ್ಟ್ರೀಯವಾದದ ವೀರರಿವರು—ರಿಸರ್ವ ಬೆಂಕಿನ ಡೈರೆಕ್ಟರರಲ್ಲೊಬ್ಬರು. ತನ್ನ ವೈಯಕ್ತಿಕ ಯತ್ನಗಳಿಂದ ಹಾಗು ಮಹತ್ವದಿಂದ ಪತ್ರಿಕಾ ಪ್ರಪಂಚದಲ್ಲಿ ಅವರು ಅಗಾಮಾನ್ಯ ಕೀರ್ತಿಗಳಿಸಿದ್ದಾರೆ. ಅವರ "ಸ್ವದೇಶ ಮಿತ್ರನ್" ತಮಿಳುನಾಡು ಪ್ರಾಂತ್ಯದಲ್ಲಿ ಜನಮಾನ್ಯ ಪತ್ರಿಕೆಯಾಗಿದೆ. ಅವರ ಅಪಾರ ಅನುಭವ ಮತ್ತು ಅಸದೃಶ ಜಾಣ್ಮೆಯು ನಮ್ಮ ಇಂದಿನ ಈ ಮಹತ್ವದ ವಿಚಾರ ವಿನಿಮಯಗಳಿಗೆ ತುಂಬಾ ಸಹಾಯವಾದೀತು, ನಮ್ಮ ನಿರ್ಧಾರಗಳಿಗೆ ರೂಪುಗೊಡಲು ಅದು ನೆರವಾದೀತು ಎಂಬ ಪೂರ್ಣ ಭರವಸೆ ನಮಗಿದೆ. ಇಂದಿನ ಈ ಪರಿಷತ್ತಿಗೆ ಅಧ್ಯಕ್ಷರಾಗಲು ಸಮ್ಮತಿಸಿದುದಕ್ಕೆ, ಅಧ್ಯಕ್ಷರೇ, ನಿಮಗೆ ನಾವು ತುಂಬಾ ಆಭಾರಿಗಳಾಗಿದ್ದೇವೆ

ಪತ್ರಿಕಾಪ್ರದರ್ಶನದ ಉದ್ಘಾಟನೆ ನಡೆಸಲು ನಾವು ವಿನಂತಿಸಿದುದಕ್ಕೆ ಶ್ರೀ ಪಿ. ಆರ್. ರಾಮಯ್ಯನವರು ಆ ಕೂಡಲೇ ಸಮ್ಮತಿಸಿದ್ದುದು ಅಭಿನಂದನೀಯ. ಪ್ರಸಿದ್ಧ ಕನ್ನಡ ಕವಿ, ವಿಮರ್ಶಕ ಮತ್ತು ಪ್ರಬಂಧಗಾರರೂ 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ಸಂಪಾದಕರೂ ಆಗಿರುವ ಶ್ರೀ ವಿ ಸೀತಾರಾಮಯ್ಯನವರು ಪತ್ರಿಕಾ ವ್ಯವಸಾಯ ಮತ್ತು ತಜ್ಞಶಾಸ್ತ್ರಕ್ಕೆ ಸಂಬಂಧವಾದ ವಾದವಿವಾದಗಳನ್ನು ನಡೆಸಲು ಹಾಗು ದಿಗ್ದರ್ಶಿಸಲು ಸಂತೋಷದಿಂದ ಒಪ್ಪಿಕೊಂಡಿದ್ದಾರೆ. ಮೈಸೂರು ಸಂಸ್ಥಾನದ ಸಾಹಿತ್ಯ ಸಮಿತಿಯ ಕಾರ್ಯದರ್ಶಿ ಶ್ರೀ ವಿ. ಎಸ್. ಶ್ರೀನಿವಾಸ ರಾವ್‌ರವರು ಕನ್ನಡ ಲಿಪಿ ಶೀಘ್ರ ಸುಧಾರಣೆಯ ಕುರಿತಾದ ವಾದವಿವಾದಗಳನ್ನು ನಡೆಸಲು ಸಮ್ಮತಿಸಿದ್ದಾರೆ ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು ಸಲ್ಲಬೇಕು. ಈ ಸಂದರ್ಭದಲ್ಲಿ ವ್ಯವಸ್ಥೆಗೊಳಿಸಿದ ಪತ್ರಿಕಾಪ್ರದರ್ಶನಕ್ಕೆ ಹಳೆಯ ಮಾಸಪತ್ರಿಕೆಗಳ ಮತ್ತು ವೃತ್ತಪತ್ರಿಕೆಗಳ ಸಂಗ್ರಹ ಕಳಿಸಿಕೊಟ್ಟವರಿಗೂ ನಾವು ಚಿರಋಣಿಗಳಾಗಿದ್ದೇವೆ. ನಿಮ್ಮೆಲ್ಲರನ್ನೂ ಇಲ್ಲಿ ಎರಡು ದಿನಗಳ ತನಕ ಕೂಡಿಸಲು ನೆರವಾದ, ಈ ಸಮಾರಂಭವನ್ನು ವ್ಯವಸ್ಥೆಗೊಳಿಸಲು ಉತ್ಸಾಹದಿಂದ ಮತ್ತು ಶಾಶ್ವತೆಯಿಂದ ಕಾರ್ಯಪ್ರವೃತ್ತರಾದ ಎಲ್ಲಾ ಮಂದಿಗೆ ಸ್ವಾಗತ ಸಮಿತಿಯು ಕೃತಜ್ಞತೆಗಳನ್ನರ್ಪಿಸುತ್ತದೆ. ಸ್ವಯಂಸೇವಕರು ನಮ್ಮಿಂದ ಕೃತಜ್ಞತೆಗಳನ್ನಪೇಕ್ಷಿಸುವುದಿಲ್ಲವಾದರೂ, ಈ ಸಮಾರಂಭದಲ್ಲಿ ಅವರು ತೋರಿಸಿದ ವಿಚಕ್ಷಣ ರೀತಿಯ ಕಾರ್ಯತತ್ಪರತೆಗಾಗಿ ಅವರಿಗೆ ನಮ್ಮ ಅಭಿನಂದನೆಗಳು ಅವಶ್ಯ ಸಲ್ಲಬೇಕು.

ಕೊನೆಯದಾಗಿ ಇಂದಿನ ಈ ಸಮಾರಂಭವನ್ನು ನೆರವೇರಿಸಲು ಸ್ಥಳ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಟ್ಟ ಕೆನರಾ ಹೈಸ್ಕೂಲಿನ ಅಧಿಕಾರಿಗಳಿಗೆ ನಮ್ಮ ಧನ್ಯವಾದಗಳು. ಕರ್ನಾಟಕದ ವಿವಿಧ ಭಾಗಗಳಿಂದ ಪರಿಷತ್ತಿನ ಪ್ರತಿನಿಧಿಗಳಾಗಿ ಇಲ್ಲಿಗೆ ಚಿತ್ತೈಸಿದ ನಿಮಗೆಲ್ಲರಿಗೂ ಹೃತ್ಪೂರ್ವಕ ಸ್ವಾಗತ ಬಯಸುವೆ. ನೀವಿಲ್ಲಿ ಕಳೆಯಲಿರುವ ಎರಡು ದಿನಗಳಲ್ಲಿ ನಿಮಗೆ ಅನುಕೂಲವಾದ ಸೌಕರ್ಯಗಳು ಒದಗಿ ಸುಖವಾಗುವುದೆಂದೂ, ಹಿಂತಿರುಗುವಾಗ ನೀವು ಮಂಗಳೂರಿನ ಚಿರಸ್ಮೃತಿಯನ್ನು ನಿಮ್ಮೊಡನೆ ಕೊಂಡೊಯ್ಯುವಿರೆಂದೂ, ಇಲ್ಲಿ ಉಂಟಾದ ಸಂಪರ್ಕ ದೂರದ ಎಲ್ಲಾ ಸಹೋದ್ಯೋಗಿಗಳೊಡನೆ ಶಾಶ್ವತ ಮೈತ್ರಿಯನ್ನು ನೆಲಸಲು ನೆರವಾಗುವುದೆಂದೂ ನಾನು ಭರವಸೆಪಡುತ್ತೇನೆ ಪತ್ರಿಕೋದ್ಯೋಗಿ ಸಹೋದರರೇ, ಮಿತ್ರರೇ, ಕೊನೆಯದಾಗಿ ಈ ಪರಿಷತ್ತು ಒಂದು ಶಾಶ್ವತ ಸ್ವರೂಪವಾಗಿ ಉಳಿದು, ಪ್ರತಿವರ್ಷವೂ ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಕೂಡಿ, ಈ ಉದ್ಯೋಗದಲ್ಲಿ ದುಡಿಯುವವರಿಗೆ, ಪತ್ರಿಕೆಗಳಿಗೆ ಮತ್ತು ಸಾರ್ವಜನಿಕರಿಗೆ ಪ್ರಯೋಜನಕಾರಿಯಾಗುವ ಜೀವನ ನಡೆಸಿ ತನ್ನ ಅಸ್ತಿತ್ವವನ್ನು ಸಿದ್ಧಾಂತಪಡಿಸುವಂತಾಗಲೆಂಬ ಹುರಿದಾಸೆಯಿಂದ ನನ್ನೀ ಭಾಷಣವನ್ನು ಕೊನೆಗೊಳಿಸುವೆ

ಈ ವರೆಗೆ ಶಾಂತಚಿತ್ತದಿಂದ ನನ್ನ ಭಾಷಣ ಕೇಳಿದುದಕ್ಕೆ ನಿಮಗೆಲ್ಲಾ ಮತ್ತೊಮ್ಮೆ ನನ್ನ ಧನ್ಯವಾದಗಳು

ಕವಿ! ನಿನಗೆ.....!

[ಶ್ರೀ ಆ. ವಿ. ಪಾಳಿಗಾ]

೧

ಗುಲಾಬಿಯ ಮೃದುತಲ್ಪದ ನೇಲಿಂದೆ
ನೇರಲ ಛಾಯೆ ಮಂದಗತಿಯಲಿ ಸಾಗುವುದನು
ನೀ ಹಾಡಿದುದ ನಾ ಕೇಳಿರುವೆ ಕವಿ!
ಹಸಿದ ಅನಾಥ ಪೆಣ್ಮಾಡಿಯೋರ್ವಳ್ ಒಪ್ಪೊತ್ತುಣಲು,
ನಿಜದೇಹ ವಿಕ್ರಯಿಸುವ ಕರುಣ ಕಥೆ ನೀ
ಎಂದಾದರೂ ಹಾಡಿದುದುಂಟೇ?

೨

ಮಾಯೆಯ ಜಗದಿಂ ದೂರಸರಿದು
ನೀ ಎಣಿಸಿದ ಆ ಏಕಾಂತದಲಿ ಕುಳಿತು
ಪಡುವಣ ಕಡಲಲಿ ರವಿಬಿಂಬ ಕಂತುವುದ ನೀ ಬಣ್ಣಿಸಿರುವೆ!
ಸವಿಗನಸುಗಳ ನಿದ್ರೆಯಂ ಬಿಟ್ಟು, ಬಳಲಿದ
ದೇಹಕ್ಕೆ ದೊರಿವ ಆ ವಿರಾಮ ತೊರೆದ
ಕೆಂಗಣ್ಣುಗಳ ಕೆಂಪನು ನೀ ಚಿತ್ರಿಸಿದುದುಂಟೇ?

೩

ಕವಿ, ನೀ ಮರುಳ! ಆರೆ ಹುಚ್ಚ!! ಉನ್ಮಾದ!!!
ನಡು ಇರುಳ ಸ್ವರ್ಗಗಳ, ತಾರೆಗಳ, ಚಂದಿರನ
ಅಂದ ಬಣ್ಣಿಪುದನು ಮಾತ್ರ ನೀ ಅರಿತಿರುವೆ!
ಹಸಿದವಗೆ ತಾರೆಗಳು ಬಿಳಿ ರುಷ್ಟಿಕೆ ಸಮಾನ;
ದಣಿದವಗೆ ಚಂದಿರನ ಚೆಲುವು ಸೋರುವ
ಹುಣ್ಣಿನಂತಿಹುದು, ನೀ ಬಲ್ಲೆಯಾ ಕವಿ ಇದನು?

೪

ಜಗದ ಸಾಸಿರ ಮಂದಿ ಜಠರಾಗ್ನಿಯಲಿ ಬೇಯುತಿಹರ್;
ದಶಸಾವಿರ ಮಂದಿ ನಿರಾಶೆಯ ಕಡಲೊಳ್
ಮುಳುಗೇಳುತಿಹರ್
ನೀ ದೂರ ಕುಳಿತು ಜಗದ ಸೊಬಗ ಹಾಡುತಿಹೆ!
ಸ್ವರ್ಣಗಿರಿಗಳ, ರಜತವಾಹಿನಿಗಳ ಚಂದ ಬಣ್ಣಿಪೆ!
ಏನು ಫೈರ್ಯವೋ ಕವಿ ನಿನಗೆ? ನಾಚಿಕೆಯಾಗದೇ?

೫

ನುಡಿ ಕಲಿಸಿದ ಗಣಿಯಂತೆ ಕುಳಿತು ದೇವನ ನುತಿಪೆ;
ಮ್ಮೊಪ್ಪೊತ್ತು ನಿನಗೆ ಸಿಗುವ ಸೊಗದೂಟ
ನಿನ್ನ ಸ್ಫೂರ್ತಿಯ ತಾಯಿ
ಕವಿ! ಕೇಳೀ ಮಾತ—ಎಂದಿಗೂ ಮರೆಯದಿರದನು!
ಹ'ದ ಶಿಶುಗಳ ಮುಂದೆ ನೀನು—
ನಿನ್ನಯ ಆ ದೇವ ಸಹಿತ ನಶಿಸುವೆ ಆವಿಯಂದದಿ

[ಅಧಾರದಿಂದ]

"ಪಂಡಿತಗೆ"

[ಶ್ರೀ ಯಮ್. ಸುಬ್ರಾಯನ್]

೧

ಹಲವಾರು ಗುಟಕೆಗಳ ನೀನರೆದು ಮಾಡುತಿರು
ನಲವಿರದೆ ಕಾಣುತಿದೆ; ಕೇಳಾಯ್ತು ಬಾಳ. ।
ಒಲಿದೊನ್ಮೆ ತನುನೀಡಿ ನಿಲ್ಲುವೊಡೆ ಅಧಿಕಾರ
ಬಲವಿಲ್ಲ ವಾಕ್‌ಶಕ್ತಿಯಿನಿತಿಲ್ಲ ಹೇಳೆ ॥

೨

ಉಣಿಸಿಂಗೆ ನಿಟ್ಟಿಯಿದೆ ಹೊಟ್ಟಿಗೀ ಗತಿ ಬಂತು
ಜಡಜೀವ ಬಾಳುವೆಯ ಮರೆಸಲಿಹ ಮದ್ದ ।
ಕೊಡುಬೇಗ ರುಜೆಯಡಸಿ ಬಾಳುವೆಯ ಗತಿ ಚಿಂತೆ
ಗಡಸುತ್ತೆ ಚಿತೆ ನೆಲೆಯ ನೊಂದಿಪೆಯೊ ಮುಂದು ॥

೩

ಜೀವಿತದ ಸಂಕಟವನೊರಸಲ್ಕೆ ನೋಡದಿರಿ
ಜಾತಿಮತ ಧರ್ಮಗಳ ಕೇಳುತಿಹೆ ಮದ್ದ ।
ದೇವರಿಗೆ ನಾಮವನು ಬೇರಿಟ್ಟು ಪೂಜಿಪರು
ಏವರುಂ ಮಾನುಷರೆ ಕಂಡಿಲ್ಲ ಭೇದ ॥

೪

ರುಜೆಯಿಂದೆ ತುಂಬಿರಲು ಅವನಿವಂಯೆಂದೆನುವ
ತಿಳಿವಿರದ ಜೀವಿತದ ಹಾನಿಗಿಹ ಸುದ್ದಿ— ।
ಯದನೆತ್ತಿ ಹಾಡುವುದು ಯಿನ್ನೇಕೆ? ಜೀವಿಸುವ
ಬದುಕಲ್ಕೆ ಹುಡುಕುವುದು ಬೇಕಿರುವ ಮದ್ದ ॥

೫

ಬದುಕಲ್ಲಿ ಬಂದಿರುವರುಜೆಯೊರೆದೆ ಮದ್ದರೆದು
ಗುಣಪಡಿಸು ರೋಗವನು ಇದು ನಿನ್ನ ಕಜ್ಜ ।
ಬದಿಬರೆಪದಾ ಸುದ್ದಿ ಕೇಳದಿರು ನಿನ್ನಿಂದೆ
ವಿಧಿಯಾಟ ನಡೆಯುತಿದೆ ಮಾಡುತಿರು ಕಜ್ಜ ॥

೬

ಧರಣಿಯಲಿ ತುಂಬಿರುವ ರೋಗವಿದು ನಮ್ಮವ್ವೆ
ಕೊರಗುವಳು ನೂರಾರು ಯತ್ನವನು ಮಾಡು ।
ಪರಸೇನೆಯಾಶ್ರಯದ ಬದುಕಲ್ಲಿ ಹೊಂದುವೀ
ಕರುಷದಲಿ ಸೊಗವಿಲ್ಲ ಮದ್ದರೆಯೆ ಹೊರಡು ॥

Shop de-luxe of the City——Shop which satisfies you in every respect

SRI KRISHNA NOVELTY HOUSE

MARKET ROAD — — — — MANGALORE

Presentation Articles our speciality
Perfumery, Toiletey, Cullery
All these speak for us.

We also deal in Glassware, Chinaware,
Lampware, confechionery etc.
Everything Good in quality.

ಮದುವೆ ಮುಂಜಿಗಳ ಕಾಲದಲ್ಲಿ ಉಡುಗೊರೆಯ ನೆನಪಾದಾಗ ಈ ಹೆಸರೂ ನೆನಪಿರಲಿ!

ಶ್ರೀ ಕೃಷ್ಣ ನೊವೆಲ್ಟಿ ಹೌಸ್,
ಮಾರ್ಕೆಟ್ ರಸ್ತೆ,
ಮಂಗಳೂರು, ದ. ಕ.

ನಮ್ಮ ಜಿಲ್ಲೆಯ ಪತ್ರಿಕೆಗಳು

ನಮ್ಮ ಜಿಲ್ಲೆಯ ಪತ್ರಿಕಾ ಇತಿಹಾಸ ಬರೆಯುವವರಿಗೆ ಈ ಲೇಖನದಲ್ಲಿ ಬರುವ ವಿಷಯಗಳು ಬಹುಮಟ್ಟಿಗೆ ಸಹಕಾರಿಗಳಾಗುವವೆಂದು ಧೈರ್ಯವಾಗಿ ಹೇಳಬಹುದು.

●..... ಹುಟ್ಟಿವೆ ಹಲವು, ಉಳಿದಿವೆ ಕೆಲವು—ಎಡರುತೊಡರುಗಳನ್ನು ಹಾಯ್ದು ಮುಂದುವರಿಯುತ್ತಿವೆ ಒಂದಿಷ್ಟು—ಇಷ್ಟಾದರೂ ಪತ್ರಿಕಾವ್ಯವಸಾಯದಲ್ಲಿ ದೀವಿಗೆಗಳನ್ನು ಬೆಳಗಿಸಿದೆ ನಮ್ಮ ಜಿಲ್ಲೆ ಎಂಬ ಮಾತು ಅತಿಶಯೋಕ್ತಿಯಾಗಲಾರದು. .....●

ಸಂಗ್ರಾಹಕರು
ಬಿ. ಶಂಕರ ಭಟ್,
ವಿದ್ವಾನ್,
ಸೇಂಟ್ ಆಗ್ನೇಸ್ ಕಾಲೇಜ್,
ಮಂಗಳೂರು

ದಕ್ಷಿಣ ಕನ್ನಡದ, ಅಲ್ಲ ಕರ್ನಾಟಕದ ವೃತ್ತಪತ್ರಿಕೆಯ ಇತಿಹಾಸದಲ್ಲಿ ಒಂದು ಶತಮಾನ ಕಳೆದ ೧೯೪೩ಕ್ಕೆ ಕಳೆದು, ಎರಡನೆಯ ಶತಮಾನ ೧೯೪೩ರಿಂದ ಪ್ರಾರಂಭವಾಯಿತು. ಕನ್ನಡದಲ್ಲಿ ಮೊದಲ ಪತ್ರಿಕೆಯನ್ನು ಪ್ರಾರಂಭಿಸಿದವರು ಮಂಗಳೂರಿನ ಜರ್ಮನ್ ಮಿಶನರಿಗಳು. ೧೮೪೩ರಲ್ಲಿ ಕನ್ನಡದ ಮೊದಲನೆಯ ಪತ್ರ **ಕನ್ನಡ ಸಮಾಚಾರ** ಮಾಸಪತ್ರಿಕೆಯ ರೂಪದಲ್ಲಿ ಬೆಳಕನ್ನು ಕಂಡಿತು. ಅಂದಿನಿಂದ ಕಳೆದ ಆ ನೂರು ವರ್ಷಗಳಲ್ಲಿ ಕರ್ನಾಟಕದ ವೃತ್ತಪತ್ರಿಕಾ ವ್ಯವಸಾಯವು ಬೆಳೆದುಬಂದಿದೆ. ನಮ್ಮ ಹಿಂದೆ ಒಂದು ಶತಮಾನದ ಚರಿತ್ರೆ ಬೆಳಗುತ್ತಿದೆ. ಈ ಲೇಖನದಲ್ಲಿ ದ. ಕನ್ನಡದ ಪತ್ರಿಕೆಗಳ ಅಲ್ಪ ಪರಿಚಯವನ್ನು ಕೊಡಲುಗಿದೆ. ಸಮಯ, ಸ್ಥಳಗಳ ಅಭಾವದಿಂದ—ಚರಿತ್ರೆಯ ಸಂಪೂರ್ಣ ಜ್ಞಾನವಿಲ್ಲದುದರಿಂದ ಈ ಪರಿಚಯದಲ್ಲಿ ಕೆಲವು ಕುಂದುಕೊರತೆಗಳು ಉಂಟೆಂಬುದನ್ನು ಚೆನ್ನಾಗಿ ಮನಗಂಡಿದ್ದೇನೆ. ಅದಕ್ಕಾಗಿ ಕನ್ನಡಿಗರೊಡನೆ ಕ್ಷಮೆ ಕೇಳುತ್ತೇನೆ

ಕನ್ನಡ ಸಮಾಚಾರ:—ಪತ್ರವು ಬಾಸೆಲ್ ಮಿಶನ್ ಛಾಪಖಾನೆಯಿಂದ ೧೮೪೩ರಲ್ಲಿ ಮಾಸಪತ್ರದ ರೂಪದಲ್ಲಿ ಪ್ರಕಟವಾಗತೊಡಗಿ, ಕನ್ನಡ ಸುವಾರ್ತಿಕ, ಕರ್ನಾಟಕ ಪತ್ರಿಕೆ, ಬಾಲಪತ್ರವೆಂದು ಹೆಸರು ಬದಲಿಸಿ ಸುಮಾರು ೧೮೮೮ರ ವರೆಗೆ ನಡೆಯಿತು. ಆ ಮೇಲೆ ಕ್ರೈಸ್ತ ಸಭಾಪತ್ರವೆಂದು ಹೆಸರು ಬದಲಾಯಿಸಿ, ಬೇರೆ ಬೇರೆ ಹೆಸರಿನಿಂದ ೧೯೪೦ರ ವರೆಗೆ ನಡೆಯಿತು.

ಕ್ರೈಸ್ತ ಸಭಾಪತ್ರ (ಮಾಸ):—೧೮೮೯ನೆಯ ಇಸವಿ ಜುಲೈ ತಿಂಗಳಲ್ಲಿ ಕ್ರೈಸ್ತ ಸಭಾಪತ್ರವು ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರತಿ ತಿಂಗಳಲ್ಲಿ ಪ್ರಕಟವಾಗುತ್ತ ಸುಮಾರು ೧೯೪೩ನೆಯ ಇಸ್ವಿ ವರೆಗೆ ನಡೆಯಿತು. ಕ್ರೈಸ್ತ ಸಭಾಪತ್ರವು ಬಾಸೆಲ್ ಮಿಶನಿನವರು ಕ್ರೈಸ್ತಧರ್ಮ ಪ್ರಚಾರಕ್ಕಾಗಿ ರಚಿಸಿದ ಮಾಸಪತ್ರಿಕೆ. ಇದರ ಚಂದಾ ರೂ. ೧—೮—೦ ಆಗಿತ್ತು. ಈ ಪತ್ರಿಕೆಗೆ ಜೋನ ಬುನ್ಯನನ ಪಿಲಿಗ್ರಿಮಸ್ ಪ್ರೊಗ್ರೆಸ್‌ನ್ನು ಕನ್ನಡದಲ್ಲಿ ತಿದ್ದಿ ಬರೆದ ಶ್ರೀ ಕ್ರಿಸ್ತಾನುಜ ವಪ್ಪರು ಸಂಪಾದಕರಾಗಿದ್ದರು.

ಸತ್ಯ ದೀಪಿಕೆ:—೧೮೮೮ ಜುಲೈಯಲ್ಲಿ ಸತ್ಯ ದೀಪಿಕೆ ಎಂಬ ಮಾಸಿಕವನ್ನು ಬಾಸೆಲ್ ಮಿಶನಿನವರು ಪ್ರಾರಂಭಿಸಿ ಎರಡು ಮೂರು ವರ್ಷಗಳೊಳಗೆ ವಾರಪತ್ರಿಕೆಯಾಗಿ ಮಾರ್ಪಡಿಸಿ ಪ್ರತಿ ಶುಕ್ರವಾರ ಪ್ರಕಟಿಸುತ್ತಿದ್ದರು. ಪವಿತ್ರವಾದ ಈ ವಾರಪತ್ರಿಕೆಯಲ್ಲಿ ಕ್ರೈಸ್ತ ಗೂ, ಕ್ರೈಸ್ತೇತರಿಗೂ ಉಪಯುಕ್ತವಾದ ಕತೆ, ಸಣ್ಣ ಕತೆಗಳು, ಉತ್ತಮವಾದ ಪ್ರಬಂಧಗಳೂ, ದೇಶವಿದೇಶಗಳ ಸುದ್ದಿಗಳೂ, ಪತ್ರವ್ಯವಹಾರಗಳೂ, ಕವಿತೆಗಳೂ ಪ್ರಕಟವಾಗುತ್ತಿದ್ದುವು. ದಿವಂಗತ ಶ್ರೀ ಸಂಜೆ ಮಂಗೇಶರಾಯರು ಈ ಪತ್ರಿಕೆಯಲ್ಲಿ ತುಂಬಾ ಲೇಖಗಳನ್ನು ಬರೆದಿದ್ದರು. ಶ್ರೀ ಬಿ ಲೂತಿ. ಫ್ರೆಡರಿಕ್ ಜತ್ತನ್ನ ಮೊದಲಾದವರು ಈ ಪತ್ರಿಕೆಯ ಸಂಪಾದಕರಾಗಿದ್ದರು. ಈ ಪತ್ರಿಕೆ ಸುಮಾರು ೧೮ ವರ್ಷಕಾಲ ನಡೆದು, ೧೯೧೪ರ ಮಹಾಯುದ್ಧ ಪ್ರಾರಂಭವಾದಾಗ ನಿಂತುಹೋಯಿತು

ಸುವಾಸಿನಿ (ಮಾಸ):—ಶ್ರೀ ನಂದಳಿಕೆ ಲಕ್ಷ್ಮೀನಾರಣಪ್ಪನವರು ರಾಮಾಶ್ವಮೇಧವನ್ನು ಬರೆದು ಜನತೆಯಲ್ಲಿ ಕನ್ನಡದ ಅಭಿಮಾನ ಹುಟ್ಟಿಸಿದ ಕಾಲದಲ್ಲಿ ಜನರ ವಾಚನಾಭಿರುಚಿಗೆ ಯೋಗ್ಯವಾದ ಪತ್ರಿಕೆಗಳ ಅವಶ್ಯವಿತ್ತು. ಹೀಗಿರಲು ಶ್ರೀ ದಿವಂಗತ ಬೆನಗಲ್ ರಾಮರಾಯರು ಸಂಪಾದಕರಾಗಿಯೂ, ಈಗ ಕಂಠೀರವ ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಬಿ. ವಿಟ್ಠಲರಾಯರು ಪ್ರಕಾಶಕರಾಗಿಯೂ ೧೯೦೦ನೆಯ ಜುಲೈ ೧೭ರಲ್ಲಿ ಸುವಾಸಿನಿ ಪತ್ರಿಕೆಯನ್ನು ಮಂಗಳೂರಿನಿಂದ ಹೊರಡಿಸಿದರು. ಈ ಪತ್ರಿಕೆಯು ಪ್ರಾರಂಭದಲ್ಲಿ ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತ ಬಂತು. ಈ ಪತ್ರಿಕೆಯಲ್ಲಿ ಶ್ರೀ ಬೆನಗಲ್ ರಾಮರಾಯರ 'ಗಸೂಮಾಧವ'ವು ಬೆಳಕನ್ನು ಕಂಡಿತು. ಸಣ್ಣ ಕತೆಗಳಿಗೆ ಜನಕರೂ ಬಾಲಸಾಹಿತ್ಯದ ಉತ್ಪಾದಕರೂ ಆದ ದಿವಂಗತ ಶ್ರೀ ಸಂಜೆ ಮಂಗೇಶರಾಯರ ನೈದಿಲಾ, ದುರ್ಗಾವತಿ, ನನ್ನ ಚಿಕ್ಕತಂಬೆ, ನನ್ನ ಚಿಕ್ಕತಾಯಿ, ನನ್ನ ಹೆಂಡತಿ ಮೊದಲಾದ ಸಣ್ಣ ಕತೆಗಳೂ, ಅನೇಕ ಕವಿತೆಗಳೂ ಸುವಾಸಿನಿಯಲ್ಲಿ ಪ್ರಕಟವಾಗಿವೆ. ಉಳ್ಳಾಲ ಮಂಗೇಶರಾಯರ ಐತಿಹಾಸಿಕ ಲೇಖಗಳೂ ನಂದಳಿಕ ಲಕ್ಷ್ಮೀನಾರಣಪ್ಪ ನವರು ಜಕ್ರಥುರಿ ಎಂಬ ಹೆಸರಿನಿಂದ 'ಜೋಜೋ' ಎಂಬ ಲೇಖನವನ್ನು ಬರೆದದ್ದೂ ಇದೇ ಪತ್ರಿಕೆಯಲ್ಲಿ

ಶ್ರೀ ಎಂ. ಅಣ್ಣಾಜಿರಾವ್, ಬೆಂಗಳೂರು ಶ್ರೀ ಎಸ್ ಎನ್ ನರಹರಯ್ಯ-ಬೆಂಗಳೂರು, ಶ್ರೀ ವ್ಯಾಸರಾವ್ ವೆಂಕಟರಾವ್ ರೊದ್ದ-ಧಾರವಾಡ, ಶ್ರೀ ರಾ. ಕೃ ಇನಾಮತಿ, ಶ್ರೀ ಕೆ. ವಿ ಶಾಸ್ತ್ರಿ—ಕಾರವಾರ ಮೊದಲಾದ ಮೈಸೂರು—ಧಾರವಾಡ—ಕಾರವಾರಗಳ ಮಹನೀಯರೆನೇಕರು ಈ ಪತ್ರಿಕೆಗೆ ಲೇಖನಿಗಳನ್ನು ಬರೆದಿದ್ದಾರೆ. ಈ ಪತ್ರಿಕೆಯು ಶ್ರೀ ಸಂಜೆಯವರ, ಶ್ರೀ ಉಳ್ಳಾಲ ಮಂಗೇಶರಾಯರ, ಶ್ರೀ ಬಿ. ರಾಮರಾಯರ ಮತ್ತು ಶ್ರೀ ನಿಶಲರಾಯರ ಪ್ರಯತ್ನದಿಂದ ಎರಡು ವರ್ಷಕಾಲ ನಡೆಯಿತು. ಶ್ರೀ ಬಿ ವಿಶಲರಾಯರು ಸುವಾಸಿನಿಯನ್ನು ೧೯೩೬—೧೯೩೭ರಲ್ಲಿ ಮತ್ತೊಮ್ಮೆ ಪ್ರಾರಂಭಿಸಿ, ಎರಡು ಮೂರು ವರ್ಷಕಾಲ ನಡೆಸಿದರು.

ಸುದರ್ಶನ (ಮಾಸ):—ಉಡುಪಿ ಹಿಂದೂ ಮುದ್ರಾಲಯದಲ್ಲಿ ಪ್ರಕಟವಾದ ೧೯೮೪ನೆಯ ಫೆಬ್ರವರಿಯ ಒನೆಯ ಅಂಕವನ್ನು ನೋಡುವಾಗ ಈ ಸುದರ್ಶನ ಮಾಸಪತ್ರಿಕೆಯು ೧೯೮೨ರಲ್ಲಿ ಪ್ರಾರಂಭವಾದಂತೆ ತೋರುತ್ತದೆ. ಹೆಮ್ಮೆಯ ಪುಟದ ಪತ್ರಿಕೆಯ ಚಂದಾ ರೂ ೧—೮—೦

ಈ ಪತ್ರಿಕೆಯಲ್ಲಿ ಧಾರ್ಮಿಕ ವಿಷಯಗಳೂ, ಹಾಸ್ಯ, ಕತೆ, ಕವಿತೆಗಳೂ ಬರುತ್ತಿದ್ದುವು. ಶ್ರೀ ದಿವಂಗತ ಅಮ್ಮೆಂಬಳ ಸುಬ್ಬಾಯ ಪೈಗಳವರು ಧಾರ್ಮಿಕ ಲೇಖನಿಗಳನ್ನು ಈ ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಶ್ರೀ ಬೈಲೂರು ರಾಮರಾಯರು ಇದರ ಸಂಪಾದಕರಾಗಿದ್ದರು. ಈ ಪತ್ರಿಕೆಯು ೮, ೯ ವರ್ಷಕಾಲ ಬಾಳಿದಂತೆ ತೋರುತ್ತದೆ. ಇದು ದಕ್ಷಿಣ ಕನ್ನಡದಲ್ಲಿ ಹಿಂದೂ ಜನರು ಹೊರಡಿಸಿದ ಮೊದಲನೆ ಪತ್ರಿಕೆಯಾಗಿರುತ್ತದೆ.

ಕೃಷ್ಣಸೂಕ್ತಿ (ಮಾಸ):—೧೯೧೦ನೆಯ ಇಸವಿಯ ಪ್ರಾರಂಭದಲ್ಲಿ ಶ್ರೀ ಕೆರೋಡಿ ಸುಬ್ಬರಾಯರು. ಕೃಷ್ಣಸೂಕ್ತಿಯನ್ನು ಉಡುಪಿಯಿಂದ ಪ್ರಾರಂಭಿಸಿದರು. ಈ ಪತ್ರಿಕೆ ಸುಮಾರು ಹತ್ತು ವರ್ಷಕಾಲ ನಡೆಯಿತು. ಕೆರೋಡಿ ಸುಬ್ಬರಾಯರು ಪ್ರಾರಂಭಿಸಿದ ಈ ಪತ್ರಿಕೆಗೆ ಶ್ರೀ "ಕಡೆಕಾರು ರಾಜಗೋಪಾಲ ಕೃಷ್ಣರಾಯರು ಸಂಪಾದಕರಾಗಿ ಇದನ್ನು ನಡೆಸಿದರು. ಕೃಷ್ಣಸೂಕ್ತಿಯು ಅಖಿಲ ಕರ್ನಾಟಕದ್ದು ಹೆಸರು ಪಡೆದಿದೆ. ಈ ಪತ್ರಿಕೆಯು ಪ್ರಾರಂಭದಲ್ಲಿ ಉಡುಪಿಯಲ್ಲಿ ಶ್ರೀ ಬೈಲೂರು ರಾಮರಾಯರ ಒಂದು ಪ್ರೆಸ್ಸಿನಲ್ಲಿಯೂ, ಆ ಮೇಲೆ ಧರ್ಮಪ್ರಕಾಶ ಪ್ರೆಸ್ಸಿನಲ್ಲಿಯೂ ಆ ಮೇಲೆ ಪುನಃ ಉಡುಪಿಯಲ್ಲಿ ಸದಾನಂದ ಪ್ರೆಸ್ಸಿನಲ್ಲಿಯೂ ಅಚ್ಚಾಗುತ್ತಿತ್ತು. ಶ್ರೀಗಳಾದ ಹುರುಳಿ ಭೀಮರಾವ್, ವಿ. ಬಿ. ಆಲೂರು, ಮದ್ರಾಸಿನಲ್ಲಿ **ಎಡ್ಯೊಕೇಶನಲ್** ರಾಗಿರ್ದು ಬಂಟ್ವಾಳ ಸೀತಾರಾಮ ರಾವ್, ಯಜ್ಞನಾರಾಯಣ ಅಡಿಗ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮೊದಲಾದವರು ಈ ಪತ್ರಿಕೆಯಲ್ಲಿ ಬರೆದಿದ್ದರು. ದಿವಂಗತರಾದ ತಾತಾಚಾರ್ಯ, ಆರ್. ಶ್ರೀನಿವಾಸರಾವ್, ವೈ. ಕೆ. ರಾಮಚಂದ್ರ ರಾವ್, ಬೆನಗಲ್ ರಾಮರಾವ್, ಹೊಸಕೆರೆ ಚಿದಂಬರಯ್ಯ, ಗುಡಿಬಂಡೆ ಕೇಶವಯ್ಯ ಪರಮಿ ಸದ್ಯನಾಭಯ್ಯ ಮೊದಲಾದವರು ಲೇಖಗಳನ್ನು ಬರೆದಿದ್ದರು.

ಸ್ವದೇಶಾಭಿಮಾನಿ (ವಾರ):—೧೯೦೬ನೆಯ ಜನವರಿ ೧೧ನೆಯ ತಾರೀಕಿಗೆ ಪಕ್ಷಪತ್ರಿಕೆಯಾಗಿ ಹೊರಟ ಸ್ವದೇಶಾಭಿಮಾನಿ ಒಂದು ವರ್ಷದೊಳಗೆ ವಾರಪತ್ರಿಕೆಯಾಗಿ ಮಾರ್ಪಟ್ಟು ಕಳೆದ ಮೂವತ್ತಾರು ವರ್ಷಗಳಿಂದ ಪ್ರತಿ ಶುಕ್ರವಾರವೂ ಪ್ರಕಟವಾಗುತ್ತಿದೆ. ದಿವಂಗತ ವಿ. ಎಸ್. ಕಾಮತರು ಶಾರದಾ ಪ್ರೆಸ್ಸನ್ನು ನಡೆಸುತ್ತಾ, ಪತ್ರಿಕೆಯ ಸಂಪಾದಕರಾಗಿ ಕೆಲವು ವರ್ಷಕಾಲ ಇದನ್ನು ನಡೆಸಿದರು. ಶ್ರೀ ಓಪ್ಪನೆ ಆತ್ಮಾರಾಮ ಶಾಸ್ತ್ರಿ ಮತ್ತು ಶ್ರೀ ವಿ ಎಸ್ ಕುಡ್ಪರು ಪತ್ರಿಕೆಯ ಸಂಪಾದಕರಾಗಿ ಕೆಲಸಮಾಡಿದ್ದಾರೆ. ಈಗ ದಿವಂಗತ ಕಾಮತರ ಪುತ್ರ ಅಚ್ಯುತ ಕಾಮತರು ಸಂಪಾದಕರಾಗಿರುವರು. ಶ್ರೀ ಕೆ ಕೆ ರೈಗಳು ಸಂಪಾದಕವರ್ಗ ದಲ್ಲಿರುವರು. ದಿವಂಗತರಾದ ಪಂಜೆಯವರೂ, ಉಳ್ಳಾಲ ಮಂಗೇಶರಾಯರೂ, ಬೆನಗಲ್ ರಾಮರಾಯರೂ, ಕುದ್ಮುಲ್ ರಂಗರಾಯರೂ ಈ ಪತ್ರಿಕೆಗೆ ಲೇಖನಿಗಳನ್ನು ಬರೆದಿದ್ದರು. ಶ್ರೀ ಗೋವಿಂದ ಪೈ, ಶ್ರೀ ಮೂಲ್ಕಿ ನರಸಿಂಗರಾವ್, ನಿವೃತ್ತ ಸೆಶನ್ಸ್ ಜಡ್ಜ್, ಶ್ರೀ ಎಂ ವಿ ಸುಭಟ, ಎಂ ಎ., ಎಲ್ ಟಿ, ಶ್ರೀ ಜಿ. ಆರ್. ಶೆಣೈ. ಎಂ ಎ, ಎಲ್ ಟಿ, ಶ್ರೀ ಕಾರಂತರು, ಶ್ರೀ ಕುಡ್ಪಿ ವಾಸುದೇವ ಶೆಣೈ, ದಿವಂಗತ ಎಂ ಎನ್ ಕಾಸುಶೆ ಮೊದಲಾದವರು ಲೇಖನಿಗಳನ್ನು ಕೊಟ್ಟಿರುತ್ತಾರೆ.

ವೈದಿಕ ಮಿತ್ರ (ಮಾಸ)—೧೯೧೧ರಲ್ಲಿ ಪ್ರಾರಂಭವಾದ ಮಾಸ ಪತ್ರಿಕೆ—ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಅಚ್ಚಾಗಿ ಬಾಸೆಲ್ ಮಿಶನಿನವರಿಂದ ಪ್ರಕಟವಾಗು

ತ್ತಿತ್ತು ಈ ಪತ್ರಿಕೆಯು ಕೈಸ್ತ ಮಿಶನರಿಗಳಿಗೆ ಉಪಯುಕ್ತವಾದ ಪತ್ರಿಕೆಯಾಗಿತ್ತು

ಜೈನಬಂಧು (ಮಾಸ): ಜೈನಧರ್ಮ ಪ್ರಸಾರಣೆಗಾಗಿ ಶ್ರೀಗಳಾದ ಸೂರಾಲ ಅರಸುನ ನಾಭರಾಜಯ್ಯನವರು ಮೆನೆಜರರಾಗಿ ಶಾರದಾ ಛಾಪಖಾನೆಯಲ್ಲಿ ಜಚ್ಚಾಗುತ್ತಿತ್ತು ಡೆಮ್ಮಿ ಅರ ೧೬ ಪುಟಗಳು—ಚಂದಾ ೧—೮—೦ ೧೯೧೩ನೇ ಜನವರಿಯಲ್ಲಿ ಮಂಗಳೂರಿನಿಂದ ಹೊರಟ ಜೈನಬಂಧುವು ಎರಡು ವರ್ಷಕಾಲ ಬಾಳಿದಂತೆ ತೋರುತ್ತದೆ. ಈ ಪತ್ರಿಕೆಯಲ್ಲಿ ಜೈನಧರ್ಮ ವಿಷಯಕವಾದ ಲೇಖಗಳೂ, ಜೈನಸಮಾಜ ಸುಧಾರಣಾ ವಿಷಯಕವಾದ ಲೇಖನಗಳೂ, ಜೈನರಿಗೆ ಸಂಬಂಧಿಸಿದ ಸಾಮಾನ್ಯ ವರ್ತಮಾನಗಳೂ ಪ್ರಕಟವಾಗುತ್ತಿದ್ದುವು ಶ್ರೀ ದಿವಂಗತ ತಾತಾಚಾರ್ಯ, ಎಂ ಎ. ಎಲ್. ಟಿ ,ಯವರು ಬರೆದ 'ತೃನೃಷ್ಟಾದಿ ಚರಿತ್ರ' ಎಂಬ (ತಮಿಳಿನಿಂದ ಭಾಷಾಂತರಿಸಿದ) ಲೇಖನವೊಂದು ಇದರಲ್ಲಿ ಪ್ರಕಟವಾಗಿದೆ

ಬೋಧಿನಿ (ಮಾಸ).—ಶ್ರೀ ಎಂ ಎನ್. ಕಾಮತರು ಸಂಪಾದಕರಾಗಿಯೂ, ಶ್ರೀ ಪ್ರಭಾಕರ ಮುದ್ರಾಯಂತ್ರದ ಪ್ಲೂಲಕರಾದ ಪಿ. ಎನ್. ಪ್ರಭುಗಳು ಪ್ರಕಾಶಕರಾಗಿಯೂ ೧೯೩೩ನೆಯ ಜುಲೈಯಲ್ಲಿ ಪ್ರಾರಂಭವಾದ ಈ ಪತ್ರಿಕೆಯು ಕ್ರೌನ್ ಅರ ೩೨ ಪುಟಗಳಿಂದ ಕೂಡಿ ಪ್ರತಿ ಮಾಸದಲ್ಲಿಯೂ ಉಡುಪಿಯಲ್ಲಿ ಪ್ರಕಟವಾಗುತ್ತಿದ್ದು, ಎರಡು ವರ್ಷಕಾಲ ನಡೆಯಿತು. ವಿದ್ಯೆ, ಸರಸ್ವತಿ ಸಹಾಯ, ಸ್ತ್ರೀಧರ್ಮ ಮೊದಲಾದ ವಿಷಯಗಳಿಗೆ ವಿಶೇಷವಾಗಿಟ್ಟು ಈ ಪತ್ರಿಕೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಲೆಕ್ಕ, ಓದುಬರೆಹ, ಕತೆ, ಪದ್ಯಪಾಠ ಮೊದಲಾದುವನ್ನು ಹೇಗೆ ಕಲಿಸಬೇಕೆಂಬುದರ ವಿಷಯವಾಗಿ ಶ್ರೀಗಳಾದ ಉಳ್ಳಾಲ ಮಂಗೇಶರಾವ್, ಎಂ. ಎನ್. ಕಾಮತ್, ಆರ್. ತಾತಾಚಾರ್ಯ, ಕೋಟಿಕಾರ್ ಟಿ. ಬಾಬು, ಬಿ. ಎ., ಎಲ್. ಟಿ., ಮೊದಲಾದವರು ಹಲವು ಲೇಖಗಳನ್ನು ಬರೆದಿರುವರಲ್ಲದೆ, ಜಿಲ್ಲೆಯ ಹೊರಗಿನವರಾದ ಕೆ. ರಾಮಸ್ವಾಮಯ್ಯಂಗಾರ್, ರಾಮಮೂರ್ತಿ ಸ್ವಾಮಿ ಪೂನಾ, ಭೀಮಾಜಿ ಹುಲಿ ಕವಿ ಮೊದಲಾದವರು ಲೇಖಗಳನ್ನು ಬರೆಯುತ್ತಿದ್ದರು ಎಂ. ಎನ್. ಕಾಮತರು ಮಕ್ಕಳಿಗೆ ಬೇಕಾಗಿ ಹಲವು ಕವಿತೆಗಳನ್ನೂ ಕತೆಗಳನ್ನೂ ಇದರಲ್ಲಿ ಪ್ರಕಟಿಸಿರುವರು.

ಆನಂದ (ಪಕ್ಷ): ದಿವಂಗತ ಎಂ ಎನ್. ಕಾಮತರು ಬಂಟವಾಳದಲ್ಲಿ ಉಪಾಧ್ಯಾಯರಾಗಿರುವಾಗ ೧೯೧೬ನೆಯ ಏಪ್ರಿಲ್ ತಿಂಗಳಲ್ಲಿ ಆನಂದವನ್ನು ಪಕ್ಷ ಪತ್ರಿಕೆಯಾಗಿ ಹೊರಡಿಸಿದರು. ಇದರಲ್ಲಿ ಶ್ರೀ ಕಾಮತರ ಕತೆ, ಕವಿತೆ, ನಾಟಕಗಳೂ, ಸಾಹಿತ್ಯಕ್ಕೆ ಸಂಬಂಧಿಸಿದ ಇತರ ಲೇಖನಗಳೂ ಬರುತ್ತಿದ್ದುವು. ಬಂಟವಾಳ ವಿಕ್ಟೋರಿಯಾ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದ ಈ ಪತ್ರಿಕೆ ಸುಮಾರು ೨ ವರ್ಷಕ್ಕಿಂತ ಹೆಚ್ಚು ಬಾಳಿದಂತೆ ತೋರುವುದಿಲ್ಲ.

ಕನ್ನಡ ಕೋಗಿಲೆ (ಮಾಸ): ಶ್ರೀ ಮುಳಿಯ ತಿಮ್ಮಪ್ಪಯ್ಯನವರು ೧೯೧೬ನೆಯ ಏಪ್ರಿಲಿನಲ್ಲಿ ಕನ್ನಡ ಕೋಗಿಲೆಯನ್ನು ಮಂಗಳೂರಿನಿಂದ ಮಾಸಪತ್ರದ ರೂಪದಲ್ಲಿ ಹೊರಡಿಸಿದರು. ಡೆಮ್ಮಿ ಅರ ೩೨ ಪುಟಗಳಿಂದ ಕೂಡಿ, ಶಾರದಾ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಈ ಪತ್ರಿಕೆಯ ಚಂದಾ ರೂ ೩—೦—೦. ಪಿ ಭೋಜರಾವ್ ಇವರು ಉಪಸಂಪಾದಕರು. ಜಿಲ್ಲೆಯೊಳಗಿನ ಕನ್ನಡ ಭಾಷೆಯ ದುರ್ದಶೆಯನ್ನು ಕಂಡು ಅವರ ನಿವಾರಣೆಗಾಗಿ ಹೊರಟ ಈ ಪತ್ರಿಕೆಯು ೪॥ ವರ್ಷಕಾಲ ನಡೆದು, ವಿಶ್ರಾಂತಿಗೊಂಡಿತು ಈ ಪತ್ರಿಕೆಯಲ್ಲಿ ಕರ್ನಾಟಕ ಕೇಸರಿಯ ಸಂಪಾದಕರಾಗಿದ್ದ ಶ್ರೀ ಮಂಜೇಶ್ವರ ಅನಂತರಾಯರ ಯುಗಾದಿ ಮೊದಲಾದ ಕವಿತೆಗಳೂ, ಶ್ರೀ ಉಗ್ರಾಣ ಮಂಗೇಶರಾಯರ, ಶ್ರೀ ಮುಳಿಯ ಶಂಕರ ಭಟ್ಟರ ಕವಿತೆಗಳೂ ಪ್ರಕಟವಾಗಿವೆ ಬರೇ ಸಾಹಿತ್ಯವಿಷಯವನ್ನು ಮಾತ್ರ ಕೊಡದೆ ಧಾರ್ಮಿಕ, ಆಧಿಕ, ಸಾಮಾಜಿಕ ವಿಷಯಗಳನ್ನೂ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಭಕ್ತಿಸಂದೇಶ (ಮಾಸ). ೧೯೧೮ನೆಯ ಜುಲೈಯಲ್ಲಿ ಶ್ರೀ ಡಿ. ಕೆ. ಭಾರದ್ವಾಜರ ಸಂಪಾದಕತ್ವದಲ್ಲಿ ಶಾರದಾ ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರಕಟವಾಗತೊಡಗಿದ ಮಾಸಪತ್ರಿಕೆ—ಮೂರು ವರ್ಷಕಾಲ ಬಾಳಿದಂತೆ ತೋರುತ್ತದೆ. ಈ ಪತ್ರಿಕೆಯಲ್ಲಿ ಭಕ್ತಿಗೆ ಸಂಬಂಧಿಸಿದ ಹಲವು ಲೇಖಗಳು ಬರುತ್ತಿದ್ದುವು. ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ ಮೊದಲಾದವರ ಉಪದೇಶಗಳು ಈ ಪತ್ರಿಕೆಯಲ್ಲಿ ಸುಲಭ ಶೈಲಿಯಲ್ಲಿ ಪ್ರಕಟವಾಗುತ್ತಿದ್ದುವು.

ಸಹಕಾರಿ (ಮಾಸ): ೧೯೧೯ನೆಯ ಏಪ್ರಿಲಿನಲ್ಲಿ ಕನ್ನಡ ಸಹಕಾರಿಯನ್ನು ಪುತ್ತೂರಿನಲ್ಲಿ ಸದಾನಂದ ಸಹಕಾರ ಪ್ರೆಸ್ಸಿನಲ್ಲಿ ಅಚ್ಚಾಹಾಕಿ ಪ್ರಕಟಿಸತೊಡಗಿದರು. ಸಹಕಾರಿ ಪತ್ರಿಕೆಗೆ ಪ್ರಾರಂಭದಲ್ಲಿ ಶ್ರೀ ಮೊಳಹಳ್ಳಿ ಶಿವರಾಯರೂ, ಶ್ರೀ ರಾವ್ ಸಾಹೇಬ್ ಮಂಜೇಶ್ವರ ಅನಂತರಾವ್, ಬಿ. ಎ., ಬಿ. ಎಲ್.,ರವರೂ ಸಂಪಾದಕರಾಗಿದ್ದರು. ಕೆಲವು ವರ್ಷಗಳ ನಂತರ ಪ್ರೆಸ್ಸನ್ನೂ ಪತ್ರಿಕೆಯನ್ನೂ ಮಂಗಳೂರಿಗೆ ತಂದರು ಮಂಗಳೂರಿಗೆ ಪತ್ರ ಬಂದನಂತರ ಉಳ್ಳಾಲ ಮಂಗೇಶರಾಯರು ಸಂಪಾದಕರಾದರು. ಜಿಲ್ಲೆಯ ಸಹಕಾರ ಚಳವಳಿಯನ್ನು ಮುಂದುವರಿಸಲಿಕ್ಕಾಗಿ ಹೊರಟ ಪತ್ರಿಕೆ. ಇದರಲ್ಲಿ ಸಹಕಾರಕ್ಕೆ ಸಂಬಂಧಿಸಿದ ಕತೆ, ಕವಿತೆ, ಪ್ರಬಂಧಗಳೂ, ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಲೇಖಗಳೂ ಪ್ರಕಟವಾಗುತ್ತಿದ್ದುವು. ಈಗ ಈ ಪತ್ರಿಕೆಯನ್ನು ಕೆಲವು ವರ್ಷಗಳಿಂದ ಶ್ರೀ ಹಿರಿಯಡ್ಕ ರಾಮರಾಯ ಮಲ್ಯರ ಸಂಪಾದಕತ್ವದಲ್ಲಿ ಶ್ರೀ ಉಡುಪಿ ಗೋವಿಂದರಾಯರು ಜಿಲ್ಲಾ ಎಡ್ವಾನ್ಸ್ ಮೆಂಟ್ ಎಸೋಸಿಯೇಶನ್ನಿನ ಪರವಾಗಿ ಪ್ರಕಟಿಸುತ್ತಿರುವರು ದಿವಂಗತ ಸಂಜೀ ಮಂಗೇಶರಾವ್, ಎಂ. ಎನ್ ಕಾಮತ್ ಮೊದಲಾದವರು ಲೇಖಗಳನ್ನು ಬರೆಯುತ್ತಿದ್ದರು. ಈಗ ಎಂ. ಎನ್ ಮಾಧವರಾವ್, ಶ್ರೀ ಇದಿನಬ್ಬ ಇವರು ಲೇಖನಗಳನ್ನು ಬರೆಯುತ್ತಿರುವರು

ಕಂಠೀರವ (ದ್ವೈವಾರ) ೧೯೧೯ನೆಯ ಏಪ್ರಿಲ್ ಒಂದನಯ ತಾರೀಕಿನ ದಿನ ಈಗ ಪೋಷ್ಯುಲರ್ ಇನ್ಶೂರನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾಗಿರುವ ಶ್ರೀ ಬೋಳಾರು ವಿಠಲರಾಯರ ಸಂಪಾದಕತ್ವದಲ್ಲಿ ಕಂಠೀರವದ ಮೊದಲ ಸಂಚಿಕೆ ಹೊರಟಿತು ಕಂಠೀರವದ ಪ್ರಾರಂಭಕಾಲದಲ್ಲಿ ಸಂಪಾದಕ ವಿಭಾಗದಲ್ಲಿ ಶ್ರೀ ರಾಜಗೋಪಾಲ ಕೃಷ್ಣರಾಯರು ಬರೆಯುತ್ತಿದ್ದರು ಶ್ರೀ ಹುರುಳಿ ಭೀಮರಾಯರು ಪ್ರಾರಂಭದಿಂದ ಇಂದಿನ ವರೆಗೂ ಕಂಠೀರವದಲ್ಲಿ ಬರೆಯುತ್ತಿದ್ದಾರೆ. ಕಂಠೀರವವು ಕೆಲವು ವರ್ಷಗಳಿಂದ ವಾರಕ್ಕೆರಡಾವರ್ತಿ—ಮಂಗಳವಾರ ಮತ್ತು ಶುಕ್ರವಾರ ಪ್ರಕಟಿಸಾಗುತ್ತಿದೆ. ವಾರಕ್ಕೆರಡಾವರ್ತಿ ಪ್ರಕಟವಾಗುವ ಪತ್ರಿಕೆ ಕನ್ನಡನಾಡಿನಲ್ಲಿ ಇದೊಂದೇ ದಿವಂಗತರಾದ ಕಂಜೆ, ಕಾಮತ್, ಉಳ್ಳಾಲರೇ ಮೊದಲಾದವರು ಈ ಪತ್ರಿಕೆಯ ಅಭಿವೃದ್ಧಿ ಕಾರ್ಯದಲ್ಲಿ ತುಂಬಾ ಯೆಡಿದಿರುವರು. ಶ್ರೀಗಳಾದ ಗೋವಿಂದ ಪೈ, ಟಿ. ನಾರಾಯಣ ಭಟ್ಟ, ಜೆ. ವಾಮನ ಭಟ್ಟ, ಕೆ. ಶಂಕರ ಭಟ್ಟ, ಬಿ. ಶಂಕರ ಭಟ್ಟ, ರಾಮಕೃಷ್ಣಾಚಾರ್, ಉಡುಪಿ, ವಿ. ಎಸ್. ಕಾಡ್ಕ,ಕುಡ್ಪಿ ವಾಸುದೇವ ಶೆಣೈ—ಮೊದಲಂದ ಇನ್ನೂ ಹಲವರು ಕಂಠೀರವದಲ್ಲಿ ಲೇಖನಗಳನ್ನು ಬರೆದಿರುವರು. ಕಂಠೀರವ ಪತ್ರಿಕೆಯು ಈಗ ಮಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದೆ.

ತಿಲಕ ಸಂದೇಶ:—ವೈದ್ಯಭಾನು ಶ್ರೀ ಡಿ ಕೆ ಭರದ್ವಾಜರು ಸಂಪಾದಕರಾಗಿ, ಶ್ರೀ ಅಬೈಲು ಭೋಜರಾಯರು ಸಂಚಾಲಕರಾಗಿ ೧೯೨೧ರಿಂದ ಮಂಗಳೂರಿನಲ್ಲಿ ತಿಲಕ ಸಂದೇಶವು ಪ್ರಕಟವಾಗತೊಡಗಿ, ನಾಲ್ಕು ವರ್ಷಕಾಲ ಲೋಕಮಾನ್ಯ ತಿಲಕರ ಧ್ಯೇಯವನ್ನು ಕನ್ನಡ ಜನತೆಗೆ ತಿಳಿಸುವುದೂ, ರಾಷ್ಟ್ರಸಭೆಯ ಅಭಿಪ್ರಾಯವನ್ನು ಪ್ರಚಾರಗೊಳಿಸುವುದೂ ಈ ಪತ್ರಿಕೆಯ ಉದ್ದೇಶವಾಗಿತ್ತು, ಶ್ರೀಗಳಾದ ಕೆ. ಸುಬ್ಬರಾವ್, ಪುಣಿಂಜತ್ತಾಯ ಮೊದಲಾದವರೂ, ಶ್ರೀಮತಿ ಕಲ್ಯಾಣಮ್ಮ ಮೊದಲಾದ ಮಹಿಳೆಯರೂ ಈ ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು

ನವಯುಗ (ವಾರ):—೧೯೨೧ರಲ್ಲಿ ಶ್ರೀ ಎ. ಬಿ. ಶೆಟ್ಟರು ನಾಡವಸಮಾಜದ ಪ್ರಮುಖರ ಬೆಂಬಲದಿಂದ 'ನವಯುಗ' ವಾರಪತ್ರಿಕೆಯನ್ನು ಸಂಪಾದಿಸಿ, ಕೆನರಾ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ, ಪ್ರತಿ ಗುರುವಾರವೂ ಪ್ರಕಟಿಸತೊಡಗಿದರು. ಪ್ರಾರಂಭದ ಕೆಲವು ವರ್ಷಗಳಾದ ಮೇಲೆ ಶ್ರೀ ಕೆ. ಕೆ. ಶೆಟ್ಟರು ಇದರ ಸಂಪಾದಕರಾದರು ೧೯೩೪ರಲ್ಲಿ ಪತ್ರಿಕೆಯನ್ನು ಮಂಗಳೂರಿನಿಂದ ಉಡುಪಿಗೆ ಕೊಂಡು ಹೋದರು. ಉಡುಪಿಗೆ ಹೋದಮೇಲೆ ಪತ್ರಿಕೆಯು ಸ್ವಂತವಾದ ನವಯುಗ ಪ್ರೆಸ್ಸಿನಲ್ಲೇ ಅಚ್ಚಾಗುತ್ತಿದೆ. ಈಗ ಈ ಪತ್ರಿಕೆಗೆ ಶ್ರೀ ಹೊನ್ನಯ್ಯ ಶೆಟ್ಟರ ಸಂಪಾದಕರಾಗಿಯೂ, ಶ್ರೀ ಎಂ ವಿ ಹೆಗ್ಗಡೆಯವರು ಉಪಸಂಪಾದಕರಾಗಿಯೂ ಇರುವರು ಶ್ರೀ ಅನಂತರಾಮ ಅಡ್ಯಂತಾಯ, ಶ್ರೀ ಕೊಡ್ಗಲ್ ತ್ರಿನಿವಾಸರಾವ್, ಶ್ರೀ ಕೆ. ವಿ. ಶೆಣೈ, ಶ್ರೀ ಶಿವರಾಮ ಕಾರಂತ, ಶ್ರೀ ಎಸ್. ನೆಂಕಿ ರಾಜ್ ಮೊದಲಾದವರು ನವಯುಗದಲ್ಲಿ ಆಗಾಗ ಕವಿತೆ, ಕತೆ, ಪ್ರಬಂಧ ಮೊದಲಾದ ಲೇಖಗಳನ್ನು ಬರೆಯುತ್ತಿರುವರು. ಶ್ರೀ ಎ. ಬಿ. ಶೆಟ್ಟರು ಪತ್ರಿಕೆಯ ಸಂಪಾದಕರಲ್ಲಿದ್ದರೂ, ಅದರ ಅಭಿವೃದ್ಧಿಯ ಕಡೆಗೆ ತಮ್ಮ ತನುಮನಗಳಿಂದ ಸಹಾಯ ಮಾಡುತ್ತಿರುವರು

ಸುವಾರ್ತಾ ಪ್ರಸಾರಕ ಸಮಾಚಾರಿ (ದ್ವೈಮಾಸಿಕ):—೧೯೩೨ ಜುಲೈಯಲ್ಲಿ ಪ್ರಾರಂಭವಾದ ದ್ವೈಮಾಸಿಕ ಪತ್ರಿಕೆ—ಕ್ರೈಶ್ಚಿಯನ್ ಅನ್ಡೆಸ್ಟರು ಇದರ ಸಂಪಾದಕರಾಗಿದ್ದರು. ಕೈಸ್ತಧರ್ಮದ ಪ್ರಸಾರಕ್ಕಾಗಿ ಹೊರಟ ಈ ಪತ್ರಿಕೆ ಸುಮಾರು ೧೦ ವರ್ಷ ನಡೆದಂತೆ ತೋರುತ್ತದೆ

ಸತ್ಯಾಗ್ರಹಿ (ವಾರ):—ಶ್ರೀ ಹಿರಿಯಡ್ಕ ರಾಮರಾಯರ ಸಂಪಾದಕತ್ವದಲ್ಲಿಯೂ, ಶ್ರೀ ಎಚ್. ನಾರಾಯಣರಾಯರು ಪ್ರಕಾಶರಾಗಿಯೂ ಉಡುಪಿಯಿಂದ ಪ್ರಕಟವಾಗುತ್ತಿದ್ದ ವಾರಪತ್ರಿಕೆ. ಇದರಲ್ಲಿ ಸ್ವದೇಶೀ ಪ್ರಚಾರ,ಸತ್ಯಾಗ್ರಹ ನೋಲಾದುವುಗಳಿಗೆ ಸಂಬಂಧಿಸಿದ ಲೇಖಗಳೂ ಸುದ್ದಿಗಳೂ ಪ್ರಕಟವಾಗುತ್ತಿದ್ದುವು ಶ್ರೀ ವಿ. ಎಸ್. ಕುಡ್ವರೂ ಒಂದು ವರ್ಷ ಇದರ ಸಂಪಾದಕರಾಗಿದ್ದರು. ಶ್ರೀ ಎಚ್. ನಾರಾಯಣರಾಯರು, ಯು. ಶಾಂತಾರಾಮರಾಯರು ಮೊದಲಾದವರು ಇದರಲ್ಲಿ ಲೇಖನಗಳನ್ನು ಬರೆಯುತ್ತಿದ್ದರು.

ವಸಂತ (ಮಾಸ):—ವಸಂತ ಮಾಸಪತ್ರಿಕೆಯನ್ನು ಶ್ರೀ ಕೋಟ ಶಿವರಾವ ಕಾರಂತರು ೧೯೩೩ನೆಯ ದಶಂಬರದಲ್ಲಿ ಕುಂದಾಪುರದಲ್ಲಿ ಪ್ರಕಟಿಸತೊಡಗಿ ೧೯೪೪ನೆಯ ಇಸವಿ ವರೆಗೆ ನಡೆಸಿಕೊಂಡು ಬಂದರು. ಕೆಲವು ಕಾಲ ಕುಂದಾಪುರದಲ್ಲಿ ಪ್ರಕಟವಾಗುತ್ತಿದ್ದ ಈ ಪತ್ರಿಕೆಯು ಆ ನೇಲೆ ಮಂಗಳೂರಿನ ಧರ್ಮಪ್ರಕಾಶ ಛಾಪಖಾನೆಯಲ್ಲಿ ಅಚ್ಚಾಗಿ ಮಂಗಳೂರಲ್ಲಿ ಸ್ರಕಟವಾಗತೊಡಗಿತು. ವಸಂತವು ಸಚಿತ್ರವಾಗಿದ್ದು, ಭಾರತೀಯ ಚಿತ್ರಕಲೆಯ ನೇಲೆ, ಅಜಂತಾ, ನೆರೋಳ ಗುಹಾ ಚಿತ್ರಗಳ ಮೇಲೆ ಹಲವು ಸುಂದರವಾದ ಲೇಖಗಳು ಇದರಲ್ಲಿ ಬಂದಿವೆ ಶ್ರೀ

ಏರೋಡಿ ಶಿವರಾಮಯ್ಯ, ಶ್ರೀ। ದೇವಣ್ಣ ಪೈ, ದಿವಂಗತ ಕಾಮತ್, ಶ್ರೀ। ವಿ. ಎಸ್ ಕುಡ್ಪ ಮೊದಲಾದವರು ಇದರಲ್ಲಿ ಲೇಖಗಳನ್ನು ಬರೆಯುತ್ತಿದ್ದರು ಶ್ರೀ। ಕಾರಂತರ 'ಭಾರತವರ್ಷದಲ್ಲಿ ಬ್ರಿಟಿಷರು', 'ದೇವದೂತರು' ಮೊದಲಾದ ಗ್ರಂಥಗಳು ಮೊದಲು ಈ ಪತ್ರಿಕೆಯಲ್ಲಿ ಕ್ರಮಶಃ ಪ್ರಕಟವಾದುವು ಈ ಪತ್ರಿಕೆಯು ಕೆಲವು ಕಾಲ ಪಕ್ಷ ಪತ್ರಿಕೆಯಾಗಿ ಪ್ರಕಟವಾಗುತ್ತಿತ್ತು

ಕ್ರೈಸ್ತ ಹಿತವಾದಿ (ಮಾಸ).—ಜೂನ್ ೧೯೨೮ರಲ್ಲಿ ಶ್ರೀಗಳಾದ ಫ್ರೆಡರಿಕ್ ಜತ್ತನ್ನನವರು ಸಂಪಾದಕರಾಗಿ, ಐ ಎಲ್ ಜೋಶುವರವರು ಮೆನೇಜರರಾಗಿ ಮಂಗಳೂರಿನಿಂದ ಹೊರಟ ಮಾಸಪತ್ರಿಕೆ ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಮುದ್ರಣವಾದ ೧೬ ಪುಟಗಳ ಪತ್ರಿಕೆಯ ವಾರ್ಷಿಕ ವರ್ಗಣಿ ರೂ ೧-೦-೦. ಬಾಸೆಲ್ ಮಿಶನಿಗೆ ಸೇರಿದ ಕ್ರೈಸ್ತರಿಗೆ ಸಂಬಂಧಿಸಿದ ಲೇಖನಗಳೂ, ಇತರ ವರ್ತಮಾನಗಳೂ ಈ ಪತ್ರಿಕೆಯಲ್ಲಿ ಬರುತ್ತಿದ್ದುವು ಈ ಪತ್ರಿಕೆಯು ೧೯೩೦ರ ವರೆಗೆ ವರೆಗೆ ನಡೆಯಿತು ಅನಂತರ ಕರ್ಣಾಟಕ ಕ್ರೈಸ್ತಬಂಧು ಎಂಬುದಾಗಿ ಹಸರು ಬದಲಾಯಿಸಿತು

ಸತ್ಯವ್ರತ (ಮಾಸ).—ಶ್ರೀ। ಎಸ್. ಇ ಐಮನರು ಸಂಪಾದಿಸಿ ಪ್ರಕಟಿಸುತ್ತಿದ್ದ ಮಾಸಪತ್ರಿಕೆ ಕ್ರೈಸ್ತಧರ್ಮದ ವಿಷಯವಾಗಿ, ಕ್ರೈಸ್ತಸಮಾಜ ಹಿತಕ್ಕೆ ಸಂಬಂಧಿಸಿದ ಲೇಖಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ೧೯೩೫ನೆಯ ಜುಲೈಯಲ್ಲಿ ಪ್ರಾರಂಭವಾಗಿ ನಾಲ್ಕು ವರ್ಷಕಾಲ ನಡೆದಂತೆ ತೋರುತ್ತದೆ. ಈ ಪತ್ರಿಕೆ ಸರಸ್ವತಿ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು

ಶಕ್ತಿ (ಮಾಸ).—ಕಾರ್ಕಳದ ಮಾರುತಿ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ, ಶ್ರೀ। ಮುಳಿಯ ಗೋವರ್ಧನರಾಯರು ಪ್ರಕಟಿಸುತ್ತಿದ್ದ ಮಾಸಪತ್ರಿಕೆ—೧೯೩೬ನೆಯ ಸಪ್ಟಂಬರದಲ್ಲಿ ಹೊರಟು ಎರಡು ವರ್ಷಕಾಲ ನಡೆಯಿತು ಶಕ್ತಿ ಮಾಸಪತ್ರಿಕೆಯಲ್ಲಿ ಪ್ರಬಂಧ, ಕತೆ, ನಾಟಕಗಳೂ, ಧಾರ್ಮಿಕ ವಿಷಯದ ಲೇಖಗಳೂ ಪ್ರಕಟವಾಗುತ್ತಿದ್ದುವು ಈ ಮಾಸಪತ್ರಿಕೆಯಲ್ಲಿ ದಿವಂಗತರಾದ ಎಂ ಎನ್. ಕಾಮತ್, ಉಳ್ಳಾಲ ಮಂಗೇಶರಾವ್ ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದರು. ಶ್ರೀ। ನಂ ಗೋವಿಂದ ಪೈಯವರು ಬರೆದ 'ವೇಣೂರಿನ ಶಿಲಾಶಾಸನ'ಗಳೆಂಬ ಲೇಖವು ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಶಕ್ತಿ ಪತ್ರಿಕೆಯ ಸಂಪಾದಕರಾದ ಶ್ರೀ। ಗೋವರ್ಧನರಾಯರು ಈಗ ಧಾರವಾಡದ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿಯ ಪಾರುಪತ್ಯಗಾರರಾಗಿರುವರು

ಕೆನರಾ ಹೈಸ್ಕೂಲ್ ಮೆಗಜಿನ್ (ತ್ರೈಮಾಸಿಕ).—ಕೆನರಾ ಹೈಸ್ಕೂಲಿನ ಉಪಾಧ್ಯಾಯವರ್ಗದಲ್ಲಿ ಒಬ್ಬರಾದ ದಿವಂಗತ ಎಂ ಎನ್. ಕಾಮತರ ಸಂಪಾದಕತ್ವದಲ್ಲಿ ೧೯೩೬ನೇ ಇಸವಿಯಲ್ಲಿ ಹೊರಟ ತ್ರೈಮಾಸಿಕ ಈ ಪತ್ರಿಕೆಯಲ್ಲಿ ಶ್ರೀ। ಮ. ಗೋವಿಂದ ಪೈ, ಅಮ್ಮೆಂಬಳ ಶ್ರೀನಿವಾಸ ಪೈ, ಶ್ರೀ। ಕುಪ್ಪಿ ವಾಸುದೇವ ಶೆಣೈ, ಶ್ರೀ। ಮೂಲ್ಕಿ ನರಸಿಂಗ ರಾವ್, ಬಿ. ಎ, ಎಂ ಎಲ್, ನಿವೃತ್ತ ಜಿಲ್ಲಾ ಜಡ್ಜ್ ಮೊದಲಕೆದನರೂ, ವಿದ್ಯಾರ್ಥಿವರ್ಗದವರೂ ಲೇಖನಗಳನ್ನು ಬರೆಯುತ್ತಿದ್ದರು. ಶ್ರೀ। ಮೂಲ್ಕಿ ನರಸಿಂಗರಾಯರು 'ಉಮರ್ ಖಯ್ಯಾಮನ' ಕೆಲವು ಪದ್ಯಗಳನ್ನು ಈ ಪತ್ರಿಕೆಯಲ್ಲಿ ಕನ್ನಡಿಸಿ ಬರೆದಿರುವರು ಪತ್ರಿಕೆಯು ಮೂರು—ನಾಲ್ಕು ವರ್ಷ ಬಾಳಿದಂತೆ ತೋರುತ್ತದೆ

ಕರ್ಣಾಟಕ ಕೇಸರಿ (ಮಾಸ):—ರಾವ್ ಸಾಹೇಬ್ ಮಂಜೇಶ್ವರ ಅನಂತ ರಾವ್, ಬಿ ಎ, ಬಿ ಎಲ್.,ರವರು ಸಂಪಾದಕರಾಗಿ ೧೯೩೮ನೇ ಜುಲೈ ತಿಂಗಳಿನಿಂದ ಪುತ್ತೂರಿನಿಂದ ಕರ್ಣಾಟಕ ಕೇಸರಿಯನ್ನು ಮಾಸಿಕಪತ್ರದ ರೂಪದಲ್ಲಿ ಪ್ರಕಟಿಸತೊಡಗಿ ಎರಡು ವರ್ಷಗಳ ಕಾಲ ನಡೆಸಿದರು. ಈ ಪತ್ರಿಕೆಯು ಪುತ್ತೂರಿನ ಹರಿಹರ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು. ಶ್ರೀ। ಮಂ. ಗೋವಿಂದ ಪೈಯವರ 'ಲಕ್ಷ್ಮೀಶನ ಕಾಲವಿಚಾರ', ಶ್ರೀ। ಕಾರಂತರ ವಿಜಯನಗರಕ್ಕೆ ಸಂಬಂಧಿಸಿದ ಲೇಖಮಾಲೆ, ಶ್ರೀ। ಮಾಸ್ತಿಯವರ 'ನಿಜಗಲ್ಲಿನ ರಾಣಿ' ಮೊದಲಾದ ಬರಹಗಳು ಇದರಲ್ಲಿ ಪ್ರಕಟವಾದುವು. ಅಲ್ಲದೆ ದಿವಂಗತ ಏರೋಡಿ ಶಿವರಾಮಯ್ಯ, ಹೊಸಕೆರೆ ಚಿದಂಬರಯ್ಯ ನೊದಲಾದವರೂ, ಶ್ರೀಗಳಾದ ಉಗ್ರಾಣ ಮಂಗೇಶರಾವ್, ಪಾಂಡೇಶ್ವರ ಗಣಪತಿರಾವ್, ಕಡಂಗೋಡ್ಲು ಶಂಕರ ಭಟ್ಟ, ಮಚ್ಚಿಮಲೆ ಶಂಕರನಾರಾಯಣರಾವ್, ಬೈಂದೂರು ಆನಂದರಾವ್, ಬೆಳ್ಳೆ ರಾಮಚಂದ್ರರಾವ್ ಮೊದಲಾದವರೂ ಕತೆ, ಕವಿತೆ, ಪ್ರಬಂಧ, ನಾಟಕಗಳನ್ನು ಬರೆದಿದ್ದರು

ರಾಷ್ಟ್ರಬಂಧು (ವಾರ) —೫೩. ೭—೫—೧೯೩೮ರಲ್ಲಿ ರಾಷ್ಟ್ರಬಂಧು ಪತ್ರಿಕೆಯು ಪ್ರಾರಂಭವಾಯಿತು. ದ. ಕ. ದ್ರಾವಿಡ ಬ್ರಾಹ್ಮಣ ಸಂಘದವರು ಹೊರಡಿಸಿದ ಈ ಪತ್ರಿಕೆಗೆ ಪ್ರಾರಂಭದಿಂದಲೇ ಶ್ರೀ। ಕೆ. ಶಂಕರ ಭಟ್ಟರು ಸಂಪಾದಕರಾಗಿರುವರು. ಪ್ರಾರಂಭದಲ್ಲಿ ಸದಾನಂದ ಸಹಕಾರ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದ್ದು, ಆ ಮೇಲೆ ಧರ್ಮಪ್ರಕಾಶದಲ್ಲಿ ಅಚ್ಚಾಗತೊಡಗಿತು. ಕೆಲವು ವರ್ಷಗಳ ಹಿಂದೆ ಪತ್ರಿಕೆಯ ಪ್ರಕಟನೆಯ ಭಾರವನ್ನು ಡಾಕ್ಟರ್ ಯು ರಾಮರಾಯರು ವಹಿಸಿಕೊಂಡು ಸ್ವಂತ ಮುದ್ರಣಾಲಯವನ್ನು ಸ್ಥಾಪಿಸಿ, ಅದರಲ್ಲಿ ಮುದ್ರಿಸಿ ಪ್ರತಿ ಆದಿತ್ಯ ವಾರವೂ ಪ್ರಕಟಿಸುತ್ತಿರುವರು. ಶ್ರೀ। ಸೇಡಿಯಾಪು ಕೃಷ್ಣ ಭಟ್ಟರು ಪ್ರಾರಂಭ ಕಾಲದಲ್ಲಿ. ಆ ಮೇಲೆ ಶ್ರೀ। ಕೆ. ಕೃಷ್ಣರಾಯರೂ ಉಪಸಂಪಾದಕರಾಗಿದ್ದರು. ಈ ಪತ್ರಿಕೆಯ ಅಂಗವಾಗಿ ತಿಂಗಳಿಗೊಂದು ಸಾಹಿತ್ಯ ಸಂಚಿಕೆ ಪ್ರಕಟವಾಗುತ್ತಿತ್ತು. ರಾಷ್ಟ್ರಬಂಧುವಿನಲ್ಲಿ ಶ್ರೀ। ಗೋವಿಂದ ಪೈ, ಶ್ರೀ। ಟಿ ನಾರಾಯಣ ಭಟ್ಟ, ಶ್ರೀ। ಮಚ್ಚಿನಮಲೆ ಶಂಕರನಾರಾಯಣ ರಾವ್, ಶ್ರೀ। ರಮಾನಂದ ಘಾಟೆ, ಶ್ರೀ। ಆಯುರ್ವೇದ ಭೂಷಣ ಯಂ ವಿ ಶಾಸ್ತ್ರಿ, ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದರು ಶ್ರೀ। ಎಸ್. ರಾಮಕೃಷ್ಣ ಭಟ್ಟರೂ, ಶ್ರೀ। ಕುಳುಕುಂದ ಶಿವರಾಯರೂ ಪತ್ರಿಕೆಯ ಸಂಪಾದಕವರ್ಗದಲ್ಲಿರುವರು.

ವೇದಸಂದೇಶ (ಮಾಸ) ಆಕ್ಟೋಬರ್ ೧೯೩೬ನೆಯ ವಿಜಯದಶಮಿ ದಿನ ಪ್ರಾರಂಭವಾದ ಈ ಪತ್ರಿಕೆಯು ಎರಡುವರೆ ವರ್ಷಕಾಲ ನಡೆದುಹೋಯಿತು ಪಂ ಧರ್ಮದೇವ ವಿದ್ಯಾವಾಚಸ್ಪತಿಯವರು ಸಂಪಾದಕರಾಗಿಯೂ ಶ್ರೀ। ಬಿ ಎಂ. ತಿಂಗಳಾಯರು ಪ್ರಕಾಶಕರಾಗಿಯೂ ಹೊರಟ ಈ ಪತ್ರಿಕೆಯು ಕೆನರಾ ಪ್ರಿಂಟಿಂಗ್ ವರ್ಕ್ಸ್‌ನಲ್ಲಿ ಮುದ್ರಣವಾಗುತ್ತಿತ್ತು. ೮೦ ಪುಟಗಳ ಈ ಪತ್ರಿಕೆಯ ಚಂದಾ ಹಣ ೧—೪—೦ (ಎರಡನೆ ವರ್ಷದಿಂದ ಡೆಮ್ಮಿ ೩೨ ಪುಟಗಳಾಯಿತು) ಪಂ. ನಿಡ್ಡೋಡಿ ಆನಂತ ಉಪಾಧ್ಯಾಯರ 'ವೇದವು ಈಶ್ವರದತ್ತ ಜ್ಞಾನವೇ' ಎಂಬ ಲೇಖವೂ, ಶ್ರೀ ಜ್ಞಾನೇಂದ್ರ ಪ್ರಭುಗಳ 'ನನ್ನ ಮತಾಂತರ'ವೆಂಬ ಲೇಖವೂ ಇದರಲ್ಲಿ ಪ್ರಕಟವಾಗಿವೆ ಶ್ರೀ। ಎಂ ರಾಮಕೃಷ್ಣ ಭಟ್ಟ, ಎಂ. ಆರ್ಯ ಮೂರ್ತಿ, ಎಂ. ಮಾಧವರಾವ್ ಮೊದಲಾದವರ ಲೇಖನ ಕವಿತೆಗಳೂ ಇದರಲ್ಲಿ ಬಂದಿವೆ.

ತುಣುಕು ಮಿಣುಕು (ಮಾಸ):—"ಉದಯಭಾರತ"ದ ಸಂಪಾದಕರೂ ಪ್ರಕಾಶಕರೂ ಆಗಿದ್ದ ಶ್ರೀ। ಎಸ್. ಪಿ. ಭಟ್ಟರೂ, ಶ್ರೀ। ಎ. ಶೇಷಪ್ಪಯ್ಯನವರೂ ೧೯೩೮ನೆಯ ನವಂಬರದಲ್ಲಿ ಹೊರಡಿಸಿದ ೧೬ ಪುಟಗಳ ಈ ಪತ್ರಿಕೆಯ ವಾರ್ಷಿಕ ವರ್ಗಣಿ ೧೬ ಆಣೆ—ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಅಚ್ಚಾದ "ತುಣುಕು ಮಿಣುಕಿನ" ಎರಡನೆಯ ಸಂಚಿಕೆ ಪ್ರಕಟವಾದಂತೆ ತೋರುವುದಿಲ್ಲ

ಸಾಹಿತ್ಯ (ತ್ರೈಮಾಸಿಕ):—ಕತೆ, ಕಾದಂಬರಿ, ಕವಿತೆ, ಯಕ್ಷಗಾನ, ಜ್ಯೋತಿಷ್ಯ ಮೊದಲಾದ ವಿಷಯಗಳನ್ನೊಳಗೊಂಡು ೧೯೨೯ನೆಯ ನವಂಬರದಲ್ಲಿ ಕಾಸರಗೋಡು ತಾಲೂಕಿನ ಪೆರಡಾಲ್ ಸಾಹಿತ್ಯ ಕಾರ್ಯಾಲಯದಿಂದ ಹೊರಟ ತ್ರೈಮಾಸಿಕ ಪತ್ರಿಕೆ. ಡೆಮ್ಮಿ ೮ರ ೧೪ ಪುಟಗಳುಳ್ಳ ಇದರ ವಾರ್ಷಿಕ ಚಂದಾ ರೂ. ೧—೨—೦ ಮಂಗಳೂರಿನ ಶಾರದಾ ಪ್ರೆಸ್ಸಿನಲ್ಲಿ ಮುದ್ರಣ ೨ನೆಯ ಸಂಚಿಕೆ ಹೊರಡಲಿಲ್ಲ. ಮೊದಲನೆಯ ಸಂಚಿಕೆಯಲ್ಲಿ ಶ್ರೀಗಳಾದ ಬಿ. ಜಿ. ಪುಲಿ ಕವಿಗಳ 'ಮಕ್ಕಳ ಕರ್ತವ್ಯ' ವಿ. ವಿ ಅಯ್ಯ, ಬೆಂಗಳೂರು ಇವರ 'ಜ್ಯೋತಿಷ್ಯ ಶಾಸ್ತ್ರ', ಕೆ. ವಿ ಕೃಷ್ಣ ಭಟ್ಟರ 'ಸುಮಂಗಲೆ', ಎಡ್ವೊಕೇಟ್ ಕುಬಣೂರು ಬಾಲಕೃಷ್ಣರಾಯರ 'ಯಕ್ಷಗಾನ' ಎಂಬ ಲೇಖನಗಳೂ. ಶ್ರೀಗಳಾದ ಮುರಹರ ರಾಮಚಂದ್ರ ಶಿವಪೂಜಿ, ಪುಂಡೂರು ರಾಮಚಂದ್ರ ಪುಣಿಂಚಿತ್ತಾಯ, ಕಾವು ಮಂಜುನಾಥ ಶೆಣೈ ಮೊದಲಾದವರ ಕವಿತೆಗಳೂ ಬಂದಿವೆ.

ವೀಕರಂಜನ (ತ್ರೈಮಾಸಿಕ):—ಸನ್ ೧೯೩೧ನೆಯ ದಶಂಬರದಲ್ಲಿ ಬಾಳ ರಾಳವೇಂದ್ರರಾಯರ ಸಂಪಾದಕತ್ವದಲ್ಲಿ ಹೊರಟ ಸಚಿತ್ರ ತ್ರೈಮಾಸಿಕ ಪತ್ರಿಕೆ, ಕ್ರೌನ್ ೫೨ ಪುಟಗಳು ಧರ್ಮಪ್ರಕಾಶ ಛಾಪಖಾನೆಯ ಮುದ್ರಣ. ಮೂರನೆಯ ಸಂಚಿಕೆ ವರೆಗೆ ಹೊರಟು ಪತ್ರಿಕೆಯು ನಿಂತುಹೋಯಿತು. ಈ ಪತ್ರಿಕೆಯಲ್ಲಿ ಶ್ರೀ। ಕಡೆಂಗೋಡ್ಲು ಶಂಕರ ಭಟ್ಟರ "ಗುರುದಕ್ಷಿಣೆ" ಎಂಬ ನಾಟಕವೂ, ಶ್ರೀ। ಮಂಜೇಶ್ವರ ಗೋವಿಂದ ಪೈಯವರ "ರನ್ನನ ಪರಶುರಾಮ ಚರಿತವೂ, ಚಕ್ರೇಶ್ವರ ಚರಿತವೂ" ಎಂಬ ಲೇಖನವೂ, ಶ್ರೀ। ಜಿ. ರಾಘವೇಂದ್ರ ಶೆಣೈ. ಎಫ್. ಎ., ಲ್. ಟಿ., ಇವರ "ದಕ್ಷಿಣ ಕನ್ನಡದ ೧೫ನೆಯ ಶತಮಾನದ ರಾಜಕೀಯ ಪರಿಸ್ಥಿತಿ" ಎಂಬ ಲೇಖವೂ ಪ್ರಕಟವಾಗಿವೆ. ಸಂಪಾದಕರಿಂದಲೇ ಬರೆಯಲ್ಪಟ್ಟ "ವೃಥಾತನ ಭಾರತೀಯರೂ ನೇಯಿಗೆಯೂ" ಎಂಬ ಲೇಖವು ನಮ್ಮಲ್ಲಿಯ ನೇಯಿಗೆ ಕೈಗಾರಿಕೆಯ ಮಹತ್ವವನ್ನೆತ್ತಿತ್ತೆಂಬುದನ್ನು ತೀರಿಸುತ್ತದೆ. ಶ್ರೀಗಳಾದ ರಾವ್ ಸಾಹೇಬ್ ಮಂಜೇಶ್ವರ ಅನಂತರಾವ್, ಸೇಡಿಯಾಪು ಕೃಷ್ಣ ಭಟ್ಟ, ಅ. ನ. ಕೃಷ್ಣರಾವ್, ಎಂ ಎನ್. ಕಾಮತ್, ದೊರೆಸ್ವಾಮಿ ಅಯ್ಯಂಗಾರ್, ಪಾಂಡೇಶ್ವರ ಗಣಪತಿರಾವ್ ಮೊದಲಾದವರು ಈ ಪತ್ರಿಕೆಯಲ್ಲಿ ಕತೆ, ಕವಿತೆ, ಪ್ರಬಂಧ ಮೊದಲಾದುವನ್ನು ಬರೆದಿರುವರು. ಜನೋಪಯುಕ್ತವಾದ ವೈದ್ಯ, ಕೈಗಾರಿಕೆ ಮೊದಲಾದ ವಿಷಯಗಳು ಇದರಲ್ಲಿ ಬಂದಿದ್ದುವು

ಬಡವರ ಬಂಧು (ಮಾಸಿಕ-ವಾರ):—೧೯೩೮ನೇ ಮೇ ತಿಂಗಳಲ್ಲಿ ಬಡವರ ಬಂಧು ಮಾಸಪತ್ರಿಕೆಯನ್ನು ಶ್ರೀ। ಮಂಗಳೂರು ಜಾರಪ್ಪ, ಮತ್ತು ಶ್ರೀ। ಬಿ. ನರಸಪ್ಪನವರು ಸಂಪಾದಕರೂ ಪ್ರಕಾಶಕರೂ ಆಗಿ ಪ್ರಾರಂಭಿಸಿದರು. ಆರು ವರ್ಷಗಳ ಮಾಸಪತ್ರದ ರೂಪದಲ್ಲಿ ನಡೆಸಿ, ಆ ಮೇಲೆ ೨೧—೧೨—೧೯೪೩ರಲ್ಲಿ ವಾರಪತ್ರಿಕೆಯಾಗಿ ಮಾರ್ಪಡಿಸಿದರು. ಬಡವರಬಂಧು ಪತ್ರಿಕೆಯು ಸ್ವಂತ ಬಡವರ ಬಂಧು ಈಗ ಮಾಸಿಕವಾಗಿ ಪ್ರಕಟವಾಗುತ್ತಿದೆ. ಬಡವರಬಂಧು ಇಂಗ್ಲಿಷ್ ದೈನಿಕವೊಂದು ಇದೇ ಸಂಪಾದಕರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದೆ. ಶ್ರೀ। ಕೆ. ಕೃಷ್ಣರಾಯರು ಬಡವರಬಂಧುವಿನ ಸಂಪಾದಕ ವಿಭಾಗದಲ್ಲಿರುವರು.

ಕರ್ಣಾಟಕ ಕ್ರೈಸ್ತಬಂಧು (ಪಕ್ಷ):—೧೯೩೮ನೆಯ ಜುಲೈಯಿಂದ ಪ್ರಾರಂಭವಾಗಿ ೧೯೪೦ನೆಯ ಇಸವಿ ವರೆಗೆ ಸಚಿತ್ರ ಕರ್ಣಾಟಕ ಕ್ರೈಸ್ತಬಂಧು ಪಕ್ಷ ಪತ್ರಿಕೆ ಪ್ರಕಟವಾಯಿತು. ಈ ಪತ್ರಿಕೆಯನ್ನು ಬಾಸೆಲ್ ಮಿಶನ್ ಧರ್ಮಾಜ್ಞೆಯವರು ಅಚ್ಚುಹಾಕಿ ಪ್ರಕಟಿಸುತ್ತಿದ್ದರು. ಕ್ರೈಸ್ತಧರ್ಮದ ವಿಷಯವಾದ ಲೇಖಗಳಲ್ಲದೆ ಇತರ ಲೇಖಗಳೂ ಬರುತ್ತಿದ್ದುವು. ಇದಲ್ಲದೆ ಮಕ್ಕಳಿಗೆ ಬೇಕಾದ ಸಣ್ಣ ಕತೆ

ಗಳೂ, ಕವಿತೆಗಳೂ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದುವು. ಗಣಪತಿ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ। ಕೃಷ್ಣಯ್ಯನ್ ಆರ್ನೆಸ್ಟರು ಈ ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಈ ಪತ್ರಿಕೆಗೆ ವ್ಯಾರಂಭದಲ್ಲಿ ರೆವೆರೆಂಡ್ ಕೆ. ಆರ್. ಕರುಣಾಕರರೂ, ಆ ಮೇಲೆ ಶ್ರೀ। ಎಸ್. ಬಾರ್ನಬಸ್ ಅಯ್ಯನವರೂ ಸಂಪಾದಕರಾಗಿದ್ದರು.

ಸ್ವದೇಶಿ ಪ್ರಚಾರಕ (ಮಾಸ):—ಸ್ವದೇಶಿ ಆಂದೋಲನದ ಕಾಲದಲ್ಲಿ ಸ್ವದೇಶಿ ವಸ್ತುಗಳ ಪ್ರಚಾರಕ್ಕಾಗಿ ೧೯೩೨ನೆಯ ಆಕ್ಟೋಬರದಲ್ಲಿ ದ. ಕ. ಜಿಲ್ಲಾ ಸ್ವದೇಶಿ ಯುವಕ ಸಂಘದ ಆಶ್ರಯದಲ್ಲಿ ಮಂಗಳೂರು ಪ್ರೆಸ್ ಮ್ಯಾಲಕರಾದ ಎಂ. ಬಾಬುರಾಯ ಪ್ರಭು, ಬಿ. ಎ..ಯವರ ಸಂಪಾದಕತ್ವದಲ್ಲಿ ಮಂಗಳೂರು ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಮಾಸಪತ್ರಿಕೆ ಮೂರು ವರ್ಷಕಾಲ ಸರಿಯಾಗಿ ನಡೆದು, ಆ ಮೇಲೆ ಈ ಪತ್ರಿಕೆಯು 'ತ್ರಿವೇಣಿ' ಎಂಬ ಹೆಸರನ್ನು ತಾಳಿತು. ಶ್ರೀ। ಗೋವಿಂದ ಪೈಯವರು ಬರೆದ 'ವಿಜಯನಗರದ ನಿರ್ಮಾಣವೂ ಶೃಂಗೇರಿಯ ಗುರುಪರಂಪರೆಯೂ' ಮೊದಲಾದ ಲೇಖನಗಳೂ, ಶ್ರೀ। ಎಂ ವಾಸುದೇವ ಪ್ರಭು, ಎಂ. ಎ., ಎಲ್ ಟಿ., ಕುಡ್ಪಿ ವಾಸುದೇವ ಶೆಣೈಯವರ ಹಾಸ್ಯಪೂರಿತ ಲಘುಪ್ರಬಂಧಗಳೂ, ಶ್ರೀ। ಲಕ್ಷ್ಮೀನಾರಾಯಣ ಪುಣಿಂಚತ್ತಾಯ, ದಿವಂಗತ ಕೆ. ರಾಘವಾಚಾರಿ ಮೊದಲಾದವರ ಕವಿತೆಗಳೂ, ಕೈಗಾರಿಕೆಯ ಇತರ ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ.

ಬಾಲಚಂದ್ರ (ಮಾಸ): ಮಂಗಳೂರಿನ ಬಾಲಚಂದ್ರ ನಿಂತ ಮೇಲೆ ದ. ಕ. ಜಿಲ್ಲಾ ಉಪಾಧ್ಯಾಯರ ಸಂಘದ ಆಶ್ರಯದಲ್ಲಿ ೧೯೩೫ನೇ ಜನವರಿಯಲ್ಲಿ ಹೊರಟ ಬಾಲಚಂದ್ರ ಮಾಸಿಕವು ಸುಮಾರು ಮೂರು ವರ್ಷಕಾಲ ನಡೆಯಿತು.

ಜ್ಯೋತಿ (ಮಾಸ) ೧೯೩೮ನೇ ಏಪ್ರಿಲಿನಲ್ಲಿ ಕಾಸರಗೋಡು ತಾಲೂಕು ಕುಂಬಳೆಯಿಂದ ಶ್ರೀಗಳಾದ ಮಹಮ್ಮದ್ ಶರೂಲರು ಪ್ರಕಾಶಕರಾಗಿಯೂ ಈಗ ಆಂತರಂಗ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿದ್ದ ಕೆ. ಹೈದರರು ಸಂಪಾದಕರಾಗಿಯೂ ಹೊರಟ ಈ ಸಚಿತ್ರ ಮಾಸಪತ್ರಿಕೆಯು ನಾಲ್ಕನೇ ಸಂಚಿಕೆಯ ನಂತರ ಹೊರಡಲಿಲ್ಲ. ಡೆಮ್ಮಿ ೩೨ ಪುಟಗಳ ಜ್ಯೋತಿಯ ಚಂ. ರೂ. ೧—೮—೦. ಶಾರದಾ ಭಾಷಾನೆಯ ಮುದ್ರಣ. ಈ ಪತ್ರಿಕೆಯಲ್ಲಿ ಶ್ರೀಗಳಾದ ಕೆ. ಪಿ. ವೆಂಕಪ್ಪ ಶೆಟ್ಟರ, ಕೈಯಾರ ಕೆಂಞಣ್ಣ ರೈಗಳ ಕೇಶಿರಾಜನ ಕಾಲದಲ್ಲಿ ಹೊಸಗನ್ನಡ ಮತ್ತು ಸಾಹಿತ್ಯವೆಂಬ ಲೇಖನವೂ ಬಂದಿವೆ ಶ್ರೀಗಳಾದ ಪುಣಿಂಚತ್ತಾಯ, ಕಂದಕ ಈಶ್ವರ, ಸುರತ್ಕಲ್ ಸುಬ್ಬರಾವ್, ಟಿ. ಉಬೈದ್ ಮೊದಲಾದವರ ಕವಿತೆಗಳೂ ಈ ಪತ್ರಿಕೆಯಲ್ಲಿ ಸಮಾವಿಷ್ಟವಾಗಿವೆ.

ಪ್ರಭಾತ (ಸಾಪ್ತಾಹಿಕ, ದೈನಿಕ): 1935ನೆಯ ಫೆಬ್ರವರಿ ತಿಂಗಳಲ್ಲಿ "ಪ್ರಭಾತ" ವಾರಪತ್ರಿಕೆಯನ್ನು ಶ್ರೀ। ಎಮ್. ಬಾಬುರಾಯ ಪ್ರಭುಗಳು 'ಮಂಗಳೂರು ಪ್ರೆಸ್'ನಲ್ಲಿ ಅಚ್ಚುಹಾಕಿ ಪ್ರಕಟಿಸತೊಡಗಿದರು. ಶ್ರೀ। ಕುಡ್ಪಿ ವಾಸುದೇವ ಶೆಣೈಯವರ ಸಂಪಾದಕತ್ವದಲ್ಲಿ ಪ್ರಭಾತವು ಇಂದಿನ ವರೆಗೂ ನಡೆದುಬಂದಿದೆ. 1938ನೇ ಎಪ್ರಿಲ್ 1ರಲ್ಲಿ ಪ್ರಭಾತವು ದೈನಿಕರೂಪದಲ್ಲಿ ಹೊರಟು, ಒಂದು ವರ್ಷಕಾಲ ನಡೆಯಿತ. ಶ್ರೀ। ಹರಿದಾಸರೂ ಶ್ರೀ। ಟಿ ನಾರಾಯಣ ಭಟ್ಟರೂ ಶ್ರೀ। ಎಸ್. ಎನ್. ಹೊಳ್ಳರೂ ಸಂಪಾದಕ ವಿಭಾಗದಲ್ಲಿದ್ದುಕೊಂಡು ಲೇಖನಗಳನ್ನು ಬರೆದಿದ್ದರು. ಶ್ರೀ। ಎಮ್. ಸುಬ್ರಾಯನ್ ಈಗಲೂ ಪ್ರಭಾತದಲ್ಲಿ ಬರೆಯುತ್ತಿರುವರು. ವಿಶೇಷ ಸಂದರ್ಭಗಳಲ್ಲಿ ಶ್ರೀ। ಗೋವಿಂದ ಪೈ, ಶ್ರೀ। ಶಂ. ಬಾ. ಜೋಶಿ, ಶ್ರೀ। ಕೆ. ವಿ. ಕೃಷ್ಣ ಭಟ್ಟ, ಶ್ರೀ। ಬೇಂದ್ರೆ, ಶ್ರೀ। ಬಿ. ಶಂಕರ ಭಟ್ಟ, ಶ್ರೀ। ಬಿ. ವಿ. ಬಾಳಿಗಾ ಮೊದಲಾದವರ ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ.

ತ್ರಿವೇಣಿ (ಮಾಸ): ೧೯೩೬ನೇ ಜನವರಿಯಿಂದ ಮಂಗಳೂರು ಪ್ರೆಸ್ಸಿನ ಮಾಲಿಕರಾದ ಶ್ರೀ. ಎಂ. ಬಾಬುರಾಯ ಪ್ರಭುಗಳ ಸಂಪಾದಕತ್ವದಲ್ಲಿ ಹೊರಟ ಕ್ರೌನ್ ¼ ಆಕಾರದ ಳಲ ಪುಟಗಳ ಮಾಸ ಪತ್ರಿಕೆ. ಶ್ರೀಗಳಾದ ಟಿ. ನಾರಾಯಣ ಭಟ್ಟ, ವಿದ್ವಾನ್ ಇವರು ಈ ಪತ್ರಿಕೆಯ ಮಧ್ಯಕಾಲದಲ್ಲಿ ಸಂಪಾದಕರಾದರು. ಶ್ರೀ. ಗೋವಿಂದ ಪೈಯವರ "ಗೊಲ್ಗೊಥ" ಎಂಬ ಕವಿತೆಯೂ, "ಹೆಲಿಯೊದೋರನ ಗರುಡಸ್ತಂಭ" "ರನ್ನನ ಗದಾಯುದ್ಧವೂ, ಭಾಸನ ಊರು ಭಂಗವೂ," ಎಂಬಿವೇ ಮೊದಲಾದ ಲೇಖನಗಳೂ ಬಂದಿವೆ. ತ್ರಿವೇಣಿಯು ಈಗ ಪ್ರಕಟವಾಗುವುದಿಲ್ಲ.

ಸದ್ಧರ್ಮಪ್ರಚಾರಕ (ಮಾಸ): 1936ನೇ ಜನವರಿಯಿಂದ ಶ್ರೀ। ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರ ಸಂಪಾದಕತ್ವದಲ್ಲಿ 'ಮಂಗಳೂರು ಪ್ರೆಸ್'ನಲ್ಲಿ ಅಚ್ಚಾಗಿ 9ನೆಯ ಸಂಚಿಕೆಯ ತನಕ ಹೊರಟು, ನಿಂತುಹೋಯಿತು. ಕ್ರೌನ್ ¼ ಆಕಾರದ 32 ಪುಟಗಳ ಪತ್ರಿಕೆಯ ಚಂದಾ ರೂ. 1—4—0.

ಶ್ರೀಯುತ ಗಂಗಾಪ್ರಸಾದ ಉಪಾಧ್ಯಾಯ, ಎಮ್. ಎ., ಶ್ರೀಮತಿ ಮಹಾದೇವಿ ವರ್ಮಾ, ಎಮ್. ಎ.. ಮೊದಲಾದ ಹಿಂದೀ ಲೇಖಕರ ಲೇಖನಾನುವಾದಗಳು ಇದರಲ್ಲಿ ಬರುತ್ತಾ ಇದ್ದುವು. ಶ್ರೀಗಳಾದ ವಿಶ್ವಾಮಿತ್ರ, ಶಿವಸಮುದ್ರ, ಬಡೆಕಿಲ ಕೃಷ್ಣ ಭಟ್ಟ, ಎಮ್ ಚಿಂದ್ರೇಶ್ವರ, ಮುಂಬಾಯಿ, ಕೆ. ಕೃಷ್ಣರಾವ್, ಬಿ ಎ., ಎಸ್. ಗಣಪತಿ ಜೋಶಿ ಮೊದಲಾದವರು ಬರೆಯುತ್ತಿದ್ದರು.

ಪ್ರವಾಸಿ (ಮಾಸ). ೧೯೩೬ನೆಯ ಫೆಬ್ರವರಿಯಲ್ಲಿ ಕಾಸರಗೋಡಿನಿಂದ ಶ್ರೀ। ಕೆ. ವಿ. ಶೆಣೈಯವರ ಸಂಪಾದಕತ್ವದಲ್ಲಿ ಪ್ರವಾಸಿ ಪತ್ರಿಕೆಯ ರೂಪದಲ್ಲಿ ಪ್ರವಾಸಿಯು ವ್ಯಾರಂಭವಾಗಿ, ಒಂದು ವರ್ಷ ಕಾಲ ನಡೆಯಿತು. ಶ್ರೀ। ಮುಕುಂದರಾಜ್ ಎಮ್. ಎ., ಎಲ್. ಟಿ, ಮತ್ತು ಶ್ರೀ। ಜಿ. ಆರ್. ಶೆಣೈಯವರು ಈ ಪತ್ರಿಕೆಯನ್ನು ನಡೆಸುತ್ತಿದ್ದರು. ಶ್ರೀ। ಶೆಣೈಯವರ, ಭೇಲೂರು, ಕುದುರೆಮುಖ ಮೊದಲಾದ ಲೇಖಗಳೂ, ದಿವಂಗತ ಎಮ್. ಎನ್. ಕಾಮತರ 'ಅಂದಿನ ಆ ಊರು' ಎಂಬ ಕಥಾ ಲೇಖಗಳೂ ಈ ಪತ್ರಿಕೆಯಲ್ಲಿ ಪ್ರಕಟವಾದುವು. ಶ್ರೀಗಳಾದ ವಿ. ಡಿಸ್. ಕುಡ್ಪಿ, ಟಿ. ನಾರಾಯಣ ಭಟ್ಟ, ಬಿ. ಮಾಧವ ಬಾಳಿಗ, ಬೇಕಲ ರಾಮ ನಾಯಕ, ಕೃಷ್ಣರಾಯ ಶೆಣೈ ಮೊದಲಾದ ನಮ್ಮ ಜಿಲ್ಲೆಯ ಲೇಖಕರು ಬರೆಯುತ್ತಿದ್ದರು.

ವಿದ್ಯಾಭಿವರ್ಧನಿ (ಪಕ್ಷ): ಬ್ರಹ್ಮಸಮಾಜದ ಪ್ರಚಾರಕರಾದ, ಶ್ರೀ ಇ. ಸುಬ್ಬಕೃಷ್ಣಯ್ಯನವರು ೧೯೩೬ರಲ್ಲಿ ವಿದ್ಯಾಭಿವರ್ಧನಿಯನ್ನು ಪಕ್ಷ ಪತ್ರಿಕೆಯ ರೂಪದಲ್ಲಿ ರಾಷ್ಟ್ರಬಂಧು ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿ, ಪ್ರಕಟಿಸತೊಡಗಿದರು. ಈ ಪತ್ರಿಕೆಯ ವಾರ್ಷಿಕ ಚಂದಾ ರೂ. ೧—೮—೦. ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಗಗಳು ಇದ್ದುವು. ಈ ಪತ್ರಿಕೆಯು ಸುಮಾರು ಒಂದು ವರ್ಷಕಾಲ ಬಾಳಿತು.

ಬಾಲಚಂದ್ರ (ಮಾಸ): ಸನ್ ೧೯೩೮ನೇಯ ನವೆಂಬರದಲ್ಲಿ ಶ್ರೀ। ಉಳ್ಳಾಲ ಮಂಗೇಶರಾವ್ ಬಿ. ಎ. ಎಲ್. ಟಿ. ಯವರ ಸಂಪಾದಕತ್ವದಲ್ಲಿ ಹೊರಟ ಈ ಪತ್ರಿಕೆಯು ಒಂದುವರೆ ವರ್ಷಕಾಲ ನಡೆಯಿತು. ೩೪ ಪುಟಗಳುಳ್ಳ ಪಕ್ಷ ಪತ್ರಿಕೆಯಾಗಿದ್ದ ಇದು ಒಂದು ವರ್ಷದ ಅನಂತರ ಮಾಸ ಪತ್ರಿಕೆಯಾಯಿತು. ಕೊಡಿಯಾಲ ಬೈಲ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಇದರ ಚಂದಾ ರೂ. ೧—೮—೦. ಪುತ್ತೂರು ತಾಲೂಕಿನಲ್ಲಿ ಶ್ರೀ ಶಿವರಾಮ ಕಾರಂತರು ನಡೆಸಿದ ಮಕ್ಕಳ ಕೂಟಗಳ ವರದಿಗಳು ಇದರಲ್ಲಿ ಪ್ರಕಟವಾಗಿವೆ. ಈ ಪತ್ರಿಕೆಗೆ ಶ್ರೀ ಮೊಳಹಳ್ಳಿ ಶಿವರಾಯರೂ ಶ್ರೀ ದಿವಂಗತ ಪಂಜೆ ಮಂಗೇಶರಾಯರೂ ಹಿಂದೆ ನಿಂತು ವಿಶೇಷ ಪ್ರೋತ್ಸಾಹವನ್ನೀಯುತ್ತಿದ್ದರು.

ಭಾರತಿ (ಮಾಸ): ದಿವಂಗತ ವೇ. ಅಪ್ಪಾಭಟ್ಟರು ೧೯೩೫ನೇ ಜನವರಿಯಲ್ಲಿ ಶ್ರೀ ಯು. ವಾಮನ ಶೆಣೈಯವರ ಸಂಪಾದಕತ್ವದಲ್ಲಿ ಹೊರಡಿಸಿದ ಭಾರತಿಯು ಕ್ರೌನ್ ¼ ಆಕಾರದ ಳಲ ಪುಟಗಳಿಂದ ಕೂಡಿದೆ. ಶ್ರೀಗಳಾದ ಗೋವಿಂದ ಪೈ, ಎಮ್. ಎನ್. ಕಾಮತ್ ಟಿ. ನಾರಾಯಣ ಭಟ್ಟ, ಎ. ಪಿ. ಶಂಕರ ಭಾರತಿ, ಬಿ. ಮಹಾಬಲೇಶ್ವರ ಶರ್ಮಾ, ಕೆ. ಈಶ್ವರ ಶಾಸ್ತ್ರಿ, ಟಿ. ಎನ್. ರಾವ್. ಮೊದಲಾದವರು ಬರೆಯುತ್ತಿದ್ದರು. ಭಾರತಿಯು ೫-೬ ವರ್ಷಕಾಲ ಸೇವೆಮಾಡಿ ವಿಶ್ರಾಂತಿ ಹೊಂದಿದೆ.

ವಿವೇಕಾಭ್ಯುದಯ (ಮಾಸ): ೧೯೪೧ನೆಯ ಆಗೋಸ್ತು ತಿಂಗಳಿನಿಂದ ವಿವೇಕಾಭ್ಯುದಯ ಮಾಸಿಕವನ್ನು ಶ್ರೀ. ಡಿ. ಪುಟ್ಟುಸ್ವಾಮಿ ಬಿ. ಎ. ಬಿ. ಎಲ್ ರವರು ಸಂಪಾದಿಸಿ, ಸರಸ್ವತೀ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿ, ಪ್ರತಿ ತಿಂಗಳ ೩೦ನೆಯ ತಾರೀಕಿಗೆ ಪ್ರಕಟಿಸುತ್ತಿರುವರು. ಈ ಪತ್ರಿಕೆಯು ೧೯೩೩ರಿಂದ ಆಸ್ಥಾನ ಮಹಾ ವಿದ್ವಾನ್ ಶಾಂತಿರಾಜ ಶಾಸ್ತ್ರಿಗಳಿಂದ ಸಂಪಾದಿತವಾಗಿ ಮೈಸೂರಿನಿಂದ ಪ್ರಕಟವಾಗುತ್ತಿದ್ದು ಎಂಟು ವರ್ಷಗಳ ನಂತರ ಮಂಗಳೂರಿಗೆ ಬಂತು. ಈ ಪತ್ರಿಕೆಯಲ್ಲಿ ಆಸ್ಥಾನ ಮಹಾ ವಿದ್ವಾನ್ ಎ. ಶಾಂತಿರಾಜ ಶಾಸ್ತ್ರಿ, ಪಂಡಿತ ಕೆ. ಭುಜಬಲಿ ಶಾಸ್ತ್ರಿ ಆರ್. ಶ್ರೀ. ಲೋಕನಾಥ ಶಾಸ್ತ್ರಿ ಮೂಡಬಿದ್ರಿ. ಶ್ರೀ. ಮೂ. ವರ್ಧಮಾನ ಹೆಗ್ಗಡೆ. ಶ್ರೀ. ಎನ್. ಎಸ್ ಜೈನಿ, ನೆಲ್ಲಿಕಾರು, ಶ್ರೀ. ಜೆ. ವಾಮನ ಭಟ್ಟ, ಶ್ರೀ. ಬಿ. ಶಂಕರಭಟ್ಟ ಮೊದಲಾದವರು ಜೈನ ಧರ್ಮದ ಮೇಲೆ ಸುಲಭ ಶೈಲಿಯಲ್ಲಿ ಲೇಖಗಳನ್ನು ಬರೆಯುತ್ತಿರುವರು ಈ ಪತ್ರಿಕೆಗೆ ಮೂಡಬಿದಿರೆಯ ಪಂಡಿತಾಚಾರ್ಯವರ್ಯ ಸ್ವಾವಿಗಳೂ, ಶ್ರೀಮಾನ್ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರೂ ಆಶ್ರಯದಾತರಾಗಿರುವರು.

ಕಲಾಚಂದ್ರ (ಮಾಸ): 1933ನೇ ಸಪ್ಟೆಂಬರ್‌ದಲ್ಲಿ ಕಾರ್ಕಳದಿಂದ ಶ್ರೀ। ಜಿ. ಶೆಣೈಯವರ ಸಂಪಾದಕತ್ವದಲ್ಲಿ ಹೊರಟ "ಕಲಾಚಂದ್ರ" ಮಾಸಪತ್ರಿಕೆಯು ಒಂದುವರೆ ವರ್ಷಕಾಲ ನಡೆಯಿತು. ಕ್ರೌನ್ ¼ ಆಕಾರದ ಪತ್ರಿಕೆಯ ಚಂದಾ ರೂ. 1—8—0. ಈ ಪತ್ರಿಕೆಯು ಪ್ರಾರಂಭದಲ್ಲಿ ಕಾರ್ಕಳದ 'ಮಾರುತಿ ಪ್ರೆಸ್'ನಲ್ಲಿಯೂ ಆ ಮೇಲೆ ಮಂಗಳೂರಿನ 'ಮಂಗಳೂರು ಪ್ರೆಸ್'ನಲ್ಲಿಯೂ ಅಚ್ಚಾಗುತ್ತಿತ್ತು. ಶ್ರೀಗಳಾದ ಎಮ್. ಎನ್. ಕಾಮತ್, ಕುಡ್ಪಿ ವಾಸುದೇವಶೆಣೈ ಮೊದಲಾದ ಲೇಖಕರ ಕತೆ, ಕವಿತೆ, ಏಕಾಂಕ ನಾಟಕವೇ ಮೊದಲಾದ ವಿವಿಧ ವಿಷಯಗಳು ಬರುತ್ತಿದ್ದುವು.

ಜಯಮಾಲಾ (ಮಾಸ). ಶ್ರೀ ಎಂ ಕೆ. ಬಾಬು ಮತ್ತು ಶ್ರೀ ಆರ್. ಪಿಂಟೋ ಇವರು ಸಂಪಾದಕರಾಗಿ ೧೯೩೫ನೇ ಮಾರ್ಚಿ ತಿಂಗಳಲ್ಲಿ ಮಂಗಳೂರಿಂದ ಹೊರಡಿಸಿದ ಈ ಜಯಮಾಲಾ ಮಾಸಿಕವು ಮೂರನೇ ಸಂಚಿಕೆಯಲ್ಲಿ ಸಮಾಪ್ತಿ ಹೊಂದಿತು. ಈ ಜಯಮಾಲೆಯಲ್ಲಿ ಶ್ರೀಗಳಾದ ಗೋವರ್ಧನರಾವ್, ಶಿಲಾನದಿ ರಾಮಚಂದ್ರ ನಾಯಕ, ಎಂ. ಅಪ್ಪು ರಾವ ಮೊದಲಾದವರ ಕತೆ, ಕವಿತೆ, ಲೇಖನಗಳೂ ಇತರ ಕವಿತೆಗಳೂ ಬಂದಿವೆ

ಸಾರಸ್ವತ:- ಕೊಂಕಣಿ ಕನ್ನಡಿಗಳ ಪತ್ರಿಕೆ ೧೯೩೪ರಲ್ಲಿ ಪ್ರಾರಂಭವಾಗಿ ಎರಡು ವರ್ಷ ನಡೆಯಿತು. ಶ್ರೀ ವಾಮನ ಕುಡ್ಪರು ಸಂಪಾದಿಸಿ ಉಡುಪಿಯಲ್ಲಿ ಪ್ರಕಟಿಸುತ್ತಿದ್ದರು.

ಕೃಪೆಯ ಸುವಾರ್ತೆ (ಮಾಸ): ರೆವೆರೆಂಡ್ ಕೆ ಪಿ ಜಕರಿಯಸ್ ಎಂಬವರು ತಿರುವಾಂಕೂರಿನ ಕ್ರೈಸ್ತ ಮಿಶನರಿಗಳು ಕರ್ನಾಟಕದಲ್ಲಿ ಕ್ರೈಸ್ತ ಧರ್ಮ ಪ್ರಚಾರ ಕ್ಕಾಗಿ ೧೯೩೭ನೇ ಜನವರಿಯಿಂದ ೧೯೪೦ನೆಯ ಫೆಬ್ರವರಿ ವರೆಗೆ ಕೃಪೆಯ ಸುವಾರ್ತೆಯನ್ನು ಮಾಸ ಪತ್ರಿಕೆಯ ರೂಪದಲ್ಲಿ ಪ್ರಕಟಿಸಿದರು. ಕೆನರಾ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಈ ಪತ್ರಿಕೆಯ ವಾರ್ಷಿಕ ಚಂದಾ ೧೭ ಆಣೆಗಳು. ಈ ಪತ್ರಿಕೆಯು ಒಂದು ವರ್ಷದ ನಂತರ ಸುವಾರ್ತಾ ದೂತ ಎಂಬ ಹೆಸರಿನಿಂದ ಪ್ರಕಟವಾಗ ತೊಡಗಿತು.

ವಿನೋದ ಭಾರತ (ವಾರ): ೧೯೩೬ನೆಯ ಸಪ್ಟಂಬರಿ ತಿಂಗಳಲ್ಲಿ ವಿನೋದ ಭಾರತ ವಾರಪತ್ರಿಕೆ ಬಡಪರ ಬಂಧು ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರಕಟವಾಗ ತೊಡಗಿ ಎರಡೂವರೆ ವರ್ಷ ಕಾಲ ನಡೆಯಿತು. ಬಡವರ ಬಂಧುವಿನ ಸಂಪಾದಕರಾದ ಶ್ರೀ ಮುಂ ಜಾರಪ್ಪನವರೂ, ಶ್ರೀ ಬಿ ನರಸಪ್ಪನವರೂ ಇದರ ಸಂಪಾದಕರಾಗಿದ್ದರು. ಶ್ರೀ ಕ್ಯೂಲೂರುಕರರು ಇದರ ಸಂಪಾದಕ ವಿಭಾಗದಲ್ಲಿದ್ದರು

ಸ್ವತಂತ್ರ ಭಾರತ (ವಾರ, ದಿನ): ಸ್ವತಂತ್ರಭಾರತ ವಾರಪತ್ರಿಕೆಯು ೧೯೩೭ನೆಯ ಆಕ್ಟೋಬರದಲ್ಲಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಶ್ರೀ ಹಿರಿಯಡ್ಕ ರಾಮರಾಯ ಮಲ್ಯರೂ, ಶ್ರೀ ಕೆ. ಹೈದರರೂ, ೪ ನೇ ಲೆ ಶ್ರೀ ಬಿ. ಎಂ ಕಾರ್ಕಳ್ಳಿ ನವರೂ ಸಂಪಾದಕರಾಗಿದ್ದರು. ಈಗ ಶ್ರೀ ನಿ. ಕೇಶವಕಾಮತರು ಪ್ರಕಾಶಕರಾಗಿದ್ದು, ಶ್ರೀ ಯು. ವಿ. ಶೆಣೈಯವರು ಸಂಪಾದಕರಾಗಿರುವರು.

ಚಿತ್ರ (ಮಾಸ): ಶ್ರೀ ವಿ. ಆರ್. ಕ್ಯೂಲೂರುಕರರು ೧೯೩೬ನೇ ನವಂಬರದಲ್ಲಿ ಚಿತ್ರ ಮಾಸ ಪತ್ರಿಕೆಯನ್ನು ಪ್ರಾರಂಭಿಸಿ ಎರಡು ವರ್ಷಗಳ ಕಾಲ ನಡೆಸಿದರು. ಈ ಪತ್ರಿಕೆ ಪ್ರಾರಂಭದಲ್ಲಿ ಕೊಹಿನೂರು ಪ್ರೆಸ್ಸಿನಲ್ಲಿಯೂ ಆ ಮೇಲೆ ಕೆನರಾ ಪ್ರಿಂಟಿಂಗ್ ಪ್ರೆಸ್ಸಿನಲ್ಲಿಯೂ ಅಚ್ಚಾಗುತ್ತಿತ್ತು. ಸಿನೆಮಾಕ್ಕೆ ಸಂಬಂಧಿಸಿದ ಲೇಖನಗಳೂ, ವಿಮರ್ಶೆಗಳೂ ಮಕ್ಕಳಿಗೆ ಬೇಕಾದ ಕತೆ, ಕವಿತೆಗಳೂ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು.

ಸುವಾರ್ತಾ ದೂತ (ಮಾಸ): ರೆವೆರೆಂಡ್ ಕೆ. ಪಿ ಜೆರಿಯನ್‌ರವರು ೧೯೩೭ನೆಯ ಮಾರ್ಚಿ ತಿಂಗಳಿನಿಂದ ಸುವಾರ್ತಾ ದೂತ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಸುಮಾರು ೪ ವರ್ಷಗಳ ವರೆಗೆ ನಡೆಸಿದರು. ಸರಸ್ವತೀ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿದ್ದ ಈ ಪತ್ರಿಕೆಯ ವಾರ್ಷಿಕ ಚಂದಾ ರೂ ೧.

ಶ್ರೀ ಕೃಷ್ಣ ಸಂದೇಶ: (ಮಾಸ) ಪಂಡಿತ ಶ್ರೀ ಮುದ್ರಾಡಿ ಜನಾರ್ದನಾಚಾರ್ಯರು ಸಂಪಾದಿಸಿ, ಶ್ರೀ ಕೃಷ್ಣ ಸಂದೇಶ ಮಾಸ ಪತ್ರಿಕೆಯನ್ನು ಉಡುಪಿಯಿಂದ ಪ್ರಕಟಿಸುತ್ತಿದ್ದರು. ಈ ಪತ್ರಿಕೆಯು ೧೯೩೮ರಲ್ಲಿ ಪ್ರಾರಂಭವಾಯಿತು. ಉಡುಪಿಯ ಶ್ರೀ ಕೃಷ್ಣ ಮುದ್ರಣಾಲಯದಲ್ಲಿ ಅಚ್ಚಾಗುತ್ತಿತ್ತು.

ಸದ್ಗುರು ಪಾದಸೇವೆ : (ಮಾಸ) ಉಡುಪಿಯ ಶ್ರೀ ಕೃಷ್ಣ ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರಕಟವಾಗುತಿದ್ದ ಮಾಸ ಪತ್ರಿಕೆ. ಕಿರಣಕೆರೆ ಶ್ರೀ ವೆಂಕಟೇಶ ಶರ್ಮರು ಸಂಪಾದಕರಾಗಿಯೂ ಶ್ರೀ ಆರ್. ಕೆ. ಭಟ್ಟರು ಪ್ರಕಾಶಕರಾಗಿಯೂ ಪ್ರಕಟವಾಗುತಿತ್ತು. ಶ್ರೀ ಕೊರ್ಡಕಲ್ ಶ್ರೀನಿವಾಸ ರಾವ್, ದಿವಂಗತ ಎ. ಶಿವರಾಮಯ್ಯ ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದರು. ೧೯೩೭ರಲ್ಲಿ ಪ್ರಾರಂಭಿಸಲ್ಪಟ್ಟ ಧಾರ್ಮಿಕ ವಿಷಯಗಳಿಗಾಗಿ ಮೀಸಲಾಗಿತ್ತು.

ಇಂಡಿಯನ್ ಬೊಯ್ಸ್ ಸ್ಕೌಟ್ಸ್ ಬುಲೆಟಿನ್: ಜಿಲ್ಲೆಯ ಮಕ್ಕಳ ಸ್ಕೌಟು ಚಳವಳವನ್ನು ಪ್ರಚುರಪಡಿಸುವ ಮಾಸಿಕ. ೧೯೪೦ರಲ್ಲಿ ಪ್ರಾರಂಭವಾಗಿದೆ. ಡಾ ಕೆ. ಗಿರಿಧರರಾಯರು ಸಂಪಾದಕರಾಗಿ ಪ್ರಕಟಿಸುತ್ತಿರುವರು. ಕೆನರಾ ಪ್ರಿಂಟಿಂಗ್ ಎಂಡ್ ಪಬ್ಲಿಷಿಂಗ್ ಹೌಸಿನಲ್ಲಿ ಅಚ್ಚಾಗುತ್ತಿರುವುದು.

ನವಶಕ್ತಿ (ಮಾಸ): ಶ್ರೀ ಬನ್ನಂಜೆ ರಾಮಾಚಾರ್ಯರು ೧೯೩೮ನೆಯ ಮೇ ತಿಂಗಳಿನಿಂದ ನವಶಕ್ತಿ ಎಂಬ ಮಾಸ ಪತ್ರಿಕೆಯನ್ನು ಸಂಪಾದಿಸಿ, ಪ್ರಕಟಿಸ ತೊಡಗಿದರು. ಪತ್ರಿಕೆಯು ಸುಮಾರು ಒಂದು ವರ್ಷ ಬಾಳಿದಂತೆ ತೋರುತ್ತದೆ. ಇದರಲ್ಲಿ ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ ಲೇಖನಗಳೂ ಕತೆ, ಕವಿತೆಗಳೂ ಪ್ರಕಟವಾಗುತ್ತಿದ್ದುವು.

ವರ್ತಕ ಧುರೀಣ (ಧುರೀಣ): ಉಡುಪಿಯಲ್ಲಿ ೧೯೩೮ನೆಯ ಒಕ್ಟೋಬರ್ ದಲ್ಲಿ ಪ್ರಾರಂಭವಾದ ವರ್ತಕ ಧುರೀಣವು ಈಗ ಧುರೀಣವೆಂಬ ಹೆಸರಿನಿಂದ ಮಾಸ ಪತ್ರಿಕೆಯ ರೂಪದಲ್ಲಿ ಪ್ರತಿ ೩ ತಿಂಗಳಲ್ಲಿಯೂ ಪ್ರಕಟಗೊಳ್ಳುತ್ತಿದೆ. ಶ್ರೀ ಆರ್. ಎಸ್ ಶೆಣೈಯವರು ಇದರ ಸಂಪಾದಕರು. ಶ್ರೀ ಬನ್ನಂಜೆ ರಾಮಾಚಾರ್ಯ, ಶ್ರೀ ಕೆ ವಿಟ್ಟಲ ಶೆಣೈ, ಬಿ. ಎ, ಎಲ್. ಟಿ, ಶ್ರೀ ಎಸ್ ವೆಂಕಟರಾಜ, ಶ್ರೀ ಅಮ್ಮೆಂಬಳ ಶಂಕರನಾರಾಯಣ ಮೊದಲಾದವರ ಕತೆ, ಕವನ, ಪ್ರಬಂಧಗಳು ಈ ಪತ್ರಿಕೆಯಲ್ಲಿ ಆಗಾಗ ಪ್ರಕಟವಾಗುತ್ತಿವೆ. 'ಪ್ರಭಾಕರ ಪ್ರೆಸ್ಸಿ'ನ ಮುದ್ರಣ.

ಅಂತರಂಗ (ವಾರ): ೧೯೩೮ನೆಯ ಜುಲೈ ೧೬ನೇ ತಾರೀಕಿನ ದಿನದಿಂದ "ಅಂತರಂಗ"ವು ಸಚಿತ್ರ ವಾರಪತ್ರಿಕೆಯಾಗಿ ಪುಸ್ತಕರೂಪದಲ್ಲಿ ಪ್ರಕಟವಾಗತೊಡಗಿ, ಪ್ರತೀ ಪಂಗಳವಾರವೂ ಗ್ರಾಹಕರ ಕೈಸೇರುವುದು. ಈ ಪತ್ರಿಕೆಯನ್ನು ಶ್ರೀ ಎಸ್ ಯು... ಪಣಿಯಾಡಿಯವರು ಸಂಪಾದಿಸಿ ತಮ್ಮ 'ತಾಳಿಪಾಡಿ ಮುದ್ರಣಾಲಯ'ದಲ್ಲಿ ಅಚ್ಚುಹಾಕಿಸಿ ಪ್ರಕಟಿಸುತ್ತಿದ್ದರು. ಶ್ರೀ ಕೆ. ಹೈದರ್ ಅವರು ಪತ್ರಿಕೆಯ ಸಂಪಾದಕರಾಗಿದ್ದರು. ಈಗ ಸುಮಾರು ಮೂರು ವರ್ಷಗಳಿಂದ ಅಂತರಂಗವನ್ನು ಶ್ರೀ ಕೆ. ಹೊನ್ನಯ್ಯ ಶೆಟ್ಟರು ಸಂಪಾದಿಸಿ 'ನವಯುಗ ಮುದ್ರಣಾಲಯ'ದಲ್ಲಿ ಮುದ್ರಿಸಿ ಪ್ರಕಟಿಸುವರು. ಶ್ರೀ ಎಮ್ ವಿ ಹೆಗ್ಗಡೆಯವರು ಉಪ ಸಂಪಾದಕರಾಗಿರುವರು. ಶ್ರೀ ಬಿ. ನಾಗುದೇವ ರಾವ್, ಶ್ರೀ ಕೊರಡ್ಕಲ್ ಶ್ರೀನಿವಾಸ ರಾವ್, ಶ್ರೀ ಪಿ. ಎ. ಉಪಾಧ್ಯಾಯ, ವಕೀಲ್, ಶ್ರೀ ಪಿ. ರಮಾನಂದ ನಾಯಕ್, ವಕೀಲ್, ಶ್ರೀ ಎಚ್ ಆರ್. ನಾಯಕ್, ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ಮೊದಲಾದವರು ಅಂತರಂಗದ ಸಲಹೆಗಾರರೂ ಲೇಖಕರೂ ಆಗಿರುವರು.

ಸಮದರ್ಶಿ (ಮಾಸ): ನಮ್ಮ ಜಿಲ್ಲೆಯ ಕೂಲಿಗಾರರ ಮುಂದಾಳುಗಳೂ ಸಾಹಿತಿಗಳೂ ಶ್ರೀ ಎಸ್. ಎನ್ ಹೊಳ್ಳರು ಸಂಪಾದಕರೂ ಆಗಿ, ಮಂಗಳೂರು ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿ, ಪ್ರಕಟಿಸುತ್ತಿದ್ದರು. ೧೯೩೫—೪೬—೪೭ರಲ್ಲಿ ವಾರಪತ್ರಿಕೆಯಾಗಿ ಹೊರಟು. ಸಮದರ್ಶಿಯು ಳನೆಯ ಸಂಚಿಕೆಯಲ್ಲಿ ನಿಂತು ಹೋಯಿತು. ಗೈಮೆಗಾರರ ಕೇಳಿಕೆಗಳನ್ನು ಜನತೆಯ ಸರಕಾರದ ಮುಂದಿಡುವುದೂ ಮಕ್ಕು ಜನತೆಯಲ್ಲಿ ಸಮಾಜಸತ್ತಾತ್ಮಾದನೆಯನ್ನು ಪ್ರಚಾರಗೊಳಿಸುವುದೂ ಪತ್ರಿಕೆಯ ಉದ್ದೇಶವಾಗಿತ್ತು.

ರಾಜಭಕ್ತ (ವಾರ). ಮೈಸೂರು ದೇಶದ ರಾಜಕೀಯ ಮೊದಲಾದ ವಿಷಯಗಳನ್ನು ರಾಜಭಕ್ತಿ ಪೂರ್ವಕವಾಗಿ ಮೈಸೂರಿನವರಲ್ಲದ ಕನ್ನಡಿಗರಿಗೆ ತಿಳಿಸುವ ಉದ್ದೇಶದಿಂದ ೧೧—೫—೧೯೩೯ರಲ್ಲಿ ಮೈಸೂರಿನವರಾದ ಶ್ರೀ ಎಸ್. ಶರ್ಮರೂ ಸಂಪಾದಕರೂ ಪ್ರಕಾಶಕರೂ ಆಗಿ ಹೊರಡಿಸಿದ ಈ ಸಚಿತ್ರ ವಾರ ಪತ್ರಿಕೆಯು ಸರಸ್ವತೀ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿತ್ತು. ಈ ಪತ್ರಿಕೆಯ ನಾಲ್ಕು ಐದು ಸಂಚಿಕೆಗಳು ಮಾತ್ರ ಹೊರಟು ಪತ್ತೆ ನಿಂತು ಹೋಯಿತು.

ಹಮ್ಮದರ್ದ್ (ವಾರ).—೧೧—೯—೧೯೩೯ರಲ್ಲಿ ಕೆ. ಆರ್. ಮಹಜರ್ ರವರ ಸಂಪಾದಕತ್ವದಲ್ಲಿ ಹಮ್ಮದರ್ದ್ ವಾರಪತ್ರಿಕೆ ಪ್ರಾರಂಭವಾಗಿ ನೂರು ನಾಲ್ಕು ತಿಂಗಳುಗಳಲ್ಲಿ ನಿಂತುಹೋಯಿತು. ಮುಸ್ಲಿಮರ ಹಿತರಕ್ಷಣೆಗಾಗಿ ಹೊರಟ ವಾರಪತ್ರಿಕೆ.

ನಾಡಗುಡಿ (ಮಾಸ): ಶ್ರೀ ಸಿ. ಮುರಹರಿರಾಯರು ೧೯೩೯ನೆಯ ಅಕ್ಟೋಬರ ತಿಂಗಳಲ್ಲಿ, ತಾವೇ ಸಂಪಾದಕರಾಗಿ ತಮ್ಮ ಸ್ವಂತದ ಆನಂದ ಪವರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸತೊಡಗಿದರು. ಕನ್ನಡ ಸಾಹಿತ್ಯ ಸೇವೆಯನ್ನೂ ನಾಡಸೇವೆಯನ್ನೂ ಉದ್ದೇಶವಾಗಿ ಇಟ್ಟುಕೊಂಡು ಹೊರಟ ಈ ಪತ್ರಿಕೆಯ ಏಳೆಂಟು ಸಂಚಿಕೆಗಳು ಪ್ರಕಟನಾಗುವುದರೊಳಗೆ ನಿಂತುಹೋಯಿತು. ಈ ಪತ್ರಿಕೆಯಲ್ಲಿ ಸಣ್ಣ ಕಥೆಗಳೂ ಕವಿತೆಗಳೂ ಸಿನೇಮಾ ವಿಷಯದ ಲೇಖನಗಳೂ ಬರುತ್ತಿದ್ದುವು. ಶ್ರೀ ಎಂ. ವಿ. ಪ್ರಭು, ಎಂ. ಎ., ಎಲ್. ಟಿ. ಇವರು ಲಘು ಪ್ರಬಂಧಗಳನ್ನು ಬರೆದಿದ್ದರು. ವಿವಂಗತ ಜಾರ್ಜ ಹರ್ಬರ್ಟ್‌ರೂ ಇದರಲ್ಲಿ ಲೇಖನಗಳನ್ನು ಬರೆದಿದ್ದರು.

ದೇಶಭಕ್ತ (ವಾರ):—ದಿವಂಗತ ದೇಶಭಕ್ತ ಕಾರ್ನಾಡ್ ಸದಾಶಿವರಾಯರ ನೆನಪಿಗಾಗಿ, ನಾಡಸೇವೆಯನ್ನು ಉದ್ದೇಶವಾಗಿಟ್ಟುಕೊಂಡು ೧೯—೮—೧೯೪೦ರಲ್ಲಿ ಹೊರಟ ವಾರಪತ್ರಿಕೆ ದೇಶಭಕ್ತ. ಈ ಪತ್ರಿಕೆಯನ್ನು ಶ್ರೀ ಜಯದೇವಜೀಯವರು ಸಂಪಾಕರೂ, ಪ್ರಕಾಶಕರೂ ಆಗಿ ಪ್ರಾರಂಭದಲ್ಲಿ ಕೊಹಿನೂರು ಪ್ರೆಸ್ಸಿನಲ್ಲಿಯೂ, ಆ ಮೇಲೆ ಕೆನರಾ ಪ್ರಿಂಟಿಂಗ್ ಪ್ರೆಸ್ಸಿನಲ್ಲಿಯೂ ಪ್ರಕಟಿಸುತ್ತಿದ್ದರು. ಇದರ ನಾಲ್ಕಾರು ಸಂಚಿಕೆ ಹೊರಡುವಷ್ಟರಲ್ಲಿ ನಿಂತುಹೋಯಿತು. ಇದರಲ್ಲಿ ವಿ. ಆರ್ ಕ್ಯೂಲೂರ್‌ಕರ್ (ವೆಂಕಣ್ಣ), ಬಿ. ಎಂ. ಶರ್ಮ ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದರು.

ನವಭಾರತ (ವಾರ, ದೈನಿಕ) ತಾ. ೧೫-೭-೧೯೪೦ರಲ್ಲಿ ಶ್ರೀ ಕುಪ್ಪಿ ವಾಸುದೇವ ಶೆಣೈಯವರ ಸಂಪಾದಕತ್ವದಲ್ಲಿ ಪ್ರಾರಂಭವಾದ ದೈನಿಕ. ದಿ ಸಿ. ಪಿ. ಸಿ. ಮೋಟರ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಏ ಎಸ್. ಕುಡ್ಪರವರು ಈ ಪತ್ರಿಕೆಯನ್ನು ಹೊರಡಿಸಿ ಈಗ ಅವರೇ ಉತ್ತಮ ರೀತಿಯಿಂದ ಸಂಪಾದಿಸಿ, ಸ್ವಂತ ನವಭಾರತ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಪ್ರಕಟಿಸುತ್ತಿರುವರು. ಶ್ರೀ ಕುಡ್ಪಿಯವರು ಕೆಲವು ಕಾಲ ಸಂಪಾದಕರಾಗಿ ನಿವೃತ್ತರಾದ ಮೇಲೆ ಧಾರವಾಡದ ಶ್ರೀ ಎಚ್. ನಾರಾಯಣ ಶರ್ಮರು ಕೆಲವು ಕಾಲ ಸಂಪಾದಕರಾಗಿದ್ದರು. ಪೇಟೆ ಪಟ್ಟಣಗಳಲ್ಲಿನ ಜನರಿಗೆ ದಿನದಿನದ ಸುದ್ದಿಯನ್ನು ಕೊಡುವುದು 'ನವಭಾರತ'. ಈ ಪತ್ರಿಕೆಯ ಸಾಪ್ತಾಹಿಕ ಸಂಚಿಕೆಯು ಪ್ರತಿ ಆದಿತ್ಯವಾರ ಚಿತ್ರಲೇಖನಗಳಿಂದ ಪ್ರಕಟವಾಗುತ್ತಿದೆ. ಶ್ರೀ ಬಿ ವಿ. ಬಾಳಿಗರು ಸಂಪಾದಕ ವಿಭಾಗದಲ್ಲಿದ್ದು ದುಡಿಯುತ್ತಿರುವರು. ಶ್ರೀಗಳಾದ ಶಿ. ರಾ. ಕುಳುಕುಂದ, ಸಿ. ಕೆ ನಾರಾಯಣ, ಕೆ. ವಿ. ಭಟ್, ಎಮ್. ಸುಬ್ರಾಯನ್, ಕೆ. ಸದಾಶಿವ, ಎಸ್. ವಿ. ಪ್ರಭು ಮೊದಲಾದವರು ಈ ಪತ್ರಿಕೆಗೆ ಆಗಾಗ ಲೇಖನಗಳನ್ನು, ಕವಿತೆ, ಕತೆಗಳನ್ನು ಬರೆಯುತ್ತಿರುವರು.

ಹಿಂದುಸ್ಥಾನ ಸ್ಕೌಟ್ (ಮಾಸ): ಶ್ರೀ ಎಮ್. ಎಸ್. ಮಾಧವರಾಯರು ಪ. ಕನ್ನಡದ ಹಿಂದುಸ್ಥಾನ ಸ್ಕೌಟ್ ಎಸೋಸಿಯೇಶನಿನ ಪರವಾಗಿ ಪ್ರಕಟಿಸುವ ಮಾಸಪತ್ರಿಕೆ ಹಿಂದುಸ್ಥಾನ್ ಸ್ಕೌಟ್. ಈ ಚಿಕ್ಕ ಪತ್ರಿಕೆಯಲ್ಲಿ ಸ್ಕೌಟಿಗೆ ಸಂಬಂಧಿಸಿದ ಸಣ್ಣ ಸಣ್ಣ ಲೇಖನಗಳೂ, ವರದಿಗಳೂ, ಸುದ್ದಿಗಳೂ ಪ್ರಕಟವಾಗುತ್ತಿವೆ. ಸ್ಕೌಟುಗಳಿಗೆ ಅಗತ್ಯವಾದ ಪತ್ರಿಕೆ. ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಮುದ್ರಣವಾಗುವುದು. ೧೯೪೦ನೆಯ ಜುಲೈಯಲ್ಲಿ ಪ್ರಾರಂಭವಾಗಿ ಇಂದಿನ ತನಕ ಕ್ರಮವಾಗಿ ನಡೆಯುತ್ತಿದೆ.

ಪರ್ಯಾಯ ಪ್ರಕಾಶಿನಿ (ಮಾಸ) ಉಡುಪಿಯ ಶ್ರೀ ಕೃಷ್ಣಾಪುರ ಮಠದವರ ಪ್ರೋತ್ಸಾಹದಿಂದ ಶ್ರೀ ಬಿ ರಾಮಕೃಷ್ಣಾಚಾರ್ಯರ ಸಂಪಾದಕತ್ವದಲ್ಲಿ ಪರ್ಯಾಯ ಪ್ರಕಾಶಿನಿ ಮಾಸಪತ್ರಿಕೆ ಕಳೆದ ಎರಡು ವರ್ಷಗಳಿಂದ ಪ್ರಕಟವಾಗುತ್ತಿದೆ ಉಡುಪಿಯ ಮಠಗಳಿಗೆ ಸಂಬಂಧಿಸಿದ ಲೇಖನಗಳೂ ಧಾರ್ಮಿಕ ಲೇಖನಗಳೂ ಪ್ರಕಟವಾಗಿವೆ ಈ ಪತ್ರಿಕೆ ನವಯುಗ ಮುದ್ರಣಾಲಯದಲ್ಲಿ ಅಚ್ಚಾಗುತ್ತಿದೆ. ಈಗ ಈ ಪತ್ರಿಕೆಯನ್ನು ಶ್ರೀ ಹೊನ್ನಯ್ಯ ಶೆಟ್ಟರು ಸಂಪಾದಿಸಿ ಪ್ರಕಟಿಸುತ್ತಾರೆ. ಇದರ ಹೆಸರನ್ನು ಪ್ರಕಾಶಿನಿ ಎಂದು ಮಾರ್ಪಡಿಸಿರುವರು.

ಉದಯಭಾರತ.—ಶ್ರೀ ಎಸ್. ಪಿ ಭಟ್ಟರೂ. ಶ್ರೀ ಅಲೆವೂರು ಶೇಷಪ್ಪಯ್ಯನವರೂ ೧೯೩೭ರಲ್ಲಿ ಉದಯಭಾರತವನ್ನು ತ್ರೈಮಾಸಿಕವಾಗಿ ಪ್ರಾರಂಭಿಸಿದರು. ಒಂದು ವರ್ಷದ ನಂತರ ಮಾಸಿಕಪತ್ರವನ್ನಾಗಿ ಮಾರ್ಪಡಿಸಿದರು. ಪ್ರಾರಂಭದ ಎರಡು ವರ್ಷಗಳಲ್ಲಿ ಕೇವಲ ಸಾಹಿತ್ಯಕ್ಕಾಗಿ ಮಾಸಲಾಗಿರಿಸಿದ್ದ ಈ ಪತ್ರಿಕೆಯನ್ನು ಈಗ ಶ್ರೀ ಶೇಷಪ್ಪಯ್ಯನವರು ಹಿಂದೂ ಮಹಾಸಭೆಯ ಪರವಾಗಿ ಪ್ರಕಟಿಸುತ್ತಿರುವರು.

ವಿದ್ಯೋದಯ (ಮಾಸ) ೧೯೨೯-೧೯೪೪ರಿಂದ ದಕ್ಷಿಣ ಕನ್ನಡ ಜಿಲ್ಲೆಯ ಉಪಾಧ್ಯಾಯ ಸಂಘದ ಪರವಾಗಿ ಪ್ರಕಟವಾಗುತ್ತಿರುವ ಮಾಸಪತ್ರಿಕೆ. ಚಂದಾರೂ ೧—೮—೦ ಕೆನರಾ ಹೈಸ್ಕೂಲ್‌ನ ಅಧ್ಯಾಪಕರಾದ ಶ್ರೀ ಮುಕುಂದ ರಾವ್, ಎಮ್ ಎ., ಎಲ್ ಟಿ..ಯವರು "ವಿದ್ಯೋದಯ"ವನ್ನು ಸಂಪಾದಿಸಿ, ಕಾಸರಗೋಡಿನ 'ಶ್ರೀನಿವಾಸ ಮುದ್ರಣಾಲಯ'ದಲ್ಲಿ ಅಚ್ಚುಹಾಕಿಸಿ ಪ್ರಕಟಿಸುವರು. ಉಪಾಧ್ಯಾಯರಿಗೆ ಉಪಯುಕ್ತವಾದ ಭೂಗೋಳ, ಗಣಿತ, ವಿಜ್ಞಾನಗಳೇ ಮೊದಲಾದ ವಿಷಯಗಳ ಮೇಲೆ ಸುಲಭಶೈಲಿಯ ಲೇಖನಗಳೂ ವಿದ್ಯಾ ಇಲಾಖೆಯ ಡೈರೆಕ್ಟರ್‌ರಿಂದ ಬಂದ ಹುಕುಮುಗಳೂ ಅವುಗಳ ವಿವರಣೆಯೂ ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಾ, ಶ್ರೀ ಕೆ. ವೆಂಕಟ ರಾವ್, ಬಿ ಎ., ಎಲ್. ಟಿ., ಶ್ರೀ ಎಸ್. ಕೆ ಗೋವಿಂದ ರಾವ್, ಶ್ರೀ ಪುಂಡ್ಲೀಕ ಶೆಣೈ. ಶ್ರೀ ಜಿ. ಆರ್. ಶೆಣೈ, ಬಿ ಎ., ಎಲ್. ಟಿ, ಮೊದಲಾದವರು ಈ ಪತ್ರಿಕೆಯಲ್ಲಿ ಲೇಖಗಳನ್ನು ಬರೆಯುತ್ತಿರುವರು.

ಪ್ರಕಾಶ (ಪಕ್ಷ): ೧೯೩—೪—೨೯ರಲ್ಲಿ ಶ್ರೀಮತಿ ಯು. ಡಿ. ಸೋಜರು ಕೊಹಿನೂರು ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಪ್ರಕಟಿಸುತ್ತಿದ್ದ ಪಕ್ಷ ಪತ್ರಿಕೆ. ಇದರಲ್ಲಿ ಕನ್ನಡ, ಇಂಗ್ಲಿಷುಗಳಲ್ಲಿ ಲೇಖನಗಳು ಬರುತ್ತಿದ್ದವು. ಈ ಪತ್ರಿಕೆಯು ಈಗ ಕೆಲವು ತಿಂಗಳುಗಳಿಂದ ನಿಂತಿದೆ ಈ ಪತ್ರಿಕೆಗೆ ಶ್ರೀಮತಿ ಸೋಜರು ಪ್ರಾರಂಭದಲ್ಲಿ ಮಾತ್ರ ಸಂಪಾದಿಕೆಯಾಗಿದ್ದು ಆ ಮೇಲೆ ಶ್ರೀ ಎಸ್ ಇ. ಡಿ ಕನ್ನರು ಸಂಪಾದಕರಾಗಿದ್ದರು.

ಕೊಂಕಣಿ ದಿರ್ವೆ:—೧೯೨೨ರಲ್ಲಿ ಪ್ರಾರಂಭವಾದ ಕೊಂಕಣಿ ಭಾಷೆಯ ಮಾಸಪತ್ರಿಕೆ. ಈ ಪತ್ರಿಕೆ ಕೆಲವು ಕಾಲ ವಾರಪತ್ರಿಕೆಯಾಗಿ, ಪಕ್ಷ ಪತ್ರಿಕೆಯಾಗಿ ಪರಿಣಮಿಸಿ ಸುಮಾರು ೩೭ ವರ್ಷಕಾಲ ನಡೆಯಿತು. ಇದರಲ್ಲಿ ಕೆಲವೊಮ್ಮೆ ಕನ್ನಡದಲ್ಲಿಯೂ, ಇಂಗ್ಲಿಷಿನಲ್ಲಿಯೂ ಲೇಖಗಳು ಬರುತ್ತಿದ್ದುವು ರೋಮನ್ ಕೆಥೋಲಿಕರು ಹೊರಡಿಸುತ್ತಿದ್ದ ಈ ಪತ್ರಿಕೆಯಲ್ಲಿ ಕೆಥೋಲಿಕ ಸಮಾಜಕ್ಕೆ ಸಂಬಂಧಿಸಿದ ಲೇಖಗಳೇ ಹೆಚ್ಚಾಗಿ ಬರುತ್ತಿದ್ದುವು ಪ್ರಾರಂಭದಲ್ಲಿ ಕೊಡಿಯಾಲ್‌ಬೈಲ್ ಪ್ರೆಸ್ಸಿನಲ್ಲೂ, ಕಡೆಗೆ ಕೆನರಾ ಪ್ರಿಂಟಿಂಗ್ ಪ್ರೆಸ್ಸಿನಲ್ಲೂ ಅಚ್ಚಾಗುತಿತ್ತು ಅಲೆಕ್ಸ್ ಎ ಪ್ಯಾಸ್, ಬಿ ಎ., ಎಲ್. ಎಲ್. ಬಿ ಯವರ ಸಂಪಾದಕತ್ವದಲ್ಲಿ ಈ ಪತ್ರಿಕೆಯು ಉತ್ತಮ ರೀತಿಯಲ್ಲಿ ನಡೆಯುತ್ತಿತ್ತು.

ಪವಿತ್ರ ಆಂಜ್.—೧೯೩೭ನೇ ಇಸವಿ ಜನವರಿಯಿಂದ ಕೊಡಿಯಾಲ್‌ಬೈಲ್ ಪ್ರೆಸ್ಸಿನಲ್ಲಿ ಅಚ್ಚಾಗಿ ಪ್ರಕಟವಾಗುವ ಕೊಂಕಣಿ ಭಾಷೆಯ ಮಾಸಪತ್ರಿಕೆ. ಇದರಲ್ಲಿ ಕೆಥೋಲಿಕ್ ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ಕಥೆಗಳೂ ಲೇಖಗಳೂ ಪ್ರಕಟವಾಗುತ್ತಿವೆ. ಈ ಪತ್ರಿಕೆಯು ೧೯೩೮ರಲ್ಲಿ ಪ್ರಾರಂಭವಾಗಿ ಎರಡು ವರ್ಷಕಾಲ ನಡೆಯಿತು ಈ ಪತ್ರಿಕೆಯಲ್ಲಿ ಕನ್ನಡದಲ್ಲಿಯೂ ಲೇಖಗಳು ಬರುತ್ತಿದ್ದುವು ಈ ಪತ್ರಿಕೆ ಎರಡನೆಯ ವರ್ಷ ಉಡುಪಿ ಪ್ರಭಾಕರ ಪ್ರೆಸ್ಸಿನಲ್ಲಿ ಅಚ್ಚಾದಂತೆ ತೋರುತ್ತದೆ

ಸಮಾಜಚಿ ದಿವೊ (ಪಾಕ್ಷಿಕ): —ದಿವೊ ಪತ್ರಿಕೆಯನ್ನು ಶ್ರೀ ಜೆ ಬಿ. ಮಹಾದೊರವರು ಕೊಹಿನೂರ್ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಪ್ರಕಟಿಸುತ್ತಿದ್ದರು. ಸಮಾಜದ ಕುಂದುಕೊರತೆಗಳನ್ನು ನಿರ್ಭೀತಿಯಿಂದ ಬಯಲಿಗೆಳೆಯುತ್ತಿದ್ದ ಈ ಪತ್ರಿಕೆಯು ೧೯೩೭ನೆ ಏಪ್ರಿಲ್ ಹತ್ತನೆಯ ತಾರೀಕಿಗೆ ಪ್ರಾರಂಭವಾಗಿ ಸುಮಾರು ೧೬ ತಿಂಗಳುಗಳ ವರೆಗೆ ನಡೆಯಿತು.

ಸಾರಸ್ವತ (ವಾರ):— ಈ ಪತ್ರಿಕೆಯು ಪಕ್ಷಪತ್ರಿಕೆಯಾಗಿ ೧೯೪೪ನೇ ಇಸವಿಯಲ್ಲಿ ತಲೆಯೆತ್ತಿ ಕೆಲತಿಂಗಳು ತನ್ನ ಸಂಚಿಕೆಗಳನ್ನು ಪ್ರಕಟಿಸಿ, ಅನಂತರ ನಿಂತು ಬಿಟ್ಟಿತು ಆಗ, ದಿವಂಗತ ಶ್ರೀ ವಿ. ಎಸ್. ಕಾಮತರೂ, ಶ್ರೀ ವಿ ಎಸ್ ಕುಡ್ವರೂ ಪತ್ರಿಕೆಯ ಸಂಪಾದಕರಾಗಿದ್ದರು ಆನಂತರ ೧೯೪೧ನೇ ಇಸವಿಯಲ್ಲಿ ಶ್ರೀ ವಿ ಎಸ್ ಕುಡ್ವರು ಪುನಹ 'ಸಾರಸ್ವತ'ವನ್ನು ಚೇತನಗೊಳಿಸಿದರು ಶ್ರೀಯುತರ ಪ್ರೋತ್ಸಾಹದಿಂದ ಶ್ರೀ ಕುಡ್ಪಿ ವಾಸುದೇವ ಶೆಣೈಯವರ ಸಂಪಾದಕತ್ವದಲ್ಲಿ ೧೯೪೧ನೆಯ ಜುಲೈಯಲ್ಲಿ ಪ್ರಾರಂಭವಾದ "ಸಾರಸ್ವತ" ವಾರಪತ್ರಿಕೆಯನ್ನು ಈಗ ಶ್ರೀ ಕುಡ್ಪರೇ ಸಂಪಾದಿಸಿ ಪ್ರಕಟಿಸುತ್ತಿರುವರು ನವಭಾರತದ ಸಂಪಾದಕವಿಭಾಗದ ಶ್ರೀ ಬಿ ವಿ ಬಾಳಿಗರು ಇದರ ಸಂಪಾದಕವಿಭಾಗದಲ್ಲಿದ್ದು, ಲೇಖನಗಳನ್ನೂ ಕವನಗಳನ್ನೂ ಬರೆಯುತ್ತಿರುವರು ಈ ಪತ್ರಿಕೆಯಲ್ಲಿ ಧಾರ್ಮಿಕ ಲೇಖಗಳೂ ಕವಿತೆಗಳೂ ಕತೆಗಳೂ ಪ್ರಕಟವಾಗುವುವಲ್ಲದೆ, ಊರಪರವೂರ ವರ್ತಮಾನವೂ ಪ್ರಕಟವಾಗುವುದು

ಇಂಡಿಯನ್ ಮೆಗಜಿನ್. ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಒಚ್ಚಾಗುತ್ತಿತ್ತು ಶ್ರೀ ರೌಲೆದರ್ ಅವರು ಸಂಪಾದಿಸಿ ಪ್ರಕಟಿಸುತ್ತಿದ್ದರು

ಎಜ್ಯುಕೇಟೆಡ್ ಇಂಡಿಯಾ. ಕಕ್ಕಟ್ಟ್ ಡಿಸೋಜ, ಎಡಿಟರ್. ಸರಸ್ವತಿ ಪ್ರಿಂಟಿಂಗ್ ಪ್ರೆಸ್.

ವಿಸಿನ್ ಹೊಸದುರ್ಗದ ರಾಮನಗರದಿಂದ ವಿಸಿನ್ ಮಾಸಪತ್ರಿಕೆಯು ೧೯೩೮ರಿಂದ ಪ್ರಕಟವಾಗುತ್ತಿದೆ ರಾಮದಾಸ ಸ್ವಾಮಿಗಳ ಸಂದೇಶವನ್ನು ತಿಳಿಸುವುದಲ್ಲದೆ, ಆಧ್ಯಾತ್ಮ ವಿಷಯದ, ಭಕ್ತಿ ವಿಷಯದ ಅನೇಕ ಲೇಖನಗಳು ಪ್ರಕಟವಾಗುತ್ತವೆ

ಕೆನರಾ ಹೈಸ್ಕೂಲು ಮೆಗಜೀನ್: ೧೯೧೧ರ ಸುಮಾರಿಗೆ ಕೆನರಾ ಹೈಸ್ಕೂಲಿನಿಂದ ಪ್ರಕಟವಾಗುತ್ತಿದ್ದ ಇಂಗ್ಲಿಷ್ ತ್ರೈಮಾಸಿಕ. ಶ್ರೀ ಅಮ್ಮೆಂಬಳ ಬಾಲಕೃಷ್ಣ ಪೈಗಳವರು ಸಂಪಾದಕರು.

ದಿ ನೇ ಆಫ್ ಕ್ರೈಸ್ತ್ (ಇಂಗ್ಲಿಷ್ ತ್ರೈಮಾಸಿಕ): ಸಂಪಾದಕರು ರೆವರೆಂಡ್ ಪಿ. ಇ ಬುಖ್ಖಾರ್ಟ್, ಪಿ. ಎಚ್ ಡಿ. ಮತ್ತು ರೆವರೆಂಡ್ ಎಚ್ ವಿ. ಮಾರ್ಟಿನ್, ಎಂ ಎ., ಬಿ. ಡಿ. ಬಾಸೆಲ್ ಮಿಶನ್ ಛಾಪಖಾನೆಯವರು ಬಾಸೆಲ್ ಮಿಶನ್ ಲಿಟ್ರೇಚರ್ ಕಮಿಟಿಯವ ಪರವಾಗಿ ಅಚ್ಚು ಹಾಕಿಸಿ ಪ್ರಕಟಿಸುತ್ತಿರುವ ಇಂಗ್ಲಿಷ್ ತ್ರೈಮಾಸಿಕ. ೧೯೩೮ರಲ್ಲಿ ಪ್ರಾರಂಭವಾಯಿತು ಕ್ರೈಸ್ತ ಧರ್ಮದ ಮೇಲೆ ಉಪಯುಕ್ತವಾದ ಲೇಖನಗಳು ಬರುತ್ತಿವೆ

ಮಂಗಲೂರ್ (ಇಂಗ್ಲಿಷ್ ಮಾಸ): ೧೯೨೭ರಲ್ಲಿ ಮಂಗಳೂರು ಮಾಸಪತ್ರಿಕೆಯನ್ನು ಕೊಡಿಯಾಲಬೈಲು ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ, ಮಂಗಳೂರು ಕೆಥೋಲಿಕ್ ಎಸೋಸಿಯೇಶನಿನವರು ಪ್ರಕಟಿಸತೊಡಗಿದರು. ಈಗ ಈ ಮಾಸಪತ್ರಿಕೆಗೆ ಶ್ರೀ ಯು. ಕಣ್ಣಪ್ಪನವರು ಮನೇಜರರಾಗಿಯೂ. ರಾವ್ ಸಾಹೇಬ್ ಎ ಎಲ್ ಪಿಂಟೋರವರು ಸಂಪಾದಕರಾಗಿಯೂ ಇರುವರು.

ಇಂಡಿಯನ್ ಎಜ್ಯುಕೇಶನಲ್ ರಿವ್ಯೂ (ತ್ರೈಮಾಸಿಕ): ಶ್ರೀ ಪಿ ಇ ವಾರ್ಕೆಯವರು ಸಂಪಾದಿಸಿ ಕೊಡಿಯಾಲಬೈಲು ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಪ್ರಕಸುತ್ತಿದ್ದ ಇಂಗ್ಲಿಷ್ ತ್ರೈಮಾಸಿಕ ೧೯೩೬ರ ವರೆಗೆ ನಡೆಯಿತು.

ಇಂಡಿಯನ್ ಕ್ರಿಶ್ಚನ್ ಜರ್ನಲ್. ೧೯೦೩—ಳರ ಸುಮಾರಿಗೆ ಇಂಡಿಯನ್ ಕ್ರೈಸ್ಟಿಯನ್ ಜರ್ನಲ್ ಎಂಬ ಮಾಸಿಕವನ್ನು ಶ್ರೀ ಟಿ. ರೋಬರ್ಟ್ಸ್ (ರಿಟಾಯರ್ಡ್ ಮೆಜಿಸ್ಟ್ರೇಟ್) ಇವರು ಶಾರದಾ ಪ್ರೆಸ್ಸಿನಲ್ಲಿ ಅಚ್ಚುಹಾಕಿಸಿ ಪ್ರಕಸುತ್ತಿದ್ದರು

ಸನ್ಡೇ ನಿವ್ಸ್: ಇಂಗ್ಲಿಷ್ ವಾರಪತ್ರಿಕೆಯನ್ನು ಶ್ರೀ ಸಿ. ಆರ್ ಕಾಮತ ಮತ್ತು ಶ್ರೀ ಎಮ್. ಬಾಬುರಾಯ ಪ್ರಭುಗಳು ಸಂಪಾದಿಸಿ ಪ್ರಕಟಿಸುತ್ತಿದ್ದರು.

ಹ್ಯುಮನ್ ಎಫೇರ್: ಉಡುಪಿಯ 'ಮಣಿಪಾಲ್ ಪ್ರೆಸ್'ನಿಂದ ಹೊರಬರುವ ೧೯೪೦ರಲ್ಲಿ ಪ್ರಾರಂಭವಾದ ಇಂಗ್ಲಿಷ್ ಮಾಸಪತ್ರಿಕೆ. ಶ್ರೀ ಕೆ ಹೈದರ್ ಪ್ರಾರಂಭದಲ್ಲಿ ಸಂಪಾದಕರಾಗಿದ್ದರು. ಈಗ ಶ್ರೀ ಹರ್ಕಾಳರವರು ಸಂಪಾದಕರಾಗಿರುವರು. ಈ ಪತ್ರಿಕೆಯಲ್ಲಿ ಉತ್ತಮವಾದ ಲೇಖಗಳು ಬರುತ್ತಿವೆ

ಇಂಡಿಯನ್ ಕ್ರಾನಿಕಲ್ (ಇಂಗ್ಲಿಷ್ ವೀಕ್ಲಿ). ಅಮ್ಮೆಂಬಳ ಬಾಲಕೃಷ್ಣ ಪೈ, ಬಿ ಎ ,ಬಿ ಎಲ್.,ರವರು ಸಂಪಾದಿಸಿ ಪ್ರಕಟಿಸುತ್ತಿದ್ದ ವಾರಪತ್ರಿಕೆ. ಶಾರದ ಛಾಪಖಾನೆಯಲ್ಲಿ ಅಚ್ಚಾಗುತ್ತಿದ್ದಂತೆ ತೋರುತ್ತದೆ.

ಫ್ರೆಂಡ್ಸ್ ಒಫ್ ದಿ ಪೂವರ್: ೧೯೪೨ನೆಯ ದಸರಾ ಮಹೋತ್ಸವ ಕಾಲದಲ್ಲಿ ಪ್ರಾರಂಭವಾದ ದ ಕ.ದ ಏಕಮಾತ್ರ ಇಂಗ್ಲಿಷ್ ದೈನಿಕ ಶ್ರೀ ಮಂಗಳೂರು ಜಾರಪ್ಪ ಮತ್ತು ಬಿ. ನರ್ಸಪ್ಪ ಇವರು ಇದನ್ನು ಸಂಪಾದಿಸಿ ಪ್ರಕಟಿಸುವರು

ಎಲೋಸಿಯಸ್ ಕೋಲೆಜ್ ಮತ್ತು ಗವರ್ನ್‌ಮೆಂಟ್ ಕೋಲೆಜ್‌ಗಳಿಂದ ಪ್ರಕಟವಾಗುವ ವಾರ್ಷಿಕ ಸಂಚಿಕೆಗಳಲ್ಲಿ ಇಂಗ್ಲಿಷ್, ಕನ್ನಡ, ಹಿಂದಿ, ಸಂಸ್ಕೃತ ಮತ್ತು ಮಲೆಯಾಳಗಳಲ್ಲಿ ಲೇಖಗಳು ಬರುವುವು. ಮಂಗಳೂರಿನ ಕಾರ್ಮೆಲ್ಲೈಟ್ ಸಿಸ್ಟರ್ಸ್‌ನವರು ಸೈಂಟ್ ಆನ್ಸೆಸ್ ಕೋಲೆಜ್‌ನಿಂದ ಪ್ರಕಟಿಸುವ ವಾರ್ಷಿಕ ಸಂಚಿಕೆಯಲ್ಲಿ ಇಂಗ್ಲಿಷ್, ಫ್ರೆಂಚ್, ಕನ್ನಡ, ಮಲೆಯಾಳಗಳಲ್ಲಿ ಲೇಖಗಳು ಬರುವುವೆ ಗವರ್ನ್‌ಮೆಂಟ್ ಹೆಂಗುಸರ ಟ್ರೈನಿಂಗ್ ಸ್ಕೂಲ್ ಮತ್ತು ಹೈಸ್ಕೂಲ್‌ನಿಂದಲೂ ಮಿಲಾಗ್ರಿಸ್ ಸೆಕೆಂಡರಿ ಶಾಲೆಯಿಂದಲೂ ಪ್ರಕಟವಾಗುವ ವಾರ್ಷಿಕ ಸಂಚಿಕೆಗಳಲ್ಲಿಯೂ ಕನ್ನಡ, ಹಿಂದಿ, ಇಂಗ್ಲಿಷ್‌ಗಳಲ್ಲಿ ಲೇಖಗಳು ಪ್ರಕಟವಾಗುವುವು. ಜಪ್ಪು ಸಿಮ್ಮೆರಿಯಿಂದ ಪ್ರಕಟವಾಗುವ 'ಯುನಿಟಿ", ಎಲೋಸಿಯಸ್ ಕೋಲೆಜ್‌ನಿಂದ ಪ್ರಕಟವಾಗುವ "ಎಲೂವಿತಿಯನ್' ಮೊದಲಾದ ವಾರ್ಷಿಕ ಸಂಚಿಕೆಗಳು ಇಂಗ್ಲಿಷ್‌ನಲ್ಲಿ ಪ್ರಕಟವಾಗುವುವು

ಭಾರತ ಪತ್ರಿಕೋದ್ಯಮಕ್ಕೆ ಚೇತನವಿತ್ತುದು ಕಾಂಗ್ರೆಸ್!'

ಕಾಂಗ್ರೆಸ್ಸಿನ ಕುರಿತು ಪ್ರತಿಗಾಮಿ ಧೋರಣೆಯಿರುವ ಪತ್ರಿಕೆಗಳೂ — ಆ ಮಾತನ್ನು ಒಪ್ಪುತ್ತಿವೆ! —

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತಿನಲ್ಲಿ ಅಧ್ಯಕ್ಷ ಶ್ರೀ। ಸಿ. ಆರ್. ಶ್ರೀನಿವಾಸನ್‌ರವರ ಗಂಭೀರ ವಾಣಿ!

ಈ ಸಮ್ಮೇಳನದ ಅಧ್ಯಕ್ಷ ಪೀಠವಹಿಸಲು ನೀವು ಕಳಿಸಿದ ಆಮಂತ್ರಣವನ್ನು ಅದೇಕೊ ಸ್ವಲ್ಪ ಸಂಕೋಚಪಟ್ಟೇ ನಾನು ಸ್ವೀಕರಿಸಿದುದಾಗಿದೆ, ಅಂತೆಂದು ನೀವು ನನಗೆ ಕೊಟ್ಟ ಗೌರವವನ್ನು ವಿಸ್ಮರಿಸುವುದಿಲ್ಲ, ಆದರೆ ಅದರ ಜೊತೆಯಲ್ಲಿರುವ ಜವಾಬುದಾರಿಕೆಯನ್ನು ಯೋಚಿಸುತ್ತಿದ್ದೇನ ಕನ್ನಡ ಭಾಷ ಮತ್ತು ಸಂಸ್ಕೃತಿಯ ಕುರಿತು ಇನ್ನೂ ಹೆಚ್ಚು ಜ್ಞಾನ ನಾನು ಪಡೆಯಬೇಕಿತ್ತು ಎಂದು ನನಗೆ ಅನ್ನಿಸುತ್ತದೆ, ಹೇಗಿದ್ದರೂ ಇದೊಂದು ಪತ್ರಿಕೋದ್ಯೋಗಿ ಸಮ್ಮೇಳನವಲ್ಲವೇ ಎಂಬ ಧೈರ್ಯದಿಂದ, ಈ ಉದ್ಯೋಗದ ಕುರಿತು ಹೆಚ್ಚಿನ ಜ್ಞಾನ ಮತ್ತು ಅನುಭವ ಸಂಗ್ರಹಿಸಬಹುದೆಂದು ನುಂದೆ ಬಂದಿರುತ್ತೇನ ಕಳೆದ ಮೂವತ್ತು ವರ್ಷಗಳಿಂದ ದಕ್ಷಿಣ ಭಾರತದ ಅತ್ಯಂತ ಪ್ರಾಚೀನ ತವಳು ದಿನಪತ್ರಿಕೆಯನ್ನು ನಡೆಸುವ ಜವಾಬ್ದಾರಿಕೆಯಲ್ಲಿ ಭಾಗವಹಿಸಿದ್ದೇನೆ ದಕ್ಷಿಣ ಭಾರತದ ಮಹಾಮೇಧಾವಿ ಪತ್ರಿಕೋದ್ಯೋಗಿಯಿಂದ ಈ ಕೈಗಾರಿಕೆಯ ಪಾರ ಕಲಿತ ಆದುದರಿಂದ ಹೊರಗಿಂದ ಅಗ್ರಹದ ಕರೆಬಂದಾಗ, 'ನಾನು ಇತರರಿಗೆ ತಿಳಿಸಿದ ವಿಷಯ ಒಂದಿಷ್ಟಿದೆ- ಅದನ್ನು ತಿರಸ್ಕರಿಸಬಾರದು' ಎಂದು ನನಗನ್ನಿಸಿತ, ಆ ಉದ್ದೇಶಸಾಧನೆಗಾಗಿ ಇಲ್ಲಿಗೆ ಬಂದಿರುತ್ತೇನೆ—ನೀವು ನನ್ನ ಧಾರಾಳ ಉಪಯೋಗ ಪಡೆಯಬಹುದಾಗಿದ ಕರ್ನಾಟಕಕ್ಕೆ ಸಂಬಂಧಿಸಿದ ವಿವಾದಾಸ್ಪದ ವಿಷಯಗಳನ್ನು ಪರಿಷತ್ತಿಗೆ ಚರ್ಚೆಗೊಪ್ಪಿಸಿ, ಈ ರಾಷ್ಟ್ರದ ಪತ್ರಿಕೋದ್ಯಮ, ಅದ ಹೇಗೆ ಬೆಳೆಯಿತು ಮುಂತಾದ ವಿಷಯಗಳನ್ನು ಮಾತ್ರ ನನ್ನ ಭಾಷಣದಲ್ಲಿ ತೋಲಬಿಚ್ಚಿಸುತ್ತೇನೆ—ಆ ವಿಷಯದ ಕುರಿತು ನೀವು ತಪ್ಪೆಣಿಸಲಾರಿರಷ್ಟೆ!

ರಾಜ್ಯಳಿಟನಾ ಚರಿತ್ರೆ ಒದುವ ವಿದ್ಯಾರ್ಥಿಗಳಿಗೆ ನಮ್ಮ ರಾಷ್ಟ್ರದ ಇತಿಹಾಸವು ಚಿತ್ತಾಕರ್ಷಕವಾಗಿರುತ್ತದೆ ಉತ್ಸಾಹದಿಂದ ದುಡಿಯುವ ಸಂಶೋಧನಾ ವಿದ್ಯಾರ್ಥಿಗೆ ಹೇರಳ ಸಲಕರಣೆಗಳು ದೊರೆಯುತ್ತಿವೆಯಾದರೂ ಈ ಕ್ಷೇತ್ರದ ಕುರಿತು ಯಥಾರ್ಥ ವಿಷಯಗಳನ್ನು ಕೊಡುವ ಇತಿಹಾಸ ಇನ್ನೂ ಬರೆಯಲ್ಪಟ್ಟಿದಿಲ್ಲ ಈ ರಾಷ್ಟ್ರದಲ್ಲಿ ಪತ್ರಿಕೋದ್ಯಮವು ಹೇಗೆ ಬೆಳೆಯಿತು ಎಂಬುದರ ಕುರಿತು ಕೆಲವು ಮುಖ್ಯ ರೂಪರೇಖೆಗಳನ್ನು ಮಾತ್ರ ನಾನು ನನ್ನೀ ಭಾಷಣದಲ್ಲಿ ಚಿತ್ರಿಸಲಿದ್ದೇನೆ ಮೊದಲನೆಯದಾಗಿ ಭಾರತೀಯ ಪತ್ರಿಕೋದ್ಯಮವು ಬ್ರಿಟಿಷ್ ಪತ್ರಿಕೋದ್ಯಮದ ಒಂದು ರೆಂಬೆ, ನಮ್ಮ ದೇಶದಲ್ಲಿ ಇತರ ಬ್ರಿಟಿಷ್ ಸಂಸ್ಥೆಗಳು ತಲೆಯೆತ್ತುವ ಕಾಲಕ್ಕೆ ಅದರ ಜನನವಾಯಿತು ಎಂದು ಹೇಳಬೇಕಾಗಿದೆ ಚೆನ್ನಾಗಿ ಪರಿಶೀಲಿಸಿ, ತೀವ್ರ ಮನನಮಾಡಿ ಆರಂಭಿಸಿದುದರ ಸಲರೂಪವಲ್ಲವದು—ಜಾನ್ ಕಂಪೆನಿ ಕಾಲದಲ್ಲಿ ನಡೆದ ಸಾಹಸಗಳಲ್ಲಿ ಇದೊಂದು ಎನ್ನಬೇಕಾಗಿದೆ ಅಂದಿನ ಮಿಥ್ಯಾ ಭಾರತ ಪತ್ರಿಕೋದ್ಯಮವು ಭಾರತೀಯರ ಹಿತಬಯಸಿದೂದೂ ಅಲ್ಲ, ಅವರ ಹೃದಯವನ್ನರಿತುದೂ ಇಲ್ಲ ಭಾರತ ಪತ್ರಿಕೋದ್ಯಮದ ಪಿತಾಮಹರಾದ ಜೇಮ್ಸ್ ಹಿಕ್ಕಿ ಮತ್ತು ಸಿಲ್ಕ್ ಬಕ್ಕಿಂಗ್ಹಾಮ್‌ರವರು ರಾಷ್ಟ್ರದ ಅದೃಷ್ಟ ಪರೀಕ್ಷೆಯ ಗೊಡನೆಯನ್ನೇ ತ್ಯಜಿಸಿ, ತಮ್ಮವರಿಗೆ ಈ ರಾಷ್ಟ್ರದಲ್ಲಿ ಒಂದು ಸ್ಥಾನ ಕೊಡಬೇಕು ಎಂಬೀ ಸ್ವಾರ್ಥಭದ್ರತೆಯ ಸ್ವಾರ್ಥಲೋಲುಪರಾಗಿದ್ದರು

ಈ ದೇಶದ ಜನರ ಸುಧಾರಣೆ ಮತ್ತು ಅಭ್ಯುದಯದ ಕೊಗನ್ನು ಮೊಟ್ಟ ಮೊದಲು ಹೊರಡಿಸಿದವರು ಕ್ರಿಶ್ಚನ್ ಮಿಶ್ಶನರಿಗಳೆ ಆದರೆ ಅವರ ಯತ್ನಗಳು ಈ ಲೋಕಕ್ಕಿಂತ ಪರಲೋಕದ ಮಟ್ಟಿಗೆ ಜನರ ಸ್ಥಾನಮಾನಗಳನ್ನೇರಿಸುವಂತಹ ಗಳಾಗಿದ್ದುವು ಎನ್ನಬೇಕಾಗಿದೆ ಆಡಳಿತ ಕ್ರಮವೇ ಅಸ್ಥಿರವಿರುವಾಗ, ಆಡಳಿತ ಕ್ರಮದ ಧ್ಯೇಯವೇನೆಂಬುದು ಇನ್ನೂ ನಿರ್ಧರಿಸಲ್ಪಡದ ಕಾಲದಲ್ಲಿ, ಆಡಳಿತದ ಸಂಕೀರ್ಣತೆಗೆ ಇನ್ನಷ್ಟು ಕೂಡಿಸಲು ದೇಶೋತ್ಪನ್ನದಾಯಕವಾದ ಪತ್ರಿಕೋದ್ಯಮವು ಹುಟ್ಟಲು ಹೆಚ್ಚು ಕಾಲ ಹೋಗಲಿಲ್ಲ ಸುಲಭವಾಗಿ ಸಾಮ್ರಾಜ್ಯ ಕಸಿದುಕೊಳ್ಳಲ ಜಾನ್ ಕಂಪೆನಿಯವರು ವ್ಯವಹಾರದ ಸೋಗು ಹಾಕಿಕೊಂಡಿದ್ದ ನಿಜ ಗಳವು ವ್ಯಾಪಾರವನ್ನೇ ತನ್ನ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿತ್ತು ಸರಕಾರ ಕೇವಲ ವ್ಯಾಪಾರ ದೃಷ್ಟಿಯನ್ನಿಟ್ಟುಕೂಂಡೇ ಸರಕಾರದ ಚಟುವಟಿಕೆಗಳು ನಿಯಂತ್ರಣಗೊಳಿಸಲ್ಪಟ್ಟಿದ್ದುವು ತಮ್ಮ ವ್ಯಾಪಾರ ವ್ಯವಹಾರಗಳ ಹಿತಾಶಯಗಳನ್ನು ಬಯಸಿ, ಅವರು ಕಾನೂನು ಮತ್ತು ನೈತಿಕತೆಯನ್ನು ಪೂರ್ಣವಾಗಿ ಲೋಪಗೊಳಿಸಿದ್ದರು ಇದನ್ನು ಸ್ಮರಿಸಿದರೆ ಆರಂಭದ ವಿಮರ್ಶಕರ ಮೇಲೆ ಅವರು ಕೈಕೊಂಡ ಕಾರ್ಯಕ್ರಮದ ಕುರಿತು ನಾವು ಆಶ್ಚರ್ಯಪಡಬೇಕಾಗಿಲ್ಲ ಆದರೆ ವಿಮರ್ಶೆಯ ಸ್ವರವು ಕ್ರಮೇಣ ಸಾರ್ವಜನಿಕರ ಕೊರಳಿನಿಂದ ಹೊರಡಲಾರಂಭವಾಗಲು, ತಡೆಯಿಲ್ಲದೆ ದೇಶಬಹಿಷ್ಕಾರ ಕಾಕುವ ಅವರ ಶಕ್ತಿ ಅವರಿಗೆ ನಿಷ್ಪ್ರಯೋಜನಕಾರಿಯಾಗಿ ಪರಿಣಮಿಸಿತು ೧೯ನೇ ಶತಮಾನದ ಸಾಮ್ರಾಜ್ಯವಾದಿಯ ಮನೋಭಾವನೆ ಸಾಮಾನ್ಯ ೨೦ನೇ ಶತಮಾನದ ಅವನ ಪರಂಪರೆಯವನಂತೆಯೇ ಇತ್ತು—ವಿಮರ್ಶಕರ ಬಾಯ್ಮುಚ್ಚಿಸಲು ಕರಿಣ ರೀತಿಯ ತಲೆಬಗ್ಗಿಸದ 'ಸನ್ಸರ್‌ಶಿಪ್' ನಿರ್ಬಂಧಗಳು ಆ ಕಾಲದಲ್ಲೂ ಆಗಾಗ ಜಾರಿಗೆ ಒತ್ತಿತ್ತಿದ್ದುವು ಭಾರತದ ರಾಜ್ಯಾಡಳಿತವು ನ್ಯಾಯಾ ಚಕ್ರವರ್ತಿಯ ಕೈಕೆಳಗೆ ಬರಲು ಒಂದು ರೀತಿಯ ಅಕ್ರಮಪರಿಸ್ಥಿತಿ ಕೊನೆಗೊಳ್ಳುವಂತಾಯ್ತು—ಆದರೆ ಫಲವೇನು? ಮತ್ತೊಂದು ಅಂತಹದೇ ಪರಿಸ್ಥಿತಿ ಅದರ ಬೆನ್ನು ಒಡಿಯುವಂತಾಯ್ತು

ಪರಕೀಯರ ರಾಜ್ಯಾಡಳಿತಕ್ಕೊಳಗಾದ ರಾಷ್ಟ್ರಕ್ಕೆ ಅದು ಅನಿವಾರ್ಯವೆನ್ನುವಾ ಆರಂಭದ ದಿನಗಳಲ್ಲಿ ಎಂಗ್ಲೋ ಇಂಡಿಯರ್ ಪತ್ರಿಕೆಗಳು ಧೈರ್ಯದಿಂದ ಹೋರಾಟವನ್ನು ಪ್ರತಿಭಟಿಸುತ್ತಿದ್ದುವು ರಾಜಕೀಯ ಹೋರಾಟ ಎದುರಿಸಲು ಆ ಪತ್ರಿಕೆಗಳಿಗೆ ಅಧಿಕಾರವನ್ನೇರ್ಪಡಿಸಲಾಗಿತ್ತು ಅನಂತರ, ತೀರಾ ಬೇರೆ ರೀತಿಯ ವಿವಿಧ ಧ್ಯೇಯಗಳನ್ನಿಟ್ಟುಕೊಂಡು ದೇಶೀಯ ಪತ್ರಿಕೆಗಳು ಅಂಕುರಿಸಿದುವು ಭಾರತ ದೇಶವು ನೇರಾಗಿ ಚಕ್ರಾಧಿಪತ್ಯಕ್ಕೊಳಗಾದೊಡನ ಎಂಗ್ಲೋ ಇಂಡಿಯರ್ ಪತ್ರಿಕೆಗಳನ್ನು ಸರಕಾರದಿಂದ ವಿಭಜಿಸಿದ ಪಂಗಡವು ಶಕ್ತಿಗುಂದುತ್ತಾ ಒಂತು ಕ್ರಮೇಣ ಆ ವಿಭಾಗದ ಪತ್ರಿಕೆಗಳಿಗೂ ಸರಕಾರಕ್ಕೂ ನಡುವೆ ಸಾರೂಪ್ಯವೊಂದು ಬೆಳಕು ಕಂಡಿತು ದೇಶೀಯ ಪತ್ರಿಕೆಗಳು ಶಕ್ತಿ ಮತ್ತು ಉದ್ವೇಶಗಳಲ್ಲಿ ಅಭಿವೃದ್ಧಿ ಹೊಂದುತ್ತ ಹೋದ ಹಾಗೆಲ್ಲಾ, ಮೇಲೆ ಹೇಳಿದ ಸಾರೂಪ್ಯವೂ ಬೆಳೆಯುತ್ತಾ ಬಂತು ವಿಕ್ಟೋರಿಯಾ ಮಹಾರಾಜ್ಞಿಯ ಆಡಳಿತ-ಪೂರ್ವ ಕಾಲದಲ್ಲಿ ಉತ್ಸಾಹಿ ಪ್ರಜಾಪ್ರತಿನಿಧಿಗಳಾಗಿದ್ದವರು ಸರಕಾರದ ಉತ್ಸಾಹೀ ಬೆಂಬಲಿಗರಾಗಿ ಮಾರ್ಪಾಡಾ ಹೊಂದುವ ದೃಶ್ಯ ಕಂಡುಬಂತು ಸರಕಾರದ ಧೋರಣೆಯು ಅರ್ಧ ಹೇಳು, ಪಾತ್ರವಹಿಸಿದ, ಸರಕಾರದ ಕಾರ್ಯಾಚರಣೆಗಳಿಗಾಗಿ ಶಕಗೊಡ್ಡಿ ಕ್ಷಮೆ ಬೇಡುವೇಷ ಧರಿಸಿದ ಎಂಗ್ಲೋ ಇಂಡಿಯರ್ ಪತ್ರಿಕೆಗಳ ವರ್ತನೆಯು, ಸಾರ್ವಜನಿಕ ಹಿತಕ್ಕಾಗಿ ಹೋರಾಡುವ ಇತರ ಸಹಪಾಠಿ ಪತ್ರಿಕೆಗಳಿಂದ ಅವನ್ನು ಬೇರ್ಪಡಿಸಲು ಕಾರಣವಾಯಿತು ಕಲವು ಕಾಲ ಇದು ಎಂಗ್ಲೋ ಇಂಡಿಯರ್ ಪತ್ರಿಕೆಗಳಿಗೆ ಒಂದು ಗೌರವಪೂರ್ಣ ಸ್ಥಾನ ಒದಗಿಸಿಕೊಟ್ಟಿತಾದರೂ ಅಂತ್ಯದಲ್ಲಿ ಅದೊಂದ ಮೌಲ್ಯದ ಗೌರವಾಗಿ ಪರಿಣಮಿಸಿತು ಸಾರ್ವಜನಿಕರ ಬೆಂಬಲದ ಅಭಾವವನ್ನು ಭರ್ತಿಮಾಡುವ ಶಕ್ತಿ ಸರಕಾರೀ ಪ್ರೋತ್ಸಾಹಕ್ಕಿಲ್ಲ, ಈ ಮಾತನ್ನು ರುಜುಪಡಿಸಲು ಭಾರತ ಪತ್ರಿಕೋದ್ಯಮದ ಇತಿಹಾಸದಲ್ಲಿ ಹಲವಾರು ದೃಷ್ಟಾಂತಗಳಿವೆ ಒಂದ ಕಾಲದಲ್ಲಿ ಎಂಗ್ಲೋ ಇಂಡಿಯರ್ ಪಕ್ಷದವರ ಭಾರೀ ಪ್ರೋತ್ಸಾಹಕ್ಕೊಳಗಾಗಿದ್ದ 'ಪಾಯನಿಯರ್' ಪತ್ರಿಕೆ ಇತ್ತೀಚೆಗೆ ಹಿಂದಿಯರ ವಶವರ್ತಿಯಾಗಿದೆ ಆತಿ ಪ್ರಾಚೀನ ಎಂಗ್ಲೋ ಇಂಡಿಯರ್ ಪತ್ರಿಕೆಯಾಗಿದ್ದ 'ಇಂಗ್ಲಿಷ್‌ಮನ್' ಪ್ರಕೃತ ತನ್ನ ಅಸ್ತಿತ್ವ ಕಳೆದುಕೊಂಡಿದೆ

ಭಾರತೀಯ ಪತ್ರಿಕೋದ್ಯಮದ ಪ್ರಾಚೀನ ಇತಿಹಾಸಕ್ಕೆ ಎಷ್ಟೇ ಪ್ರಾಧಾನ್ಯ ವಿರಲಿ, ಅದು ಭಾರತದ ಜನಜೀವನದಲ್ಲಿ ಸ್ಥಾನಪಡೆದುದು ಭಾರತವ ರಾಷ್ಟ್ರೀಯ ಕಾಂಗ್ರೆಸ್ಸಿನ ಜನನಾನಂತರವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ ಕಾಂಗ್ರೆಸ್ಸಿನ ವಿರುದ್ಧ ಪ್ರತಿಗಾಮಿ ಧೋರಣೆಯ ಪತ್ರಿಕೆಗಳು ಇರಬಹುದು, ಆದರೆ ಅವು ಕೂಡ ತಮ್ಮ ಜೈತನ್ಯ ಮತ್ತು ತತ್ವಗಳನ್ನು ಕಾಂಗ್ರೆಸ್ಸಿನಿಂದಲೇ ಪಡೆದಿರುವೆನೆಂಬುವನ್ನು ಅಲ್ಲಗಳೆಯಲಾರವು ಭಾರತೀಯ ರಾಜಕಾರಣ ಪಟುಗಳು ಆತಿಆಕಾಂಕ್ಷೆಗಳ ಮತ್ತು ಧ್ಯೇಯ-ಧೋರಣಗಳ ಕಿರಣಗಳಿಗೆ ಮಧ್ಯ ಕೇಂದ್ರ ಒದಗಿಸಿಕೊಟ್ಟಿದುದು ಕಾಂಗ್ರೆಸ್ಸು ಆರಂಭದಲ್ಲಿ ಯಾವುದೇ ಕರ್ತವ್ಯಶಕ್ತಿಯಾಗಲೀ ಯೋಜನೆ ನಿರೂಪಣೆಯ ಶಕ್ತಿಯಾಗಲೀ ಅದಕ್ಕಿರಲಿಲ್ಲ ದೈವೀಕ ಆತೃಪ್ತಿಯ ರೂಪವಿತ್ತು ಅದ ಕ್ಯಾಗ—೨ ಕಾಲದ ಅಸ್ತಿತ್ವ ಸರಕಾರದ ಮೇಲೆ ಅದೊಂದು ಹೆಸರಿಲ್ಲದ ಕ್ರಾಂತಿ ಹೂಡಿತ್ತು, ಅದನ್ನು ಊರ್ಜಿತಗೊಳಿಸಬೇಕೆಂಬ ದೂಪರಹಿತ ಅಸಯೊಂದೂ ಒಳಗಿಂದೊಳಗೆ ಸುಳಿಯುತಿತ್ತು ಇಂತಹ ಆಕಾರವಿಲ್ಲದ ಮುದ್ದೆಯ ಮೇಲೆ ಚಮ್ಮಟಿಕೆ ಹೊಡದು ಅದಕ್ಕೆ ರೂಪರೇಖೆಗಳನ್ನು ಕೊಡಲು ಭಾರತ ಪತ್ರಿಕೋದ್ಯಮವು ಒದ್ದಕಂಕಣವಾಯಿತು ಸೈರಣೆಯ ಚಳವಳವು ಚಿಕ್ಕ ರೀತಿಯ ಸುಧಾರಣೆಗಳಿಗೆಡೆಗೊಟ್ಟಿತು ಚಿಕ್ಕ ರೀತಿಯ ಸುಧಾರಣೆಗಳು ದೊಡ್ಡ ಸುಧಾರಣೆಗಳ ಶತ್ರುಗಳಾಗಿ ಕಂಡುಬಂದುವು ಮೊದಲು ಬಡಿಸಿದ ಒಂದಿಷ್ಟು, ಇನ್ನೂ ಹೆಚ್ಚಿಗ ಬೇಕೆನ್ನುವ ಹಸಿವೆಗೆ ಆಸ್ಪದಮಾಡಿಕೂಟ್ಟಿತು, ಕಾಂಗ್ರೆಸ್ಸಿಗೆ ತನ್ನ ಗುರಿ ಏನೆಂಬುದನ್ನು ನಿರ್ಧರಿಸಲು, ತನ್ನ ಅನುಮೋದನೆಯನ್ನು ಬೆಳೆಸಲು ೨೦ ವರ್ಷಗಳ ಅವಧಿ ಬೇಕಾಯಿತು—ಅಲ್ಲಿಂದ ಅದು ಉಳಿಸುವ ಮತ್ತು ಅಳಿಸುವ ಹಿತಗಳೊಳಗಣ ಹೋರಾಟವಾಗಿ ಪರಿಣಮಿಸಿತು ಅಂದಿನ ಆ ಸುಧಾರಣೆ ಮತ್ತು ಒತ್ತಾಟಗಳೊಳಗಣ

ಹೋರಾಟ ಇಂದಿನ ತನಕ ಮುಂದುವರಿಯುತ್ತ ಬಂದಿದೆ, ಆ ಹೋರಾಟದ ಕುರಿತು ನಿವರವಾಗಿ ಪರಿಶೀಲಿಸುವುದು ಇಂದಿನ ಈ ಪರಿಷತ್ತಿನ ಉದ್ದೇಶಕ್ಕೆ ಸಂಬಂಧಪಟ್ಟುದಲ್ಲ. ಈ ಪರಿಸ್ಥಿತಿಯ ಪರಿಣಾಮ ಮತ್ತು ಪ್ರತಿಕ್ರಿಯೆ ಪತ್ರಿಕೋದ್ಯಮದ ಮೇಲೆ ಯಾವ ರೀತಿಯಲ್ಲಾಯಿತ ಎಂಬುದನ್ನು ಮಾತ್ರ ನಾನು ಗಮನಿಸುತ್ತೇನೆ

ಬೆಳವಣಿಗೆಯ ಆರಂಭಕಾಲದಲ್ಲಿ ಕಾಂಗ್ರೆಸು ಕೇವಲ ಪಕ್ಷೀಯ ಕ್ರಾಂತಿಯನ್ನು ಪ್ರತಿಬಿಂಬಿಸುತ್ತಿತ್ತು ಹೊರತು ಸಾಮೂಹಿಕ ಕ್ರಾಂತಿಯ ಚಿಹ್ನಗಳು ಅದರಲ್ಲಿ ಕಂಡುಬರುತ್ತಿರಲಿಲ್ಲ ಬೇರಬೇರೆ ಪಕ್ಷಗಳು ಮಾತ್ರ ಇದರ ಸೌಲಭ್ಯವನ್ನು ಉಪಯೋಗಿಸಿ, ತಮ್ಮ ಹಕ್ಕಿನ ಕೇಳಿಕೆಗಳನ್ನೆಲ್ಲಾ ಸಾಮೂಹಿಕ ಕೇಳಿಕೆಗಳಂತೆ ರೂಪುಗೊಟ್ಟು ಮುಂದಿಟ್ಟರು. ಆದರ ಅವರು ಪಡೆದ ಶಿಕ್ಷಣವು—ಅವರ ಆತೃಪ್ತಿಗೆ ಅದು ಕೆಲವು ಮಟ್ಟಿಗೆ ಕಾರಣವಾಗಿದೆ—ಅವರನ್ನು ಅನಾಗರಿಕ ಜನಜಂಗುಳಿಯಿಂದ ಬೇರ್ಪಡಿಸಿತು ಮತ್ತು ಅವರ ಶಕ್ತಿಯನ್ನೂ ಅಸಹರಿಸಿಬಿಟ್ಟಿತು. ಸುಭದ್ರವಾಗಿ ಸ್ಥಾಪನೆಯಾದ ಶಕ್ತಿಯನ್ನು ಎದುರಿಸಲು ಸಾರ್ವಜನಿಕರ ಬೆಂಬಲ ದೊರಯದೆ ಯಾವ ಸಾರ್ವಜನಿಕ ಚಳಿವಳಿಯೂ ಸಮರ್ಥವಾಗಲಾರದು ತನ್ನ ಬೆಳವಣಿಗೆಯ ಎರಡನೆಯ ಅಧ್ಯಾಯದಲ್ಲಿ, ಈ ನ್ಯೂನತೆಯನ್ನು ನಿವಾರಿಸಲೋಸುಗ, ಸಾರ್ವಜನಿಕರಿಗೆ ಅನರ ಹಕ್ಕು ಮತ್ತು ಸ್ಥಾನಮಾನಗಳ ಕುರಿತು ನೈಜಪ್ರೇಮ ಹುಟ್ಟಿಸುವಂತೆ ಶಿಕ್ಷಣಕೊಡುವ ಪ್ರಚಾರಕಾರ್ಯವನ್ನು ಕಾಂಗ್ರೆಸ್ಸು ಸೈರಣೆಯಿಂದ ಕೈಕೊಂಡಿತು ಈ ಪ್ರಚಾರದ ಅವಶ್ಯಕತೆಗಳಿಂದಾಗಿ, ದೇಶೀಯ (ದೇಶಭಾಷೆಗಳ) ಪತ್ರಿಕೋದ್ಯಮವು ಜೀವನ ಮತ್ತು ಶಕ್ತಿ ಪಡೆಯುವಂತಾಗಿ, ರಾಜಕೀಯ ಚಳವಳದಲ್ಲಿ ಅದು ಅಗ್ರಸ್ಥಾನ ಪಡೆಯುವಂತಾಯ್ತು ದೇಶೀಯ ಪತ್ರಿಕೋದ್ಯಮದ ಶಕ್ತಿತೆಗಳನ್ನು ಇನ್ನೂ ಪೂರ್ಣ ನಿರ್ಧರಿಸಿದುದಿಲ್ಲ, ಅವನ್ನು ಪೂರ್ಣ ನಿರ್ಧರಿಸುವ ತನಕ ರಾಷ್ಟ್ರೀಯ ಚಳವಳಕ್ಕೆ ಪೂರ್ಣ ಶಕ್ತಿ ದೊರೆಯದು ಆಂಗ್ಲ ಭಾಷಾ ಪತ್ರಿಕೋದ್ಯಮದ ಹೊಳಪು ಮಂದವಾದುದಿಲ್ಲ—ಮೇಧಾವಿ ಪತ್ರಿಕೋದ್ಯೋಗಿಗಳು ಈಗಲೂ ಆ ಕಡೆ ಸೆಳೆಯಲ್ಪಡುತ್ತಿದ್ದಾರೆ ದೇಶೀಯ ಪತ್ರಿಕೋದ್ಯಮದಲ್ಲಿ ಪ್ರವೇಶಿಸುವವರಲ್ಲಿ ಆ ಉದ್ಯೋಗಕ್ಕೆ ಬೇಕಾದ ಜ್ಞಾನ ಮತ್ತು ಇತರ ಸಲಕರಣೆಗಳಿರುವುದಿಲ್ಲ, ಇದೊಂದು ದೌರ್ಭಾಗ್ಯವೆನ್ನಲೇ ಬೇಕಾಗಿದೆ ದೇಶೀಯ ಪತ್ರಿಕೋದ್ಯಮವು ಎದುರಿಸಬೇಕಾದ ಅಪಾಯಗಳ ಸಂಖ್ಯೆಯು ಆಂಗ್ಲ ಭಾಷಾ ಪತ್ರಿಕೋದ್ಯಮವು ಎದುರಿಸಲಿರುವ ಅಪಾಯಗಳಿಗಿಂತ ಹೆಚ್ಚಿದೆ, ಸರಕಾರವೂ ಅದರ ಕಡೆಗೆ ಸಂಶಯಾತ್ಮಕ ದೃಷ್ಟಿಯಿಂದ ನೋಡುತ್ತಿದೆ—ಕಾರಣ ಅದರ ಭಾಷೆ ಸರಕಾರಕ್ಕೆ ಅರ್ಥಮಾಡಿಕೊಳ್ಳಲು ಬರುವುದಿಲ್ಲ; ಆರ್ಥಿಕ ದೃಷ್ಟ್ಯಾ ಅದು ಶಕ್ತಪೂರ್ಣವಾಗಿಲ್ಲ—ಕಾರಣ ಜ್ಯಾಹೀರಾತುಗಳಿಂದ ಒದಗಬಹುದಾದ ಲಾಭವನ್ನು ವೃದ್ಧಿಗೊಳಿಸುವ ಯತ್ನಗಳು ಈ ವರೆಗೆ ನಡೆದುದಿಲ್ಲ. ಆದರೆ ಲಕ್ಷಗಟ್ಟಲೆ, ಮಿಲಿಯಗಟ್ಟಲೆ ಪ್ರತಿಗಳು ಖರ್ಚಾಗುವ ಪತ್ರಿಕೋದ್ಯಮವು ಭಾರತಕ್ಕೆ ಬೇಕೆಂದಾದರೆ ದೇಶೀಯ ಪತ್ರಿಕೆಗಳಿಂದ ಮಾತ್ರ ಅದು ಸಾಧ್ಯ. ಇದರ ಪ್ರತ್ಯಕ್ಷ ಪ್ರದರ್ಶನ ಬಂಗಾಲದಲ್ಲಿ ನೋಡಬಹುದು ಅಲ್ಲಿ ಪ್ರಕಟವಾಗುವ 'ಆನಂದ ಬಜಾರ್' ಪತ್ರಿಕೆಯ ಪ್ರತಿಗಳು ಖರ್ಚಾಗುವಷ್ಟು ಭಾರತದ ಬೇರಾವ ಪತ್ರಿಕೆಗಳೂ ಖರ್ಚಾಗುವುದಿಲ್ಲ

ಭಾರತ ಪತ್ರಿಕಾ ವ್ಯವಸಾಯವು ಇಂದು ಮೂರು ಪಂಗಡಗಳಾಗಿ ವಿಭಾಗಿಸಲ್ಪಟ್ಟಿದೆ—ಎಂಗ್ಲೋ ಇಂಡಿಯರ್, ಇಂಡೋ ಇಂಗ್ಲಿಷ್ ಮತ್ತು ದೇಶೀಯ ಪತ್ರಿಕೆಗಳು ಇವುಗಳಲ್ಲಿ ಆರ್ಥಿಕ ದೃಷ್ಟಿಯಲ್ಲಿ, ವ್ಯವಹಾರ ಸ್ವಪಂಚದ ಮತ್ತು ಸರಕಾರದ ಬೆಂಬಲ ಪಡೆದಿರುವ ಮೊದಲ ಪಂಗಡವು ಅತ್ಯಂತ ಪ್ರಭಾವಶಾಲಿಯಾಗಿರುವುದು ರಾಜಕೀಯ ದೃಷ್ಟ್ಯಾ, ಎರಡನೆಯ ಪಂಗಡವು, ವಿವಿಧ ರಾಜಕೀಯ ಪಕ್ಷ ಮುಖಂಡರುಗಳ ಮುಖಪತ್ರಿಕೆಯಾಗಿದ್ದು ಅತ್ಯಂತ ಬಲಶಾಲಿಯಾಗಿದೆಯಷ್ಟು ಬಹುದು ಮೂರನೆಯ ಪಂಗಡವು ಜನಸಾಮಾನ್ಯರ ಸಂಪರ್ಕದಿಂದ ಅಧಿಕಾರಯುಕ್ತವಾಗಿವೆ ಇತ್ತೀಚೆಗೆ, ಪತ್ರಿಕಾಸ್ವಾತಂತ್ರ್ಯ ಮತ್ತು ಇತರ ಹಿತರಕ್ಷಣೆಗಳ ಸಲುವಾಗಿ ಈ ನೂರು ಪಂಗಡಗಳೂ ಒಂದಾಗಿ ಭ್ರಾತೃತ್ವದ ನೈತ್ರಿ ಸ್ಥಾಪಿಸಲು ಯತ್ನಿಸುತ್ತವೆ ಆದರೆ ಈ ಮೈತ್ರಿಯು ಸುದೃಢವಾದುದಿಲ್ಲ—ಕೆಲವು ಸನ್ನಿವೇಶಗಳಲ್ಲಿ ಹಾಗು ರಾಜಕೀಯ ಭಿನ್ನಾಭಿಪ್ರಾಯಗಳಲ್ಲಿ ನೃತ್ತಿಯ ಔಚಿತ್ಯದ ಮೇರೆಯನ್ನೂ ಅದು ಮೀರುವುದುಂಟು ಆದರ ಪರಸ್ಪರ ನಿಕಟಸಂಬಂಧವು ಆದರ ಗೌರವ, ತಾಳ್ಮೆ ಸಹಿಷ್ಣುತೆ, ಜಾಗರೂಕತೆಯ ನೇಲ್ಪಂಬ್ತಿಯೂ ಪತ್ರಿಕೆಗಳ ಶಕ್ತಿ ಸಾಮರ್ಥ್ಯವನ್ನು ಅಜರಾಮರಗೊಳಿಸಿ, ಕೀರ್ತಿಭಾಜನವಾಗುವಂತೆ ಸಾಗುತ್ತಿವೆ ದೇಶದ ವಿವಿಧ ಭಾಗಗಳಲ್ಲಿರುವ ಪತ್ರಿಕೋದ್ಯೋಗಿ ಸಂಘಗಳಲ್ಲದೆ, ಅಖಿಲ ಭಾರತಕ್ಕೆ ಸಂಬಂಧಪಟ್ಟ, 'ಹಿಂದೀಯ ಮತ್ತು ವೌರ್ವಾತ್ಯ ಪತ್ರಿಕಾ ಸಮಾಜ' ಮತ್ತು 'ಅಖಿಲ ಭಾರತ ಪತ್ರಿಕಾಕರ್ತರ ಪರಿಷತ್ತು' ಎಂಬ ಪ್ರತ್ಯೇಕ ಎರಡು ಸ್ಪಾಮುಖ್ಯ ಸಂಸ್ಥೆಗಳಿವೆ ಇವು ಮೇಲಿನ ಮೂರು ಪಂಗಡಗಳ ಹಿತಗಳಿಗೂ ರಕ್ಷಣಾಬಾಧ್ಯವಾಗಿದ್ದು, ಭಾರತದ ಪತ್ರಿಕೋದ್ಯಮದ ಬೆಳವಣಿಗೆಗೆ ಅತ್ಯಮೂಲ್ಯ ಸೇವೆ ಸಲ್ಲಿಸಿವೆ ನೊದಲನೆಯ ಸಂಸ್ಥೆಯು ಪತ್ರಿಕೋದ್ಯಮದ ವಾಣಿಜ್ಯ ವ್ಯವಹಾರಗಳನ್ನು ನೋಡಿಕೊಳ್ಳುತ್ತದೆ, ಅದು ಪ್ರತಿಯೊಬ್ಬರ ಹಿತಸಾಧಿಸುವಂತಹದ್ದಾಗಿರಬೇಕಾದರೆ, ನಾನು ಎಣಿಸುವಷ್ಟರ ಮಟ್ಟಿನ ಪ್ರಾತಿನಿಧಿಕ ಸಂಸ್ಥ ಅದು ಆಗಿಲ್ಲ ಎನ್ನಬೇಕಾಗಿದೆ ಎರಡನೆಯದು ಸರಕಾರಕ್ಕೂ ಪತ್ರಿಕೆಗಳಿಗೂ ಇರುವ ಸಂಬಂಧದ ಕುರಿತು ನೋಡಿಕೊಳ್ಳುತ್ತದೆ. ಯುದ್ಧದ ಕಠಿಣಪ್ರಸಂಗಗಳಲ್ಲಿ ಎರಡಕ್ಕೂ ಸಾಮಾನ್ಯ ರೀತಿಯ ಒಂದು ಕ್ಷೇತ್ರದ ಅವಶ್ಯಕತೆಯು ಎಷ್ಟರ ಮಟ್ಟಿನ ಪ್ರಯೋಜನಕಾರಿ ಎಂಬುದನ್ನು ಈ ಎರಡು ಸಂಸ್ಥೆಗಳೂ ಮನಗಂಡಿವೆ ಅವು ಯುದ್ಧಕಾಲದಲ್ಲಿ ಕಾರ್ಯ ನಿರ್ವಹಿಸಿದಂತೆ ಶಾಂತಿಕಾಲದಲ್ಲಿಯೂ ಕಾರ್ಯನಿರ್ವಹಿಸಿಕೊಂಡಿರುವುದಾದರೆ, ಇನ್ನಷ್ಟು ಶಕ್ತಿ ಪೂರ್ಣವಾದ, ದೇಶಸೇವೆಯನ್ನು ಕೈಕೊಳ್ಳಲು ಇನ್ನಷ್ಟು ಉತ್ಸಾಹಪೂರ್ಣವಾದ, ಪತ್ರಿಕೋದ್ಯಮವು ಬೇಗನೇ ಉದಯಿಸಬಹುದೆಂದು ನಿರೀಕ್ಷಿಸಬಹುದಾಗಿದೆ

ಪತ್ರಿಕೋದ್ಯೋಗಿ

[ಜಿ. ಎಂ. ಇದಿನಬ್ಬ]

ಕೈಯ್ಯಲಿರುವುದು ಕಾಗದದ ಹಾಳೆಗಳೊ
ನ್ಯಾಯದಲಿ ಬರೆಹಗಳ ಬರೆಯುವಿಯೊ ನೀನು?
ಪತ್ರಿಕೋದ್ಯೋಗಿ ಎಂದುಸುರಿ ಮೆರೆಮೆರೆದು
ಖ್ಯಾತಿಯನು ಗಳಿಸಲಿಕೆ ಹವಣಿಕೆಯೊ ಏನು?

ಏನೇನ ಬರೆಯುತ್ತ ಖ್ಯಾತಿಯನು ಒಲಿಸಿದೊಡೆ
ಎಣ್ಣೆ ಕಾಣದ ದೀಪದಂತೆಲ್ ನಿನ್ನ ಬೆಳಕು!
ಜನಗಣಕೆ ಮೆಚ್ಚುಗೆಯ ಸಾಹಿತ್ಯ ಹೊರಗೆಡಹಿ
ಗುಣಗಳಿಗೆ ತಲೆಬಾಗಿ ನೀಗಯ್ಯ ಹುಳುಕು!

ವ್ಯಕ್ತಿಗಳ ದ್ವೇಷದಲಿ ಮನವನ್ನು ಕೊರೆಕೊರೆವ
ಯುಕ್ತಿಯುತ ಲೇಖಗಳ ಬರೆಯುವುದೆ ಚೀಡ!
ಪಕ್ಷಪಾತಗಳ ಹೊದೆದಟ್ಟಿ ನೀತಿ ಬೋಧನೆಯ—
ಲಕ್ಷ ರೆಹಗಳ ನಿರ್ಮಿಸುತ ನೀಡಾ!

ಬಳಪಂಥವ ತುಳಿದು ಶಕ್ತಿಯುತ ಸಾಹಿತ್ಯ—
ಬರೆಯುತಲಿ ಹರುಷದಲಿ ಮುನ್ನುಗ್ಗಿ ನೀಡು
ಲೇಖಪ್ರಿಯತೆಯನು ಪಡೆವ ಕೃತಿಗಳನು
ಕೊಟ್ಟಾಗ ದಿಟವಾಗಿ-ಅದು ಜನಗಣದ ಹಾಡು

ARE YOU A SUBSCRIBER?

IF NOT, READ IT TODAY! ENROLL YOURSELF AS A SUBSCRIBER"

Remember it is high time to do so

"FORUM"--"SOUND"

[Front rank journals of 1944]

Local Agents R. V. KAMATH & CO., Car Street Mangalore.

ಪತ್ರಿಕಾ ಸ್ವಾತಂತ್ರ್ಯ ರಾಷ್ಟ್ರದ ಜೀವಾಳ!

=ಅದನ್ನು ರಕ್ಷಿಸುವ ಹೊಣೆಗಾರಿಕೆ ಪತ್ರಿಕೋದ್ಯೋಗಿಗಳದು=

"..... ಪತ್ರಿಕೆಗಳು ಸಂಘಟನೆ ಹೊಂದಬೇಕು—ಕೆಲವು ನಿರ್ಬಂಧಕ್ಕೊಳಗಾಗಿ ತತ್ತರಿಸುವಾಗ ಉಳಿದ ಹಲವು ಭುಜ ಹಾರಿಸುವುದಲ್ಲ—ಸ್ವಾತಂತ್ರ್ಯಾಪಹಾರ ಆಗುವಲ್ಲೆಲ್ಲಾ ಒಕ್ಕೊರಲಿನಿಂದ ಪ್ರತಿಭಟಿಸಲೇಬೇಕು....."

[ಬರೆದವರು. **ಶ್ರೀ ಬಿ. ವಿ. ಬಾಳಿಗಾ**]

ಪತ್ರಿಕೆಗಳು ದೇಶದ ಅಭಿವೃದ್ಧಿಯ ಜೀವಾಳ ಎಂಬುದನ್ನು ಯಾವ ಕಾಲಕ್ಕೂ ಅಲಕ್ಷಿಸಲಾಗುತ್ತದೆಯೇ? ಅಂತಹ ಪತ್ರಿಕೆಗಳಿಗೆ ನಿರಾತಂಕವಾಗಿ ಲೇಖನಿ ತಿರುಗಿಸುವ ಸ್ವಾತಂತ್ರ್ಯ ದೊರೆತರೆ ಮಾತ್ರ ದೇಶದಲ್ಲಿಯ ಕುಂದು ಕೊರತೆಗಳು ನಿವಾರಣೆಯಾಗಿ ದೇಶವು ಏಳ್ಗೆಯ ಹಾದಿ ತುಳಿಯಬಹುದಾಗಿದೆ. ಇಂದು ಅಮೇರಿಕಾ, ಬ್ರಿಟೈನ್, ರಷ್ಯಗಳಂತಹ ರಾಷ್ಟ್ರಗಳು ಏಳ್ಗೆ ಹೊಂದಲು ಕಾರಣ ವಾದುದು ಅಲ್ಲಿಯ ಪತ್ರಿಕೆಗಳು ಅನುಭವಿಸುತ್ತಿರುವ ಅಮಿತ ಸ್ವಾತಂತ್ರ್ಯ. ಆ ರಾಷ್ಟ್ರಗಳಲ್ಲಿ ಪತ್ರಿಕೋದ್ಯಮ ಜನಮಾನ್ಯವಾಗಿದೆ ಮಾತ್ರವಲ್ಲ, ರಾಜ ಮಾನ್ಯವೂ ಆಗಿದೆ. ಅಂತಹ ಸ್ಥಿತಿ ಭಾರತದ ಪತ್ರಿಕೆಗಳಿಗೆ ಒದಗದೆ ಇರುವಷ್ಟು ಕಾಲ ದೇಶಕ್ಕೆ ಸದ್ಗತಿ ದೊರೆಯದೆಂಬುದು ನಿರ್ವಿವಾದ

ಭಾರತ ದೇಶದಲ್ಲಿ ಇಂದು ಪತ್ರಿಕೆಗಳ ಸ್ಥಿತಿ ಹೇಗಿದೆ ಎಂಬುದನ್ನು ಒಮ್ಮೆ ವಿವೇಚಿಸೋಣ. ದೇಶದ ರಾಜಕೀಯ, ಸಾಮಾಜಿಕ ಹಾಗು ಆರ್ಥಿಕ ಸ್ಥಿತಿಗತಿಗಳ ಬೆನ್ನೆಲುಬಿನಂತಿರುವ ಪತ್ರಿಕೆಗಳ ಅಮೂಲ್ಯ ಸ್ವಾತಂತ್ರ್ಯವು ಇಂದು ಗುರುತ್ವಮಧ್ಯದಲ್ಲಿ ಡೋಲಾಯಮಾನವಾಗಿ ತಿರುಗುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಸೆನ್ಸ್‌ರ್‌ಶಿಪ್, ಡಿಫೆನ್ಸ್ ಕಾನೂನು ಇವೇ ಮೊದಲಾದ ಉಗ್ರ ಸ್ವರೂಪಗಳು ಪತ್ರಿಕೋದ್ಯಮವ ಪ್ರಗತಿಯ ಹಾದಿಯಲ್ಲಿ ಕಲ್ಲುಮುಳ್ಳುಗಳಾಗಿ ನಿಂತಿವೆ.

'ಸೆನ್ಸರ್‌ಶಿಪ್'—'ಪ್ರೆಸ್ ಎಡ್ವೈಸಿಂಗ್'

ಎರಡೂ ಇಂಗ್ಲಿಷ್ ಶಬ್ದಗಳು—ಅವುಗಳಿಗೆ ಸರಿಸಾಟಿಯಾಗುವ ಅನುಕೂಲ ಕನ್ನಡ ಶಬ್ದಗಳೇ ಸಿಗುವುದಿಲ್ಲ. ಹೊಸ ಶಬ್ದಗಳನ್ನು ಕಲ್ಪಿಸಿಕೊಳ್ಳಲೂ ಮನಸ್ಸು ಒಗ್ಗುವುದಿಲ್ಲ ನಮಗೆ ಬೇಡ ಅವು! ನಮ್ಮ ಪತ್ರಿಕಾ ವ್ಯವಸಾಯವು ಅವುಗಳಿಂದ ದೂರವಾಗಿರುವಂತೆ ನೋಡುವಾ.

ಸೆನ್ಸರ್‌ಶಿಪ್—ಯುದ್ಧಯತ್ನಗಳಿಗೆ ವಿಘ್ನಕಾರಿಯಾಗುವ ವಿಷಯಗಳನ್ನು ಪ್ರತಿಭಟಿಸಲು ಅದರ ಹೆಚ್ಚಿನ ಪ್ರಯೋಜನವಾಗುವ ಕ್ರಮ! ಆದರೆ ಇಂದು ಅದರ ಸ್ವರೂಪ ತೀರಾ ಬೇರೆಯೇ ಆಗಿ ಬಿಟ್ಟಿದೆ. ಯುದ್ಧದ ನೆವಹೂಡಿ, ಪತ್ರಿಕೆಗಳು ಈಗ ಅನುಭವಿಸುತ್ತಿರುವ ಅಲ್ಪಸ್ವಲ್ಪ ಸ್ವಾತಂತ್ರ್ಯವನ್ನೂ ಸಂಪೂರ್ಣ ನುಂಗಲು ಅದು ಹವಣಿಸುತ್ತದೆ. ಕಳೆದ ಮಹಾಯುದ್ಧಕಾಲದಲ್ಲಿ ಅಷ್ಟೊಂದು ಕಠಿಣರೀತಿಯಲ್ಲಿ ಅದು ಜ್ಯಾರಿಯಲ್ಲಿದ್ದಿಲ್ಲವಾದರೆ ಇಂದಿನ ಜಾಗತಿಕಸಂಗ್ರಾಮದಲ್ಲಿ ಅದು ದಿನಚರಿಯ ಮಾತಾಗಿ ಬಿಟ್ಟಿದೆ ಕೇವಲ ಯುದ್ಧ ಸಂಬಂಧವಾದ ವಿಚಾರಗಳನ್ನು ಮಾತ್ರವಲ್ಲ, ಇತರ ರಾಜಕೀಯ, ಆರ್ಥಿಕ ವಿಚಾರಗಳನ್ನು ಪ್ರಕಟಿಸುವುದಿದ್ದರೆ ಅವುಗಳನ್ನೂ ಸರಕಾರದ ಪ್ರೆಸ್ ಸಲಹೆಗಾರರಿಗೆ ತೋರಿಸಿ ಅವರು ಮಂಜೂರು ಮಾಡಿದ ಅಂಶವನ್ನು ಮಾತ್ರ ಪ್ರಕಟಿಸಬೇಕು! ಎಂತಹ ಘೋರ ಶಾಸನವಪ್ಪಾ ಇದು!

ಮಹಾದೇವರ ನೆನಪು

ಒಂದೊಮ್ಮೆ ಪತ್ರಿಕಾಕರ್ತರ ಸಮ್ಮೇಳನ ಜರಗುವ ಕಾಲಕ್ಕೆ ದಿವಂಗತ ಮಹಾದೇವ ದೇಸಾಯಿಯನರು ಫೋತಾನ್ ಜೋನೆವ್‌ರೊಡನೆ ಹೇಳಿದ ಒಂದು ಮಾತು ಇಲ್ಲಿ ನೆನಪಿಗೆ ಬರುತ್ತಿದೆ. "ಪ್ರೆಸ್ ಎಡ್ವೈಸಿಂಗ್ ಪದ್ಧತಿಯ ಕುರಿತ ಪರಿಪತ್ತಿನಲ್ಲಿ ಉಸುರೆತ್ತ ಬೇಡಿ. ಅಂತಹ ಪದ್ಧತಿ ಪತ್ರಿಕೋದ್ಯಮದ ಬೆಳವಣಿಗೆಗೆ ಹಾನಿಕರ ಹೊರತು ಯಾವ ರೀತಿಯಲ್ಲೂ ಸುಖದಾಯಕವಲ್ಲ ಆದುದರಿಂದ ಯಾವ ರೀತಿಯಲ್ಲೂ ಅದಕ್ಕೆ ಅವಕಾಶ ಕಲ್ಪಿಸಿಕೊಡಬೇಡಿ" ಎಂದಿದ್ದರಂತೆ ಪತ್ರಿಕಾಮಲ್ಲ ದೇಸಾಯಿ. ಆ ಮಾತಿನ ಸತ್ಯತೆ ಇಂದು ಕಂಡುಬರುತ್ತಿದೆ ನಮಗೆ ಇಂಗ್ಲಾಂಡಿನಲ್ಲಿ ಯುದ್ಧಕಾರಣಗಳಿಂದಾಗಿ ಈ ರೀತಿಯ ಪದ್ಧತಿಯೊಂದು ತಲೆ ಎತ್ತಿದ್ದಿರಬಹುದು. ಆದರೆ ನಮ್ಮಲ್ಲಿ ಕಂಡುಬರುವಂತಹ ಅಮಾನವೀಯಕರ ರೀತಿಯ ಪ್ರೆಸ್ ಎಡ್ವೈಸಿಂಗ್ ಪದ್ಧತಿ ಅಲ್ಲಿ ಜ್ಯಾರಿಯಲ್ಲಿಲ್ಲ—ಅಲ್ಲಿಯ ಪತ್ರಿಕೋದ್ಯೋಗಿಗಳು ಅದನ್ನು ಅಂಗೀಕರಿಸುವಂತೆಯೂ ಇಲ್ಲ.

ಒಂದು ಕಹಿ ಅನುಭವ

ಮದ್ರಾಸಿನಲ್ಲಿ ಪ್ರೆಸ್ ಸಲಹೆಗಾರರ ಆಶ್ರಯದಲ್ಲಿ ನಡೆದ ಮೊದಲ ಸಭೆಯಲ್ಲಿ ತರುಣ ಐ ಸಿ. ಎಸ್. ಆಫೀಸರರೊಬ್ಬರು ಪತ್ರಿಕಾಕರ್ತರನ್ನು ಉದ್ದೇಶಿಸಿ ಉಪದೇಶ ರೂಪವಾದ ಭಾಷಣ ಆರಂಭಿಸಿ ಬಿಟ್ಟರು ಇದನ್ನು ಸಹಿಸಲಾಗದೆ 'ಮೈಲ್' ಪತ್ರಿಕೆಯ ಸಂಪಾದಕ ಎ ಎ. ಹೆಯ್ಲ್ಸ್‌ರವರು, "ವೃತ್ತ ಪತ್ರಿಕೆಗಳ ಕುರಿತು ಗಂಧಗಾಳಿ ಅರಿಯದ ತರುಣ ಆಫೀಸರರು ೨೦ ವರ್ಷದ ಅನುಭವವುಳ್ಳ ಹಿರಿಯ ಸಾಹಿತಿಗಳಿಗೆ ಈ ರೀತಿ ಉಪದೇಶ ಮಾಡುವುದು ಶೋಭಿಸುವುದಿಲ್ಲ" ಎಂದು ಟೀಕೆ ಹೊರಡಿಸಿ ಬಿಟ್ಟರು. ಹೌದು! ಪ್ರೆಸ್ ಎಡ್ವೈಸಿಂಗ್ ಯೋಜನೆಯಲ್ಲಿ ಪತ್ರಿಕಾಕರ್ತರಿಗೆ ತಮ್ಮ ವೈಯಕ್ತಿಕ ಅಭಿ

TODAY

You may not need insurance But you must go in for insurance when you do not need it and when you are in good health. For when you are ill and when you feel its need most, you may be uninsurable

Have foresight and Act to—day Let our expert advice, backed by 31 years' experience, help you to select the best form of policy

KOCHIKAR BROTHERS LTD.,

CHIEF AGENTS FOR SOUTH INDIA INCLUDING INDIAN STATES

The "Bombay Life" Building, Udipi.

With Offices & Agencies all over South India

ಪ್ರಾಯಗಳನ್ನು ಪ್ರಚುರಪಡಿಸಲು, ಸ್ವಂತ ಜಾಹೀರಾತುಗಳ ಸ್ಪರ್ಧೆಗಾಗಿ ಹೋರಾಡಲು ಆಸ್ಪದ ಬೊರೆಯುವುದಿಲ್ಲ ಪತ್ರಿಕಾ ವ್ಯವಸಾಯವನ್ನು ಗಟ್ಟಿಯಾಗಿ ಬಿಗಿಯುವುದೊಂದೇ ಈ ಹೊಸ ಪದ್ಧತಿಯ ಉದ್ದೇಶ ಎಂಬಂತೆ ತೋರುವದಿಲ್ಲವೇ? ಅಂತಹ ನಿರ್ಬಂಧರೂಪದ ಕ್ರಮವನ್ನು ಪತ್ರಿಕಾಕರ್ತರು ಒಪ್ಪಬೇಕೆ?

ಮಧುರ ಸ್ಮೃತಿ

ಗತಿಸಿ ಹೋದ ದಿನಗಳ ಸವಿ ನೆನಪು ಆಗುತ್ತದೆ ಆಗ ಪತ್ರಿಕೋದ್ಯಮದ ಮೇಲಿನ ನಿರ್ಬಂಧಗಳ ರೂಪ ಈಗಿನಷ್ಟು ಬಿರುಸಾಗಿ ಇರಲಿಲ್ಲ ಕಸ್ತೂರಿರಂಗ ಅಯ್ಯಂಗಾರರ ಮೇಲೆ ಏನೋ ಒಂದು ಆರೋಪ ಬಂದಾಗ, ಅವರು ನೇರಾಗಿ ಗವರ್ನರರಲ್ಲಿಗೆ ಹೋಗಿ ಅದರ ಕುರಿತು ವ್ಯವಹರಿಸಿ, ತನ್ನ ನ್ಯಾಯದ ಕೇಳಿಕೆಗೆ ಮನ್ನಣೆ ದೊರೆಯುವಂತೆ ಸಾಧಿಸಿದ್ದರಂತೆ. 'ನ್ಯೂ ಇಂಡಿಯಾ' ಪತ್ರಿಕೆಯ ಸಂಪಾದಿಕೆ ದಿವಂಗತ ಎನ್ನಿ ಬೆಸೆಂಟ್ ಅಮ್ಮನವರು ಗವರ್ನಮೆಂಟ್ ಹೌಸ್‌ದಲ್ಲಿ ಲಾರ್ಡ್ ಪೆಂಟ್ಲೆಂಡರೊಡನೆ ಮುಖತಃ ಮಾತನಾಡಿದ್ದಾರೆ ಏಕೆ? ೮೮ ವರ್ಷಗಳ ಹಿಂದೆ (೧೮೫೬ರಲ್ಲಿ) ಪತ್ರಿಕಾಪ್ರಪಂಚದ ಹಿರಿಯ ಸದಸ್ಯ ಬಿ ಜಿ ಹೋರ್ನಿಮನರು ಒಂದು ಪ್ರತಿನಿಧಿದಳ ಸಮೇತ ಲಾರ್ಡ್ ಜೆಮ್ಸ್‌ಪೋರ್ಡರಲ್ಲಿಗೆ ಹೋಗಿ ಯಾವುದೋ ಒಂದು ಮಹತ್ವದ ವಿಷಯದ ಕುರಿತು ವೈಸರಾಯರಿಗೆ ಎಚ್ಚರಿಕೆ ಕೊಡುವಷ್ಟೂ ಸಾಹಸ ಕೈಕೊಂಡಿದ್ದಾರೆ.

ಸ್ವಾತಂತ್ರ್ಯ ಎಲ್ಲಿದೆ ಇಂದು?

ಇತರರು ಸೋತ ಕ್ಷೇತ್ರಗಳಲ್ಲಿ ಪತ್ರಿಕಾಕರ್ತರು ಗೆಲ್ಲಬಹುದೆಂಬ ಮಾತೇನೋ ನಿಜ. ಲೇಖನಸ್ವಾತಂತ್ರ್ಯವು ದೇಶದ ರಕ್ಷಣಾವ್ಯೂಹದ ಕೊನೆಯ ಪ್ರತಿಭಟನಾ ಸಾಧನ. ಆ ಸಾಧನವನ್ನು ನುಂಗಲು ನಿರ್ಬಂಧಗಳು ಬಾಯ್ದೆರೆದು ನಿಂತಿವೆ. ಭಾರತೀಯರಲ್ಲಿ ಇಂದು ನಾಮಮಾತ್ರವಾಗಿ ಉಳಿದ ಆ ಸ್ವಾತಂತ್ರ್ಯ ಚಿಹ್ನೆಯನ್ನೂ ಅಳಿಸುವಂತೆ ಮಾಡಲು ಹಲವೆಡೆಗಳಿಂದ ಯತ್ನಗಳು ನಡೆಯುತ್ತಿವೆ ಪ್ರಕಟನೆ ನಿಲ್ಲಿಸುವ ಆಜ್ಞೆ, ದಂಡ ಹೊರಿಸುವುದು, ಸಾಹಿತ್ಯ ವಶಪಡಿಸಿಕೊಳ್ಳುವುದು, ಕರಿಣ ಸೆನ್ಸರ್ ಶಿಪ್ ಇತ್ಯಾದಿನಿರ್ಬಂಧಗಳ ಸಂಖ್ಯೆ ದಿನಗಳೆದಂತೆ ಏರುತ್ತಾ ಹೋಗುತ್ತಿದೆ.

ಕೆಲವು ದೃಷ್ಟಾಂತಗಳು

ಬಂಗಾಲದ ಇಂಡಿಯನ್ ಸಿವಿಲ್ ಸರ್ವೀಸಿನ ಯುರೋಪಿಯನ್ ಸದಸ್ಯ ಮಿ। ಬ್ಲೈರ್‌ರವರು ರಾಜೀನಾಮೆ ಕೊಟ್ಟ ವಾರ್ತೆ ಮುಂಬಾಗಿ ಪ್ರಕಟಿಸಿದ ಬಗ್ಗೆ ಆ ವಾರ್ತೆ ಕೊಟ್ಟವರ ಹೆಸರು ಮತ್ತು ವಿಳಾಸ ತನಗೆ ತಿಳಿಸಬೇಕೆಂದು ಗದರಿಸಿತು ಸರಕಾರ. ಮಿ। ಬ್ಲೈರರ ರಾಜೀನಾಮೆ ಕೊಟ್ಟ ವಾರ್ತೆ ಅನಂತರ ಜನಜನಿತವಾಯಿತಾದರೂ ವಾರ್ತೆ ಕೊಟ್ಟವನ ಪರಿಚಯ ತಿಳಿಯುವ ಸರಕಾರದ ಕುತೂಹಲ ಕಡಿಮೆಯಾಗಲಿಲ್ಲ. ಕ್ರೈಸ್ತದೇವಾಲಯಗಳಲ್ಲಿ ಪಾಪನಿವೇದನೆ (Confessional) ವಿಧಿಗವು ಅತ್ಯಂತ ರಹಸ್ಯಮಯವಾಗಿದ. ಪಿಟ್ಟಿಂದು ಒಂದು ಸ್ವರ ಕೂಡಾ ಆಲ್ಲಿಂದ ಹೊರಗೆ ಹೋಗದು. ಖಡ್ಗದ ಚೂಪಾದ ಮೊನೆಯಿಂದ ಇಲ್ಲವೆ ಉರಿಯ ನಾಲಿಗೆಗಳಿಂದ ಅಲ್ಲಿಯ ರಹಸ್ಯವನ್ನು ಹೊರಗೆಡಹಲು ಸಾಧ್ಯವಿಲ್ಲ ಆ ರಹಸ್ಯ ಬಯಲಾಗುವ ಸಂದರ್ಭ ಬಂಬರೆ ಅದಕ್ಕೆ ಬದಲಾಗಿ ಗುರುಗಳು ಪ್ರಾಣವನ್ನಾದರೂ ತೆರಲು ಸಿದ್ಧರಿದ್ದಾರೆ. ಆಂತೆಯೇ ವಕೀಲರ ಕಥೆ—ತನ್ನ ಕಡೆಯ ವಾದಿಯನ್ನು ಕಾಣಲು ಅವರು ಸೆರೆಮನೆಗೆ ಹೋದಾಗ, 'ನಿಮ್ಮನ್ನು ಇಲ್ಲಿ ಯಾರು ಕಳಿಸಿದರು?' ಎಂದು ಅವರಿಗೆ ಕೇಳುವ ಹಕ್ಕು ಪೋಲೀಸರಿಗಿಲ್ಲ. ಇದೇ ರೀತಿಯ ಹೊಣೆಗಾರಿಕೆ ಪತ್ರಿಕಾಕರ್ತನದು! ಅವನು ಸಾರ್ವಜನಿಕರ ಹಕ್ಕುಗಳ ರಕ್ಷಕ—ಅವನ ಜವಾಬ್ದಾರಿಕೆ ಅಮಿತವಾದುದು. ಏಗಿರುವಲ್ಲಿ ಅವನೊಡನೆ ಆಂತರಿಕ ರಹಸ್ಯಗಳನ್ನು ಕೇಳಿ ಅವನ ಸ್ವಾತಂತ್ರ್ಯ ಕಸಿಯಲು ಸರಕಾರವು ಯತ್ನಿಸುವುದರಲ್ಲಿ ನ್ಯಾಯವಿದೆಯೇ?

ಜನ್ಸಾಲಿಯ ಉಗಮಾನದ ಕುರಿತು ಅಗ್ರಲೇಖನಗಳನ್ನು ಕೊಟ್ಟು ವಸ್ತುಸ್ಥಿತಿಯನ್ನು ಬಯಲಿಗೆಳೆದುದಕ್ಕಾಗಿ 'ಹಿತವಾದಾ' ಪತ್ರಿಕೆಯ ಮೇಲೆ ಅಲ್ಲಿಯ ಸಾಮ್ರಾಜ್ಯಶಾಹೀ ಶಕ್ತಿಯು ಕತ್ತಿ ಮಸೆಯಿತು ಆದರೆ ಪತ್ರಿಕೆಯು ಅಂಜದೆ, ಅಳುಕದೆ ನ್ಯಾಯದ ಉಡ್ಡಾಣವನ್ನು ಮುಂದೆಹಿಡಿದು ಕತ್ತಿಯ ಪೆಟ್ಟನ್ನು ಪ್ರತಿಬಟ್ಟಿಸಿತು. ಅಲ್ಲಹಾಬಾದ್ ಹೈಕೋರ್ಟು ಹೊರ್ನಿಮನರನ್ನು ನ್ಯಾಯಾಸ್ಥಾನಕ್ಕೆ ಎಳೆದು ಹಿರಿಯ ಪತ್ರಿಕೋದ್ಯೋಗಿಯ ಮುಖಕ್ಕೆ ಮಂಗಳಾರತಿಯಾಗುವ ದೃಶ್ಯ ನೋಡ ಬೇಕೆಂದು ಹವಣಿಸಿತು. ಆದರೆ ಆ ಪ್ರತಿಭಾಶಾಲಿ ಪತ್ರಿಕೋದ್ಯೋಗಿಯು ಎದೆಗುಂದಲಿಲ್ಲ ಸಿಡುಕಿನ ಶಬ್ದಗಳಿಗೆ ಗುಡುಗಿನ ಉತ್ತರ ಕೊಟ್ಟು ಆಪತ್ತಿನಿಂದ ಪಾರಾದರು. ಪತ್ರಿಕಾಶಕ್ತಿಯ ವ್ಯಾಬಲ್ಯವನ್ನು ಜಗತ್ತಿಗೆ ತೋರಿಸಿಕೊಟ್ಟರು. ಪತ್ರಿಕಾಶಕ್ತಿಯು ಇನ್ನಷ್ಟು ಸಂಘಟಿತವಾದರೆ ಇದಕ್ಕೆಂತ ಮಿಗಿಲಾದ ಕಾರ್ಯಗಳನ್ನು ನಡೆಸಲು ಸಾಧ್ಯವಿದೆ ಎಂಬ ಅಭಯ ನಮ್ಮ ಮುಂದಿರಿಸಿದರು.

ಬಂಗಾಲದ ಬರಗಾಲಕ್ಕೆ ಕಾರಣಭೂತರಾದವರ ಕಥೆಯನ್ನು ಬಯಲಿಗೆಳೆದು ದಕ್ಕಾಗಿ 'ಅಮೃತ ಬಜಾರ್' ಪತ್ರಿಕೆಯ ಮೇಲೆ ಸರಕಾರ ಒಮ್ಮೆ ಗದೆ ಎತ್ತಿ, ನಂತರ ಕೆಳಗಿಟ್ಟಿತ.

ಇದೀಗ ಢಿಲ್ಲಿಯ 'ನೇಶನಲ್ ಕಾಲ್' ಮತ್ತು 'ಹಿಂದುಸ್ಥಾನ ಟೈಮ್ಸ್' ಈ ಎರಡು ಜನಪ್ರೀತ ದೈನಿಕಗಳ ಕಡೆಗೆ ಸರಕಾರ ಕಣ್ಣು ಕೆರಳಿಸಿದೆ. ೧೯೪೬ನೇ ಆಗಸ್ಟ್ ೮ರ ನಂತರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಯಾವನೇ ಸದಸ್ಯನು ಇಲ್ಲಿವೆ ಮಹಾತ್ಮಾಜಿಯವರು ಮಾಡಿದ ಯಾವುದೇ ಪ್ರಕಟಣೆಯನ್ನು ಪ್ರಿಸೆನ್ಸರ್ ಶಿಪ್ ಮಾಡದೆ ಪ್ರಕಟಿಸಬಾರದೆಂದು ಆ ಪತ್ರಿಕೆಗಳಿಗೆ ಸರಕಾರದ ವ್ರತಿಬಂಧಕಾಜ್ಞೆ ಆಗಿದೆ.

ಇದನ್ನು ಪ್ರತಿಭಟಿಸಲೇ ಬೇಕು

ಹೀಗೆ ಕಳೆದ ಹತ್ತು ವರ್ಷಗಳಿಂದ ರಾಷ್ಟ್ರೀಯ ಪತ್ರಿಕೆಗಳ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ನಿರ್ಬಂಧಗಳ ಆಘಾತವಾಗುತ್ತಿದೆ ದೇಶದಲ್ಲಿ ದಿನಕ್ಕೊಂದು ಕಾಯಿದೆ ಕಾನೂನು ರಚನೆಯಾಗುವಂತೆ ಪತ್ರಿಕೆಗಳ ಮೇಲೂ ತನ್ನ ಹಿಡಿತ ಬಿಗಿಯುತ್ತಿದೆ ಸರಕಾರ. ಪತ್ರಿಕೋದ್ಯೋಗಿಗಳೂ ಪತ್ರಿಕಾಕರ್ತರೂ ನಾಡಿನ ಜೀವಾಳದಂತಿರುವ ಪತ್ರಿಕೆಗಳ ಸ್ವಾತಂತ್ರ್ಯ ರಕ್ಷಿಸುವುದಕ್ಕೋಸ್ಕರ ಸಮ್ಮೇಳನಗಳನ್ನು ಜರಗಿಸಿ ಭಗೀರಥ ಪ್ರಯತ್ನ ನಡೆಸುತ್ತಿರುವ ಕಾಲದಲ್ಲಿಯೇ ಶಾಸನಗಳ ಭೂತ ಕಣ್ಣು ಕೆರಳಿಸುತ್ತಿದೆ ಕೆಲವು ಪತ್ರಿಕೆಗಳು ಸರಕಾರದ ಪ್ರತಿಬಂಧಕ್ಕೊಳಗಾಗಿ ಕತ್ತರಿಸುತ್ತಿರುವ ಕಾಲಕ್ಕೆ ಉಳಿದವುಗಳು ಅವುಗಳನ್ನು ಅವುಗಳ ಪಾಡಿಗೆ ಬಿಟ್ಟು, 'ನಾವು ಸಾಕಾದಷ್ಟು ಸ್ವಾತಂತ್ರ್ಯ ಅನುಭವಿಸುತ್ತಿದ್ದೇವೆ' ಎಂದು ಭುಜ ಹಾರಿಸುವುದು ಯಾವ ಕಾಲಕ್ಕೂ ಸರಿತೋರದು. ಇಂದು ಅವುಗಳಿಗೆ ಸಂಭವಿಸಿದ ಅವನ್ಮೆಯೇ ನಾಳೆ ಇತರ ಪತ್ರಿಕೆಗಳಿಗೆ ಒರಬಹುದು—ಇಂದು ಗುರುತ್ವ ಮಧ್ಯದಲ್ಲಿ ಕೂಗುಸ್ಪತ್ರಿಕೆಗಳ ಸ್ವಾತಂತ್ರ್ಯ ನಾಡದು ಸಂಪೂರ್ಣ ನಶಿಸಬಹುದು ಆದುದರಿಂದ ಪತ್ರಿಕೆಗಳ ಸ್ವಾತಂತ್ರ್ಯಸಹಾರಕ್ಕೆ ನಡೆಯುವ ವಿನಾಶಕಾರೀ ಯತ್ನಗಳನ್ನು ಎಲ್ಲಾ ಪತ್ರಿಕೆಗಳು ಒಕ್ಕೊರಲ ಧ್ವನಿಯಿಂದ ಪ್ರತಿಭಟಿಸಬೇಕು. ಪತ್ರಿಕೆಗಳೊಳಗೆ, ಪತ್ರಿಕೋದ್ಯೋಗಿಗಳೊಳಗೆ ಯಾರಿಂದಲೂ ಅಳಿಸಲಾಗದಂತಹ ನಿಕಟ ಬಾಂಧವ್ಯ ನೆಲೆಗೂಡಿದೆ ಎಂಬುದರ ಪ್ರದರ್ಶನವಾಗಬೇಕು. ಪತ್ರಿಕಾಸ್ವಾತಂತ್ರ್ಯ ರಕ್ಷಣೆಯೇ ದೇಶದ ಏಳ್ಗೆಗೆ ಪ್ರಥಮ ಸೋಪಾನ—ತಿಳಿದಿರಲಿ!

Approved Firm by the Govt of Mysore

Santha Wetal

SANTHA WETAL IS A SCIENTIFICALLY PREPARED LIQUID PRODUCT.

It is readily soluble in cold or hot water

It is a good wetting out and penetrant agent for yarn and cloth

It is elaborately used in dyeing yarn and cloth and it improves the shinning of the shade

It is available in 28, 56 and 112 lbs packing

ಶಾಂತ ವೆಟಾಲ್

ಇದು ರಸಾಯನ ಶಾಸ್ತ್ರರೀತಿಯಿಂದ ತಯಾರಿಸಿದ ದ್ರವಪದಾರ್ಥ

ಇದು ನೂಲು ಮತ್ತು ಬಟ್ಟೆ ನೆನೆಯಿಸುವುದಕ್ಕೂ, ಬಣ್ಣ ಮಾಡುವುದಕ್ಕೂ, ಬಣ್ಣ ಕರಗಿಸುವುದಕ್ಕೂ ಮತ್ತು ನೂಲಿಗೆ ಮಿಂಚು ಕೊಡುವುದಕ್ಕೂ ಮುಖ್ಯವಾದ ಪದಾರ್ಥ

ಬಣ್ಣ ಮಾಡುವವರು ಎಲ್ಲರೂ ಇದನ್ನು ಉಪಯೋಗಿಸಿ ಶ್ರೇಷ್ಠವಾದ ಗುಣಗಳನ್ನು ಹೊಂದಿದ್ದಾರೆ.

Santha Wetal Mfg. Co.,

GOVT. HORTICULTURAL FARM ROAD,

Kolada Mutt, BANGALORE CITY

[ಪುಟ ೨೦ರಿಂದ]

ಮುಕ್ತಾಯ ಅಧಿವೇಶನ

ಅನಂತರ ಶ್ರೀ। ಸಿ ಆರ್ ಶ್ರೀನಿವಾಸನರ ಅಧ್ಯಕ್ಷತೆಯಲ್ಲಿ ಮುಕ್ತಾಯ ಅಧಿವೇಶನಕ್ಕೆ ಮೊದಲಾಯಿತ ಒಂದಿನ ರಾತ್ರೆ ಪ್ರತಿನಿಧಿಗಳ ಸಭೆಯಲ್ಲಿ ಸ್ವೀಕರಿಸಲ್ಪಟ್ಟ ನಿರ್ಣಯಗಳನ್ನು ಅಧ್ಯಕ್ಷರು ಸಭೆಯ ಮುಂದಿಟ್ಟು ಮಂಜೂರು ಮಾಡಿದರು ೧೯೪೫—೪೬ರ ಹೊಸ ವರ್ಷದ ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ಕಾರ್ಯನಿರ್ವಾಹಕ ಸಮಿತಿಯು ರಚಿಸಲ್ಪಟ್ಟಿತು ಉಳಿದ ಕೆಲವು ಗೊತ್ತುವಳಿಗಳ ಕುರಿತು ನಿರ್ಧಾರಕ್ಕೆ ಬರುವ ಅಧಿಕಾರವನ್ನು ಸಭೆಯು ಕಾರ್ಯನಿರ್ವಾಹಕ ಸಮಿತಿಗೆ ಕೊಟ್ಟಿತು [ಎಲ್ಲ ನಿರ್ಣಯಗಳು ಪ್ರತ್ಯೇಕ ಪ್ರಕಟವಾಗಿವೆ]

ಹೆಚ್ಚಿನ ಸಂದೇಶಗಳು

ಸಮ್ಮೇಳನಕ್ಕೆ ಶುಭವನ್ನು ಕೋರಿ ಶ್ರೀಯುತರು ಕೆ ಶ್ರೀನಿವಾಸನ್ (ಹಿಂದೂ), ತಿರುಮಲೆ ತಾತಾಚಾರ್ಯ ಶರ್ಮಾ, ಮಂಜೇಶ್ವರ ಗೋವಿಂದ ಪೈ ಮೊದಲಾದವರಿಂದ ಬಂದಿದ್ದ ಸಂದೇಶಗಳನ್ನು ಶ್ರೀ। ಕುಳುಕ್‌ಂದ ಶಿವರಾಯರು ಓದಿದರು

ಮುಕ್ತಾಯ ಭಾಷಣ

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣವನ್ನಿತ್ತರು, ಸಮ್ಮೇಳನವನ್ನು ಜರಗಿಸಿದವರನ್ನು ಅಭಿನಂದಿಸಿದರು. ಅದರ ಅವಶ್ಯತೆಯನ್ನು ಒತ್ತಿ

ಆ। ಕ। ಸಮ್ಮೇಳನಾಧ್ಯಕ್ಷ
ಶ್ರೀ। ಸಿ. ಆರ್. ಶ್ರೀನಿವಾಸನ್‌ರವರು

ಹೇಳಿ, ದಕ್ಷರಾದ ನೀವೆಲ್ಲ ಇಲ್ಲಿ ಸೇರಿದ್ದೀರಿ ನಿಮ್ಮ ನಾಡಿನ ಪತ್ರಿಕೋದ್ಯಮದ ಪ್ರಗತಿ ಸಾಧ್ಯವಾಗಲಿ" ಎಂದರು

ಧನ್ಯವಾದಾರ್ಪಣೆ

ಬಂದಿದ್ದ ಪ್ರತಿನಿಧಿಗಳ ಪರವಾಗಿ ಶ್ರೀಯುತರು ಬಿ ಎನ್ ಗುಪ್ತ, ಪಿ ಆರ್ ರಾಮಯ್ಯ, ಹಣಮಂತರಾವ್ ಮೋಹರೆ ಮತ್ತು ಆಗರಂ ರಂಗಯ್ಯ ಇವರು ಸ್ವಾಗತ ಸಮಿತಿಯವರಿಗೂ ವ್ರತ್ಯೇಕವಾಗಿ ಶ್ರೀ। ವಿ ಎಸ್ ಕುಡ್ಪರಿಗೂ ಧನ್ಯವಾದಗಳನ್ನರ್ಪಿಸಿದರು ಸ್ವಾಗತ ಸಮಿತಿಯ ಪರವಾಗಿ ಶ್ರೀ। ಕಡೆಂಗೋಡ್ಲು ಶಂಕರಭಟ್ಟರು ಮುರುವಂದನೆಗಳನ್ನೊಪ್ಪಿಸಿದರು

ಸ್ವಾಗತ ಕಾರ್ಯದರ್ಶಿ ಶ್ರೀ। ಕೆ ಕೆ ರೈ ಅವರು—ಅಧ್ಯಕ್ಷರು, ಪ್ರತಿನಿಧಿಗಳು, ಸ್ವಯಂಸೇವಕರು, ಎಲ್ಲರ ಊಟದ ವ್ಯವಸ್ಥೆಯನ್ನು ಬಲು ದಕ್ಷತೆಯಿಂದ ನೆರವೇರಿಸಿದ ಶ್ರೀ। ಹುರುಳಿ ಭೀಮರಾಯರು ಮೊದಲಾದವರಿಗೆ ಕೃತಜ್ಞತೆಗಳನ್ನರ್ಪಿಸಿದರು

ಕಾರ್ಯನಿರ್ವಾಹಕ ಸಮಿತಿ ಸಭೆ

ಹೊಸ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಮಧ್ಯಾಹ್ನಾನಂತರ ಅಧ್ಯಕ್ಷ ಶ್ರೀ। ಮೋಹರೆ ಹಣಮಂತರಾಯರ ಅಧ್ಯಕ್ಷತೆಯಲ್ಲಿ ಪ್ರತಿನಿಧಿಗಳ ನಸತಿಗೃಹದ ಉಸ್ತರಿಗಳಲ್ಲಿ ಜರಗಿ, ಸಂಘದ ಕಾರ್ಯಪ್ರವರ್ತನೆಗೆ ಸಂಬಂಧಿಸಿದ ಕಲವೊಂದು ವಿಷಯಗಳು ಚರ್ಚಿಸಲ್ಪಟ್ಟವು ಬಹಿರಂಗ ಅಧಿವೇಶನದಲ್ಲಿ ಮಂಡಿಸಲ್ಪಡಬೆ ಉಳಿದಿದ್ದ ನಿರ್ಣಯಗಳು ಸ್ವೀಕರಿಸಲ್ಪಟ್ಟವು

ಸಮ್ಮೇಳನಕ್ಕೆ ಬಂದಿದ್ದ ಹಲವು ಪ್ರತಿನಿಧಿಗಳು ಮೂರು ರೂಪಾಯಿ ವಾರ್ಷಿಕ ವರ್ಗಣಿ ಕೊಟ್ಟು ಸದಸ್ಯರಾಗಿರುವರು ಕೆಲವರು ಸಂಘದ ನಿಧಿಗೆ ಸಂಭಾವನೆ ಕೊಟ್ಟಿರುವರು

ಸತ್ಕಾರ ಕೂಟ

ಕೆನರಾ ಬೇಂಕ್ ಮತ್ತು ಕೆನರಾ ಬೇಂಕಿಂಗ್ ಕಾರ್ಪೂರೇಶನಿನವರು ಅಧ್ಯಕ್ಷರಿಗೂ ಪ್ರತಿನಿಧಿಗಳಿಗೂ ಭುವನೇಂದ್ರ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದರು

'ಲಿಪಿ ಸಂಸ್ಕರಣ'

ಆ ದಿನ ಸಂಜೆ 'ಲಿಪಿ ಸಂಸ್ಕರಣ' ಎಂಬ ವಿಷಯದ ಕುರಿತು ಸಮನ್ವಯ ಕೂಟ ಜರಗಿತು ಮೈಸೂರಿನ ಶ್ರೀ। ಎಸ್ ವಿ ಶ್ರೀನಿವಾಸ ರಾವ್ ಎಂ. ಎ. ಅವರು ಕೂಟದ ಕಾರ್ಯಕ್ರಮವನ್ನು ಆರಂಭಿಸಿದರು ಆ ಬಳಿಕ ಶ್ರೀಯುತರು ಹಣಮಂತರಾವ್ ಮೋಹರೆ, ಕನ್ನಡ ಟೈಪ್‌ರೈಟರ್ ನಿರ್ಮಾಪಕರಾದ ಕೆ ಅನಂತ ಸುಬ್ಬರಾವ್, ಅಮ್ಮೆಂಬಳ ಶಂಕರನಾರಾಯಣ, ಕೌಲಗಿ ಶೇಷಾಚಾರ್ಯ, ಶಿವರಾಮ ಕಾರಂತ ಮತ್ತು ನಂಜುಂಡಯ್ಯ ಇವರು ಕೂಟದಲ್ಲಿ ಭಾಗವಹಿಸಿದ್ದರು.

ಭೋಜನ ಕೂಟ

ಆ ರಾತ್ರೆ ಪ್ರತಿನಿಧಿಗಳ ವಸತಿ ಗೃಹದಲ್ಲಿ ಸ್ವಾಗತ ಸಮಿತಿಯವರಿಗೂ ಸಂಭಾವನೆ ಕೊಟ್ಟವರಿಗೂ ಭೋಜನ ಕೂಟವಿತ್ತು.

ಸಂಗೀತ ಕಚೇರಿ

ರಾತ್ರೆ ಪ್ರತಿನಿಧಿಗಳ ವಸತಿಗೃಹದಲ್ಲಿ ಮಂಗಳೂರಿನ ಶ್ರೀ। ನಾರಾಯಣ ಶಾಸ್ತ್ರಿ ಅವರಿಂದ ಸಂಗೀತ ಕಚೇರಿ ನಡೆಯಿತು ಶ್ರೀ। ಮೋಹರೆಯವರು ಮಾತನಾಡುತ್ತಾ ಶ್ರೀ। ಶಾಸ್ತ್ರಿಯವರ ಸಂಗೀತವನ್ನೂ ಸಂಗೀತ ಶಾಸ್ತ್ರ ಜ್ಞಾನವನ್ನೂ ಪ್ರಶಂಸಿಸಿದರು ಅಂತ್ಯದಲ್ಲಿ ಶ್ರೀ। ಬ ಯಂ. ಇದಿನಬ್ಬ ಅವರು ಒಂದೆರಡು ಲಾವಣಿಗಳನ್ನು ಹಾಡಿದರು.

ಸಮ್ಮೇಳನಾನಂತರ

ಉಡುಪಿಗೆ ಪ್ರಯಾಣ

೩೦ರಂದು ಬೆಳಿಗ್ಗೆ ಕೆಲವು ಪ್ರತಿನಿಧಿಗಳು ತಮ್ಮ ಊರುಗಳಿಗೆ ಹೊರಟು ಹೋದರು ಬೇರೆ ಕೆಲವರು ಉಡುಪಿಗೆ ಪ್ರವಾಸ ಬೆಳೆಸಿದರು

ಅಧ್ಯಕ್ಷರ ನಿರ್ಗಮನ

ಉಡುಪಿಗೆ ಭೇಟಿಕೊಟ್ಟಿದ್ದ ಅಧ್ಯಕ್ಷ ಶ್ರೀ। ಸಿ ಆರ್. ಶ್ರೀನಿವಾಸನರು ೩೦ರಂದು ಸಂಜೆ ಮಂಗಳೂರಿಗೆ ಮರಳಿದರು ಮರುದಿನ ಬೆಳಿಗ್ಗೆ ರೈಲು ನಿಲ್ದಾಣದಲ್ಲಿ ಅವರನ್ನು ಬೀಳ್ಕೊಳ್ಳಲಾಯಿತು ಸ್ವಾಗತಾಧ್ಯಕ್ಷರೂ ಕಾರ್ಯದರ್ಶಿಯರೂ ಅವರಿಗೆ ವಿದಾಯ ಹೇಳಿದರು.

ವಸತಿಗೃಹದಲ್ಲಿ ಸಭೆ

ಆ ದಿನ ಮಧ್ಯಾಹ್ನ ಉಡುಪಿಯ ಪ್ರವಾಸವನ್ನು ಮುಗಿಸಿ ಪ್ರತಿನಿಧಿಗಳು ಮಂಗಳೂರಿಗೆ ಬಂದರು ಆ ರಾತ್ರೆ ವಸತಿಗೃಹದಲ್ಲಿ, ಭೋಜನಾನಂತರ, ಸಭೆ ಜರಗಿತು ಪ್ರತಿನಿಧಿಗಳೆಲ್ಲರ ಪರವಾಗಿ ಶ್ರೀ। ಬಿ ಎನ್. ಗುಪ್ತರು ಮಾತನಾಡುತ್ತಾ ಆ ಅಸ್ಪು ದಿನಗಳಲ್ಲಿ ಸ್ವಂತ ಮಕ್ಕಳಂತೆ ತಮ್ಮೆಲ್ಲರನ್ನು ನೋಡಿಕೊಂಡ ಶ್ರೀ। ಹುರುಳಿ ಭೀಮರಾಯರಿಗೆ ಅನಂತ ವಂದನೆಗಳನ್ನರ್ಪಿಸಿದರು "ಮಂಗಳೂರವರು ನಮಗೆ ಕೊಟ್ಟ ಆತಿಥ್ಯ ಅಪೂರ್ವವಾದುದು, ನೀವೂ ನಮ್ಮ ಊರಿಗೆ ಒಮ್ಮೆ ಬನ್ನಿ, ಹುರುಳಿ ಭೀಮರಾಯರೂ ಅವಶ್ಯ ನಮ್ಮಲ್ಲಿಗೆ ಬರಬೇಕು ಎಂದು ಶ್ರೀ। ಗುಪ್ತರು ಹೇಳಿದರು ಮೈಸೂರಿನ ಶ್ರೀ ಮಾಧವರಾಯರೂ ಅದೇ ಸರಣಿಯಲ್ಲಿ ಮಾತನಾಡಿದರು ಶ್ರೀ। ಭೀಮರಾಯರು ಪ್ರತಿನಿಧಿಗಳ ಈ ಧನ್ಯವಾದಾರ್ಪಣೆಗೆ ಮರುವಂದನೆಗಳನ್ನೊಪ್ಪಿಸಿದರು.

ಪ್ರತಿನಿಧಿಗಳಿಗೆ ವಿದಾಯ

೩೦ರಿಂದು ಮುಂಜಾನೆ ಪ್ರತಿನಿಧಿಗಳಲ್ಲಿ ಒಂದು ತಂಡದವರು ಮೈಸೂರಿಗೂ ಇನ್ನೊಂದು ತಂಡದವರು ಚಿಕ್ಕಮಗಳೂರಿಗೂ ತೆರಳಿದರು. ಸ್ವಾಗತ ಕಾರ್ಯದರ್ಶಿಯವರು ಅವರೆಲ್ಲರನ್ನೂ ಬೀಳ್ಕೊಟ್ಟರು

The Canara Trading House
(LEADING NEWSPAPER STALL)
Hampankatta, — — — MANGALORE
We sell Dailies, Weekies and Monthlies in Kanarese, English Malyalam & Tamil
Sole Agents BOMBAY CHRONICLE"
BLITZ, MY MAGAZINE, MIRROR, 'PSYCHO, TAINADU, ANTHARANGA AND NAVAYUGA
A Visit is Solicited

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,

ರಥಬೀದಿ, ಮಂಗಳೂರು.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು:

೧. ಧಾತುಪುಷ್ಟಿ ಲೇಹಃ—(ಸುವರ್ಣ, ಸಾಲಾಮಿಶ್ರಿ, ಕಲ್ಕದ ಮಿಶ್ರ) ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರಮೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ, ಇವು ಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ಉಂಟುಮಾಡುವುದು. ಬಾಟ್ಲಿ 1ರ ರೂ. 3—8—0.

೨. ಮಲೇರಿಯಾ ನಿವಾರಿಣಿ:—ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಗೆಡ್ಡೆ ಬಂದ ಜ್ವರ, ಇನ್‌ಫ್ಲುಯೆಂಜಾ, ಕಫಜ್ವರ, ಜ್ವರಗಡ್ಡೆ ಮಲ ಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸುವುದು

6 ಔನ್ಸ್ ಬಾಟ್ಲಿ 1ರ ರೂ. 2-0-0, 4 ಔನ್ಸ್ ಬಾಟ್ಲಿ ರೂ 1-6-0

೩. ಚ್ಯವನಪ್ರಾಶಃ—(ಬಂಗಾರ ಮಿಶ್ರಿತ) ಇದು ಅತ್ಯಂತ ಶಕ್ತಿ ವರ್ಧಕ ರಸಾಯನ ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು

ಪೌಂಡ್ 1ರ ರೂ. 5—8—0, ಅರ್ಧ ಪೌಂಡ್ ರೂ. 3—0—0

೪. ಮಹಾಮದನಕಾಮೇಶ್ವರಿ ಲೇಹಃ—(ಬಂಗಾರ, ಪುನುಗು, ಕಸ್ತೂರಿ ಮಿಶ್ರಿತವಾದದ್ದು) ನರಗಳ ಮತ್ತು ಜನನೇಂದ್ರಿಯದ ಶಕ್ತಿ ಹೀನತೆ, ಎದೆನೋವು, ಮಲಬದ್ಧತೆ, ಬೆನ್ನುನೋವು, ವಾಯು ಉಪದ್ರವ ಮೊದಲಾದುವುಗಳನ್ನು ಹೋಗಲಾಡಿಸಿ, ರಕ್ತವೃದ್ಧಿಯನ್ನೂ ಧಾತುವೃದ್ಧಿ ಯನ್ನೂ ಉಂಟುಮಾಡುವುದು.

ರಾತ್ಲು 1ರ ರೂ. 10—0—0, ಅರ್ಧ ರಾತ್ಲು ರೂ 5—4—0

೫. ಅಶೋಕಾರಿಷ್ಟ ಮತ್ತು ಮಾತ್ರೆ:—ಹೆಂಗಸರ ಗರ್ಭಾಶಯ ರೋಗಗ ಗೆ ಸಂಜೀವನ ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾ ಗಿಯೂ ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನಹೀನತೆ, ರಕ್ತಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 2—12—0

೬. ಮೇಹಕುಠಾರಃ—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗ ದಿರುವಿಕೆ, ಮೂತ್ರಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರು ವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಮುಂತಾದುವನ್ನು ಗುಣ ಪಡಿಸುವುದು ಡಬ್ಬಿ 1ರ ರೂ. 3—0—0.

೭. ಕಸ್ತೂರಿ ಮಿಶ್ರಣ ದಶಮೂಲಃ—ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾ ಯನ ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವ ರಲ್ಲದೆ, ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು.

24 ಔನ್ಸ್ ಬಾಟ್ಲಿ ರೂ 5-0-0, 12 ಔನ್ಸ್ ಬಾಟ್ಲಿ ರೂ. 2-8-0,
8 ಔನ್ಸ್ ಬಾಟ್ಲಿ ರೂ 1—12—0.

೮. ಮಹಾಭೃಂಗಾಮಲಕ ತೈಲಃ—ನಿದ್ರಾಹೀನತೆ, ತಲೆ ಬಿಸಿ ಯಾಗುವಿಕೆ, ಕಣ್ಣು ಉರಿ, ತಲೆತಿರುಗುವಿಕೆ, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಕೂದಲು ಉದುರುವಿಕೆ ಇವುಗಳನ್ನು ಗುಣಪಡಿಸುವುದು.

ಬಾಟ್ಲಿ 1ರ ರೂ 1—8—0

೯. ದ್ರಾಕ್ಷಾಸವಃ—ಇದು ದೇಹಕ್ಕೂ ಮೆದುಳಿಗೂ ಉಲ್ಲಾಸ ಕೊಡತಕ್ಕ ದಿವ್ಯ ಔಷಧಿ ಅಜೀರ್ಣಸ್ಥರಿಗೆ ಜೀರ್ಣಶಕ್ತಿಯನ್ನೂ ಹಸಿವಿಲ್ಲ ದವರಿಗೆ ಹಸಿವನ್ನೂ ಉಂಟುಮಾಡುವುದು ಸುಖವಾಗಿ ಭೇದಿಯಾಗುವುದು

24 ಔನ್ಸ್ ಬಾಟ್ಲಿ ರೂ 2-8-0, 12 ಔನ್ಸ್ ಬಾಟ್ಲಿ ರೂ. 1-6-0.

೧೦. ಬಾಲಗ್ರಹ ಗುಟಿಕೆ:—ಮಕ್ಕಳ ಜೇನ್ನೆ, ಕಫ, ಉಬ್ಬಸ, ಮಲಮೂತ್ರ ಒದ್ದೆತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ, ಅಪಸ್ಮಾರ, ಮೈಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು. ಬಾಟ್ಲಿ 1ರ ಆಣೆ 12

೧೧. ಅಯೊಡ್ಯಾಸ್ಡ್ ಸರಸಪರಿಲ್ಲಾ:—ದೇಹದೊಳಗೆ ಉಂಟಾ ಗುವ ಕುರು, ಕಜ್ಜಿ, ಮೈ ತುರುಸುವಿಕೆ, ವ್ರಣ, ಮೇಹ, ವಾತ, ಸಿಫಲಿಸ್ (ಫರಂಗಿ), ಹಳೆಹುಣ್ಣುಗಳು ಇವುಗಳ ಮೇಲೆ ದಿವ್ಯ ಔಷಧಿ

8 ಔನ್ಸ್ ರೂ 1—12—0, 4 ಔನ್ಸ್ ರೂ. 1—0—0.

ಇದಲ್ಲದೆ, ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ ಕೆಟಲಾಗಿಗೆ ಬರೆಯಿರಿ.
ಕಾಹಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಔಷಧಿ ಸಿಕ್ಕುವ ಸ್ಥಳ:

(೧) ಪೊಪ್ಯುಲರ್ ಸ್ಟೋರ್ಸ್, ೧೮೩, ಸುವಾರಿಬಾಗ್ ರೋಡ್, ಜಿ ಐ ಪಿ ರೈಲ್ವೇ ವರ್ಕ್‌ಶೋಪ್ ಎನುರು, ಪರೇಲ, ಮುಂಬಾಯಿ (೨) ಜನರಲ್ ಸ್ಟೋರ್ಸ್ ಕೆಮಿಸ್ಟ್, ಜಿ ಐ ಪಿ, ಮಾಟುಂಗಾ (೩) ಮುಲ್ಲರ ಪೇರ್ಟ ಬ್ರದರ್ಸ್, ೯೧, ಚಿಕ್ಕಪೇಟೆ, ಬೆಂಗಳೂರು ಸಿಟಿ (೪) ಧನ್ವಂತರೀ ವೈದ್ಯಶಾಲಾ, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು (೫) ಬಿ ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ನೋಮವಾರಪೇಟೆ (೬) ಮಂಗಳೂರು ಸ್ಟೋರ್ಸ್, ಮಡಿಕೇರಿ (೭) ಡಾಕ್ಟರ್ ಕೆ ಶ್ರೀನಿವಾಸ ಪೈ, ಪುತ್ತೂರು (೮) ಗಣೇಶ ಸುಂದರ ಪ್ರಭು, ಮರ್ಚಂಟ್, ಸುಳ್ಯ (೯) ಕಾಂತಾವರ ವಾಸ್ತೇವ ಕಮಿ, ಮರ್ಚಂಟ್ ಬೆಳ್ತಂಗಡಿ (೧೦) ಬಿ ಎಚ್ ನರ್ಸಿಂಗ್ ರಾವ್, ಮರ್ಚಂಟ್, ಚಿಕ್ಕಮಗಳೂರು (೧೧) ಶ್ರೀನಿವಾಸ ಹಗ್ಡೆ, ಮರ್ಚಂಟ್, ತೀರ್ಥಹಳ್ಳಿ (೧೨) ಶ್ರೀ ಕೃಷ್ಣಾ ಫಾರ್ಮೆಸಿ, ಕೆಮಿಸ್ಟ್ಸ್, ಕುಂದಾಪುರ (೧೩) ಸ್ವಸ್ತಿಕ ಫಾರ್ಮೆಸಿ, ಕೆಮಿಸ್ಟ್, ಕುಮಟಾ (೧೪) ಪಂಪಪ್ಪ ಅಯ್ಯು ನಾಯ್ಕ ಎಂಡ್ ಸನ, ಕೆಮಿಸ್ಟ್, ಕುಮಟಾ (೧೫) ಎಲ್ ಡ ಸೋಜಾ, ಎಂಡ್ ಕಂಪೆನಿ ಕ್ಲೋತ್ ಮರ್ಚಂಟ್, ಮೂಡಗೆರೆ (೧೬) ನವಭಾರತ ಬುಕ್ ಡಿಪೊ, ಉಡುಪಿ (೧೭) ಡಾ। ಕೆ. ವಿ ಕೆ ರಾವ್, ಕೋಟೇಶ್ವರ (೧೮) ಎಚ್ ನರಸಿಂಹ ನಾಯ್ಕ, ಮರ್ಚಂಟ್, ಶಂಕರನಾರಾಯಣ (೧೯) ಬಿ ಎಚ್ ನರಸಿಂಗರಾವ್, ಮರ್ಚಂಟ್ ಚಿಕ್ಕಮಗಳೂರು

ವೃತ್ತಪತ್ರಿಕೆಯ ಉದ್ಗಮ

.....ನೀವು ಬಲ್ಲಿರಾ? ಮೊದಲು ಮುದ್ರಣ ಮತ್ತದ ಧಿಮ್ಮಿಗಳ ಸಹಾಯದಿಂದ ಮಾಡುತ್ತಿದ್ದರಂತೆ. ಮೊದಲ ಪತ್ರಿಕೆಗಳಿಗೆ ಪ್ರೋತ್ಸಾಹ ದೊರೆತುದು ಕಡಿಮೆ. ಇಂದು ಎಲ್ಲವೂ ಒಂದು ವ್ಯವಸ್ಥಿತ ಕ್ರಮಕ್ಕೆ ಬಂದು ಮುಟ್ಟಿದೆ.....

[ಲೇಖಕರು:— ಶ್ರೀ ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್.,]

ಓದಿದು ರಾಷ್ಟ್ರದ, ಸಮಾಜದ ಅಥವಾ ವ್ಯಕ್ತಿಯ ಜೀವನದ ಮೇಲೆ, ದಿನ ನಿತ್ಯವೂ ನಡೆಯುತ್ತಿರುವ ಘಟನಾವಳಿಗಳ ವರ್ಚಸ್ಸು ಬದ್ದು ಆ ಜೀವನವು ಮೂರ್ಪಾಟು ಹೊಂದುವುದೂ ಹಿಗ್ಗಿಗೂ ಕುಗ್ಗಿಗೂ ಬಲಿಯಾಗುವುದೂ ಎಲ್ಲವ ರಿಗೂ ತಿಳಿದ ವಿಷಯವಾಗಿದೆ. ಹಾಗೆಯೇ ಸುತ್ತುಮುತ್ತಲಿನಲ್ಲಿದ್ದು ಬೇರೆ ಬೇರೆ ಅಭಿಪ್ರಾಯಗಳನ್ನು ಪಡುವಂತಹ ಪುರುಷರು ಏನನ್ನುತ್ತಿರುವರು, ಏನು ಮಾಡುತ್ತ ಲಿರುವರು? ಏಕೆ ಅನ್ನುತ್ತಿಲ್ಲ, ಏಕೆ ಏನನ್ನು ಮಾಡುತ್ತಿರುವುದಿಲ್ಲ—ಈ ವಿಚಾರದ ವಾರ್ತೆಗಳೂ ಕೂಡಾ ಜನರ ಜೀವನದಲ್ಲಿ ತೆರೆಗಳನ್ನೇಳಿಸಬಹುದು, ಬಿರುಗಾಳಿ ಯನ್ನು ಬೀಸಬಹುದು. ಹೀಗೆ ನಡೆಯುತ್ತಿರುವ ಘಟನಾವಳಿಗಳ ವಾರ್ತೆಗಳೂ, ಮುಖ್ಯ ಪುರುಷರು ಅನ್ನುತ್ತಿರುವ ಅಭಿಪ್ರಾಯಗಳ ನಿರೂಪಣವೂ ಜನಜೀವನದ ಮೇಲೆ ತಕ್ಕ ಪರಿಣಾಮವನ್ನು—ಒಳಿತಾಗಲಿ ಕೆಟ್ಟದಾಗಲಿ—ಉಂಟುಮಾಡಬೇಕಾ ದರೆ, ಆ ವಾರ್ತೆಗಳ ವರದಿಯೂ ಅಭಿಪ್ರಾಯಗಳ ನಿರೂಪಣವೂ ನಿಜವಾಗಿರ ಬೇಕಾದ್ದೂ ಶೀಘ್ರವಾಗಿರಬೇಕಾದ್ದೂ ಅಗತ್ಯವಾಗಿರುತ್ತದೆ.

ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದೊಡನೆ ಮಾಡುತ್ತಿರುವ ಯುದ್ಧದಿಂದ ಜನಜೀವನವು ಹೇಗೆ ಮೂರ್ಪಟ್ಟು ಬರುತ್ತದೆಂಬುದನ್ನು ಈ ಕಾಲದಲ್ಲಿ ವಿವ ರಿಸುವುದು ಅನಗತ್ಯ. ಯುದ್ಧದ ಅವಸ್ಥಾಂತರಗಳು ಕೆಟ್ಟವಿರಲಿ, ಒಳಿತಾದುವಿರಲಿ, ಕಾರಣಭೂತವಾದ ಘಟನಾವಳಿಗಳು ವಿಕೃತವಾಗಿ ಅಸತ್ಯವಾಗಿ ನಿರೂಪಿಸಲ್ಪ ಟ್ಟರೆ, ನಡೆದ ಘಟನಾವಳಿಗೆ ಸಮೀಚೀನವಾಗಿ ಅದರ ಪರಿಣಾಮವಾಗದೆ, ಬೇರೆಯೇ ಪರಿಣಾಮವಾಗುವಂತಹ ಸಂಭವವಿರುತ್ತದೆ. ಸಮಾಜದ ವ್ಯಕ್ತಿಗಳ ಆಶೆ ಉತ್ಸಾಹಗಳು ಮುದುಡಿ ಹೋಗುವ ಸಂಭವವಿರುತ್ತದೆ. ಈ ದೃಷ್ಟಿ ಯಿಂದಲೆ, ಬಹಳ ಪುರಾತನ ಕಾಲದಿಂದಲೂ ತಮ್ಮ ವಿಚಾರವಾಗಿ ನಿಜವಾದ ವಾರ್ತೆಗಳನ್ನು ಹರಡಿಸುವ ಅಗತ್ಯವನ್ನು ಸರಕಾರದವರು ಕಂಡುಕೊಂಡು ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿದ್ದರು. ಸುಳ್ಳು ವರ್ತಮಾನಗಳು ಹರಡ ದಿರುವುದು ಮಾತ್ರವಲ್ಲ; ನಿಜವಾದ ವರ್ತಮಾನಗಳು ಹರಡುವುದೂ ಅಗತ್ಯ ವಿರುತ್ತದೆ. ಮನುಷ್ಯನು ಬಹಳ ಕುತೂಹಲಿ. ಅತನಿಗೆ ಸೃಷ್ಟಿಯ ಯಾವಾ ಗಲೂ ನವನವೋನ್ಮೇಷಿ. ವರ್ತಮಾನದ ಅಭಾವವು ಅವನ ಮನಸ್ಸಿನಲ್ಲಿ ಇಲ್ಲದ ಬಿರುಗಾಳಿಯನ್ನು ಏಳಿಸಬಹುದು; ವರ್ತಮಾನದ ಅಭಾವವು ಅವನ ಮನಸ್ಸಿ ನಲ್ಲಿ ಕಟ್ಟತಂದ ಗೋಪುರಗಳನ್ನೆಲ್ಲ ಉರುಳಿಸಬಹುದು. ಹೀಗೆ, ಜನಜೀವ ನಕ್ಕೂ ದಿನವಾರ್ತೆಗೂ ಸಂಬಂಧವಿದೆ.

ಬಹಳ ವ್ಯಾಚೀನ ಕಾಲದಿಂದಲೂ ಅರಸರಾದವರು ಡಂಗುರವನ್ನು ಹೊಯ್ಯಿಸಿ, ತಮ್ಮ ಸರಕಾರದ ನಿರೂಪಗಳು ಪ್ರಜೆಗಳಿಗೆ ಸರಿಯಾಗಿ ಸಿಕ್ಕಿ, ತಮಗೂ ತಮ್ಮ ಪ್ರಜೆಗಳಿಗೂ ಇರುವ ಸಂಬಂಧವನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿದ್ದರು. ಡಂಗುರ ಹೊಯ್ದ ಅರಸನ ಸ್ಥಿತಿ ದುಃಸ್ಥಿತಿಯಾಗುವುದು. ಪರಸ್ಪರ ಸಂಬಂಧವು ಬಲಿಷ್ಠವಾಗಿ ಇರಬೇಕಾದರೆ, ಪರಸ್ಪರರ ವಾರ್ತೆ ತಿಳಿ ದಿರುವುದು ಅಗತ್ಯವಾಗಿರುತ್ತದೆ.

ಯುರೋಪಿನಲ್ಲಿ ಬಹಳ ದೊಡ್ಡ ಸಾಮ್ರಾಜ್ಯವನ್ನು ಕಟ್ಟಿಕೊಂಡ ರೋಮ ನರು ತಮ್ಮ ಸರಕಾರದ ಆಜ್ಞೆ, ನಿರೂಪ, ಇವುಗಳನ್ನೂ ಸಾಮ್ರಾಜ್ಯದಿಂದ ದೂರಕ್ಕೆ ಹೋಗಿ ಶತ್ರುಗಳೊಡನೆ ಹೋರಾಡುವ ಸೈನ್ಯಗಳ ವಿಚಾರ, ಸುದ್ದಿ ಇವುಗಳನ್ನೂ ಬರೆಯಿಸಿಕೊಂಡು ನಿರ್ದಿಷ್ಟವಾದ ಸಮಯದಲ್ಲಿ ನಿರ್ದಿಷ್ಟವಾದ ಸ್ಥಳದಲ್ಲಿ ಓದಿಸುವ ಪದ್ಧತಿಯನ್ನು ಇಟ್ಟುಕೊಳ್ಳಬೇಕಾಗಿ ಬಂದಿತು "ಎಕ್ಟಾಡಿರ್ನಾ" ಎಂಬ ಹೆಸರಿನ ಪತ್ರಿಕೆಯನ್ನು ಪ್ರಕಟಿಸಿ, ನ್ಯಾಯಸ್ಥಾನ ಗಳ ತೀರ್ಮಾನಗಳು ಸಾರ್ವಜನಿಕ ಸಭೆಗಳ ವರದಿಗಳು, ಹೊಸತಾಗಿ ಕಟ್ಟುವ ಕಟ್ಟಡಗಳ ಸಂಗತಿಗಳು, ಜನನ ಮರಣಗಳು, ವಿವಾಹವಿಚ್ಛೇದಗಳು—ಇವು ಗಳನ್ನೆಲ್ಲ ಅದರಲ್ಲಿ ಬರೆಯಿಸುತ್ತಿದ್ದರು. ಕ್ರಿಸ್ತ ಪೂರ್ವ ೯೯ರ ಆನಂತರ ಜೂಲಿಯಸ್ ಸೀಝರನ ಆಜ್ಞೆಯ ಪ್ರಕಾರ ರೋಮಿನ ಸೆನೆಟಿನ (ನ್ಯಾಯ ವಿಧಾಯಕ ಸಭೆ ವರದಿಗಳನ್ನು ಪ್ರಕಟಿಸುವುದಕ್ಕೂ ಪ್ರಾರಂಭವಾಗಿ, ಗುಟ್ಟಿನ ಲ್ಲಿರುವ ಸರಕಾರದ ಘೋರಣೆಯೂ ಬಹಿರಂಗವಾಗಿ, ಜನಜೀವನದ ಮೇಲೆ ವಾರ್ತೆಗಳ ವರ್ಚಸ್ಸು ಸರಿಯಾಗಿ ಸಂಕ್ರಮಿಸುವಂತೆ ಮಾಡಲನುವಾಯಿತು.

ಆದರೆ ಈಗ ಮುದ್ರಣದ ಮಹಾಕ್ರಾಂತಿಯ ಪರಿಣಾಮವಾಗಿ, ವಿದ್ಯು ಚ್ಛಕ್ತಿಯ ಶೋಧನೆಯ ಫಲವಾಗಿ ಜಗತ್ತು ಒಂದು ನಿಮಿಷಕ್ಕೆಂತ ಚಿಕ್ಕದಾಗಿ ಬಿಟ್ಟಿದೆ; ಒಂದೆಂಗಲಕ್ಕೆಂತ ಕಿರಿದಾಗಿಬಿಟ್ಟಿದೆ. ಮುದ್ರಣದ ಮಹಾ ಕ್ರಾಂತಿಯ ಮುಂದುವರಿದು ಬಂದೆಂತೆ, ಪತ್ರಿಕಾ ವ್ಯವಸಾಯವು ಅದರೊಡನೆ ಹುಟ್ಟಿ ಬೆಳೆದುಬಂದು ಇಂದಿನ ದಿವಸ ತನ್ನ ಬಲಿಷ್ಠವಾದ ಬಲೆಯನ್ನು ಜನರ ಮೇಲೆ ಜನರ ಭವಿಷ್ಯದ ಮೇಲೆ ಬೀರಿಕೊಂಡಿದೆ.

Public Service our Motto.

— WHILE IN MANGALORE *REMEMBER* —

THE Mangalore Automobiles, Ltd.,

Proprietors: The Mangalore City Bus Service.

Our Busses are at your service always!
They will carry you to all parts of the City!!
All kinds of comforts are neatly arranged!!!

Managing Agents:

KERWAR & CO.,

MANGALORE.

ಸಾರ್ವಜನಿಕ ಸೇವೆಯೇ ನಮ್ಮ ಧ್ಯೇಯ.

ನೀವು ಮಂಗಳೂರಿನಲ್ಲಿದ್ದಾಗ ನೆನಪಿರಲಿ.....

ಮಂಗಳೂರು ಒಟೊಮೊಬ್ಯಾಲ್ಸ್, ಲಿಮಿಟೆಡ್.

ಪ್ರೊಪ್ರೈಟರರು: ಮಂಗಳೂರು ಸಿಟಿ ಬಸ್ ಸರ್ವಿಸ್.

ನಮ್ಮ ಬಸ್ಸುಗಳು ನಿಮ್ಮ ಸೇವೆಗೆ ಸದಾ ಸಿದ್ಧವಾಗಿವೆ!
ನಗರದ ಯಾವ ಭಾಗಕ್ಕಾದರೂ ಅವು ನಿಮ್ಮನ್ನು
ಕೊಂಡೊಯ್ಯುವವು!!
ಎಲ್ಲಾ ತರದ ಸೌಕರ್ಯಗಳನ್ನು ನಿರ್ವಡಿಸಲಾಗಿದೆ!!!

ಮೆನೆಜಿಂಗ್ ಏಜಂಟರು:

ಕರ್ವಾರ್ ಎಂಡ್ ಕೊ., ಮಂಗಳೂರು.

ನೊವೆನಿನ ಕ್ರಮಪ್ರವರ್ತನದಿಂದಾಗಿ ಸಮುದ್ರಪ್ರಯಾಣವು ಹಿಂದಿನಷ್ಟು ಅಪಾಯಕರವಾಗಿ ಉಳಿಯಲಿಲ್ಲ. ಅದನ್ನು ಹಿಂದೆ ಬಿಸಿನೆಸ್ ಎಂಬಾತನು ಹುಡುಕಿದನು. ಬೇಸಿಗೆ ಸರಕಾರವು ಸಮುದ್ರ ಅಧಿಕಾರಿಗಳಲ್ಲಿ ಒಂದಲಾವಣೆಗೆ ಕಾರಣವಾಯಿತು, ತೆರಿಗೆಗಳು ಮತ್ತು ಸಾರ್ವಜನಿಕ ಸಂಗತಿಗಳು ಇವುಗಳೆಲ್ಲವನ್ನು ತಮ್ಮದೊಂದು ಪತ್ರಿಕೆಯಲ್ಲಿ ಒಂಭತ್ತನೆ ಶತಮಾನದಿಂದ ಪ್ರಕಟಿಸಿಬಂದರು ಈ ಪತ್ರಿಕೆಯು ಇಂದಿಗೂ ಕೂಡಾ "ಕೆಂಗ್‌ಜಾನ್" ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ

ಯುರೋಪಿನಲ್ಲಿ ಮುದ್ರಣದ ಸಂಶೋಧನೆಯ ಮೊದಲು ಕೈಬರಹದ ಪತ್ರಿಕೆಗಳನ್ನು ಕೆಲವು ಸರಕಾರದವರು ಪ್ರಕಟಿಸುತ್ತಿದ್ದರು ಅಂತಹ ಪತ್ರಿಕೆಗಳಲ್ಲಿ ಸರಕಾರವು ತಮ್ಮ ವಿಚಾರದಲ್ಲಿ ಜನರು ತಿಳಿಯಬೇಕಾಗಿದ್ದ ಸಂಗತಿಗಳನ್ನು ಪ್ರಕಟಿಸುತ್ತಿದ್ದಿತು ಜರ್ಮನಿಯಲ್ಲಿ, ವೆನಿಸಿನಲ್ಲಿ ಅಂತಹ ಪತ್ರಿಕೆಗಳ ಪ್ರಚಾರವಿದ್ದಿತು ಆದರೆ, ಅಚ್ಚುಗಳ ಸಹಾಯದಿಂದ ಮುದ್ರಣವು ಶೋಧಿತವಾದ ಅನಂತರ, ಜರ್ಮನಿ, ಫ್ರಾನ್ಸ್ ಮತ್ತು ಇಂಗ್ಲೆಂಡಿನಲ್ಲಿ—ನಾಧಾರಣ ಏಕಕಾಲದಲ್ಲಿಯೇ ಎಂಬಂತೆ, ಹದಿನೇಳನೆ ಶತಮಾನದಲ್ಲಿ ಮುದ್ರಿತವಾದ ಪತ್ರಿಕೆಗಳು ಪ್ರಾರಂಭವಾದುವು

ಆದರೆ, ಮೊದಲ ಪತ್ರಿಕೆಗಳಿಗೆ—ಸಮಾಜದ ನೈತ್ರಿಗಳಿಂದ ಪ್ರಾರಂಭಿಸಲ್ಪಟ್ಟ ಪತ್ರಿಕೆಗಳಿಗೆ—ವಿಶೇಷವಾದ ಗೌರವವಾಗಲಿ ಪ್ರೋತ್ಸಾಹವಾಗಲಿ ಸಿಕ್ಕಲಿಲ್ಲ ಮೊದಮೊದಲು ಜನರೇ ಅದನ್ನು ಕಡೆಗಣ್ಣಿನಿಂದ ನೋಡುತ್ತಿದ್ದರು ಪತ್ರವಾಗಿ ಅವುಗಳ ವಿಚಾರ ಮಾಹಿತಿಯಾಡತ್ತಿದ್ದರು ಹಾಗೆ ಆದುದಕ್ಕೆ ಇಂಗ್ಲೆಂಡಿನಲ್ಲಿ ಕಾರಣಗಳಿರಬಹುದು. ಅಲ್ಲಿಯವರೆಗೆ ಜನ ಸಾಮಾನ್ಯಕ್ಕೆ ಸರಕಾರದವರು ಕೊಡುವ ವಾರ್ತೆಗಳು ಮುಟ್ಟುತ್ತಿದ್ದಿಲ್ಲನೇನೋ? ಸರಕಾರದ ವಾರ್ತೆಗಳು ಶ್ರೀಮಂತರ ಸರಹದ್ದಿನಿಂದ ಹೊರಗೆ ಬರುತ್ತಿದ್ದಿಲ್ಲನೇನೋ! ಹೊಸ ಪತ್ರಿಕೆಯಾದ ಕೂಡಲೆ, ಅದರ ಪ್ರಯೋಜನವನ್ನು ಜನರು ಒಮ್ಮೆಲೆ ತಿಳಿಯದೆ ಹೋದರು. ಅಂತೂ ವರ್ತಮಾನ ಪತ್ರಿಕೆಯು ಅಂದಿನಿಂದ ಎಡೆಬಿಡದೆ ದುಡಿದು, ಇಂದಿನ ದಿವಸ ತನ್ನ ಸಾಮ್ರಾಜ್ಯವನ್ನು ಪ್ರತಿಯೊಬ್ಬ ಆಂಗ್ಲೇಯನ ಹೃದಯಾಂತರಾಳದಿಂದ ಕಟ್ಟಿಕೂಂಡು ಬಂದಿದೆ ಆ ಸಾಮ್ರಾಜ್ಯ ಚಿರಸ್ಥಾಯಿಯಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ

ಹಿಂದುಸ್ಥಾನಕ್ಕೆ ಈ ವರ್ತಮಾನ ಪತ್ರಿಕೆಗಳ ಪದ್ಧತಿಯು ಇಂಗ್ಲಿಷ್ ರಾಜ್ಯ ಭಾರದೊಡನೆ ಬಂದಿಳಿಯಿತು ಹದಿನೇಳನೆ ಶತಮಾನದಲ್ಲಿ, ಆಂಗ್ಲೇಯರು ಹಿಂದುಸ್ಥಾನದಲ್ಲಿ ಇಂಗ್ಲಿಷ್ ಶಾಲೆಗಳನ್ನೂ ಸ್ಥಾಪಿಸಿದೆಂದಿನಿಂದ ವರ್ತಮಾನ ಪತ್ರಿಕೆಗಳು ಸಂಖ್ಯೆಯಲ್ಲಿಯೂ ಬಲದಲ್ಲಿಯೂ ವರ್ಧಿಸುತ್ತಿವೆ.

ಇಲ್ಲಿಂದು ವಿಚಾರವನ್ನು ಮಾಡಬಹುದು ಚೀನಾದೇಶವು ಹಿಂದುಸ್ಥಾನದೊಡನೆ ಬಹಳ ಪ್ರಾಚೀನ ಕಾಲದಿಂದಲೂ ವ್ಯವಹಾರವನ್ನೂ, ಸಂಬಂಧವನ್ನು ಇಟ್ಟುಕೊಂಡು ಬಂದಿತ್ತು ಹದಿನೇಳನೆ ಶತಮಾನದಲ್ಲಿ ಮೊದಲ ಪತ್ರಿಕೆಗಳು ಪ್ರಾರಂಭವಾದ ಮುದ್ರಣ ಕಲೆಯು ಅಲ್ಲಿ ಆಗಿದ್ದರೆ ಅದರ ಪ್ರಯೋಜನವೇಕೆ ಹಿಂದುಸ್ಥಾನಕ್ಕೂ ಪರಸ್ಪರ ಸಂಬಂಧವು ಹಿಂದುಸ್ಥಾನದಲ್ಲಿ ಮುಸಲ್ಮಾನರ ದಾಳಿಗಳ ಕಾರಣದಿಂದಾಗಿ ತಪ್ಪಿ ಹೋಗಿತ್ತು ಆ ಕಾರಣದಿಂದಲೊ, ಮತ್ತಾವ ಕಾರಣದಿಂದಲೊ, ಅಷ್ಟು ಸಮೀಪದಲ್ಲಾದ ಸಂಶೋಧನೆ ಹಿಂದುಸ್ಥಾನಕ್ಕೆ ಬಾರದೆ ಹೋಯಿತು ಆದರೆ ಅನಂತರವೂ ಯುರೋಪಿಯಾನ ಕ್ರೈಸ್ತರು ವ್ಯಾಪಾರಕ್ಕಾಗಿಯೂ ರಾಜ್ಯ ನಿರ್ಮಾಣಕ್ಕಾಗಿಯೂ ಹಿಂದುಸ್ಥಾನಕ್ಕೆ ಬಂದಾಗ್ಯ ಮುದ್ರಣ ಸೌಕರ್ಯವಾಗಲಿ ಪತ್ರಿಕೆಗಳ ನದ್ಧತಿಯಾಗಲಿ ಆದಷ್ಟು ಶೀಘ್ರವಾಗಿ ಬಂದಿಲ್ಲವೆಂದೇ ಹೇಳಬೇಕು ಪೈದ್ರ ಬಾದಿನಲ್ಲಿ ಮುದ್ರಣದ ಯಂತ್ರವನ್ನು ತರಿಸಿದಂದು—ಆದಕ್ಕೆ ಬಲವಾದ ಆಕ್ಷೇಪವನ್ನು ಬ್ರಿಟಿಷ್ ಸರಕಾರದವರು ಮಾಡಿದ್ದರೆಂದೂ ಆ ಮುದ್ರಣದ ಯಂತ್ರ ಪೈದರಾಬಾದಿನಲ್ಲಿ ಆಗ ಸ್ಥಾಪಿತವಾಗಿಲ್ಲವೆಂದೂ ಹೇಳುತ್ತಾರೆ ಅಂದರೆ ಇಂದಿನ ದಿವಸದ ವಾಶ್ಚಾತ್ಯ ಸಂಸ್ಕೃತಿಯು ಬಲಿಷ್ಟವಾಗಿರುವುದಾದರೆ, ಅದು ಮುದ್ರಣದ ಸಹಾಯದಿಂದಲೆ ಎಂದವರಿಗೆ ಗೊತ್ತಿರುತ್ತದೆ ಈ ದೃಷ್ಟಿಯಿಂದ ಮುದ್ರಣವಾಗಲಿ ಪತ್ರಿಕೆಗಳಾಗಲಿ ಹಿಂದುಸ್ಥಾನಕ್ಕೆ ಬಹಳ ಅನಂತರ ಬಂದುದು ಶೋಚನೀಯವಾಗಿದೆ

ಪೋಗಲಾಯಿ ಚಕ್ರವರ್ತಿ ಅಕ್ಬರನಿಗೆ ಪೋರ್ತುಗೀಜ ವಾದ್ರಿಗಳು ಮುದ್ರಿವಾದ ಪುಸ್ತಕಗಳನ್ನು ತೋರಿಸಿದ್ದರೆಂದು ಚರಿತ್ರೆಯಿಂದ ಕಂಡುಬರುತ್ತದೆ ಅಕ್ಬರನಿಗೆ ಯಂತ್ರೋಪಕರಣಗಳ ವಿಷಯವಾಗಿ ತುಂಬ ಉತ್ಸಾಹವಿದ್ದರೂ ಆತನು ಏಕೆ ಮುದ್ರಣದ ವಿಚಾರ ದೀರ್ಘ ಆಲೋಚನೆ ಮಾಡಿಕೊಂಡು, ಅದನ್ನು ತನ್ನ ದೇಶದಲ್ಲಿ ಪ್ರಚುರವಡಿಸಿಲ್ಲವೆಂದು ಆಶ್ಚರ್ಯವಾಗುತ್ತದೆ ಪ್ರಾಯಶಃ ಹಿಂದೂ ಸ್ಥಾನದಲ್ಲಿ ಆಗ ಸರಕಾರಕ್ಕೂ ಸಮಾಜಕ್ಕೂ ಬಹಳ ಶಿಥಿಲವಾದ ಸಂಬಂಧವಿದ್ದುದೇ ಕಾರಣನಾಗಿರಬಹುದೆಂದು ಊಹಿಸಬಹುದು

ಆದರೆ ಇಂದು ನಮ್ಮ ದೇಶದಲ್ಲಿ ಪತ್ರಿಕೆಗಳು ತಾವು ಯಾವ ಕೆಲಸವನ್ನು ಮಾಡಿಹುದೋ ಆ ಆದನ್ನು ಮಾಡುತ್ತಾ ಬರುತ್ತಿವೆ. ಪತ್ರಿಕೆಗಳು ನಿಃವಾಗಿಯೂ ಒಲಿಷ್ಟವಾಗಿ, ಸಮಾಜಕ್ಕೆ ಪ್ರಯೋಜನಕಾರಿಗಳಾಗಬೇಕಾದರೆ, ಕಾದದ ಕೈಗಾರಿಕೆಯೂ ಮುದ್ರಣಾಲಯಗಳಲ್ಲಿ ಸುಧಾರಣೆಗಳೂ ಅಗತ್ಯವಾಗಿವೆ ಈ ಸುಧಾರಣೆಗಳು ಆಗುತ್ತ ಬಂದಂತೆ, ದಿನದಿಂದ ದಿನಕ್ಕೆ ಒದಲಾಯಿಸಿ, ಬೆಳದ ಬರುತ್ತಿರುವ ಸಮಾಜವು ಪತ್ರಿಕೆಗಳಿಂದ ಪಡೆಯುವ ಲಾಭವನ್ನು ಪಡೆದೇ ಪಡೆದು ಕೊಳ್ಳುವುದೆಂಬುದರಲ್ಲಿ ಸಂಶಯವಿಲ್ಲ

THE MYSORE PAPER MILLS LIMITED

HEAD OFFICE
Bangalore

MILLS
Bhadravati (*Mysore State Rly*)



BISON
Brand
PAPERS

PRINTINGS AND WRITINGS

Qualities **Antique laid and wove, Azure bonds**
etc., etc,

The Brand illustrated above stands for Indian Paper made in Mysore from 'Local Bamboo' by Indian Capital and Management

Enquiries to —
The Mysore Paper Mills Ltd., Bangalore, OR **Bhadravati.**

— ಪತ್ರಿಕೋದ್ಯೋಗಿಗಳ —
-"ಹಣೆಬರಹ"ಗಳು-

ಲೇಖಕ.—ಎನ್. ಜಿ. ಕಾಮತ್ ನೀಲೇಶ್ವರ

ನಾನೇನೂ ಜೋತಿಷ್ಯನೆಂದೆಣಿಸಬೇಡಿ— ಪತ್ರಿಕೋದ್ಯೋಗಿಗಳ ಹಣೆಬರಹವನ್ನು ಓದಿ ವ್ಯಾಖ್ಯಾನಿಸಲು. ನಾನು ಬರೆಯುವ 'ಹಣೆಬರಹ'ವು ಪತ್ರಿಕೆಗಳ ಭವಿಷ್ಯವನ್ನೇ ನಿರ್ಣಯಿಸುವಂತಹುದು. ಪತ್ರಿಕೋದ್ಯೋಗಿಗಳ ಕೈ ಚಳಕವು ಒಂದು ಪತ್ರಿಕೆಯಲ್ಲಿ ಕಾಣಬೇಕೆಂದಿದ್ದರೆ, ಅದರ ಹಣೆಬರಹವನ್ನು ಅಂದರೆ ಶಿರೋನಾಮೆಯನ್ನು ಆರ್ಥಾತ್ ತಲೆವಾಚಕವನ್ನು— ಇಂಗ್ಲೀಷಿನಲ್ಲಾದರೆ ಹೆಡ್ಡಿಗನ್ನು—ಒಮ್ಮೆ ಒದಿ ನೋಡಿರಿ. ಜನಜೀವನದಲ್ಲಿ ಯಾವ ಒದಲಾವಣೆಯನ್ನು ತರುವುದಕ್ಕೂ ಪತ್ರಿಕೆಗಳಿಗೆ ಹೇಗೆ ಶಕ್ತಿಯಿರುವುದೋ ಹಾಗೆಯೇ ಅವುಗಳ ಬಾಳ ನಲ್ಲಿ ತಲೆವಾಚಕಗಳಿಗೂ ಪರಿಣಾಮಕಾರಿಯಾದ ಶಕ್ತಿಯಿದೆ ಇದನ್ನರಿತೇ ಭಾರತದ ಸರಕಾರವು ಯುದ್ಧ ತೊಡಗಿದೊಡನೆ D. I. R. ಪ್ರಕಾರ ಪತ್ರಿಕೆಗಳಲ್ಲಿ ಒರುವ ಶಿರೋನಾಮೆಗಳಿಗೂ ಕೆಲವು ನಿರ್ಬಂಧಗಳನ್ನು ತಂದೊಡ್ಡಿದುದು.

ಪುಸ್ತಕಗಳ, ಕಿರುಗತೆಯ ಇಲ್ಲವೇ ಲೇಖನದ ಹೆಸರು ಚಲೋದಾಗಿದ್ದರೆ ಮಾತ್ರ ಅದು ವಾಚಕರನ್ನು ಆಕರ್ಷಿಸಬಲ್ಲುದು. "ನೂರೈನೂರು ಮಾತುಗಳನ್ನು ಸೇರಿಸಿ ಅಗ್ರಲೇಖನವೊಂದನ್ನು ಬರೆಯುವದಕ್ಕಿಂತಲೂ ಕಷ್ಟ ಅದಕ್ಕೊಂದ್ ಚಲೋ ತಲೆವಾಚಕವನ್ನು ಹುಡುಕಿ ಹಾಕಲು" ಎಂದು ಎ ಜಿ. ಗಾರ್ಡಿನ್ನರು ಒಮ್ಮೆ ಹೇಳಿರುವರು. ಶಬ್ದ ಜಾಲಗಳಿಂದ ಜಾದೂ ವಿದ್ಯೆಯನ್ನಾಡಿದ್ದ ಷೇಕ್ಸ್ ಪೀಯರರು ಒಮ್ಮೆ ತನ್ನ ನಾಟಕವೊಂದಕ್ಕೆ ಒಳ್ಳೆಯ ಹೆಸರು ದೊರೆಯದೆ ಕೊನೆಗೆ "ನೀನೆಣಿಸಿದಂತೇ" ಎಂಬ ಹೆಸರನ್ನು ಹಾಕಿದರೆಂದು ಒಂದು ಐತಿಹ್ಯವಿದೆ. ಒಲಿವರ್ ಗೋಲ್ಡ್‌ಸ್ಮಿತ್ತರೊಮ್ಮೆ ತನ್ನ ಸುಂದರ ನಾಟಕವೊಂದಕ್ಕೆ "ನಪ್ಪನವಿಚಾರ ಪರಂಪರೆಗಳಿಗೆ ಒಂದು ಪಿಲಿಂಗು" ಎಂದು ಕರದರು.

ಪತ್ರಿಕೋದ್ಯೋಗಿಗಳನ್ನು "ವಾರ್ತೋಪಜೀವಿಗಳು" ಎಂದು ಬಂಗಾಲಿಯಲ್ಲಿ ಟಾಗೋರರು ಕರೆದರು. ಪತ್ರಿಕೋದ್ಯೋಗಿಗೆ ಈ ತಲೆ ವಾಚಕಗಳನ್ನು ಹುಡುಕಿ ಹಿಡಿಯಲು—ವಾರ್ತೆಗಳಿಗೆ 'ಹಣೆಬರೆಹ'ಗಳನ್ನು ಬರೆಯಲು—ಯಾವ ಪ್ರಯಾಸವೂ ಇಲ್ಲ. ಕೆಲವೊಮ್ಮೆ ವಾರ್ತೆಗಳಿಗಿಂತಲೂ ಅದ್ಭುತಕರವಾಗಿರುತ್ತವೆ ಅವರ ತಲೆವಾಚಕಗಳು.

ಕಲ್ಕತ್ತದಲ್ಲಿ ಹೆಚ್ಚಿನ ದೈನಿಕಗಳು ನಸುಕಿನಲ್ಲೇ ಹೊರಬೀಳುವವು. ಬೆಳಗ್ಗಿನ ಚಾಪಾನವೂ, ಪತ್ರಿಕಾವಾಚನವೂ ಒಟ್ಟಿಗೆ ನಡೆಯುವುದು ಕ್ರಮ ಒಂದೆರಡು ಪತ್ರಿಕೆಗಳು ಮಾತ್ರ ಸಾಯಂಕಾಲ ಹೊರಡುವವು. ಟ್ರಾಮುಗಳಲ್ಲೂ, ಬಸ್ಸುಗಳಲ್ಲೂ, ನಡೆದು ಕೊಂಡೂ, ಹೋಗುವ ಹಲವರ ಚೀಲಗಳಿಂದ ಕಾಸುಗಳನ್ನು ಕನಿಯಲು ಯಾವಾಗಲೂ, ಹೊಸ ನ್ಯೂಸೇ ಬೇಕಾಗಿದೆ. ಎಡ್ವರ್ಡರ ಸ್ಥಾನ ತ್ಯಾಗ, ದ್ವಿತೀಯ ಯುದ್ಧದ ಘೋಷಣೆ, ಮದ್ರಾಸಿನಲ್ಲಿ ಬಾಂಬಿಂಗ್ ಮೊದಲಾದ ಮಹತ್ವದ ಬಿಸಿ ಬಿಸಿ ಸುದ್ದಿಗಳು ಯಾವಾಗಲೂದೊರೆಯಲಾರವು. ಅಂಥಾ ಸಂದರ್ಭಗಳಲ್ಲಿ ಪತ್ರಿಕೋದ್ಯಮಿಗಳ ಕೈಚಾತುರ್ಯವೇ ಬೇಕು ವಾಚಕರನ್ನು ಆಕರ್ಷಿಸಲು.

ಪತ್ರಿಕೋದ್ಯೋಗಿ ನೂಡುವ ವ್ಯವಹಾರದ ಕುರಿತು ಡಾ. ಜೂಲಿಯಸ್ ಹಕ್ಸ್‌ಲಿಯವರು ಅಂದವಾಗಿ ವಿವರಿಸಿರುವರು. ಪ್ರಸಿದ್ಧ ವೈಜ್ಞಾನಿಕನೊಬ್ಬನು ಅಮೇರಿಕಕ್ಕೆ ಬಂದಿಳಿದರೆ, ಪತ್ರಿಕೋದ್ಯೋಗಿಗಳು ಆತನನ್ನು ಬಂದು ಸುತು ಗಟ್ಟುವರು. ಒಬ್ಬನು ಹೀಗೆ ಕೇಳುವನು: ಚಂದ್ರ ಬಿಂಬದಲ್ಲೇನಿರುವದು?"

ವಿಜ್ಞಾನಿ: "ಸಿಲಿಕೇಟ್ಸ್"

ಪತ್ರಿಕೋದ್ಯೋಗಿ: "ಸಿಲಿಕೇಟ್ಸ್ ಎಂದರೇನು?'

ವಿಜ್ಞಾನಿ: "ಗಾಜನ್ನು ನಿರ್ಮಿಸಲು ಉಪಯೋಗಿಸುವ ಒಂದು ಪದಾರ್ಥ." ಸರಿ, ಇನ್‌ಟರ್‌ವ್ಯೂ ಮುಗಿಯಿತು.

ಮರುದಿನ ಅಮೇರಿಕನರು ಪತ್ರಿಕೆಯನ್ನು ಬಿಡಿಸಿದರ ಕಾಣುವುದು "ದೊಡ್ಡ ಶಿರೋನಾಮೆ" ವೈಜ್ಞಾನಿಕರ ಹೊಸ ಸಂಶೋಧನೆ, ಚಂದ್ರಬಿಂಬವು ಗಾಜಿನ ತುಂಡುಗಳಿಂದ ನಿರ್ಮಿಸಲ್ಪಟ್ಟಿತಂತೆ!

ಇದನ್ನೆಲ್ಲಾ ಸಹಿಸಬಹುದು. ಆದರೆ ಪತ್ರಿಕೋದ್ಯಮಿಗಳು ಮುಖಂಡರನ್ನು ಭೇಟಿಮಾಡಿ, ಸಂಭಾಷಣೆ ನಡೆಸಿ ಪತ್ರಿಕೆಗಳಲ್ಲಿ ಬರೆಯುವ ಶಿರೋನಾಮೆಗಳನ್ನು ಕಂಡರೆ, ಇವರಿಗೆ ಹೃದಯವಿಲ್ಲವೇನು? ಎನಿಸುವುದು ಶ್ರೀ ವಿಜಯಲಕ್ಷ್ಮಿ ಪಂಡಿತರು ಸಂ ಸ್ರಾಂತ್ಯದ ಮಂತ್ರಿಯಾಗಿದ್ದಾಗ ತಮ್ಮ ಅನುಭವಗಳ ಕುರಿತು ಒಂದು ಲೇಖನವನ್ನು ಬರೆದಿದ್ದರು. ಆಗೊಮ್ಮೆ ಲಂಡನ್ನಿನ ಪತ್ರಿಕೋದ್ಯೋಗಿಯೊಬ್ಬನು, ಇವರೊಡನೇ, ಭಾರತೀಯ ವ್ಯವಸ್ಥಾಪನ ಪದ್ಧತಿಯ ಕುರಿತು ಅಭಿಪ್ರಾಯವನ್ನು ಕೇಳಿದನಂತೆ. "ಅದೊಂದು ಒಳ್ಳೆಯ ಪದ್ಧತಿ' ಎಂದ ಶ್ರೀಮತಿಯವರು ಹೇಳಿದರು. ಆ ಸುದ್ದಿಯನ್ನು ಮರುದಿನದ ಪತ್ರಿಕೆಯಲ್ಲಿ ಒಂದು ದೊಡ್ಡ ಶಿರೋನಾಮೆಯನ್ನು ಹಾಕಿ ಮುದ್ರಿಸಿದ್ದರು. "ಭಾರತದ ಮಹಿಳಾ ಮಂತ್ರಿ, ಪ್ರಭಾತದಲ್ಲಿ ಒಂದು ಗಂಟೆ ತಲೆಕೆಳಗೆಮಾಡಿ ನಿಲ್ಲುವರು.'

ಮತ್ತೊಮ್ಮೆ ಬೇರೊಬ್ಬ ಸ್ತ್ರೀ ಪತ್ರಿಕೋದ್ಯೋಗಿ— "ಮನೆಗೆಲಸಗಳಲ್ಲಿ ನಿಮಗೆ ಅಭಿರುಚಿ ಇದೆಯೇ?" ಎಂಬ ಪ್ರಶ್ನೆಯನ್ನು ಹಾಕಿದಾಗ 'ಇದ' ಎಂದ ಸಹಜವಾಗಿ ಅವರು ಹೇಳಿದರು. ಈ ಸುದ್ದಿಯನ್ನು 'ಇದ್ದಂತೇ' ಹಾಕಿದ್ದರೆ ಅದರಲ್ಲಿ ಸ್ವಾರಸ್ಯವೇನು? ಬಂತು ಬೇರೊಂದು ದೊಡ್ಡ 'ಹಣೆಬರಹ' "ಭಾರತದ ವನಿತಾ ಮಂತ್ರಿಯು ಗಂಡನ ಹರಿವ ಬಟ್ಟೆಯನ್ನು ಹೂಲಿಯುವಳು ಒಳ್ಳೆಯ ಮನೆಗೆಲಸ! ಜನರನ್ನು ಆಕರ್ಷಿಸಿ ಪತ್ರಿಕೆಯ ಮಾರಾಟ-ಮಾಡಲು ಒಳ್ಳೆಯ ಉಪಾಯ!!

ಕೆಲವು ಸಲ, ಲೇಖನವನ್ನು ಬರೆದು ಜನರ ಮೆಚ್ಚುಗೆಯನ್ನು ಪಡೆಯಲು ಹಂಬಲಿಸುವ ಲೇಖಕರು ತಮ್ಮ ಲೇಖನಗಳಿಗೆ ಮಿರುಗುವ ಹೆಸರನ್ನು ಕೊಟ್ಟು ಹೋಗಿ ವಿಪರೀತ ಅನುಭವವನ್ನು ಪಡೆಯುತ್ತಿರುವುದು ಅಷ್ಟೇನೂ ಅಸಾಧಾರಣವಲ್ಲ.

ಈ ಹಲವು ರೀತಿಗಳಲ್ಲಿ ತಮ್ಮ ಲೇಖನಗಳಿಗೆ, ಪ್ರಚಾರ ದೊಂಬಿಯ ಪತ್ರಿಕೆಗಳ ಮಾರಾಟವನ್ನು ಹೆಚ್ಚಿಸಲು, ಜನರ ಮೆಚ್ಚುಗೆಯನ್ನು ಪಡೆಯಲು ಪತ್ರಿಕೋದ್ಯಮಿಗಳು ಚಲೋದಾದ ಹಣೆಬರಹಗಳನ್ನು ಹುಡುಕಿಹಿಡಿಯುತ್ತಾರೆ

For all kinds of - - - -

Pens & Pen Repairs

CONSULT

Ideal Pen Mart

MARKET ROAD, MANGALORE

ಎಲ್ಲಾ ತರದ - - - - - -

ಫೌಂಟನ್ ಪೆನ್ನುಗಳಿಗೆ

ಮತ್ತು ಫೌಂಟನ್ ಪೆನ್ ರಿಪೇರಿಗೆ

ಇವರನ್ನು ವಿಚಾರಿಸಿರಿ.

ಐಡಿಯಲ್ ಪೆನ್ ಮಾರ್ಟ್, ಮಾರ್ಕೆಟ್ ರಸ್ತೆ, ಮಂಗಳೂರು

Proprietor
M B KULUR

ಪ್ರೊಪ್ರೈಟರ್
ಎಂ. ಬಿ. ಕೂಲೂರು

LET US BE YOUR BANKERS

The Vijaya Bank Ltd.

H O —— **Mangalore**

Branches at — *Coondapur, Brahmawar, Udipi, Karp, Karkala, Kadri-Mangalore, City Mangalore, Kasaragod, Puttur*

All kinds of
Banking business Transact

ಪತ್ರಿಕೋದ್ಯೋಗಿ ಸಮ್ಮೇಲನದಲ್ಲಿ ಸ್ವೀಕೃತವಾದ ನಿರ್ಣಯಗಳು!

ಸಂತಾಪ ಸೂಚನೆ

ಈ ಸಮ್ಮೇಳನವು ಪತ್ರಿಕೋದ್ಯೋಗಿಯಾಗಿ ರಾಷ್ಟ್ರಕ್ಕೆ ಸೇವೆ ಸಲ್ಲಿಸಿದ ಶ್ರೀ। ಮಹದೇವ ದೇಸಾಯಿ ಅವರ ನಿಧನದಿಂದಲೂ ಈ ಕೆಳಗೆ ಹೆಸರಿರುವ ಮಹನೀಯರ ನಿಧನದಿಂದಲೂ ತನಗುಂಟಾಗಿರುವ ಸಂತಾಪವನ್ನು ವ್ಯಕ್ತಪಡಿಸುತ್ತದೆ

—"ಶ್ರೀಯುತರು ರಮಾನಂದ ಛಟರ್ಜಿ, ಪಂಡಿತ ತಾರಾನಾಥ: ಎಂ. ಎನ್. ಕಾಮತ್, ಕೆ. ಭೀಮರಾವ್ ಮತ್ತು ವಿದ್ಯಾ ಭೂಷಣ ಸಂಜೀವರಾವ್.

ಪತ್ರಿಕೆಗಳ ಮೇಲಿನ ನಿರ್ಬಂಧ

ಪತ್ರಿಕೆಗಳ ವಾರ್ತೆಗಳು, ಪ್ರಧಾನವಾಗಿ ಭಾರತೀಯ ಪತ್ರಿಕೆಗಳ ಅಭಿಪ್ರಾಯಗಳು, ಮತ್ತು ಆಂತರಿಕ ಪರಿಸ್ಥಿತಿಯ ಕುರಿತು ಜವಾಬ್ದಾರೀ ಧುರೀಣರ ಪ್ರಸ್ತಾವನೆಗಳು ದೇಶದ ಹೊರ ಹೋಗುವುದನ್ನು ಮತ್ತು ವಾರ್ತೆಗಳು ದೇಶದ ಒಳಕ್ಕೆ ಬರುವುದನ್ನು ಹತೋಟಿಯಲ್ಲಿಟ್ಟು, ರಾಜಕೀಯ ಕಾರಣ ತೋರಿಸಿ ತಡೆಯೊಡ್ಡುತ್ತಿರುವ ಸರಕಾರದ ಧೋರಣೆಯನ್ನು ಈ ಸಮ್ಮೇಳನವು ಖಂಡಿಸುತ್ತದೆ, ಮತ್ತು ವಾರ್ತೆಗಳ ಮೇಲಿನ ನಿರ್ಬಂಧವು ಮಿಲಿಟರಿ ರಕ್ಷಣೆಯನ್ನಲ್ಲದೆ ರಾಜಕೀಯ ಅಥವಾ ಬೇರಾವ ವಿಷಯವನ್ನೂ ಹೊಂದಿಕೊಂಡಿರಕೂಡದೆಂದು ಅಭಿವ್ಯಾಯಪಡುತ್ತದೆ; ಅಲ್ಲದೆ ವಾರ್ತೆಗಳ ಮೇಲೆ ಕತ್ತರಿ ಪ್ರಯೋಗಿಸಿದಾಗಲೆಲ್ಲ ಆ ವಿಷಯವನ್ನು, ತನ್ನ ಕಾರ್ಯಕ್ಕೆ ಕಾರಣ ತೋರಿಸಿ, ಸರಕಾರವು ಕೇಂದ್ರ ಪತ್ರಿಕಾ ಬೋಧಕ ಸಮಿತಿಯ ಎದುರು ಇಡಬೇಕು ಎಂದು ಸ್ಪಷ್ಟಪಡಿಸುತ್ತದೆ.

ಹಿಂದುಸ್ಥಾನ್ ಟೈಮ್ಸ್ ಮತ್ತು ನೇಶನಲ್ ಕಾಲ್ ಪತ್ರಿಕೆಗಳ ಮೇಲಿನ ನಿರ್ಬಂಧ

'ಹಿಂದೊಸ್ಥಾನ್ ಟೈಮ್ಸ್' ಮತ್ತು 'ನೇಶನಲ್ ಕಾಲ್' ಪತ್ರಿಕೆಗಳ ಮೇಲೆ, "೧೯೪೨ ಆಗಸ್ಟ್ ೮ರ ಅನಂತರ ಎಂ. ಕೆ. ಗಾಂಧಿಯವರು ಇಲ್ಲವೆ ಅಕ್ರಮ ಬದ್ಧನೆಂದು ಸಾರಲ್ಪಟ್ಟ ಕಾಂಗ್ರೆಸ್ ಸಮಿತಿಯ ಸದಸ್ಯರು ಮಾಡಿದರೆಂದು ಹೇಳಲಾದ ಪ್ರಸ್ತಾವನೆಗಳನ್ನೂ ಅವುಗಳ ಮೇಲಿನ ವ್ಯಾಖ್ಯೆಗಳನ್ನೂ ಪ್ರಕಟಿಸುವುದಕ್ಕೆ ಮುಂಚಿತವಾಗಿ ದಿಲ್ಲಿಯ ವಿಶೇಷ ಪತ್ರಿಕಾ ಬೋಧಕರಿಗೆ ಪರೀಕ್ಷೆಗೆ ಒಪ್ಪಿಸಬೇಕು; ಮತ್ತು ಅವರ ಸಮ್ಮತಿ ಸಿಗದೆ ಹೋದಲ್ಲಿ ಪ್ರಕಟಿಸಬಾರದು" ಎಂದು ದಿಲ್ಲಿಯ ಭೀಷ್ ಕಮಿಶನರರು ಇತ್ತೀಚೆಗೆ ಹೊರಡಿಸಿದ ಆಜ್ಞೆಯನ್ನು ಈ ಸಮ್ಮೇಳನವು ಖಂಡಿಸುತ್ತದೆ ಮತ್ತು ಅದನ್ನು ಒಡನೆಯೇ ಹಿಂತೆಗೆಯಬೇಕೆಂದು ಹೇಳುತ್ತದೆ.

ನಾಯ್ಡು ಬಾಯಿಯ ಬೀಗಮುದ್ರೆ

"ಸಾರ್ವಜನಿಕ ಸಭೆ—ಮೆರವಣಿಗೆಗಳಲ್ಲಿ ಭಾಗವಹಿಸಬಾರದು ಮತ್ತು ಭಾರತದಲ್ಲಿರುವ ಯಾವುದೇ ಪತ್ರಿಕೆಗೂ ಪ್ರಕಟಣೆ ಕೊಡಕೂಡದು" ಎಂದು ಸರ್ಕಾರವು ಶ್ರೀಮತಿ ಸರೋಜಿನಿ ನಾಯ್ಡು ಅವರ ಮೇಲೆ ಹೊರಿಸಿರುವ ನಿರ್ಬಂಧ ಕಾಜ್ಞೆಯನ್ನು ಈ ಸಮ್ಮೇಳನವು ವಿರೋಧಿಸುತ್ತದೆ; ಮತ್ತು ನಾಗರಿಕ ಸ್ವಾತಂತ್ರ್ಯದ ಧ್ಯೇಯಗಳಿಗೆ ವಿರೋಧವಾಗಿರುವುದು ಮಾತ್ರವೇ ಅಲ್ಲ, ಭಾರತೀಯ ಪತ್ರಿಕೆಗಳಿಗೆ ಅವಮಾನಕರವೂ ಆಗಿರುವ ಈ 'ಬಾಯಿಗೆ ಬಟ್ಟೆ ತುರುಕುವ ಆಜ್ಞೆ'ಯನ್ನು ಒಡನೆಯೇ ಹಿಂತೆಗೆಯಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯ ಪಡಿಸುತ್ತದೆ.

ಆ। ಭಾ। ವೃತ್ತಪತ್ರಿಕಾ ಸಂಪಾದಕರ ಪರಿಷತ್ತಿನಲ್ಲಿ 'ಕರ್ನಾಟಕ'ಕ್ಕೆ ಎರಡು ಸ್ಥಾನ ಗಳಿಸಿಕೊಂಡ ನಿರ್ಣಯದ ಕುರಿತು ಅಧ್ಯಕ್ಷ ಶ್ರೀ। ಖಾಡಿಲಾಸನವರು ಸಭೆಯಲ್ಲಿ ತಿಳಿಸುತ್ತಿರುವುದು.

ಜಾಮೀನು ಹಣ ಹಿಂದೆ ಕೊಡಿರಿ

೧೯೪೦ರ ವೈಸೂರು ನ್ಯೂಸ್ ಪೇಪರ್ಸ್ ಆಕ್ಟಿನ ಮೇರೆಗೆ ಬೆಂಗಳೂರಿನ 'ವಿಶ್ವಕರ್ನಾಟಕ' ಸಾಪ್ತಾಹಿಕ ಮತ್ತು ಮೈಸೂರಿನ 'ಮೈಸೂರು ಪತ್ರಿಕಾ' ಪತ್ರಿಕೆಗಳಿಂದ ಪಡೆದಿರುವ ಜಾಮೀನು ಹಣವನ್ನು ಮೈಸೂರು ಸರಕಾರವು ಒಡನೆಯೇ ಹಿಂದೆ ಕೊಡಬೇಕೆಂದು ಈ ಸಮ್ಮೇಳನವು ಒತ್ತಾಯ ಪೂರ್ವಕ ಕೇಳುತ್ತದೆ.

ಸ್ವಾಗತ ಸಮಿತಿಯಲ್ಲಿ

ಸ್ವಾಗತಾಧ್ಯಕ್ಷ ಶ್ರೀ। ಕುಡ್ಪರು (ಬಲದಿಂದ ಎಡಕ್ಕೆ) ಎರಡನೆಯವರು. ಸ್ವಾಗತ ಕಾರ್ಯದರ್ಶಿಯರು (ಬಲದಿಂದ ಎಡಕ್ಕೆ) ಶ್ರೀಯುತರು ತಿರುಮಲೇಶ್ವರ ಭಟ್, ಕೆ. ಕೆ. ಶೆಟ್ಟಿ ಮತ್ತು ಕುಳುಕುಂದ ಶಿವರಾಯ-ಅವರು.

ಕರ್ನಾಟಕ ಪತ್ರಿಕೋದ್ಯೋಗಿ ಸಂಘ

ಕರ್ನಾಟಕ ಪತ್ರಿಕೋದ್ಯೋಗಿ ಸಂಘದ ೧೯೪೪-೪೫ನೇ ವರ್ಷಕ್ಕೆ ಈ ಕೆಳಗಿನ ಸದಸ್ಯರನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ಈ ಸಮ್ಮೇಳನ ಆರಿಸುತ್ತದೆ.

ಶ್ರೀ। ಮೋಹರೆ ಹಣಮಂತ ರಾಯರು (ಅಧ್ಯಕ್ಷರು); ಶ್ರೀ। ವಿ. ಎಸ ಕುಡ್ಪ (ಉಪಾಧ್ಯಕ್ಷರು ಮತ್ತು ಕೋಶಾಧಿಕಾರಿ); ಶ್ರೀ। ಬಿ. ಎನ್. ಗುಪ್ತ (ಉಪಾಧ್ಯಕ್ಷ); ಶ್ರೀ। ಪಿ. ಬಿ ಶ್ರೀನಿವಾಸನ್ (ಉಪಾಧ್ಯಕ್ಷ); ಶ್ರೀಯುತರು ಕುಳುಕುಂದ ಶಿವರಾಯ, ಎ ನಂಜುಂಡ ರಾವ್ ಮತ್ತು ಹ. ರಾ. ಪುರೋಹಿತ (ಇವರು ಕಾರ್ಯದರ್ಶಿಯರು); ಶ್ರೀಯುತರು ಹರ್ಡೇಕರ್ ಮಂಜಪ್ಪ, ಅನಂತ ರಾವ್ ಚಿಕ್ಕೋಡಿ, ಹಿ. ರಾ. ಮಲ್ಯ, ಹುರುಳಿ ಭೀಮರಾವ್, ಕಡಂಗೋಡ್ಲು ಶಂಕರ ಭಟ್ಟ ಎ ಎಸ್. ಕಾಮತ್, ಹರೇಮರ, ಎನ್. ಎಸ್. ವೆಂಕೋಬ ರಾವ್, ತಿಮಲೆ ತಾತಾಚಾರ್ಯ ಶರ್ಮ, ಬೆಳಿಯಪ್ಪ, ಎಸ್. ಡಿ. ನಾಡಕರ್ಣಿ, ಹೊಳೆಬಸ ಶಾಸ್ತ್ರಿಗಳು, ಜಿ ಆರ್ ಜಾಗಿರ್‌ದಾರ್—(ಸಮಿತಿಯ ಇತರ ಸದಸ್ಯರು).

೧೯೪೪-೪೫ರ ಮಟ್ಟಿಗೆ ಸಂಘದ ಮುಖ್ಯ ಕಾರ್ಯಾಲಯವು ಮಂಗಳೂರಿನಲ್ಲಿ ಇರಬೇಕೆಂದು ಈ ಸಮ್ಮೇಳನವು ಗೊತ್ತುಮಾಡುತ್ತದೆ.

ಆ। ಭಾ। ಪತ್ರಿಕಾ ಸಂಪಾದಕರ ಪರಿಷತ್ತು ಮತ್ತು ಕರ್ನಾಟಕ ಪತ್ರಿಕೋದ್ಯೋಗಿಗಳು

ಆಶ್ರಿತ ಸಂಸ್ಥಾನಗಳಲ್ಲಿರುವ ಪತ್ರಿಕಾ ಸಂಪಾದಕರನ್ನು ತಮ್ಮ ಪರಿಷತ್ತಿನ ಸೇರಿಸಿ ಅವರ ವಿಶೇಷ ಪ್ರಶ್ನೆಗಳನ್ನು ವಿಶೇಷ ಉಪಸಮಿತಿಗಳ ಮೂಲಕ ಬಗೆಹರಿಸಬೇಕು; ಮತ್ತು ತನ್ನ ಈಗಿನ ಘಟನೆಯಲ್ಲಿ ತಿದ್ದುಪಡಿಮಾಡುವುದರ ಮೂಲಕ ಕರ್ನಾಟಕದ ಆಶ್ರಿತ ಸಂಸ್ಥಾನ ವಿಭಾಗಗಳ್ಕೂ ಬ್ರಿಟಿಷ್ ವಿಭಾಗಗಳ್ಕೂ ಒಂದೊಂದು ಸ್ಥಾನವನ್ನು ತನ್ನ ಸ್ಥಳಿಯ ಸಮಿತಿಯಲ್ಲಿ ಕೊಟ್ಟು, ಕರ್ನಾಟಕಕ್ಕೆ ತಕ್ಕ ಪ್ರಾ

ನಿದ್ಯನನ್ನು ಕಲ್ಪಿಸಬೇಕೆಂದು ಅ ಭಾ ಪತ್ರಿಕಾ ಸಂವಾದಕರ ನಿರ್ಣಯವನ್ನು ಈ ಸಮ್ಮೇಲನವು ಕೇಳಿಕೊಳ್ಳುತ್ತದೆ.

ಪತ್ರಿಕೋದ್ಯಮದ ಮೇಲೆ ಪುಸ್ತಕ

ಈ ಕೆಳಗಿನ ವಿಷಯಗಳ ಮೇಲೆ ಒಂದೊಂದು ಪುಸ್ತಕವನ್ನು ಬರೆಯಿಸಿ ಪ್ರಕಟಿಸಲು ೧೦೦ ರೂ ಗಳ ಬಹುಮಾನಕೊಡಲಾಗುವುದೆಂದು ಪ್ರಸಿದ್ಧಿಸಲು ಈ ಸಮ್ಮೇಳನವು ಕರ್ನಾಟಕ ಪತ್ರಿಕೋದ್ಯೋಗಿ ಸಂಪಕ್ಕ ತಿಳಿಸುತ್ತದೆ ೧ ಕನ್ನಡ ಪತ್ರಿಕೋದ್ಯಮದ ಚರಿತ್ರ, ೨ ವಾರ್ತ ವರದಿ ಮಾಡುವ ಕಲೆ, ೩ ಬೇಟಿಯಾಗುವ ಕಲೆ, —ಮತ್ತು ಪುಸ್ತಕವನ್ನು ಪರೀಕ್ಷಿಸಿ ಬಹುಮಾನವನ್ನು ಕೊಡಲು ಶ್ರೀಯುತರು ವಿ ಎಸ್ ಕುಡ್ವ, ಹೆ ರಂ ಮೋಹರೆ, ಪಿ ಆರ್ ರಾಮಯ್ಯ, ಕೋ. ಶಿ ಕಾರಂತ— ಇವರನ್ನಳಗೊಂಡ ಒಂದು ಸಮಿತಿಯನ್ನು ಸಮ್ಮೇಲನವು ನೇಮಿಸುತ್ತದೆ

ಕೃತಜ್ಞತೆ ಸೂಚನೆ

ಮೇಲಿನ ೧೫೦ ರೂ ಗಳ ಬಹುಮಾನವನ್ನು ಕೊಡಲೊಪ್ಪಿರುವ ಶ್ರೀ। ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಈ ಸಮ್ಮೇಳನವು ತನ್ನ ಕೃತಜ್ಞತೆಯನ್ನು ಒಪ್ಪಿಸುತ್ತದೆ

ಪತ್ರಿಕೋದ್ಯೋಗಿಗಳಿಗೆ ತುಟ್ಟಿ ಭತ್ತೆ

ಆಹಾರ ಮತ್ತಿತರ ಸಾದನಗಳ ಬೆಲೆ ಮಿತಿ ಮೀರಿ ಏರಿರುವ ಕಾರಣದಿಂದ ಕರ್ನಾಟಕದಲ್ಲಿರುವ ಪತ್ರಿಕೆಗಳ ಮ್ಯಾನೆಲಿಕರೆಲ್ಲ ಸಾಕಷ್ಟು ತುಟ್ಟಿಭತ್ತೆಯನ್ನು ತಮ್ಮ ಕೈಕೆಳಗ ದುಡಿಯುವ ಪತ್ರಿಕೋದ್ಯೋಗಿಗಳಿಗೆ ಕೊಡಬೇಕೆಂದು ಈ ಸಮ್ಮೇಳನವು ವಿನಂತಿ ಮಾಡುತ್ತದೆ

ಕನ್ನಡ ಪ್ರಾಂತದ ವಾರ್ತೆಗಳು

ಕನ್ನಡ ಮಾತನಾಡುವ ಜನರಿಗೆ ಬೇಕಾಗುವ ವಾರ್ತೆಗಳನ್ನು ಸಂಗ್ರಹಿಸಿ ಕೊಡಲು ಭಾರತದಲ್ಲಿರುವ ವಾರ್ತಾ ಸಂಸ್ಥೆಗಳಿಗೆ ಈ ಸಮ್ಮೇಳನವು ಸೂಚನೆ ಕೊಡುತ್ತದೆ, ಮತ್ತು ವಾರ್ತಾ ವಿತರಣದಲ್ಲಿ ಈ ಯತ್ನಕ್ಕೆ ಅನಶ್ಯವಿರುವುದನ್ನು ಒಡನೆಯೇ ಮಾಡಬೇಕೆಂದು ಕರ್ನಾಟಕದಲ್ಲಿ ಪ್ರಕಟನಾಗುತ್ತಿರುವ ಪತ್ರಿಕೆಗಳ ಸಂಪಾದಕರಿಗೆ ವಿನಂತಿ ಮಾಡುತ್ತದೆ

ಮುದ್ರಣ ಕಾಗದ ಮತ್ತು ಹೆಚ್ಚು ಪುಟ

ಹೆಚ್ಚು ಮುದ್ರಣ ಕಾಗದವು ಈ ದೇಶಕ್ಕೆ ಬಂದು, ಪತ್ರಿಕೆಗಳಿಗೆ ದೊರಕುವ ಅಂಶವು ಹೆಚ್ಚಿ, ಪ್ರತಿ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಹೆಚ್ಚು ಪುಟಗಳಾಗುವಂತೆ ನ್ಯೂಸ್ ಪ್ರಿಂಟು ನಿಯಂತ್ರಣಾಜ್ಞೆಯನ್ನು ಸಡಿಲುಪಡಿಸಬೇಕೆಂದು ಈ ಸಮ್ಮೇಲನವು ಭಾರತ ಸರಕಾರವನ್ನು ಕೇಳುತ್ತದೆ

ಕನ್ನಡ ಶೀಘ್ರ ಲಿಪಿ ಮತ್ತು ಪತ್ರಿಕೋದ್ಯೋಗಿಗಳು

ಕನ್ನಡದಲ್ಲಿ ಈಗಾಗಲೇ ನಾಲ್ಕೈದು ಶೀಘ್ರ ಲಿಪಿಗಳಿವೆ ಇಂಗ್ಲಿಷ್ ಪತ್ರಿಕೋದ್ಯೋಗದಂತೆ ಕನ್ನಡ ಪತ್ರಿಕೋದ್ಯೋಗವನ್ನೂ ತಜ್ಞವೈದ್ಯಿಪಡಿಸುವಸಲುವಾಗಿ, ಎಲ್ಲ ಕನ್ನಡ ಪತ್ರಿಕೋದ್ಯೋಗಿಗಳು ಯಾವುದಾದರೊಂದು ಕನ್ನಡ ಶೀಘ್ರ ಲಿಪಿಯನ್ನು ಕಲಿಯಬೇಕೆಂದು ಈ ಸಮ್ಮೇಲನವು ಸೂಚಿಸುತ್ತದೆ

ಕನ್ನಡ ವಿಶ್ವವಿದ್ಯಾಲಯ ಮತ್ತು ಪತ್ರಿಕೋದ್ಯಮ

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮವು ಒಂದು ಅಭ್ಯಸನದ ವಿಷಯವಾಗಬೇಕೆಂದು ಈ ಸಮ್ಮೇಲನವು ಅಭಿಪ್ರಾಯಪಡುತ್ತದೆ, ಮತ್ತು ಮೈಸೂರು, ಮದ್ರಾಸು, ಮುಂಬಯಿ ಮತ್ತು ಹೈದರಾಬಾದು (ದಕ್ಷಿಣ)ಗಳ ವಿಶ್ವವಿದ್ಯಾನಿಲಯಗಳು ಪತ್ರಿಕೋದ್ಯಮವನ್ನು ವಾರವಾಗಿ ಇಡಬೇಕೆಂದು ಒತ್ತಾಯಪಡಿಸುತ್ತದೆ

ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯ

ಕರ್ನಾಟಕದಲ್ಲಿ ಇನ್ನೊಂದು ವಿಶ್ವವಿದ್ಯಾನಿಲಯವಿರಬೇಕೆಂಬ ಚಳವಳಕ್ಕೆ ಈ ಸಮ್ಮೇಳನವು ಪೂರ್ಣ ಬೆಂಬಲ ಕೊಡುತ್ತದ ಮತ್ತು ಜನಮತವನ್ನು ಈ ಕುರಿತು ಅಣಿಗೊಳಿಸಬೇಕೆಂದು ಎಲ್ಲಾ ಪತ್ರಿಕೆಗಳನ್ನು ಕೇಳುತ್ತದೆ

ಪಾರಿಭಾಷಿಕ ಶಬ್ದಕೋಶ

ಪತ್ರಿಕೋದ್ಯೋಗಿಗಳ ಉಪಯೋಗಕ್ಕೆ ಬೀಳುವಂತಹ ಒಂದು ವಾರ ಭಾಷಿಕ ಗ್ರಂಥವನ್ನು ನಿರ್ಮಿಸುವುದಕ್ಕಾಗಿ ಶ್ರೀಯುತರು ಶಿವರಾಮ ಕಾರಂತ ವಿ ಬಿ ನಾಯಕ್, ನಿದ್ದವ್ವನವಳ್ಳಿ ಕೃಷ್ಣ ಶರ್ಮ, ವಿ ಸೀತಾರಾಮಯ್ಯ ಇವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸುತ್ತದೆ ಮತ್ತು ಎಲ್ಲಿ ಕನ್ನಡ ಪತ್ರಿಕಾ ಕಾರ್ಯಾಲಯಗಳ ಸಹಕಾರ ಪಡೆದು ಆರಂಭದ ಕಾರ್ಯವನ್ನು ಪೂರೈಸಲು ಶ್ರೀ। ಕಾರಂತರಿಗೆ ಅಧಿಕಾರ ಕೊಡುತ್ತದೆ

ಕರ್ನಾಟಕದ ಏಕೀಕರಣಕ್ಕೆ ಬೆಂಬಲ

ಕರ್ನಾಟಕದ ಏಕೀಕರಣಕ್ಕಾಗಿ ಇರುವ ಚಳವಳಕ್ಕೆ ಈ ಸಮ್ಮೇಳನವು ಬೆಂಬಲವನ್ನು ವ್ಯಕ್ತಪಡಿಸಿ, ಆ ಕುರಿತು ಜನರಲ್ಲಿ ಹೆಚ್ಚಿನ ಪ್ರಚಾರಮಾಡಬೇಕೆಂದು ಪತ್ರಿಕೆಗಳನ್ನು ಕೇಳಿಕೊಳ್ಳುತ್ತದೆ

ಮನಸ್ಸಿಗೆ ಬೇಸರವಾದಾಗ—ಕಿರುನಗೆ ಅರಳದಿರುವಾಗ

ಮಂಗಳೂರು

ಸ್ವಸ್ತಿಕಾ ಬೀಡಿಗಳನ್ನು

TRADE SWASTIKA MARK

ಸೇದಿ ಆನಂದಪಡಿರಿ

ಆಹ್ಲಾದಕರ ಸೇವನ! ಸುವಾಸಿಕ ಹೊಗೆ!

ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಏಜಂಟರು ಬೇಕಾಗಿದ್ದಾರೆ

Swastika Dose A Day Keeps Your Worries Away

ಇವರಿಗೆ ಬರೆಯಿರಿ ಸ್ವಸ್ತಿಕಾ ಬೀಡಿ ವರ್ಕ್ಸ್, ರಥಬೀದಿ, ಮಂಗಳೂರು

For Particulars Write to
SWASTIKA BEEDI WORKS,
Car Street, MANGALORE

CHANDRA

Snow * & * Castrola

For Beauty & Complexion

ಚಂದ್ರಾ ಸ್ನೋ ಮತ್ತು ಕೆಸ್ಟ್ರೋಲಾ

ಸೌಂದರ್ಯ ---- ಸಾಧನಗಳು

Sole Distributors ---- ---- S N SHENOY

Sadananda Stores, Santhekatte Udupi

"ಕನ್ನಡ ಪತ್ರಿಕೋದ್ಯಮ ಉಜ್ವಲವಾಗುವುದು!"

ಶ್ರೀ। ಪಿ. ಆರ್. ರಾಮಯ್ಯ ಅವರಿಂದ ಪತ್ರಿಕಾ ಪ್ರದರ್ಶನದ ಉದ್ಘಾಟನೆ

ಪತ್ರಿಕಾ ಪ್ರದರ್ಶನದ ಉದ್ಘಾಟನೆಯನ್ನು ಮಾಡಿ ತಮ್ಮ ಜೊತೆಯಲ್ಲಿ ಬಂದಿದ್ದ 'ಲಿ ನ್ಯೂಸ್' ಪತ್ರಿಕೆಯ ಸಂಪಾದಕ ಶ್ರೀ। ಪಿ. ಆರ್. ರಾಮಯ್ಯ ಅವರು ಹೀಗಂದರು.

ಕರ್ನಾಟಕದ ನಂದನವನ

'ಮಂಗಳೂರು ಕರ್ನಾಟಕದ ನಂದನವನದ ದಿಂದ ಯಾರೂ ಹೇಳಿ ದ್ದರು ಇಂದಿಗೂ ತ ಪದರು ಅದೆ ಕಲೆ—ಸಂಸ್ಕಾರಿಕ—ಸಂಸ್ಕೃತಿಯಲ್ಲಿ ಪ್ರಧಾನ ಪತ್ರ ಪಹಿಸಿದೆ ಈ ಮಂಗಳೂರು. ಇಂತಹ ಸ್ಥಳದಲ್ಲಿ ಈ ಸಮ್ಮೇಳನ ಜರಗುತ್ತಿ ರುವುದು ಸಮಂಜಸವೇ ಸರಿ

'ವೃತ್ತ ಪತ್ರಿಕೋದ್ಯಮದ ಕಡೆಗೆ ದೃಷ್ಟಿ ಹರಿಸಿದರೂ ಮಂಗಳೂರಿನ ಪ್ರಾಧಾನ್ಯ ಕಂಡುಬರುತ್ತದೆ. ಇಲ್ಲಿನ ನು ದ್ರಣದ ಸ್ಪಷ್ಟತ್ವ ಮತ್ತು ಸೌಂದರ್ಯ ಹಸರುವಾಸಿಯಾದುವು ಪತ್ರಿಕೆಗಳಲ್ಲೂ ತಪ್ಪುಪಿ ಆದ ಒಂದು ವೈಶಿಷ್ಟ್ಯವಿದೆ

"ಗಾಂಧಿಯುಗದಲ್ಲಿ—"

"ಆದರೂ ನವ ಗ್ರ ಕರ್ನಾಟಕದಲ್ಲಿ ಆಗಬೇಕಾದಷ್ಟು ಪ್ರಗತಿ ಆಗಿಲ್ಲ ಸಂ ಸ್ಕೃತಿ ಮತ್ತು ಭಾವನಾ ದೃಷ್ಟಿಯಿಂದ ಕರ್ನಾಟಕ ಒಂದಾಗಿದ ಆದರ ಆಡಳಿತ ದೃಷ್ಟಿಯಿಂದ ಇನ್ನೂ ಕರ್ನಾಟಕ ಸ್ವಂತ -ಸ್ವತಂತ್ರವಾಗಿಲ್ಲ ಅಂತಹ ಏಕೀಕ ರಣವಿಲ್ಲದೆ ತಮಿಳು, ಆಂಧ್ರ, ಒಂಗಾಳಿಗಳ ಪತ್ರಿಕೆಗಳಂತೆ ನಾವು ಮುಂದುವರಿಯು ವುದು ಸಾಧ್ಯವಿಲ್ಲ ಗಾಂಧಿಯುಗ ಬಂದ ಮೇಲೆ ನಮ್ಮ ಪತ್ರಿಕೆಗಳ ಪ್ರಗತಿಗ ಆರಂಭವಾಯಿತು ಆ ಪ್ರಗತಿ ಇನ್ನಷ್ಟು ಆಗಬೇಕು

"ಪತ್ರಿಕೆಯನ್ನು ಮುದ್ರಿಸಿ ಹೊರ ತಾಕುವುದು ಬಲು ಕಷ್ಟದ ಕೆಲಸ ಮುದ್ರಿ ಗಾರನ ಮೇಲೂ ಹೆಚ್ಚಿನ ಭಾರವಿರುತ್ತದೆ ಒಳ್ಳೆಯ ಪ್ರಗುಜೀವಿ ಆತ ಈ ಎದ ಯಲ್ಲಿ ಪತ್ರಿಕೆಗಳ ಭಾಷ—ಶೈಲಿ ಒಳ್ಳೆಯದಾಗುವುದಿಲ್ಲವಂಬ ದೂರು ಇದ ಅವಸರದಲ್ಲಿ ಒಳ್ಳೆಯದಾಗುವುದಾದರೂ ಹೇಗೆ?

ಶ್ರೀ। ಪಿ. ಆರ್. ರಾಮಯ್ಯ ಅವರು ಭಾಷಣವೀಯುತ್ತಿರುವರು.

ಉಜ್ವಲ ಭವಿತವ್ಯ

"ಆಮೀರಿಕದಲ್ಲಿ ಮೂರರಲ್ಲೊಬ್ಬರು ಪತ್ರಿಕೆ ಓದುತ್ತಾರೆ ನಮ್ಮಲ್ಲಿ ನೂರ ರಲ್ಲಿ ಮೂರು ಮಂದಿ ಓದುತ್ತಾರೆ! ಆದರೆ ನಮ್ಮ ದೇಶದ ಅಕ್ಷರಸ್ಥರ ಸಂಖ್ಯೆ ತೆಗೆದರೆ ಹೆಚ್ಚಿನ ಆತ್ಮರೈ ತೋರುವುದಿಲ್ಲ ಆದರೂ ಇದು ಸಾಲದು ಅಕ್ಷರಜ್ಞರ ಸಂಖ್ಯೆ ಹೆಚ್ಚಾಗಬೇಕು ಚಂದಾದಾರರ ಸಂಖ್ಯೆಯೂ ಏರಿ ಜಾಹೀರಾತುಗಳಿಂದ ಸಿಗುವ ಪ್ರತಿಫಲವೂ ಹೆಚ್ಚಾಗಬೇಕು ಎಲ್ಲಾ ಸೌಕರ್ಯಗಳಿದ್ದ ಮೇಲೆ ಕನ್ನಡ ಪತ್ರಿಕೋದ್ಯಮ ಉಜ್ವಲವಾಗಿ ಬೆಳೆಯುವುದು

(೯) ಎಕ್ಕಾ ಮತ್ತು ೧ ಎತ್ತಿನಿಂದ ಇಲ್ಲವೆ ಮನುಷ್ಯರಿಂದ ಎಳೆಯಲ್ಪಡುವ ಸ್ಪ್ರಿಂಗುಗಳಿಲ್ಲದ ೨ ಗಾಲಿಗಳ ಗಾಡಿ	೦–೧೨–೦	,, ೧
(೧೦) ಬಾಯಸಿಕಲ್	,, ೨	,, ೩

ಮುನಸೀಪಾಲ್ಟಿಯ ಗಾಡೀಪಟ್ಟಿಯನ್ನು ಆಕರಣೆಮಾಡಲು ಅವಶ್ಯವಾದ ಮಾಹಿತಿಯನ್ನು ಪೊರಕಿಸುವ ಬಗ್ಗೆ ಉಪನಿಯಮಗಳು.

೧. ಧಾರವಾಡ ಮುನಸಿವಾಲಿಟಿಯ ಹದ್ದಿನಲ್ಲಿ ವಾಸಿಸುವ ನಾಗರಿಕನಿಗೆ ಮುನಸೀವಾಲಿಟಿಯ ಯಾವದೇ ನೌಕರನು ಉಪನಿಯಮದ 'ಅ' ಪತ್ರಿಕೆಯನ್ನು ನೋಟೀಸಿನ ಸಹಿತ ಕೊಟ್ಟಲ್ಲಿ ಅವನು ಆ ಪತ್ರಿಕೆಯಲ್ಲಿ ಹೇಳಲಾಗುವ ಯೋಗ್ಯ ವೇಳೆಯಲ್ಲಿ ಅದರಲ್ಲಿಯ ಟಿಪ್ಪಣಿಗಳಲ್ಲಿ ವಿವರಿಸಿದಂತೆ ಗಾಡಿ ಪಟ್ಟಿಯ ಆಕರಣೆಗಾಗಿ ತನ್ನ ಸಂಪೂರ್ಣ ತಿಳವಳಿಕೆ ಮತ್ತು ಬುದ್ದಿಯ ಮೇರೆಗೆ ತುಂಬಲವಶ್ಯವಾದ ಎಲ್ಲ ಸ್ಥಳಗಳನ್ನು ತುಂಬಿ ಸಹಿ ಮಾಡಿ ಅದನ್ನು ಚೀಫಆಫೀಸರರಿಗೆ ಕೊಡಬೇಕು.

೨. ಗಾಡಿಪಟ್ಟಿಗೆ ಯೋಗ್ಯವಾದ ಗಾಡಿಯುಳ್ಳ ಪ್ರತಿಯೊಬ್ಬನು ಚೀಫಆಫೀಸರರು ಇಲ್ಲವೆ ಬರಹದಮೂಲಕವಾಗಿ ಅವರ ಪ್ರತಿನಿಧಿಯಾಗಿ ಒಂದ ಯಾವನೇ ನೌಕರರು ಯೋಗ್ಯ ವೇಳೆಯಲ್ಲಿ ಬಂದಾಗ ಅವರಿಗೆ ಗಾಡಿಗಳನ್ನು 'ಸಾಮಾನ್ಯವಾಗಿ ಇಡಲಿರುವ 'ಶೆಡ್' ಇಲ್ಲವೆ ಸ್ಥಳಗಳಿಗೆ ಪ್ರವೇಶಿಸಲು ಬಿಡಬೇಕು; ಉಪನಿಯಮದ ಪ್ರಕಾರ ತುಂಬಿ ಕಳುಹಿಸಿದ ಮಾಹಿತಿಯು ಸರಿ ಇದ್ದ ಬಗ್ಗೆ ಖಾತ್ರಿ ಮಾಡಿಕೊಳ್ಳಲು ಅವರಿಗೆ ಎಲ್ಲ ಅನುಕೂಲತೆಗಳನ್ನೂ ಒದಗಿಸಿ ಕೊಡಬೇಕು; ಕೇಳಿದಲ್ಲಿ, ತೋರಿಸಲು ಸಕಾರಣಗಳು ಇಲ್ಲದ ಹೊರ್ತಾಗಿ, ಕೂಡಲೇ ಅಂಥ ಗಾಡಿಗಳನ್ನು ತೋರಿಸಬೇಕು; ಮತ್ತು ತುಂಬಿಕಳಿಸಿದ ಪತ್ರಿಕೆಯಲ್ಲಿ ಕಾಣಿಸಿದ ಗಾಡಿಗಳಲ್ಲಿ ಅವು ಯಾವದೆಂಬದನ್ನು ತಿಳಿಸಿ ಹೇಳಬೇಕು.

೩. ೧ನೇಯ ಉಪನಿಯಮದ ಪ್ರಕಾರ ಈ ಮೊದಲೇ ತುಂಬಿ ಕಳಿಸಿದ ಪತ್ರಿಕೆಯಂತೆ ಆಕರಣೆಮಾಡಿದ ಗಾಡಿ ಪಟ್ಟಿಯಲ್ಲಿ ಯಾವದೇ ಕಾರಣದಿಂದ ಕಡಿಮೆಯಾಗುವ ಸಂದರ್ಭ ಒದಗಿದಲ್ಲಿ ಮಾಲಕರು ಅದನ್ನು ಚೀಫಆಫೀಸರರಿಗೆ ತಿಳಿಸುವದು ಅಗತ್ಯವು. ಹಾಗೆ ಮಾಡಲು ತಪ್ಪಿದಲ್ಲಿ ಸ್ಯಾಡಿಂಗ ಕಮಿಟಿಗೆ ಆಕರಣೆಮಾಡಿದ ಗಾಡಿಪಟ್ಟಿಯು ಬೇಕಾಯ್ದೆ ಶೀರವಿಲೆಯೆಂದು ಮನವರಿಕೆ ಮಾಡಿಕೊಡುವ ವರೆಗೆ ಮೊದಲಿನ ಪತ್ರಿಕೆಯಲ್ಲಿ ಕಾಣಿಸಿದ ಆಕರಣೆಯನ್ನು ಮುಂದೆ ಬರುವ ಪ್ರತಿ ಅವಧಿಯ ಸಲುವಾಗಿಯೂ ಮಾಡಲಾಗುವದು. ಮತ್ತು ಗಾಡಿಪಟ್ಟಿಯನ್ನು ವಸೂಲ ಮಾಡಲು ಹೊರಡಿಸಿದ ನೋಟೀಸು ಇಲ್ಲವೆ ವಾರಂಟಿನ ಫೀ ಹಣವನ್ನು ಯಾವದೇ ಕಾರಣದ ಸಲುವಾಗಿ ತಿರುಗಿ ಕೊಡಲಾಗದು.

Printed by:-
V. M Joshi at Mohan Press, Dharwar.
Editor & Publisher:-
N. R. Koppikar, *Esq.* L. L. B. President
Municipal Borough, Dharwar

'ಅ' ಪತ್ರಿಕೆ

ಶ್ರೀ.* _____ ಸಾಕೀನ_____

ಇವರಿಂದ ಗಾಡಿ ಪಟ್ಟಿಯನ್ನು ಆಕರಣೆ ಮಾಡಲು ಆವಶ್ಯವಾದ ಮಾಹಿತಿಯನ್ನು ದೊರಕಿಸುವ ಬಗ್ಗೆ ಇರುವ ಮುನ ಸಿಪಲ್ ಬರೋ ಆಕ್ಟಿನ ೬೧ (ಮ) ಕಲಮಿನನ್ವಯದ ಉಪನಿಯಮಗಳಿಲ್ಲಿಯ ೧೩ಯೆಯದರ ಪ್ರಕಾರ *೧೯ ಮಾರ್ಚ ೩೧ನೆಯ ವರೆಗಿನ ಸಲುವಾಗಿ ತುಂಬಿ ಕಳಿಸಿದ ನಿಜ ಮಾಹಿತಿಯು.

(೧) *೧೯ ೧೯ ರ ಸಲುವಾಗಿ ಗಾಡಿಪಟ್ಟಿಯನ್ನು ಕೊಡಲು ಯೋಗ್ಯವಾದ ಎಲ್ಲ ಗಾಡಿಗಳ ವಿವರವು ಕೆಳಗಿನಂತಿ ಇದೆ.

	ಪ್ರತಿಯೊಂದು ವರ್ಗದ ಗಾಡಿಗಳ ಸಂಖ್ಯೆ	
	ಹಿಂದಿನ ಪತ್ರಿಕೆಯಲ್ಲಿ ಕಾಣಿಸಿದವು	ಹಿಂದಿನ ಪತ್ರಿಕೆಯಲ್ಲಿ ಕಾಣಿಸದೆ ಇದ್ದವು
೧. ಸ್ವಂತ ಉಪಯೋಗಕ್ಕಾಗಿ ಇಟ್ಟಗಾಡಿಗಳು		
(ಅ) ಮೋಟರಲಾರಿ ನಂ.		
(ಬ) ಮೋರಗಾಡಿ ೧೦ ಹಾರ್ಸಪಾವರದ ಮೇಲಿನವು ನಂ.		
(ಕ) ಮೋಟರಗಾಡಿ ೧೦ ಹಾರ್ಸಪಾವರಿಗಿಂತಲೂ ಕಡಿಮೆಯವು ಇಲ್ಲವೆ ೧೦ ಹಾರ್ಸಪಾವರಿನವು; ನಂ.		
(ಡ) ಮೋಟಾರ ಸಾಯಿಕಲ, ಸಾಯಿಡ ಕಾರಸಹಿತ ನಂ.		
(ಈ) ಮೋಟರ ಸಾಯಿಕಲ, ಸಾಯಿಡಕಾರ ಇಲ್ಲದವು ನಂ.		
(ಫ) ನಾಲ್ಕು ಗಾಲಿಗಳ ಸ್ಪ್ರಿಂಗುಗಳುಳ್ಳ ೨ ಅಥವಾ ಹೆಚ್ಚು ಕುದುರೆಗಳ ಗಾಡಿ.		
(ಗ) ನಾಲ್ಕು ಗಾಲಿಗಳುಳ್ಳ ಸ್ಪ್ರಿಂಗಗಳುಳ್ಳ ಒಂದು ಕುದುರೆಯ ಗಾಡಿ		
(ಹ) ೨ ಗಾಲಿಗಳ ಸ್ಪ್ರಿಂಗುಗಳುಳ್ಳ ೧ ಎತ್ತು, ಕುದುರೆ ಇಲ್ಲವೆ ಮನುಷ್ಯರಿಂದ ಎಳೆಯಲ್ಪಟ್ಟ ಗಾಡಿಗಳು		
(ಐ) ೨ ಗಾಲಿಗಳ ಸ್ಪ್ರಿಂಗಗಳುಳ್ಳ ೧ ಎತ್ತು, ಕುದುರೆ ಇಲ್ಲವ ಮನುಷ್ಯನಿಂದ ಎಳೆಯಲ್ಪಟ್ಟ ಗಾಡಿಗಳು. ಸ್ಪ್ರಿಂಗುಗಳಿಲ್ಲದ ಮೇಲೆ ವಿವರಿಸಿದ ಗಾಡಿಗಳು		
೨. ಭಾಡಿಗೆಗಾಗಿ ಇಟ್ಟ ಗಾಡಿಗಳು		
(ಅ) ಮೋಟರ ಲಾರಿ ನಂ.		
(ಬ) ಮೋಟಾರ ಗಾಡಿ ೧೦ ಹಾರ್ಸ ಪಾವರದ ಮೇಲಿನವು ನಂ.		
(ಕ) ಮೋಟಾರ ಗಾಡಿ ೧೦ ಹಾರ್ಸ ಪಾವರಿನಕಿಂತಲೂ ಕಡಿಮೆಯವ ಇಲ್ಲವೆ ೧೦ ಹಾರ್ಸ ಪಾವರದವು ನಂ.		
(ಡ) ಮೋಟಾರ ಸಾಯಕಲ್, ಸಾಯಿಡ ಕಾರ ಸಹಿತ ನಂ.		
(ಈ) ಮೋಟಾರ ಸಾಯಕಲ್, ಸಾಯಿಡ ಕಾರ ಇಲ್ಲದವು ನಂ.		
(ಫ) ನಾಲ್ಕು ಗಾಲಿಗಳ ಸ್ಪ್ರಿಂಗುಗಳುಳ್ಳ ಒಂದು, ಎರಡು ಅಥವಾ ಹೆಚ್ಚು ಕುದುರೆಗಳ ಗಾಡಿ.		
(ಗ) ನಾಲ್ಕು ಗಾಲಿಗಳ ಸ್ಪ್ರಿಂಗುಗಳುಳ್ಳ ಒಂದು ಕುದುರೆಯ ಗಾಡಿ		
(ಹ) ಎರಡು ಗಾಲಿಗಳ ಸ್ಪ್ರಿಂಗುಗಳುಳ್ಳ ಎರಡು ಎತ್ತು, ಕುದುರೆ ಇಲ್ಲವ ಮನುಷ್ಯರಿಂದ ಎಳೆಯಲ್ಪಡುವ ಗಾಡಿಗಳು.		
(ಐ) ಎರಡು ಗಾಲಿಗಳುಳ್ಳ ೧ ಎತ್ತು, ಕುದುರೆ ಇಲ್ಲವೆ ಮನುಷ್ಯನಿಂದ ಎಳೆಯಲ್ಪಡುವ ಗಾಡಿಗಳು ಸ್ಪ್ರಿಂಗುಗಳಿಲ್ಲದ ಮೇಲೆ ವಿವರಿಸಿದ ಗಾಡಿಗಳು		

(೩) ೩ನೆಯ ಖಾನೆಯಲ್ಲಿ ಕಾಣಿಸಿದ ವಿವಿಧ ಗಾಡಿಗಳ ಬಗ್ಗೆ ಗಾಡಿ ಪಟ್ಟಿ ಕೊಡಲು ಮೊದಲನೆಯ ಸಾರೆ ನಾನು ಬದ್ಧನಾದ ತಾರೀಖು ಮತ್ತು ಕಾರಣ ಈ ಕೆಳಗಿನಂತೆ ಇವೆ:–†

ಶ್ರೀ.* ಇವರಿಗೆ 'ಅ' ಪತ್ರಿಕೆಯನ್ನು ಕೊಟ್ಟ ತಾರೀಖು*

ಮೇ. ಚೀಫ ಆಫೀಸರರಿಗೆ ಪತ್ರಿಕೆಯು ತಿರುಗಿ ಮುಟ್ಟಿದ ತಾರೀಖು*

ತಾರೀಖು† ಸಹಿ.†

ನೋಟೀಸು.

ಶ್ರೀಯುತ*
ಶ್ರೀಮತಿ

ಸಾಕೀನ* ಇವರಿಗೆ—

ನೀವು ಗಾಡಿ ಪಟ್ಟಿಯನ್ನು ಆಕರಣೆ ಮಾಡಲು ಆವಶ್ಯವಾದ ಮಾಹಿತಿಯನ್ನು ದೊರಕಿಸುವ ಮುನಸಿಪಲ್ ಬರೋ ಆಕ್ಟಿನ ೬೧(ಮ)ಕಲಮಿನನ್ವಯ ಉಪನಿಯಮಗಳಲ್ಲಿಯ ನಿಯಮದರ ಪ್ರಕಾರ† ಈ ಗುರ್ತುಮಾಡಿದ ಸ್ಥಳಗಳಲ್ಲಿ ಅವಶ್ಯವಾದ ಸಂಗತಿಗಳನ್ನು ತುಂಬಿ ಮೇ॥ ಚೀಫ ಆಫೀಸರರಿಗೆ ತಮಗೆ ಪತ್ರಿಕೆ ಮುಟ್ಟಿದ ಹತ್ತು ದಿವಸಗಳಲ್ಲಿ ತಿರುಗಿ ಮುಟ್ಟಿಸಬೇಕು.

(ಸಹಿ)*

ತಾರೀಖು* ಚೀಫ ಆಫಿಸರ, ಮುನಸಿಪಲ್ ಬರೋ, ಧಾರವಾಡ.

* ಈ ಗುರ್ತು ಮಾಡಿದ ತೆರನಿದ್ದ ಸ್ಥಳಗಳನ್ನು ಮುನಸಿಪಾಲಿಟಿಯವರು ತುಂಬಬೇಕು.

— ——

ಪ್ರಾಥಮಿಕ ಶಿಕ್ಷಣದ ಸದ್ಯದ ಪರಿಸ್ಥಿತಿ

ಕಾಂಗ್ರೆಸ ಮಂತ್ರಿಮಂಡಲಗಳುಳ್ಳ ಎಲ್ಲ ಪ್ರಾಂತಗಳಲ್ಲಿಯೂ ಪುಕ್ಕಟೆಯಾಗಿಯೂ ಒತ್ತಾಯದಿಂದಲೂ ಪ್ರಾಥಮಿಕ ಶಿಕ್ಷಣ ಪ್ರಸಾರವನ್ನು ಮಾಡಬೇಕೆಂಬ ಮಾತುಗಳು ಕೇಳಬರಹತ್ತಿವೆ. ಮೊನ್ನಿನ ಮುಂಬೈ ಪ್ರಾಂತಿಕ ಕಾಯದೇ ಮಂಡಲದ ಅಧಿವೇಶನದಲ್ಲಿ, ಸರಕಾರದವರು ಆದಷ್ಟು ತೀವ್ರವಾಗಿ ಒತ್ತಾಯದಿಂದ ಪ್ರಾಥಮಿಕ ಶಿಕ್ಷಣ ಪ್ರಸಾರವನ್ನು ಮಾಡುವ ಯೋಜನೆಯನ್ನು ಕೈಕೊಳ್ಳಬೇಕೆಂದು ಠರಾವು ಪಾಸಾಗಿದೆ. ಈಗಿನ ಶಿಕ್ಷಣ ಕ್ರಮದಲ್ಲಿಯೂ ಮಹತ್ವದ ಬದಲಾವಣೆಗಳನ್ನು ಮಾಡಬೇಕಾಗುವದೆಂದು ಶಿಕ್ಷಣಮಂತ್ರಿಗಳು ಕಾಯದೇಮಂಡಲದಲ್ಲಿ ಸಾರಿದ್ದಾರೆ. ಈ ಕಾಲದಲ್ಲಿ ಪ್ರಾಥಮಿಕ ಶಿಕ್ಷಣದ ಸದ್ಯದ ಪರಿಸ್ಥಿತಿಯೇನಿರುವದೆಂಬದನ್ನು ವಿಚಾರಮಾಡಿ ನೋಡುವದು ಅತ್ಯವಶ್ಯವಾಗಿದೆ. ಸದ್ಯಕ್ಕೆ ಅಮಲಿನಲ್ಲಿರುವ ಪ್ರಾಥಮಿಕ ಶಿಕ್ಷಣ ಕಾಯಿದೆಯು, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಪ್ರಸಾರದ ಉದ್ದೇಶದಿಂದಲೇ ಪಾಸಾಯಿತು. ಆದರೆ ಆ ಕಾಯಿದೆಯು ಅಮಲಿನಲ್ಲಿ ಬಂದು ೧೫ ವರ್ಷಗಳಾಗಿ ಹೋದರೂ ಪ್ರಾಥಮಿಕ ಶಿಕ್ಷಣ ಹೊಂದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ೧೦೦ಕ್ಕೆ ೬ರಂತೆ ಮಾತ್ರ ಇರುವದು. ಕ್ರಮೇಣ, ಯಾವಯಾವ ಸ್ಥಾನಿಕ ಸಂಸ್ಥೆಗಳು ಒತ್ತಾಯದ ಪ್ರಾಥಮಿಕ ಶಿಕ್ಷಣಪ್ರಸಾರವನ್ನು ಕೈಕೊಳ್ಳುವವೋ ಅವುಗಳಿಗೆ ಸರಕಾರದವರು ಗ್ರಾಯ್ಂಟು ಕೊಟ್ಟು ಸಹಾಯಮಾಡಿ ಕೊನೆಗೆ ಸಾರ್ವತ್ರಿಕವಾಗಿ ಪ್ರಾಥಮಿಕ ಶಿಕ್ಷಣವು ಒತ್ತಾಯದಿಂದ ಕೊಡಲ್ಪಡಬೇಕೆಂದು ಈ ಕಾಯಿದೆಯ ಉದ್ದೇಶವಾಗಿತ್ತೆಂದು ಹೇಳೆಲ್ಪಡುತ್ತದೆ. ಆದರೆ ಮುಂಬೈ ಇಲಾಖೆಯಲ್ಲಿ ಈ ೧೫ ವರ್ಷಗಳ ಅವಧಿಯಲ್ಲಿ ಒಂದು ಭಾಗದಲ್ಲಿಯೂ ಕೂಡ ಒತ್ತಾಯದ ಪ್ರಾಥಮಿಕ ಶಿಕ್ಷಣಕ್ರಮವು ಅಮಲಿನಲ್ಲಿ ಬಂದಿಲ್ಲವೆಂದು ಹೇಳಬೇಕಾಗಿದೆ. ಪ್ರಾಥಮಿಕ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ೧೦೦ಕ್ಕೆ ೬ರಂತೆ ಇದ್ದರೂ ನಿಜವಾದ ಸಾಕ್ಷರತಾಪ್ರಸಾರದ ದೃಷ್ಟಿಯಿಂದ ನೋಡಿದರೆ ಈ ಸಂಖ್ಯೆಯೂಕೂಡಾ ನಿಜವಾದದ್ದಲ್ಲವೆಂದು ಹೇಳಬೇಕಾಗುತ್ತದೆ. ಬಿನ್ ಇಯತ್ತೆಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಳನೇ ಇಯತ್ತೆಯ ವರೆಗೆ ಮುಟ್ಟಿದ ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿ ನೋಡಿದರೆ, ಳನೇ ಇಯತ್ತೆಯ ವರೆಗೆ ಮುಟ್ಟುವಷ್ಟರಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೧೦೦ಕ್ಕೆ ೬೦ರಷ್ಟು ಕಡಿಮೆಯಾಗುತ್ತದೆ. ಒಬ್ಬ ವ್ಯಕ್ತಿಯು ನಿಜವಾಗಿ ಸಾಕ್ಷರನಾಗಬೇಕಾದರೆ ಳನೇ ಇಯತ್ತೆಯವರೆಗಾದರೂ ಮುಟ್ಟಲೇಬೇಕು.

ಆದರೆ, ೫ನೇ ಇಯತ್ತೆಯನ್ನು ಮುಟ್ಟುವಷ್ಟರಲ್ಲಿಯೇ ವಿದ್ಯಾರ್ಥಿಗಳ ಸಂಖ್ಯೆಯು ೧೦೦ಕ್ಕೆ ೫೫ರಂತೆ ಕರಗುತ್ತದೆ. ೫ನೇ ಇಯತ್ತೆಯಿಂದ ಳನೇ ಇಯತ್ತೆಯನ್ನು ಮುಟ್ಟುವಷ್ಟರಲ್ಲಿಯೇ ಮತ್ತೆ ೧೦೦ಕ್ಕೆ ೧೫ರಂತೆ ಕರಗುತ್ತದೆ.

ನಾವು ಹೇಳುವದು ನಿಜವಾದ ವಸ್ತುಸ್ಥಿತಿಯಾಗಿದೆ ಯೆಂಬ ಬಗ್ಗೆ ಧಾರವಾಡ ನಗರಸಭೆಯು ಆಡಳಿತೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆಗಳನ್ನೇ ಉದಾಹರಿಸುವಾ:—

೧೯೩೨-೩೩ ರಲ್ಲಿ ಬಿನ್ ಇಯತ್ತೆಯಲ್ಲಿ ೧೩೩೪ ವಿದ್ಯಾರ್ಥಿಗಳಿದ್ದರು. ಅವರ ಪೈಕಿ ೧೯೩೪-೩೫ರಲ್ಲಿ ೫೫೦ ವಿದ್ಯಾರ್ಥಿಗಳು ಏನೇ ಇಯತ್ತೆಯನ್ನು ಮುಟ್ಟಿದರು. ಏನೇ ಇಯತ್ತೆಯ ವರೆಗೆ ಪುಟ್ಟಿದ ೫೫೦ ವಿದ್ಯಾರ್ಥಿಗಳ ಪೈಕಿ ೩೬೫ ವಿದ್ಯಾರ್ಥಿಗಳು ಮಾತ್ರ ೧೯೩೬-೩೭ರಲ್ಲಿ ಎನೇ ಇಯತ್ತೆಯನ್ನು ಮುಟ್ಟಿದ್ದಾರೆ.

ಈ ಪ್ರಕಾರ ಎನೇ ಇಯತ್ತೆಯನ್ನು ಮುಟ್ಟುವಷ್ಟರಲ್ಲಿಯೇ ಕರಗಿ ಹೋದವರು ಸಾಕ್ಷರರಾದರೆಂದು ಹೇಳುವದೆಂದರೆ ವಸ್ತುಸ್ಥಿತಿಯ ವಿಪರ್ಯಾಸ ಮಾಡಿದಂತೆಯೇ ಸರಿ. ಶಾಲೆಯಲ್ಲಿರುವಾಗ ಇವರು 'ಕ' 'ಮ' ಎಂದು ಏನಾದರೂ ಓದಲಿಕ್ಕೆ ಬರೆಯಕ್ಕೆ ಕಲಿತಿದ್ದರೂ ಶಾಲೆಯನ್ನು ಬಿಟ್ಟ ಒಂದೆರಡು ವರ್ಷಗಳಲ್ಲಿಯೇ 'ಕ' 'ಮ' ಗಳ ಗುರುತು ಸಹ ತಪ್ಪಿ ಹೋಗಿ ಹೆಬ್ಬಟ್ಟಿನ ಗೆಳೆಯರೇ ಆಗುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ೧೦೦ಕ್ಕೆ ೬೦ರಂತೆ ಇದ್ದ ವಿದ್ಯಾರ್ಥಿಗಳ ಸಂಖ್ಯೆಯೂ ಕೂಡ ತೋರಿಕೆಯ ಸಂಖ್ಯೆಯೆಂದೇ ಹೇಳಬೇಕಾಗುವದು. ಜನ್ನಾಗಿ ಓದಲಿಕ್ಕೂ ಬರೆಯಲಿಕ್ಕೂ ಬಂದು ತನ್ನ ಸುತ್ತಮುತ್ತಲಿನ ಜಗತ್ತಿನಲ್ಲಿ ನಡೆದ ಸಂಗತಿಗಳ ಜ್ಞಾನವನ್ನು ಮಾತೃಭಾಷೆಯಲ್ಲಿಯ ವರ್ತಮಾನಪತ್ರಗಳ ದ್ವಾರವಾಗಿ ಮಾಡಿಕೊಳ್ಳುವಷ್ಟು ಓದು ಬರಹ ಕಲಿತವರು ಮಾತ್ರ ಸಾಕ್ಷರರೆಂದು ಹೇಳಬಹುದು. ಈಗಿನ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಎನೇ ಇಯತ್ತೆಯ ವರೆಗೆ ವಿದ್ಯಾರ್ಥಿಗಳಿಗೂ ಕೂಡ ಇಷ್ಟು ಜ್ಞಾನವಾಗಿರುವದಿಲ್ಲ. ಇದಕ್ಕೆ ಕಾರಣ ವೇನೆಂದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಕೊಡತಕ್ಕ ಶಿಕ್ಷಣವೂ ಸರಿಯಾಗಿ ಕೊಡಲ್ಪಡುವದಿಲ್ಲ. ಇದೂ ಒಂದು ಬೇರೆ ವಿಷಯವೇ ಆಗುತ್ತದೆ. ಒಳ್ಳೇ ಸುಧಾರಿಸಿದ ರಾಜ್ಯವೆಂದು ಹೇಳಿಕೊಳ್ಳುತ್ತಲಿರುವ ಬ್ರಿಟಿಶ್ ರಾಜ್ಯದಾಡಳಿತೆಗೆ ಒಳಪಟ್ಟ ನಮ್ಮ ದೇಶದಲ್ಲಿ ನಾವು ವಿವೇಚನೆ ಮಾಡಿದ ದೃಷ್ಟಿಯಿಂದ ಸಾಕ್ಷರತೆಯ ಪ್ರಮಾಣವೆಷ್ಟಿರುವದೆಂಬುದನ್ನು ವಿಚಾರಮಾಡಿ ನೋಡಿದರೆ, ಆ ಸಂಖ್ಯೆಯು ಸೂಕ್ಷ್ಮದರ್ಶಕ ಯಂತ್ರದಿಂದಲೇ ಕಂಡು ಹಿಡಿಯಲು ಸಾಧ್ಯವಾದ (Microscopic minority) ಷ್ಟಿರಬಹುದೆಂದು ಹೇಳಬೇಕಾಗುತ್ತದೆ. ಸದ್ಯದ ನಮ್ಮ ಈ ಶೋಚನೆಯ ಸ್ಥಿತಿಗೆ ಕಾರಣಗಳನೇಕವಾಗಿರಬಹುದು. ಅವೆಲ್ಲವುಗಳಲ್ಲಿಯೂ ಮುಖ್ಯವಾದ ಕಾರಣವೆಂದರೆ, ಇಲ್ಲಿಯ ವರೆಗೆ ಸರಕಾರದ ಶಿಕ್ಷಣ ವಿಷಯಕ ಧೋರಣವು ಅನುದಾರವಾದದ್ದೂ ಅಕ್ಷಮ್ಯವಾದದ್ದೂ ಇದ್ದು ನಮ್ಮ ಸ್ಥಾನಿಕ ಸಂಸ್ಥೆಗಳೂ ಶಿಕ್ಷಣ ಪ್ರಸಾರದ ವಿಷಯದಲ್ಲಿ ಉದಾಸೀನ ವೃತ್ತಿಯನ್ನೇ ತಾಳಿರುವವೆಂದು ಹೇಳಬಹುದು. ಈ ಸಂಗತಿಗಳನ್ನು ಧಾರವಾಡ ನಗರಸಭೆಯ ಮಟ್ಟಿಗೆ ಸಪ್ರಮಾಣವಾಗಿ ಜನತೆಯ ಮುಂದಿಡತಕ್ಕವರಿದ್ದೇವೆ.



೧೯೩೭ನೇ ಅಗಸ್ಟ ತಿಂಗಳಲ್ಲಿ ವಸೂಲಾದ ಕರ-ಪಟ್ಟಿಗಳ ವಿವರ

ತಿಂಗಳ ಪ್ರಾರಂಭದಲ್ಲಿಯ ಬಾಕಿ		ಈ ತಿಂಗಳಲ್ಲಿಯ ವಸೂಲಿ		ಬಾಕಿ		ಹಣಕೊಡದವರು	ಹಣ ವಸೂಲಿಗಾಗಿ ಕೈಕೊಂಡ ಉಪಾಯ		ಜಕಾತಿ ಮತ್ತು ಟೋಲು
ಹಿಂದಿನ ಬಾಕಿ	ಈ ವರುಷದ್ದು	ಹಿಂದಿನ ಬಾಕಿ	ಈ ವರುಷದ್ದು	ಹಿಂದಿನ ಬಾಕಿ	ಈ ವರುಷದ್ದು		ನೋಟೀಸು	ವಾರಂಟು	
೧೪೪೪೪-೧೦-೧೧	೧೪೯೯೩-೬-೧೧	೫೧೬೬-೬೮	೧೩೪೧-೩-೦	೧೪೬೪೪೧-೪-೪	೧೪೪೪೫೫೬-೩-೧೧	೩೧೦೮	—	೫೦	೭೬-೮-೪

Sd/ M. L. VAIKUNTHE.
Special Recovery Officer,
Municipal Borough, Dharwar.

Sd./ N. R. KOPPIKAR,
President
Municipal Borough, Dharwar.

Date 17-9-37

ಟಿಪ್ಪಣಿ:–ವಸೂಲಿಯ ಕಾರಕೂನರು ಆಗಸ್ಟ ೨೫ ರ ವರೆಗೆ ಡಿಮಾಂಡ ರಜಿಸ್ಟರ ತಯಾರ ಮಾಡುವದರಲ್ಲಿ ತೊಡಗಿದ್ದರಿಂದ ವಸೂಲಿಯು ಕೆಲಸವು ಸಾಕಷ್ಟು ನಮಾಧಾನಕರವಿಲ್ಲ.

॥ ಶ್ರೀರಾಮಸಮರ್ಥ ॥ Regd. B. No. 2377.

ಶ್ರೀಸೀತಾರಾಮೋ ಜಯತೆ!

ವರ್ಗಣಿ ದರ.

ಪಾ. ಟಿ.ಖ. ಸಹ ೨-೦-೦
ಊರೊಳಗೆ ೧-೮-೦

ಪ್ರಾರ್ಥನೆ.

ಜಾಹೀರಾತಿನ ದರ.

ಕಾಲಮದ ಒಂದು ಇಂಚಿಗೆ
ವೇಳೆಕ್ಕೆ ೦-೩-೦
ಸಣ್ಣ ಜಾಹಿರಾತು ವೇಳೆಕ್ಕೆ ೧-೦-೦
ಕಾಯಮದ ಜಾಹಿರಾತಿಗೆ ಸವಲ
ತ್ತಿನ ದರ.

ಸರ್ವೇಽಪಿ ಸುಖಿನಃ ಸಂತು ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಭಾಗ್ಭವೇತ್ ॥

Editor:—**V. B. Deshpande,** *B. A. LL. B.* **Belgaum.**

ವರ್ಷ ೧.] ಬೆಳಗಾಂವಿ—ಶುಕ್ರವಾರ ತಾ ೬-೪-೧೯೨೮. [ಸಂಚಿಕೆ ೧೨.

ಪ್ರಾರ್ಥನೆ.

ಚೈತ್ರ ವದ್ಯ ೧ ಶಕೆ ೧೮೫೦.

ಶ್ರೀರಾಮ ಸೇವಾಸಂಘ.

ಶ್ರೀರಾಮನವಮಿಯ ಉತ್ಸವವು ನಮ್ಮ ಹಿಂದೂಜನರ ಅತಿ ಮಹತ್ವದ ಉತ್ಸವವು. ಈಹೊತ್ತಿನ ದಿವಸ ಶ್ರೀರಾಮಚಂದ್ರ ದೇವರ ಅವತಾರವಾಗಿರುವದು. ಲಂಕಾಧಿಪತಿಯಾದ ರಾವಣನು ಮದೋನ್ಮತ್ತನಾಗಿ ತನ್ನ ಐಶ್ವರ್ಯದ ಮತ್ತು ಬಲದ ಹೇವೆಯಿಂದ ಯಾರನ್ನೂ ಲೆಕ್ಕಿಸದೆ ದೇವರ ಅಸ್ತಿತ್ವವನ್ನು ಮರೆತು ಪರವನಿತೆಯರ ಅಭಿಲಾಷದಿಂದ ಅಧರ್ಮಕ್ಕೆ ಪ್ರವೃತ್ತನಾದನೋ ಮತ್ತು ಅವನನ್ನೇ ಅನುಕರಿಸಿ ಅವನ ಅನುಯಾಯಿಗಳಾದ ರಾಕ್ಷಸರು ದುರ್ಮಾರ್ಗಿಗಳಾಗಿ ಸಜ್ಜನರಿಗೆ ಬಾಧೆಬಡಿಸತೊಡಗಿದರೋ ಆ ಸಮಯದಲ್ಲಿಯೇ ಧರ್ಮಸಂಸ್ಥಾಪನೆ ಮಾಡುವ ಕುರಿತು ಶ್ರೀರಾಮಚಂದ್ರರ ಅವತಾರವಾಗಿರುವದು.

ಇನ್ನು ಭಗವಂತನ ಪೂರ್ಣಾವತಾರಗಳು, ಅಂಶಾವತರಗಳು ಆವೇಶಾವತಾರಗಳೆಂದು ಅನೇಕ ಅವತಾರಗಳಾಗುವವು. ಹೀಗೆ ಭಗವಾನ ಅನಂತನು ಅನಂತ ಅವತಾರಗಳನ್ನು ತಾಳಿ ಈ ಸೃಷ್ಟಿಯ ಉತ್ಪತ್ತಿಸ್ಥಿತಿಲಯ ಕಾರ್ಯಗಳನ್ನು ಸಾಗಿಸುತ್ತಿರುವನು. ಭಗವಂತನ ಅವತಾರ ಕಾಲದಲ್ಲಿ ಆತನ ಭಕ್ತರು, ಮಹಾತ್ಮರು ಆತನ ಕಾರ್ಯಕ್ಕೆ ಸಹಾಯಕರಾಗಿ ಅವತರಿಸುವರು. ಹೀಗಿರುವದರಿಂದಲೇ ರಾಮಾವತಾರ ಕಾಲದಲ್ಲಿಯಾದರೂ ಎಷ್ಟೋ ದೇವತೆಗಳಾದರೂ ವಾನರರೂಪದಿಂದ ರಾಮನಿಗೆ ಸಹಾಯಕರಾಗಿ ಅವತರಿಸಿದರು. ಅದೇ ಮೇರೆಗೆ ಪೌರಾಣಿಕ ಕಾಲವನ್ನು ಬಿಟ್ಟು ಐತಿಹಾಸಿಕ ಕಾಲವನ್ನು ನಿರೀಕ್ಷಿಸಿದರೂ ಇದೇ ಸಂಗತಿಯು ಕಂಡುಬರುವದು. ಯಾವಾಗ್ಯೆ ನಮ್ಮ ಹಿಂದುಸ್ಥಾನ ದೇಶದ ಮೇಲೆ ಪರಧರ್ಮೀಯರಾದ ಮುಸಲ್ಮಾನರ ದಾಳಿಗಳು ಬಂದು ನಮ್ಮ ಧರ್ಮವು ಕೆಟ್ಟು ಹೋಗಿ ನಮ್ಮಲ್ಲಿಯ ದುರ್ಬಲರಾದ ಅಬಲೆಯರ ಪಾತಿವ್ರತ್ಯದ ರಕ್ಷಣೆಯನ್ನು ಮಾಡುವದಾದರೂ ಅಶಕ್ಯವಾಗಿ ತೋರಿತೋ ಆ ಕಾಲದಲ್ಲಿ ಧರ್ಮ ಸಂರಕ್ಷಣೆಗೋಸುಗ ಗೋಬ್ರಾಹ್ಮಣ ಅಬಲೆಯರ ಪ್ರತಿಪಾಲಕರಾದ ಶ್ರೀಶಿವಾಜೀ ಮಹಾರಾಜರ ಅವತಾರವಾಯಿತಲ್ಲವೇ? ಅದೇ ಸಮಯದಲ್ಲಿ ಧರ್ಮಸಂಸ್ಥಾಪನೆಗೋಸುಗವೇ ಶ್ರೀಶಿವಾಜಿ ಮಹಾರಾಜರ ಕಾರ್ಯಕ್ಕೆ ಸಹಾಯಕ್ಕಾಗಿಯೇ ರಾಮದಾಸ, ತುಕಾರಾಮ ಮೊದಲಾದ ಸಂತ ಸಜ್ಜನರು ಹುಟ್ಟಿಲ್ಲಿವೆ? ಇದನ್ನೆಲ್ಲ ಚನ್ನಾಗಿ ಅರಿತು ಈಗಾಗಲೂ ನಮ್ಮ ದೇಶದ ಮತ್ತು ಧರ್ಮದ ದುರವಸ್ಥೆಯನ್ನು ಕಂಡು ಅದನ್ನು ಹೋಗಲಾಡಿಸುವಗೋಸುಗ ಮಹಾತ್ಮರ ಅವತಾರಕಾಲವು ಬಂದಿದೆಯೆಂದು ನಂಬಬಹುದು. ಮತ್ತು ಈ ಪ್ರಕಾರವಾಗಿ ನಂಬಿಗೆ ಹುಟ್ಟಿ ಅನೇಕ ಜನರು ತಮ್ಮ ತಮ್ಮ ತರ್ಕಗಳಿಗನುಸರಿಸಿ ಮಹಾತ್ಮರ ಅವತಾರಕಾಲವನ್ನು ನಿರೀಕ್ಷಿಸಹತ್ತಿದ್ದಾರೆ.

ಅದರಂತೆಯೇ ಈಗ ಧರ್ಮಸಂಸ್ಥಾಪನೆಯ ಕಾಲವು ಮತ್ತು ದೇಶೋದ್ಧಾರದ ಕಾಲವು ಒದಗಿದೆಯೆಂದು ನಮಗಾದರೂ ಅನಿಸಿದ್ದರಿಂದ ಅದಕ್ಕನುಸರಿಸಿಯೇ ಏನಾದರೂ ಮಾಡತಕ್ಕದ್ದು ನಮ್ಮ ಪವಿತ್ರ ಕರ್ತವ್ಯವೆಂದು ನಂಬಿ ಸಹೃದಯರಾದ ಸನ್ಮಾನ್ಯ ಸಜ್ಜನರ ಉದಾರಾಶ್ರಯದಲ್ಲಿ ಇಲ್ಲಿಯ ಕೆಲವರು "ಶ್ರೀರಾಮ ಸೇವಾಸಂಘ" ವೆಂಬ ಹೆಸರಿನ ಸಂಸ್ಥೆಯನ್ನು ಹೆಗಡು ಧಾರ್ಮಿಕ, ಬೌದ್ಧಿಕ, ಸಾಮಾಜಿಕ ಮತ್ತು ಶಾರೀರಿಕ ಮುಂತಾದ ಎಲ್ಲ ವಿಷಯಗಳ ಬಗ್ಗೆ ಜನತೆಯಲ್ಲಿ ಜಾಗ್ರತೆಯನ್ನು ಹುಟ್ಟಿಸಿ ಜನಸೇವೆಯನ್ನು ಮಾಡಲುದ್ಯುಕ್ತರಾಗಿರುವರು. ಈ ತರದ ಎಲ್ಲ ಉದ್ದೇಶಗಳನ್ನು ತಮ್ಮೆದುರಿಗೆ ಇಟ್ಟುಕೊಂಡು ಈ

ಚಿಕ್ಕ ಸಂಸ್ಥೆಯು ಈಗ್ಯೆ ಒಂದು ಒಂದೂವರೆ ವರುಷ ಒಳ್ಳೇ ಭರದಿಂದ ಮತ್ತು ಉತ್ಸಾಹದಿಂದ ಕಾರ್ಯ ನಡಿಸಿರುವದು. ಈ ಸಂಸ್ಥೆಯ ಉದ್ದೇಶಗಳಲ್ಲಿ ಪ್ರಮುಖವಾದದ್ದೊಂದು ಉದ್ದೇಶವು ಈಗ್ಯೆ ಕಾರ್ಯಮಾಡತಕ್ಕ ಎಲ್ಲ ಸಂಸ್ಥೆಗಳ ಪ್ರವರ್ತಕರಲ್ಲಿ ಪರಸ್ಪರ ಪ್ರೇಮವನ್ನು ಉತ್ಪನ್ನಮಾಡಿ ಸುಸಂಘಟಿತವಾದ ಕಾರ್ಯಮಾಡುವ ದೊಂದು ಇರುವದು. ಇದಕ್ಕನುಸರಿಸಿಯೇ ಇಲ್ಲಿಯ ರಾಮಸೇವಾಸಂಘ ಮಂದಿರದಲ್ಲಿಯೇ ಶ್ರೀರಾಮ ವಾಚನ ಮಂದಿರ, ಕರ್ನಾಟಕ ವಾಚನಾಲಯ ಗಜಾನನಕ್ಲಬ, ಶ್ರೀಕೃಷ್ಣ ಡಿಬೇಟಿಂಗ ಸೊಸಾಯಿಟಿ, ಗಜಾನನ ಮೇಳ ಎಂಬ ಅನೇಕ ಸಂಸ್ಥೆಗಳು ಒಂದಕ್ಕೊಂದು ವಿರೋಧಿಯಾಗದೆ ಕಾರ್ಯಮಾಡುತ್ತಿರುವವು. ಇದೇತರದ ಉಚ್ಚ ಧ್ಯೇಯವನ್ನಿಟ್ಟುಕೊಂಡೇ ಅಥಣೀ ಊರಲ್ಲಿಯಾದರೂ ಒಂದು ಶ್ರೀರಾಮ ಸೇವಾಸಂಘವೆಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು.

ಇದರ ಹೊರ್ತಾಗಿ ಅನೇಕ ಮಹಾತ್ಮರ ಪುಣ್ಯತಿಥಿ ಜಯಂತೀ ಉತ್ಸವಗಳು ಗಣಪತಿ ಮತ್ತು ನವರಾತ್ರಿ ಮುಂತಾದ ಉತ್ಸವಗಳಾದರೂ ನೆರವೇರಿಸಲ್ಪಟ್ಟಿರುವವು ಇಂಗ್ಲೀಸು, ಮರಾಠೀ ಮತ್ತು ಕನ್ನಡ ಈ ಎಲ್ಲ ಭಾವೆಗಳಲ್ಲಿ ಅನೇಕ ವಿದ್ವಾಂಸರ ಉಪನ್ಯಾಸಗಳು ಈ ಸಂಘದ ವತಿಯಿಂದ ಏರ್ಪಡಿಸಲ್ಪಟ್ಟಿರುವವು. ಧರ್ಮಗ್ರಂಥಗಳ ಬಗ್ಗೆ ಆದರವನ್ನು ಹುಟ್ಟಿಸಬೇಕಾಗಿ ಭಗವದ್ಗೀತೆ ಮತ್ತು ರಾಮಾಯಣ ಮುಂತಾದ ಗ್ರಂಥಗಳು ವಿದ್ಯಾರ್ಥಿಗಳಿಂದ ಓದಲ್ಪಡಬೇಕೆಂದು ವ್ಯವಸ್ಥೆ ಮಾಡಿರುವರು. ಮತ್ತು ಈಗಿನ ತರುಣರ ಶಾರೀರಿಕ ಹ್ರಾಸವನ್ನು ಕಂಡು ವಿದ್ಯಾರ್ಥಿಗಳು, ಮತ್ತು ತರುಣರು ಉತ್ಸಾಹವಂತರೂ ಮತ್ತು ಬಲವಂತರೂ ಆಗಬೇಕೆಂಬ ಉದ್ದೇಶದಿಂದ ಠಳಕವಾಡಿಯಲ್ಲಿ ಒಂದು ವ್ಯಾಯಾಮಶಾಲೆಯನ್ನು ಕಟ್ಟಿಸಬೇಕೆಂದು ನಿಶ್ಚಯಿಸಿ ಕಟ್ಟಿಡದ ಕೆಲಸವನ್ನಾದರೂ ಭರದಿಂದ ಕೈಕೊಂಡಿದ್ದಾರೆ. ಈ ಸತ್ಕಾರ್ಯಕ್ಕೆ ಅನೇಕರು ಉದಾರ ಬುದ್ಧಿಯಿಂದ ಸಹಾಯಮಾಡಹತ್ತಿದ್ದಾರೆ. ಬಹುಶಃ ಬರುವ ಅಕ್ಷಯ್ಯತೃತೀಯೆದ ಒಳಗಾಗಿ ಕಟ್ಟಿಡದ ಕೆಲಸವು ಮುಗಿಯುವದು.

ಈ ರೀತಿಯಾಗಿ ಸಂಘದವರು ಕಾರ್ಯಮಾಡುತ್ತಿರುವರು. ಮತ್ತು ಹೀಗೆಯೇ ಸದ್ಬುದ್ಧಿಯಿಂದ ಪ್ರೇರಿತರಾಗಿ ನಿಸ್ವಾರ್ಥಿಯಾಗಿ ಕಾರ್ಯಸಾಡಲಿಕ್ಕೆ ಮತ್ತೂ ಕೆಲವರು ಸಹಾಯವನ್ನಾಡಿದರೆ ಸ್ವಲ್ಪ ಕಾಲದಲ್ಲಿಯೇ ಕರ್ನಾಟಕದಲ್ಲಿಯೇ ಅಲ್ಲದೇ ಇಡೀ ಹಿಂದುಸ್ಥಾನದಲ್ಲೆಲ್ಲ ರಾಮರಾಜ್ಯವನ್ನು ಸ್ಥಾಪಿಸುವ ಸಂಘದವರ ಸಾಹಸವಿದೆ ಅಪಹಾಸವಾಡದೇ ಸಾಹಸದಿಂದ ಸರ್ವರೂ ಸಹಾಯ ಮಾಡಿದರೆ ಉಪವಾಸಬಿದ್ದಾದರೂ ಕೈಕೊಂಡಕಾರ್ಯವನ್ನು ನೆರವೇರಿಸಿಯೇ ತೀರಬೇಕೆಂದು ಉತ್ಸಾಹವುಂಟಾಗಿ ಕಾರ್ಯವು ಶ್ರೀರಾಮಚಂದ್ರನ ಕೃಪೆಯಿಂದ ಯಶಸ್ವಿಯಾಗುವದೇ ನಿಶ್ಚಯ.

ಒಳ್ಳೇದು ಇದೇರೀತಿಯಾಗಿ ಅಖಿಲ ಕರ್ನಾಟಕದಲ್ಲೆಲ್ಲ "ಶ್ರೀರಾಮಸೇವಾಸಂಘ" ವೆಂಬ ಹೆಸರಿನಿಂದೇ ಸಂಸ್ಥೆಗಳು ಸ್ಥಾಪಿಸಲ್ಪಟ್ಟು ಕರ್ನಾಟಕದಲ್ಲಿ ಸ್ವಲ್ಪ ದಿವಸಗಳಲ್ಲಿಯೇ 'ರಾಮ ರಾಜ್ಯ'ವಾಗಲೆಂದು ಶ್ರೀರಾಮಚಂದ್ರನಿಗೆ ಬೇಡಿಕೊಂಡು ಈ ಅಲ್ಪ ಸೇವೆಯನ್ನು ಸರ್ವಾಂತರ್ಯಾಮಿಯಾದ ಶ್ರೀರಾಮಚಂದ್ರನಿಗೆ ಸಮರ್ಪಿಸಿ ನಮ್ಮ ಕಡೆಯಿಂದ ಇದೇ ಪ್ರಕಾರವಾಗಿ ಸೇವೆಯನ್ನು ತಕ್ಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ.

ಹಿಂದುಸ್ತಾನೀ ಸೇವಾದಲದ
ಶಿಕ್ಷಣಶಿಬಿರ ತೀರ್ಥಹಳ್ಳಿ.

೨೫ನೇ ಏಪ್ರೀಲಿಗೆ ಶಿಬಿರವು ಪ್ರಾರಂಭವಾಗುವದು.
ತರುಣ ಕನ್ನಡಿಗರೇ!

ಭಾರತದ ಭಾಗ್ಯೋದಯವು ಭಾವೀತರುಣರನ್ನೆ ಅವಲಂಬಿಸಿರುವದರಿಂದ ನಿಸ್ತೇಜರೂ, ದುರ್ಬಲರೂ, ವ್ಯಸನಿಗಳೂ ಆದ ನಮ್ಮ ತರುಣರು ನೀತಿವಂತರೂ, ಕೆಚ್ಚೆದೆಯುಳ್ಳವರೂ, **ಭಾರತದ ಹಾಗೂ ಆತ್ಮದ ಸಂರಕ್ಷಣೆಯ ಕಲೆಯಲ್ಲಿ ನಿಪುಣರೂ,** ಗಂಡುಗಲಿಗಳೂ, ಆಗಬೇಕೆಂಬ ಉದ್ದೇಶದಿಂದ ಹಿಂದುಸ್ತಾನಿ ಸೇವಾದಲವು ಬೇರೆ ಬೇರೆ ಕಡೆಗೆ ಶಿಕ್ಷಣ ಶಿಬಿರಗಳನ್ನು ತೆಗೆದು, ಆತ್ಮಸಂರಕ್ಷಣೆಯ ಕಲೆಯ ಶಿಕ್ಷಣವನ್ನು ಕೊಡುತ್ತಿರುತ್ತದೆ. ಈ ವರ್ಷ ತೆಗೆಯಲ್ಪಡುವ ಶಿಬಿರಗಳಲ್ಲಿ **ಮೈಸೂರು ಹಾಗೂ ದಕ್ಷಿಣಕನ್ನಡ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂಬ** ಉದ್ದೇಶದಿಂದ ಈ ಎರಡೂ ಜಿಲ್ಲೆಗಳಿಗೆ ಮಧ್ಯವರ್ತಿಯಾದ ತೀರ್ಥಹಳ್ಳಿಯಲ್ಲಿ ಶ್ರೀ. ಕೇ ವೆಂಕಟರಾಮಯ್ಯನವರ ನೇತೃತ್ವದಲ್ಲಿ ಒಂದು ಶಿಬಿರವನ್ನು ತೆಗೆಯುವದು ನಿಶ್ಚಿತವಾಗಿದೆ.

ಈ ಶಿಬಿರದಲ್ಲಿ ದೊಣ್ಣೆ (ಲಾಠಿ) ಭಲ್ಲೆ (ಭಾಲಾ) ಕಿರುಗತ್ತಿ (ಜಂಬಿಯಾ) ಕತ್ತಿ, ದೊಡ್ಡಕತ್ತಿ, (ದಾಂಡಪಟ್ಟಾ) ಗದೆ, ಕುಸ್ತಿ, ಭೂತಾಟ ಲೇಝುಗಳು, ಆಸನ ಮೊದಲಾದ ಶಾರೀರಕ ಶಿಕ್ಷಣವೂ, ಭಗವದ್ಗೀತೆ ಪ್ರಾರ್ಥನೆ, ಬ್ರಹ್ಮಚರ್ಯ ಮೊದಲಾದ ನೈತಿಕ ಶಿಕ್ಷಣವೂ, ಹಿಂದುಸ್ತಾನ ಇತಿಹಾಸ, ಕರ್ನಾಟಕದ ಇತಿಹಾಸ ಮತ್ತು ಭೂಗೋಲ, ಕರ್ನಾಟಕ ಏಕೀಕರಣ, ಕಾಂಗ್ರೇಸಿನ ಇತಿಹಾಸ, ರಾಷ್ಟ್ರಧ್ವಜದ ಮಹತ್ವ, ಮುನಸೀಪಾಲಿಟಿ ಲೋಕಲ್‌ಬೋರ್ಡುಗಳ ಕರ್ತವ್ಯ, ಹಾಗು ಅವುಗಳ ಕಾಯಿದೆಗಳ ಜ್ಞಾನ, ಪ್ರಥಮಚಿಕಿತ್ಸೆ, ಶಾರೀರಶಾಸ್ತ್ರದ ಮೂಲತತ್ವ ಇವೇಮೊದಲಾದ ಬೌದ್ಧಿಕ ಶಿಕ್ಷಣವೂ ಕೊಡಲ್ಪಡುವದು.

ಈ ಶಿಬಿರದಲ್ಲಿ ಶಿಕ್ಷಣಪಡೆಯುವ, ಪ್ರತಿಯೊಬ್ಬರಿಗೆ ೨೦ ರೂಪಾಯಿಗಳ ಖರ್ಚು ಬರುವದು. ಬಡವಿದ್ಯಾರ್ಥಿಗಳಿಗೆ ಉಟದ ವ್ಯವಸ್ಥೆಯನ್ನು ಮಾತ್ರ ಮಾಡಲಾಗುವದು.ಅವರು ಆಯಾ ಊರುಗಳ ಸಭ್ಯಗೃಹಸ್ಥರಿಂದ ಬಡವರಿದ್ದ ಬಗ್ಗೆ ಪ್ರಶಸ್ತ ಪತ್ರಿಕೆಗಳನ್ನು ಕಳಿಸಿಕೊಡಬೇಕು. ಶಿಬಿರಕ್ಕೆ ಬರುವವರು, ಏಪ್ರೀಲ್ ೧೫ರ ಒಳಗಾಗಿ ನಮ್ಮ ಕಡೆಗೆ ಅರ್ಜಿಗಳನ್ನು ಕಳಿಸಿ ಸಮ್ಮತಿಯನ್ನು ಪಡೆಯಬೇಕು.

ಶಿಬಿರಕ್ಕೆ ಬರುವವರು ಕೆಳಗಿನ ಸಾಮಾನುಗಳನ್ನು ತೆಗೆದುಕೊಂಡು ಬರಬೇಕು.

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ.

Life is a battle field.

Man is a fighter. As men we are to fight–do our duty. As the struggling becomes very hard, so the fight becomes the thickest; and it is then we get bewildered and shrink from doing our duty--the life's noblest aim. We begin to question ourselves, indulge in pitying ourselves and ultimately allow ourselves to glide into inactivity. Such was the state of the mind of Arjuna–Nara--the man, on the battle field of kurukshetra (the field of duty) when lord Shree Krishna–Narayan –the God, came to his aid and replied "whence has come to thee this dejection, this stain and darkness of the soul in the hour of difficutly and peril. This is not the way cherished and followed by the Aryan man, this mood came not from heaven nor can it lead to heaven, and on earth it is the forfeiting of the glory that waits upon strength and heroisn and noble works "!

Since the advent of the British rule in India being imbued with the spirit of materialism in their contact, we have become mere speculators and calculators. We have now even ceased to move an inch to undertake any action before we calculate its gains in terms of rupees, annas and pies. We have no self confidence and lost all faith in the greatness of God and goodness of Man. We think we are poor, ignornt and weak in spirit and body; and hence cannot dare to undertake any vigourous action which will entail the slightest suffering on ourselves. This Sri Aurobindo Ghos, the greatest philospher and the strongest man of action characterises as impotence full of a weak selfpity, a recoil from the mental suffering which his act must entail on himself. This self pity is a weakness of the mind and the senses.

Can we not hope again to rise from our great fall? Can we not see that there is God by our side, Omniscient and Omnipotent always ready to guide us and help us? Certainly we can hope to rise again to the pinnacles of the highest glory of our ancient India. It is not our right to determine what we shall do or not do according to our emotious and our passions, or to decline our work becouse it will bring sorrow and emptiness to our life. We have to see only the work that must be done and to hear only the Divine Command breathed through our innate nature. If we do not realise this, we are not fit to be called men that can fight the life's battle, with the true spirit and courage of an Aryan fighter, but beasts of burden and birds of prey that are fit to be belaboured and devoured without any pity or remorse.

As our readers might be aware, we have been consciously reproducing something usful from the good and the great, adding very little of our own sufficieant only to give a new colouring. As often suggested the main defect is that we are more wise than what we ought to be. To us mahatma Gandhi is a fool preaching impracticables, and Aurobindo Ghose a madman soaring high in his own fitful reveries making others mad who follow him, doing nothing and serving no useful purpose. All this is due to the one fact that we are more wise than what we ought to be. We have now sufficiently read and heard. We have now only to remember and reflect and do what we can.

In the end therefore, resuming to our snbject we refer our readers to Aurobindo Ghose who defines the creed of the Aryan fighter. He says " know God " it (Aryan creed) says " know thyself, help man; Profect the right, do without fear or weakness or faltering the work of battle in the world. Thou art the eternal and the imperishable spirit, thy soul is here on its upward path to immortality; life and death are nothing, sorrow and wounds and suffering are nothing, for these things have to be conquered and overcome. Look not at thy own pleasure and gain and profit, but above and arround, above at the shinning summits to which thou climbest, around at this world of battle and trial in which good and evil,

progress and retrogression are locked in stern conflct. Know every where the one self, know all to be immortal souls and the body to be but dust. Do thy work with a clam strong and equal spirit; fight and fall nobly or conquer mightily For this is the work that God and thy nature have given to thee to accomplish. Knowing this to be the creed of the Aryan fighter we should all fight and die in the Life's battle field.

प्रार्थना.

आपदामपहर्तारं दातारं सर्वसंपदां ।
लोकाभिरामं श्रीरामं भूयो भूयो नमाम्यहं ॥ श्री ॥

श्रीरामनवमीच्या दिवशीं येथील श्रीरामसेवासंघाचा वार्षिकोत्सव समारंभ श्रीयुत दत्तोपंत बेळवी यांचे अध्यक्षतेखालीं पार पडला. प्रारंभी येथील मिशन हायस्कूलचे विद्यार्थि श्रीयुत मुणगेकर यानीं "फ्लट" वाजवून दाखविल्यानंतर बागलकोटचे पंडित गोपाळाचार्य बुर्ली यानीं परमेश्वराचा अवतार कशाकरिता होतो, व विशेषतः रामावताराचें रहस्य काय, व आपण सर्व धर्माप्रमाणेंच कां वागावे, ह्याबद्दल थोडक्यात सांगितलें. नंतर श्रीरामसेवासंघाचे सेक्रेटरी श्रीयुत वेंकटराव देशपांडे यांनीं या संस्थेचे उद्देश काय आहेत, हे थोडक्यांत सागून संस्थेनें सवंध वर्षामध्यें कोणकोणतीं कार्यें केलीं, त्याचें यथासांग वर्णन केलें. त्यानंतर मुरगोडचें कुरगुंद मास्तर यानी कानडींत मुलाची प्रवृत्ती चहा, चिरूट वगैरे सारख्या प्रकृतीला अपायकारक व्यसनाकडे न वळता सद्गुण, सद्धर्म, सदाचरण व शीलसंवर्धनाकडेच असावी, वगैरे अर्थाचे विनोदपूर्ण भाषण केले. त्यानतर अध्यक्ष या नात्यानें समारोपादाखल श्रीयुत बेळवी याचें तरुणांस उत्साहजनक व स्फूर्तिदायक असें अर्धातासपर्यंत मोठ्या कळकळीचे भाषण झाले. त्याच्या भाषणाचा सारांश असा. "श्रीरामनवमीचा उत्सव प्रत्येक हिंदूनें अवश्य करावा व प्रत्येकानें त्यादिवशीं प्रभुरामचंद्रजीचें चरित्र आठवून त्याचप्रमाणें आचरण करण्याची बुद्धि आह्मांस देणेविषयीं प्रभूची प्रार्थना करावी. आजच्या सारखा उत्सवाचा दिवस आम्हां हिंदूस दुसरा कोणताच नाहीं ! प्रत्येकानीं आपल्या घरीं रामायण वाचलें पाहिजे; व आपल्या बायकां पोरांना वाचावयास लाविलें पाहिजे; ह्मणजे माझी खात्री आहे की, ८।१० वर्षांच्या आंत सवंध हिंदुस्थानची स्थिति बदलून जाईल. प्रत्येकजण आपापल्याधर्माप्रमाणें वागून सुखी राहील आणि आमचें राष्ट्र सध्यां कितीहि दुर्बल दिसत असले तरी पुनः बलवान् व कर्तृत्ववान् होऊन आपलें गत वैभवाप्रत खास जाईल. अलीकडे इग्रजी शिकलेल्या लोकाना रामायण काल्पनिक कथा वाटत असून, "रामराज्य" ह्मणजे काल्पनिक राज्य असें वाटत आहे; त्यामुळें पुष्कळाना रामायण वगैरे पौराणिक ग्रंथ वाचूं नये अशी दुर्बुद्धि झाली आहे; त्यामुळेंच आमच्या देशाचा घात झाला आहे, व होत आहे. माझ्या मतें त्याची समजूत साफ चुकीची असून, ती दुरुस्त करून आपल्या पोरांबाळाना त्यांनी रामायण वाचण्यांस सांगावें ह्मणून त्यानां माझें आग्रहाचें सागणें आहे. रामायणासारखा ग्रंथ अजून देखील इतर कोणत्याहि देशात नाहीं. होमरचे 'ईलियड' नावाचें पुस्तक आहे परंतु त्यात देखील मुख्य कथानक रामायणातून चोरलेलें आहे. त्यातील पात्रें देखील रामयणांतील पात्राप्रमाणेंच असून, तशाच तऱ्हेचें त्याचें वर्णन आहे, तेव्हा त्या ग्रंथाला देखील महत्व आले असेल तर रामायणाची नकल ह्मणूनच आले आहे, असे मला वाटतें. घटकाभर रामायण काल्पनिक आहे, अशीहि कल्पना केली तरी, त्यांतील प्रत्येक व्यक्ति आदर्शभूत असून अनुकरणीय आहे की नाही, ते आपण पाहावें. राम, लक्ष्मण, सीता, हनुमान, सुग्रीव, वाली कोणीहि घ्या, त्यांच्या तोडीचा दुसरा सापडणें कठीण, भरतासारखे तर कोणीच सापडणार नाहींत! फार बोलून आपला वेळ घेत नाहीं कोणत्याहि दृष्टीने पाहिलें तरी, रामायण ग्रंथ वाचनीय, मननीय आणि अनुकरणीय खास आहे. ह्मणून मी श्रीरामसेवासंघाच्या चालकांनाहि हेंच आग्रहानें सांगतों कीं, कांहीं नाहीं करिता आलें तरी पुढील वर्षाच्या आंत पुष्कळ विद्यार्थ्यांकडून निरनिराळ्या भागेंतून रामायण ग्रंथ वाचून घेण्याची व्यवस्था करा. अशा रीतीनें तासभर व्याख्यान देऊन पुनः आग्रहपूर्वक निदान खालील श्लोक तरी सर्वानी रोज १०।२५।१००।१००० वेळा सवड मिळेल त्याप्रमाणें प्रत्येकानीं ह्मणावें असें सांगितलें, तो श्लोक असा.

आपदामपहर्तारं दातारं सर्वसंपदां ।
लोकाभिरामं श्रीरामं भूयो भूयो नमाम्यहं ॥१॥

हा श्लोक ते सातारच्या प्रांतिक परिषदेचें अध्यक्ष असताना सर्वांकडून शास्त्र्यानीं कसा म्हणवून घेतला होता आणि तेंव्हापासून रोज नियमानें ते स्वतः म्हणत असल्याबद्दल त्या श्लोकांत म्हटल्याप्रमाणेंच, स्वतःला अनुभव आल्याबद्दल त्यानीं सांगितले. सगळ्याना तो तावडतोब पटून सर्वांनीं टाळ्या दिल्या.

आपल्या भाषणांत त्यानीं पुष्कळ गोष्टी तरूणानां उत्साहजनक व बोधपर असें सांगितलें. धनंहि धर्मैकफलं या न्यायानें प्रत्येकजणांनीं पैसा मिळवावा–पण तो पैसा सार्वजनिक कार्याकरितां, सत्कार्याकरिताही थोडा का होईना, खर्च करण्याकरितांच परमेश्वरानीं आपणास दिलेला आहे, हें पूर्ण लक्षांत बाळगून, शक्त्याप्रमाणे कार्यकरणाऱ्यांना निरुत्साही न करितां त्यांना उत्तेजन देत असावें. या सर्व गोष्टींचा विचार करून, आपण सर्वांनीं वागण्याचा प्रयत्न केल्यास, रामराज्य काल्पनिक न वाटतां प्रत्यक्ष आह्मांला अनुभवतां येईल. असो; आह्माला जास्त काहीं सांगावयाचें नसून, सर्वांनीं श्रीयुत दत्तोपंत बेळवी यांनीं सांगितल्याप्रमाणें वागण्याची खटपट करावी अशी आग्रहाची प्रार्थना आहे!

महाराष्ट्र-साहित्य-संमेलन

यंदा येत्या ७-८-९ तारखेस ग्वाल्हेर येथें रा. रा. माधवरावजी अणे यांचें अध्यक्षतेखालीं महाराष्ट्र साहित्य संमेलन भरण्याचें ठरल्याबद्दल सर्वांना माहीतच आहे. पुढच्यासालीं महाराष्ट्र साहित्य परिषद बेळगांव येथेंच भरविण्याकरितां आमंत्रण देणेंसाठीं कांही लोक गेलें आहेत. पण सध्यां कर्नाटक प्रांत जागा झाला असून, कर्नाटकचें एकीकरण करण्यांत सर्व पुढारी लोक मग्न झाले आहेत.त्यादृष्टीनें ही महाराष्ट्र–साहित्य–परिषद बेळगांव येथें भरल्यास त्यांच्या चळवळीला जोराचा धक्का बसल्यांवाचून राहणार नाही, असें प्रामाणिकपणें वाटतें. तेंव्हां अशा परिस्थितीत बेळगांवकरांचें आमंत्रण स्वीकारून साहित्य परिषद पुढाच्याच वर्षी बेळगांव येथें भरविण्याचें करूं नये असें कर्नाटकांतील जबाबदार लोकांना वाटल्यामुळें निरनिराळ्या लोकांकडून व संस्थाकडून महाराष्ट्र साहित्य परिषदेच्या व्यवस्थापकांना सूचना गेल्या आहेत. यावर अशा तऱ्हेच्या सूचना करणाऱ्यांच्या मनांत कांही तरी दुष्ट हेतू असलाच पाहिजे असे समजण्याचें कारण नाहीं. राष्ट्रीय दृष्टीनें सुद्धां कर्नाटका पुरता एक राजकीय विभाग निराळा करून देण्याची वेळ सध्या आली आहे. हें तत्व काँग्रेसनें मान्य केलें असून, रा. रा. नरसोपंत केळकरांनीं त्याप्रमाणें मर्यादा घालूनहि दिली आहे. असें असतां त्या दृष्टीनें कर्नाटकातील पुढारी प्रयत्न करीत असतां, त्यांच्या हेतूचा विपर्यास करून, कोणीही राष्ट्रकार्यास विघ्नें आणूं नयेत. आह्मीं कर्नाटकांतील लोकांच्या आकांक्षा काय काय आहेत, आणि त्यांचे प्रयत्न कशा तऱ्हेचे आहेत, ह्या बद्दल वरचेवर लिहून आमच्या महाराष्ट्र बंधूंस वरचेवर कळवूच पण तूर्त विचार केल्याशिवाय कोणी कोणाबद्दल गैरसमज करून घेऊं नये.

प्रभू रामचंद्र.

कवि, माधव व्यंकटेश जोशी, मंगसूळकर.

आणि दाशरथि राम, जानकी लक्ष्मण वनिं चाले॥
दर्शनार्थ लोटले पौर जन, अश्रुनेत्रिं आले॥१॥
पुरी अयोध्या आज तुझ्याविण उदास घननीळा!॥
कैकयिनें अवचीत असा कां घात मांडियेला॥२॥
वचन पूर्तता करण्याजासी वना हीनदीन॥
कोण करी मग कृतार्थ आह्मां? पदीं दास लीन॥३॥
नको राहणें, योग्य न येथें वनीं आम्हि येऊं॥
जानकि रमणा, कष्टभार शिरि आनंदें घेऊं!॥४॥
निष्ठा पाहुनि गहिंवरला प्रभु, शब्द फुटेना कीं॥
आश्वासन देउनी जनांते, कष्टें पद टाकी॥५॥

रामायणाचा प्रसार.

यंदाच्या श्रीरामनवमीच्या दिवशी येथील श्रीरामसेवासंघाचा वार्षिकोत्सव साजरा करण्यांत आला. त्यादिवशीं येथील प्रसिद्ध वकील रा. रा नारायणराव जोशी यानीं विद्यार्थ्यांना रामायण वाचण्याकरितां उत्तेजन मिळावें म्हणून १०० रुपये बक्षीस देण्याचें अभिवचन दिलें आहे. लवकर अटी प्रसिद्ध करण्यांत येतील.

महात्माजींची शिकवण.

(लेखक, अनंत जिवाजी कमतनूरकर; बेळगांव.)

शरीर परोपकारीं लावावें.
बहुतांच्या कार्यास यावें
उणें पडो न द्यावें
कोणी एकाचें ॥ १ ॥

जे थोर लोक असतात त्यांचेवर जबाबदारी मोठ्या प्रमाणांत असते. महात्माजींनीं राष्ट्राचें धुरिणत्व स्वीकारल्यापासून, आज प्रत्येक बाबतींत क्रांति झालेली आपल्याला आढळून येईल.

तरुण पिढींचें कर्तव्य काय, राष्ट्राच्या बाबतींत त्यांनीं कोणत्या प्रकारचा स्वार्थत्याग करणें जरूर आहे, कोणत्या प्रकारचा प्रयत्न केला असता गतवैभव प्राप्त होईल, याचें निदान बरोबर असें जर कोणाला समजून आलें असेल, तर तें एक महात्माजींनाच.

' आधीं केलें मग सांगितलें '

अशा वृत्तीचें महात्माजी आहेत. त्यांची शिकवण नवजीवन देणारी आहे, उत्साह द्विगुणीत करणारी आहे; पण, सुधारणेचें वारें कानांत शिरल्यामुळें, आपण दिशाभूल होऊन भलतीकडेच धांवव सुटलों आहोंत. चरखा फिरवा म्हणून महात्माजी सांगतात; पण कांहीं थोर लोक (!) ' सुतानें कां स्वराज्य मिळणार? ' अशा भाषणानें त्याची कुचेष्टा करून प्रतिष्ठा मिरवतात. चरखा दिसण्यांत साधा दिसतो; पण त्यामुळें बेकारीला आळा बसून, स्वावलंबनाचें तत्व बाणलें जातें, हें या लोकांनां कळत नाहीं.

हिंदु-मुसलमानांच्या ऐक्यासाठीं महात्माजी जीवापाड प्रयत्न करीत आहेत; पण, आपले डोळे अजून उघडत नाहींत; तस्मात्, देशाचा भाग्योदय अजून दूर आहे, असेंच म्हटलें पाहिजे !

फाजिल धर्मांधतेमुळें परस्परांचीं डोकीं मात्र फुटतात, यावांचून दुसरें कांहीं नाहीं. अहिंसा, सत्य, साधेपणा व ऐक्य यावांचून आपला तरणोपाय होणें कठीण आहे ! ' आपलें आचरण इतकें निर्मळ पाहिजे कीं, तें पाहून आपल्या शत्रूला देखील संतोष झाला पाहिजे; पण इतके उच्च तत्व कृतींत आणण्याचें मानसीक धैर्य आपल्यांत आहे कुठें ! दुसऱ्याचें वाटेल तें होवो, स्वतःचें हित साधलें म्हणजे झालें, अशा विचार सरणीमुळेंच आपल्याला ही स्थिति आली आहे.

आपण एकेकाळीं कोण होतों, व सध्यांला आपली स्थिति कोणत्या प्रकारची आहे, हें जाणण्याची इच्छा असल्यास, भूतकालाचा चित्र फलक नेत्रांपुढें ठेवून महात्माजींची शिकवण कृतींत आणा. आज प्रत्येक बाबतींत आपण परक्यांवर अवलंबून आहोंत. परदास्याचें दडपण आपल्यावर इतकें बसले आहे कीं, यांतून आपली सुटका होण्याला बराच कालावधी लागेल. परंतु, त्यासाठीं आपल्याला प्रयत्न जरूर केला पाहिजे. निव्वळ दैवावर बिस्मंबून भागणार नाहीं. दैव हें आळशाचें दैवत आहे.

शेवटीं सांगण्याचें तात्पर्य इतकेंच कीं, महात्माजींची शिकवण ही राष्ट्राला उर्जितावस्थ आणून देणारी आहे. यासाठीं प्रिय बांधवहो उद्योगाची बळकट कास धरून, त्या दिव्य विभूतीचे सांगणें प्रत्यक्ष कृतींत आणून, आत्मोद्धार व देशोद्धार करा !

छापखान्यांतील कामगार बंधूंस

☞ जाहीर विनंति. ☜

आम्हीं बेळगांव येथें छापखान्यांतील कामगा लोकांचा **"दि बेळगांव प्रेस वर्कर्स युनियन"** या नांवाचा संघ रामनवमीच्या दिवशीं स्थापन केला आहे. तरी आमच्या व्यवसाय बंधूंनीं सदर संघाचे सभासद होऊन संघास बळकटी आणावी अशी विनंति आहे.

सेक्रेटरी,
दि बेळगांव प्रेस वर्कर्स युनियन.

B. BABURAO & SONS.
Dealers & repairers in Watches & Phonos.
EXCELLENT WORK, MODERATE RATES
Ganpatstreet, BELGAUM.

हें पत्र **हणमंत सदाशिव परांजपे,** यांनी आपल्या **श्रीकृष्ण प्रेस, बेळगांव** घर नं. १५४७ येथे छापिलें व **व्यंकटेश बाळकृष्ण देशपांडे, वकील** यांनी मारुतीगल्ली घ. नं. १५७० येथे प्रसिद्ध केलें.

ಹಾಸುವ ಕಂಬಳಿ ೧ ಹೊದೆಯುವ ಕಂಬಳಿ (ರಗಲು) ೧
ಉಡುವ ಧೋತರ ೨ ಹೊದಿಯುವ ಧೋತರ ೧
ಮೈ ಒರೆಸುವ ಪಂಚೆ ೧ ತಂಬಿಗೆ ೧
ಥಾಲಿ ೧ ಬಟ್ಟಲು ೧
ನೋಟ್ ಬುಕ್ಕು ೧ ಖದ್ದರಿನ ಕಾಚಾ (ಚಡ್ಡಿ) ೧

ಇದಲ್ಲದೆ ಪ್ರತಿಯೊಬ್ಬರೂ ಖಾದಿಯ ಸಮವಸ್ತ್ರಗಳನ್ನು (**Uni—form**) ತರಬೇಕು. ಅಂದರೆ ಅರ್ಧ ತೋಳಿನ ಅಂಗಿ. ಎರಡು ಅರ್ಧ ಚಡ್ಡಿಗಳು ೨. ಟೊಪ್ಪಿಗೆ, ೨. ಅನುಕೂಲವಿಲ್ಲದವರು ಒಂದೊಂದೇ ತಂದರೂ ಅಡ್ಡಿಯಿಲ್ಲ.

ಎಲ್ಲ ಪತ್ರವ್ಯವಹಾರವನ್ನು ಶಿಬಿರದ ಮುಖ್ಯ ವ್ಯವಸ್ಥಾಪಕರಾದ ಶ್ರೀ. ಬಾವೀಕಟ್ಟೆ ನಾಗಾಭಟ್ಟ ತೀರ್ಥಹಳ್ಳಿ, ಇವರ ಸಂಗಡ ಮಾಡಬೇಕು.

ಮೈಸೂರಿನ ಹಾಗು ಮಂಗಳೂರಿನ ತರುಣ ಕನ್ನಡಿಗರೆ! ಸೇವಾದಳವು ಕೈಕೊಂಡ ಈ ಸೇವೆಯನ್ನು ಸ್ವೀಕರಿಸಿ ಸ್ವದೇಶಾಭಿಮಾನಿಗಳೂ, ಧೀರರೂ ಗಂಡುಗಲಿಗಳೂ, ಸದೃಢರೂ ಆಗಬೇಕೆಂದು ಪ್ರಾರ್ಥಿಸುತ್ತೇವೆ.

ತಾರೀಕು ೫೮-೩-೨೮. { ನಾ. ಸು ಹರ್ಡಿಕರ, ಹುಬ್ಬಳ್ಳಿ. ಕಾರ್ಯದರ್ಶಿ. ಹಿಂದುಸ್ತಾನಿ ಸೇವಾದಳ.

ಟೀಪು:—ಬಡವಿದ್ಯಾರ್ಥಿಗಳನ್ನು ನಿಯಮಿತವಾಗಿ ಶಿಕ್ಷಿಸಿಕೊಳ್ಳುವವರು ಅವರು ಊಟದಹೊರ್ತು ಸಮವಸ್ತ್ರ ಮೊದಲಾದವುಗಳನ್ನು ತಾವೇ ತರಬೇಕಾಗುವದು. ಏಪ್ರೀಲ ೧೦ರ ಒಳಗಾಗಿ ಪತ್ರವ್ಯವಹಾರವನ್ನು ಮಾಡಿ ತಮ್ಮ ಸ್ಥಳವನ್ನು ನಿಶ್ಚಿತಮಾಡಿಕೊಳ್ಳಬೇಕು.

ಮರಾಠರ ಆಕ್ರಮಣ ಶೀಲತೆ.

('ಅನಂತರಾಯ 'ನು ಬರೆದದ್ದು.)

ಕನ್ನಡನಾಡಿನ ಹಲವು ಭಾಗಗಳು ತಮ್ಮವೆಂದು ಸಾಧಿಸಲಿಕ್ಕೆ ಇತ್ತ ಮರಾಠರೂ ಅತ್ತ ಆಂಧ್ರರೂ ಕೈತೊಳೆದುಕೊಂಡು ಕನ್ನಡಿಗರ ಬೆನ್ನುಹತ್ತಿದ್ದಾರೆ. ಬಳ್ಳಾರಿ ಜಿಲ್ಲೆಯನ್ನು ಆಂಧ್ರರು ಸದ್ಯಕ್ಕಂತೂ ನುಂಗಿಯೇ ಬಿಟ್ಟಂತಾಗಿದೆ. ಕನ್ನಡಿಗರು ಅದನ್ನು ಆಂಧ್ರರ ಗಂಟಲೊಳಗಿಂದ ಎಂದು ಸಿರಿಸುಕೊಳ್ಳುವರೋ ದೇವರೇ ಬಲ್ಲ. ಇತ್ತ ಬೆಳಗಾಂವಿ ಜಿಲ್ಲೆಯನ್ನು ಮಹಾರಾಷ್ಟ್ರದೊಳಗೆ ಸಾಧಿಸಬೇಕೆಂದು ಕೆಲವು ಕಲಿತವರು ಹಂಬಲ. ಇಲ್ಲಿಯ ಹಾಗೂ ಜಿಕ್ಕೋಡಿಯ ಕೋರ್ಟುಗಳಲ್ಲಿ ಇಲ್ಲಿಯೆ ಮರಾಠರ ಕಪಟತಂತ್ರದಿಂದ ಮರಾಠಿಯ ಚಂಚು ಪ್ರವೇಶವಂತೂ ಆಗಿಹೋಯಿತು. ಇಷ್ಟರಿಂದಲೇ ತೃಪ್ತರಾಗದೆ ಈ ದುರಭಿಮಾನಿಗಳು ಅಫಜಲ-ಹುಕ್ಕೇರಿಗಳ ಕೋರ್ಟುಗಳನ್ನೂ ನುಡಿಗಡಿಸಲಿಕ್ಕೆ ಪಣತೊಟ್ಟಿದ್ದಾರೆ. ನಮ್ಮ ಜಿಲ್ಲೆಯು ಅರ್ಧ ಕನ್ನಡ ಅರ್ಧ ಮರಾಠಿಯೆಂದು ನಿಸ್ಸಾರಣವಾಗಿ 'ಸಮಾಚಾರ 'ವು ಬೊಬ್ಬೆ ಕುಟ್ಟುತ್ತಿರುವದು.

ಈ ಆಕ್ರಮಣಶೀಲತೆಯ ಬಿಸಿ ಬಿಸಿ ಉದಾಹರಣೆಯೆಂದರೆ ಪುಣೆಯಲ್ಲಿ ಕೂಡಲಿಕ್ಕಿರುವ ಮಹಾರಾಷ್ಟ್ರದ ವಕೀಲರ ಪರಿಷತ್ತು. ಮಹಾರಾಷ್ಟ್ರದೊಳಗಿನ ವಕೀಲರು ತಮ್ಮ ಇಪ್ಪತ್ತು ಪರಿಷತ್ತುಗಳನ್ನು ಕೂಡಿಸಲಿ, ಆದರೆ ಬೆಳಗಾಂವಿ ಜಿಲ್ಲೆಯನ್ನು ಆ ಪರಿಷತ್ತಿನೊಳಗೆ ಸೆಳಕೊಳ್ಳುವ ಹಂಬಲವೇಕೆ? ಕಾರ್ಯದರ್ಶಿಗಳು ತಮ್ಮ ಬಿನ್ನಹ ಪತ್ರಿಕೆಯಲ್ಲಿ "ಮಹಾರಾಷ್ಟ್ರದೊಳಗಿನ ಹತ್ತು ಜಿಲ್ಲೆಗಳು ಹಾಗೂ ಬೆಳಗಾಂವಿ ಜಿಲ್ಲೆ ಸೀಗೆ ಮರಾಠಿಯು ಮಾತೃಭಾಷೆಯಾಗಿರುವ ಹನ್ನೊಂದು ಜಿಲ್ಲೆಗಳ ಪರಿಷತ್ತು" ಎಂದು ಬರೆದಿದ್ದಾರೆ ಬೆಳಗಾಂವಿ ಜಿಲ್ಲೆಯ ಮಾತೃಭಾಷೆಯು ಮರಾಠಿಯೆಂಬ ಅಗಾಧ ಜ್ಞಾನವನ್ನು ಈ ಮಹಾಶಯರು ಯಾವ ತಿಪ್ಪೇ ಗುಂಡಪ್ಪಸಿಂದ ಸಂಪಾದಿಸಿದರೆಂಬುದು ನಮಗೆ ಗೊತ್ತಿಲ್ಲ. ಇಲ್ಲಿಯು ಕೆಲವು ಜನರ ಮಾತು ಮರಾಠಿಯಾದರೆ ಇಡೀ ಜಿಲ್ಲೆಯ ತಾಯಿನುಡಿಯು ಮರಾಠಿಯಾಯಿತೇ? ಹೀಗಾದರೆ ವಿಜಾಪುರ, ಕಾರವಾರ ಜಿಲ್ಲೆಗಳೂ ಮರಾಠಿಯಾಗುವವಲ್ಲ! ಅವುಗಳನ್ನೂ ಪರಿಷತ್ತಿನೊಳಗೆ ಸೇರ್ಪಡಿಸಲಿಲ್ಲವೇಕೆ? ಹಲವು ಮರಾಠಿಗರು ಹೊಟ್ಟೇಹೊರಕೊಳ್ಳುವದಕ್ಕಾಗಿ ದೂರ ದೂರ ದೇಶಗಳಲ್ಲಿ ವಾಸಮಾಡಿಕೊಂಡಿರುವರು. ಆ ದೇಶಗಳನ್ನೆಲ್ಲ ಮಹಾರಾಷ್ಟ್ರದಲ್ಲಿ ಸೇರಿಸಿಬಿಟ್ಟಿದ್ದರೆ ಒಂದು "ಜಂಗೀ" ಪರಿಷತ್ತೇ ಆಗುತ್ತಿತ್ತು!

ಕನ್ನಡಿಗರ ಕಣ್ಣಿಗೆ ಇಂಗು ಹಚ್ಚುವದಕ್ಕೋ ಏನೋ ಬೆಳಗಾಂವಿಯ ಕನ್ನಾಟಕ ಧುರೀಣರಾದ ದೇ. ಭ. ಬೆಳವಿರಾಯರ ಹೆಸರನ್ನು ತಮ್ಮ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿರುವರು. ಮಹಾರಾಷ್ಟ್ರವಷ್ಟೇ ಅಲ್ಲ. ಇಡೀ ಮುಂಬಯಿ ಇಲಾಖೆಯ ವಕೀಲರ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅಲಂಕರಿಸಲಿಕ್ಕೂ ನಮ್ಮ ಬೆಳವಿರಾಯರು ಯೋಗ್ಯರಿರುವರೆಂದು ನಾವು ಬಿಳ್ಳೇ ಅಭಿಮಾನದಿಂದ ಹೇಳುತ್ತೇವೆ. ಆದರೆ ಬೆಳಗಾಂವಿ ಜಿಲ್ಲೆಯನ್ನು ಮಹಾರಾಷ್ಟ್ರದೊಳಗೆ ಸೇರಿಸಿಕೊಂಡು ಇಲ್ಲಿಯ ಧುರೀಣರ ಕೈಯಿಂದಲೇ ಅದರ ಮೇಲೆ ಮಹಾರಾಷ್ಟ್ರದ ಮುದ್ರೆಯನ್ನೊತ್ತಿಸುವ ಮರಾಠಿಗರ ಹವಣಿಕೆಯು ಮಾತ್ರ ಪೂರಾ ಹೇಯವಾದದ್ದು. ಬೆಳವಿರಾಯರನ್ನು ಅದರಿಸುವದೇ ಇದ್ದರೆ, ಖರೇ ಮಹಾರಾಷ್ಟ್ರದ ಪರಿಷತ್ತು ಕೂಡಿಸಿ ಅವರನ್ನು ಅಧ್ಯಕ್ಷರನ್ನಾಗಿ ಮಾಡಬಹುದಾಗಿತ್ತು. ಕನ್ನಡನಾಡಿನ ಧುರೀಣರು ಮಹಾರಾಷ್ಟ್ರದ ವಕೀಲಪರಿಷತ್ತಿಗೆ ಅಧ್ಯಕ್ಷರಾದರೆ ಕರ್ನಾಟಕಕ್ಕೆ ಅದೊಂದು ಭೂಷಣವೇ ಸರಿಯಷ್ಟೆ?

ಇಲ್ಲಿಯ ಬಾರ ಅಸೋಸಿಏಶನ್‌ದವರು ಹೊತ್ತಿಗೇ ಎಚ್ಚತ್ತು "ಬೆಳಗಾಂವಿ ಜಿಲ್ಲೆಯು ಮಹಾರಾಷ್ಟ್ರವೆಲ್ಲವಾದ್ದರಿಂದ ಮಹಾರಾಷ್ಟ್ರ ವಕೀಲ ಪರಿಷತ್ತಿಗೆ ನಮ್ಮನ್ನು ಪ್ರತಿನಿಧಿಗಳನ್ನು ಕಳಿಸತಕ್ಕದ್ದಲ್ಲ." ಎಂದು ಗೊತ್ತುಮಾಡಿರುವರು. ಬೆಳಗಾಂವಿಯ ವಕೀಲರ ಕಣ್ಣು ತೆರೆದದ್ದು ಸಂತೋಷದ ಮಾತೇ ಸರಿ. ವಕೀಲರೇ ಸಮಾಜದ ಮುಂದಾಳುಗಳಾಗಿರುವದರಿಂದ ಅವರು ಮನಬಂದರೆ ಬೇಕಾದ್ದನ್ನು ಮಾಡಬಲ್ಲರು. ನವಕರ್ನಾಟಕವನ್ನು ನಿರ್ಮಾಣಮಾಡುವ ಕಾರ್ಯಭಾರವು ವಿಶೇಷವಾಗಿ ನಮ್ಮ ವಕೀಲ ಬಾಂಧವರನ್ನೇ ಕೂಡಿಕೊಂಡಿದೆ. ಇವರು ತುಸು ದಿವಸಗಳ ಮುಂಚೆಯೇ ಎಚ್ಚತ್ತಿದ್ದರೆ ಇಲ್ಲಿಯ ಕೋರ್ಟುಗಳಲ್ಲಿ ಮರಾಠಿಯು ಚಂಚುಪ್ರವೇಶವಾಗುತ್ತಿರಲಿಲ್ಲ. ಇರಲಿ. ಇನ್ನುಮೇಲಾದರೂ ನಮ್ಮ ವಕೀಲರು ಸಂಪೂರ್ಣವಾಗಿ ಎಚ್ಚತ್ತು ಪರಕೀಯರ ದಾಳಿಗಳಿಂದ ಕರ್ನಾಟಕವನ್ನು ಕಾಪಾಡಬೇಕು.

ದಾನಶೂರ ದೇಸಾಯರು.



ವಂಟಮೂರಿಯ ಶ್ರೀಮಂತ ಲಕಮಪ್ಪಪ್ರಭುಗಳು ತಮ್ಮ ಔದಾರ್ಯದಿಂದ ಇಡೀ ಕರ್ನಾಟಕದಲ್ಲಿ ಹೆಸರುವಾಸಿಯಾಗಿದ್ದಾರೆ. ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿಯ ಅನೇಕ ಚಟುವಟಿಕೆಗಳಿಗೆ ಇವರು ವಿಪುಲ ಧನಸಹಾಯಮಾಡಿ ಕನ್ನಡಿಗರ ಶೈಕ್ಷಣಿಕ ಪ್ರಗತಿಗೆ ಚಾಲನೆ ಕೊಟ್ಟಿರುವರು. ಬೆಳಗಾಂವಿಯ ಕ್ರೀಡಾ ಭವನದ ಕಟ್ಟಡಕ್ಕೆ ಈ ದಾನಶೂರರು ಮುಕ್ತಹಸ್ತದಿಂದ ಸಹಾಯಮಾಡಿದ್ದರಿಂದ ಆ ಕಟ್ಟಡದ ಮುಖ್ಯಭಾಗಕ್ಕೆ ಶ್ರೀಮಂತರ ಹೆಸರು ಕೊಡಲ್ಪಟ್ಟಿತೆಂಬದನ್ನು ಎಲ್ಲರೂ ಬಲ್ಲರು. ಪಾಚ್ಛಾಪುರದ ರೇಲ್ವೆ ಸ್ಟೇಶನದಿಂದ ಯಮಕನಮರಡಿಯವರೆಗೆ ೧೨ ಮೈಲು ರಸ್ತೆಯನ್ನು ೧–೧॥ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ತಯಾರಿಸಿ, ಅಪ್ರತಿಮ ಲೋಕೋಪಕಾರವನ್ನು ಮಾಡಿರುವರು. ಇದಲ್ಲದೆ ಅನೇಕ ಸಂಸ್ಥೆಗಳಿಗೆ ಕೊಡಗ್ಯೆಯಿಂದ ಎಣಿಕೆಯಿಲ್ಲದಷ್ಟು ಸಹಾಯಮಾಡಿ ಕೀರ್ತಿವಂತರಾಗಿರುವರು. ತಮ್ಮ ಸ್ವಂತ ಊರಾದ ವಂಟಮೂರಿಯಲ್ಲಿ ಅನೇಕ ಸುಧಾರಣೆಗಳನ್ನು ಕೈವೆಚ್ಚದಿಂದಲೇ ಮಾಡಿದ್ದಾರೆ.

ಇವರ ಔದಾರ್ಯದ ಪ್ರತ್ಯಕ್ಷಪರಿಚಯವು ಶ್ರೀರಾಮ ಸೇವಾಸಂಘಕ್ಕೂ ಈ ವಾರದಲ್ಲಿ ಉಂಟಾಯಿತು. ಸಂಘವು ಕೈಕೊಂಡಿರುವ ಶ್ರೀಹನುಮಾನ್ ಗರಡೀಮನೆಯ ಕಟ್ಟಡಕ್ಕಾಗಿ ಈ ದಾನವೀರರು ೫೦೦ ರೂಪಾಯಿಗಳನ್ನು ದಯಪಾಲಿಸಿ ಸಂಘವನ್ನು ಸದೈವ ಋಣಿಯಾಗಿ ಮಾಡಿರುವರು. ಈ ಸತ್ ಕಾರ್ಯಕ್ಕಾಗಿ ಬೆಳಗಾಂವಿಯ ತರುಣರೂ ಶ್ರೀಮಂತರಿಗೆ ಕೃತಜ್ಞರಾಗಿರುವರು. ತರುಣರ ಶರೀರ ಬಲಸಂವರ್ಧನಕಾರ್ಯಕ್ಕೆ ವರದ ಹಸ್ತದಿಂದ ಸಹಾಯ ಮಾಡಿದ ಧನವಂತರನ್ನು ನಮ್ಮ ತರುಣರು ಎಂದಿಗೂ ಮರೆಯಲಾರರೆಂಬದನ್ನು ಬೇರೆ ಹೇಳಬೇಕೆ?

ಶ್ರೀಮಂತರು ಸಂಘದ ಮೇಲಿಟ್ಟಿರುವ ವಿಶ್ವಾಸಕ್ಕೂ ಪ್ರೇಮಕ್ಕೂ ಪಾತ್ರವಾಗುವ ಪ್ರಯತ್ನವನ್ನು ಸಂಘವು ಹಗಲಿರುಳು ಮಾಡುವದು; ಮತ್ತು ಪರಮೇಶ್ವರನು ಶ್ರೀಮಂತರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಿ ಅವರಿಂದ ಇಂಥ ಔದಾರ್ಯವನ್ನು ಹೀಗೆಯೇ ಮೇಲಿಂದ ಮೇಲೆ ಹೊರಗೆಡವಲೆಂದು ಪ್ರಾರ್ಥಿಸುವದು.

Presidency Provident Central Insurance Co. Ld.

ಪ್ರೆಸಿಡೆನ್ಸಿ ಪ್ರಾವಿಡೆಂಟ್ ಜನರಲ್ ಇನ್‌ಶುರೆನ್ಸ ಕಂ. ಲಿಮಿಟೆಡ್

ಹೆಡ್ ಆಫೀಸ:—ಅಮೃತ ಬಿಲ್ಡಿಂಗ್, ಬ್ಯಾಲಾರ್ಡ್ ಎಸ್ಟೇಟ್, ಫೋರ್ಟ್, ಮುಂಬಯಿ.

ಇದು ಬಡಜನರಿಗೆ ವಿಮಾ ಇಳಿಸಲು ಬಹಳ ಸುರಕ್ಷಿತವಾದ ಕಂಪನಿಯು. ತಿಂಗಳಿಗೆ ೧ ರೂಪಾಯಿ ಅಥವಾ ೮ ಆಣೆ ಪ್ರಿಮಿಯ ತುಂಬಿದರೆ ಸಾಕು. ಉತ್ಸಾಹಿ ಮತ್ತು ವ್ಯಾಪಾರಿಕರಾದ ಏಜಂಟರು ಬೇಕು. ಜೆನ್ನಾಗಿ ಕೆಲಸ ಮಾಡುವವರಿಗೆ ಬರಪೂರ ಕಮಿಶನ್ ದೊರೆಯುವದು.

ಹೆಡ್ ಆಫೀಸಿಗೆ ಕೂಡಲೇ ಅರ್ಜಿ ಮಾಡಿರಿ.

ಜ್ಯೋತಿಷ್ಯ ಶಾಸ್ತ್ರದ ೩ ಕನ್ನಡ ಗ್ರಂಥಗಳು.

೧೯೩೮ ಮೇ ಕೊನೆಯ ವರೆಗೆ ಸವಲತ್ತು.

ಶಿಲ್ಪಶಾಸ್ತ್ರ.—ಮನೆಕಟ್ಟಿಸುವವರು, ಕೊಳ್ಳುವವರು, ಬಾವೀ ತೋಡಿಸುವವರು ಅವಶ್ಯ ಓದಬೇಕಾದ ಗ್ರಂಥ. ಶುಭಪ್ರದ ಸುಖ ಪ್ರದಮನೆ, ಸ್ಥಳ, ದಿಕ್ಕುಗಳ ವಿವೇಚನೆ, ಮುಹೂರ್ತ ವಿಚಾರ ಶಾಸ್ತ್ರಾಧಾರ ಸಹಿತವಾಗಿ ಬರೆಯಲ್ಪಟ್ಟಿದೆ. ಬಿ. ೦- ೬-೦.

ಒಳ್ಳೇದಿನ ಭಾಗ ೧-೪:—ಫಲಜ್ಯೋತಿಷ್ಯವನ್ನು ಹೊಸಬನಿಗೂ ತಿಳಿಯುವಂತೆ ಬರೆದ ಗ್ರಂಥಗಳು. ಸ. ಚಂದ್ರಿಕೆ ಆಗಷ್ಟ ೧೯೩೭ ಜಯಕರ್ನಾಟಕ ೧೧-೯-೩೭ ಕರ್ನಾಟಕ ಟಾಯಿಮ್ಸ ೯-೧೨-೩೭ ಈ ಸಂಚಿಕೆಗಳನ್ನು ನೋಡಿರಿ. ಬಿ. ಪ್ರತಿಯೊಂದು ಭಾಗಕ್ಕೆ ೧-೦-೦ ಎರಡೂ ಒಮ್ಮೆಲೆ ೧-೮-೦.

ಮೇಲ್ಕಾಣಿಸಿದ ಮೂರು ಪುಸ್ತಕಗಳು ಒಮ್ಮೇಲೆ ತಕ್ಕೊಂಡರೆ ೧-೧೨-೦ ದೊರೆಯುವವು ಅಂಚೇವೆಚ್ಚ ಬೇರೆ.

ಶಾಲಾಮಾಸ್ತರರಿಗೂ ಬುಕ್ ಸೇಲರರಿಗೂ ವಿಶೇಷ ಸವಲತ್ತು.

ಲಿಂಗೋ ಬಾಬಾಜಿ ಮನ್ನೋಳಿ ಹೆಸ್ಕೂಲ್ ಮಾಸ್ತರ ಹುಕ್ಕೇರಿ, ಜಿ. ಬೆಳಗಾಂವ.

ಶೆಟ್ಲ ಮಗ್ಗದ ಸಾಮಾನುಗಳು.

ನಮ್ಮ ಕಡೆಗೆ ಲಾಳಿಗಳೂ, ಗಣಿಗಳು, ತಂತೀ ಭೆಜಗಳು. ವಗೈರೆ ಮಾಲು ಉತ್ತಮ ಪೈಕಿ ಮಾರಾಟಕ್ಕೆ ದೊರೆಯುತ್ತವೆ. ತರಿಸಿ ಖಾತ್ರಿ ಮಾಡಿಕೊಳ್ಳಿರಿ, ವ್ಯಾಪಾರಸ್ಥರಿಗೆ ಯೋಗ್ಯ ಸವಲತ್ತು. ಎಲ್ಲಾ ಕಂಪನಿಗಳ ಮಾಲು ದೊರೆಯುತ್ತದೆ. ನಮೂನೆಗೆ ಒಂದು ಆಣೆ ತಿಕೀಟ ಕಳಿಸಬೇಕು.

ಚ. ಚ. ಅಬಕಾರ ಹೋಪ್ಸ್ ಬನಹಟ್ಟಿ.
ವ್ಹಾಯಾ, ಕುಡಚಿ.

ಬೆಳಗಾಂವಿಯೊಳಗೆ ದೇವೇಂದ್ರ ಫಡೆಪ್ಪಾ ಚೌಗುಲೆ ಇವರು ತಮ್ಮ ಶ್ರೀಮಹಾವೀರ ಮುದ್ರಣಾಲಯದಲ್ಲಿ ಮುದ್ರಿಸಿದರು. ಮತ್ತು ವ್ಹಿ. ಬಿ. ದೇಶಪಾಂಡೆ ಇವರು ಬೆಳಗಾವಿಯಲ್ಲಿರುವ ಮಾರುತಿಗಲ್ಲಿ ಮನೆ ನಂಬರ ೧೫೬೦ ರಲ್ಲಿ ಪ್ರಸಿದ್ಧಮಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ

ಸುದರ್ಶನ

ಉಡುಪಿಯಿಂದ ಪ್ರತಿ ಶನಿವಾರ ಹೊರಡುವ ವಾರಪತ್ರಿಕೆ.

ಸಂಪಾದಕ: ಬನ್ನಂಜೆ ರಾಮಾಚಾರ್ಯ.

Year 7 | SUDARSHANA Kannada Weekly Udipi ಶಾರೀಕ 14-9-57 1879ನೇ ಭಾದ್ರಪದ 23 | No. 5

SUDARSHANA

Kannada Weekly

Published every Saturday at UDIPI.

ADVERTISEMENT RATES

Contract Rates

Space to be used within 12 Months

1" to 150"	Per	Col.	Inch	Rs. 2-50
150" to 500"	,,	,,	,,	,, 2-00
Above 500"	,,	,,	,,	,, 1-50

Casual Advts.

Per col. inch ,, 3-00

ವಾರ್ಷಿಕ ಚಂದಾ: 4-00 (ಅಂ. ವೆ ಸೇರಿ) **ಬಿಡಿ ಪ್ರತಿ: 0-06**

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ದೀರ್ಘಾವಧಿ ವಿಧಾನ

ದಿನಕ್ಕೆ
4 ಆಣೆ
(25 ನ. ಪೈ)
7 ವರುಷಗಳಲ್ಲಿ
ರೂ. 700

★

ಪಿಗ್ಮಿ

- ಚಿಕ್ಕ ಗಾತ್ರದ ಆಫ್ರಿಕದ ಪಿಗ್ಮಿಯರೊಂದಾಗಿ ಬಹುದೊಡ್ಡ ಕಾಡಾನೆಯನ್ನು ಸಂಹರಿಸಬಲ್ಲರು.
- ದಿನಕ್ಕೆ 25 ನ ಪೈಸೇಗಳಂತಹ ಪುಡಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪಾರುಮಾಡಬಲ್ಲುದು.

★

ಸಿಂಡಿಕೇಟಿನ 96 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.

The Canara Industrial & Banking Syndicate Ltd. Udipi.

ಸಂಪಾದಕೀಯ

ದ. ಕ. ಜಿಲ್ಲೆಯ ಪ್ರಾಥಮಿಕ ಶಿಕ್ಷಕರ ಪ್ರಶ್ನೆ

ದಕ್ಷಿಣ ಕನ್ನಡ ಜಿಲ್ಲೆಯು ವಿದ್ಯಾಸಂಸ್ಥೆಗಳಿಂದ ಸಮೃದ್ಧವಾಗಿರುವುದಕ್ಕೆ ಇಲ್ಲಿ ಖಾಸಗೀ ಆಡಳಿತೆಯ ಸಂಸ್ಥೆಗಳು ಮುತುವರ್ಜಿವಹಿಸಿ ಮುಂದೆ ಬಂದುದೂ ಒಂದು ಮುಖ್ಯ ಕಾರಣವೆನ್ನಬೇಕು. ಐದನೆಯ ತರಗತಿಯ ಶಾಲೆಗಳಿಂದ ಮೊದಲ್ಗೊಂಡು ಮೆಡಿಕಲ್ ಕಾಲೇಜಿನ ವರೆಗಿನ ಸಂಸ್ಥೆಗಳನ್ನು ಕಟ್ಟಿ ದೇಶಕ್ಕೆಲ್ಲಾ ಮಾದರಿಯಾಗಿ ನಿಂತ ವಿದ್ಯಾ ಪ್ರಗತಿಯ ಜಿಲ್ಲೆ ದಕ್ಷಿಣ ಕನ್ನಡ. ಜಿಲ್ಲೆಯ ಸಾವಿರ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳಲ್ಲಿ ಮುಕ್ಕಾಲು ಪಾಲು ಖಾಸಗಿ ಸಂಸ್ಥೆಗಳೇ. ಕರ್ನಾಟಕ ರಾಜ್ಯದ ಬೇರಾವ ಪ್ರದೇಶದಲ್ಲಿಯೂ ಖಾಸಗಿ ಪ್ರಾಥಮಿಕ ಶಾಲೆಗಳು ಇಷ್ಟು ವಿಸ್ತೃತ ಸೇವೆ ಸಲಿಸುತ್ತಿರುವುದಿಲ್ಲ. ಆದುದರಿಂದಲೇ ರಾಜ್ಯದ ಪ್ರಾಥಮಿಕ ಶಿಕ್ಷಣದ ಸಮಸ್ಯೆಯನ್ನು ಪರ್ಯಾಲೋಚಿಸುವಾಗ ಈ ಜಿಲ್ಲೆಯ ಈ ವಿಶಿಷ್ಟ ಪರಿಸ್ಥಿತಿಯನ್ನು ಮುಖ್ಯವಾಗಿ ಗಮನಿಸಬೇಕು.

ಖಾಸಗಿ ಶಾಲೆಗಳಂತೆಯೇ ಸ್ಥಳೀಯ ಆಡಳಿತೆಯ ಸಂಸ್ಥೆಗಳೂ ಈ ಜಿಲ್ಲೆಯಲ್ಲಿ ಸಾಕಷ್ಟು ಪ್ರಾತ್ಯವಹಿಸಿಯೆನ್ನುವುದನ್ನೂ ಒಪ್ಪಬೇಕು. ನಮ್ಮ ಜಿಲ್ಲಾ ಬೋರ್ಡು ತನ್ನ ಆಯದ ಹೆಚ್ಚಿನ ಅಂಶವನ್ನು ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುತ್ತಿದೆ. ಕಳ್ಳಿ ಮೂಲೆಗಳಲ್ಲಿ ವಿದ್ಯಾ ಪ್ರಸಾರ ನಡೆಸಿದ ಕೀರ್ತಿ ದ. ಕ. ಜಿಲ್ಲಾ ಬೋರ್ಡಿಗೆ ಸಲ್ಲುತ್ತಿದೆ. ಹಾಗೆಯೇ ಪುತ್ತೂರಿನಲ್ಲಿ ಶ್ರೀ ಮೊಳಹಳ್ಳಿ ಶಿವರಾಯರು ಅನೇಕ ಪಂಚಾಯತ ಶಾಲೆಗಳನ್ನು ಸ್ಥಾಪಿಸಿದ್ದು ಇಂದು ಅವು ಪುತ್ತೂರಿನಲ್ಲಿ ಸಾಕಷ್ಟು ಸೇವೆಯನ್ನು ನೀಡುತ್ತಿವೆ. ಹೀಗೆ ಈ ಜಿಲ್ಲೆಯಲ್ಲಿ ಖಾಸಗಿ ಮತ್ತು ಸ್ಥಳೀಯ ಸಂಸ್ಥೆಗಳ ಸೇವಾಸಕ್ತಿಯ ಪಲಶ್ರುತಿಯಾಗಿ ಜಿಲ್ಲೆಯು ಪ್ರಾಥಮಿಕ ಶಿಕ್ಷಣದಲ್ಲಿ ಸಾಕಷ್ಟು ಪ್ರಗತಿಹೊಂದಿದೆ.

ಪ್ರಾಂತ್ಯ ಪುನಾರಚನೆಯಿಂದ ಉಗಮವಾದ ತೊಡಕುಗಳಲ್ಲಿ ಶಿಕ್ಷಣದ ಸಮೀಕರಣ ಸಮಸ್ಯೆಯೂ ಒಂದು. ವಿಶ್ವವಿದ್ಯಾನಿಲಯದ ಸೇರ್ಪಡೆಯಿಂದ ಪ್ರಾರಂಭಿಸಿ ಪ್ರಾ। ಶಿಕ್ಷಣದ ಪಾರಪಟ್ಟಿಯ ರಚನೆಯವರೆಗಿನ ವಿಚಾರಗಳನ್ನು ಪರ್ಯಾಲೋಚಿಸುವ ಘಟ್ಟಕ್ಕೆ ನಮ್ಮ ಸರಕಾರ ಬರಬೇಕಾಗಿದೆ. ಅಖಿಲ ಮೈಸೂರಿಗೆ ಆನ್ವಯವಾಗುವ ಏಕರೂಪದ ಕ್ರಮನಿಬಂಧನೆಗಳನ್ನೂ ಪಾರಪಟ್ಟಿಯನ್ನೂ ರಚಿಸಿ ವಿದ್ಯಾಭ್ಯಾಸದಲ್ಲಿ ಸಮಾನತೆಯನ್ನು ರೂಪಿಸುವ ಯೋಜನೆಯು ಸರಕಾರದ ಮುಂದೆ ಇರುವುದಾಗಿ ತಿಳಿದು ಬರುತ್ತದೆ. ಹಾಗೆಯೇ ಏಕರೂಪದ ಕ್ರಮನಿಬಂಧನೆಗಳ ಜೊತೆಗೆನೇ ಸಮಾನ ಯೋಗ್ಯತೆಯ ಶಿಕ್ಷಕರಿಗೆ, ಮೆನೇಜುಮೆಂಟುಗಳ ಬೇಧವನ್ನಣಿಸದೆ ಸಮಾನವೇತನವನ್ನೀವ ಸೂಚನೆಯೂ ತರ್ಕಬದ್ಧವಾದುದೇ. ಅಂತಹ ಆದರ್ಶವನ್ನು ಸರಕಾರ ತನ್ನ ಮುಂದಿಟ್ಟಿರುವುದೂ, ಅಂತಹ ಆಶೆಯನ್ನು ಶಿಕ್ಷಕರು ಕಟ್ಟಿಕೊಂಡುದೂ ಯೋಗ್ಯವೇ. ಮೊನ್ನೆ ಮೊನ್ನೆ ಮೈಸೂರು ಸರಕಾರ ಒಂದು ಪರಿಪತ್ರವನ್ನು ಹೊರಡಿಸಿ ಶಿಕ್ಷಕರ ಹೆಚ್ಚಿದ ಸಂಬಳದ ಆಶಾಕಿರಣವನ್ನು ಪಸರಿಸಿದ್ದರು.

ಬೆನ್ನಲ್ಲೆ ಈ ಜಿಲ್ಲಾ ಪ್ರವಾಸವನ್ನು ಕೈಗೊಂಡ ಮಾನ್ಯ ವಿದ್ಯಾಮಂತ್ರಿಗಳು ವಿದ್ಯಾಂಗದ ವರಿಷ್ಠ ಅಧಿಕಾರಿಗಳೂ ಈ ಏರಿದ ದರದ ಸಂಬಳ ಖಾಸಗಿ ಮತ್ತು ಸ್ಥಳೀಕ ಸಂಸ್ಥೆಗಳ ಶಿಕ್ಷಕರಿಗೆ ಆನ್ವಯವಾಗುವುದಿಲ್ಲವೆಂಬ ವಿಚಾರವನ್ನು ಉಡುಪಿಯಲ್ಲಿ ಹೊರಗೆಡಹಿದರೆಂಬ ಕಹಿಯಾದ ವಿಚಾರವೊಂದೂ ವರದಿಯಾಗಿದೆ! ಇದು ಜಿಲ್ಲೆಯ ಪ್ರಾಥಮಿಕ ಶಿಕ್ಷಣ ಪ್ರೇಮಿಗಳಲ್ಲಿ ಗಲಿಬಿಲಿಯನ್ನುಂಟುಮಾಡಿದೆ.

ಪ್ರಾ। ಶಿಕ್ಷಕರಿಗೆ ಸಿಗುವ ಸಂಬಳ ಬಹುಕಡಿಮೆಯೆಂದು ಎಲ್ಲರೂ ಒಪ್ಪುತ್ತಾರೆ. ಇಂದು ನಮ್ಮ ಖಾಸಗಿ ಶಾಲೆಗಳ ಶಿಕ್ಷಕರಿಗೆ ರೂ. 33ರಿಂದ 45ರವರೆಗೆ ಮಾಸಿಕವೇತನ ಸಿಗುತ್ತದೆ. ಇದು ಮರ್ಯಾದೆಯ ಗೃಹಸ್ಥ ಜೀವನದ ನಿರ್ವಹಣಕ್ಕೆ ಅನುವು ಮಾಡಿಕೊಡುವುದಿಲ್ಲ.

ಶಿಕ್ಷಣದ ಸುಧಾರಣೆ, ಮಟ್ಟದ ಪ್ರಗಯಾಗಬೇಕೆನ್ನುವಾಗ ಇದನ್ನೂ ನಾವು ಯೋಚಿಸಬೇಕಾಗುತ್ತಿದೆ. ಉರುವ ಹೊಟ್ಟೆ ಮರುಗುವ ಮನಸ್ಸಿನಿಂದ ಈ ಪ್ರಗತಿ, ಈ ಸುಧಾರಣೆ ಕನಸಿನ ಮಂಡಿಗೆಯೇ!

ಮೈಸೂರು ಸರಕಾರದ ಮುಂದೆ ಈ ಜಿಲ್ಲೆಯ ಈ ಸಮಸ್ಯೆಯನ್ನು ಮುಂದಿಡುವ ಜವಾಬ್ದಾರಿ ಯಾರದು? ಜಿಲ್ಲಾ ಬೋರ್ಡಿನಂತಹ ಸಂಸ್ಥೆಗಳೇ ಹೆಣಗಿ ಕೊರತೆಯಿಂದ ಒಂದೆರಡು ತಿಂಗಳುಗಳ ವರೆಗೆ ಸಂಬಳ ಸಲಿಸಲು ಅಶಕ್ತವಾದ ನಿದರ್ಶನ ನಮ್ಮ ಮುಂದಿದೆ. ಕೊನೆಗೆ ಶ್ರೀ ಟಿ. ಎ. ಪೈಗಳಂತವರು ಈ ಕುರಿತು ಕಾರ್ಯಾಚರಣೆ ಕೈಕೊಳ್ಳಬೇಕಾಯಿತು. ಸಂಬಳ ಪಾವತಿಯಾಗದೆ ಉಪವಾಸಪತಂತಿಯನ್ನು ಶಿಕ್ಷಕರು ಧರಾನಿಸುವಷ್ಟು ಸ್ಥಿತಿ ಭೀಕರವಾಗಿದ್ದರೂ ಯಾರೂ ವಿಚಾರಪರರಾಗಲಿಲ್ಲ. ಮುಂದೆ ಪ್ರಾ। ಶಿಕ್ಷಕರಲ್ಲಿ ಒಂದು ವರ್ಗದವರಿಗೆ ವೇತನದಲ್ಲಿ ಕಡಿಮೆಯೆಂದು ನಿರ್ಧಾರವಾದಾಗಲೂ ತಕ್ಕ ಕಾರ್ಯಕ್ರಮ ಕೈಗೊಳ್ಳುವ ಮುಕ್ಸದ್ದಿಗಳು ಕಾಣುತ್ತಿಲ್ಲ ವಿಷಯವನ್ನು ಸಕಾಲದಲ್ಲೇ ಎತ್ತಿಕೊಂಡು ಸರಕಾರದ ಮುಂದಿಡದಿದ್ದರೆ ಅಪಾಯವನ್ನು ಆಮಂತ್ರಿಸಿಕೊಂಡಂತೆಯೇ ಈ ಕೆಲಸವನ್ನು ಮಂತ್ರಿಮಂಡಲದ, ಸರಕಾರದ ಗಮನಕ್ಕೆ ತರುವ ಕರ್ತವ್ಯ ನಮ್ಮ ಶಾಸಕರದಲ್ಲವೆ? ಸಾವಿರಾರು ಶಿಕ್ಷಕರ ಒಂದು ಬೃಹತ್ ಸಮಸ್ಯೆಯನ್ನು ಗಮನಿಸದ ನಮ್ಮ ಜಿಲ್ಲೆಯ ಯಂ. ಎಲ್. ಎ.ಗಳ ಮಂದ

(6ನೇ ಪುಟಕ್ಕೆ)

(3ನೇ ಪುಟದಿಂದ)

ಈತನ ಈ ಪ್ರಶ್ನೆಯ ಅರ್ಥವೇನಿರಬಹುದು?

ವಾಸ್ಕೋ ಮತ್ತೆ ಕೆಲವು ಕ್ಷಣ ಮೌನವಾಗಿದ್ದ. ಅವನು ಏನನ್ನೂ ಆಡದಿದ್ದರೇನು? ಅವನ ಕಣ್ಣು ಮಾತ್ರ ಅವಳೊಡನೆ ಕದ್ದು ಮಾತನಾಡುತ್ತಿದೆ. ವಾಸ್ಕೋ ವಿನಂತೆ ನೀವೂ ಕುಡಿಮಿಸೆಯ ತರುಣರಾಗಿದ್ದರೆ ಬೆಡಗುಗಾರ್ತಿಯರನ್ನು ಕದ್ದು ನೋಡುವ ರುಚಿ ನಿಮಗೂ ತಿಳಿದಿರಬೇಕು ಆದರೆ ವಾಸ್ಕೋನ ಕಳ್ಳತನದ ಪತ್ತೆ ಹಚ್ಚಿರಬಹುದೆ ಈ ಹೆಣ್ಣು?

ಸೂರ್ಯಕಾಂತದಂತೆ ಆಶಕ್ತವಾದ ಅವಳ ಮುಖ ಬಿಸಿಲಿಗೆ ಬಸವಳಿದಿತ್ತು. ಆದರೂ ಅದರಲ್ಲಿ ಒಂದು ಅಪೂರ್ವವಾದ ಸೌಂದರ್ಯವಿದೆ. ತರುಣ ವಾಸ್ಕೊ ದಾರಿಯುದ್ದಕ್ಕೂ ಎಷ್ಟೋ ಹೆಣ್ಣುಗಳನ್ನು ನೋಡಿರಬಹುದು. ಅವರಲ್ಲಿ ಸುಂದರಿಯರನೇಕರು ಇದ್ದಿರಲೂ ಬಹುದು. ಆದರೆ ಈ ಕಣ್ಣಿನ ಮಾಟಗಾರಿಕೆ ಬೇರಾವ ಹೆಣ್ಣಿನಲ್ಲಿತ್ತು?

"ನೀನು ಬೊರಾವೋದಿಂದ ಒಂದ ದ್ದಾದರೆ ಮೇರಿಯಳ ಪರಿಚಯ ನಿನಗಿರಬೇಕೆಂದಾಯಿತು." ಕೊನೆಗೆ ಹೇಗೋ ಪ್ರಸ್ತಾವಿಸಿದ ವಾಸ್ಕೊ.

"ನಮ್ಮ ಹಳ್ಳಿಯಲ್ಲಿ ತುಂಬ ಮಂದಿ ಮೇರಿಯಂರಬಹುದು" ಹೆಣ್ಣು ಉತ್ತರಿಸಿತು "ನಾನು ಅವರನ್ನೆಲ್ಲ ಗುರುತಿಟ್ಟುಕೊಂಡಿಲ್ಲ."

"ಹಾಗಲ್ಲ...ಅವಳು ತಂಬಾಕು ಬೆಳಸುತ್ತಾಳೆ..."

"ನಾವೆಲ್ಲರೂ ತಂಬಾಕನ್ನು ಬೆಳಸುವವರೆ" ಅವನೆಡೆಗೆ ನೋಡದೆಯೇ ಆಕೆ ಉತ್ತರಿಸಿದಳು.

"ಆದರೆ ಮೇರಿಯ ಆವರಲ್ಲಿ ತುಂಬ ಪರಿಚಿತಳು ಅವಳಿಗೆ ಒಂದು ಮೆಡಲಿನ ಬಹುಮಾನವೂ ದೊರೆತಿತ್ತು"

ಬಾಗಿಲಿಗೆ ಆತು ಕುಳಿತಿದ್ದ ಹೆಣ್ಣು ಮೊದಲನೆಯ ಬಾರಿ ವಾಸ್ಕೋವನ್ನು ನೋಡುವ ದಯೆ ತೋರಿಸಿತು ಈ ದೀರ್ಘದೃಷ್ಟಿಯ ಮಾಟ ಎಂಥ ಸೂಗಸು! ಅವಳ ಕುಡಿನೋಟ ಹಾಯ್ದ ಕಡೆಯೆಲ್ಲ ನಿಮಿರೆದ್ದಿತ್ತು ಮುಂಗುರುಳು ಹಣೆಯಲ್ಲಿ ಲಲ್ಲೆಯಾಡುತ್ತಿತ್ತು. ಆದರೆ 'ರೇಸರಿ'ನ ಮುಖ ಕಾಣದೆ ಎರಡು ಮೂರು ದಿನಗಳಿಂದ ಪೈರಿನಂತೆ ಬೆಳೆದ ಧೂಳಿಡಿದ ಗಡ್ಡವನ್ನು ಕಂಡು ಏನೆಂದು ಕೊಂಡಳೊ! ಹರೆಯದ ಹೆಣ್ಣು ಮೊದಲ ಬಾರಿ ನೋಟ ಬೀರಿದಾಗ ವಾಸ್ಕೊನ ಮುಖದಲ್ಲಿ ಧನ್ಯತೆಯು ಕಿರುನಗೆಯೊಂದು ಮೂಡದಿರಲಲ್ಲ ಲಾರಿ ಗುಡ್ಡೆಯ ತುದಿಗ ತಲುಪಿತ್ತು. ವಾಸ್ಕೊ 'ಗಿಯರ್' ಬದಲಿಸುತ್ತಾ ಮಾತು ಮುಂದುವರಿಸಿದ—

"ನೀನೆಲ್ಲ ಸದ್ಯದಲ್ಲೆ ತಂಬಾಕು ಕೊಯ್ಯುವವರಿದ್ದೀರಿ, ಅಲ್ಲ ?"

"ತಂಬಾಕು ಬೆಳಸಿದ್ದರ ಮತ್ತೆ ನಾವು ಕೊಯ್ಯದೆ ಬಿಡುತ್ತೇವೆಯೆ?" ಹುಡುಗಿ ದುಡುಕಿನಿಂದಲೇ ಉತ್ತರಿಸಿದಳು "ಬೆಳೆಯನ್ನು ಗವ್ಯರ್ನ್ಮೆಂಟ್ಗೇ ಬಿಟ್ಟುಬಿಡುವ ಸಂಪ್ರದಾಯ ನನ್ನಲ್ಲಿಲ್ಲ!"

"ಸರಿ, ನೀನು ತಂಬಾಕನ್ನು ಕೊಯ್ದಿಡುತ್ತೀ. ನಾನು ಅದನ್ನು ಲಾರಿಯಲ್ಲಿ ಪೇಟೆಗೊಯ್ಯುತ್ತೇನೆ. ಹಾಗೆ ಮಾಡಿದರೆ ಸ್ವಾರಸ್ಯವಾಗಿರುತ್ತೆ ..ಅಲ್ಲ?"

"ಇರಬಹುದು" ಆಕೆ ಒಪ್ಪಿಕೊಂಡಳು, ಆದರೆ ಅಸ್ಪಷ್ಟ ದನಿಯಿಂದ.

"ಹಗಲು ನಿಮ್ಮಲ್ಲಿಂದ ತಂಬಾಕನ್ನು ಪೇಟೆಗೊಯ್ದು ಮತ್ತೆ ಸಂಜೆ ನಿಮ್ಮಲ್ಲಿಗೆ ತಿರುಗಾಟಕ್ಕೆ ಬರಬಹುದು...."

"ಬರಬಹುದು" ಹುಡುಗಿ ಮತ್ತೊಂದು 'ಬಹುದು' ಸೇರಿಸಿದಳಷ್ಟೆ!

"ಆಲ್ಲದೆ ನಾನು ಅಲ್ಲಿ ನಿಮ್ಮ ಮೇರಿಯಳನ್ನು ಕಾಣಬಹುದು...."

"ಧಾರಾಳವಾಗಿ" ಹುಡುಗಿಯ ನಗು ವಿನಲ್ಲಿ ಏನೋ ಅರ್ಥವಿದ್ದಂತೆ ಕಂಡಿತು ವಾಸ್ಕೋಗೆ. ಮತ್ತೆ ಕೆಲಹೊತ್ತು ಮೌನ. ಸಣ್ಣ ದನಿಯಲ್ಲಿ ಏನನ್ನೋ ಗೊಣಗುತ್ತಾ ವಾಸ್ಕೋ ನಿದಾನವಾಗಿ ಲಾರಿಯನ್ನು ನಡೆಸುತ್ತಿದ್ದ ಬೊರಾವೋ ರಮಣಿಯ ಕುಡಿಗಣ್ಣಿನ ನಸು ರೇಪೆಯೊಂದು ಕದ್ದು ವಾಸ್ಕೋನನ್ನು ಕಾಣುತ್ತಿತ್ತು. ಏನನ್ನೊ ನೆನಸಿಕೊಂಡವರಂತೆ ಬಸುಸುಯ್ದು ಆಕೆ ಒಮ್ಮೆಲೆ ತನ್ನ ನೋಟವನ್ನು ಬಿಸಿಲಿನಿಂದ ಉರಿಯುತ್ತಿರುವ ರಸ್ತೆಯೆಡೆಗೆ ತಿರುಗಿಸಿದಳು.

ಸ್ವಲ್ಪ ಹೊತ್ತು ತಡೆದು ವಾಸ್ಕೊ ಮಾತು ಮುಂದುವರಿಸಿದ—

"ಸಂಜೆಯ ಹೊತ್ತು ಮೇರಿಯ 'ವಾಕಿಂಗ್' ಹೊರಡುವ ಪದ್ಧತಿಯಿರಬಹುದಲ್ಲ?"

"ಹೊರಡುವುದುಂಟು' ಈಕೆಯ ಅರೆನುಡಿ ಸೊಗಸಾಗಿದ್ದರೂ ವಾಸ್ಕೋಗೆ ಅದೊಂದು ಸಮಸ್ಯೆಯೇ ಆಯಿತು. ಮಾತನ್ನು ಯಾವ ರೀತಿ ಬೆಳಸಬೇಕೆಂದು ತೋಚದೆ ಪೇಚಿಗೆ ಬಿದ್ದಂತಾದ. ಹಾಗಿದ್ದರೂ—ವಿಷಯ ತಿಳಿಯದೆ ವಿಧಿಯಿಲ್ಲ

'ಹಾಗಿದ್ದರೆ ಅವಳು ತಿರುಗಾಡುವುದುಂಟು. ಆದರೆ ಆಕೆ ಒಬ್ಬಂಟಿಗಳಾಗಿಯೇ ತಿರುಗುತ್ತಾಳೇನು?'' ಏನಾದರೂ ರಹಸ್ಯ ತಿಳಿವುದಾದರೆ ತಿಳಿಯಲಿ ಎಂದು ವಾಸ್ಕೋನ ಆಶೆ ಆದರೆ ಹುಡುಗಿ ಅವನಿಗಿಂತಲೂ ಜಾಣೆಯಾಗಿದ್ದಳು. ಅವಳ ಮಾತು ಪೂರ್ಣ ಒಗಟಿನಂತೆಯೇ ಇತ್ತು—

"ಒಬ್ಬಂಟಿಗಳಾಗಿ ತಿರುಗುವ ಅವಶ್ಯಕತೆಯಾದರೂ ಏನು? ನಮ್ಮಲ್ಲಿ ಹರೆಯದ ಹುಡುಗರಿಗೇನೂ ಕಮ್ಮಿಯಿಲ್ಲ!" ಹರೆಯಕ್ಕೊಪ್ಪುವ ಭಾಷೆ. ಈ ವಿಚಿತ್ರ ಉತ್ತರದಿಂದ ವಾಸ್ಕೊಗೆ ಏನು ತಿಳಿದೀತು? ಆದರೂ ವಿಷಯ ತಿಳಿದುಕೊಳ್ಳಬೇಕು ಎಂತಲೇ ಪಟ್ಟುಹಿಡಿದವನಂತೆ ಅದೇ ಮಾತನ್ನು ಮುಂದುವರಿಸಿದ.

"ಆದರೆ ಅವಳು ಆವರಿಲ್ಲರೊಡನೆ ಹೋಗುವಳೆ? ಯಾರಾದರೊಬ್ಬ ಯುವಕನೊಡನೆ..." ಈ ಪ್ರಶ್ನೆ ಕೇಳುವಾಗ ಆತ ತಡವರಿಸದಿರಲಿಲ್ಲ. ಅವನ ಪೇಚಾಟ ಅವನಿಗೇ ಗೊತ್ತು. ಈ ಮಾತಿಗೆ ಏನು ಉತ್ತರ ಬರಬಹುದು ಎಂದು ಸಾವರಿಸಿಕೊಂಡು ವಾಸ್ಕೋ ಅವಳೆಡೆಗೆ ತಿರುಗಿದ. ಓ! ಎಂಥ ಸೊಗಸು ಅವಳ ಕುಡಿನೋಟ! ಎಂಥ ಸೊಗಸು ಅವಳ ಮುಗುಳು ನಗು. ವಾಸ್ಕೋ ವಿಚಾರಪಗ್ನನಾದ ಈ ಹೆಣ್ಣು ನಗಲು ಕಾರಣವೇನು? ಈ ನಗುವಿನ ಅರ್ಥವೇನು? ತಾನು ಸಿಕ್ಕಿ ಬಿದ್ದಿರಲಿಕ್ಕಿಲ್ಲವಲ್ಲ!

ಮಲ್ ಬೆರಿ ಮರಗಳಾಚೆ ದೂರದಲ್ಲಿ ಹೊಲ ಮನೆ ಕಟ್ಟಡಗಳು ಕಾಣತೊಡಗಿದವು ಇಲ್ಲಿ ಲಾರಿಯನ್ನು ನಿಲ್ಲಿಸುನಂತೆ ಹುಡುಗಿ ವಾಸ್ಕೊವನ್ನು ಕೇಳಿಕೊಂಡಳು ಇಲ್ಲಿವರೆಗೆ ತನ್ನನ್ನು ಲಾರಿಯಲ್ಲಿ ಕುಳ್ಳಿರಿಸಿಕೊಂಡು ಬಂದುದಕ್ಕಾಗಿ 'ಥ್ಯಾಂಕ್ಸ್' ಗಳನ್ನಿತ್ತು ಆಕೆ ಕೆಳಗಿಳಿದು ಹೊರಟಾಗ ವಾಸ್ಕೊ ಅವಳತ್ತ ಮುಖ ತಿರುಗಿಸಿ ನುಡಿದ.

"ನನ್ನ ಪ್ರೀತಿಯ ನೆನಕೆಗಳನ್ನು ನನ್ನ ಮೇರಿಯಳಿಗೆ ದಯವಿಟ್ಟು ತಿಳಿಸುವೆಯಾ? ಡ್ರೈವರ್ ವಾಸ್ಕೋ ಎಂದರೆ ಆಕೆಗೆ ಅರಿವಾಗುವುದು"

ಲಾರಿ ಮುಂದುವರಿಯುತ್ತಿದ್ದಂತೆ ವಾಸ್ಕೊ ಮತ್ತೊಮ್ಮೆ ಮುಖತಿರುವಿ 'ಗುಡ್ ಬ್ಯಾ' ಮಾಡಲು ಮರೆಯಲಿಲ್ಲ. ಬಿಸಿಲಿಗೆ ಬಳಲಿದ ಹೆಣ್ಣಿನ ಕೃಶವಾದ ಕೈ ಪ್ರತಿಯಾಗಿ 'ಗುಡ್ ಬ್ಯಾ' ಮಾಡಿತು ಕೊನೆಗೆ ಅವಳಾಡಿದ ಮಾತುಗಳು—ಲಾರಿಯ ಕರ್ಕಶ ಧ್ವನಿಯ ಮಧ್ಯದಲ್ಲೂ ಅವನಿಗೆ ಸ್ಪಷ್ಟವಾಗಿಯೇ ಕೇಳಿಸಿತು.

"ನನ್ನ ತಾತ ಇಗ್ನಟ್ಗೆ ನನ್ನ ಪ್ರೀತಿಯ ವಂದನೆಗಳನ್ನು ತಿಳಿಸು. ಭಾನುವಾರದಂದು. ನಾನು ಅವನನ್ನು ಕಾಣಬರುವೆನು ಭಾನುವಾರದಂದು....."

ಈಗ ವಾಸ್ಕೋ ಪೂರ್ಣ ಸುಸ್ತಾಗಿದ್ದ. ಆತ ಲಾರಿಯನ್ನು ಮುಂದುವರಿಸಬಾದ. 'ಸ್ಟಿಯರಿಂಗ್' ಆತನ ಹಿಡಿತದಲ್ಲಿದ್ದಂತಿಲ್ಲ. ಮನಸ್ಸು ಏಕೋ ತಳಮಳಗೊಂಡಿದೆ. 'ಛಿ' ಎಂಥ ಹೆಣ್ಣು. ನನ್ನನ್ನು ಇಲ್ಲಿಯವರೆಗೂ ಬೆಪ್ಪಾಗಿಸುವುದೆ?

ಅಂದಿನಿಂದ ಬೊರಾವೋದ ಹಳ್ಳಿಯಲ್ಲಿ ಮಾತ್ರ ಅವರ ವಿಷಯದಲ್ಲಿ ದೊಡ್ಡದೊಂದು ಇತಿಹಾಸವೇ ನಿರ್ಮಾಣವಾಯಿತು. ಗಳಸುವ ಬಾಯಿಗೆ ತೆರವಿಲ್ಲದಾಯಿತು. ಅವರಿಗೆ ಹೇಗಾದರೂ ತಿಳಿಯಿತು ಈ ಏಕಾಂತ? ಗಳಹುವ ಜನಕ್ಕೆ ತಿಳಿವುದಕ್ಕೇನಡ್ಡಿ? ಗಾರ್ಡನಿನ ಪ್ರತಿಯೊಂದು ಸೂರ್ಯಕಾಂತ ಹೂವೂ ಅವರಿಗೆ ಸಾಕ್ಷಿ ಹೇಳಬಲ್ಲುದು. ಅಲ್ಲಿ ಬೀಸಿದ ತಂಗಾಳಿ. ಅಲ್ಲಿ ಓಡಾಡಿದ ಪಕ್ಷಿಗಳು, ಅಲ್ಲಿ ಮೇಯುತ್ತಿದ್ದ ದನಗಳು ಇವೆಲ್ಲ ಅವರಿಗೆ ಮೂಕ ವಾರ್ತೆಯನ್ನ ರುಹಬಲ್ಲುವು.

ನಿಜ ಏನಿರಬಹುದೋ ಯಾರಿಗೆ ಗೊತ್ತು. ಹೆಚ್ಚಿನ ಮಟ್ಟಿಗೆ ಅವರ ಮೇಲಿನ ಕತೆಗಳೆಲ್ಲ ಕೇವಲ 'ರೂಮರ್' ಆಗಿರಬಹುದು ಹಳ್ಳಿಯ ಜನ 'ರೂಮರ್' ಹುಟ್ಟುಸುವುದರಲ್ಲೇನು ಕಡಿಮೆಯೆ? ಏನೇ ಇರಲಿ, ನನ್ಮೂರಿನ 'ಚ್ಯಾನೆಲ್ಲಿ'ನ ಬಳಿ ದಿನವೂ ಒಂದು ಲಾರಿ ಬಂದು ನಿಲ್ಲುವುದು ನಿಜ. ಒಬ್ಬ ಗುಂಗುರು ತಲೆಯ ಸುಂದರ ತರುಣ ದಿನವೂ ತನ್ನ ಲಾರಿಯ ರೇಡಿಯೇಟರಿಗೆ ಅಲ್ಲಿ ನೀರು ತುಂಬುತ್ತಿರುವುದೂ ನಿಜ ಬೊರಾವೋದ ಜನ ಹೇಳುವುದುಂಟು. ಆತನ ಲಾರಿಯ ರೇಡಿಯೇಟರಿಗೆ ಆತ ತುಂಬುತ್ತಿದ್ದಷ್ಟು ನೀರನ್ನು ಆ ಹಳ್ಳಿಯ ದನಗಳೆಲ್ಲ ಕೂಡಿಯೂ ಕುಡಿಯಲಾರವು! ಎಲ್ಲಿ ಸುರಿಯುತ್ತಿದ್ದನೋ ಆಷ್ಟು ನೀರನ್ನು ಎಂದು ಹರಟೆಯ ಹೆಂಗಸರಂತೂ—ಮೇರಿಯು ಪ್ರತಿ ಭಾನುವಾರ ತನ್ನ ಅಜ್ಜನನ್ನು ಕಾಣಲೆಂದು ಪೇಟೆಗೆ ಹೋಗುತ್ತಿದ್ದರೂ ಮುದಿ ಇಗ್ನಟ್ ಮಾತ್ರ ಪಾಪ, ಒಮ್ಮೆಯೂ ಅವಳನ್ನು ಕಂಡಿಲ್ಲವಂತೆ—ಎಂದು ಪುರಾವೆಕೊಟ್ಟು ಸಮರ್ಥಿಸುತ್ತಿದ್ದರು. ಹೇಳುವ ಜನ ಹೇಳುತ್ತಿರಲಿ ಹರಟುವ ಜನರ ಎಲುವಿಲ್ಲದ ನಾಲಿಗೆಯನ್ನು ನಿಯಂತ್ರಿಸುವುದು ಯಾರಿಗೆ ಸಾಧ್ಯ? ಅದೂ ಆಲ್ಲದೆ ಇವರ ಮಕ್ಕಳಾಟವನ್ನು ಕಣ್ಣಾರೆ ಕಂಡ ಹೂದೋಟದ ಸಾಕ್ಷಿ ಸುಳ್ಳೆನ್ನುವುದಕ್ಕೆ ಏನು ಪುರಾವೆಯಿದೆ?

ಪುತ್ತಿಗೆ ಶ್ರೀಗಳವರ ಶತಾಬ್ದೋತ್ಸವದ ಸ್ಮಾರಕವಾಗಿ
ಉಡುಪಿಯ ಶ್ರೀ ಕೃಷ್ಣ ದೇವರಿಗೆ ಭಕ್ತರ ನೆರವಿನಿಂದ
ಬೆಳ್ಳಿಯ ರಥವನ್ನು
ನಿರ್ಮಿಸಿ ಸಮರ್ಪಿಸಲಾಗುವುದು
ಶ್ರೀ ಕೃಷ್ಣನ ಈ ರಥಕ್ಕೆ ಕಾಣಿಕೆಯನ್ನು ಅರ್ಪಿಸಿ ಶ್ರೇಯೋಭಾಗಿಗಳಾಗಲು ಅಪೇಕ್ಷಿಸುವವರು ತಮ್ಮ ಸಹಾಯ ದ್ರವ್ಯವನ್ನು
ಈ ವಿಳಾಸಕ್ಕೆ ಕಳಿಸಿಕೊಡಬಹುದು
ಪರ್ಯಾಯ ಶ್ರೀ ಅದಮಾರು ಮಠ, ಉಡುಪಿ.

ಗೃಹಕೃತ್ಯಕ್ಕೆ ಬೇಕಾಗುವ ಹಿತ್ತಾಳೆ, ತಾಮ್ರ,
ಕಂಚು, ಸ್ಟೈನ್‌ಲೆಸ್ ಸ್ಟೀಲ್
ಮುಂತಾದುವುಗಳ ಮನಸೆಳೆಯುವ ತರಹೆವಾರು ಪಾತ್ರೆಗಳು
ಅಪೂರ್ವ ಭಂಡಾರ
KALMANJE'S METALWARE
Car street, MANGALORE
Founder. L N Kalmanje.

(3ನೇ ಪುಟದಿಂದ)

ಮುಕವನ್ನು ಅಂದು ೨೫ ಲಕ್ಷಕ್ಕಿಂತಲೂ ಹೆಚ್ಚಿನ ಹೂವುಗಳಿಂದ ಸಿಂಗರಿಸಲಾಗಿತ್ತು.

ಜಿಲ್ಲೆಯ ಬ್ಯಾಂಕುಗಳಿಗೆ ನೀಡಿಕೆ

ಮೈಸೂರು ರಾಜ್ಯ ಸರಕಾರದವರು ಇದೇ ತಾ. ೧೬ರಂದು ಎತ್ತಲಿರುವ ಮೂರು ಕೋಟಿ ರೂಪಾಯಿಗಳ ಅಭಿವೃದ್ಧಿ ಸಾಲಕ್ಕೆ ನಮ್ಮ ಜಿಲ್ಲೆಯ ಮೂರು ಪ್ರಧಾನ ಬ್ಯಾಂಕುಗಳು ಒಂದುಕೋಟಿ ಮೂವತ್ತು ಲಕ್ಷ ರೂಪ್ಯಾಗಳನ್ನು ನೀಡುವುದಾಗಿ ತಿಳಿಸಿವೆ. ಕೆನರಾ ಬ್ಯಾಂಕು ೫೦ ಲಕ್ಷ ರೂಪ್ಯಾಗಳನ್ನು ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ೫೦ ಲಕ್ಷ ರೂಪ್ಯಾಗಳನ್ನು ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ೩೦ಲಕ್ಷ ರೂಪ್ಯಾಗಳನ್ನು ನೀಡಲಿವೆ.

ಮೈಸೂರ್ ಬ್ಯಾಂಕು ಕೂಡಾ ಈ ಸಾಲಕ್ಕೆ ೭೦ ಲಕ್ಷ ರೂಪ್ಯಾಗಳನ್ನು ನೀಡುವುದಾಗಿ ತಿಳಿಸಿದೆ

ಶ್ರೀ ವ್ಯಾಸರಾಯ ಬಲ್ಲಾಳರ ಕೃತಿಗೆ ಪ್ರಥಮ ಬಹುಮಾನ

ಮುಂಬೈ ಸರಕಾರದವರು ಪ್ರಾಂತ ಪುನಾರಚನೆಯ ಪೂರ್ವದಲ್ಲಿ ಕ್ರಮದಂತೆ ಮುಂಬೈ ಕರ್ನಾಟಕದ ಉತ್ತಮ ಸಾಹಿತ್ಯ ಕೃತಿಗಳಿಗೆ ಬಹುಮಾನ ನೀಡಲು ನಿರ್ಧರಿಸಿದ್ದು ಪ್ರಾಂತ ಪುನಾರಚನೆಯಾಗುವಾಗ ಆ ಕಾಗದ ಪತ್ರಗಳೆಲ್ಲ ಮೈಸೂರಿಗೆ ಬಂದಿದ್ದುವು. ಆ ನಿರ್ಧಾರವನ್ನು ಮೈಸೂರು ಸರಕಾರದವರು ಈಗ ಪ್ರಕಟ ಪಡಿಸಿರುತ್ತಾರೆ. ಕತೆ, ಕಾದಂಬರಿ ಮುಂತಾದ ಅನೇಕ ಸಾಹಿತ್ಯ ಪ್ರಕಾರಗಳಿಗೂ ಬಹುಮಾನ ಸಿಕ್ಕಿದ್ದು ಕಾದಂಬರಿ ವಿಭಾಗದಲ್ಲಿ ಶ್ರೀ ಬಸವರಾಜ ಕಟ್ಟೀಮನಿಯವರ 'ಮಣ್ಣು ಮತ್ತು ಹೆಣ್ಣಿ' ಎಂಬ ಕಾದಂಬರಿಯೂ ಉಡುಪಿಯ ಶ್ರೀ ನಿ. ವ್ಯಾಸರಾಯ ಬಲ್ಲಾಳರ 'ಅನುರಕ್ತೆ' ಎಂಬ ಕಾದಂಬರಿಯೂ ೨೦೦೦ ರೂ. ಗಳ ಪ್ರಥಮ ಬಹುಮಾನವನ್ನು ಪಡೆದಿವೆ. ಬಹುಮಾನಿತರಿಗೆಲ್ಲ "ಸುದರ್ಶನ"ದ ಅಭಿವಂದನೆಗಳು.

ಗುರುನಾರಾಯಣ ಸ್ವಾಮಿಜಿಯವರ ಜನ್ಮದಿನಾಚರಣೆ

ಶ್ರೀ ಬ್ರಹ್ಮಬೈದರ್ಕಳ ಧೂಮಾವತೀ ಯಕ್ಷಗಾನ ಸಂಘದ ಆಶ್ರಯದಲ್ಲಿ ತಾ. ೮ರಂದು ಶ್ರೀ ನಾರಾಯಣಗುರು ಸ್ವಾಮಿಜೀಯವರ ಜನ್ಮದಿನಾಚರಣೆಯಾಚರಿಸಲ್ಪಟ್ಟಿತು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಅಧ್ಯಕ್ಷರಾಗಿದ್ದರು. ಕೊನೆಯಲ್ಲಿ ಶ್ರೀಕೃಷ್ಣ ಸಂಧಾನವೆಂಬ ಯಕ್ಷಗಾನ ಕಾಲಕ್ಷೇಪವಿತ್ತು. ಪ್ರಾರಂಭದಲ್ಲಿ ಗುರುಪೂಜೆ ನಡೆಯಿಸಲಾಯಿತು.

ಎಂ. ಜಿ. ಎಂ. ಕಾಲೇಜಿನಲ್ಲಿ ಮತ್ಸ್ಯೋದ್ಯಮದ ವಿಶೇಷ ಶಿಕ್ಷಣ?

ವಿದೇಶ ಸಂಚಾರಕ್ಕಾಗಿ ತೆರಳಲಿದ್ದ ಶ್ರೀ ಟಿ. ಎ ಪೈಗಳವರನ್ನು ಮುಂಬಯಿ ಕರ್ನಾಟಕ ಸಂಘವು ವಿದಾಯ ಸತ್ಕಾರ ಏರ್ಪಡಿಸಿತ್ತು. ಈ ಸಮಾರಂಭದಲ್ಲಿ ಮಾತನಾಡುತ್ತಾ ಶ್ರೀ ಟಿ. ಎ. ಪೈಗಳವರು ಭಾರತದಲ್ಲಿಯೆ ಮೊತ್ತಮೊದಲನೆಯದಾಗಿ ಉಡುಪಿಯ ಎಂ ಜಿ ಎಂ. ಕಾಲೇಜಿನಲ್ಲಿ ಮತ್ಸ್ಯೋದ್ಯಮದ ಕುರಿತು ತರಗತಿಗಳನ್ನೇರ್ಪಡಿಸುವ ಯೋಚನೆಯಿದೆಯೆಂದೂ ಈ ವಿಭಾಗದ ಸ್ಥಾಪನೆಯ ಸಾಧ್ಯತೆ ಮತ್ತು ವಿಧಾನಗಳ ಕುರಿತು ನಾರ್ವೆಯಲ್ಲಿ ವಿಜ್ಞಾನಿಗಳಿಂದ ತಜ್ಞರೊಡನೆ ವಿಚಾರ ವಿನಿಮಯ ನಡೆಸಲಿರುವೆನೆಂದೂ ತಿಳಿಸಿದರು.

ಚೆಂದ್ರಾನಾ ಬ್ರದರ್ಸ್‌ರವರ ಶ್ಲಾಘ್ಯಯೋಜನೆ!

ಸೊಗಸಿನ ಪೋಷಾಕಿನ ಸುಂದರ ಶಿಶು.

ಮಂಗಳೂರಿನ ಚಂದ್ರಾನಾ ಬ್ರದರ್ಸ್‌ರವರು ಸೊಗಸಿನ ಪೋಷಾಕಿನ ಸುಂದರ ಮಕ್ಕಳ ಸ್ಪರ್ಧೆಯೊಂದನ್ನೇರ್ಪಡಿಸಿ ಇದೇ ತಾ 8ರಂದು ಗೆದ್ದ ಮಕ್ಕಳಿಗೆ ಸುಯೋಗ್ಯ ಬಹುಮಾನಗಳನ್ನು ಹಂಚಿದರು. ಡಾ। ಟಿ. ಮಾಧವ ಪೈಗಳವರು ಈ ಸಮಾರಂಭದ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು. ಕುಮಾರಿ ನಳಿನಿರಾಯರು ಪ್ರಾರ್ಥನಾಗೀತವನ್ನು ಹಾಡಿದ ಕರುವಾಳ ಶ್ರೀ ದೇವಿದಾಸ ಗಿರಿಧರ ಲಾಲರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ಸ್ಪರ್ಧೆಯನ್ನೇರ್ಪಡಿಸಿದವರನ್ನು ಶ್ಲಾಘಿಸಿ ನಾಳೆಯ ನಾಗರಿಕರಾದ ಮಕ್ಕಳ ಬೆಳವಣಿಗೆಯ ಕಡೆಗೆ ಸೂಕ್ತ ಲಕ್ಷ್ಯವನ್ನು ಪೂರಯಿಸುವುದರ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸ್ಪರ್ಧೆಯಲ್ಲಿ ಗೆದ್ದ ಆರು ಮಕ್ಕಳಿಗೆ ಬಹುಮಾನಗಳನ್ನು ಹಂಚಿದರು. ಶ್ರೀ ದೇವಿದಾಸ ಗಿರಿಧರಲಾಲರು ಸ್ಪರ್ಧೆಯಲ್ಲಿ ಗೆದ್ದವರಿಗಷ್ಟೇ ಅಲ್ಲದೆ ಭಾಗವಹಿಸಿದ ಎಲ್ಲ ಮಕ್ಕಳಿಗೂ ಬಹುಮಾನವಿಯ್ಯುವುದಾಗಿ ಸಾರಿದರು. ಶ್ರೀ ಸುರೇಂದ್ರ ಚಂದ್ರಾನಾರವರು ಧನ್ಯವಾದಾರ್ಪಣೆ ಮಾಡಿದರು.

ಮೈಸೂರ ವಾಣಿ

ಮೈಸೂರು ಸರಕಾರದವರು ಸದ್ಯವೆ ಸರಕಾರದ ಚಟುವಟಿಕೆಗಳನ್ನು ಜನತೆಗೆ ತಿಳಿಸುವುದಕ್ಕಾಗಿ "ಮೈಸೂರು ವಾಣಿ" ಎಂಬ ಪಾಕ್ಷಿಕ ಪತ್ರಿಕೆಯನ್ನು ಹೊರಡಿಸಲಿರುವುದಾಗಿ ತಿಳಿದು ಬರುತ್ತದೆ. ಪತ್ರಿಕೆಯಲ್ಲಿ ಇತರ ಉಪಯುಕ್ತ ವಿಷಯಗಳೂ ಪ್ರಕಟವಾಗುತ್ತವೆ.

ಜತ್ತಿ ಸಮಿತಿಯ ವರದಿ

ಮೈಸೂರು ರಾಜ್ಯದಲ್ಲಿ ಯುಕ್ತವಾದ ಭೂಶಾಸನವೊಂದನ್ನು ರಚಿಸಲು ಸೂಕ್ತವಾದ ನಿರ್ದೇಶನ ಮಾಡುವಂತೆ ಒಂದು ವರದಿಯೊಪ್ಪಿಸಲು ನಿಯುಕ್ತವಾದ ಜತ್ತಿ ಸಮಿತಿಯು ತಾವು ಕರ್ನಾಟಕದಾದ್ಯಂತ ಸಂಚರಿಸಿ ಸಂಗ್ರಹಿಸಿದ ಮಾಹಿತಿಗಳ ಆಧಾರದಿಂದ ಒಂದುವರದಿಯನ್ನು ಸಿದ್ಧಪಡಿಸಿ ಸರಕಾರಕ್ಕೆ ಒಪ್ಪಿಸಿದೆ.

ವಿದ್ಯಾ ಮಂತ್ರಿಗಳ ಮೆಚ್ಚುಗೆ

(ತಾ. 1 ರಂದು ಉಡುಪಿ ಸಂಸ್ಕೃತ ಮಹಾಪಾಠಶಾಲೆಯನ್ನು ಸಂದರ್ಶಿಸಿದ ಮೈಸೂರಿನ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀ ವಿ ವೆಂಕಟಪ್ಪನವರು ಸಂದರ್ಶಕರ ಪುಸ್ತಕದಲ್ಲಿ ಈ ಕೆಳಗಿನಂತೆ ಮೆಚ್ಚುಗೆಯ ಮಾತುಗಳನ್ನು ಬರೆದಿರುತ್ತಾರೆ.)

ಉಡುಪಿ ನುಹಾ ಕ್ಷೇತ್ರದ ಅಷ್ಟಮಠಗಳ ಸ್ವಾಮಿಗಳ ಉದಾರ ಸಹಾಯದಿಂದ ಸ್ಥಾಪಿಸಲ್ಪಟ್ಟು ನಡೆಯಿಸಿಕೊಂಡು ಬರುವ ಸಂಸ್ಕೃತ ಮಹಾ ಪಾಠಶಾಲೆಗೆ ಭೇಟಿಕೊಟ್ಟು ಅದರ ಆಡಳಿತ ಮತ್ತು ಕಾರ್ಯ ಚಟುವಟಿಕೆಗಳನ್ನು ತಿಳಿದುಕೊಂಡಿದ್ದು ನನಗೆ ಅತ್ಯಂತ ಸಂತೋಷವನ್ನುಂಟು ಮಾಡಿತು. ಸಂಸ್ಕೃತ ಭಾಷೆಯ ಅಭಿವೃದ್ಧಿಗು ತಳಹದಿಯ ಮೇಲೆ ನನ್ನು ಹಿಂದೂ ಧರ್ಮದ ಕೀರ್ತಿ ಪತಾಕೆಯು ನಿಲ್ಲಬೇಕು ಎಂದು ನಾನು ತಿಳಿದುಕೊಂಡಿದ್ದೇನೆ. ಸಂಸ್ಕೃತ ಮಹಾ ಪಂಡಿತರಾದ ಶ್ರೀ ಬಾಬೂರಾಜೇಂದ್ರ

(6ನೇ ಪುಟಕ್ಕೆ)

ಹಿತಕರ ವಾತಾವರಣದಲ್ಲಿ
ನಗರದ ಕೇಂದ್ರ ಭಾಗದಲ್ಲಿರುವ
ಶುಚಿ ರುಚಿಗಳಿಗೆ ಹೆಸರಾಗಿರುವ
ರೋಯಲ್ ಮಹಲ್
ಉಡುಪಿಯ ಉತ್ತಮ
ಶ್ರೇಣಿಯ ಭೋಜನ ಮತ್ತು
ವಸತಿ ಗೃಹ.
ಮಾಲಕ:
ಕೆ. ವೆಂಕಟರಮಣ ಭಟ್ಟ

ಶುಚಿ– ರುಚಿಯಾದ
ಕಾಫಿ ತಿಂಡಿಗಳಿಗೆ
ಒಳ್ಳೆಯ
ಊಟ ಉಪಹಾರಗಳಿಗೆ
ಉತ್ತಮ ವಸತಿ ಸೌಕರ್ಯಕ್ಕೆ
★
ಸುಖ ನಿವಾಸ
ಕೋರ್ಟ್ ರೋಡು, ಉಡುಪಿ.

ಬಟ್ಟೆಗಳ ಸ್ವಚ್ಛತೆಗೆ ಮತ್ತು ಬಾಳಿಕೆಗೆ
ಶೋಭಾ ಬಾರ್ ಸೋಪು
★
ಅತ್ಯುತ್ತಮ ಪಾನೀಯ
ಕೇಲಗೂರು ಚಾ
ಜೈ ಭಾರತ ಮಿಲ್ಸ್ ಪ್ರೈವೇಟ್ ಲಿಮಿಟೆಡ್,
ಉಡುಪಿ.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ, (ದ. ಭಾರತ.)
ದಿ. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಲಿ.,
ನಿಮ್ಮ ಹಾಗೂ ನಮ್ಮ ನೆಚ್ಚಿನ ರಾಷ್ಟ್ರದ ಭಾವೀ ಕಲ್ಯಾಣಕ್ಕಾಗಿ, ಇಂದೇ ಒಂದು ಸಣ್ಣ ಉಳಿತಾಯದ ಖಾತೆಯನ್ನು ಬ್ಯಾಂಕಿನಲ್ಲಿ ತೆರೆದು, ಅದನ್ನು ಕ್ರಮಗತವಾಗಿ ವೃದ್ಧಿಗೊಳಿಸಿರಿ. ನಮ್ಮ ಬ್ಯಾಂಕು ಅಂಥ ಸಣ್ಣ ಉಳಿತಾಯ ಖಾತೆಗಳಿಗೆ ಸಾ. ಸೇ. ಪಿಗ್ಮಿ ಯಂತೆ ಬಡ್ಡಿ ತೆರುವುದು
ಒಟ್ಟು ಚಲಾವಣೆ ಬಂಡವಾಳ 7,00,00,000 ರೂಪಾಯಿಗಳಿಗೂ ಮಿರಿದೆ.
The Canara Banking Corporation Ltd.,

Phone 65
ಹೊಸ ಮಾದರಿಯ ಶ್ರೇಷ್ಠ ತರಗತಿಯ
ಉಷಾ ಹೊಲಿಗೆಯ ಯಂತ್ರ
ಸಾವಿರಾರು ಹೊಲಿಗೆಯವರು ಕೊಂಡುಕೊಂಡು
ತೃಪ್ತಿಹೊಂದಿರುವರು.
ಏಜಂಟರು:—
ಮೆ। ಇಂಡಿಯನ್ ಒಟೋಮೋಬ್ಯಾಲ್,
ಬಸ್ ಸ್ಟೇಂಡಿನ ಬಳಿ, ಉಡುಪಿ, ದ. ಕ.

ಆರೋಗ್ಯ ರಕ್ಷಣೆ

ನೇರಾಗಿ ಕುಳಿತೇಳುವ'ದನ್ನು ಕಲಿಯಿರಿ

ಅನುವಾದಕ:- ಶ್ರೀ ಬಳ್ಳೂರು ಸುಬ್ರಾಯ ಅಡಿಗ.

ಮನುಷ್ಯನು ತನ್ನ ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳಬೇಕು. ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳದೆ ಬದುಕಿರುವುದರಿಂದ ಲಾಭವಿಲ್ಲ. ಆರೋಗ್ಯವನ್ನು ಸರಿಯಾಗಿಟ್ಟುಕೊಳ್ಳಲು ದೈನಂದಿನದ ಎಷ್ಟೋ ಕಾರ್ಯಕಲಾಪಗಳ ಕಡೆ ವಿಶೇಷ ಲಕ್ಷ್ಯವಹಿಸಬೇಕಾಗುತ್ತದೆ. ಆಹಾರಸುಧಾರಣೆ, ಸೂರ್ಯ ಸ್ನಾನ, ಸ್ವಚ್ಛ ಜಲಸ್ನಾನ, ವ್ಯಾಯಾಮ, ಶುದ್ಧ ವಾಯು ಸೇವನೆ ಮೊದಲಾದವು ಅತ್ಯಾವಶ್ಯಕವಾಗಿವೆ. ಇಷ್ಟೇ ಅಲ್ಲ ಇನ್ನೊಂದು ಸಾಧಾರಣ ವಿಷಯದತ್ತ ಮನುಷ್ಯರು ಲಕ್ಷ್ಯವಹಿಸುವುದೇ ಇಲ್ಲ. ದಿನಾಲು ನೇರಾಗಿ ಕುತುಕೊಳ್ಳುವುದೂ, ನಿಂತುಕೊಳ್ಳುವುದೂ ಅಗತ್ಯ ಒಳ್ಳೇ ಆರೋಗ್ಯವನ್ನು ಪಡೆದುಕೊಳ್ಳಲು ಇದು ಅತ್ಯವಶ್ಯಕವೆನಿಸಿದೆ. ಈ ಆವಶ್ಯಕ ಕಾರ್ಯದತ್ತ ಸ್ವಲ್ಪವೂ ನಮ್ಮ ಲಕ್ಷ್ಯ ಹರಿಯದಿದ್ದರೆ ತುಂಬಾ ಕೆಡುಕಾದುದು.

ನೇರಾಗಿ ಇರುವುದೆಂದರೆ ಸೊಂಟವನ್ನೂ ಕುತ್ತಿಗೆಯನ್ನೂ ನೇರಾಗಿರಿಸುವುದೆಂದರ್ಥ; ಹೆಚ್ಚಿನ ಜನರು ನಡೆಯುವಾಗ ತಗ್ಗಿರುತ್ತಾರೆ; ಕುಳಿತಿರುವಾಗಲೂ ಇದೇ ಪಾಡು. ಆ ಸ್ಥಿತಿಯಲ್ಲಿದ್ದರೆ ಹೊಟ್ಟೆಯಲ್ಲಿ 2-3 ಗುಳಿಗಳು ಬೀಳುತ್ತವೆ. ಆದರಿಂದಾಗಿ ಆಂತರವಯವಗಳೂ ಜೀರ್ಣಾಂಗಗಳೂ ಒತ್ತಲ್ಪತ್ತವೆ. ತತ್ಪರಿಣಾಮವಾಗಿ ಜೀರ್ಣಕ್ರಿಯೆಯು ಅಸ್ತವ್ಯಸ್ತವಾಗುತ್ತದೆ. ಮತ್ತು ನಾವು ಸ್ವೀಕರಿಸುವ ಆಹಾರವು ಸರಿಯಾಗಿ ರಕ್ತಗತವಾಗುವುದಿಲ್ಲ ಇದರಿಂದ ನಮ್ಮ ಆರೋಗ್ಯ ಕೆಡುತ್ತದೆ ಹೊಸ ಮಾಂಸವು ತುಂಬಿಕೊಳ್ಳುವುದಿಲ್ಲ ಮತು ದೇಹ ವುದಿನದಿನಕ್ಕೆ ಕ್ಷೀಣವಾಗುತ್ತದೆ ಹೊಟ್ಟೆಯಲ್ಲಿ ಗುಳಿಬೀಳುವುದರಿಂದ ರಕ್ತವೂ ಅಕಡೆ ಹೆಚ್ಚು ಹೆಚ್ಚು ಸೇರುತ್ತದೆ. ನಮಗೆ ಜೀವನ ಶಕ್ತಿಯನ್ನೂ ಪ್ರದೆ ಪೋಷಣವನ್ನೂ ನೀಡುವ ಏಕಮಾತ್ರ ವಸ್ತುವೆಂದರೆ ರಕ್ತ. ರಕ್ತದ ಚಲಾವಣೆ ಸರಿಯಾಗಿ ನಡೆಯದಿದ್ದರೆ ಇವೆರಡು ಕ್ರಿಯೆಗಳಿಗೂ ಧಕ್ಕೆ ಶಗಲುವ ಸಂಭವವಿದೆ; ಬೆನ್ನೆಲುಬನ್ನು ನೇರಾಗಿ ಇಟ್ಟುಕೊಳ್ಳದೆ ಸೊಂಟವನ್ನು ಬಗ್ಗಿಸಿ ಕುಳಿತುಕೊಳ್ಳುವ ಅಭ್ಯಾಸವುಳ್ಳವರು ಹೆಚ್ಚಾಗಿ ಮಲ ಬದ್ಧತೆಯ ರೋಗಕ್ಕೆ ತುತ್ತಾಗಿರುತ್ತಾರೆ; ಅಂತಹರು ಉತ್ತಮ ಆಹಾರ, ಶುದ್ಧ ವಾಯು ಹಾಗೂ ಸ್ವಚ್ಛ ನೀರನ್ನು ಸೇವಿಸಿದರೂ ಅವರ ಆರೋಗ್ಯ ಸುಧಾರಿಸುವುದಿಲ್ಲ. ಈ ಕಾರಣದಿಂದ ಕೆಟ್ಟ ದೇಹಸ್ಥಿತಿಯನ್ನು ಸುಧಾರಿಸಿಕೊಳ್ಳಲು ಜನರು ಹೆಚ್ಚಾಗಿ ಡಾಕ್ಟರರನ್ನು ಮರೆಹೋಗುತ್ತಾರೆ. ಡಾಕ್ಟರರು ಯಾವುದೋ ಒಂದು ಕಾಹಿಲೆಯನ್ನು ಹುಟ್ಟಿಸಿ ಏನಾದರೊಂದು ಔಷಧ ಕೊಟ್ಟು ಕಳುಹಿಸುತ್ತಾರೆ. ಆದರಿಂದ ಲಾಭ ಸಿಗುವ ಬದಲು ಹಾನಿಯೇ ಉಂಟಾಗುತ್ತದೆ. ಈರೀತಿ ದಿನದಿನಕ್ಕೆ ಸ್ಥಿತಿ ಕೆಡುತ್ತಿರುವುದನ್ನು ಕಂಡು ಗಾಬರಿಯಾಗಿ ಹಲವಾರು ಡಾಕ್ಟರರ ಬಳಿ ಹೋಗಿ ತಮ್ಮ ದೇಹವನ್ನೂ ಹಣವನ್ನೂ ಹಾಳುಮಾಡಿಕೊಳ್ಳುತ್ತಾರೆ; ಇದರಿಂದ ಎಷ್ಟೂ ಸುಖ ಸಿಗುವುದಿಲ್ಲ

ವ್ಯಾಪಾರಿಯೊಬ್ಬನ ಆರೋಗ್ಯವು ಈ ಕಾರಣದಿಂದಲೇ ಮೆಲ್ಲ ಮೆಲ್ಲನೆ ಕೆಡುತಿತ್ತು. ಅವನ ಮುಖದ ಮೇಲೆ ನೆರಿಗೆಗಳು ಕಾಣಿಸಿಕೊಂಡವು; ಮಲಬದ್ಧತೆಯೂ ವಿಶೇಷವಾಗಿತ್ತು. ಅವನು ಹಲವು ಡಾಕ್ಟರರನ್ನು ಕಂಡರೂ ಗುಣವಾಗಲಿಲ್ಲ ಒಂದು ದಿನ ಅವನು ಪ್ರಸಿದ್ಧ ವ್ಯಾಕೃತಿಕ ಚಿಕಿತ್ಸಕನ ಬಳಿ ನಡೆದು ತನ್ನ ದುಃಸ್ಥಿತಿಯನ್ನು ವಿವರಿಸಿದ. ಚಿಕಿತ್ಸಕನು ಆ ಕುರಿತು ಆಳವಾಗಿ ವಿಚಾರಮಾಡಿ, ಅವನ ನಿಲ್ಲುವ ಹಾಗೂ ಕುಳಿತುಕೊಳ್ಳುವ ಕ್ರಮವನ್ನು ಕಂಡು ಆದೇ ಈ ದೋಷಗಳಿಗೆಲ್ಲ ಮೂಲ ಕಾರಣವೆಂದು ನಿರ್ಧರಿಸಿದ 'ಮಹಾಶಯರೇ! ನೀವು ಕುಳಿತುಕೊಳ್ಳುವ ಕ್ರಮದಲ್ಲೇ ಎಲ್ಲ ದೋಷಗಳಡಗಿವೆ; ಆದ್ದರಿಂದ ಅದನ್ನು ಸುಧಾರಿಸಿದರೆಂದರೆ ಎಲ್ಲ ಸರಿಹೋಗುವುದು' ಎಂದ; ವ್ಯಾಪಾರಿಗೆ ತುಂಬಾ ಆಶ್ಚರ್ಯವೂ ಸಂದೇಹವೂ ಆಯಿತು. ಆದರೂ ಚಿಕಿತ್ಸಕನ ಹೇಳಿಕೆಯಂತೆ ಕೆಲವು ಸಮಯದವರೆಗೆ ನಡೆದ ನಂತರ ಅವನಿಗೆ ತುಂಬಾ ಲಾಭ ದೊರೆಯಿತು; ಕೆಲವು ದಿನಗಳಲ್ಲೇ ಅವನು ಪೂರ್ಣ ಸ್ವಸ್ಥನಾದ; ಅವನ ತೆರಿಗೆಗಳೆಲ್ಲವೂ ಮಾಯವಾದವು

ಇದರಿಂದ ಮನುಷ್ಯನ ನಿಲವು ಒಳ್ಳೇ ಆರೋಗ್ಯಕ್ಕೆ ಎಷ್ಟು ಮುಖ್ಯವಾದುದೆಂದು ಅರ್ಥವಾಗುತ್ತದೆ; ಅನೇಕರು ತಮ್ಮ ಕುತ್ತಿಗೆಯನು ನೇರಾಗಿಟ್ಟುಕೊಳ್ಳಲಾರರು. ಅವರಿಗೆ ಬಗ್ಗಿ ಕುಳಿತುಕೊಳ್ಳುವುದರಿಂದಲೇ ಸುಖದೊರೆಯುತ್ತದೆ; ಏಕೆಂದರೆ ಎಡೆಬಿಡದೆ ಹಾಗೆಯೇ ಕುಳಿತುಕೊಳ್ಳುತ್ತ ಬಂದಿರುವುದರಿಂದ ಆ ಅಭ್ಯಾಸವನ್ನು ಥಕ್ಕನೆ ತೊರೆಯುವುದು ಕಷ್ಟ ಸಾಧ್ಯ.

ಭೂಮಿಯಲ್ಲಿರುವ ಗುರುತ್ವಾಕರ್ಷಣ ಶಕ್ತಿಯಿಂದಾಗಿ ಎಲ್ಲವೂ ಭೂಮಿಯ ಕಡೆಗೇ ಎಳೆಯಲ್ಪಡುತ್ತದೆ. ನಮ್ಮ ದೇಹವೂ ನೆಲದ ಕಡೆಗೇ ಆಕೃಷ್ಟವಾಗುತ್ತದೆ. ಆದರಿಂದಾಗಿಯೇ ನಮ್ಮ ಸೊಂಟ ಬಾಗಿರುತ್ತದೆ: ಆದ್ದರಿಂದ ಆಕರ್ಷಣ ಶಕ್ತಿಯಿಂದಾಗಿ ನಮ್ಮ ಬೆನ್ನೆಲುಬು ಬಾಗದಂತೆ ನೋಡಿಕೊಳ್ಳಬೇಕು.

ನೇರಾಗಿ ಕುಳಿತುಕೊಳ್ಳುವ ಅಭ್ಯಾಸ ವಿರದಿದ್ದರೆ ಆ ಅಭ್ಯಾಸವನ್ನು ಮಾಡಿಕೊಳ್ಳಬಹುದು; ಆ ಬಗ್ಗೆ ಯಾವಾಗಲೂ ಲಕ್ಷ್ಯಕೊಡುತ್ತಿದ್ದರೆ ಅದು ಸಹಜವಾಗಿಯೇ ನಡೆಯುವುದೂ, ಆ ಬಗ್ಗೆ ಕೆಲವು ಆಸನಗಳೂ ಸಹಕಾರಿಯಾಗಿವೆ; ಅರ್ಧಶಲಭಾಸನ, ಸರ್ಪಾಸನ ಮೊದಲಾದವನ್ನು ನಾವು ಅನುಸರಿಸಬಹುದು. ಬಾಗಿ ಕುಳಿತುಕೊಳ್ಳುವ ಅಭ್ಯಾಸವನ್ನು ತೊರೆಯಬೇಕಾದರೆ ಶಲಭಾಸವನ್ನು ದಿನಕ್ಕೆ ಮೂರು ಬಾರಿ ಮಾಡಬೇಕು; ಶಲಭಾಸನದ ಕ್ರಮ ಇಂತಿದೆ:- ನೆಲದ ಮೇಲೆ ಕವುಚಿ ಮಲಗಿಕೊಳ್ಳಿರಿ; ಮತ್ತು ಎರಡೂ ಕೈಗಳನ್ನು ಸೊಂಟಕ್ಕೆ ಸಮಾನಾಂತರವಾಗಿ ಇಟ್ಟುಕೊಳ್ಳಿರಿ. ಆ ಬಳಿಕ ಒಂದು ಕಾಲನ್ನು ಮೆಲ್ಲಮೆಲ್ಲನೆ ಸಾಧ್ಯವಿದ್ದಷ್ಟು ಮೇಲಕ್ಕೆ ಎತ್ತಿರಿ; ಅನಂತರ ಹಾಗೆಯೇ ಕೆಳಕ್ಕೆ ತನ್ನಿರಿ; ಬಳಿಕ ಎರಡೂ ಕಾಲುಗಳನ್ನು ಮೇಲಕ್ಕೆತ್ತಿ ಕೆಳಗೆ ತನ್ನಿರಿ ಕಾಲುಗಳು ಆತಿ ಮೇಲಕ್ಕೆ ತಲುಪಿದಾಗ, ಒಂದೆರಡು ಮಿನಿಟುಗಳ ವರೆಗೆ ಹಾಗೆಯೇ ಇಟ್ಟುಕೊಳ್ಳಿರಿ; ಮತ್ತು ಮೆಲ್ಲನೆ ಕೆಳಗೆ ತನ್ನಿರಿ. ಈ ರೀತಿ ೨-೩ ಬಾರಿ ಆಚರಿಸಬೇಕು. ಈ ಆಸನವನ್ನು ದಿನಕ್ಕೆ ನೂರು ಬಾರಿ ಮಾಡಿದರೆ ಉತ್ತಮ.

(ಹಿಂದಿಯಿಂದ)

ಉಡುಪಿ ಸುದ್ದಿಗಳು

ಸಂಸ್ಕೃತ ಕಾಲೇಜಿಗೆ ವಿದ್ಯಾಮಂತ್ರಿಗಳ ಸಂದರ್ಶನ.

ಉಡುಪಿಗೆ ಸಮಾಗಮಿಸಿದ್ದ ಮೈಸೂರು ವಿದ್ಯಾಮಂತ್ರಿಗಳು ಕಳೆದ ತಾ ೧೧ ರಂದು ಸ್ಥಳೀಯ ಸಂಸ್ಕೃತ ಮಹಾಪಾಠಶಾಲೆಗೆ ಭೇಟಿಯಿತ್ತರು. ಪ್ರಿನ್ಸಿಪಲ್ ಕಾಲಾಗಿ ಶೇಷಾಚಾರ್ಯರು ಸ್ವಾಗತಭಾಷಣಮಾಡುತ್ತಾ ಮಂತ್ರಿಗಳ ರಾಷ್ಟ್ರ ಸೇವೆಯನ್ನೂ ಸರಳ ಕಾರ್ಯನಿಷ್ಠೆಯನ್ನೂ ಪ್ರಶಂಸಿಸಿದರು ಮುಂದುವರಿಯುತ್ತಾ ಅವರು 'ಈ ಜಿಲ್ಲೆಯ ಕಾಲೇಜುಗಳನ್ನು ಬೇರೆ ವಿಶ್ವವಿದ್ಯಾನಿಲಯಕ್ಕೆ ಸೇರಿಸಿದಾಗ ಸಂಸ್ಕೃತ ಕಾಲೇಜುಗಳನ್ನು ಮರೆಯಲಾಯಿತೆಂದೂ ಈಗಾದರೂ ಇಲ್ಲಿಯ ಸಂಸ್ಕೃತ ಕಾಲೇಜುಗಳ ನೆಲೆಯಾವುದೆಂಬುದರ ಕಡೆ ಯಾರೂ ಗಮನವೀಯುತ್ತಿಲ್ಲವೆಂದೂ ತಿಸಿಸಿ ಕಾಲೇಜು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿ ಹೇಳಿದರು. ವಿದ್ಯಾಂಗದ ಡೈರೆಕ್ಟರರಾದ ಶ್ರೀ ಕೃಷ್ಣಪ್ಪನವರೂ ಸಭೆಯಲ್ಲಿ ಉಪಸ್ಥಿತರಿದ್ದರು. ಮಾನ್ಯ ಮಂತ್ರಿಗಳು ಭಾಷಣಮಾಡುತ್ತಾ ಸಂಸ್ಕೃತವ್ಯಾಸಂಗದ ಉನ್ನತ ಉದ್ದೇಶದಿಂದ ಸ್ಥಾಪಿಸಲ್ಪಟ್ಟು ಉತ್ತಮ ರೀತಿಯಿಂದ ಕಾರ್ಯವೆಸಗುತ್ತಿರುವ ಈ ಸಂಸ್ಥೆಯ ಚಟುವಟಿಕೆಗಳನ್ನು ಶ್ಲಾಘಿಸಿದರು. ಶಾಲಾ ಸಂದರ್ಶಕರ ಪುಸ್ತಕದಲ್ಲಿ ಮಾನ್ಯ ಮಂತ್ರಿಗಳು ತನ್ನ ಮೆಚ್ಚುಗೆಯನ್ನು ಬರೆದಿರುವರು. (ಅದು ಇದೇ ಸಂಚಿಕೆಯ ಇನ್ನೊಂದೆಡೆ ಪ್ರಕಟವಾಗಿದೆ)

ಕುಸುಮೋತ್ಸವ

ಕಳೆದ ತಾ ೨೦ರಂದು ಉಡುಪಿ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಶ್ರೀ ಅದಮಾರು ಮಠದ ಶ್ರೀಮದ್ವಿಬುಧೇಶ ತೀರ್ಥ ಶ್ರೀಪಾದಂಗಳವರು ಶ್ರೀಕೃಷ್ಣನಿಗೆ ಅತ್ಯಂತ ವೈಭವೋಪೇತವಾದ ಹೂವಿನ ಪೂಜೆಯನ್ನು ನಡೆಯಿಸಿದರು. ಶ್ರೀಕೃಷ್ಣ

(4ನೇ ಪುಟಕ್ಕೆ)

ಒಂದೇ ಸಂಸ್ಥೆಯಿಂದ ಬಹುಮುಖಸೇವೆ
ಮನರಂಜನೆಗೆ ಉತ್ತಮ ಚಲಚ್ಚಿತ್ರಗಳು! ಮನಸ್ಸು, ಮಿದುಳಿನ ವಿಕಾಸನೆಗೆ ಹಾಗೂ ಜಾಹೀರಾತಿಗೆ
ಉತ್ತಮ ಸಾಧನ—"ಪ್ರಕಾಶ ಪತ್ರಿಕೆ"
ಮದುವೆ, ಮುಂಜಿಗೆ ಥಿಯೇಟರಿನ ವ್ಯವಸ್ಥೆ-ಸಭೆ, ಸಮಾರಂಭಗಳಲ್ಲಿ ಧ್ವನಿವರ್ಧಕ ಯಂತ್ರ-ವ್ಯಾಪಾರ, ವಹಿನಾಟು ಸಮೃದ್ಧಿಗೆ ಸ್ಲೈಡ್ ಪ್ರದರ್ಶನ—ಇತ್ಯಾದಿ—ಸೇವಾ, ಸೌಲಭ್ಯಗಳಿವೆ
ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್, ಉಡುಪಿ, ದ. ಕ.

ಶೀತಜ್ವರದಿಂದ ಬಳಲಿ ಶಕ್ತಿಹೀನರಾದವರಿಗೆ ಅತ್ಯುತ್ತಮ ಶಕ್ತಿವರ್ಧಕ ಔಷಧಿ
ಭುವನೇಂದ್ರು ಅಮೃತಪ್ರಾಶ
ನರಗಳಿಗೆ ನವಚೈತನ್ಯ ಧಾತುವೃದ್ಧಿ, ದೇಹ ಪುಷ್ಟಿ ಮೇಧಾಶಕ್ತಿ. ಸ್ಮೃತಿ – ಧೃತಿಗಳನ್ನು ಹೆಚ್ಚಿಸುವುದು. ಶ್ವಾಸಕೋಶ ಹೃದ್ರೋಗ, ಅಂಗಾಂಗಗಳ ನಡುಕ, ಕ್ಷಯ ಇತ್ಯಾದಿಗಳಲ್ಲಿ ಅತ್ಯುಪಯುಕ್ತ.
ಭುವನೇಂದ್ರು ಪ್ರೊಡಕ್ಟ್ಸ ಪ್ರೈವೇಟ್ ಲಿಮಿಟೆಡ್,
ಕಟಪಾಡಿ, ದಕ್ಷಿಣ ಕನ್ನಡ.
ಡಿಪೋ: (1) ಉಡುಪಿ (2) ಮಾರಾರಗಲ್ಲಿ ಹುಬ್ಬಳ್ಳಿ.

ಲಾರಿಯ ಬಲಪಕ್ಕದಲ್ಲಿ ಸವೃದ್ಧವೂ ವಿಶಾಲವೂ ಆಗಿ ಒಂದೇ ನೆಲೆಯಲ್ಲಿ ಬೆಳೆದು ನಿಂತ ತಂಬಾಕಿನ ತೋಟ. ಎಡಬದಿಯಲ್ಲಿ ಅರಳಿದ ಹೂಗಳಿಂದ ಸುಗಂಧವನ್ನು ಬೀರುತ್ತಿರುವ ಸೂರ್ಯಕಾಂತದ ಗಿಡಗಳು. ಹೂವಿನ ಸೊಬಗಿಗೆ ಅತ್ತಿಂದಿತ್ತ ಓಲಾಡುತ್ತಿರುವ ಪಕ್ಷಿಗಳು ಒಮ್ಮಿಂದೊಮ್ಮೆಲೆ ಹೂಗಿಡಗಳ ಆಡಿಯಲ್ಲಿ ಮರೆಯಾಗುವ ಕಣ್ಣಾಮುಚ್ಚಾಲೆಯಾಟ ಆಕರ್ಷಕವಾಗಿತ್ತು.

ಪ್ರಾಕೃತಿಕ ಸೌಂದರ್ಯದ ನಡುವೆ ಮುಂದುವರೆದ ಹೆದ್ದಾರಿ ನೆರಳು-ಮರಗಳನ್ನು ರಸಿಕೊಂಡಿಂಬಂತೆ ಬಳಸಾಗಿ ಬಾಗಿತ್ತು. ಈ ಬಳುಕಾದ ರಸ್ತೆಯಲ್ಲಿ, ಸುತ್ತಲಿನ ವಾತಾವರಣವನ್ನು ಕೆಂಥೂಳಿಯಿಂದ ಮಿಯಿಸುತ್ತಾ, ಲಾರಿಯೊಂದು ಧರಿಯುತ್ತಿತ್ತು.

ಬಿರುಸಾದ ದನಿಯೊಡನೆ ಒಮ್ಮೆಲೆ

ಬಲ್ಲೇರಿಯನ್ ಸಣ್ಣಕತೆ

* ಹೂದೋಟದ ಸಾಕ್ಷಿ! *

ಅದರ ವೇಗವೂ ಕಮ್ಮಿಯಾಗಿತ್ತು. ಮುಂದೆ ಕಾಣುತ್ತಿರುವ ಸೇತುವೆಯನ್ನು ದಾಟಿ ಮುಂದುವರಿದರೆ ರಸ್ತೆಯೂ ಇಳಿಮುಖವಾಗಿ ನಾಗಿಜೆ. ಆ ಸ್ಥಳದಿಂದ 'ಬೋರಾವೋ'ದ ಹಳ್ಳಿಯನ್ನು ಸ್ಪಷ್ಟವಾಗಿ ಕಾಣಬಹುದು. ವಾಸ್ಕೋ 'ರೇಡಿಯೇಟರ್'ಗೆ ನೀರು ತುಂಬುವುದಕ್ಕಾಗಿ ತನ್ನ ಲಾರಿಯನ್ನು ಅಲ್ಲಿ ನಿಲ್ಲಿಸುವನಿದ್ದನು. ಆಗ ಯಾರಾದರೂ ಮನುಷ್ಯನ ಸುಳಿವು ಅಲ್ಲಿದ್ದಿದ್ದರೆ 'ಇಗ್ನಟ್'ನ ಮೊಮ್ಮಗಳ ವಿಷಯವನ್ನು ತಿಳಿಯಬಹುದು ಎಂಬ ಅವ್ಯಕ್ತ ಆಕಾಂಕ್ಷೆಯಿಂದ ವಾಸ್ಕೊ ಸುತ್ತಲೊಮ್ಮೆ ಕಣ್ಣುಹಾಯಿಸದಿರಲಿಲ್ಲ.

ಇಗ್ನಟ್! ವಾಸ್ಕೋ ವಿಚಾರಮಗ್ನನಾದ....

ತನ್ನ ಗ್ಯಾರೇಜಿನಲ್ಲಿರುವ ಈ ವಿಚಿತ್ರ ಮನುಷ್ಯನ ಪರಿಚಯ ತನಗೆ ಚೆನ್ನಾಗಿದೆ. ಆತನೂ ತನ್ನ ಬಳಿ ಅನೇಕ ಬಾರಿ ತನ್ನ ಮೊಮ್ಮಗಳ ವಿಷಯವಾಗಿ ಹೇಳಿದ್ದುಂಟು. ಮೇರಿಯ! ಅವಳ ಹೆಸರು ಮೇರಿಯ! ಎಂಥ ಮುದ್ದಾದ ಹೆಸರು ಈ ಸೂರ್ಯಕಾಂತ ಹೂಗಳಲ್ಲೂ ಇರದ ಒಂದು ಇಂಪು, ಒಂದು ಸೊಗಸು ಆ ಹೆಸರಿನಲ್ಲಿ ಹುದುಗಿದೆ.

ಇಗ್ನಟ್ ವಿಚಿತ್ರ ಮನುಷ್ಯನೇನೋ ನಿಜ. ಆದರೆ ಆತ ತನ್ನ ಮಟ್ಟಿಗೆ ಒಳ್ಳೆಯ ಮನುಷ್ಯನೂ ಆಗಿದ್ದ. ತನ್ನ ಮೊಮ್ಮಗಳನ್ನು, ಮೇರಿಯಳನ್ನು ನನಗೆ ಕೊಟ್ಟು ಮದುವೆಮಾಡಬೇಕೆಂದು — ಹಾಸ್ಯಕ್ಕೇ ಏಕಾಗಲೊಲ್ಲದು — ಎಷ್ಟೋ ಬಾರಿ ನುಡಿದದ್ದುಂಟು. ಆದರೆ ಮೇರಿಯ ಮತ್ತು ನಾನು....ಇದು ಸಾಧ್ಯವೆ! ಸಾಧ್ಯವಾಗಿದ್ದರೆ ಎಷ್ಟು ಚೆನ್ನು! ಕಣಿವೆಗಳಲ್ಲಿ ತಂಬಾಕನ್ನು ಬೆಳೆಸುವ ಈ ವನಸುಂದರಿ ನನ್ನನ್ನೆಳಸಾಗಬಹುದೆ?

ವಾಸ್ಕೋನ ವಿಚಾರಧಾರೆಯೊಡನೆ ಲಾರಿಯೂ ಮುಂದುವರಿದಿತ್ತು—ಸೇತುವೆಯ ಬಳಿ ಸೂರ್ಯಕಾಂತಗಳ ತೋಟದ ಬದಲು 'ವಿಲೋ' ಮರಗಳು ಕಂಗೊಳಿಸುತ್ತಿದ್ದವು ಇನ್ನೂ ಸ್ವಲ್ಪ ಮುಂದುವರಿದಾಗ ಮತ್ತೆ ಪುನಃ ಸೂರ್ಯಕಾಂತಿ ಗಿಡಗಳು ವಾಸ್ಕೋನ ಕಣ್ಣು ಒಮ್ಮೆಲೆ—ರಸ್ತೆಯ ಬಳಿ ಸರಿಯಿತು. ಓ! ನೃತ್ಯಗಾತಿಯಂತೆ ಮುದ್ದಾದ ಉಡುಪನ್ನು ಧರಿಸಿದ ಸೊಗಸುಗಾರ್ತಿಯೊಬ್ಬಳು ಬಳುಕುತ್ತಾ ಬರುತ್ತಿದ್ದಾಳೆ. ಆಕೆ ನಡೆಯುವುದೂ ನಾಟ್ಯದಂತೆ ಸೊಗಸಾಗಿದೆ. ವಾಸ್ಕೋ ಒಮ್ಮೆಲೆ ಲಾರಿಯನ್ನು ನಿಲ್ಲಿಸಿ ಲಾರಿಯಿಂದ ಮುಖವನ್ನು ಹೊರಮಾಡಿದನು.

"ಓ ಹೆಣ್ಣೆ, ಬಾ ಇಲ್ಲಿ. ನಾನು ನಿನ್ನನ್ನು ಲಾರಿಯಲ್ಲಿ ನಿನ್ನೂರಿಗೆ ಕರೆದೊಯ್ಯುವೆನು...." ಅವನು ಕೂಗಿ ಹೇಳಿದನು

ಆ ಹುಡುಗಿ ಲಾರಿಯೇರಿ ಅವನ ಬಳಿ ಕುಳಿತಾಗ ಅವನು ಮಾತು ಮುಂದುವರಿಸಿದನು—

"ಬಳಿಯಲ್ಲಿ ಯಾರಾದರೂ ಗಳಹು ವವರಿದ್ದರೆ 'ಡ್ರೈವಿಂಗ್' ಸುಗಮವಾಗುತ್ತೆ!"

"ನನಗೆ ಹೇಗಾದರೂ ತಿಳಿಯಬೇಕು ಈ ವಿಚಾರ" ಹುಡುಗಿ ಸ್ವಲ್ಪ ಮಾರ್ಮಿಕವಾಗಿಯೇ ಉತ್ತರಿಸಿದಳು. "ಕಾರು ನಡೆಸುವಾಗ ಡ್ರೈವರನ ಬಳಿ ಯಾರೂ ಮಾತನಾಡಸಲ್ಲದು ಎಂದು ಮಾತ್ರ ಕೇಳಿದ್ದುಂಟು."

ವಾಸ್ಕೋ ನಸುನಕ್ಕ. ಆದರೆ ಏನೂ ಅನ್ನುವಂತಿಲ್ಲ. ರಸ್ತೆಯ ಎರಡು ಬದಿಗಳಲ್ಲೂ ಈಗ 'ಮಲ್‌ಬೆರಿ' ಮರಗಳು ಕಾಣಿಸಿಕೊಳ್ಳುತ್ತಿದ್ದವು ಶಂಪಾದ ಮರಗಳಡಿಯಲ್ಲಿ ದನಗಳು ಹಸಿರಾದ ಹುಲ್ಲನ್ನು ಮೇಯುತ್ತಾ ಆಹಾರವನ್ನೂ ವಿಶ್ರಾಂತಿಯನ್ನೂ ಒಮ್ಮೆಲೇ ಪಡೆಯುತ್ತಿದ್ದವು. ಲಾರಿಯಲ್ಲಿ ಕುಳಿತಿರುವ ಈ ಜತೆಯನ್ನು ಆ ಪೂರಕ ಪ್ರಾಣಿಗಳಲ್ಲದೆ ಇನ್ನಾರೂ ಕಾಣುವಂತಿಲ್ಲ.

"ನೀನು ಬೋರಾವೋದಿಂದ ಬಂದದ್ದಿರಬೇಕು' ವಾಸ್ಕೋ ಕೇಳಿದನು.

"ಹೂಂ" ಎಂದಿಷ್ಟರಲ್ಲೆ ಹುಡುಗಿಯ ಉತ್ತರ ಮುಗಿದಿತ್ತು

"ಹಾಗಿದ್ದರೆ ಬೋರಾವೋದ ಹಳ್ಳಿಯಿಂದಲೇ ನೀನು ಬಂದದ್ದು?" ಎರಡನೆಯ ಪ್ರಶ್ನೆ! ಹುಡುಗಿ ಸ್ವಲ್ಪ ವಿಚಾರಮಗ್ನಳಾದಂತಿತ್ತು. ಇವನು ಹೀಗೇನು ತ್ತಾ ಮತ್ತೂ ಕೇಳಲು ಕಾರಣವೇನು?

(5ನೇ ಪುಟಕ್ಕೆ)

ಶೇಕಡ $4\frac{1}{4}$ ಬಡ್ಡಿಯುಳ್ಳ
ಮೈಸೂರು ರಾಜ್ಯದ ಅಭಿವೃದ್ಧಿ ಸಾಲ - 1969

ಸಾಲದ ಮೊಬಲಗು: 300 ಲಕ್ಷ ರೂಪಾಯಿಗಳು.
ಸಾಲದ ಅಸಲು ಬೆಲೆ: 100 ರೂಪಾಯಿಗೆ 98·75 ರೂಪಾಯಿ.
ವಾಪಾಸು ಕೊಡುವ ತಾರೀಕು: 16ನೆಯ ಸೆಪ್ಟೆಂಬರ್ 1969.

ಹಣ ಪಾವತಿ ಮಾಡುವ ಅವಧಿಯು ಮುಂದಾಗಿಯೇ ಮುಗಿದು ಹೋದ ಹೊರತು, 16ನೆಯ ಸೆಪ್ಟೆಂಬರ್ 1957ರಿಂದ 18ನೆಯ ಸೆಪ್ಟೆಂಬರ್ 1957ರ ವರೆಗೂ (ಸೇರಿ) ಇರುತ್ತದೆ

ಹಣವನ್ನು ನಗದಾಗಿ ಪಾವತಿಮಾಡಬಹುದು; ಇಲ್ಲವೇ 1958ನೆಯ ಇಸವಿಯ ಶೇಕಡ 3ರ ಮೈಸೂರು ಸರಕಾರದ ಸಾಲಪತ್ರಗಳ ಅಡಮಾನ ರೂಪವಾಗಿ ಪಾವತಿಮಾಡಬಹುದು.

1958ನೆಯ ಇಸವಿಯ ಶೇಕಡ 3ರ ಮೈಸೂರು ಸರಕಾರದ ಸಾಲಪತ್ರಗಳನ್ನು 100 ರೂಪಾಯಿಗಳ ಸಾಲದ ಮುಖಬೆಲೆಗೆ 99·75 ರೂಪಾಯಿಗಳಂತೆ ಸ್ವೀಕರಿಸಲಾಗುವುದು.

ಪ್ರಕಟಿಸಿದ ಮೊಬಲಗಿಗಿಂತ ಶೇಕಡ 10ರಷ್ಟಿನ ವರೆಗೆ ಹೆಚ್ಚಿನ ಚಂದಾ ಹಣವನ್ನು ಇಟ್ಟುಕೊಳ್ಳಲು ಸರಕಾರಕ್ಕೆ ಅಧಿಕಾರವಿರುತ್ತದೆ ಪಾವತಿಯಾದ ಒಟ್ಟು ಮೊಬಲಗು 330 ಲಕ್ಷ ರೂಪಾಯಿಗಳಿಗಿಂತಲೂ ಮೀರಿದ ಪಕ್ಷದಲ್ಲಿ ನಗದು ಹಣ ಪಾವತಿಮಾಡಿರುವವರಿಗೆ ಸಾಲಪತ್ರವನ್ನು ಖಂಡಾಂಶವಾಗಿ ಹಂಚಲಾಗುವುದು. ಸಾಲದ ಅರ್ಜಿಯ ಜತೆಗೆ ಅವರು ಕೊಟ್ಟಿರುವ ಮಿಕ್ಕ ಮೊಬಲಗನ್ನು ಬಡ್ಡಿಯಿಲ್ಲದಂತೆ ಅವರಿಗೆ ವಾಪಾಸು ಕೊಡಲಾಗುವುದು.

ಈ ಸಾಲದ ಮೊಬಲಗನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿರುವ ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸಲಾಗುತ್ತದೆ.

ಈ ಸಾಲಕ್ಕೆ ಸಾಲಿಯಾನ ಶೇಕಡ 4¼ರಂತೆ 16ನೆಯ ಸೆಪ್ಟೆಂಬರ್ 1957ರಿಂದ ಬಡ್ಡಿ ಕೊಡಲಾಗುತ್ತದೆ.

ಬಡ್ಡಿಯನ್ನು 6 ತಿಂಗಳಿಗೊಂದುಸಲ 16ನೆಯ ಮಾರ್ಚ್ ಮತ್ತು 16ನೆಯ ಸೆಪ್ಟೆಂಬರ್ ಈ ದಿನಗಳಲ್ಲಿ ಆದಾಯ ತೆರಿಗೆಯನ್ನು ಕಳೆದು ಪಾವತಿಮಾಡಲಾಗುವುದು.

ಸಾಲದ ಅರ್ಜಿಗಳು 100 ರೂಪಾಯಿಗಳಿಗೆ ಅಥವಾ ಅದರ ಗುಣಕ ಪ್ರಮಾಣಗಳಿಗೆ ಅನ್ವಯಿಸುವಂತೆ ಇರಬೇಕು.

ಸಾಲದ ಅರ್ಜಿಗಳನ್ನು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಸ್ವೀಕರಿಸಲಾಗುವುದು:—

(a) ಬೆಂಗಳೂರು, ಬೊಂಬಾಯಿ, ಕಲ್ಕತ್ತಾ, ಮದರಾಸು ಮತ್ತು ನವದೆಹಲಿ ನಗರಗಳಲ್ಲಿರುವ ಇಂಡಿಯಾದ ರಿಸರ್ವ್ ಬ್ಯಾಂಕಿನ ಕಚೇರಿಗಳು.

(b) ಬೆಂಗಳೂರು ಬಿಟ್ಟ ಮೈಸೂರು ರಾಜ್ಯದಲ್ಲಿರುವ ಮೈಸೂರು ಬ್ಯಾಂಕಿನ ಶಾಖೆಗಳು.

(c) ಬೆಂಗಳೂರು ಮತ್ತು (b) ಭಾಗದಲ್ಲಿ ಸೂಚಿಸಿರುವ ಪ್ರದೇಶಗಳನ್ನು ಬಿಟ್ಟ ಮೈಸೂರು ರಾಜ್ಯದಲ್ಲಿರುವ ಇಂಡಿಯಾ ಸ್ಟೇಟ್ ಬ್ಯಾಂಕಿನ ಮತ್ತು ಹೈದರಾಬಾದ್ ಸ್ಟೇಟ್ ಬ್ಯಾಂಕುಗಳ ಶಾಖೆಗಳು.

(d) ಮೇಲೆ ಸೂಚಿಸಿರುವ ಯಾವುದೇ ಬ್ಯಾಂಕಿನ ಶಾಖೆಗಳಿಲ್ಲದ ಇತರ ಮೈಸೂರು ರಾಜ್ಯದ ಪ್ರದೇಶಗಳಲ್ಲಿ ಸರಕಾರಿ ತಾಲ್ಲೂಕು ಟ್ರೆಜರಿಗಳು.

The Secretary,
Karnataka Vidya Vardhaka Sangha
DHARWAR.

Regd. No M 6674.
SUDARSHANA' Weekly, Udipi.

14 9 1957

ಸಂಪಾದಕೀಯ

(ಮೊದಲನೇ ಪುಟದಿಂದ)

ದೃಷ್ಟಿಗೆ ಏನು ಹೇಳಬೇಕು? ಅನಗತ್ಯವಾದ ಯಾರೂ ಅವೇಕ್ಷಿಸದ ವಿಶ್ವವಿದ್ಯಾಲಯದ ಪ್ರಶ್ನೆಗೆ ಕೈಹಾಕಿ ವಾತಾವರಣವನ್ನು ಕದಡಿಸಲು ಒಂದಾದ ನಮ್ಮ ಯಂ. ಯಲ್. ಎ.ಗಳು ಸಾವಿರಾರು ಶಿಕ್ಷಕರ ರಕ್ಷಣೆಗೆ, ಚಿಕ್ಕ ಮಕ್ಕಳ ವಿದ್ಯಾ ಪ್ರಗತಿಯ ಅನುಕೂಲತೆಗ ಯಾಕೆ ಮುಂದಾಗುವುದಿಲ್ಲ ?

ಇದರಿಂದ ಆಗುವ ಅನಾಹುತ ಅಲ್ಪವೇನೂ ಅಲ್ಲ. ತೆಂಕಣಗಾಳಿ ಕೊಂಕಣ ಸೀಮೆಗೆ ಬೀಸುವುದು ನಮ್ಮಲ್ಲಿಯ ಮಾಮೂಲು! ಕೆಂಪು ಕೇರಳದ ವಿದ್ಯಾ ಮಂದಿರ ಶಿಕ್ಷಕರನ್ನು ಕಮ್ಯೂನಿಷ್ಟರ ಕಡೆಗೆ ಆಕರ್ಷಿಸುವುದು ಸ್ವಾಭಾವಿಕವೇ. ನಮ್ಮ ಜಿಲ್ಲೆ ಪ್ರಾಥಮಿಕ ಶಿಕ್ಷಕರ ನಮ್ಮ ಸ್ಥೈಯನ್ನು ಅಸಡ್ಡೆಯಿಂದ ಕಂಡು ನಮ್ಮ ಕಾಂಗ್ರೆಸ್ ಮತ್ತು ಪಿ. ಯಸ್. ಪಿ ಶಾಸನಸಭಾಸದಸ್ಯರು ಕರ್ತವ್ಯಭ್ರಷ್ಟರೆಂಬ ಆಪರಾದಕ್ಕೆ ಗುರಿಯಾಗುತ್ತಿದ್ದಾರೆ. ಇದರಿಂದ ಅನರು ಮಾತ್ರವಲ್ಲ; ಅವರು ಆಶ್ರಯಿಸಿರುವ ರಾಜಕೀಯ ಪಕ್ಷಗಳೂ ಜನತೆಯ ಪ್ರೀತಿಗೆ ಎರವಾಗಬೇಕಾಗುತ್ತದೆ. ಓಟನ್ನು ಗಿಟ್ಟಿಸಿಕೊಂಡ ತರುವಾಯ ಇಂದ್ರ ಪದವಿಯೆ ಲಭ್ಯವಾಯಿತೆಂಬ ಭಾವನೆಯಿಂದ ಮೈಮರೆತು ಕುಳಿತವರು ಇಂದಲ್ಲ ನಾಳೆಯಾದರೂ ಜನತೆಗೆ ಉತ್ತರ ಹೇಳಬೇಕಾಗುತ್ತದೆ. ಎಂ. ಎಲ್. ಎ, ಎಂಬುದು ಮನೆಯ ಮುಂದೆ ತೂಗು ಹಾಕುವುದಕ್ಕಿರುವ ಪದವಿಯಲ್ಲ! ಜನತೆಯ ಕರ್ತವ್ಯ ನಿರ್ವಹಣೆಯ ನೇಮ ಹೊತ್ತಿರುವ ಸಂಕೇತವದು!

ಪ್ರಾ ಶಿಕ್ಷಕರ ಸಮಸ್ಯೆಯನ್ನು ಸುಖಾಂತವಾಗಿ ಬಿಡಿಸುವುದು ರಾಜ್ಯದ ಕಲ್ಯಾಣ ದೃಷ್ಟಿಯಿಂದ ಅತ್ಯಾವಶ್ಯಕ ಕರ್ತವ್ಯವಾಗಿದೆ ಜಿಲ್ಲೆಯ ಶಾಸಕರು ಬೇಡದ ಹವ್ಯಾಸಗಳಲ್ಲಿ ತೊಡಗಲು ತೋರುವ ಉತ್ಸಾಹವನ್ನು ಪ್ರಾ| ಶಿಕ್ಷಕರ ಪ್ರಶ್ನೆಯನ್ನು ಬಿಡಿಸುವ ತಮ್ಮ ಕರ್ತವ್ಯದಲ್ಲಿ ತೋರಲಿ! ಸರಕಾರದವರಾದರೂ ನಮ್ಮ ಜಿಲ್ಲೆಯ ಪ್ರಾ| ಶಿಕ್ಷಕರ ಪ್ರಶ್ನೆಯನ್ನು ಹಣದ ಪ್ರಶ್ನೆಗೆ ಗಂಟುಹಾಕದೆ ಸಹಾನುಭೂತಿಯಿಂದ ಬಿಡಿಸಲು ಮುಂದಾಗಲಿ

ರಾಜ್ಯ ಸರಕಾರದಸಾಲ

ದೇಶದ ಜೀವನವನ್ನು ಸಮೃದ್ಧವನ್ನಾಗಿ ಮಾಡುವುದಕ್ಕಾಗಿ ರಾಷ್ಟ್ರವಿಂದು ನೂರು ಮುಖಗಳಂದ ಸಾಹಸೀ ಪ್ರಯತ್ನಗಳನ್ನು ಕೈಕೊಳ್ಳತ್ತಿದೆ. ರಾಜ್ಯಸರಕಾರಗಳೂ ಈದಿಕೆಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ನಮ್ಮ ಮೈಸೂರು ಸರಕಾರವೂ ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಲಿದ್ದು ಸದ್ಯ ಅಭಿವೃದ್ಧಿಯೋಜನೆಗಳಿಗಾಗಿ ಮೂರು ಕೋಟಿ ರೂಪಾಯಿಗಳ ಸಾಲವೆತ್ತಲು ಮುಂಬಂದಿದೆ. ರಾಜ್ಯದ ಏಳಿಗೆಯನ್ನು ಸಾಧಿಸುವುದರ ಮೂಲಕ ತನ್ನ ಹಣದ ಯೋಗ್ಯ ವಿನಿಯೋಗಗೊಳಿಸುವ ಈ ಸುವರ್ಣ ಸಂದರ್ಭವನ್ನು ಎಲ್ಲರೂ ಸದುಪಯೋಗ ಪಡಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ನಿಸರ್ಗ ಸುಂದರಿಯ ನಿವಾಸಭೂಮಿ— ದಾರ್ಜೀಲಿಂಗ್

ಹಿಮವತ್ಪರ್ವತದ ತಪ್ಪಲಲ್ಲಿ ನಿಸರ್ಗ ರಮಣೀಯವಾದ ಹಲವಾರು ಸ್ಥಳಗಳು ಪ್ರಸಂಚದ ಸಂದರ್ಶಕರನ್ನು ಆಕರ್ಷಿಸುತ್ತಲಿವೆ ಅವುಗಳಲ್ಲಿ ದಾರ್ಜೀಲಿಂಗ್ ಕೂಡಾ ಒಂದು. ಪಶ್ಚಿಮ ಬಂಗಾಲದ ಸನಿಹದಲ್ಲಿರುವ ಈ ಪಾರ್ವತ ಪ್ರದೇಶವು ಅಪೂರ್ವ ವನ ಶ್ರೀಯಿಂದಲೂ, ವನ ದೇವತೆಯ ಪ್ರಿಯ ಪರಿವಾರವೆನಿಸುವ ಅಪೂರ್ವ ಪಶುಪಕ್ಷಿಗಳಿಂದಲೂ ಯುಕ್ತವಾಗಿದ್ದು ಸಂದರ್ಶಕರಿಗೆ ಅದ್ವಿತೀಯವಾದ ಆನಂದವನ್ನೀಯುತ್ತಿದೆ.

ಈ ಪಾರ ಶಾಲೆಗೆ ಬೇಕಾದ ಸೌಲಭ್ಯ ಮತ್ತು ಸಹಾಯಗಳನ್ನು ಶ್ರೀ ಶೇಷಾಚಾರ್ಯರವರು ನನ್ನ ಗಮನಕ್ಕೆ ತಂದಿರುತ್ತಾರೆ. ಸರಕಾರವು ಈ ವಿಷಯಗಳನ್ನು ವಿಮರ್ಶೆ ಮಾಡಿ ಸಾಧ್ಯವಾದ ನೆರವನ್ನು ನೀಡುವ ಭರವಸೆ ನನಗಿದೆ

ಶ್ರೀ ಕೃಷ್ಣ ಪರಮಾತ್ಮನ ಕೃಪೆ ಶ್ರೀ ಮಠಗಳ ಯತಿಗಳ ಆಶೀರ್ವಾದ ಮತ್ತು ಸಲಹೆಗಳಿಂದ ಈ ಮಹಾಸಂಸ್ಥೆಯು ಭಾಷೆಯ ಸೇವೆ ಸಲ್ಲಿಸಿ ರಾಷ್ಟ್ರವನ್ನು ಬೆಳಗಲಿ.

ವಿ ವೆಂಕಟಪ್ಪ
1-9-57 ವಿದ್ಯಾಮಂತ್ರಿ

(4ನೇ ಪುಟದಿಂದ)

ಪ್ರಸಾದರ ರಾಷ್ಟ್ರಾಧ್ಯಕ್ಷತೆಯ ಕಾಲದಲ್ಲಿ ಸಂಸ್ಕೃತ ಭಾಷೆಗೆ ಉತ್ತೇಜನ ದೊರೆಯದಿದ್ದಲ್ಲಿ ಮತ್ತು ಇನ್ನಾವ ಕಾಲದಲ್ಲೂ ಈ ಭಾಷೆಗೆ ಬನ್ನಿಣೆ ಮತ್ತು ಪುರೋಭಿವೃದ್ಧಿಯು ದೊರೆಯಲಾರದೆಂದು ನನ್ನ ಭಾವನೆ.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸರ್ವ ಧರ್ಮ ಸಮ್ಮೇಳನದ ರಜತೋತ್ಸವ

ಶ್ರೀ ಕ್ಷೇತ್ರದಲ್ಲಿ ಈ ಉಪಯುಕ್ತ ಸಮ್ಮೇಳನವು ಪ್ರಾರಂಭವಾಗಿ ೫೫ ವರುಷಗಳಾದುದರಿಂದ ಈ ಸಲ ರಜತೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಬೇಕೆಂದು ಶ್ರೀ ರತ್ನವರ್ಮ ಹೆಗ್ಗಡೆ ಎಂ. ಎಲ್. ಎ ಅವರು ನಿಶ್ಚಯಿಸಿ ತಕ್ಕ ಏರ್ಪಾಡುಗಳನ್ನು ಮಾಡುತ್ತಿರುವರು. ತಾ ೧೯ರಂದು ಧರ್ಮಸಮ್ಮೇಳನವೂ ತಾ. ೨೦ರಂದು ಸಾಹಿತ್ಯ ಸಮ್ಮೇಳನವೂ ತಾ. ೨೧ರಂದು ಸಂಗೀತಾದಿ ಕಲಾಕಾರ್ಯಕ್ರಮಗಳೂ ನಡೆಯಲಿವೆ. ವಿವರಗಳು ಸದ್ಯವೆ ಪ್ರಕಟವಾಗಲಿದೆ.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O S. No. 199/57

ವಾಸ್ತು ಸಟ್ಟೆ–ವಾದಿ.

ಮತ್ತು

ರುಕ್ಮಿಣಿ ಹೆಗ್ಗಡ್ತಿ ನರ್ಸ ಹೆಗ್ಗಡ್ತಿ ಮಗಳು ಉಡ್ಪಿ ತಾಲೂಕು ಇನ್ನಂಜೆ ಗ್ರಾಮದ ಮಡುಂಬಿನಲ್ಲಿರುವವರು–ಪ್ರತಿವಾದಿ

ವೇಲ್ಲಾಣಿಸಿದ ಪ್ರತಿವಾದಿಗೆ ತಿಳಿಯ ಪಡಿಸುವುದೇನೆಂದರೆ—

ನೀವು ನಾವಾದಿಗೆ ತಾ 23-12-54ರಲ್ಲು ರೂಪ್ಯಾ 500/-ಕ್ಕೆ ಬರಕೊಟ್ಟ ಡಿವೋಂಡು ಪ್ರೊನಿಸರಿ ನೋಟಿನ ಅಸಲು ಬಡ್ಡಿ ವ್ಯಾಜ್ಯವನ್ನು ತಾ 19-9-1957ಕ್ಕೆ ಇಟ್ಟಿರುತ್ತದೆ. ಆ ಬಾಬಿನಲ್ಲಿ ನಿಮ್ಮದೇನಾದರೂ ಆಕ್ಷೇಪ ವಿದ್ದಲ್ಲಿ ಆದಿವ್ಸ ಬೆಳಿಗ್ಗೆ ಗಂಟೆ 10ಕ್ಕೆ ಮೇಲ್ಕಾಣಿಸಿದ ಕೋರ್ಟಿನ ಮುಂದೆ ಹಾಜರಾಗಿ ಕಾಹೀರುಮಾಡಿಕೊಳ್ಳಬೇಕು

Y. Dumanna Hegde.
ADVOCATE FOR PLAINTIFF
ಉಡುಪಿ, ತಾ. 5-9-1957.

ಕೆ. ಆರ್. ಕೆ. ಶೇಟ್ಸ್
ಡೈಮಂಡ್ ಮಾರ್ಟ್,
ಮಂಗಳೂರು. 1
[ಪ್ರಸಿದ್ಧ ವಜ್ರ ಮತ್ತು ಬೆಳ್ಳಿ ಬಂಗಾರ ವ್ಯಾಪಾರಸ್ಥರು]
ಸ್ಥಾಪನೆ. 1919] Phone No. 374 Tele Blueyagar
ಪ್ರೋ: ಕೆ. ಕೆ. ಆರ್ ಶೇಟ್

ಕನ್ನಡ— ಇಂಗ್ಲಿಷ್— ಹಿಂದಿ
ಮುಂತಾದ ಭಾಷೆಗಳ ವೃತ್ತ
ಪತ್ರಿಕೆಗಳು ಕನ್ನಡದ ಕತೆ,
ಕಾದಂಬರಿ, ಪ್ರಸಂಗ, ಹಾಡು
ಮುಂತಾದ ಪುಸ್ತಕಗಳು
ಯಾವಾಗಲೂ
ದೊರಕುವ ಸ್ಥಳ
ಎಸ್. ಎನ್. ನ್ಯೂಸ್ ಏಜನ್ಸಿ,
ರಥಬೀದಿ, ಉಡುಪಿ, ದ. ಕ.

Printed by K. Ramadas Bhatta at the Kalianpur Press, Ltd , Udipi, Edited & Published by Bannanje Ramachar at the Sudarshana office, Udipi

R No B 77 ವಾರ್ಷಿಕ ಚಂದಾ ಸಾ. ೮ ಆಣೆ. ೧೦ ಪುಟಗಳು.

ಕರ್ನಾಟಕ ವೈಭವ

ನಿಮಿತ್ತೇ ನಾಹ ನಿರ್ವಾಹಪಕ್ಷೋ ನ ಪಾತಾಯಾಸನಾದುಪ್ಲವಾದ್ ।
ನವಾಪೇಕ್ಷಾಸ್ಫಾರಕೋ ವಿನಿಪಾತಸಾಧುವಾದಾದೃಶಸ್ಫಟಿಕೇ ಯಥಾ ॥

(Premier Nationalist Kannada Weekly in Karnataka)

ಪ್ರಕಾಶಕರು:—
ವೆಂಕಟೇಶ ಭೀಮರಾವ ನಾಯಕ
ಬಿ.ಎ. ಎಲ್.ಎಲ್. ಬಿ.

ಬಿಡಿಸಂಚಿಕೆ ೧ ಆಣೆ.

Editor —
V. B. Naik, M A. LL. B.

ವರ್ಷ ೪೯ | ವಿಜಾಪುರ--ರವಿವಾರ ತಾರೀಖು ೨೧ ಡಿಸೆಂಬರ ೧೯೪೧ Bijapur 21-12-41 | ಸಂಚಿಕೆ ೪೮

ಪ್ರಕಟನೆ ೮.] [Advt

೦ ಎಸ್. ಎಸ್. ಹೇರಲಗಿ ಜನರಲ್ ಸ್ಟೋರ್ಸ್ ಅಂಗಡಿ ವಿಜಾಪುರ. ೦



ರೌಪ್ಯಮಹೋತ್ಸವದಲ್ಲಿ ಬಹುಮಾನಾರ್ಥವಾಗಿ ಬಂದ ಕಾಣಿಕೆಗಳು

ಅಭಿಪ್ರಾಯ.

ಆಳುವ ಮೈಸೂರು ಶ್ರೀಮನ್ಮಹಾರಾಜರವರ ಕೃಪಾಪೋಷಿತರಾದ ನಮ್ಮ ಮೈಸೂರು ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಕರ್ನಾಟಕ ನಾಟಕ ಮಂಡಿಲಿಯು ವಿಜಾಪುರಕ್ಕೆ ಬಂದು ಎರಡು ತಿಂಗಳಿಂದ ನನಗೆ ಬೇಕಾದ ಬಟ್ಟೆ ಮುಂತಾದ್ದನ್ನು ಶ್ರೀಯುತ ಎಸ್ ಎಸ್. ಹೇರಲಗಿಯವರ ಷಾಪಿನಲ್ಲಿ ತೆಗೆದುಕೊಳ್ಳುತ್ತ ಬಂದೆವು. ನನಗೆ ಬೇಕಾದ ರಮಿಂವಾರೀ ಮಾಲುಗಳು ಈ ಊರನಲ್ಲಿ ತಿಕ್ಕುವದೇ ಇಲ್ಲವೆಂದು ತಿಳಿದಿದ್ದ ನನಗೆ ಇವರ ಷಾಪಿನಲ್ಲಿ ಎಲ್ಲವೂ ದೊರೆಯಿತು ವಜ್ರಕ್ಕೆ ಕುಂದಣ ಇಟ್ಟಂತೆ ಇವರೂ ಇವರ ಕಾರ್ಯಕರ್ತ ಮ್ಯಾನೇಜರುಗಳೂ ವಿಶೇಷವಾದ ಸಹನ ಶೀಲತೆ, ಕಾರ್ಯದಕ್ಷತೆ ಇವುಗಳಿಂದ ಕೆಲಸ ಮಾಡುತ್ತಿದ್ದದರಿಂದ ನಾವು ಯಾವ ಕಾರಣದಿಂದಲೂ ಬೇರೆ ಅಂಗಡಿಗೆ ಹೋಗುವ ಪ್ರಸಂಗಬೀಳಲಿಲ್ಲಾ ಈಕಾರಣಗಳಿಂದ ಇವರ ವ್ಯಾಪಾರೋದ್ಯಮಗಳು ಇತ್ತೋತ್ತಶಯವಾಗಿ ಅಭಿವೃದ್ಧಿ ಹೊಂದಲು ಯಾವ ಸಂದೇಹವೂ ಇಲ್ಲಾ ಇವರ ಷಾಪಿನ ಮನೋಹರವಿಭಾಗವೂ, ನಡೆವಳಿಕೆಯೂ ಒಮ್ಮೆ ಅಂಗಡಿಗೆ ಬಂದವರು ಬೇರೊಂದೆಡೆಗೆ ಹೋಗದಂತೆ ಮಾಡುತ್ತವೆ

ವಿಜಾಪುರ.

ಜಿ. ಎಚ್. ವೀರಣ್ಣ.
ಪ್ರೊಪ್ರೈಟರ
ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ
ಕರ್ನಾಟಕ ನಾಟಕ ಮಂಡಳಿ
(ಮೈಸೂರು)
ತಾ ೩೦-೭-೩೫

ಕರ್ನಾಟಕ ವೈಭವ.

(ವ್ಯಪನಾಮ ಸಂವತ್ಸರ ಪುಷ್ಯ ಶು ೩ ಶಕೆ ೧

ಇನ್ನೂ ಅವೇ ಮಾತುಗಳು.

ಕಲಕತ್ತೆಯ ಅಸೋಸಿಯೇಟೆಡ್ ವಾಣಿಜ್ಯಸಂಘದ ಉಪಹಾರದ ಕಾಲಕ್ಕೆ ವೈಸರಾಯಾದ ಲಾರ್ಡ್ ಲಿನಲಿತ್‌ಗೋರನರು ಹಿಂದೀ ರಾಜಕೀಯ ತೊಡಕನ್ನು ಕುರಿತು ಸುದೀರ್ಘವಾದ ಭಾಷಣವನ್ನು ಮಾಡಿದರು ಜವಾನವು ಯುದ್ಧದಲ್ಲಿ ಧನುಶಿದುದರಿಂದ ಹಿಂದುಸ್ತಾನದ ಹೆಬ್ಬಾಗಿಲಿಗೆ ಯುದ್ಧವು ಬಂದಿತೆಂದು ಎಚ್ಚರಿಕೆಯನ್ನಿತ್ತು ಹಿಂದೀ ಧುರೀಣರು ಸದ್ಯದ ಪರಿಸ್ಥಿತಿಯನ್ನು ನೈಜವಾದ ರೀತಿಯಲ್ಲಿ ಆವಲೋಕಿಸಬೇಕೆಂದು ಪ್ರತಿಪಾದಿಸಿದರು ಅದೇ ಕಾಲಕ್ಕೆ ವೈಸರಾಯರು ಹೋದ ವರ್ಷದ ಆಗಸ್ಟ ಘೋಷಣೆಯ ಪಾರಾಯಣವನ್ನೇ ಪುನಃ ಮಾಡಿ ತಮ್ಮ ಘೋಷಣೆಯು ಹಿಂದೀಜನ ಮನವನ್ನು ಎಷ್ಟು ರೀತಿಯಿಂದ ಆಕರ್ಷಿಸಬಹುದೆಂದು ಅನಿಸಿತ್ತೋ ಅಷ್ಟು ಅದು ಆಕರ್ಷಿಸಲಿಲ್ಲವೆಂದು ವಿಷಾದವನ್ನು ವ್ಯಕ್ತಪಡಿಸಿದರು ವೈಸರಾಯರು ವಾಣಿಜ್ಯ ಸಂಘಗಳ ಉಪಹಾರದ ಕಾಲಕ್ಕೆ ಈ ರೀತಿ ಮಾತಾಡುವದು ಎಂದಿನಿಂದಲೂ ನಡೆದು ಬಂದ ಒಂದು ವಾಡಿಕೆ. ವೈಸರಾಯರ ಈ ಮಾತುಗಳ ಪರಾಮರ್ಶೆಯನ್ನು ಮಾಡಿ ಜನತೆಯು ತನ್ನ ಧೋರಣವನ್ನು ನಿಶ್ಚಿತಪಡಿಸಿಕೊಳ್ಳುವದು ಸಮಯೋಚಿತವಾಗಿರುವದರಿಂದ ಅದರ ಬಗ್ಗೆ ನಾಲ್ ಮಾತುಗಳನ್ನು ನಾವು ಬರೆಯಬೇಕಾಗಿದೆ.

ಯುದ್ಧವು ಇಂದು ಜಗತ್ತನ್ನೆಲ್ಲವ್ಯಾಪಿಸಿ ತನ್ನ ವಿಕೃತ ಸ್ವರೂಪವನ್ನು ಜೀನ್ನಾಗಿ ಪ್ರದರ್ಶಿಸುತ್ತಲಿದೆ ಯುದ್ಧದ ಅನಾಹುತಗಳ ಅಂಜಿಕೆಯನ್ನು ತೋರಿಸಿ ಹಿಂದೀ ಜನತೆಯ ಸಹಕಾರವನ್ನು ದೊರಕಿಸಲೆಳಸುವದು ಇಂದು ಅತ್ಯಂತ ವಿಷಾದಾಸ್ಪದ ಘಟನೆಯಾಗಿದೆ. ಬ್ರಿಟಿಷ ಸರಕಾರದ ಸಂಕುಚಿತ ಧೋರಣದ ಮೂಲಕವೇ ಇಂದು ಹಿಂದುಸ್ತಾನವು ೪೦ ಕೋಟಿ ಜನ ಸಂಖ್ಯೆಯಿದ್ದರೂ ಕೈಮುಚ್ಚಿಕೊಂಡು ತಣ್ಣಗೆ ಕುಳಿತುಕೊಳ್ಳಬೇಕಾಗಿದೆ. ವೈಸರಾಯರು ತಮ್ಮ ಅಗಷ್ಟ ಘೋಷಣೆಯ ಜನರ ಚಿತ್ತವನ್ನು ಎಳೆಯಲಿಲ್ಲೆಂದು ತಾವೇ ಅಪ್ರತ್ಯಕ್ಷವಾಗಿ ಒಪ್ಪಿಕೊಳ್ಳುತ್ತಾರೆ ಅಂದಬಳಿಕ ಅದರಲ್ಲಿರುವ ಲೋಪದೋಷಗಳನ್ನು ಕಂಡು ಹಿಡಿದು ಹಿಂದೀ ಜನತೆಯ ಚಿತ್ತವನ್ನು ಆಕರ್ಷಿಸುವಂತೆ ಅದರ ಸ್ವರೂಪದಲ್ಲಿ ಪಲ್ಲಟವನ್ನು ಮಾಡಲು ಪ್ರಯತ್ನಿಸುವದು ದೂರದೃಷ್ಟಿಯುಳ್ಳ ಮುತ್ಸದ್ದಿಗಳ ಮುಖ್ಯ ಕರ್ತವ್ಯವೆಂದು ಬೇರೆ ಹೇಳಲಿಕ್ಕೆಬೇಡ ವೈಸರಾಯರು ವ್ಯರ್ಥವಾಗಿ ಹಾಡಿದ ರಾಗವನ್ನೇ ಹಾಡುತ್ತಾ ದಾಡುತ್ತ ಕಾಲಹರಣ ಮಾಡದೆ ಹಿಂದೀ ಜನತೆಯ ಪ್ರತಿನಿಧಿಯಾದ ಕಾಂಗ್ರೆಸ್ಸು ಮಂಡಿಸಿದ ಬೇಡಿಕೆಗಳನ್ನು ಪೂರೈಸಿ ಅದರ ಸಹಕಾರವನ್ನು ಪಡೆಯಲು ಪ್ರಯತ್ನ ಮಾಡಿದ್ದರೆ. ಹೆಚ್ಚು ಸಮಂಜಸವಾಗುತ್ತಿತ್ತು. ಯುದ್ಧಾರಂಭವಾದ ಕೂಡಲೆ ಕಾಂಗ್ರೆಸ್ಸು ಈರೀತಿ ತನ್ನ ಸಹಕಾರದ ಕೈಯನ್ನು ನೀಡಿತು. ಆದರೆ ಅದನ್ನು ಧಿಕ್ಕರಿಸಿ ಬ್ರಿಟಿಷ ಸರಕಾರದ ಪ್ರತಿನಿಧಿಗಳಾದ ವೈಸರಾಯರೂ ಭಾರತ ಮಂತ್ರಿಗಳೂ ನಡೆದುದಲ್ಲದೆ ಹಿಂದೀಜನರನ್ನು ರೊಚ್ಚಿಗೆಬ್ಬಿಸುವ ಅಪಮಾನಕರ ಚುಚ್ಚುಮಾತುಗಳಿಂದ ಆತ್ಮಘಾತಕ ಧೋರಣವನ್ನು ಅನುಸರಿಸಿದುದರ ಪ್ರಾಯಶ್ಚಿತ್ತವನ್ನು ಅವರು ಇಂದು ಭೋಗಿಸಬೇಕಾಗಿದೆ. ವೈಸರಾಯರು ತಮ್ಮ ಕಾರ್ಯಕಾರೀ ಮಂಡಲವನ್ನು ಹಿಗ್ಗಿಸಿ ಜನರ ಮೇಲೆ ಮಹದುಪಕಾರವನ್ನು ಮಾಡಿದರಿಂದು ಅವರೂ ಅವರ ಬಗಲಗೂಸುಗಳೂ ಬಡಿವಾರ ಬಡಿಯುತ್ತವೆ. ಆದರೆ ಹುರುಳಿಲ್ಲದ ಈ ಹಿಗ್ಗಿನಿಂದ ಏನೂ ಉಪಯೋಗವಿಲ್ಲ ಕಾರ್ಯಕಾರೀ ಮಂಡಲದ ವಿಸ್ತಾರವು ಹಿಂದೀ ಜನತೆಯ ಬೇಡಿಕೆಯಲ್ಲಿ ಹಿಂದೀ ಜನತೆಗೆ ಬೇಕಾದುದು ಅಧಿಕಾರ ಪಲ್ಲಟ. ಹಿಂದೀ ಜನರ ಪ್ರತಿನಿಧಿಗಳ ಕೈಯಲ್ಲಿ ಕೇಂದ್ರ ಸರಕಾರದ ಎಲ್ಲ ಸೂತ್ರಗಳೂ ಬೇಕಾಗಿರುವವು. ಈ ಮಾತನ್ನು ಮರೆಮಾಜಿ ಇಲ್ಲುಬ ಸೋಗ ಲಾಡಿತನವನ್ನು ಮಾಡಿದರೆ ಅದರ ಹೊಣೆಯು ಹಿಂದೀ ಜನತೆಯ ಮೇಲೆ ಇಲ್ಲ. ಹಿಂದುಸ್ತಾನದ ಹೆಬ್ಬಾಗಿಲಿಗೆ ಯುದ್ಧವು ಬಂದಿದೆಯೆಂದು ಹೆದರಿಕೆಯನ್ನು ಹುಟ್ಟಿಸಿ ಜನರ ಸಹಕಾರವನ್ನು ಆವೇಕ್ಷಿಸುವದು ಎಂದೂ ಯೋಗ್ಯವಾಗುವದಿಲ್ಲ. ವೈಸರಾಯರು ಅವರ ಸೂತ್ರಧಾರಿಗಳೂ ತಮ್ಮ ಮನೋವೃತ್ತಿಯಲ್ಲಿ ಬದಲು ಮಾಡಿಕೊಂಡು ನಿಜವಾಗಿಯೂ ಹಿಂದೀಜನತೆಯ ಸಹಕಾರವನ್ನು ಬಯಸುತ್ತಿದ್ದರೆ ಅವರ ಆಕಾಂಕ್ಷೆಗಳನ್ನು ಪೂರೈಸಲು ಮುಂದೆ ಬರಬೇಕು.

ಕೇವಲ ಹಿಂದೀ ಸೈನಿಕರ ಶೌರ್ಯ ಪರಾಕ್ರಮಗಳ ಬುಬ್ಬುಣಾರಾದಿಂದ ಹಿಂದೀ ಜನತೆಯನ್ನು ಮೋಹಜಾಲದಲ್ಲಿ ಒಳಯುನವ ಎಂದಿಗೂ ಸಾಧ್ಯವಿಲ್ಲೆಂಬದನ್ನು ವೈಸರಾಯರು ಭಾರತಮಂತ್ರಿಗಳೂಚನ್ನಾಗಿ ತಿಳಿದುಕೊಂಡು ಹಳೆಯ ಮಾತುಗಳನ್ನೇ ಮತ್ತೆ ಮತ್ತೆ ಆಡದೆ ಹೊಸ ಪರಿಸ್ಥಿತಿಗನುಸರಿಸಿ ಹೊಸ ಯೋಜನೆಯನ್ನು ಹುಡುಕಿ ತೆಗೆಯುವದು ಸಾಮ್ರಾಜ್ಯಹಿತದ ದೃಷ್ಟಿಯಿಂದ ಅವಶ್ಯಕವಾಗಿತ್ತು ಆದರೆ ದುರ್ದೈವದಿಂದ ವೈಸರಾಯರು ಹಳೆಯ ಮಂತ್ರವನ್ನೇ ಪುನಃ ವಾರಾಯಣ ಮಾಡಿರುವದರಿಂದ ಅವರ ಮಾತುಗಳಿಂದ ದೇಶದ ಅತ್ಯಂತ ನಿರಾಶೆಯುಂಟಾಗಿದೆಯೆಂದು ಧಾರಾಳವಾಗಿ ಹೇಳಬಹುದು

ರಾಜಾಜಿಯವರು ಹೇಳಿದಂತೆ ಹಿಂದುಸ್ತಾನವು ಯುದ್ಧದ ಕಾರ್ಯೋಡಗಳ ಕೇವಲ ಪ್ರೇಕ್ಷಕನಾಗಿಲ್ಲವೆಂದು ವೈಸರಾಯರು ಹೇಳುವದು ನಿಷ್ಪ್ರಯೋಜಕವಾಗಿದೆ. ಬ್ರಿಟಿಷ ಸರಕಾರವ ಸಂಕುಚಿತ ಧೋರಣದ ಮೂಲಕ ನಾವು ಕೇವಲ ಪ್ರೇಕ್ಷಕರಾಗಬೇಕಾಗಿದೆ. ಇದರ ಸಂಪೂರ್ಣ ಹೊಣೆ ಸರಕಾರದ್ದು.

ವಿಜಾಪುರ

ಹೂಜೂರ ಮಾಮಲೇದಾರರಾದ ಶ್ರೀ. ಬಿ. ಬಿ. ಕುರಹಟ್ಟಿಯವರಿಗೆ ಪರಸಗಡಕ್ಕೆ ವರ್ಗವಾಗಿದ್ದು ಅಲ್ಲಿಂದ ಶ್ರೀ. ಜುವೆಕರ ಇವರು ಇಲ್ಲಿಗೆ ಬರತಕ್ಕವರಿರುವರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವದ ಆಂಗವಾಗಿ ನಡೆಯಲಿರುವ ವೃತ್ತಪತ್ರ ಹಾಗೂ ಪುಸ್ತಕಗಳ ಪ್ರದರ್ಶನದ ಉದ್ಘಾಟನೆಯು ಇಲ್ಲಿಯ ರಾ. ಬ. ಹಳಕಟ್ಟಿಯವರಿಂದ ಜರುಗುವದೆಂದು ತಿಳಿಯುತ್ತದೆ.

"ವಾರ"ದ ವಾರ

ತಾ. ೩೦-೧೧-೪೧ ನೇ ದಿನ್ನ ಕಲೇಕ್ಟರ ಬಂಗಲೆಯಲ್ಲಿ ಸಭೆ ಸೇರಿ 'ಯುದ್ಧದವಾರ, ದ ಬಗ್ಗೆ ಒಂದು ಸಮಿತಿಯು ಏರ್ಪಾಡಾಯಿತು ೧೯೪೨ರ ಫೆಬ್ರುವರಿ ಕೊನೆಯಲ್ಲಿ ಈ ಸಪ್ತಾಹವು ಆಚರಿಸಲ್ಪಡುವದೆಂದು ತಿಳಿಯುತ್ತದೆ.

ಶ್ರೀ ಸಿದ್ಧೇಶ್ವರ ಜಾತ್ರೆ

ಪ್ರತಿವರ್ಷದಂತೆ ಮಕರಸಂಕ್ರಮಣ ಕಾಲಕ್ಕೆ ಶ್ರೀ. ಸಿದ್ಧರಾಮೇಶ್ವರ ಜಾತ್ರೆಯು ಈ ವರ್ಷವೂ ಜರುಗುವದು. ಎಲ್ಲ ವ್ಯವಸ್ಥೆಗಳೂ ನಡೆದಿವೆ. ಒಕ್ಕಲತನ ಹಾಗೂ ದನಗಳ ಪ್ರದರ್ಶನಗಳೂ ನಡೆಯುನಡೆಯುವವು.

ಸದ್ಯದ ಭಾರತದ ತೊಡಕು.

ವಿಚಾರಪೂರ್ಣ ಭಾಷಣ

ನಿನ್ನಿನ ದಿವಸ ತಾ ೧೯-೧೨-೪೧ನೇ ದಿನ ವಿಜಾಪುರ ಯುನಿಯನ್ ಕ್ಲಬ್ಬಿನಲ್ಲಿ ಶ್ರೀ ಎಲ್ ವ್ಹಿ. ನಾಯಕರ ಅಧ್ಯಕ್ಷತೆಯಲ್ಲಿ ಕಾಂಗ್ರೆಸಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಬ್ಯಾ.ಪುರುಷೋತ್ತಮದಾಸರು ವಿಚಾರ ಪರಿಪ್ಲುತ ಭಾಷಣ ಮಾಡಿ ಭಾರತದ ಸದ್ಯದ ತೊಡಕಿನ ಪರಿಸ್ಥಿತಿಯನ್ನು ಪರಾಂಬರಿಸಿದರು ಈ ತೊಡಕನ್ನು ಬಿಡಿಸಲು ಅನೇಕರು ಪ್ರಯತ್ನ ಮಾಡುತ್ತಿರುವರು ಕಾಂವ ಕಮೀಟಿಯು ಇಷ್ಟರಲ್ಲಿಯೇ ಕೂಡಲಿದ್ದು ಕಾಂಗ್ರೆಸ್ಸಿನ ಧೋರಣೆಯು ಹೊರಬೀಳುವದು ಆದರೆ ಒಂದು ಸಮಯ ಮಹಾತ್ಮರು ಸತ್ಯಾಗ್ರಹವನ್ನು ಹಾಗೆಯೇ ಸಾಗಿಸಿದರೂ ಇನ್ನು ಕೆಲವು ವಿಧಾಯಕ ಕಾರ್ಯಗಳನ್ನು ಮಾಡಬೇಕೆಂದೂ ಮುಂದೆ ಸ್ವರಾಜ್ಯ ದೊರೆತರೆ ನಮ್ಮಷ್ಟಕ್ಕೆ ನಾವೇ ರಕ್ಷಣೆ ಮಾಡಿಕೊಳ್ಳುವ ಯೋಜನೆಗಳನ್ನು ಮಾಡಬೇಕೆಂದೂ ಮುಂತಾಗಿ ಕೆಲ ಸೂಚನೆಗಳನ್ನು ಮಾಡಿ ತಮ್ಮ ಬಾಷಣ ಮುಗಿಸಿದರು. ಕೊನೆಗೆ ಬ್ಯಾ.ಅಂಕಲಿಕರರು ಅತಿಥಿಗಳಹಾಗೂ ಎಲ್ಲರ ಆಭಾರ ಮನ್ನಿಸಿದ ನಂತರ ಸಭೆ ಕೊನೆಗಂಡಿತು

ಶಿಂದಗಿ ತಾಲ್ಲೂಕದ ರೈತರ ಸಭೆ (ಹಿಪ್ಪರಗಿಯಲ್ಲಿ)

ನಮ್ಮ ತಾಲೂಕದಲ್ಲಿ ಈ ವರ್ಷವಾದರೂ ಮಳೆಯ ಅಭಾವದ ಮೂಲಕ ಬೆಳೆಗಳು ಬರುವಂತೆ ಕಾಣುವದಿಲ್ಲ. ಹೋದ ವರ್ಷದಿಂದ ದುಷ್ಕಾಳ ಪೀಡಿತರಾದ ರೈತರ ಕೂಲಿಕಾರರ ಚಿಂತಾಜನಕ ಪರಿಸ್ಥಿತಿ ಬಗ್ಗೆ ವಿಚಾರ ಮಾಡಿ ಸರಕಾರಕ್ಕೆ ತಿಳಿಸುವದು ಜರೂರಿ ಆದೆ. ಆದಕ್ಕಾಗಿ ತಾ.೨೯-೧೨-೪೧ ಸೋಮವಾರ ಮಧ್ಯಾನ್ನ ೩ಗಂಟೆಗೆ ಶ್ರೀಮಾನ್ ಗುರುಪಾದಪ್ಪ ಸಜ್ಜನ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ಕೂಡುವದು. ಶ್ರೀ. ಬ್ಯಾರಿಸ್ಟರ ಆಂಕಲಿಕೆರರು ಶ್ರೀ. ಆಂಬಲಿಯವರು ಬರುವರು. ಆದ್ದರಿಂದ ನಿಮ್ಮ ಸುತ್ತಲಿನ ಹಳ್ಳಿಗಳ ಆಣೆವಾರಿ ಬಗ್ಗೆ ಪಕ್ಕಾ ಮಾಹಿತಿ ತಿಳಿಕೊಂಡು ಬರಬೇಕಾಗಿ ಬಿನ್ನಹ.

ಹಿಪ್ಪರಗಿ ಕ. ಶಿ. ದೇವೂರ ಬಿ. ಎಸ್ ೩೦-೧೨-೪೧ ಶಂಕರಗೌಡ ಪಡಗಾನೂರ
ಕಾರ್ಯದರ್ಶಿಗಳು

ಕರ್ನಾಟಕ ಪ್ರಾಂತಿಕ ಸ್ಕೂಲಬೋರ್ಡಗಳ ಸಭೆ.

ಬೆಳಗಾವಿಯಲ್ಲಿ ಜರುಗಿದ ಕರ್ನಾಟಕ ಸ್ಕೂಲಬೋರ್ಡಗಳ ಪರಿಷತ್ತಿನಲ್ಲಿ ಒಟ್ಟು ೧೧ ಠರಾವುಗಳು ಪಾಸಾದವು. ಮೊದಲನೆ ರಾವಿನನ್ವಯ ಬೆಳಗಾವಿ ನೆಕೆಂಡರಿ ಟೀಚರ್ಸ ಕಾಲೇಜಿನ ವಿದ್ಯಾರ್ಥಿಗಳಿಂದ ಧಾರವಾಡ, ವಿಜಾಪುರ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿ ಕೈಕೊಳ್ಳಲಾದ ಶಿಕ್ಷಣ ಪ್ರಸಾರ ವದ್ಧತಿಯ ನಿರೀಕ್ಷೆಯನ್ನು ಅಭಿನಂದಿಸಿ ಅವರಿಗೆ ತಕ್ಕ ಸಹಾಯವನ್ನು ನೀಡಲು ಶ್ರೀಗಳಾದ ಎ।ಬಿ. ಮಿರಾರ ಜಿ. ವಿ. ಜೋರಾಪುರ ಕೆ. ಎಫ್ ಪಾಟೀಲ್ಕುಜ್ಜಿ ಎಂ ಶುದ್ದಿನ ಜೆ. ವಿ ನಾಯಕ ಮತ್ತು ವ್ಹಿ. ಆರ್ ಮುಧೋಳಕರ (ಸಭಾವಾಹಕ) ರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ಅಲ್ಲದೆ ದಕ್ಷಿಣ ಭಾಗದ ಎಲ್ಲ ಮುನಸಿಪಾಲಿಟಿ ಮತ್ತು ಲೋಕಲ್ ಬೋರ್ಡುಗಳು ಈ ಯೋಜನೆಯ ವೆಚ್ಚಕ್ಕೆ ತಕ್ಕ ಸಹಾಯವನ್ನು ನೀಡಿ ಅದನ್ನು ಯಶಸ್ವಿ ಮಾಡುವಂತೆ ಕೇಳಲಾಯಿತು

ಟರ್ಕಿಯಲ್ಲಿ ಸೈನ್ಯದ ಕೆಲಸ

ಟರ್ಕಿಯಲ್ಲಿ ಪ್ರತಿಯೊಬ್ಬರು ಮಾಡಬೇಕಾಗಿರುವ ಸೈನ್ಯದ ಕೆಲಸವನ್ನು ೧೮ ತಿಂಗಳಿಂದ ಮೂರು ವರ್ಷಗಳ ವರೆಗೆ ಹೆಚ್ಚಿಸಲಾಗುವದು.

ಮುಂಬಯಿ ಇಲಾಖಾ ಪ್ರಾಥಮಿಕ ಶಿಕ್ಷಕರ ಪರಿಷತ್ತು ಪುಣೆ.

ಮುಂ ಇ.ಪ್ರಾ ಶಿಕ್ಷಕರ ಪರಿಷತ್ತು ತಾ. ೧೪ನೆ ದಿನದುಧ್ಯಾಹ್ನ ದಗಂಗೆಗೆ ಗೋಖಲೆ ಹಾಲದಲ್ಲಿ ಡಾ. ಗ. ಶ್ರೀ. ಖೈರ ಇವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಪರಿಷತ್ತಿಗೆ ಸುಮಾರು ೫೦೦ ಶಿಕ್ಷಕ ಶಿಕ್ಷಕಿಯರು ಉಪಸ್ಥಿತರಾಗಿದ್ದರು. ಈಶಸ್ತವನ ಸ್ವಾಗತ ಪರ ಪದ್ಯಗಳಾದನಂತರ ಸ್ವಾಗತಾಧ್ಯಕ್ಷ ರಾದ ಶ್ರೀ. ಕಾ. ನಾ. ಮೋರೆ (ಸಾಸ್ವಡ) ಇವರ ಸ್ವಾಗತಪರ ಭಾಷಣವಾಯಿತು ನಂತರ ಖೈರ ಇವರ ಭಾಷಣವಾಯಿತು.

ಪರಿಷತ್ತಿನಲ್ಲಿ ಪಾಸಾದ ಗೊತ್ತುವಳಿಗಳು

(೧) ಸರಕಾರದ ಠರಾವ ನಂ. ೫೬೦, ೨೪-೩--೨೪; ಎಸ್ ೭೨, ೧೨-೭-೪೯; ಎಸ್ ೭೨, ೧೧-೯-೪೧ ಈರೀತಿಯ ವಿವಿಧ ಬಗೆಯ ಸ್ಕೇಲುಗಳನ್ನು ಸರಕಾರದವರು ಪ್ರಾ. ಶಿಕ್ಷಕರ ಸಲುವಾಗಿ ಮಾಡಿ ಪ್ರಾ. ಶಿಕ್ಷಕರಲ್ಲಿ ಅಸಂತೋಷವನ್ನು ಉಂಟು ಮಾಡಿದ್ದಾರೆ. ಈ ಸ್ಕೇಲಿನ ಬಗ್ಗೆ ಇಲಾಖೆಯೊಳಗಿನ ಎಲ್ಲ ಪ್ರಾ. ಶಿಕ್ಷಕರ ಈ ಪರಿಷತ್ತು ತಮ್ಮ ತೀವ್ರ ನಿಷೇಧವನ್ನು ವ್ಯಕ್ತ ಮಾಡುತ್ತದೆ.

(೨) (ಅ) ಸರಕಾರವು ಶಿಕ್ಷಕರಲ್ಲಿ ಹಳಬರು, ಹೊಸಬರು ಎಂಬ ಯಾವತರದ ಭೇದ ಭಾವವನ್ನು ಮಾಡದೆ ಎಲ್ಲ ಶಿಕ್ಷಕರ ಸಲುವಾಗಿ ಕೆಳಗಿನಂತೆ ಸ್ಕೇಲನ್ನು ಮಾಡಿ ತೀವ್ರವೇ ಅಮಲಿನಲ್ಲಿ ತರಬೇಕೆಂದು ಈ ಸಭೆಯು ಬಿನ್ನವಿಸುತ್ತದೆ.

೩ನೇವರ್ಷ ರೂ ೪೦ ರಿಂದ ೪೦
೭ ನೇವರ್ಷ ಹಾಗೂ ಗ್ರಾರ್ಜ್ ರಿಂದ ಟ್ರೇಂಡರಾದ ವರಿಗೆ } ರೂ. ೩೫ ರಿಂದ ೭೦
೧೫ನೇವರ್ಷ ರೂ. ೫೦ ರಿಂದ ೫೦
ಅನ್‌ಟ್ರೇಂಡ ಹಾಗೂ ಅನ್‌ಪಾಸ } ರೂ. ೨೫ ರಿಂದ ೪೦

ಇದಲ್ಲದೆ ಲೋಕಲ್ ಅಧಾರಿಟಿಯವರು ಶಹರ ಅಲಾವುನ್ನನ್ನು ಕೊಡಬೇಕು.

(ಬ) ಇದೇ ಸ್ಕೇಲನ್ನು ಪ್ರಾಥಮಿಕ ಏಡೆಡ್ ಸ್ಕೂಲಿನ ಶಿಕ್ಷಕರಿಗೆ ಕೊಡುವ ಹಾಗೆ ಆ ಆ ಶಾಲೆಗಳ ಅಧಿಕಾರಿಗಳಿಗೆ ಸರಕಾರವು ಒತ್ತಾಯ ಪಡಿಸಬೇಕು.

(೩) ಈಗ ಪ್ರಚಾರದಲ್ಲಿ ಇದ್ದ ವಿವಿಧ ಸ್ಕೇಲುಗಳ ಬಗ್ಗೆ ಪ್ರಾ. ಶಿಕ್ಷಕರಲ್ಲಿ ಉಂಟಾದ ಅಸಂತೋಷವು ಜನತೆ ಹಾಗೂ ಸರಕಾರದ ನಿದರ್ಶನಕ್ಕೆ ತರುವ ಸಲುವಾಗಿ ಈ ಪರಿಷತ್ತು ಎಲ್ಲ ಪ್ರಾ. ಶಿಕ್ಷಕರಿಗೂ ವಿನಂತಿ ಮಾಡಿಕೊಳ್ಳುವದೇನಂದರೆ— ತಾ ೧೫-೪-೪೨ನೆಯ ಬಾಲದಿನಕ್ಕೆ ಅಸಹಕಾರ ಮಾಡಿ ಆ ದಿವಸ ಸಾಮುದಾಯಿಕ ಉಪೋಷಣೆಯನ್ನು ಆಚರಿಸಬೇಕು. ಬೇರೆ ಮಾರ್ಗಗಳನ್ನವಲಂಬಿಸುವುದಾದರೆ ಸಮಿತಿಯವರ ಆಲೋಚನೆಯನ್ನು ಕೇಳಬೇಕು.

ಭರತಖಂಡ.

— ದಿಲ್ಲಿಯಲ್ಲಿ ತಾ ೧೪ ರಿಂದ ಯುದ್ಧ ಸಪ್ತಾಹ ಪ್ರಾರಂಭವಾಗಿದೆ. ಸಂರಕ್ಷಣೆ ಖಾತೆಯು ಒಂದು ಸ್ಪೇಶಲ್ ಟ್ರೇನ ಬಂದಿರುವದು. ಅನೇಕ ವಿಮಾನಗಳು ಹಾರಾಡುತ್ತ ಕರ ಪತ್ರಗಳನ್ನು ಚಲ್ಲಿದವು.

— ಎ. ಆಯ್ ಸಿ ಸಿ ಸಭೆಯು ಜನೇವರಿ ಮೊದಲನೇ ವಾರದಲ್ಲಿಯೇ ಬಾಡೋಲಿಯಲ್ಲಿ ಸೇರಬಹುದೆಂದು ತಿಳಿದು ಬರುತ್ತದೆ.

— ಇಂಗ್ಲೆಂಡದ ಮೇಲೆ ಜಪಾನವು ಬುದ್ಧಿಪೂರ್ವಕ ದಾಳಿ ಮಾಡಿದ್ದರ ನಿಷೇಧಾರ್ಥವಾಗಿ ಡಾ. ಜೆ. ಎಚ್. ಕಜನ್ಸರು ಜಪಾನದಿಂದ ದೊರೆತ ಡಿ ಲಿಟ್ ಪದವಿ ಬಿಟ್ಟುಬಿಟ್ಟಿರುವರು.

— ಸರಹದ್ದ ಪ್ರಾಂತದ ಗವ್ಹರ್ನರರು ಜಾಮರೂಡ ಎಂಬಲ್ಲಿ ಭಾಷಣ ಮಾಡುವಾಗ್ಗೆ ಹಿಂದೀ ಭೂಮಲದಲ್ಲಿ ಆರ್ಯೀಧರ್ಮ ವಂಗಡದವರನ್ನು ಸೇರಿಸಿಕೊಳ್ಳಲು ಸರಕಾರದವರು ನಿರ್ಧರಿಸಿದ್ದಾರೆಂದು ಸಾರಿದರು.

— ಲಾಹೋರದ ವಿಧವಾ ವಿವಾಹ ಸಹಾಯಕ ಸಂಘದವರು ಈ ಸಲದ ವಿಧವಾ ವಿವಾಹ ಪರಿಷತ್ತನ್ನು ಡಿಸೆಂಬರ ೨೯ನೇ ತಾರೀಖಿಗೆ ಮಂಜ್ರಾಸದಲ್ಲಿ ಜರುಗಿಸಲು ನಿಶ್ಚಯಿಸಿದ್ದಾರೆ.

— ಹಿಂದುಸ್ತಾನಿ ಶಿಕ್ಷಕ ಸನ್ಯದ ಪರೀಕ್ಷೆ ನಡೆಸುವದಕ್ಕೆ ಸಂಬಂಧಿಸಿದ ಕಾರ್ಯಗಳೆಲ್ಲ ಇನ್ನು ಮುಂದೆ ಶಿಕ್ಷಣ ಖಾತೆಯಿಂದ ಸಾಗತಕ್ಕದ್ದಾಗಿ ಮುಂಬೈ ಸರಕಾರದವರು ನಿರ್ಧರಿಸಿ ಮುಂಬೈ ಎಜ್ಯುಕೇಶನಲ್ ಇನಸ್ಪೆಕ್ಟರರಿಗೆ ಒಪ್ಪಿಸಿದ್ದಾರೆ.

— ಅಖಿಲಭಾರತೀಯ ಬಾಲಕ ಸಂಸ್ಥೆಯ ಪರಿಷತ್ತು ಕರಾಚಿಯಲ್ಲಿ ತಾ ೨೬, ೨೭ ದಿನಗಳಲ್ಲಿ ಸೌ ಹಂಸಾಮೆಹತಾ ಇವರ ಅಧ್ಯಕ್ಷತೆಯಲ್ಲಿ ಸೇರತಕ್ಕದ್ದಿದೆ.

ಕರ್ನಾಟಕ

ಬೆಳಗಾವಿ

—ಬೆಳಗಾವ ಜಿ ಕಾ. ಕಾರ್ಯಕರ್ತರ ಸಭೆಯು ೧೧ನೇ ತಾರೀಖಿನ ದಿನ ಕೂಡಿತ್ತು. ಆ ಸಭೆಯಲ್ಲಿ, ಜಿಲ್ಲೆಯಲ್ಲಿ ಎಲ್ಲ

---

(೪) ಇಲಾಖಾ ಶಿಕ್ಷಕ ಸಂಘದ ಕಾರ್ಯಕರ್ತರ ವಿಚಾರ ವಿನಿಮಯದ ಪ್ರಕಾರ ಇಲಾಖಾ ಸಂಘದ ಸದ್ಯದ ಘಟನೆಯಲ್ಲಿ ಇಷ್ಟವಾದ ಮತ್ತು ಯೋಗ್ಯವಾದ ಬದಲಾವಣೆಗಳನ್ನು ಮಾಡುವದು ಅವಶ್ಯವೆನಿಸಿದೆ ಮತ್ತು ಈ ಪರಿಷತ್ತಿನಲ್ಲಿ ಪಾಸಾದ ಗೊತ್ತುವಳಿಗಳನ್ನು ಯೋಗ್ಯರೀತಿಯಿಂದ ಇಲಾಖಾ ಶಿಕ್ಷಕ ಸಂಘದ ಸಹಕಾರ್ಯದಿಂದ ಡೆಪ್ಯುಟೇಶನ್ ಮೊದಲಾದ ರೀತಿಯಿಂದ ಅಮಲಿನಲ್ಲಿ ತರುವದಕ್ಕಾಗಿ ೧೩ ಜನರ ಸಮಿತಿಯನ್ನು ನಿಯಮಿಸಲಾಗಿದೆ.

ಕೊನೆಗೆ ಆಭಾರ ಪ್ರದರ್ಶನ, ರಾಷ್ಟ್ರ ಗೀತೆಯಾದ ನಂತರ ಪರಿಷತ್ತಿನ ಕಾರ್ಯವು ಕೊನೆಗೊಂಡಿತು

ರೂ ಕೂಡಿ ತಿಂಗಳಲ್ಲಿ ೨೦ನೆವರಿ ಕಾಂ. ಸಭಾಸದರನ್ನು ಮಾಡಬೇಕೆಂದೂ, ಜಿಲ್ಲೆಯಲ್ಲಿ ಬರಗಾಲದ ಲಕ್ಷಣ ತೋರುತ್ತಿದ್ದ ದರಿಂದ ಮಾಹಿತಿ ತರಿಸಿ ಯೋಗ್ಯ ಆಣೆ ವಾರಿ ಆಗುವಂತೆ ಪ್ರಯತ್ನಿಸಬೇಕೆಂದೂ, ವಿಧಾಯಕ ಕಾರ್ಯಕರ್ತರ ಕೆಲಸದ ಮಹತ್ವವನ್ನು ಪ್ರತ್ಯೇಕ್ಷ ಕಾರ್ಯದಿಂದ ತಿಳಿಸಬೇಕೆಂದೂ ಇನ್ನೇ ಮೊದಲಾದ ಕೆಲ ನಿರ್ಣಯಗಳಾದವು.

—ವಿಮಾನದಾಳಿಯ ಪ್ರಸಂಗವನ್ನೆದುರಿಸಲು ಬೆಳಗಾವಿಯಲ್ಲಿ ಸ್ತ್ರೀ-ಪುರುಷರು ಸೇರಿ ಒಟ್ಟು ೨೦೦ ವಾರ್ಡನರು ತಯಾರಿ ಮಾಡಲ್ಪಟ್ಟಿರುವರು

ಧಾರವಾಡ

— ಕರ್ನಾಟಕ ವಿದ್ಯಾವರ್ಧಕ ಸಂಘದ ಸುವರ್ಣ ಮಹೋತ್ಸವವು ಇದೇ ೨೪, ೨೫ನೇ ತಾರೀಖುಗಳಲ್ಲಿ ಜರಗುವದು ಆ ದೇ ಸಮಯಕ್ಕೆ ಅಂಗವಾಗಿ "ಪತ್ರಿಕಾಪ್ರದರ್ಶನ"ವನ್ನು ಏರ್ಪಡಿಸಲಾಗಿದೆ.

— ಪಂಪಕವಿಯ ಸಾವಿರ ವರ್ಷದ ಉತ್ಸವಕ್ಕೆ ಕರ್ನಾಟಕದ ಎಲ್ಲ ಭಾಗಗಳಿಂದ ಮಹಾಜನರು ಬಂದು ಉತ್ಸವವನ್ನು ಯಶಸ್ವಿಯಾಗಿ ಮಾಡಬೇಕೆಂದು ಕಾರ್ಯದರ್ಶಿಗಳು ಬಿನ್ನವಿಸುತ್ತಾರೆ.

— ಬ್ಯಾ. ಜಯಕರರು ಬಲಭೀಮ ವ್ಯಾಯಾಮ ಶಾಲೆಗೆ ಸಂದರ್ಶನವಿತ್ತು ೫೦ ರೂ. ಧನ ಸಹಾಯ ಮಾಡಿದ್ದಾರೆ.

— ಶ್ರೀಜಗದ್ಗುರು ಮುರುಘರಾಜೇಂದ್ರ ಫ್ರೀ ಬೋರ್ಡಿಂಗದ ಬೆಳ್ಳಿ ಹಬ್ಬವನ್ನು ತಾ ೧೯-೧೨-೪೨ ಕ್ಕೆ ಶ್ರೀ. ಡಿ. ಎಚ್. ಚಂದ್ರಶೇಖರಯ್ಯನವರಿಂದ ಜರುಗಿಸಬೇಕೆಂದು ಗೂತ್ತು ಮಾಡಿರುವರೆಂದು ಶ್ರೀ. ಕವದಿಯವರು ತಿಳಿಸುತ್ತಾರೆ.

ಹಿಂದುಸ್ತಾನದ ಮೇಲೆ ದಾಳಿಯ ಸಂಭವವಿಲ್ಲ.

ಜ. ನಾವೆಲರ ಭಾಷಣ.

ಪತ್ರಿಕಾಕರ್ತರ ಸಂಮೇಲನದಲ್ಲಿ ಭಾಷಣ ಮಾಡುತ್ತ ಹಿಂದುಸ್ತಾನದ ಮುಖ್ಯ ಸೇನಾಪತಿಗಳಾದ ಜ. ನೆವೆಲ್ಲರು ಈರೀತಿ ಹೇಳಿದರು.

"೧೯೪೨ನೇ ಇಸ್ವಿಯು ನಮಗೆ ಕಠಿಣವಾಗಬಹುದು. ಆದರೆ ಅಚ್ಚಿನ ರಾಷ್ಟ್ರಗಳ ವಿರುದ್ಧ ಸಂ ಅಮೇರಿಕ ಬ್ರಿಟಿಶ ಸಾಮ್ರಾಜ್ಯ ರಶಿಯಾ ಮತ್ತು ಚೀನರಾಷ್ಟ್ರಗಳು ಗಟ್ಟಿಮುಟ್ಟಾಗಿ ನಿಶ್ಚಯಿಸದ ಹೊರತು ಗತ್ಯಂತರವಿಲ್ಲ. ಕೊನೆಗೆ ನಮಗೇ ಜಯವಾಗುವದು ಸದ್ಯದಲ್ಲಿ ಯುದ್ಧದ ಪರಿಸ್ಥಿತಿಯು ತುಸು ಚಿಂತಾಜನಕವಿದೆ ವೈರಿಗಳು ವಿಶ್ವಾಸಘಾತದಿಂದ ಹಲ್ಲೆಮಾಡಿದ್ದರಿಂದಅಲ್ಪಲಾಭವಾಗಿದ್ದು ನಿಜ ಆದರೆ ಅಷ್ಟರಿಂದಲೇ ವೈರಿಗಳು ಮಲಯಾದಲ್ಲಿ ದಾಳಿ ಮಾಡಲು ಬರಲಾರದು ಅಥವಾ ಸಿಂಗಾಪುರವನ್ನು ತೆಗೆದುಕೊಳ್ಳಲು ಬರುವದಿಲ್ಲ ಜಪಾನಿಗಳ ಸೈನ್ಯವಾದರೂ ಬಹಳವಾಗಿ ನಾಶ ಹೊಂದಿದೆ. ಪೂರ್ವದಲ್ಲಿ ವೈರಿಗಳ ಪ್ರಗತಿಯು ಅತ್ಯಲ್ಪವಾಗಿದೆ "

ಹಾಗೆಯೇ ಅವರು ಮತ್ತು ಹೇಳ್ದೇನಂದರೆ—

ಹಿಂದುಸ್ತಾನದ ಈಶಾನ್ಯಭಾಗದಲ್ಲಿ ಕೆಲವೊಂದು ಭಾಗವು ಮಾತ್ರ ಜಪಾನಿಗಳ ಬಾಂಬಿನ ಗುರಿಯಲ್ಲಿರುತ್ತದೆಂದೂ ಹಿಂದುಸ್ತಾನದ ಮೇಲೆ ದೊಡ್ಡ ಪ್ರಮಾಣದ ಮೇಲೆ ದಾಳಿಯಾದೀತೆಂದು ನನಗನಿಸುವ ದಿಲ್ಲ ಆದರೂ ನಮ್ಮ ಬಲವನ್ನು ಭದ್ರ ಪಡಿಸಿಕೊಳ್ಳಲು ಸಾಧ್ಯವಿದ್ದ ಉಪಾಯ ಕೈಕೊಳ್ಳಲಾಗಿದೆ. ಸದ್ಯಕ್ಕೆ ಗಾಬರಿಗೊಳ್ಳುವ ಕಾರಣವಿಲ್ಲವೆಂದು ಹೇಳಿದರು

ಆಕಾಶ ಹಾಗು ಭೂಮಾರ್ಗದಿಂದ

ಜಪಾನಿಗಳ ಪ್ರಚಂಡ ದಾಳಿ

ಜಪಾನಿ ಸೈನಿಕರು ಹಾಂಗಕಾಂಗ ದ್ವೀಪದ ಮೇಲೆ ಆಕಾಶ ಹಾಗೂ ಭೂಮಿಯಿಂದ ಗುಂಡುಗಳ ಭಯಂಕರ ಸುರಿಮಳೆ ನಡಿಸಿರುವರೆಂದು ಲಂಡನಕ್ಕೆ ಸುದ್ದಿ ಬಂದಿದೆ.

ಹಾಂಗಕಾಂಗ ಕೋಟೆಯಲ್ಲಿಯ ತೋಪುಗಾರರು ತೋಪಿನಿಂದ ದಾಳಿಯನ್ನು ಎದುರಿಸುತ್ತಿರುವರಲ್ಲದೆ ಸೈನಿಕರೂ ನಿಕರದಿಂದ ಹೋರಾಡುತ್ತಿರುವರು.

ಸಾರವಾಕದಲ್ಲಿ ಜಪಾನಿಗಳು ಬ್ರಿಯೆನಿ ಎಣ್ಣೆ ಕಣಿಗಳನ್ನು ವಶಪಡಿಸಿಕೊಂಡಿದ್ದಾರೆ. ಆದರೆ ಅವರು ಬರುವ ಮೊದಲು ಪ್ರದೇಶವನ್ನೆಲ್ಲ ಸುಟ್ಟುಬಿಡಲಾಗಿತ್ತು. ಜಪಾನಿಗಳು ಮಿರಿ ಹಾಗು ಲುಬಾಂಗದಲ್ಲಿಯೂ ಇಳಿದಿರುವರು.

ಇದರಂತೆ ಚೀನಿ ಸೈನಿಕರೂ ಕ್ಯಾಂಟನ್ ಭಾಗದಲ್ಲಿ ತಮ್ಮ ಪ್ರತಿದಾಳಿ ಜೋರು ಮಾಡಿರುವರು. ಕ್ವೊಲೂನ ಭಾಗದಲ್ಲಿರುವ ಜಪಾನಿಗಳ ಸಹಾಯಕ್ಕೆ ಮತ್ತೆ ಕೆಲವು ಸೈನಿಕರು ಬಂದಿದ್ದಾರೆ.

ದಿಲ್ಲಿಗೇ ಸುದ್ದಿ ಬಂದಿಲ್ಲ!

ರಂಗೂನದ ಮೇಲೆ ದಾಳಿ

ಜಪಾನಿ ವಿಮಾನಗಳು ರಂಗೂನದ ಮೇಲೆ ದಾಳಿ ಮಾಡಿದನೆಂದು ಟೋಕಿಯೋ ರೇಡಿಯೋದಲ್ಲಿ ಹೇಳಲಾಯಿತು. ಆದರೆ ದಿಲ್ಲಿಗೆ ಮಾತ್ರ ಈ ಸುದ್ದಿ ಬಂದಿಲ್ಲ. ಎರಡು ದಿನಗಳ ಹಿಂದೆ ರಂಗೂನದಲ್ಲಿ ವಿಮಾನ ದಾಳಿಯ ಎಚ್ಚರಿಕೆ ಕೊಡಲಾಯಿತೆಂದೂ ಆದರೆ ವೈರಿ ವಿಮಾನಗಳು ಬರಲಿಲ್ಲವೆಂದೂ ಸುದ್ದಿ ಬಂದಿತ್ತು.

ಉತ್ತರ ಮಲಾಯಾದಲ್ಲಿ ಜಪಾನಿ ವಿಮಾನಗಳ ನಾಶ.

ಉತ್ತರ ಮಲಾಯಾದಲ್ಲಿ ಜಪಾನಿಗಳು ಒಬ್ಬಂಟಿಗ ಟ್ಯಾಂಕುಗಳನ್ನು ಉಪಯೋಗಿಸುತ್ತಿರುವದು ತಿಳಿದು ಬಂದಿದೆ. ಕಳೆದ ಶನಿವಾರದಿಂದ ಈ ವರೆಗೆ ವೈರಿಗಳ ೧೭ ವಿಮಾನಗಳು ನೆಲಕ್ಕುರುಳಿಸಲ್ಪಟ್ಟಿರುವವಲ್ಲದೆ ಬೇರೆ ೫ ವಿಮಾನಗಳು ಉಪಯೋಗಕ್ಕೆ ಬರದಂತೆ ಮಾಡಲ್ಪಟ್ಟವೆ.

ಕಳೆದ ಒಂದು ವಾರದಿಂದ ಅವಿಶ್ರಾಂತ ಹೋರಾಟ ನಡಿಸಿರುವ ಸೈನಿಕರಿಗೆ ವಿಶ್ರಾಂತಿ ಕೊಡಲು ಕೆದ್ದಾ ರಣಭೂಮಿಗೆ ಮತ್ತೆ ಕೆಲವು ಸೈನಿಕರು ಕಳಸಲ್ಪಟ್ಟಿದ್ದಾರೆ. ಜಪಾನಿ ಯಾಂತ್ರಿಕ ಸೈನಿಕರು ಪೆನಾಂಗದ ಉತ್ತರ ತುದಿಯ ೧೦ ಮೈಲಿನ ಸಮೀಪಕ್ಕೆ ಬಂದಿದ್ದು ಅವರನ್ನು ಅಲ್ಲಿ ತಡೆಯುವ ಪ್ರಯತ್ನ ನಡೆದಿದೆ.

ಭಾರತಮಂತ್ರಿಗಳ ಅದೇ ಉತ್ತರ

ಕಳೆದ ಶುಕ್ರವಾರ ಕಾಮನ್ಸ ಸಭೆಯ ಅಧಿವೇಶನದಲ್ಲಿ ಭಾರತದ ಪರಿಸ್ಥಿತಿಯ ವಿಷಯವಾಗಿ ಪ್ರಶ್ನೋತ್ತರಗಳಾದವು ಸರಕಾರದ ಪರವಾಗಿ ಭಾರತ ಮಂತ್ರಿಗಳು ಸ್ಪಷ್ಟೀಕರಣ ಮಾಡುತ್ತ ಈ ರೀತಿ ಹೇಳಿದರು

"ರಾಜಕೀಯ ಕೈದಿಗಳ ಬಿಡುಗಡೆಯು ಕರಾರು ರಹಿತವಾದದ್ದು, ಆದರೆ ಅದರಿಂದ ಹಿಂದುಸ್ತಾನದ ಘಟನಾತ್ಮಕ ಪ್ರಗತಿಯ ವಿಷಯವಾಗಿ ಸರಕಾರವು ಪ್ರಸಿದ್ಧ ಪಡಿಸಿದ ಧೋರಣೆಯಲ್ಲಿ ಯಾವ ಬದಲಾವಣೆಯೂ ಇಲ್ಲ. ಪೂರ್ವಾಂತ್ಯದ ಪರಿಸ್ಥಿತಿಗನುಸರಿಸಿ ಹಿಂದುಸ್ತಾನದಲ್ಲಿ ಯುದ್ಧ ಕಾರ್ಯವು ತತ್ಪರತೆಯಿಂದ ಸಾಗುವದಕ್ಕಾಗಿ ವೈಸರಾಯರು ಅವಶ್ಯವಿದ್ಧ ಪ್ರಯತ್ನ ಮಾಡಿಯೇ ಮಾಡುವರು"

ಕಳೆದ ವಾರ ಲಂಡನದಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ "ಸರಕಾರವು ಕಾಂಗ್ರೆಸಿನೊಡನೆ ಮಾತುಕತೆ ನಡಿಸಿ ಹಿಂದುಸ್ತಾನದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು ಮತ್ತು ಭಾರತೀಯ ಹೈತ್ಪೂರ್ವಕ ಸಹಾಯ ಸಹಕಾರವನ್ನು ಪಡೆಯಬೇಕು" ಎಂಬಾಶಯದ ಒಂದು ಗೊತ್ತುವಳಿಯು ಪಾಸುಮಾಡಲ್ಪಟ್ಟಿತು. ಪಾರ್ಲಮೆಂಟದ ಕೂಲಿಕಾರಪಕ್ಷದ ಸದಸ್ಯರಾದ ಮಿ. ಡೋನ್ಹ ಇವರು ಅಧ್ಯಕ್ಷತೆ ವಹಿಸಿದ್ದರು.

ಅಹಿಂಸೆ ಮತ್ತು ರಾಜಕೀಯ ಧೋರಣ

ಸಿ ರಾಜಗೋಪಾಲಾಚಾರ್ಯರ ಭಾಷಣ

ಲಖನೌ ವಿಶ್ವವಿದ್ಯಾಲಯದ ೨೦ ನೇ ಪದವೀದಾನ ಸಮಾರಂಭದ ಕಾಲಕ್ಕೆ ಭಾಷಣ ಮಾಡುತ್ತ ಶ್ರೀ. ಸಿ. ರಾಜಗೋಪಾಲಾಚಾರ್ಯರು ಈ ರೀತಿ ಹೇಳಿದರು.

"ನಾನು ಮಹಾತ್ಮಾ ಗಾಂಧೀಜಿಯವರ ಉಪೇಕ್ಷಣೀಯ ನು ಯಾಯಿ ಇರುವದಿಲ್ಲ ಕಳೆದ ೨೦ವರ್ಷ ಗಾಂಧೀಜಿಯವರ ಸಹಕಾರಿ ಎಂದು ಕಾರ್ಯ ಮಾಡಿದ್ದೇನೆ ಮತ್ತು ಅವರ ತತ್ವ ಪ್ರಸಾರಣೆಗೆ ಸಹಾಯ ಮಾಡಿದ್ದೇನೆ ಆದರೆ ಉಭಯತರಲ್ಲಿ ಈಗ ಮತಭೇದವಾದದ್ದು ಮತ್ತು ಪರಸ್ಪರರ ಮಾರ್ಗಗಳು ಭಿನ್ನವಾಗುವ ಪ್ರಸಂಗ ಬಂದದ್ದು ನನಗೆ ಸಂತೋಷಕರವಾಗಿರುವದಿಲ್ಲ. ಆದರೆ ಅಂಥ ಪ್ರಸಂಗ ಬಂದದ್ದಾದರೆ ಅದನ್ನು ಎದುರಿಸಲೇಬೇಕು.

"ಆಂತರರಾಷ್ಟ್ರೀಯ ನ್ಯಾಯ ಬೊರೆಯುವದಕ್ಕಾಗಿ ಯುದ್ಧವನ್ನಾಶ್ರಯಿಸುವ ಪದ್ಧತಿ ಬಂದು ಮಾಡುವ ಪ್ರಯತ್ನವನ್ನು ನಾವು ಯಾವಾಗಲೂ ಮಾಡಿಯೇ ಮಾಡಬೇಕು ಆದರೆ ನಮ್ಮ ರಾಷ್ಟ್ರೀಯ ಯುದ್ಧವು ನಡೆದಿರಲು ಹಾಗೆ ಮಾಡುವದು ಯೋಗ್ಯವಲ್ಲ ನಮ್ಮ ಹೋರಾಟವು ಈಗ ಪೂರ್ಣವಾಗುತ್ತ ಬಂದಿದೆ. ಆದ್ದರಿಂದ ಇದು ಯಶಸ್ವಿಯಾಗಬೇಕಾದರೆ ಒಂದೆರಡು ವಿಷಯಗಳು ಪೂರ್ಣ ವಿಚಾರ ಮಾಡತಕ್ಕವುಗಳಾಗಿವೆ" ಎಂದು ಮುಂತಾಗಿ ಹೇಳಿ ವರ್ಕಿಂಗ ಕಮೀಟಿಯ ಬರುವ ಅಧಿವೇಶನದಲ್ಲಿ ಮುಂಜೋಜನೆಯ ಮರುಜ್ಜೀವನವಾಗಬಹುದೇ ಎಂಬದು ಮಹತ್ವದ ಪ್ರಶ್ನೆಯಾಗಿದೆಯೆಂದು ಹೇಳಿದರು

ಭಾರತ ರಾಜಕೀಯ ಆಂದೋಲನ.

ವರ್ಕಿಂಗ ಕಮೀಟಿಯ ನಿರ್ಣಯವೇ ಮಾರ್ಗದರ್ಶಕ.

ಪಂಡಿತ ಜವಾಹರಲಾಲರ ಭಾಷಣ

ತಾ॥ ೧೪ನೇ ದಿನ ಅಲಹಾಬಾದದಲ್ಲಿ ೭೦ ಸಾವಿರ ಜನಸಮುದಾಯದೆದುರಿಗೆ ಭಾಷಣ ಮಾಡುತ್ತ ಪಂ ಜವಾಹರಲಾಲರು ಈ ರೀತಿ ಹೇಳಿದರು—

"ಇಂದು ೧೩ತಿಂಗಳ ನಂತರ ನಾನು ನಿಮ್ಮಲ್ಲಿ ಮಿಲಿತನಾಗಿದ್ದೇನೆ ಕಾಂಗ್ರೆಸ ವರ್ಕಿಂಗ ಕಮೀಟಿಯ ಸಭೆಯು ತೀನ್ರದಲ್ಲಿಯೇ ಜರಗತಕ್ಕದ್ದಿದೆ ಆ ಕಾಲಕ್ಕೆ ಪೂರ್ಣ ವಿಚಾರ ಮಾಡಿಯೇ ನಿರ್ಣಯ ಮಾಡಲಾಗುವದು ಈ ನಿರ್ಣಯವೇ ಭಾರತದ ಭವಿತವ್ಯವನ್ನು ನಿರ್ಣಯಿಸುವದು ಇಂದು ಭಾರತದ ಸ್ವಾತಂತ್ರ್ಯವು ರಾಷ್ಟ್ರೀಯ ಪ್ರಶ್ನೆಯಷ್ಟೇ ಆಗಿರದೆ ಅದು ಜಾಗತಿಕ ಪ್ರಶ್ನೆಯಾಗಿದೆ

ಚೀನ ಮತ್ತು ಹಿಂದುಸ್ತಾನಗಳೆಂದರೆ ಅರ್ಧ ಜಗತ್ತು ಇವುಗಳ ನಾಶವೆಂದರೆ ಇಡೀ ಜಗತ್ತಿನ ನಾಶ. ಸತ್ಯಾಗ್ರಹ ಚಳವಳಿಯು "ನಮ್ಮ ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡುತ್ತೇನೆ"ಬ ಮಾತನ್ನು ಸ್ಪಷ್ಟವಡಿಸಿದೆ ಬ್ರಿಟಿಶ ಸರಕಾರವು ನಮ್ಮ ಹೋರಾಟದ ಕಡೆಗೆ ದುರ್ಲಕ್ಷ ಮಾಡಿದೆ. ಆದರೆ ಸಮಯ ಬಂದರೆ ನಾವು ಪ್ರಚಂಡ ಚಳವಳಿ ಹೂಡಲು ಹಿಂದು ಮುಂದು ನೋಡುವದಿಲ್ಲ. ಬ್ರಿಟಿಶ ಜನತೆಯೊಡನೆ ನಮ್ಮ ಹೋರಾಟವಿರದೆ ಬ್ರಿ. ಸರಕಾರದೊಡನೆ ಹೋರಾಟವಿದೆ."

ಕಾಂಗ್ರೆಸ್ಸಿನ ಧೋರಣೆ ಬದಲಿಸಬೇಕಿಲ್ಲ

ಅಝುದರ ಅಭಿಪ್ರಾಯ

ರಾಷ್ಟ್ರಪತಿ ಮೌಲಾನಾ ಅಬುಲ್‌ಕಲಂ ಅಝುದರು ಪತ್ರಿಕೆಗಳಿಗೆ ಕೊಟ್ಟ ಸಂದರ್ಶನದಲ್ಲಿ ಕಾಂಗ್ರೆಸ್ಸಿನ ಧೋರಣೆಯ ಬಗ್ಗೆ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ.

"ನಮ್ಮ ಈ ರಾಜಕೀಯ ಧೋರಣ ಸ್ಥಾವರವಲ್ಲ ಪರಿಸ್ಥಿತಿ ಬದಲಾದರೆ ನಮ್ಮ ಧೋರಣವೂ ಬದಲಾಗಬೇಕು ಆದರೆ ನಮ್ಮ ಧೋರಣವನ್ನು ಬದಲಾಯಿಸುವಂತಹ ಸನ್ನಿವೇಶವೇನೂ ಬಂದಿಲ್ಲ ಅಂಥ ಪ್ರಸಂಗವನ್ನು ಬ್ರಿಟಿಶ ಸರಕಾರವು ತಂದು ಕೊಟ್ಟಿಲ್ಲ. ಆದ್ದರಿಂದ ಎಲ್ಲರೂ ಕೂಡಿ ವಿಚಾರವಿನಿಮಯ ಮಾಡವದು ಅವಶ್ಯವೆಂದೆನಿಸಿದ್ದರಿಂದ ಮಹಾತ್ಮರ ಆಲೋಚನೆಯ ಮೇರೆಗೆ ಇದೇ ತಿಂಗಳು ೨೩ನೇ ತಾರೀಖಿಗೆ ಬಾರ್ಡೋಲಿಯಲ್ಲಿ ವರ್ಕಿಂಗ ಕಮೀಟಿ ಸಭೆ ಕರೆಯಲಾಗಿದೆ ನನ್ನೆಲ್ಲರ ಅಭಿಪ್ರಾಯಗಳು ವರ್ಕಿಂಗ ಕಮೀಟಿಯ ಈ ಸಭೆಯಲ್ಲಿ ವ್ಯಕ್ತಮಾಡಲ್ಪಡುವವು "

ಒಳಜಗಳ ಬಗೆಹರಿಸಿಕೊಳ್ಳಿರಿ "ಅಗಷ್ಟ ಘೋಷಣೆಗಿಂತ ಹೆಚ್ಚಿಗೇನೂ" ಇಲ್ಲ.

ವೈಸರಾಯರ ಭಾಷಣ

ಹಿಂದುಸ್ತಾನದ ವೈಸರಾಯರಾದ ಲಾರ್ಡ ಲಿನ್‌ಲಿಥ್‌ಗೋರವರು ತಾ. ೧೫ನೇ ದಿನ ಅಸೋಸಿಯೇಟೆಡ್ ಚೇಂಬರ ಆಫ್ ಕಾಮರ್ಸದ ವಾರ್ಷಿಕ ಅಧಿವೇಶನದ ಕಾಲಕ್ಕೆ ಭಾಷಣ ಮಾಡುತ್ತ ಸದ್ಯದ ಯುದ್ಧದ ಪರಿಸ್ಥಿತಿ ಮತ್ತು ಜಪಾನದ ಯುದ್ಧ ಘೋಷಣೆಗಳ ಉಲ್ಲೇಖ ಮಾಡಿದರು. ಹಾಗೂ ಹಿಂದುಸ್ತಾನದಲ್ಲಿಯ ಯುದ್ಧಕಾರ್ಯಗಳ ಸಮಾಲೋಚನೆಯನ್ನು ಮಾಡಿದರು. ಭಾಷಣದ ಕೊನೆಗೆ ಹಿಂದುಸ್ತಾನ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಪರಾಮರಿಸಿ ಅವರು ಹೇಳಿದ್ದೇನೆಂದರೆ—

"ತಾ ೮ ಅಗಷ್ಟ ೧೯೪೨ರಂದೇ ದಿನ ಮಾಡಿದ ಘೋಷಣೆಗೆ ನನ್ನ ಆಪೇಕ್ಷೆಯ ಮೇರೆಗೆ ಬೆಂಬಲ ದೊರೆತಿಲ್ಲ ಆದ್ದರಿಂದ ಆ ಪ್ರಕಾರ ನಾನು ಮುಂದೆ ಸಾಗಲು ನನಗೆ ಶಕ್ಯವಾಗಲಿಲ್ಲ. ಆ ಘೋಷಣೆಯಲ್ಲಿ ಸಾರಿದ ಎಲ್ಲ ಸಂಗತಿಗಳು ಈಗ್ಯೂ ಕಾಯಂವಾಗಿವೆಯೆಂದು ನಾನು ಪುನಃ ಸಾರುತ್ತೇನೆ. ನನ್ನ ಕಾರ್ಯಕಾರಿ ಮಂಡಳದಲ್ಲಿ ಹೊಸ ಖಾತೆಗಳನ್ನು ಪ್ರಾರಂಭಿಸಲಾಗಿದೆ. ಈ ಘಟನೆಯ ಮಹತ್ವವು ಜನರು ತಿಳಿದುಕೊಳ್ಳುವದಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ ಇದರಿಂದ ಹಿಂದುಸ್ತಾನಕ್ಕೆ ಸಮಾಧಾನವೆನಿಸಲಿಕ್ಕೆ ಬೇಕು.

ಪ್ರಾಂತಿಕ ರಾಜ್ಯಕಾರಭಾರದ ವಿಷಯವಾಗಿ ಮಾತನಾಡುತ್ತ ಹೀಗೆ ಹೇಳಿದರು,— "ಇಂದು ಕೆಲವು ಪ್ರಾಂತಗಳಲ್ಲಿಯ ಪ್ರಾಂತಿಕಸ್ವಾಯತ್ತತೆಯು ಸ್ಥಗಿತವಾದಂತೆ ಕಂಡುಬಂದಿದೆ. ತೀನ್ರವೇ ಅಲ್ಲಿ ಯುದ್ಧದಲ್ಲಿ ವಿಜಯ ವಡೆಯುವ ಉಮೇದ ತೋರಿಸುವ ಮತ್ತು ತಮ್ಮ ಕೈಯಲ್ಲಿಯೇ ಈ ಪ್ರಸಂಗದ ಲಾಭ ಪಡಕೊಳ್ಳುವ ಸರಕಾರಗಳನ್ನು ಸ್ಥಾಪಿಸುವದು ಕಂಡು ಬರಬಹುದೆಂಬ ಆಶೆ ಇದೆ. ಹಿಂದುಸ್ತಾನದ ಧ್ಯೇಯ ಸಾಧನೆಗೋಸ್ಕರ ಮಾರ್ಗವು ಸುಕರವಾಗುವಂತೆ ಎಲ್ಲ ಪಕ್ಷಗಳನ್ನು ಒಂದೆಡೆಗೆ ಸೇರಿಸಿ ಅವುಗಳಲ್ಲಿ ಸಹಕಾರವನ್ನು ನಿರ್ಮಿಸುವ ದಕ್ಕಾಗಿ ನಾನು ಮಾಡಿದ ಪ್ರಯತ್ನಗಳಲ್ಲಿ ಒಂದೂ ಉಳಿದಿರುವದಿಲ್ಲ ' ಎಂದು ಮುಂತಾಗಿ ಹೇಳಿ ತಮ್ಮ ಭಾಷಣದ ಕೊನೆಗೆ ವೈಸರಾಯರು ಎಲ್ಲರೂ ಸಹಾಯ ಮಾಡಬೇಕೆಂದು ವಿನಂತಿ ಮಾಡಿಕೊಂಡರು.

ಪಕ್ಷಾತೀತ ಪರಿಷದಧಿವೇಶನ

ಸಂಯುಕ್ತಪ್ರಾಂತ ಪಕ್ಷಾತೀತ ಪರಿಷತ್ತಿನ ಪ್ರಾಂತಿಕ ಅಧಿವೇಶನದ ಅಧ್ಯಕ್ಷರಾದ ಸರ್ ಮಹಾರಾಜಾಸಿಂಗರವರು ಅಧ್ಯಕ್ಷೀಯ ಭಾಷಣ ಮಾಡುತ್ತ ಕಾಂಗ್ರೆಸ ಮತ್ತು ಮುಸ್ಲಿಂ ಲೀಗಗಳು ಒಂದಾಗಿ ತಾತ್ಪೂರ್ತಿಕವಾದರೂ ಒಂದು ಒಪ್ಪ ಮಾಡಿಕೊಳ್ಳಬೇಕೆಂದು ಸೂಚಿಸಿದರು.

'ವೈಸರಾಯರ ಕಾರ್ಯಕಾರೀ ಮಂಡಳದಲ್ಲಿಯ ಸಂರಕ್ಷಣ, ಗೃಹಖಾತೆ ಮೊದಲಾದವುಗಳನ್ನು ಹಿಂದೀ ಮಂತ್ರಿಗಳಿಗೆ ಒಪ್ಪಿಸದ ವಿನಃ ಸಮಾಧಾನವಾಗಲಾರದೆಂದೂ' ಹೇಳಿದರು ಪ್ರಾಂತಗಳಲ್ಲಿ ಈಗ ನಡೆದಿರುವ ಗವ್ನರ್ನರರ ರಾಜ್ಯಕಾರಭಾರವು ಬಂದುಮಾಡಲ್ಪಡಬೇಕೆಂಬ ಬೇಡಿಕೆಯನ್ನು ಸಮರ್ಥಿಸಿದರು.

ಪಕ್ಷಾತೀತ ಪ್ರಾಂತಿಕ ಪರಿಷತ್ತಿನ ವಿಷಯನಿಯಾಮಕ ಸಮಿತಿಯ ಸಭೆ ಸೇರಿ ಪ್ರಾಂತಗಳಲ್ಲಿಯ ಗವ್ನರ್ನರರ ಕಾರಭಾರವನ್ನು ಬಂದು ಮಾಡಬೇಕು. ಯುದ್ಧ ಮುಗಿದ ಮೇಲೆ ಹಿಂದುಸ್ತಾನಕ್ಕೆ ಬ್ರಿಟಿಷ್ ನ್ನದ ಸಮಾನ ಹಕ್ಕು ಕೊಡಲಾಗುವದೆಂಬ ಘೋಷಣೆಯನ್ನು ಬ್ರಿ. ಸರಕಾರವು ಮಾಡಬೇಕು ಎಂಬ ಠರಾವುಗಳನ್ನು ಮಾನ್ಯಮಾಡಲಾಯಿತು.

ಲೀಗದ ಧೋರಣೆಯ ಸ್ಪಷ್ಟೀಕರಣ.

ಯುದ್ಧ ಸಂಬಂಧವಾಗಿ ಮುಸ್ಲೀಂಲೀಗದ ಧೋರಣೆಯನ್ನು ಪುನಃ ಸ್ಪಷ್ಟಪಡಿಸುತ್ತ ಜಿನ್ನಾ ಸಾಹೇಬರು ಈ ರೀತಿ ಹೇಳಿದ್ದಾರೆ. ವ್ಹಾಯಿಸರಾಯರಾಗಲಿ ಬ್ರಿಟಿಶ ಸರಕಾರವಾಗಲಿ ಹಿಂದುಸ್ತಾನದ ಪೂರ್ಣ ಸಹಕಾರವನ್ನು ಬಯಸಿದಂತೆ ಕಾಣುವದಿಲ್ಲ. ಅವರು ಕೇಳಿದ್ದು ವಿಧೇಯತೆ ಹಾಗೂ ದಾಸ್ಯ ಮನೋವೃತ್ತಿಯ ಸಹಕಾರ, ಅಧಿಕಾರ ಹಾಗೂ ಸಂರಕ್ಷಕ ಪ್ರಶ್ನೆಯಲ್ಲಿ ಯಾವ ಪಾಲನ್ನು ಕೊಡಲಿಲ್ಲ. ಈ ಸಂದರ್ಭದಲ್ಲಿ ನಾವು ಸಹಾಯವಿಹೀನರಾಗಿರುವೆವು.

* ಸದ್ಯದ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯು ಹಿಂದುಸ್ತಾನವನ್ನು ಬಿಟ್ಟಿಲ್ಲ. ಅದು ಬಹಳ ಗಂಭೀರವಾಗಿದೆ. ಲೀಗದ ಧೋರಣೆಯೇನಿದೆಂಬುದನ್ನು ಜೂನ ೧೯೪೦ರಲ್ಲಿ ಲೀಗವು ವಾಸ ಮಾಡಿಕೊಂಡ ಠರಾವಿನಲ್ಲಿ ಸ್ಪಷ್ಟ ಮಾಡಿ ವಾಯಿಸರಾಯರು ಮತ್ತು ಬ್ರಿಟಿಶ ಸರಕಾರಕ್ಕೆ ವಿಶದವಾಗಿ ತಿಳಿಸಿತ್ತು. ದುರ್ದೈವವಶಾತ್ ಈ ಸೂಚನೆಗಳನ್ನು ಸಾಕಷ್ಟು ಯಾರೂ ಗಮನಿಸಿದಂತೆ ಕಂಡುಬರುವದಿಲ್ಲ.

ಟಿಮೋರದ ಆಕ್ರಮಣ

ಮಲಯ ದ್ವೀಪಕಲ್ಪವಲ್ಲಿರುವ ಟಿಮೋರ ಎಂಬ ಪೋರ್ತುಗೀಜ ದ್ವೀಪವನ್ನು ಡಚ್ ಮತ್ತು ಆಸ್ಟ್ರೇಲಿಯನ್ ದಂಡುಗಳು ಆಕ್ರಮಿಸಿಕೊಂಡಿವೆ

ಇಂಗ್ಲಂಡದಮೇಲೆ ಜರ್ಮನ್ ವಿಮಾನಗಳು.

ಸ್ವಲ್ಪಜನರಿಗೆ ಗಾಯ.

ಬ್ರಿಟನದ ಮೇಲೆ ಈ ಹೊತ್ತು ವೈರಿಗಳ ವಿಮಾನಗಳ ಚಟುವಟಿಕೆ ವಿಶೇಷವಿರಲಿಲ್ಲ. ಆಗ್ನೇಯ ಹಾಗೂ ನೈಋತ್ಯ ಇಂಗ್ಲಂಡದಲ್ಲಿ ಕೆಲವು ಕಡೆಗೆ ಬಾಂಬುಗಳು ಬಿದ್ದವು. ಮತ್ತು ಒಂದು ಸ್ಥಳದಲ್ಲಿ ಕೆಲವು ಮನೆಗಳು ನಾಶವಾಗಿ ಸ್ವಲ್ಪ ಜನರಿಗೆ ಗಾಯವಾಯಿತು.

ಜಾಗತಿಕ ರಾಜಕಾರಣದ ಮಹತ್ವದ ಘಟನೆಗಳು.

ಹುಕುಂಶಾಹಿಯೊಡನೆ ಸಂ. ಅಮೇರಿಕೆಯ ಯುದ್ಧಘೋಷಣೆ

ಕಳೆದ ವಾರದಲ್ಲಿ ಕೆಲ ಮಹತ್ವದ ಘಟನೆಗಳಾಗಿ ಜಗತ್ತಿನ ರಾಜಕಾರಣದಲ್ಲಿ ದೊಡ್ಡ ಕೋಲಾಹಲವನ್ನೆಬ್ಬಿಸಿವೆ. ಆ ಘಟನೆಗಳಲ್ಲಿ ತ್ರಿಕೂಟಗಳು ಮತ್ತು ಸಂಯುಕ್ತ ಅಮೇರಿಕೆಗಳ ಪರಸ್ಪರರ ಯುದ್ಧ ಘೋಷಣೆಗಳು ಅತ್ಯಂತ ಮಹತ್ವವಾದವುಗಳು ತಾ. ೧೧ನೇ ದಿನ ರೀಚಸ್ಟಾಗ್‌ದ ಅಧಿವೇಶನದಲ್ಲಿ ಹೆರ್ ಹಿಟ್ಲರರು ಸಂ. ಅಮೇರಿಕೆಯ ವಿರುದ್ಧ ಯುದ್ಧಘೋಷಣೆ ಮಾಡಿದನು. ಅದೇ ದಿನ ಇಟಲಿಯ ಮುಸೋಲಿನಿಯಾದರೂ ಸಂ. ಅಮೇರಿಕೆಯೊಡನೆ ಯುದ್ಧ ಸಾರಿದ್ದಾರೆ. ಆದರಂತೆ ಸಂ. ಅಮೇರಿಕನ ಸರಕಾರದವರಾದರೂ ಒಮ್ಮತದಿಂದ ಜರ್ಮನಿಯ ವಿರುದ್ಧ ಯುದ್ಧಘೋಷಣೆ ಮಾಡುವ ಪ್ರಸ್ತಾಪಕ್ಕೆ ಒಪ್ಪಿಗೆ ಕೊಟ್ಟರುವರು.

ತ್ರಿರಾಷ್ಟ್ರಗಳ ಹೊಸಕರಾರುಗಳು

ಎರಡನೆಯ ಮಹತ್ವದ ಘಟನೆಯಂದರೆ ತ್ರಿರಾಷ್ಟ್ರಗಳ ಹೊಸ ಒಪ್ಪಂದ. ತ್ರಿರಾಷ್ಟ್ರಗಳಾದ ಜರ್ಮನಿ, ಇಟಲಿ, ಮತ್ತು ಜಪಾನಗಳ ಪರಸ್ಪರರ ಸಹಾಯಿಕ ಹೊಸ ಒಪ್ಪಂದವಾಗಿದ್ದು ಅದರಲ್ಲಿ ಈ ಕೆಳಗಿನ ಕರಾರುಗಳು ಇರುವವು.,—

(೧) ಜಪಾನ, ಜರ್ಮನಿ, ಮತ್ತು ಇಟಲಿ ಈ ಮೂರೂ ರಾಷ್ಟ್ರಗಳು ತಮ್ಮ ಮೇಲೆ ಸಂ. ಅಮೇರಿಕೆ ಮತ್ತು ಗ್ರೇಟ್ ಬ್ರಿಟನಗಳು ಹೂಡಿದ ಯುದ್ಧದಲ್ಲಿ ಶಕ್ಯವಿದ್ದ ಎಲ್ಲ ಸಾಧನಗಳಿಂದ ಯುದ್ಧಕೊನೆಯಾಗುವವರೆಗೂ ಸಂಯುಕ್ತವಾಗಿಯೇ ಹೋರಾಡತಕ್ಕದ್ದು

(೨) ಜಪಾನ ಜರ್ಮನಿ ಮತ್ತು ಇಟಲಿ ಈ ಮೂರೂ ಪ್ರತಿಯೊಂದು ರಾಷ್ಟ್ರವು ಈ ಮೂರೂ ರಾಷ್ಟ್ರಗಳ ಒಪ್ಪಿಗೆ ಇಲ್ಲದೆ ಯಾವ ರಾಷ್ಟ್ರವು ಸಂ ಅಮೇರಿಕೆ ಅಥವಾ ಗ್ರೇಟ್‌ಬ್ರಿಟನದೊಡನೆ ಸ್ವತಂತ್ರ ರೀತಿಯಿಂದ ಶಸ್ತ್ರಸಂಧಿ ಅಥವಾ ನಿರ್ಣಾಯಕ ಒಪ್ಪಂದಗಳನ್ನು ಮಾಡುವದಿಲ್ಲ ವೆಂದು ಪರಸ್ಪರ ಆಶ್ವಾಸನ ಕೊಡುತ್ತವೆ

(೩) ಈ ಯುದ್ಧದಲ್ಲಿ ಜಯಹೊಂದಿ ಯುದ್ಧ ಮುಗಿದ ಮೇಲೆಯೂ ಕೂಡ ಜಪಾನ ಇಟಲಿ ಮತ್ತು ಜರ್ಮನಿ ಈ ರಾಷ್ಟ್ರಗಳು ಸರ್ವಂಬರಗಳಂರೆ ನೂಡಿಕೊಂಡ ತ್ರಿರಾಷ್ಟ್ರ ಒಪ್ಪಂದದ ಪ್ರಕಾರ ಜಗತ್ತಿನಲ್ಲಿ ಹೊಸಯುಗ ಪ್ರಾರಂಭವಾಗುವಂತೆ ಪರಸ್ಪರರು ಸಹಕಾರ ಮಾಡತಕ್ಕದ್ದು

ಈ ಎರಡು ಘಟನೆಗಳಲ್ಲದೆ ಇನ್ನು ಚಿಕ್ಕ ದೊಡ್ಡ ಘಟನೆಗಳು ಸಂಭವಿಸಿವೆ ಅವೆಲ್ಲವುಗಳ ಪರಿಣಾಮವು ಸದ್ಯದ ರಾಜಕಾರಣದ ಮೇ ಎಂತಾಗಬಹುದು?

ವಿಚಿ ಸರಕಾರದ ಹಡಗವನ್ನು ಸಂ ಅಮೇರಿಕೆಯು ಬಂಧಿಸಿದ ಮತ್ತು 'ನಾರ್ಮಂಡಿ' ಮತ್ತು ಎರಡನೇ ದೊಡ್ಡ ಹಡಗಗಳನ್ನು ವಿಚಿ ಸರಕಾರವು ಬಿಟ್ಟು ಕೊಟ್ಟದೆ ಇವರ ಪರಿಣಾಮವು ವಿಚಿ—ವಾಶಿಂಗ್ಟನ್ನಗಳ ಸಂಬಂಧದಲ್ಲಿ ಯಾವ ರೀತಿಯಾಗುವದೆಂಬದನ್ನು ಹೇಳಲು ಬರುವಂತಿಲ್ಲ

ಮಹಾಯುದ್ಧದ ಮಹಾಜ್ವಾಲೆ.

ಜಗದ್ವ್ಯಾಪಿ ಯುದ್ಧದ ಜಂಜಾಟ.

ಜಪಾನರ ತುಮುಲ ಯುದ್ಧದ ಸಾಹಸ್ಯ

ಅಮೇರಿಕನ್ ಸೈನಿಕರು ಬೇಕಾದಲ್ಲಿ ಹೋಗಬಹುದು

ಕಾಯಿದೆಗೆ ರೂಜವೆಲ್ಟರ ಸಹಿ

ಅಮೇರಿಕೆಯ ನೌಕಾಖಾತೆಯ ಸೆಕ್ರೆಟರಿಗಳಾದ ಕರ್ನಲ್ ನಾಕ್ಸರು ಹೊನೊಲುಲುವಿಗೆ ಭೆಟ್ಟಿಕೊಟ್ಟು ವಾಶಿಂಗಟನಕ್ಕೆ ತಿರುಗಿ ಬಂದಿರುವರು. ಅವರು ರೂಜವೆಲ್ಟರೊಡನೆ ವಿಚಾರ ವಿನಿಮಯ ಮಾಡಿದ ನಂತರ ಒಂದು ಹೇಳಿಕೆ ಕೊಡಬಹುದು.

ಆಮೇರಿಕನ್ ಭೂದಲಗಳನ್ನು ಗೋಲಾರ್ಧದ ಹೊರಗೆ ಉಪಯೋಗಿಸುವ ಸಂಬಂಧದಲ್ಲಿ ಇದ್ದ ನಿರ್ಬಂಧವನ್ನು ದೂರ ಮಾಡುವ ಕಾಯಿದೆಗೆ ರೂಜವೆಲ್ಟರು ತಮ್ಮ ಸಹಿ ಮಾಡಿದ್ದಾರೆ. ಕಳೆದ ವಾರದಲ್ಲಿ ಕಾಂಗ್ರೆಸದಲ್ಲಿ ಈ ಕಾಯಿದೆ ಸ್ವೀಕೃತವಾಗಿತ್ತು.

ಹಾಂಗಕಾಂಗ ಭಾಗದಲ್ಲಿ ಭಯಂಕರ ಯುದ್ಧ

ಚೀನಿಯರ ಪ್ರಚಂಡ ದಾಳಿ

ಹಾಂಗಕಾಂಗ ಭಾಗದಲ್ಲಿ ಚೀನ ಹಾಗು ಜಪಾನ ಸೈನಿಕರಲ್ಲಿ ಭಯಂಕರ ಕಾಳಗ ನಡೆದಿದೆ ಹಾಂಗಕಾಂಗ ಹೊರಭಾಗದಲ್ಲಿಯ ಚೀನ ಸೈನಿಕರು ಕ್ಯಾಂಟನ್—ಕೊಲೂನ ರೇಲ್ವೆಗುಂಟ ಜಪಾನಿ ದಲಗಳ ಮೇಲೆ ದಾಳಿ ಮಾಡಿ ಸೂಲುಗಳನ್ನು ಟೆಲಿಫೋನ ಕಂಬಗಳನ್ನು ಧ್ವಂಸಗೊಳಿಸಿದರು. ಕ್ಯಾಂಟನ್ ಭಾಗದಲ್ಲಿಯೂ ಉಭಯ ಸೈನಿಕರಲ್ಲಿ ನಿಕರದ ಯುದ್ಧ ಸಾಗಿರುವದು. ಜಪಾನಿ ಸೈನಿಕರು ಹ್ಯಾಂಕೊ ಹಾಗು ಇಚಾಂಗದಿಂದ ಹಿಂದೆ ಸರಿಯಹತ್ತಿರುವರು ಆದರೆ ಇವರು ಬಿಲ್ಲಿಂದ ಸಂಪೂರ್ಣ ಹಿಂತೆಗೆಯುತ್ತಿರುವರೋ ಹೇಗೆಂಬುದು ಸ್ಪಷ್ಟವಾಗಿರುವದಿಲ್ಲ.

ಫಿಲಿಪಾಯಿನ ನೌಕೆಯ ನಾಶ

ನ್ಯೂನಿಲಾ ಬೇಯಲ್ಲಿ ಒಂದುಫಿಲಿಪಾಯಿನ ಯುದ್ಧನೌಕೆ ಮುಳುಗಿದವರಲ್ಲಿ ಜಲಸಮಾಧಿಹೊಂದಿತೆಂದೂ ಅದರಲ್ಲಿದ್ದ ೮೦೦ ಜನರಲ್ಲಿ ೫೦೦ ಜನರು ನಾಶವಾದರೆಂದೂ ಸುದ್ದಿ ಬಂದಿದೆ. ಈ ಯುಗಿಹಡಗವು ಮೊದಲು ಬ್ರಿಟಿಶರದು. ಕಳೆದ ಮಹಾಯುದ್ಧದಲ್ಲಿ ಅದು ರಾಯಲ್ ನೌಕಾವಡೆಯಲ್ಲಿತ್ತು. ಕೆಲವು ದಿನಗಳ ಹಿರೆ ಇದನ್ನು ಥೇಮ್ಸ ನದಿಯಲ್ಲಿ ವಿಹಾರ ನೌಕೆಯನ್ನಾಗಿ ಉಪಯೋಗಿಸಿದ ನಂತರ ಫಿಲಿಪಾಯಿನಕ್ಕೆ ಮಾರಲಾಗಿತ್ತು.

ಈ ನೌಕೆಯಲ್ಲಿ ಮುಳುಗಿದವರಲ್ಲಿ ಫಿಲಿಪಾಯಿನದ ಅನೇಕ ರಾಜಕೀಯ ಮುಖಂಡರಿರುವರು

ಸಿಂಗಾಪುರಕ್ಕೆ ಮುತ್ತಿಗೆ ಸುಲಭವಿಲ್ಲ!

ಸಿಂಗಾಪುರದ ಮುತ್ತಿಗೆಯು ಸುಲಭವಲ್ಲವೆಂದೂ ಅದು ಬಹಳ ದಿನಗಳವರೆಗೆ ನಡೆಯಬಹುದೆಂದೂ! ಜಪಾನಿ ಮುಖ್ಯ ನುಂತ್ರಿ ಜನರಲ್ ಟೋಜೋರವರ ಪಾರ್ಲಮೆಂಟದಲ್ಲಿ ಹೇಳಿದರು. "ಮೆಲಾಗಿ ಸಿಂಗಾಪುರದಲ್ಲಿ ಬ್ರಿಟಿಶರ ಸೈನ್ಯ ಸಂಗ್ರಹ ಹೆಚ್ಚಾಗಿದೆ. ಯುದ್ಧ ಸಾಮಗ್ರಿಗಳೂ ಅವರ ಹತ್ತಿರ ಸಾಕಷ್ಟಿವೆ. ದಟ್ಟವಾದ ಕಾಡುಗಳೂ ಅವರಿಗೆ ಸಹಾಯ ಮಾಡುತ್ತಿವೆ." ಎಂದು ಜನರಲ್ ಟೋಜೋರವರು ಹೇಳಿದರು.

ಹಾಂಕಾಂಗವನ್ನು ಒಪ್ಪಿಸಲು ಜಪಾನರ ಒತ್ತಾಯ.

ಹಾಂಕಾಂಗದಲ್ಲಿ ಆಗಾಗ್ಗೆ ತೋಫಿನ ಕಾಳಗಗಳಾಗುತ್ತಿವೆಯೆಂದೂ ಆದರೆ ಪರಿಸ್ಥಿತಿಯಲ್ಲಿ ಬದಲಾವಣೆ ಏನೂ ಆಗಿಲ್ಲವೆಂದೂ ಅಲ್ಲಿಂದ ಬಂದ ಸುದ್ದಿಗಳು ತಿಳಿಸುತ್ತವೆ. ಕೋಟೆಯ ಮೇಲಿದ್ದ ತೋಫುಗಳು ನಿನ್ನೆ ಇಡೀ ದಿನ ಗುಂಡು ಹಾರಿಸಿದವು. ಕೋಟೆಯ ಒಳಗಿದ್ದ ಸೈನಿಕರು ದಾಳಿಯನ್ನೆದುರಿಸಲು ಎಲ್ಲ ಬಗೆಯಿಂದ ಸಿದ್ಧರಾಗುತ್ತಿರುವರು. ಜಪಾನರು ನಾಲ್ಕೂ ಕಡೆಯಿಂದ ಹಾಂಕಾಂಗ ಕೋಟೆಗೆ ಮುತ್ತಿಗೆ ಹಾಕಿರುವರು.

ಅಂದಮಾನ ದ್ವೀಪಗಳು. ವೈರಿಗಳ ವಶವಾಗಿಲ್ಲ.

ಅಂದಮಾನ ದ್ವೀಪಗಳು ವೈರಿಯ ವಶವಾಗಿರುವನೆಂದು ಹಬ್ಬಿದ ಸುದ್ದಿಯು ಸುಳ್ಳಿರುವದೆಂದೂ ದ್ವೀಪಗಳೊಡನೆ ವಾಯರಲೆಸ್ ವ್ಯವಹಾರವು ಎಂದಿನಂತೆಯೆ ಸಾಗಿರುವದೆಂದೂ ಸರಕಾರದ ವ್ಯಕ್ತಪಡಿಸಿದೆ. ಅಲ್ಲಿಯ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗಿಲ್ಲೆಂದೂ ಇತ್ತೀಚೆಗೆ ಅಲ್ಲಿಂದ ಸುದ್ದಿ ಬಂದಿದೆ.

ದಿ ಬೊಂಬೆ ಲಾಯಿಫ ಅಶ್ಯುರನ್ಸ ಕಂ. ಲಿಮಿಟೆಡ್

ಹೆಡ್ ಆಫೀಸ—ಮುಂಬಯಿ.

ಈ ಕಂಪನಿಯಲ್ಲಿಯೇ ನಿಮ್ಮ ವಿಮೆ ಇಳಿಸಿರಿ.

ಕಾರಣ ಇದು ಪೂರ್ಣ ಸ್ವದೇಶಿ ಇದ್ದು ಪಕ್ಕೆಯ ದರಗಳು ಅತಿಶಯ ಸೋಯಿಯವು ಆವೆ. ಬೋನಸ ರಕಮು ಪ್ರತಿವರ್ಷಕ್ಕೆ ಸಾಸಿರಕ್ಕೆ (ಹೋಲಲಾಯಫು) ೨೦ ರೂ. ಮತ್ತು (ಎಂಡಾವುಮೆಂಟ) ೧೫ ರೂ. ಯಂತೆ ಅವೆ. ಇದು ಎಲ್ಲ ರೀತಿಯಿಂದಲೂ ಯೋಗ್ಯ ಪಾಗಿದೆ. ಕರ್ನಾಟಕ ಜಿಲ್ಲೆಗಳಲ್ಲಿ ಮತ್ತು ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿ ಎಜೆಸ್ಸಿಗಳ ಬಗ್ಗೆ ಪತ್ರವ್ಯವಹಾರ ಮಾಡಿರಿ. ಅಥವಾ ಸಮಕ್ಷಮ ಭೆಟ್ಟಿಯಾಗಿರಿ.

ಬೆಳಗಾವಿ ವಿಜಂಟಃ—

ರಾ. ವಿ. ಬಿ ಕುಲಕರ್ಣಿ
ರಾ. ಎಮ್. ಆರ್. ಸಾಖರೆ M. A T D.
ರಾ. ವಾಯ್. ವಿ. ರೇಡಕರ

ಕೆ.ಪದ್ಮನಾಭರಾವ ಎಂಡ ಸನ್ಸ
ಚೀಫ ಎಜಂಟ್ಸ ಬೆಳಗಾವಿ

ಹಿಪ್ಪರಗಿ ಗ್ರಾಮಪಂಚಾಯತಿ ಸರಪಂಚರ ರಾಜೀನಾಮೆ.

ಸರಪಂಚರ ಸ್ಪಷ್ಟೀಕರಣ.

'ಉದಯ' ಪತ್ರಿಕೆಯ ೬ನೇ ತಾರೀಖಿನ ಸಂಚಿಕೆಯಲ್ಲಿ "ಓರ್ವ ಗ್ರಾಮ ನಿವಾಸಿಯು" "ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲುವದಿಲ್ಲ" ವೆಂಬ ತಲೆಬರಹದ ಕೆಳಗೆ ಸಾರ್ವಜನಿಕರಲ್ಲಿ ತಪ್ಪುತಿಳುವಳಿಕೆಯನ್ನುಂಟು ಮಾಡುವಂತಹ ಸುದ್ದಿಯನ್ನು ಪ್ರಕಟಿಸಿದ್ದರಿಂದ ನಾನು ನನ್ನ ಸ್ಪಷ್ಟೀಕರಣವನ್ನು ಪ್ರಕಟಿಸುವ ಪ್ರಸಂಗ ಬಂದಿದೆ.

ನಾನು ರಾಜೀನಾಮೆಯನ್ನು ಕೊಟ್ಟದ್ದು ಎಂಡನೇಯರಾರೂ ಸರಪಂಚ ಸ್ಥಳಕ್ಕೆ ನಿಲ್ಲುವದಿಲ್ಲವೆಂದಲ್ಲ, ಸರಕಾರದಕೃತಿಯನ್ನು ನಿಷೇಧಿಸುವದಕ್ಕಾಗಿ ಅಂದಮೇಲೆ ಆ ಸ್ಥಳಕ್ಕೆ ಮತ್ತಾರಾದರೂ ನಿಂತರೂ ಸರಿ, ಬಿಟ್ಟರೂ ಸರಿ. ಆದರ ಪರಿವೆಯು ನನಗಿಲ್ಲ. ಆದರಂತೆ ಉಳಿದ ಸದಸ್ಯರು ರಾಜೀನಾಮೆ ಕೊಡುವರೆಂದು ನಂಬಿ ನಾನು ರಾಜೀನಾಮೆ ಕೊಟ್ಟಿಲ್ಲ. ಮತ್ತು ನನ್ನ ರಾಜೀನಾಮೆಯಿಂದ ಆವರಿಗೆ ಯಾವ ಪ್ರತಿಬಂಧವೂ ಇಲ್ಲ.

ಸರಪಂಚ ಜಾಗೆಗೆ ಬೇಕಾದವರು ನಿಲ್ಲಬಹುದು, ಬಿಡಬಹುದು. ಅವರಷ್ಟಕ್ಕೆ ಅವರು ಸ್ವತಂತ್ರರಿರುವರು.

ಇನ್ನು 'ಸೋಲೀಸ ಪಾಟೀಲರ ಹಕ್ಕು ಬಾಧ್ಯತೆಗಳನ್ನು ಸರಪಂಚರು ತಿಳುಹೋಗಿಸಬೇಕೆಂಬ ಇಚ್ಛೆ ಇದೆ' ಎಂಬ ವಿಧಾನವಂತೂ ತೀರ ಸುಳ್ಳು ಆದೆ. ಯಾಕಂದರೆ ಸರಪಂಚರಿಗೆ ಗ್ರಾಮಪಂಚಾಯತಿ ಕಾಯದೇ ಪ್ರಕಾರ ಪೋಲೀಸ ಪಾಟೀಲರ ಯಾವ ಅಧಿಕಾರವು ಸರಪಂಚರಿಗೆ ಇರುವದಿಲ್ಲಾ, ಅಂದಮೇಲೆ ಅವರ ಹಕ್ಕು ಬಾಧ್ಯತೆಯ ಪ್ರಶ್ನೆಯೇ ಇದರಲ್ಲಿ ಬರುವದಿಲ್ಲಾ. ಕೊಂಡವಾಡೆಯ ಗ್ರಾಮಪಂಚಾಯತಿ ಕಾಯ್ದೆಯ ಪ್ರಕಾರ ಪಂಚಾಯತಿ ಕಡೆಗೆ ಇರುವದು. ಕ್ರಮಪ್ರಾಪ್ತವಾದ್ದು ಮತ್ತು ಲಾಭದಾಯಕವಾದದ್ದು ಪೋಲೀಸಗೌಡರ ಕಡೆಗೆ ಇದ್ದಾಗಿನ ಉತ್ಪನ್ನಕ್ಕಿಂತಲೂ ಗ್ರಾಮಪಂಚಾಯತಿ ಕಡೆಗೆ ಇದ್ದಾಗಿನ ಉತ್ಪನ್ನವು ಹೆಚ್ಚಾಗುತ್ತದೆ ಎಂಬದನ್ನು ಎಷ್ಟೋ ಸಲ ಪಂಚಾಯತಿಗಳು ಅಂಕೆಸಂಖ್ಯೆಗಳಿಂದ ಸಿದ್ಧ ಮಾಡಿ ತೋರಿಸಿರುವವು. ಇಂತಹ ಲಾಭದಾಯಕ ಉತ್ಪನ್ನದ ಆಂಶವನ್ನು ಸರಕಾರವು ನಿಲ್ಲಿಸಿ ನಿರ್ಮೂಲ್ಯಗೊಳಿಸಿದ್ದರಿಂದ ಅದರ ನಿವೇದಕ್ಕಾಗಿ ನಾನು ರಾಜೀನಾಮೆಯನ್ನು ಕೊಟ್ಟಿದ್ದೇನೆ ಮತ್ತು ನಾನು ಕೊಟ್ಟ ರಾಜೀನಾಮೆಯು ಯಥಾಯೋಗ್ಯವಾಗಿದೆಯೆಂದು ನಾನು ಹೇಳುತ್ತೇನೆ. ಮತ್ತ ಸೋಲೀಸಗೌಡರು ಕೊಂಡವಾಡೆಯ ಮೂಡ್ಡಿದಾರರು ಅದರಂತೆ ಸರಪಂಚರು ಸ್ವತಃ ಕೊಂಡವಾಡೆಯ ಮೂಡ್ಡಿದಾರಾಗಲಾರರು ಅವರು ಕಾಯ್ದೇ ಪ್ರಕಾರ ಎರಡನೇ ಮೂಡ್ಡಿದಾರರನ್ನು ನೇಮಿಸುವರು. ಅಂದ ಮೇಲೆ ಪೋಲೀಸ ಗೌಡರ ಹಕ್ಕನ್ನು ಅನುಭೋಗಿಸಬೇಕೆಂಬ ಹಪಹಪಿಕೆ ಯಾಕಾಗಿನೆ ಎಂಬದನ್ನು ಸಾರ್ವಜನಿಕರೆ ವಿಚಾರಿಸಲಿ ಗ್ರಾಮನಿವಾಸಿಯು ಹೇಳಿದ "ಅಕ್ಕ ಸತ್ತರೆ ಅಮಾವಾಸ್ಯೆ ನಿಲ್ಲುವದಿಲ್ಲ" ಎಂಬ ನಾಣ್ಣುಡಿಯಾದರೂ ತಪ್ಪು ಆದೆ. ಆದು ನಿಜವಾಗಿ "ಅಯ್ಯ ಸತ್ತರೆ ಅಮಾವಾಸ್ಯೆ ನಿಲ್ಲುವದಿಲ್ಲ" ಎಂದಿದೆ ಅಕ್ಕನು ಮನಸಿಯ ಆಧಾರ ಸ್ಥಂಬಳು. ಅವಳು ಸತ್ತರೆ ಅಮಾವಾಸ್ಯೆ ನಿಲ್ಲುವದು ಖಂಡಿತ. ಆದರೆ ಅಯ್ಯ ಸತ್ತರೆ ಮಾತ್ರ ಮತ್ತೊಬ್ಬ ಅಯ್ಯನು ಬರುವನು ಎಂಬದನ್ನು ಹಿಪ್ಪರಗಿ ಗ್ರಾಮನಿವಾಸಿಯು ಆರಿತುಕೊಳ್ಳಲಿ ಈ ನನ್ನ ಸ್ಪಷ್ಟೀಕರಣದಿಂದ ಸಾರ್ವಜನಿಕರೇ ಯಾವದು ನಿಜ ಯಾವದು ಸುಳ್ಳು ಎಂಬದನ್ನು ನಿರ್ಣಯಿಸಲಿ. ಸಾರ್ವಜನಿಕ ಸೇವೆ ಮಾಡಬೇಕೆಂಬ ಹಂಬಲದಿಂದ ಮುಂದೆ ಬಂದ ನನ್ನನ್ನು ಸರಪಂಚನನ್ನಾಗಿ ಮಾಡಿ ನನ್ನಿಂದ ಯಥಾಮತಿ ಸೇವೆಯ ತೆಗೆದುಕೊಂಡದಕ್ಕಾಗಿ ಮತ್ತು ಆಗಾಗ್ಗೆ ಸಹಾಯ ಕಲಹೆಗಳನ್ನು ಕೊಟ್ಟ ಮಹನೀಯರ ಆಭಾರ ಮನ್ನಿಸಿ ನನ್ನ ಸ್ಪಷ್ಟೀಕರಣವನ್ನು ಮುಗಿಸುತ್ತೇನೆ.

ಕೆ. ಆರ್. ದೇಶಪಾಂಡೆ

ಸಹಕಾರಿ ಸಂಘಗಳ,

ಪ್ರಾಂತಿಕ ಮೇಲ್ವಿಚಾರಣಾ ಸಮಿತಿ, ಮುಂಬೈ.

ಗ್ರಾಮಗಳಲ್ಲಿಯ ಸಹಕಾರಿ ಸಂಘಗಳ ಮೇಲೆ ಮೇಲ್ವಿಚಾರಣೆಯು ಇನ್ನೂ ಸುಗಮವಾಗಬೇಕೆಂದು ಮುಂಬೈ ಸರಕಾರದವರು "ಪ್ರಾಂತಿಕ ಮೇಲ್ವಿಚಾರಣಾ" ಸಮಿತಿಯನ್ನು ನೇಮಿಸಿದ್ದಾರೆ. ಸಹಕಾರಿ ಸಂಘಗಳ ರಜಿಸ್ಟ್ರಾರರು ಈ ಸಮಿತಿಯ ಚೇರಮನ್ನರಾಗಿಯೂ ಸರಕಾರದಿಂದ ಆರಿಸಲ್ಪಟ್ಟ ಇಬ್ಬರು ಸದಸ್ಯರೂ ಇರಬೇಕೆಂದು ಗೊತ್ತುಪಡಿಸಿದ್ದಾರೆ.

ಸಾಮಾನ್ಯ ಮೇಲ್ವಿಚಾರಣೆಯ ಹೊರತಾಗಿ ಈ ಸಮಿತಿಯವರು ಸುಧರವಾಯಿ ಜರರ ನೇಮಣೂಕಗಳನ್ನು ಒಪ್ಪುವದು, ಆವರ ಆಪೀಲಗಳನ್ನು ವಿಚಾರಿಸುವದು ಮತ್ತು ಜಿಲ್ಲಾ ಸಮಿತಿಗಳ ಅಂದಾಜವ ತ್ರಿಕೆಗಳನ್ನು ನೋಡಿಕೊಳ್ಳುವದು ಹಾಗೂ ಸರಕಾರದ ಗ್ರಾಂಟನ್ನು ಹಂಚುವ ಮೊದಲಾದ ಕಾರ್ಯಗಳನ್ನು ನೋಡಿಕೊಳ್ಳಲಾಗುವದು ಸುಸರವಾಯಿಜಿಂಗ ಯುನಿಯನಗಳ ಜಿಲ್ಲಾ ಸಮಿತಿಯವರು ಮೇಲ್ವಿಚಾರಣಾ ಸಮಿತಿ ಮತ್ತು ಶಿಕ್ಷಣ ಸಮಿತಿಗಳನ್ನು ರಚಿಸುವರು.

ಹೊದಲಿನ ಎರಡು ವರ್ಷಗಳ ಮಟ್ಟಿಗೆ ಸರಕಾರದಿಂದ ಆರಿಸಲ್ಪಟ್ಟ ಇಬ್ಬರು ಸದಸ್ಯರು ಬಾಂಬೆ ಪ್ರಾ. ಕೊ. ಆ. ಬ್ಯಾಂಕಿನ ಚೇರಮನ್ನರಾದ ಶ್ರೀ. ಆರ್. ಜಿ. ನಾರಿಯಾ ಮತ್ತು ಮು. ಪ್ರಾ. ಕೊ. ಇನ್ಸ್ಟಿಟ್ಯೂಟಿದ ಅಧ್ಯಕ್ಷರಾದ ಶ್ರೀ. ಬಿ. ವ್ಹಿ. ಜಾಧವ ಇವರು ಇರತಕ್ಕದ್ದೆಂದು ಗೊತ್ತುಮಾಡಿದ್ದಾರೆ.

ಮುಂಬಯಿಯಲ್ಲಿ ಯುನೈಟೆಡ್ ಕರ್ನಾಟಕ ಇ. ಕಂ. ಆರ್ಗನೈಜಿಂಗ ಆಫೀಸಿನ ಉದ್ಘಾಟನ ಸಮಾರಂಭ.

ಸುಪ್ರಸಿದ್ಧ ಅರ್ಥಶಾಸ್ತ್ರ ವಿಶಾರದರಾದ ವ್ಹಿ. ಕೆ. ಆರ್. ವಿ. ರಾವ ಇವರು ಸಮಾರಂಭದ ಉದ್ಘಾಟನೆಯನ್ನು ಮಾಡಲು ಒಪ್ಪಿದ್ದಾರೆ ಈ ಆಫೀಸಿನ ಸಲುವಾಗಿ ದಾದರ- ರೇಲ್ವೆ ಸ್ಟೇಶನದ್ದ ಎದುರಿಗೆ ಬಿಸ್ಮಿಲ್ಲಾ ಬಿಲ್ಡಿಂಗಿನಲ್ಲಿ ಒಂದು ಜಾಗೆಯನ್ನು ತೆಗೆದುಕೊಳ್ಳಲಾಗಿದೆ. ಈ ಸಮಾರಂಭವು ಇದೇ ರವಿವಾರ ಸಂಜೆ ೫ಗಂಟೆಗೆ ದಾದರದಲ್ಲಿಯ ಕಿತ್ತಿಭಂಡಾರಿ ಹಾಲಿನಲ್ಲಿ ಉಜ್ವಲ ಕನ್ನಡಿಗರಾದ ಡಾ. ವ್ಹಿ. ಕೆ. ಆರ್. ವ್ಹಿ. ರಾವ ಇವರ ಹಸ್ತದಿಂದ ನೆರವೇರುವದು. ಕಂಪನಿಯ ಇಲ್ಲಿಯ ಕೆಲಸದಲ್ಲಿ ಸಲಹೆ ಸಹಾಯಗಳನ್ನು ಒದಗಿಸಿಕೊಡುವ ಕುರಿತು ಒಂದು ಸ್ಥಾನಿಕ ಸಲಹೆಗಾರರ ಮಂಡಳ ಒಂದು ಸ್ಥಾಪಿಸಿದ್ದು ಕೆಳಗಿನ ಸದ್ಗೃಹಸ್ಥರು ಈ ಮಂಡಲದ ಸದಸ್ಯರಾಗಿ ನಿಯಮಿಸಲ್ಪಟ್ಟಿದ್ದಾರೆ

(೧) ಶ್ರೀ ಕೆ. ಜಿ. ಹವಾಲದಾರ ಬಿ. ಈ (ಜೇರಮನ್) (೨) ಡಾ. ಎನ್. ಜಿ. ಜೋಶಿ ಎಮ್. ಎಸ್ (೩) ಶ್ರೀ ಬಿ. ಬಿ. ಕೊಣ್ಣೂರ ಎಲ್. ಟಿ. ಸಿ (೪) ಶ್ರೀ ಶಾಂತೇಶ ಸಿ. ಪಾಟೀಲ ಎಮ್. ಎಸ್ಸಿ. (೫) ಶ್ರೀ ಕೆ. ಜಿ. ಡಾತಾರ ಬಿ. ಎ ಎಲ್ ಎಲ್ ಬಿ. (೬) ಶ್ರೀ ವ್ಹಿ. ಎಸ್. ಸುಗಂಧಿ ಎಲ್ ಎಮ್. ಈ (೭) ಶ್ರೀ ಪಿ. ಜಿ. ಭಾಗವತ ಜಿ, ಡಿ, ಎ. ಆರ್ ಎ (೮) ಶ್ರೀ ಕೆ. ಆರ್ ಶಾನಭಾಗ ಎಲ್, ಎಮ್ (೯) ಈ (೧೦) ಎಚ್. ವ್ಹಿ. ಇಮಾರತಿ (ಎಕ್ಸ್ ಆಫಿಸಿಒ) ಗೌರವ ಕಾರ್ಯದರ್ಶಿ

ಸಹಕಾರಿ ಸಂಘಗಳ ವ್ಯವಸ್ಥಾಪಕ ಸಮಿತಿ ಸದಸ್ಯರ ತರಬೇತಿ.

ವಿಜಾಪುರ ಜಿಲ್ಲೆಯಲ್ಲಿ ಸಹಕಾರಿ ಸಂಘಗಳ ವ್ಯವಸ್ಥಾಪಕ ಸಮಿತಿ ಸದಸ್ಯರ ತರಬೇತಿ ವರ್ಗಗಳನ್ನು ಪ್ರಾರಂಭಿಸಲಾಗಿದೆ. ತಾ. ೧೭ ರಿಂದ ೨೨ನೇ ತಾರೀಖಿನವರೆಗೆ ಹಿಟ್ಟಿನಳ್ಳಿಯಲ್ಲಿ ಈ ವರ್ಗಗಳು ತೆರೆಯಲಾಗಿದೆ. ಆಲ್ಲಿಯೇ ಮುಳವಾಡ ಸಂಘಗಳ ಸದಸ್ಯರೂ ಬರಬೇಕೆಂದು ಚಾಲಕರು ತಿಳಿಸಿರುತ್ತಾರೆ.

—ಹಿಂದುಸ್ತಾನದಲ್ಲಿ ೧೯೪೧-೪೦ ವರ್ಷದಲ್ಲಿ ೧೧ ಲಕ್ಷ ೩೦ ಸಾವಿರ ಎಣ್ಣೆ ಗಂಡಸರು ಮತ್ತು ೨೮ ಲಕ್ಷ ೫೭ ಸಾವಿರ ಹೆಂಗಸರು ಸಾಕ್ಷರರಾಗಿರುವರೆಂದು ಸರಕಾರದವರು ಶಿಕ್ಷಣಖಾತೆಯ ವರದಿಯಲ್ಲಿ ಪ್ರಸಿದ್ಧ ಮಾಡಿದ್ದಾರೆ. ೧೯೪೧-೪೨ ವರ್ಷಕ್ಕಿಂತ ಸಾಕ್ಷರ ಗಂಡಸರ ಸಂಖ್ಯೆ ೧೫೪೪೨ ಮತ್ತು ಹೆಂಗಸರ ಸಂಖ್ಯೆ ೧೪೪೬೬ ಹೆಚ್ಚಾಗಿದೆ. ೧೯೪೧-೪೦ ನೇ ವರ್ಷದಲ್ಲಿ ಶಿಕ್ಷಣಕ್ಕಾಗಿ ೨೯ ಕೋಟಿ ರೂಪಾಯಿ ವ್ಯಯ ಮಾಡುವದರಲ್ಲಿ ಬಂದಿದೆ. ಅದರ ಹಿಂದಿನ ವರ್ಷದ ವೆಚ್ಚ ೨೭ಕೋಟಿ ರೂಪಾಯಿ ಆಗಿದ್ದಿತು.

ಬೇಕು. ೧೯೪೩ ನೇ ಇಷ್ಟಿಯ ಹೊಸ ಇನ್ಶೂರನ್ಸ ಕಾಯದೇ ಮೇರೆಗೆ ಕರ್ನಾಟಕದಲ್ಲಿ ನ್ಥಾಪಿತವಾದ್ದರಿಂದ ಮೊದಲನೇ ಪ್ರಾವ್ಹಿಡೆಂಟ ವಿಮಾ ಕಂಪನಿಗೆ ಸುಶಿಕ್ಷಿತ ವಜನದಾರ, ಕಾರ್ಯಕ್ಷಮ, ಪರಿಶ್ರಮುಪಡುವ ಪ್ರತಿನಿಧಿಗಳು ಬೇಕು.

ತರುಣ ಮತ್ತು ತರುಣಿಯರು

ವಿವಾಹಿತರಿರಲಿ—ಅವಿವಾಹಿತರಿರಲಿ, ಬಡವರಿರಲಿ. ಶ್ರೀಮಂತರಿರಲಿ. ಪ್ರತಿಯೊಬ್ಬರೂ ತಮ್ಮ ವೃದ್ಧಾಪ್ಯಕಾಲದ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕು. ಮತ್ತು ಅದಕ್ಕೆ ಸುಲಭಮಾರ್ಗವೆಂದರೆ

"ಪ್ರಾವ್ಹಿಡೆಂಟ ವಿಮೆ"

ಭರಪೂರ ಪಗಾರ ಇಲ್ಲದೆ ಕಮೀಶನ್ನಿನ ಮೇಲೆ ಎಲ್ಲೆಡೆಯಲ್ಲಿ ಏಜಂಟರನ್ನು ನೇಮಿಸುವದದೆ.

ಬರೆಯರಿ,

ದಿ ಸೋಶಲ್ ಸರ್ವಿಸ ಪ್ರಾವ್ಹಿಡೆಂಟ್, ಇನ್ಶೂರನ್ಸ ಕಂಪನಿ, ಲಿಮಿಟೆಡ್, ಹೆಡ್ ಆಫೀಸ ಬೆಳಗಾವಿ. ಬ್ರಾಂಚ ಮುಂಬೈ.

ಅಥವಾ

ಏಜನ್ಸಿ ಆರ್ಗನಾಯಝರ— ಆರ್. ಎಂ. ಮುನವಳ್ಳಿ ೩೧೩, ತಳಕವಾಡಿ ಬೆಳಗಾವಿ

ಪಡಗಾನೂರ ಪತ್ರ.
(ತಾ. ಸಿಂದಗಿ)

ಇಲ್ಲಿ ಮುಂಗಾರಿ ಮಳೆ ಚನ್ನಾಗಿ ಆಗದ್ದರಿಂದ ಪೂರ್ಣ ಬಿತ್ತಿಗೆ ಆಗಲಿಲ್ಲಾ. ಕಾರಣ ಮುಂಗಾರಿ ಬೆಳೆ ಸಾಕಷ್ಟು ಇರುವದಿಲ್ಲಾ. ಮುಂಗಾರಿ ಆಣೇವಾರಿ ಪಂಚರು ೨ ಆಣೆ ಹಾಕಿ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ ಆದರೂ ಸ. ಇ. ರು ಳ ಆಣೆ ಹಾಕುತ್ತೇವೆಂದು ಅಂದರು. ಕಾರಣಾ ರೈತರು ತಮ್ಮ ಸ್ಪಷ್ಟ ಅಭಿಪ್ರಾಯ ೨ಆಣೆಯಂತೆ ಕೊಟ್ಟಿರುತ್ತಾರೆ.

ಹಿಂಗಾರಿ ಬೆಳೆಗಳು ಕೆಟ್ಟ ಗಾಳಿ ಬೀಸಿದ್ದರಿಂದಾ ಪೈರು ಒಣಗಿಹೋಗಿವೆ ಹೀಗೆ ಆಗಿ ರೈತರು ಬಹಳ ಕಷ್ಟದಲ್ಲಿ ಇದ್ದಾರೆ. ರೈತರಲ್ಲಿ ಸರಕಾರಿ ತೆರಿಗೆ ಸಹಿತ ಕೊಡುವ ತ್ರಾಣ ಉಳಿದಿಲ್ಲಾ.

ಊರಲ್ಲಿ ಪ್ಲೇಗ ಗಡಿಬಿಡಿಯಾಗಿ ೨ಕೇಶ ಆಗಿವೆ. ೬೦೦ ಜನರು ಇನಾಕ್ಯೂಲೇಶನ್ ಮಾಡಿಸಿಕೊಂಡಿದ್ದಾರೆ. ಡಿ. ಎಲ್. ಬಿ. ಯವರು ನಮ್ಮ ಊರ ಹತ್ತರವಿದ್ದ ಹಿಪ್ಪರಗಿಯಲ್ಲಿ ಮೋಫತ ದವಾಖಾನೆ ತೆಗೆದು ಡಾಕ್ಟರರನ್ನು ನೇಮಿಸಿದ್ದಾರೆ ಸದರಿ ಡಾಕ್ಟರರು ನಮ್ಮ ಗ್ರಾಮಕ್ಕೆ ವಾರದಲ್ಲಿ ಒಂದು ದಿವಸ ಬಂದು ರೋಗಿಗಳನ್ನು ತಪಾಸಿಸಿ ಔಷಧ ಕೊಡಬೇಕಂತಾ ಇದ್ದು ಆ ಪ್ರಕಾರ ನೇಳ್ಳೆಶೀರ ಬರದೆ ನ ಬಂದರೂ ಔಷಧ ವಗೈರೆ ತರದೆ ಹಿಪ್ಪರಗಿಗೆ ಒಂದು ಔಷಧ ತಕ್ಕೊಂಡು ಹೋಗಿರಿ ಅನ್ನುತ್ತಾರೆ. ಇದರಿಂದ ರೋಗಿಗಳಿಗೆ ವ ಜನರಿಗೆ ಅನಾನುಕೂಲತೆ ಆಗಿದೆ.

ಈಊರಲ್ಲಿ ಲೋ. ಬೋ. ಶಾಲೆ ಇದ್ದು ೧೫೦ ಹುಡುಗರು ಕೂಡಿರುತ್ತವೆ ೩ಜನರು ಮಾಸ್ತರರು ಇದ್ದಾರೆ. ಆದರೆ ಇದರಲ್ಲಿ ೬೪ ಹೆಣ್ಣು ಹುಡಿಗೆಯರಿದ್ದು ಅವರಿಗೆ ಬೇರೆ ಒಂದು ಗರ್ಲ್‌ಸ್ಕೂಲ ತೆಗೆದರೆ ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಅನುಕೂಲವಾಗಿ ಪ್ರೌಢ ಹೆಣ್ಣುಮಕ್ಕಳುಶಾಲೆಗೆಹೋಗಿ ವಿದ್ಯಾಭ್ಯಾಸ ಮಾಡಲಿಕ್ಕೆ ಹೆಚ್ಚು ಅನುಕೂಲವಾಗುತ್ತದೆ ಪ್ರೌಢ ಹೆಣ್ಣುಮಕ್ಕಳಲ್ಲಿ ಶಾಲೆ ಕಲಿಯಬೇಕೆಂಬ ಬವಲವಿಕೆ ಹೆಚ್ಚಾಗಿ ಆದೆ. ಕಾರಣಾ ಬೇರೆ ಗರ್ಲ್‌ಸ್ಕೂಲ ಮಾಡಬೇಕೆಂದೂ ಡಿ. ಸ್ಕೂ. ಬೋರ್ಡಿಗೆ ವಿನಂತಿ ಅದೆ

ಪ್ರತಿವರ್ಷದಂತೆ ಶ್ರೀ. ಮಾರುತಿ ದೇವರ ಕ್ಷಾರ್ತಿಕ ಉತ್ಸವವನ್ನು ಆ ಗುಡಿಯ ಮಾಲಕರಾದ ಧೋಂಡಾಚಾರ್ಯ ಜಹಗೀರದಾರರು ಮ ಭಕ್ತ ಜನರು ಒಳ್ಳೇ ಉತ್ಸಾಹದಿಂದ ನೆರವೇರಿಸಿದರು.

ಈ ಮೊದಲಿಗೆ ಶ್ರೀ ಮಾರುತಿ ದೇವರ ಗುಡಿಯಲ್ಲಿ ಗುಡಿಯ ಮಾಲಕರ ಕಬೂಲಿಯಿಂದ ಬಿನ್ನ ಬಾಡಿಗೆಯಿಂದ ಭಕ್ತ ರಿಪೇರಿ ಮಾಡಿಸಿಕೊಂಡು ಅಲ್ಲಿ ಲೋ ಬೋ. ದವರು ಶಾಲೆಯನ್ನು ಹಾಕುತ್ತಿದ್ದರು ಈಗ ಹುಡುಗರು ಹೆಚ್ಚು ಆದ ಕಾರಣ ಬೇರೆ ಇನ್ನೂರತಿ ಬಾಡಿಗಿ ಹಿಡಿದು ತಾ ೧-೧೦ ೪೧ ರಿಂದ ಬಾಡಿಗಿ ಮನೆಯಲ್ಲಿ ಶಾಲೆ ಹಾಕಲಿಕ್ಕೆ ಹತ್ತಿದ್ದಾರೆ ಆದರೆ ಸದರಿ ಗುಡಿಯ ಮಾಲಕರಾದ ಧೋಂಡಾಚಾರ್ಯ ಜಹಗೀರದಾರ ಇನರು ರಿಪೇರಿ ಹಣದ ಸಲುವಾಗಿ ಕೇಸ ನಡಿಸಿದ್ದಾರೆ

ಜಿಲ್ಲಾ ಸಮಾಚಾರ.

ಶ್ರೀನಿವಾಸಾಚಾರ್ಯ ಅಣ್ಣಾಚಾರ್ಯ ಜಹಗೀರದಾರ ಇವರು ೨ ಆಣೆ ಲೋಕಲ ಪಂಡ ಕೊಡದಿದ್ದರ ಬಾಬತ ವಿಜಾಪುರ ಕೋರ್ಟನಲ್ಲಿ ಅವರ ಮೇಲೆ ದಾಮಾ ಆಗಿ ತಾ. ೧೬-೧೨-೪೧ ದಿವಸ ಮುದ್ದತ ಇರುತ್ತದೆ.

—ಸಭ್ಯಗ್ರಹಸ್ಥ

ಭಾಗಲಪೂರ
ದಿನಾಚರಣೆ.
(ಓರ್ವ ಸುದ್ದಿಗಾರ)

ರವಿವಾರ ತಾರೀಖು ೧೪-೧೨-೪೧ ಇಸ್ಪಿಯ ಮುಂಜಾವಿನಲ್ಲಿ ಭತಗುಣಕಿ ಗ್ರಾಮದಲ್ಲಿ ವ ಸಂಜೆಯ ೪ ಘಂಟೆಗೆ ಚಡಚಣ ಗ್ರಾಮದಲ್ಲಿ ದೊಡ್ಡ ಸಭೆ ನೆರಿಸಲಾಯಿತು. ಸಭೆಗೆ ಬಹುಜನರು ಕೂಡಿದ್ದರು ಭೂಯಾರ ಗ್ರಾಮದಿಂದ ಹಿಂದೂಸಹಾ ಸಭಾ ಕಾರ್ಯವಾಹಕರಾದ ಶ್ರೀಯುತ ಬಿ ಆರ್. ಜಹಾಗೀರದಾರ ಇವರು ಸಭೆಗೆ ಆಗಮಿಸಿದ್ದರು. ಅವರು ತಮ್ಮ ವ್ಯಾಖ್ಯಾನದಲ್ಲಿ ಹಿಂದೂ ಮಹಾಸಭೆಯ ತತ್ವಗಳ ಗುಟ್ಟನ್ನು ಮೊದಲು ಜನತೆಯ ಮುಂದಿರಿಸಿ ನಂತರ ಈ ವರುಷ ಇದೇ ತಿಂಗಳ ೨೪-೨೫-೨೬ ಈ ಮೂರು ದಿನಸ ಭಾಗಲ ಮೂರದಲ್ಲಿ ಕೂಡಲಿರುವ ಅಖಿಲಭಾರತ ಹಿಂದೂ ಮಹಾಸಭೆಯ ಅಧಿವೇಶನಕ್ಕೆ ಸರಕಾರದನರು ಬಂದೀ ಮಾಡಿದ್ದರ ಕುರಿತು ಭಾ[illegible]ತಿದರು. ಅ ಬಾ. ಹಿ. ಮಹಾಸಭಾಧ್ಯಕ್ಷ ಬ್ಯಾ ಸ್ವಾತಂತ್ರ್ಯ ವೀರ, ಸಾವರಕರರ ಆದೇಶಾನುಸಾರ ಇನ[illegible]ನ ದಿವಸ 'ಭಾಗಲಪೂರ' ದಿವಸವು ಎಲಸತಕ್ಕದ್ದಿದ್ದು ಯಾವತ್ತೂ ಹಿಂದೂ ಜನರು ತಮ್ಮ ಸಾಮಾಜಿಕ ಹಕ್ಕಿಗೆ ಬಾಧೆಪಡುವ ಈ ಬಂದೀ ಹುಕುಮನ್ನು ರದ್ದುಪಡಿಸಿ ಅಧಿವೇಶನವನ್ನು ಸಾಗ ಮಾಡಿಸಿಕೊಳ್ಳುವ ಬಗ್ಗೆ ಸರಕಾರದವರಿಗೆ ಈ ಸಭೆಯಿಂದ ತಿಳಿಸತಕ್ಕದ್ದು ಈ ಸಭೆಯ ಮುಖ್ಯ ಕಾರ್ಯವೆಂದು ಸಭಿಕರಿಗೆ ವ್ಯಾಖ್ಯಾತರು ವಿಶದವಾಗಿ ತಿಳಿಸಿ ಹೇಳಿದರು. ನಂತರ ಸರ್ವಾನುಮತದಿಂದ 'ಭಾಗಲಪೂರದ ಅಧಿವೇಶನದ ಬಂದೀ ಹುಕುಮು ಸರಕಾರದವರು ರದ್ದು ಪಡಿಸಬೇಕೆಂಬ ರಠಾವು ವಾಸಾಗಿ ಭಾಗಲಪೂರದ ದಿನವು ಪಾಲಿಸಲಾಯಿತು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.
ಇದರಿಂದ ಒಳಜ್ವರ ಮತ್ತು ಕೆಮ್ಮು ಇಲ್ಲದಂತಾಗಿ
ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.
ಇದು ಸೇವನಕ್ಕೆ ಮಧುರವಾಗಿದೆ.

ಬರಡೋಲ.
(ಓರ್ವ ಸುದ್ದಿಗಾರರಿಂದ)

(೧) ನಮ್ಮೂರ ಶಾಲೆಯು ಬಹಳ ದಿವಸಗಳಿಂದ ಒಬ್ಬರೇ ಮಾಸ್ತರರಿಂದ ನಡೆಯುತ್ತ ಬಂದಿದ್ದು ಮುಂದೆ ಸನ್ ೧೯೩೭ ಕ್ಕೆ ಕುಲಕರ್ಣಿಯವರಿಗೆ ವರ್ಗವಾಗಿ ಬಂದ ನಂತರ ಈಗ ಹೆ. ಮಾ ಗು ದೀಕ್ಷಿತ ಇವರ ಸಹಾಯದಿಂದ ೧೫೬ ಹುಡುಗರು ಆಗಿ ಇನ್ನೊಬ್ಬ ಅಸಿ[illegible] ರನ್ನು ಸಹ ದೊರಕಿಸಿಕೊಂಡು ೬ನೇ ಎತ್ತೆಯವರೆಗೆ ಕ್ಲಾಸುಗಳನ್ನು ನಡಿಸಿದ್ದಾರೆ ಈ ಸ್ಥಿತಿ ನಮ್ಮೂರ ಶಾಲೆಗೆ ಬಂದಿತೆಂದು ನಮ್ಮ ಕಲ್ಪನೆ ಸಹ ಇದ್ದಿಲ್ಲ ಇದೆಲ್ಲ ದೀಕ್ಷಿತ ಮಾಸ್ತರ ಅನುಗ್ರಹದಿಂದಲೇ ಆಗಿದ್ದು ಎಲ್ಲ ಶ್ರೇಯಸ್ಸು ಅವರಿಗೆ ಸಲ್ಲ ತಕ್ಕದ್ದು.

ಪ್ರಕಟನೆ.

ಯಾವತ್ತು ಗ್ರಾಮಪಂಚಾಯತಿ ಕಮೀಟಿಯವರಿಗೆ ಈ ಪ್ರಕಟನೆಯ ಮೂಲಕ ವಿನಂತಿ ಮಾಡಿಕೊಳ್ಳುವದೇನಂದರೆ—

ಈಗ ೨೦೦೦ ಜನಸಂಖ್ಯೆಯುಳ್ಳ ಹಳ್ಳಿಗಳಲ್ಲೆಲ್ಲ ಗ್ರಾಮಪಂಚಾಯತಿಗಳನ್ನು ಸ್ಥಾಪಿಸಲಾಗಿದೆಯಷ್ಟೆ ಸರಕಾರದವರು ಆ ಬಗ್ಗೆ ಕಾಯದೆಗಳನ್ನು ಮಾಡಿದ್ದಾರೆ. ಆದರೆ ಈಗ ಸದ್ಯ ಸ್ಥಾಪಿಸಲ್ಪಟ್ಟ ಗ್ರಾಮ ಪಂಚಾಯತಿಗಳವರಿಗೆ ಆಡಳತೆ ನಡೆಸುವಲ್ಲಿ ಯಾವ ಆಡಚಣೆಗಳು ಬರುತ್ತವೆಂಬ ಬಗ್ಗೆ ವಿಚಾರವಿನಿಮಯ ಮಾಡಲು ಒಂದು ಜಿಲ್ಲಾ ಸರಪಂಚರ ಸಭೆಯನ್ನು ಕರೆಯಬೇಕೆಂದು ಮಾಡಿದ್ದೇನೆ. ಕಾರಣ ಈ ಕೆಳಗಿನ ವಿಳಾಸಕ್ಕೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದಲ್ಲಿ ಮುಂದಿನ ವಿಚಾರ ಮಾಡಬೇಕೆಂದು ಬಯಸಿದ್ದೇನೆ.

ಜೀವರಾಜ ರಾವಜಿ ದೋಶಿ

ಪೋಷ್ಟ:— ಚಡಚಣ
ಜಿಲ್ಲಾ:— ವಿಜಾಪುರ

ಸಂಸ್ಥಾನ

ರಾಯಚೂರ

— ರಣಜಿತ ಟಾಕೀಜದ ಪ್ರಾರಂಭೋತ್ಸವವು ೧೦ ನೇ ತಾರೀಖಿನ ದಿನ ಜಿ. ಕಲೆಕ್ಟರರಾದ ಶ್ರೀ. ಜಾಹೀರ ಅಹಮ್ಮದ ಇವರ ಹಸ್ತದಿಂದ ಜರುಗಿತು.

ಕೊಲ್ಲಾಪುರ

ಕೊಲ್ಲಾಪುರದಲ್ಲಿಯ ಶ್ರೀ ಶಾಮಸಾವ ಭೋಸಲೆ ಇವರ ಮಗನನ್ನು ಮಹಾರಾಣಿ ತಾರಾಬಾಯಿಯವರಿಗೆ ದತ್ತಕ ಕೊಟ್ಟು ಅವನನ್ನು ಕೊಲ್ಲಾಪುರದ ಸಿಂಹಾಸನವನ್ನೇರಿಸಬೇಕೆಂಬ ಬಗ್ಗೆ ಪ್ರಯತ್ನ ನಡೆದಿರುವದಾಗಿ ತಿಳಿದುಬರುತ್ತದೆ.

ಜಪಾನದ ಯುದ್ದದ ಸಾಮರ್ಥ್ಯ

ಹಡಗುಪಡೆ, ವಾಯುಸೇನೆ, ಮತ್ತು ಸೈನಿಕಬಲಗಳ ಕ್ರಿಯಾಶಕ್ತಿ.

ಭಯಂಕರ ಯುದ್ಧಸಮಯದಲ್ಲಿ ಜಪಾನದ ದೈವವು ಅದರ ಬಲವಾದ ಭಯಂಕರವಾದ "ಹಶ್ ಹಶ್" ಹಡಗುಪಡೆಯ ಬಲದಿಂದಲೇ ನಿರ್ಧರಿಸಲ್ಪಡುವದು

ಇಂದಿಗೆ ಜಪಾನದ ಹಡಗುವಡೆಯ ಹಡಗಗಳ ಸರಿಯಾದ ಬಲ ಅದಾ ಟನ್ನುಗಳ ಪ್ರಮಾಣ, ಇಲ್ಲವೇ ನಿಯೋಗಿಸಲ್ಪಟ್ಟ ಅಥವಾ ಕಟ್ಟುಎಕೆಯ ಅರಿವು ಯಾರಿಗೂ ತಿಳಿದಿರುವದಿಲ್ಲ

ಹಡಗುಪಡೆಯ ರಚನೆಯ ವಿಷಯಗಳನ್ನು ಜಗತ್ತಿನ ಹಡಗುಪಡೆಯಲ್ಲಿ ನುರಿತ ಒದ್ದಿವಂತ ಅಧಿಕಾರಿಗಳಿಗೂ ಕೂಡ ಅರಿಯದಂತೆ ಗುಪ್ತವಾಗಿಯೇ ಇಡಲಾಗಿದೆ ೧೯೩೬ರ ಕೊನೆಯಿಂದ ಗುಪ್ತ ರೀತಿಯಿಂದಲೇ ಕಾರ್ಯವಾಗುತ್ತಿರಬಹುದೆಂದು ತಿಳಿಯಲ್ಪಡುತ್ತದೆ.

ಅಗ್ಗೆ ಜಪಾನದ ಹತ್ತಿರ ೯ ಹೊಸ ಮಾದರಿಯ ಯುದ್ಧ ಹಡಗಗಳು, ೧೨ ಬಲಿಷ್ಠವಾದ ಯುದ್ಧನಾವೆಗಳು ೫೫ ಹಗುರಾದ ಯುದ್ಧನಾವೆಗಳು, ೧೧೦ ವಿಧ್ವಂಸಕಗಳು ೬ ವಾಯು ದೋಣಿಗಳನ್ನು ಒಯ್ಯುತಕ್ಕವು ಮತ್ತು ೩ಸಮುದ್ರ ವಿಮಾನಗಳನ್ನು ಒಯ್ಯತಕ್ಕವು ಮತ್ತು ೬೨ ಜಲಾಂತರ್ನಾವೆಗಳು ಇದ್ದವು.

"ಆಡೆಟೆಡ ಎಡ್ವರ್ಟಾಯಿಜರ" ದಲ್ಲಿ ವಿಶೇಷ ಸುದ್ದಿಗಾರನೊಬ್ಬನು ಈ ರೀತಿ ಬರೆಯುತ್ತಾನೆ.

"೧೯೩೭ ರಿಂದೀಚೆಗೆ ಜಪಾನವು ಬಹುದೊಡ್ಡ ಪ್ರಮಾಣದಲ್ಲಿ ಭಾರವಾದ ಹಡಗಗಳನ್ನು ತನ್ನ ಹಡಗುಪಡೆಯ ಕಾಲಿ ಖಾನೆಗಳಲ್ಲಿ ಗುಪ್ತ ರೀತಿಯಿಂದ ಕಟ್ಟಿಹತ್ತಿದೆ ಈ ಯೋಜನೆಯಿಂದ ಐದು ವರ್ಷದ ವರೆಗೆ ಸಾಕಾಗುವಷ್ಟು ಕಾರ್ಯ ಆಗಿದೆ"

ಜಪಾನವು ತನ್ನ ಉಪಯೋಗಕ್ಕಾಗಿಯೇ ಸಾರಲ್ಪಟ್ಟ ಮೇರೆಗೆ ೩೫೦೦೦ ಟನ್ನಿನ ೪ ಯುದ್ಧಹಡಗಗಳನ್ನು ಅಥವಾ ನಂಬಲರ್ಹವಾದ ವರದಿಗಳ ಮೇಲಿಂದ ಜಪಾನವು ೬೦೦೦೦ಟನ್ನಿನಒಂದುಅತ್ಯಂತ ದೊಡ್ಡಹಡಗ, ಎರಡುಳ೦೦೦೦ಟನ್ನಿನ ಯುದ್ಧ ಹಡಗಳನ್ನು ಕಟ್ಟಬಹುದೆಂದು ತಿಳಿಯಲಾಗಿದೆ

ಈ ಭಯಂಕರವಾದ ಮತ್ತು ಸಾಮರ್ಥ್ಯವಾನವಾದವುಗಳಾದ ಹಡಗಗಳು ೧೯೪೧ರ ಕೊನೆವರೆಗೂ ಉಪಯೋಗಿಸಲ್ಪಡಲಿಕ್ಕಿಲ್ಲವೆಂದು ತಿಳಿದುಬರುತ್ತದೆ.

ಸಾಮರ್ಥ್ಯದ ಪ್ರಶ್ನೆ.

ಜಪಾನದ ಹಡಗುಪಡೆಯ ಸಾಮರ್ಥ್ಯದ ವಿಷಯವಾಗಿ ಪರರಾಷ್ಟ್ರಗಳ ಹಡಗುಪಡೆಯವರಲ್ಲಿಯೂ ಎರಡಭಿಪ್ರಾಯವಿರುವದಿಲ್ಲ

ಬ್ರಿಟನ್ನವು ತನ್ನ ಸದ್ಯದ ಅಸಂಖ್ಯ ಹಡಗುಪಡೆಯ ಯೋಜನೆಯನ್ನು ಪ್ರಾರಂಭಿಸುವ ವರೆಗೂ ಜಪಾನದ ಹತ್ತಿರ ಜಗತ್ತಿನ ಹಡಗುಪಡೆಯಲ್ಲಿ ಹೊಸ ತರಗತಿಯ ಹಡಗಗಳ ಪ್ರಮಾಣವು ಹೆಚ್ಚಾಗಿದ್ದಿತು

ಜಪಾನದ ಯುದ್ಧ ಹಡಗಗಳು ಸಂಖ್ಯೆಯಲ್ಲಿ ಕಡಿಮೆಯಾಗ್ಯೂ ಆಮೇರಿಕದ ಹಡಗಗಳಿಗಿಂತಲೂ ವೇಗವುಳ್ಳವೂ ಮತ್ತು ಅತ್ಯಂತ ಹೊಸಮಾದರಿಯವೂ ಆಗಿವೆ ಅದರ ಬಲವಾದ ಯುದ್ಧನಾವೆಗಳು ಅತ್ಯಂತ ವೇಗವುಳ್ಳವುಗಳಲ್ಲದೆ ಭಾರವಾಹಿಗಳೂ ಆಗಿವೆ ಅದರ ಹಗುರಾದ ಯುದ್ಧನಾವೆಗಳಾದರೂ (೮೫೦೦ಟನ್ನಿನವು) ಅಮೇರಿಕೆಯ ೧೦೦೦೦ ಟನ್ನಿ ನಾವೆಗಳಕ್ಕಿಂತಲೂ ಹೆಚ್ಚು ಭಾರವ ಗಳಾಗಿದ್ದು ಸನ್ನಾ ಹಡಗಳನ್ನು ಅವುಗಳಲ್ಲಿ ಹಳವಾಗಿ ಸಂಗ್ರಹಿಸಲ್ಪಡುತ್ತಿದೆ ಮ ಹೆಚ್ಚು ಟಾರ್ಪೆಡೋಗಳನ್ನು ಒಯ್ಯು ಶ

ಅಧಿಕಾರಿಗಳಾದರೂ ಒಳ್ಳೆ ತಾಣರೂ ಮತ್ತು ಉಚ್ಚ ತರಬೇ ೊಂದಿದವರೂ ಆಗಿರುವರು.

ಜಪಾನದ ಯುದ್ಧ ಅಧಿಕಾರಿಗಳನ್ನು ಗಣಿಸುವ ಪ್ರಮಾಣವು ಬ್ರಿಟಿಶ ಅಥವಾ ಆಮೇರಿಕನ್ನರ ಹಡಗಗಳಿಗಿಂತಲೂ ನೂರಕ್ಕೆ ೧೫ರಷ್ಟು ಹಚ್ಚಿದೆ

ಆಪಘಾತಕ್ಕೊಳಗಾದಾಗ್ಗ ಹೆಚ್ಚು ನಾವಿಕರಿದ್ದರೆ ಕೊನೆಯ ವರೆಗೂ ಹೋರಾಡಲು ಸಾಕಷ್ಟು ನಾವಿಕ ಜನರನ್ನು ಉಳಿಸಿಕೊಳ್ಳುವದೆಂಬದನ್ನು ಜಪಾನರು ಮನಗಂಡಿದ್ದಾರೆ.

ಜಪಾನಿ ನಾವಿಕರು ಬ್ರಿಟಿಶ ಜಾಕ ಟಾರರಂತೆ ಒಂದೇ ತರಹದ ಉಡುಪನ್ನು ಧರಿಸುತ್ತಾರೆ ಮತ್ತು ಹಡಗುಪಡೆಯಲ್ಲಿ ಸಿಸ್ತು ಹಾಗೂ ವ್ಯವಸ್ಥೆಗಳೆಲ್ಲವೂ ಬ್ರಿಟಿಶ ಹಡಗುಪಡೆಯ ಮಾದರಿಯಂತೆಯೇ ಇಡಲ್ಪಟ್ಟಿರುತ್ತವೆ

ವಾಯುಬಲ.

ಜಪಾನವು ಹೋರಾಡತಕ್ಕ ವಾಯುಬಲವು ೧೫೦೦ಯಂತ್ರಗಳಿಂದ ಮಾಡಿದ್ದಾಗಿದೆ ಮತ್ತು ಸರಕಾರದಿಂದ ನಡೆಸಲ್ಪಡತಕ್ಕ ಕಾರಖಾನೆಗಳು ಬಿಟ್ಟಬಿಡದೆ ಹಗಲುರಾತ್ರಿ ಕೆಲಸಮಾಡುತ್ತಲಿವೆ. ಅಮೇರಿಕನ್ ಜರ್ಮನ ಮತ್ತು ಫ್ರೆಂಚ ವಿಮಾನಗಳನ್ನು ಕೂಡ ಲಾಯಸೆನ್ಸು ಪಡೆದು ಕಟ್ಟುತ್ತಿವೆ.

ಜಪಾನವು ವರುಷಕ್ಕೆ ಹೆಚ್ಚೇದರೆ ೬೦೦೦ ಕ್ಕಿಂತಲೂ ಹೆಚ್ಚು ವಿಮಾನಗಳನ್ನು ಕಟ್ಟಲಾರದೆಂದು ಅಧಿಕಾರಿಗಳು ಅಂದಾಜು ಮಾಡುತ್ತಾರೆ ಅಂದರೆ ಜಪಾನವು ಸದ್ಯ ಇದ್ದ ಬಲಕ್ಕಿಂತಲೂ ೧೦೦೦ ಯಂತ್ರಗಳನ್ನು ಮಾತ್ರ ಸರಾಸರಿಯಾಗಿ ತಯಾರಿಸಿ ಕಾರ್ಯಕ್ಕೆ ಸನ್ನದ್ಧವಾಗಿಡಲಾರು.

ಜಪಾನದ ಕರ್ಣಧಾರರು (ಹಡಗ ನಡೆಸುವವರು) ವಿಶೇಷವಾಗಿ – ವಾಯು ನೌಕಯ ಬಲದವರು—ಒಳ್ಳೇ ಧೈರ್ಯಶಾಲಿಗಳೂ ಮತ್ತು ಚತುರರೂ ಆಗಿರುವರು

ಜಪಾನಿಯರು ಕನ್ನೆನಲ್ಲಿ ಮಾತ್ರ ಕುಂದುಳ್ಳವರು ಮತ್ತು ಕಿವಿಗಳಲ್ಲಾದರೂ ತುಸು ಕಡಿಮೆಯವರೆಂದೇ ಹೇಳಬಹುದು ಜಪಾನಿಯರಂತೆ ಕರ್ಣಧಾರನಾದರೂ ಆಜ್ಞೆಗಳ ಮೇರೆಗೆ ಕೆಲಸಮಾಡಬಲ್ಲನು ಆದರೆ ಯಾವುದನ್ನು ಮಾಡಬೇಕೆಂಬದನ್ನು ಮಾತ್ರ ಆತನಿಗೆ ತೋರಿಸಿಕೊಡಬೇಕಾಗುವದು

ಸೇನೆಯ ಸುಧಾರಣೆ.

ಮೂರುವರ್ಷದಿಂದ ಯುದ್ಧ ಸುರುವಾದಾಗ್ಗೆ ಚೀನಕ್ಕೆ ೩೦೦೦೦೦೦ ಸೈನಿಕರನ್ನು ಜಪಾನವು ಕಳಿಸಿಕೊಟ್ಟಿದೆ. ಆದರಲ್ಲಿ ಸುಮಾರಾಗಿ ೩೦೦೦೦೦ ರಿಂದಳ೦೦೦೦೦ ವರೆಗೆ ಸೈನಿಕರು ಮೃತವಟ್ಟಿರುವರು. ಮತ್ತು ೩೫೦೦೦೦ ಸೈನಿಕರು ಉತ್ತರ ಚೀನದಲ್ಲಿ ಸೋವ್ವಿಯೆಟ್‌ದ ಗಡಿಯನ್ನು ಕಾಯಲು ಇಡಲ್ಪಟ್ಟಿರುವರು.

ಪ್ರತಿವರ್ಷ ೨೦ ವರ್ಷದ ೧೫೦೦೦೦ ತರುಣರು ಸೇನೆಯಲ್ಲಿ ತೆಗೆದುಕೊಳ್ಳಲ್ಪಟ್ಟು ೨ ವರ್ಷಗಳ ವರೆಗೆ ಅವರಿಗೆ ತರಬೇತಿ ಕೊಡಲಾಗುವದು ಇದರಿಂದ ಸುಮಾರಾಗಿ ೩೦೦೦೦೦೦ ತರಬೇತಿ ಹೊಂದಿದ ಕಾದಿಟ್ಟ ಸೈನಿಕರು ಕೂಡಲೇ ಬದಲಾಯಿಸಲು ಅವಶ್ಯವಿದ್ದಲ್ಲಿ ಸಾಧ್ಯವಾಗುವದು

ಜಪಾನವು ೫ ವರ್ಷಗಳ ವರೆಗೆ ಸಾಕಾಗುವಷ್ಟು ಸೇನೆಯ ಸುಧಾರಣೆಯನ್ನು ಒಳ್ಳೇ ಒತ್ತರದಿಂದ ಸಾಗಿಸಿದೆ

ನಾಝಿ-ಜಪಾನಿಗಳ ಕೈಗಾರಿಕೆಯ ಸಮಿತಿಯವರ ತೀವ್ರತರವಾದ ಒಂದು ಕಾರ್ಯವು ಅಚ್ಚಿನ ರಾಷ್ಟ್ರಗಳು ಕರಾರುಗಳ ಪ್ರಕಾರ ನ್ಯಾರಂಭವಾಯಿತು. ಹೆಚ್ಚು ಶ್ರಮಪಟ್ಟು ತಯಾರಿಸಿದ ಯುದ್ಧೋದ್ಯೋಗಗಳಿಂದ ಯಂತ್ರೀಕರಣದ ಮಹತ್ವದ ತೊಡಕು ಬಿಡಿಸಲ್ಪಟ್ಟಿತು

ಪರರಾಷ್ಟ್ರ ನಿರೀಕ್ಷಕರು ಜಪಾನಿ ಸೈನಿಕರು ಶೂರರೂ, ರಾಜನಿಷ್ಠರೂ ಹಾಗೂ ಮೊದಲು ತರಗತಿಯ ಕಾಲ್ಬಲದವರೆಂದೂ ಸಾರುತ್ತಿದ್ದಾರೆ



ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಳ್ಳಲು ನಿಮ್ಮಲ್ಲಿ ಒಟ್ಟಿಗೆ ೧೦ ರೂಪಾಯಗಳಿಲ್ಲದಿದ್ದಲ್ಲಿ ೪ ಆಣೆ ೨ ಆಣೆ ೯ ಪೂಪಾಯಿ ಪ್ರಮಾಣದ ಡಿಫೆನ್ಸ್ ಸೇವಿಂಗ್ಸ್ ಸ್ಟ್ಯಾಂಪುಗಳನ್ನು ಕೊಂಡು, ಅವುಗಳನ್ನು ಪೋಸ್ಟಾಫೀಸಿನಲ್ಲಿ ಉಚಿತವಾಗಿ ಕೊಡುವ ಕಾರ್ಡಿನ ಮೇಲೆ ಅಂಟಿಸಿ ಅವುಗಳ ಬೆಲೆಯು ೧೦ರ ಪೂಪಾಯಿ ಆದೊಡನೆಯೇ ಡಿಫೆನ್ಸ್ ಸರ್ಟಿಫಿಕೇಟಿಗೆ ವಿನಿಮಯ ಮಾಡಿಕೊಳ್ಳಬಹುದು.

ಎಲ್ಲಾ ವಿಸರಗಳೂ ಪೋಸ್ಟ್ ಆಫೀಸಿನಲ್ಲಿ ದೊರೆಯುವವು

ಕೊಳ್ಳಿರಿ **ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು** G I 78 Ka

ನಿಮಗೂ ನಮ್ಮ ನಿಮ್ಮ ದೇಶಕ್ಕೂ ಸಹಾಯ ಮಾಡಿರಿ.

ಕರ್ನಾಟಕ ವಿದ್ಯಾವರ್ಧಕ ಸಂಘ DHARWAR

ಸಹಯೋಗ

ಸಹಕಾರೀ ಉದ್ಯೋಗಗಳ ಮಾಸಪತ್ರಿಕೆ Regd No. B 55...

ಪುಟ ೩ | ಸಂಪುಟ ೩ | ಅಗಸ್ಟ ೧೯೫೧ | ಸಂಚಿಕೆ ೧೧ ಆಣೆ

ಔದ್ಯೋಗಿಕ ಸಹಕಾರವೆಂದರೇನು ? —ಶ್ರೀ ಎಲ್.ಎನ್.ರೇಣು

"ಔದ್ಯೋಗಿಕ ಸಹಕಾರಿ" ಶಬ್ದವು ಬಹಳ ಕಡೆಗೆ ಉಪಯೋಗಿಸಲ್ಪಡುತ್ತಿದೆ. ಆದರೆ ಅದರ ವ್ಯಾಖ್ಯೆಯು ಎಲ್ಲಿಯೂ ಮಾಡಲ್ಪಟ್ಟಿರುವದಿಲ್ಲ. ಮುಂಬಯಿ ಪ್ರಾಂತದಲ್ಲಿ ಔದ್ಯೋಗಿಕ ಸಹಕಾರೀ ಸಂಘಗಳ ಮತ್ತು ಗ್ರಾಮೋದ್ಯೋಗಗಳ ಸಲುವಾಗಿ ಒಬ್ಬ ಜೋಯಿಂಟ್ ರೆಜಿಸ್ಟ್ರಾರರಿರುತ್ತಾರೆ. ಭಾರತದ ಬೇರೆ ಬೇರೆ ಪ್ರಾಂತಗಳಲ್ಲಿ ತಮ್ಮ ಹೆಸರಿನಲ್ಲಿ "ಔದ್ಯೋಗಿಕ ಸಹಕಾರೀ" ಎಂಬ ವಿಶೇಷಣವನ್ನು ಉಪಯೋಗಿಸುವ ಅನೇಕ ಸಂಸ್ಥೆಗಳಿವೆ. ಇಂಗ್ಲೆಂಡದಲ್ಲಿಯ ಸಹಕಾರಿಗಳು ಒಕ್ಕಲಿಗರ ಸಂಘಗಳ ಹೊರತಾಗಿ ಇತರ ಸಂಘಗಳು ನಡಿಸುವ ಚಟುವಟಿಕೆಗಳಿಗೆ "ಔದ್ಯೋಗಿಕ ಸಹಕಾರ"ವೆಂದು ಬರೆಯುತ್ತಾರೆ. ಆ ದೇಶದಲ್ಲಿ ಗ್ರಾಹಕರ ಸಂಘಗಳಲ್ಲಿಯೆ ಬಹುಸಂಖ್ಯಾಕ ಸದಸ್ಯರು ಕಾರಖಾನೆಗಳಲ್ಲಿಯ ಕೆಲಸಗಾರರಿರುವದರಿಂದ ಅಲ್ಲಿಯ ಸಹಕಾರಿಗಳು ಗ್ರಾಹಕರ ಜಳವಳಿಗೆ "ಔದ್ಯೋಗಿಕ ಸಹಕಾರ"ವೆಂದು ಕರೆಯುವ ಪುಂಟು. ಸುಪ್ರಸಿದ್ಧ ಲೇಖಕರು ಗ್ರಾಹಕರ ಸಹಕಾರದ ಮೇಲೆ ಬರೆದ ತಮ್ಮ ಗ್ರಂಥಗಳಿಗೆ ಈ ಹೆಸರನ್ನು ಕೊಟ್ಟಿದ್ದಾರೆ.

ಪೂರ್ವ ದೇಶಗಳಲ್ಲಿ ಶೇತಕಿ ಸಹಕಾರ ಮತ್ತು ಬಿನ್—ಶೇತಕಿ ಸಹಕಾರ ಎಂಬ ಶಬ್ದಗಳು ಬಳಕೆಯಲ್ಲಿ ಬಂದಿವೆ. ಆದರೆ, ಒಕ್ಕಲತನದ ಹುಟ್ಟುವಳಿಯನ್ನು ಹಕ್ಕಾ ಪಕ್ಕಾವಾಗಿ ತಯಾರಿಸುವ ಕೆಲಸ—ಇದು ಔದ್ಯೋಗಿಕ ಚಟುವಟಿಕೆಯೇ ಸರಿ—ಕೈಕೊಂಡ ಒಕ್ಕಲಿಗರ ಸಂಘಗಳನ್ನೂ ಶೇತಕಿ ಸಂಘಗಳ ಗುಂಪಿನಲ್ಲಿ ಸೇರಿಸುತ್ತಾರೆ. ಇವುಗಳ ಉದಾಹರಣೆಗಳು ಹತ್ತಿ ಅರಿಯುವ ಮುಕ್ಕು ಪ್ರೆಸ್ಸು ಮಾಡುವ ಗಿರಣಿಗಳು, ಬೆಲ್ಲ ತಯಾರಿಸುವ ಸಂಘಗಳು ಮತ್ತು ಸಹಕಾರೀ ಸಕ್ಕರೆಯ ಸಂಘಗಳು ಇವೆ. ಉತ್ಪಾದನೆಯನ್ನು ನಡಿಸುವ ಗ್ರಾಹಕರ ಸಂಘಗಳಿಗೆ ಭಾರತದಲ್ಲಿ ಔದ್ಯೋಗಿಕ ಸಂಘಗಳೆಂದು ಕರೆಯಲಾಗುವದಿಲ್ಲ. ಮುಂಬಯಿಯ ಸಹಕಾರೀ ಸಂಘಗಳ ರಿಜಿಸ್ಟ್ರಾರರು ಮೀನುಗಾರಿಕೆಯ ಸಂಘಗಳನ್ನು ಸಹ ಔದ್ಯೋಗಿಕ ಗುಂಪಿನಲ್ಲಿ ಸೇರಿಸಬಾರದೆಂದು ಈಚೆಗೆ ಫರಾಯಿಸಿರುವರು. ಇವರ ಮೇಲಿಂದ ಶೇತಕಿ ಮತ್ತು ಮೀನುಗಾರಿಕೆಯ ಸಂಘಗಳ ಹೊರತಾಗಿ ಉತ್ಪಾದಕರ, ಮಡಿತಗಾರರ ಮತ್ತು ಕೂಲಿಕಾರರ ಗುತ್ತಿಗೆಯ ಸಂಘಗಳು "ಔದ್ಯೋಗಿಕ ಸಹಕಾರಿ"ಯ ಕಕ್ಷೆಯೊಳಗೆ ಬರುವವು. ಮುಂಬಯಿ ಸಹಕಾರೀ ಸಂಘಗಳ ಕಾಯದೆಯ ಪ್ರಕಾರ ಉತ್ಪಾದಕ ಸಂಘವೆಂದರೆ ವಸ್ತುಗಳನ್ನು ತಯಾರಿಸಿ ಅವುಗಳನ್ನು ಸಂಘದ ಸದಸ್ಯರ ಸಾಮಾನ್ಯ ಸೊತ್ತೆಂದು ತಿಳಿದು ಮಾರಾಟ ಮಾಡುವ ಉದ್ದೇಶದಿಂದ ಸ್ಥಾಪಿತವಾದ ಸಂಘವು ಎಂದು ಹೇಳಲಾಗಿದೆ; ಮತ್ತು ಇದರಲ್ಲಿ ಸಂಘದ ಸದಸ್ಯರು ಉತ್ಪಾದನೆಯನ್ನು ಸಾಮೂಹಿಕವಾಗಿ ಮಾರಾಟ ಮಾಡುವ ಉದ್ದೇಶದಿಂದ ಸ್ಥಾಪಿತವಾದ ಸಂಘಗಳು ಸಮಾವೇಶವಾಗುತ್ತವೆ. ಸಾಮೂಹಿಕವಾಗಿ ಉತ್ಪಾದನೆ ಅಥವಾ ಮಾರಾಟ ನಡಿಸದ ಸಂಘಗಳು ಆಶ್ರಯ ಸಂಘಗಳೆಂದು ತಿಳಿಯಲ್ಪಡುತ್ತವೆ. ಆದರೆ ವ್ಯವಹಾರದಲ್ಲಿ ಅದೇ ಸಂಘವು ಬೇರೆ ಬೇರೆ ಪರ್ಯಾಯಗಳಲ್ಲಿ ಆಶ್ರಯ ಸ್ವರೂಪದ ಚಟುವಟಿಕೆಗಳಲ್ಲದೆ ಉತ್ಪಾದಕ ಚಟುವಟಿಕೆಗಳನ್ನೂ, ಉತ್ಪಾದಕ ಚಟುವಟಿಕೆಗಳಲ್ಲದೆ ಆಶ್ರಯಸ್ವರೂಪದ ಚಟುವಟಿಕೆಗಳನ್ನೂ ಕೈಕೊಳ್ಳುವ ಪ್ರಸಂಗ ಬರುವದು ಕಂಡುಬರುತ್ತದೆ. ಮುಂಬಯಿ ಸಹಕಾರೀ ಖಾತೆಯವರು, ಸಾಲಕೊಡುವದಲ್ಲದೆ ಆಶ್ರಯ ಸ್ವರೂಪದ ಕೆಲಸ ಮಾಡುವ ಕಳಬುಗಾರರ ಸಂಘಗಳನ್ನು ಔದ್ಯೋಗಿಕ ಸಂಘಗಳ ಗುಂಪಿನಲ್ಲಿ ಸೇರಿಸುತ್ತಾರೆ. ಉತ್ಪಾದನೆಯ ಕೆಲಸಗಳಿಗಾಗಿಯಷ್ಟೆ ತನ್ನ ಸದಸ್ಯರಿಗೆ ಸಾಲ ಒದಗಿಸುವ ಕಳಬುಗಾರರ ಸಂಘಗಳನ್ನು ಈ ಗುಂಪಿನಲ್ಲಿ ಸೇರಿಸಬಾರದೋ? ಸಹಕಾರೀ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ಈಚೆಗೆ ಸೇರಿದ ಪ್ರಾಂತಿಕ ಔದ್ಯೋಗಿಕ ಸಹಕಾರೀ ಸಂಘದ ಒಂದು ಸಮಿತಿಯು ಸಭೆಯಲ್ಲಿ ಇಂಥ ಸಂಘಗಳು ಸಹ ಔದ್ಯೋಗಿಕ ಸಂಘಗಳೆಂದು ಪರಿಗಣಿಸಲ್ಪಡಬೇಕೆಂದು ನಿರ್ಣಯವಾಯಿತು.

ಹೀಗೆಂದಮೇಲೆ, ಸದಸ್ಯರು ಕಳ್ಳು ಬೆಳೆಯುವ ಒಕ್ಕಲಿಗರಿದ್ದ ಸಹಕಾರೀ ಸಕ್ಕರೆಯ ಕಾರಖಾನೆಯು ಒಂದು ಶೇತಕಿ ಸಂಘವಾಗುತ್ತದೆ; ಯಾವದರ ಸದಸ್ಯರು ಗ್ರಾಹಕರಿರುವರೋ ಅಂಥ ಅಥವಾ ಯಾವದರ ಒಡತನವು ಸಾಮೂಹಿಕವಾಗಿ ಕೆಲ ಗ್ರಾಹಕರ ಸಂಘಗಳದು ಇರುತ್ತದೋ ಅಂಥ ಸಹಕಾರೀ ಸಕ್ಕರೆಯ ಕಾರಖಾನೆಯು ಒಂದು ಗ್ರಾಹಕರ ಸಂಘವಾಗುತ್ತದೆ; ಮತ್ತು ಯಾವದರ ಸದಸ್ಯರು ದುಡಿಯುವ ಕೆಲಸಗಾರರಿರುತ್ತಾರೋ ಅಂಥ ಸಕ್ಕರೆಯ ಕಾರಖಾನೆಯು ಔದ್ಯೋಗಿಕ ಸಂಘವಾಗುತ್ತದೆ. ಈ ತರಹದ ವ್ಯಾಖ್ಯೆಯ ಕಕ್ಷೆಯಲ್ಲಿ ಸಹಕಾರೀ ತಳಹದಿಯ ಮೇಲೆ ಉತ್ಪಾದನೆಯ ಚಟುವಟಿಕೆಗಳನ್ನು ನಡಿಸುವ ಅನೇಕ ಸಂಸ್ಥೆಗಳು ಬರುತ್ತವೆ. ಆದರೆ, ಕಚ್ಚಾಮಾಲು ತಯಾರಿಸಿಕೊಡುವವರು, ಪಕ್ಕಾ ಮಾಲು ತೆಗೆದುಕೊಳ್ಳುವವರು, ಮತ್ತು ಉತ್ಪಾದಕರು ಇವರೆಲ್ಲ ಅಥವಾ ಇವರ ಪೈಕಿ ಇಬ್ಬರು ಯಾವದೊಂದು ಸಂಘದ ಸದಸ್ಯರಿದ್ದರೆ, ಆ ಸಂಘವು ಯಾವ ಪ್ರಕಾರದ ಸಂಘವಾಗುವದು?

ಶ್ರೀ. ಎಲ್. ಎನ್. ರೇಣು

ಪ್ರಾಂತಿಕ ಔದ್ಯೋಗಿಕ ಸಹಕಾರೀ ಸಂಘದ ಗೌರವ ಕಾರ್ಯದರ್ಶಿ ಮತ್ತು ಸಹಯೋಗ (ಇಂಗ್ರೇಜಿ) ಪತ್ರಿಕೆಯ ಸಂಪಾದಕರು ಆಗಿದ್ದ ಶ್ರೀ ಎಲ್. ಎನ್. ರೇಣುರವರು ಡಿಪ್ಲೊಮಮೆಂಟ ಅಫೀಸರ (ಗ್ರಾಮೋದ್ಯೋಗಗಳು), ಭಾರತ ಸರಕಾರ, ಈ ಹುದ್ದೆಗೆ ನೇಮಿಸಲ್ಪಟ್ಟಿದ್ದಾರೆ. ಅವರು ೧೯೫೧ ಸಪ್ಟಂಬರ ೧ ನೇ ದಿನ ತಮ್ಮ ಅಧಿಕಾರ ವಹಿಸಿಕೊಳ್ಳುವದು.

ಚೀನ: ಚೀನ ದೇಶದ ಔದ್ಯೋಗಿಕ ಸಹಕಾರೀ ಸಂಘಗಳ ಸಲುವಾಗಿದ್ದ ಅಂತರ್ರಾಷ್ಟ್ರೀಯ ಕಮಿಟಿಯು ತನ್ನ ಚಟುವಟಿಕೆಗಳನ್ನು ಕೊನೆಗೊಳಿಸಿತು

ಚೀನಾ ಔದ್ಯೋಗಿಕ ಸಹಕಾರೀ ಸಂಘಗಳ ಸಲುವಾಗಿದ್ದ ಅಂತರ್ರಾಷ್ಟ್ರೀಯ ಕಮಿಟಿಯು ೨೮ ನೇ ಜನೇವರಿ ೧೯೫೧ ನೇ ದಿನ ಪೆಕಿಂಗದಲ್ಲಿ ಸಭೆ ನೇರಿ ತನ್ನ ಚಟುವಟಿಕೆಗಳನ್ನು ಕೊನೆಗೊಳಿಸಬೇಕೆಂದು ತೀರ್ಮಾನಿಸಿತು. ಈ ಕಮಿಟಿಯಲ್ಲಿ ಚೀನೀ ಹಾಗೂ ವಿದೇಶಿಗಳ ಕೆಲ ದೊಡ್ಡ ಸಹಕಾರಿಗಳಿದ್ದು, ಅದು ಜಪಾನವನ್ನು ವಿರೋಧಿಸುವ ಯುದ್ಧದ ಪ್ರಾರಂಭ ಸಮಯದಲ್ಲಿ ಚೀನದಲ್ಲಿ ಔದ್ಯೋಗಿಕ ಸಹಕಾರೀ ಸಂಘಗಳನ್ನು ಅಭಿವೃದ್ಧಿಗೊಳಿಸುವದಕ್ಕಾಗಿ ಸ್ಥಾಪಿತವಾಯ್ತು. ಸದರಿ ಕಮಿಟಿಯು ಔದ್ಯೋಗಿಕ ಸಹಕಾರ ಚಳವಳಿಯ ಯತ್ನಗಳನ್ನು ಮತ್ತು ಅದು ಸಾಧಿಸಿದ ಪರಿಣಾಮಗಳನ್ನು ಪ್ರಚಾರಗೊಳಿಸಲಿಕ್ಕೆ ಮತ್ತು ಚೀನ ದೇಶದ ಬೇರೆ ಬೇರೆ ಭಾಗಗಳಲ್ಲಿ ಔದ್ಯೋಗಿಕ ಸಂಘಗಳಿಗಾಗಿ ಹಣವನ್ನೂ, ಉಪಕರಣಗಳನ್ನೂ ದೊರಕಿಸುವದಕ್ಕೆ ಸಹಾಯಮಾಡಿತು. ಚೀನಾ ಔದ್ಯೋಗಿಕ ಸಹಕಾರೀ ಸಂಘಗಳ ಸಂಸ್ಥೆಯು ಅಖಿಲ ಚೀನ ಸಹಕಾರೀ ಸಂಘಗಳ ಫೆಡರೇಶನದಲ್ಲಿ ಲೀನಗೊಳಿಸಲ್ಪಟ್ಟಿದ್ದರ ಕಾರಣವಾಗಿ ಕಮಿಟಿಯು ತನ್ನ ಚಟುವಟಿಕೆಗಳನ್ನು ಮುಕ್ತಾಯಗೊಳಿಸುವ ನಿರ್ಣಯ ಕೈಕೊಂಡಿತು. ಪ್ರಾಥಮಿಕ ಔದ್ಯೋಗಿಕ ಸಂಘಗಳು ಸ್ಥಳಿಕ ಸಹಕಾರೀ ಸಂಯುಕ್ತ ಸಂಸ್ಥೆಗಳಿಗೆ ಹೊಂದಿಕೊಂಡು ಅವುಗಳ ಮೆಂಬರ ಆಗಿವೆ. ಮತ್ತು ಕನ್ಸು ಪ್ರಾಂತದಲ್ಲಿ ಶಾಂತನದಲ್ಲಿಯ ಕಮಿಟಿಯವರ ತರಬೇತಿಯ ಶಾಲೆಯು, ಶಿಕ್ಷಕರು, ವಿದ್ಯಾರ್ಥಿಗಳು, ಕೆಲಸಗಾರರು ಮತ್ತು ಸ್ಥಾನಿಕ ಅಧಿಕಾರಿಗಳು ಇವರನ್ನೊಳಗೊಂಡ ಒಂದು ಸ್ಥಳಿಕ ಸಮಿತಿಯಿಂದ ಮುಂದುವರಿಸಲ್ಪಡುತ್ತಿದೆ.

ಫಿನಲ್ಯಾಂಡ: ಹಳ್ಳಿಯ ಕೈಗಾರಿಕೆ ಹಾಗೂ ಉದ್ಯೋಗಗಳ ಬೆಳವಣಿಗೆಗಾಗಿ ಕ್ರಮಗಳು—೧೯೫೦ ನೇ ಇಸ್ವಿಯ ಪ್ರಾರಂಭದಲ್ಲಿ ದೇಶದ ಹಳ್ಳಿಗರೊಳಗೆ ಕೈಗಾರಿಕೆ, ಗೃಹೋದ್ಯೋಗ ಮತ್ತು ಸಣ್ಣ ಪ್ರಮಾಣದ ಉದ್ಯೋಗಗಳನ್ನು ಬೆಳಸುವ ಶಕ್ತಿಗಳನ್ನು ಅಧ್ಯಯಿಸಲು ಒಂದು ಸರಕಾರೀ ಸಮಿತಿಯು ನೇಮಿಸಲ್ಪಟ್ಟಿತು. ಒಟ್ಟು ೪೦ಲಕ್ಷ ಜನಸಂಖ್ಯೆಯಲ್ಲಿ ಅರ್ಧದಷ್ಟು ಒಕ್ಕಲತದಮೇಲೆ ಅವಲಂಬಿಸಿರುತ್ತದೆ. ಮತ್ತು ಈ ಅರ್ಧದಲ್ಲಿಹ್ಹಿನಮಾರು ೭೫ಲಕ್ಷ

ಜನರು (ಇವರ ಮೇಲೆ ಅವಲಂಬಿಸಿದವರನ್ನು ಸೇರಿ) ೧೫ ಆಥವಾ ಕಡಿಮೆ ಎಕರೆ ಭೂಮಿಯುಳ್ಳವರಾಗಿದ್ದು ಅದರ ಮೇಲೆ ಅವಲಂಬಿಸಿರುತ್ತಾರೆ. ಇಷ್ಟರಿಂದ ಅವರ ಉಪಜೀವನಕ್ಕೆ ಬೇಕಾಗುವಷ್ಟು ಉತ್ಪನ್ನ ದೊರೆಯುವದಿಲ್ಲ. ಸದರಿ ಸಮಿತಿಯು ಅಧ್ಯಕ್ಷರು, ಹಳ್ಳಿಯ ಭಾಗಗಳಲ್ಲಿ ಚಿಕ್ಕಪುಟ್ಟ ಕೈಗಾರಿಕೆಗಳನ್ನು ಬೆಳಿಸಲು ಕೆಳಗಿನ ತರಹದ ಕ್ರಮಗಳನ್ನು ಕೈಕೊಳ್ಳಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ೧) ಆರ್ಥಿಕ, ಕೈಗಾರಿಕೆಯ ಮತ್ತು ಆಡಳಿತದ ವಿಷಯಗಳ ಬಗ್ಗೆ ಯೋಗ್ಯ ಸಲಹೆ ಪೂರೈಸುವ ಪ್ರಾದೇಶಿಕ ಸಂಸ್ಥೆ ಇರಬೇಕು; ೨) ಕಚ್ಚಾ ಮಾಲು ಹಾಗೂ ಉಪಕರಣಗಳನ್ನು ಖರೀದಿಸಲು ಮತ್ತು ತಯಾರಾದ ವಸ್ತುಗಳ ಮಾರಾಟ ಹಾಗೂ ನಿರ್ಯಾತ ಮಾಡಲು ಯೋಗ್ಯ ಏರ್ಪಾಟು ಮಾಡುವದಕ್ಕಾಗಿ ಒಂದು ರಾಷ್ಟ್ರೀಯ ಪೊರೈಕೆಯ ಹಾಗೂ ಮಾರಾಟದ ಸಂಸ್ಥೆ ಸ್ಥಾಪಿಸಲ್ಪಡಬೇಕು; ೩) ಸದ್ಯಕ್ಕೆ ಪ್ರತಿವರ್ಷ ಬಜೆಟಿನಲ್ಲಿ ಪೂರೈಸಲ್ಪಡುವ ೫ ಕೋಟಿ ಫಿಸ್.ಕೆ. ಹಣದ ಬದಲು ೧೦೦ ಕೋಟಿ ಫಿನಾ. ಕೆ. ಹಣವನ್ನು ಇಂಥ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಾಲಕೊಡಲು ತೆಗೆದಿಡಬೇಕು.

ಜಪಾನ್: ಸಹಕಾರೀ ತಳಹದಿಯ ಮೇಲೆ ಹಳ್ಳಿಯ ಗೃಹೋದ್ಯೋಗಗಳ ಅಭಿವೃದ್ಧಿ — ಜಪಾನಿನ ಅನೇಕ ಭಾಗಗಳಲ್ಲಿ ಒಕ್ಕಲಿಗರೊಳಗೂ ಮೀನುಗಾರರೊಳಗೂ ಇಡೀ ವರ್ಷ ಮತ್ತು ವರ್ಷದಲ್ಲಿ ಕೆಲ ತಿಂಗಳು ನಿರುದ್ಯೋಗ ಹಾಗೂ ಕಡಿಮೆ ಉದ್ಯೋಗ ಬೆಳೆದಿರುವದರಿಂದ, ಒಕ್ಕಲತನ ಮತ್ತು ಅರಣ್ಯ ಖಾತೆಗಳ ಮಂತ್ರಿಮಂಡಳವು ಹಳ್ಳಿಯ ಕೈಗಾರಿಕೆಗಳನ್ನು ಪ್ರಾರಂಭಿಸಿ ಅಭಿವೃದ್ಧಿಗೊಳಿಸುವ ಒಂದು ಯೋಜನೆಯನ್ನು ತಯಾರಿಸಿದೆ. ಒಕ್ಕಲಿಗರಿಗೆ ಮತ್ತು ಮೀನುಗಾರರಿಗೆ ತಮ್ಮ ಕಡೆಗಿದ್ದ ಹಣ ಕೂಡಿಸಿ ತಮ್ಮ ದುಡಿಮೆಯಿಂದ ಚಿಕ್ಕ ಪುಟ್ಟ ಉದ್ಯೋಗೆಗಳನ್ನು ಸಹಕಾರೀ ತಳಹದಿಯ ಮೇಲೆ ಕೈಕೊಳ್ಳುವದಕ್ಕೆ ಮತ್ತು ಮುಖ್ಯವಾಗಿ ಮೀನುಗಳನ್ನೂ ಒಕ್ಕಲತನದ ಹುಟ್ಟುವಳಿಯನ್ನೂ (ಅವು ಹೇಟೆಯಲ್ಲಿ ಮಾರಾಟವಾಗುವ ಸ್ಥಿತಿಯಲ್ಲಿ ಬರುವಂತೆ) ಪ್ರೊಸೆಸ್ಸ ಮಾಡುವದು ಹಾಗೂ ಚೆಲೋ ಕುಲದ ದನಗಳನ್ನು ಮತ್ತು ಸಸಿಗಳನ್ನು ಹುಟ್ಟಿಸುವದು, ಈ ಉದ್ಯೋಗಗಳಲ್ಲಿ ತೊಡಗುವದಕ್ಕೆ ಉತ್ತೇಜನ ಕೊಡುವದು ಈ ಯೋಜನೆಯ ಉದ್ದೇಶವಾಗಿದೆ. ಯಾವದೊಂದು ಗ್ರಾಮದಲ್ಲಿ ಯಾವ ತರದ ಕೈಗಾರಿಕೆಯನ್ನು ಪ್ರಾರಂಭಿಸಿ ಅದಕ್ಕೆ ಉತ್ತೇಜನ ಕೊಡಬೇಕೆಂಬ ವಿಷಯದಲ್ಲಿ, ಆ ಸ್ಥಳದಲ್ಲಿ ಕಚ್ಚಾ ಮಾಲು ಹಾಗೂ ಕೆಲಸಗಾರರು ದೊರೆಯುವದರ ಕಡೆಗೂ, ತಯಾರಾದ ವಸ್ತುಗಳಿಗೆ ಬೇಡಿಕೆ ಇರುವದರ ಕಡೆಗೂ, ತರಬೇತು ಹೊಂದಿದ ಜನರು ಮತ್ತು ತಜ್ಞ ಸಲಹೆ ದೊರೆಯುವದರ ಕಡೆಗೂ ಲಕ್ಷ ಕೊಡಲಾಗುವದು. ಹಳ್ಳಿಗರು ಪಡೆಯುತ್ತಿರುವ ಕನಿಷ್ಟ ಕೂಲಿಯನ್ನು ಹೆಚ್ಚಿಸಿ ಅವರನ್ನು ದಲಾಲರ ಹಿಡಿತದಿಂದ ಮುಕ್ತಮಾಡುವದಕ್ಕಾಗಿ ತಯಾರಿಸಲ್ಪಟ್ಟ ಈ ಯೋಜನೆಯನ್ನು ಕಾರ್ಯಗತ ಮಾಡುವ ಕೆಲಸವು, ಒಕ್ಕಲತನ ಮತ್ತು ಅರಣ್ಯ ಖಾತೆಯ ಮಂತ್ರಿಮಂಡಳದ ದೇಖರೇಖಿಯ ಕೆಳಗೆ ನಡೆಯುವದು. ಈ ಕಾರ್ಯದಲ್ಲಿ ಮಂತ್ರಿಮಂಡಳಕ್ಕೆ ಸಣ್ಣ ಪ್ರಮಾಣದ ಉದ್ಯೋಗೆಗಳನ್ನು ಸಂಘಟಿಸುವಲ್ಲಿ ತಜ್ಞರಾದವರು, ಕುಶಲ ಕಸಬುಗಾರರು, ಡಿಸ್ಟ್ರಿಬ್ಯೂಸು ಹೇಳಿಕೊಡುವವರು, ಮಾರಾಟ ವಿಷಯದಲ್ಲಿ ತಜ್ಞರು ಮತ್ತು ಇತರ ಸಮರ್ಥ ಜನರು ಇದ್ದ ಕೇಂದ್ರ ಸಲಹಾ ಮಂಡಳವೊಂದು ಸಹಾಯ ಮಾಡುತ್ತವೆ. ಕೈಗಾರಿಕೆಗಳನ್ನು ಪ್ರಾಮುಖ್ಯವಾಗಿ ಸಹಕಾರೀ ತಳಹದಿಯ ಮೇಲೆ ಸಂಘಟಿಸಲಾಗುವದು, ಯಾಕಂದರೆ ಈ ಮಾರ್ಗದಿಂದ ಸಾಕಷ್ಟು ಬಂಡವಲ ಕೂಡಿಸಲು ಹಾಗೂ ಉತ್ಪಾದನೆಯು ಉಚ್ಚ ಪ್ರಮಾಣದಿಂದ ನಡೆಸಲ್ಪಟ್ಟು ಅದನ್ನು ಕಾಯ್ದುಕೊಳ್ಳಲು ಸಾಧ್ಯವಾಗುವದು. ಉತ್ಪಾದಕ ಸಂಘಗಳ ಮೇಲೆ ಕಾಲಕಾಲಕ್ಕೆ ದೇಖರೇಖಿ ಇಡುವ ಪದ್ಧತಿಯನ್ನು ಮತ್ತು ಉತ್ಪಾದನೆಯ ಉಚ್ಚಮಟ್ಟವನ್ನು ಕಾಯ್ದುಕೊಳ್ಳಲಿಕ್ಕೆ ಟ್ರೇಡಮಾರ್ಕ್ (ವ್ಯಾಪಾರೀ ಸಂಕೇತ)ಗಳನ್ನು ಪ್ರಾರಂಭಿಸಬೇಕೆಂದೂ, ಅದರಂತೆ ಪ್ರಸಾರ ಮತ್ತು ಮಾರಾಟ ಮಾಡುವ ಚಟುವಟಿಕೆಗಳನ್ನು ಸಹಕಾರೀ ತಳಹದಿಯ ಮೇಲೆ ಕೈಕೊಳ್ಳಬೇಕೆಂದೂ ಯೋಚಿಸಲಾಗಿದೆ. ಪ್ರಾರಂಭದಲ್ಲಿ ಅವಶ್ಯವಿದ್ದ ಕಡೆಯೆಲ್ಲ ಉದ್ಯೋಗ ಸುರುವು ಮಾಡಲಾಗುವದು. ಈ ಹಣವನ್ನು ಸದಸ್ಯರುಗಳ ರೂಪದಲ್ಲಿ ಇಲ್ಲವೆ ಸಹಕಾರೀ ಸಂಸ್ಥೆಗಳಿಂದ ಸಾಲಪಡೆದು ಕೂಡಿಸಲಾಗುವದು. ಸಹಕಾರೀ ಸಂಘಗಳು, ಉದಾ. ಶೇತಕಿ ಪತ್ತಿನ ಸಂಘಗಳು, ಮೊದಲೇ ಇದ್ದ ಸ್ಥಳಗಳಲ್ಲಿ, ಅವು ಹಳ್ಳಿಯ ಗೃಹ ಕೈಗಾರಿಕೆಗಳ ಕೇಂದ್ರಗಳಾಗಿ ಉಪಯೋಗಿಸಲ್ಪಡುವ ಬಗ್ಗೆ ಯತ್ನಿಸಲಾಗುವದು.

ಮೇಲಿನ ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ಒಕ್ಕಲತನ ಮತ್ತು ಅರಣ್ಯಖಾತೆಯ ಮಂತ್ರಿಮಂಡಲವು ಮೊದಲು ಎಲ್ಲಿ ಹಳ್ಳಿಯ ಗೃಹ ಕೈಗಾರಿಕೆಗಳು ಚನ್ನಾಗಿ ಸಂಘಟಿತವಾಗಿವೆಯೋ ಆ ಹಳ್ಳಿಗಳನ್ನು ಆರಿಸಿ, ಅವುಗಳಿಗೆ, ಅವುಗಳ ಕಡೆಯಿಂದ ಇತರ ಹಳ್ಳಿಗಳು ಕಲಿತುಕೊಳ್ಳಬೇಕೆಂದು, ಮಾದರಿ ಹಳ್ಳಿಗಳೆಂದು ನಾಮಕರಣ ಮಾಡಬೇಕೆಂದು ಯೋಚಿಸಿರುತ್ತದೆ. ಇದರಿಂದ ಹೊರತಾಗಿ ಅದು ಯಾವ ಹಳ್ಳಿಗಳಲ್ಲಿ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವದಕ್ಕೆ ಪರಿಸ್ಥಿತಿಯು ವಿಶೇಷ ಅನುಕೂಲವಾಗಿದೆಯೋ ಅಂಥ ಕೆಲ ಇತರ ಹಳ್ಳಿಗಳನ್ನೂ ಆರಿಸಿಕೊಂಡು ಅವುಗಳಲ್ಲಿ ಕಾರ್ಯಪ್ರಾರಂಭಿಸುವದು. ಈ ಯೋಜನೆಯು ಯಶಸ್ವಿಯಾಗುವದು, ಎಷ್ಟರಮಟ್ಟಿಗೆ ಸರಕಾರದವರು ತಜ್ಞ ಸ್ವರೂಪದ ಸಹಾಯಗಳನ್ನು ಕೊಡುವರೆಂಬುದರ ಮೇಲೆ ಬಹುಮಟ್ಟಿಗೆ ಅವಲಂಬಿಸಿರುವದರಿಂದ, ವಿವಿಧ ರೀತಿಯ ಸರಕಾರೀ ಮದ್ದತು ಕೊಡಲ್ಪಡುವದೆಂದು ಯೋಜನೆಯಲ್ಲಿ ಹೇಳಲಾಗಿದೆ. ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸಲಿಚ್ಛಿಸುವ ಹಳ್ಳಿಗರಿಗೆ ಸಂಘಟನೆ, ಆಡಳಿತ, ಉತ್ಪಾದನೆ ಮುಂತಾದ ವಿಷಯಗಳಲ್ಲಿ ಮಾರ್ಗದರ್ಶನ ಮಾಡಲು ವ್ಯಾಖ್ಯಾನಕಾರರನ್ನೂ ಕೈಗಾರಿಕೆಯ ತಜ್ಞರನ್ನೂ ಕಳಿಸಿಕೊಡಲು ಸರಕಾರದವರು ಸಿದ್ಧರಿರುವರು. ಕಾಲಕಾಲಕ್ಕೆ ಈ ಕೈಗಾರಿಕೆಗಳಲ್ಲಿ ತೊಡಗಿದವರ ಪ್ರಾದೇಶಿಕ ಸಭೆಗಳನ್ನು ಜರುಗಿಸಿ, ಅಲ್ಲಿ ಸಾಮಾನ್ಯ ಸ್ವರೂಪದ ಅಡಚಣೆಗಳನ್ನು ಕುರಿತು ಚರ್ಚಿಸಲಾಗುವದು, ಮತ್ತು ಅವುಗಳನ್ನು ನಿವಾರಿಸಲು ಸರಕಾರದವರ ಸಹಾಯ ಕೊಡಲ್ಪಡುವದು. ಕಚ್ಚಾ ಸರಕುಗಳ ಹಾಗೂ ಯಂತ್ರೋಪಕರಣಗಳ ಖರೀದಿಯಲ್ಲಿ, ತಯಾರಿಕೆಯಲ್ಲಿ ಉದ್ಭವವಾಗುವ ಸಮಸ್ಯೆಗಳನ್ನು ಬಿಡಿಸುವಲ್ಲಿ ಮತ್ತು ಹೊಸ ದಿಸೈನುಗಳನ್ನು ಶೋಧಿಸುವಲ್ಲಿ ಸಹಾಯವು ಕೊಡಲ್ಪಡುವದು. ಮಾರಾಟದ ವಿಷಯದಲ್ಲಿ, ಸರಕಾರದವರು, ಈ ಉದ್ಯೋಗಗಳಲ್ಲಿ ತಯಾರಾದ ವಸ್ತುಗಳನ್ನು "ಗೃಹಕೈಗಾರಿಕೆಯ ವಸ್ತುಗಳ ಅಂಗಡಿ" ಎಂದು ಹೆಸರಿಟ್ಟುಕೊಂಡು ಮಾರಾಟಮಾಡಲು ಸಿದ್ಧವಿದ್ದ ಅಂಗಡಿಗಳನ್ನು ಗೊತ್ತುಮಾಡಿ, ಸದರಿ ವಸ್ತುಗಳ ಮಾರಾಟ ಕೈಕೊಳ್ಳಲು ಅವುಗಳಿಗೆ ಶಿಫಾರಸು ಮಾಡುವರು. ಇದಲ್ಲದೆ ಸರಕಾರದವರು ದೊಡ್ಡ ಶಹರಗಳಲ್ಲಿ ಹಳ್ಳಿಯ ಗೃಹಕೈಗಾರಿಕೆಗಳ ವಸ್ತುಗಳ ಪ್ರದರ್ಶನಗಳನ್ನು ಜರುಗಿಸುವರು. ಕೊನೆಯದಾಗಿ ಸರಕಾರದವರು, ಈ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಕೈಗಾರಿಕೆಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸುವದಕ್ಕಾಗಿ ಒಂದು ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಲು ಕ್ರಮಕೈಕೊಳ್ಳುವರು.

—"ಸಹಕಾರೀ ನೃತ್ತ", ಅಂತರ್ರಾಷ್ಟ್ರೀಯ ಮಜದೂರ ಕಛೇರಿ, ಜೆನಿವಾ,
ಇದರಿಂದ ಉದ್ಧೃತವಾಡದ್ದು.

ನಿವಳ ಲಾಭದ ವ್ಯಾಖ್ಯೆ 'ನಿವಳ ಲಾಭ' ಈ ಪದದ ವ್ಯಾಖ್ಯೆಯನ್ನು ಮಾಡುವ ಪ್ರಶ್ನೆ ಕುರಿತು ವಿಚಾರಮಾಡಲು ಪ್ರಾಂತಿಕ ಸಹಕಾರೀ ಕೌನ್ಸಿಲಿನಿಂದ ನೇಮಿಸಲ್ಪಟ್ಟ ಉಪಸಮಿತಿಯು ಯಾವದೇ ನಿರ್ಣಯಕ್ಕೆ ಬರಲು ಸಮರ್ಥವಾಗಲಿಲ್ಲ; ಯಾಕಂದರೆ ಬೇರೆ ಬೇರೆ ಪ್ರಕಾರದ ಸಹಕಾರೀ ಸಂಘಗಳಿಗೆ ಅನ್ವಯಿಸುವಂತೆ 'ನಿವಳ ಲಾಭ'ದ ಅರ್ಥ ಹೇಳುವದು ಕಠಿಣವೆಂದು ಅದು ಅಭಿಪ್ರಾಯಪಟ್ಟಿತು. ಸುಪರ ಟ್ಯಾಕ್ಸನ್ನು ಲಾಭ ಹಾನಿ ಖಾತೆಗೆ ಖರ್ಚು ಹಾಕಬೇಕೋ ಅಥವಾ ಲಾಭದ ವಿನಿಯೋಗದ ಖಾತೆಗೆ ಖರ್ಚು ಹಾಕಬೇಕೊ ಎಂಬ ಪ್ರಶ್ನೆಯ ವಿಷಯದಲ್ಲಿ, ಡೆಪ್ಯೂಟಿ ರಿಜಿಸ್ಟ್ರಾರ, ಸಹಕಾರೀ ಸಂಘಗಳು, ಮುಂಬಯಿ ಪ್ರಾಂತ, ಇವರು ಲಾಭ ಹಾನಿ ಖಾತೆಗೆ ಸುಪರ ಟ್ಯಾಕ್ಸನ್ನು ಖರ್ಚು ಹಾಕುವದು ಸರಿಯಲ್ಲವೆಂದು ಹೇಳಿದ್ದಾರೆ. ಈ ಕ್ರಮವನ್ನು ಮುಂಬಯಿ ಪ್ರಾಂತಿಕ ಸಹಕಾರೀ ಬ್ಯಾಂಕು ಹಾಗೂ ಇತರ ಮುಖ್ಯ ಜೋಯಿಂಟ ಸ್ಟಾಕ ಬ್ಯಾಂಕುಗಳು ಅನುಸರಿಸುತ್ತ ಬಂದಿವೆ.

ಕೈಮಗ್ಗದ ಉದ್ದಿಮೆಗಾಗಿ ಸಹಾಯ ಕೊಡುವ ಯೋಜನೆ ಮುಂಬಯಿ ಸರಕಾರವು ಈ ಯೋಜನೆಯನ್ನು ೧ ನೇ ಎಸ್ಪ್ರಿಲ್ ೧೯೩೯ ರಿಂದ ಇನ್ನೊಂದು ವರ್ಷದವರೆಗೆ ಮುಂದುವರಿಸಲು ನಿರ್ಧರಿಸಿದೆ. ಜೊ. ರೆಜಿಸ್ಟ್ರಾರರು, ಸಹಕಾರೀ ಸಂಘಗಳ ಹಾಗೂ ಗ್ರಾಮೋದ್ಯೋಗಗಳ ಜೊ. ರೆಜಿಸ್ಟ್ರಾರರು, ಸಹಕಾರೀ ಸಂಘಗಳು ತಮ್ಮ ಉತ್ಪಾದನೆಯ ಮತ್ತು ಇತರ ಚಟುವಟಿಕೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಯೋಗ್ಯ ಮತ್ತು ಅವಶ್ಯಕ ಏರ್ಪಾಟುಗಳನ್ನು ಮಾಡಿವೆ ಎಂಬ ಬಗ್ಗೆ ಖಾತ್ರಿಮಾಡಿಕೊಂಡಮೇಲೆ, ಅವರು (ಜೊ. ರೆಜಿಸ್ಟ್ರಾರರು) ೩೧ ನೇ ಮಾರ್ಚ ೧೯೩೯ ಕ್ಕೆ ಮುಗಿಯುವ ಪರ್ಯಂತ ಬಗ್ಗೆ ಅಂಥ ಸಂಸ್

ಗಳ ಸಲುವಾಗಿ ಜಿಲ್ಲಾ ಸಹಕಾರೀ ಬ್ಯಾಂಕುಗಳಿಗೆ ಇಲ್ಲವೆ ಶೆಡ್ಯೂಲ್ಡ್‌ಬ್ಯಾಂಕುಗಳಿಗೆ ಶೇಕಡಾ ೨೫ ರಷ್ಟು ಸಾಲದ ರಕಮಿಗೆ ಆಥವಾ ಒಟ್ಟಿನಲ್ಲಿ ೧೫ ಲಕ್ಷ ರೂ.ಗೆ, ಇವರ ವೈಕಿ ಯಾವದು ಕಡಿಮೆ ಆಗುವದೋ ಅಷ್ಟಕ್ಕೆ, ಸರಕಾರದ ವತಿಯಿಂದ ಜಾಮೀನುಕೊಡುವರು ಇದರಿಂದ ಜಿಲ್ಲಾ ಔದ್ಯೋಗಿಕ ಸಹಕಾರೀ ಸಂಘಗಳು ಮತ್ತು ಕೆಲ ಆರಿಸಲ್ಪಟ್ಟ ನೇಕಾರರ ಸಂಘಗಳು ತಯಾರಾದ ಬಟ್ಟೆಯನ್ನು ಒತ್ತಿ ಇಟ್ಟುಕೊಂಡು ಸಾಲಕೊಡಲು ೭ ಲಕ್ಷ ರೂ. ವರೆಗೆ ಬ್ಯಾಂಕುಗಳ ಕಡೆಯಿಂದ ಸಾಲ ಪಡಕೊಳ್ಳಲು ಸಮರ್ಥವಾಗುವದು.

ವಿಜಾಪುರ ಜಿಲ್ಲಾ ನೇಕಾರರ ಪರಿಹಾರಯೋಜನೆ, ಬಾಗಲಕೋಟೆ: ಕಳೆದ ೧೬ ತಿಂಗಳಿಂದ ಸರಕಾರದ ಪರವಾಗಿ ಈ ಯೋಜನೆಯು ಜಾರಿಯಲ್ಲಿದೆ. ಅಮಿನಗಡ, ಕಮತಗಿ, ಬೆಡಸಣ, ಹುಲ್ಯಾಳ, ಮುಂತಾದ ಊರುಗಳಲ್ಲಿಯ ೩೫೦ ಮಗ್ಗಗಳ ಮೇಲೆ ಆಧುನಿಕ ಸಮಾನೆಗಳ ಬಟ್ಟೆಯು ಉತ್ಪಾದಿಸಲ್ಪಡುತ್ತಿದೆ. ಸದರಿ ಊರುಗಳಲ್ಲಿಯ ಅನೇಕ ನೇಕಾರರು ಈ ಯೋಜನೆಯನ್ನು ಆರ್ಥಿಕ ಮತ್ತು ಕೈಗಾರಿಕೆಯ ಜ್ಞಾನದ ದೃಷ್ಟಿಯಿಂದ ಲಾಭಪಡೆದಿದ್ದಾರೆ. ಯೋಜನೆಯು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಯಶಸ್ವಿಯಾಗಿದೆ. ಆಗಸ್ಟ ೧೬ ಮತ್ತು ೧೭ ನೇ ದಿನ ಜೊಯಿಂಟ್ ರೆಜಿಸ್ಟ್ರಾರ, ಔದ್ಯೋಗಿಕ ಸಹಕಾರೀ ಸಂಘಗಳು ಜೂನಗ್ರಾಮೋದ್ಯೋಗಗಳು, ಪುಣೆ, ಇವರು ಬಾಗಲಕೋಟೆ ಮತ್ತು ಅಮಿನಗಡಗಳಿಗೆ ಭೆಟ್ಟಿ ಕೊಟ್ಟು ಯೋಜನೆಯ ಉದ್ದೇಶವು ಸಫಲವಾದದ್ದು ಕಂಡು ಸಮಾಧಾನ ವ್ಯಕ್ತಪಡಿಸಿದರು. ಅವರು ವಿಜಾಪುರ ಜಿಲ್ಲಾ ಔ. ಸ. ಸಂಘಕ್ಕೆ ಭೆಟ್ಟಿಕೊಟ್ಟು, ಸದರಿ ಯೋಜನೆಯನ್ನು ಇನ್ನು ಮುಂದೆ ಸರಕಾರದ ಪರವಾಗಿ ನಡಿಸುವದನ್ನು ಬಂದವಾಡಿ, ಜಿಲ್ಲಾ ಸಂಘವು ಅದನ್ನು ಕೈಕೊಂಡು ಮುಂದುವರಿಸಬೇಕೆಂಬ ಬಗ್ಗೆ ಸಂಘದ ಡೈರೆಕ್ಟರ ಮಂಡಳದವರೊಡನೆ ಚರ್ಚೆಮಾಡಿದರು. ಡೈರೆಕ್ಟರ ಮಂಡಳದವರು ಯೋಜನೆಯನ್ನು ತಾವು ಮುಂದೆ ನಡಿಸಿಕೊಂಡುಹೋಗುವ ಇಚ್ಛೆ ವ್ಯಕ್ತಪಡಿಸಲಾಗಿ, ಇದೇ ಅಕ್ಟೋಬರ ತಿಂಗಳ ಕೊನೆಯಲ್ಲಿ ಅದನ್ನು ಜಿಲ್ಲಾ ಸಂಘಕ್ಕೆ ಒಪ್ಪಿಸಿಕೊಡಬೇಕೆಂದು ಗೊತ್ತಾಯಿತು.

ಹಳಿಯಾಳ ತಾಲೂಕಾ ಟೇಲರ್ಸ ಸಹಕಾರೀ ಉತ್ಪಾದಕ ಸಂಘ ನಿ., ಹಳಿಯಾಳ, ಜಿಲ್ಲಾ ಉ. ಕನ್ನಡ— ಈ ಸಂಘವು ೧೯೪೯ ನೇ ಇಸ್ವಿಯಲ್ಲಿ ನೋಂದಿಸಲ್ಪಟ್ಟಿತು. ಅದು ತಾಲೂಕದಲ್ಲಿಯ ೩೦೦ ಜನರಿಗೆ ಬೇಕಾಗುವ ಸೂಜಿ, ಬಿರಡಿ, ದಾಸ, ಟೇಪು, ಕತ್ತರಿ, ಹೊಲಿಯುವ ಯಂತ್ರದ ಬಿಡಿಭಾಗಗಳು, ಮುಂತಾದವುಗಳನ್ನು ಕೋಳ ದರದಿಂದ ತರಿಸಿ ಹೊಲಿಗೆಯಕೆಲಸ ಮಾಡುವವರಿಗೆ ಅಗ್ಗದರದಿಂದ ಪೂರೈಸುತ್ತವೆ. ಸಂಘದ ಸದಸ್ಯರಲ್ಲಿ ಹೊಲಿಯುವ ಯಂತ್ರಗಳಿದು, ಸರಕಾರದವರಿಂದ ನಿಯಂತ್ರಿತ ದರಕ್ಕೆ ಅರಿವೆಯ ಕೋಟಾ ಕಾಲ ಕಾಲಕ್ಕೆ ದೊರೆತರೆ, ಅದು ರೆಡಿಮೇಡ ವಸ್ತ್ರಗಳನ್ನು ತಯಾರಿಸಿ ಅವುಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡುವ ಯೋಜನೆಯನ್ನು ಕೈಕೊಳ್ಳಬೇಕೆಂದು ಯೋಚಿಸಿದೆ. ಸಂಘದ ಶೇರ ಬಂಡವಲು ೧೦೪೨ ರೂ. ಮತ್ತು ಕಾದಿಟ್ಟ ನಿಧಿಯು ೬೪ ರೂ ಇವೆ. ಕಳೆದ ಸಹಕಾರೀ ವರ್ಷದಲ್ಲಿ ಸಂಘವು ಒಟ್ಟು ರೂ. ೩೫೫೩–೧೨–೩ ಯ ವ್ಯವಹಾರ ಮಾಡಿತು. ಅದಕ್ಕೆ ಕಳೆದ ವರ್ಷ ರೂ. ೫೬–೯–೦ ಯ ನಿವಳ ಹಾನಿಯಾಗಿದೆ.

ಕಲ್ಯಾಣ ಮಹಿಲಾ ಸಹಕಾರೀ ಉದ್ಯೋಗ ಮಂದಿರ ನಿ., ಕಲ್ಯಾಣ, ಜಿಲ್ಲಾ ರಾಣೆ— ಇದು ಗೃಹೋಪಯೋಗಿ ವಸ್ತುಗಳ ಮತ್ತು ರಾಶನ ಧಾನ್ಯಗಳ ಅಂಗಡಿಗಳನ್ನು ನಡಿಸುತ್ತದೆ. ಅದರ ಶೇರ ಬಂಡವಲು ೩೬೬೦ ರೂ., ಕಾದಿಟ್ಟ ನಿಧಿಯು ೨೬೧ ರೂ. ಮತ್ತು ಇತರ ನಿಧಿಗಳು ೨೯ರೂ. ಅವೆ. ಕಳೆದ ಸಹಕಾರೀ ವರ್ಷದಲ್ಲಿ ಅದು ಒಟ್ಟು ೨,೭೪,೪೧೪ ರೂ. ಯ ವ್ಯವಹಾರ ಮಾಡಿ, ೬೩೨ ರೂ. ಯ ನಿವಳ ಲಾಭ ಗಳಿಸಿತು. ಸಂಘದ ಸದಸ್ಯರ ಸಂಖ್ಯೆಯು ೬೦ ಇದೆ.

ಚರ್ಮವಸ್ತು ಉತ್ಪಾದಕ ಸಹಕಾರೀ ಮಂಡಲ ನಿ., ಪಂಢರಪುರ— ಇದು ೧೯೪೮ ರಲ್ಲಿ ಸ್ಥಾಪಿತವಾಯಿತ್ತು. ಅದು ಚರ್ಮ ವಸ್ತುಗಳ ವ್ಯವಹಾರವಲ್ಲದೆ, ಒಂದು ರಾಶನ ಅಂಗಡಿಯನ್ನು ನಡಿಸುತ್ತದೆ. ಅದರ ಶೇರ ಬಂಡವಲು ೨೬೬೦ ರೂ, ಕಾದಿಟ್ಟ ನಿಧಿಯು ೧೪೭೨ ರೂ. ಮತ್ತು ಇತರ ನಿಧಿಗಳು ೧೨೬೫ ರೂ. ಅವೆ. ೧೯೫೦–೫೧ ನೇ ಸಹಕಾರೀ ವರ್ಷದಲ್ಲಿ ಆದರ ಒಟ್ಟು ವ್ಯವಹಾರವು ೧,೨೧,೫೭೦ ರೂ. ಆಗಿ, ಅದಕ್ಕೆ ೨೨೫ ರೂ. ಯ ನಿವಳ ಲಾಭ ಪಾಯಿತು.

ವೆಂಗುರ್ಲಾ ಮೊಸುಗಾರಿಕೆಯ ಸಹಕಾರೀ ಸಂಘ ನಿ,ವೆಂಗುರ್ಲಾ: ಸಂಘದ ಶೇರ ಬಂಡವಲು ೫೯೨೦ ರೂ. ಮತ್ತು ಸದಸ್ಯರ ಸಂಖ್ಯೆ ೨೯೬ ಇವೆ. ಆದರ ಹತ್ತರ ೬೧೪೪ ರೂ. ಯ ಕಾದಿಟ್ಟ ನಿಧಿ, ೧೬೦೦ ರೂ. ಯ ಕಟ್ಟಡ ನಿಧಿ ಮತ್ತು ೪೨ ರೂ. ಯ ಇತರ ನಿಧಿಗಳಿವೆ. ಸಂಘವು ತನ್ನ ಸದಸ್ಯರಿಗೆ ನೂಲು ಮತ್ತು ದಿಪ್ಪ ಉರುಟು ಬಟ್ಟೆಯನ್ನು ಪೂರೈಸುತ್ತದೆ. ೧೯೫೦–೫೧ ನೇ ಸಹಕಾರೀ ವರ್ಷದಲ್ಲಿ ಆದರ ಒಟ್ಟು ವ್ಯವಹಾರವು ೫೮೮೪೪ ರೂ. ಯಾಪ್ಪಾಗಿ, ಅದಕ್ಕೆ ೫೯೯ ರೂ. ನಿವಳ ಲಾಭವಾಯ್ತು.

ಸಹಕಾರೀ ಸಂಘಗಳ ಕಾರ್ಯದರ್ಶಿಗಳ ಶಿಕ್ಷಣ ವರ್ಗಗಳು— ಉತ್ತರ ಕನ್ನಡ ಜಿಲ್ಲಾ ಸಹಕಾರೀ ಸಮಿತಿಯವರು ಈ ವರ್ಷದಲ್ಲಿ ಸಹಕಾರೀ ಸಂಘಗಳ ಕಾರ್ಯದರ್ಶಿಗಳಿಗಾಗಿ ಕೆಳಗಿನಂತೆ ಶಿಕ್ಷಣ ವರ್ಗಗಳನ್ನು ನಡಿಸುವರು. ಆಯಾ ಸಂಘಗಳ ಕಾಯರ್ಕದರ್ಶಿಗಳು ಇವುಗಳ ಲಾಭ ಪಡೆಕೊಳ್ಳಬೇಕು.

೧. ಕುಮಟಾ	೧೫–೯–೫೧ ರಿಂದ ೩೦–೧೦–೫೧ ವರೆಗೆ	ಔದ್ಯೋಗಿಕ ಸಂಘಗಳ ಮತ್ತು ಶೇತಕಿ ಸಂಘಗಳ ಕಾರ್ಯದರ್ಶಿಗಳ ಸಲುವಾಗಿ
೨. ಶಿರ್ಸಿ	೧೫–೧೧–೫೧ ರಿಂದ ೩೦–೧೨–೫೧ ವರೆಗೆ	ಶೇತಕಿ ಸಂಘಗಳ ಕಾರ್ಯದರ್ಶಿಗಳ ಸಲುವಾಗಿ
೩. ಕಾರವಾರ	೧೫–೨–೫೨ ರಿಂದ ೨೯–೨–೫೨ ವರೆಗೆ	,,

ಉ. ಕನ್ನಡ ಜಿಲ್ಲಾ ಸಹಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀ. ಆರ್. ಜಿ. ಪಂಡಿತರು ಈ ಸಂದರ್ಭದಲ್ಲಿ ಎಲ್ಲ ಸಹಕಾರೀ ಸಂಘಗಳ ಚೇರಮನ್ನರಿಗೆ ಈ ಕೆಳಗಿನಾಶಯದ ಪರಿಪತ್ರ ಕಳಿಸಿದ್ದಾರೆ–"ಸಹಕಾರೀ ಚಳವಳಿಯು ಪ್ರಗತಿಗೆ ಸಹಕಾರೀ ಶಿಕ್ಷಣದ ಪ್ರಸಾರವು ಅತ್ಯವಶ್ಯವಿರುವ್ದೆದೆ. ಆರ್ಥಿಕ ಪ್ರಜಾಪ್ರಭುತ್ವದ ಕಳಹದಿಯಂತಾಗಿ ಕೆಲಸ ಮಾಡುವ ಸಹಕಾರೀ ಸಂಘಗಳ ಸದಸ್ಯರಿಗೂ ನೌಕರ ವರ್ಗದವರಿಗೂ ಸಹಕಾರೀ ಶಿಕ್ಷಣ ಕೊಡುವದವಶ್ಯವಿದೆ. ಇದಲ್ಲದೆ ಸಹಕಾರೀ ಚಳವಳಿಯಲ್ಲಿ ಜನಸಾಮಾನ್ಯರ ಕುತೂಹಲ ಹೆಚ್ಚಿಸಿ, ಅವರಲ್ಲಿ ಸಹಕಾರೀ ಪದ್ಧತಿಯ ಬಗ್ಗೆ ಆದರಾಭಿಮಾನಗಳನ್ನು ಹುಟ್ಟಿಸಲಿಕ್ಕೂ ಸಹಕಾರೀ ತತ್ವಗಳ ಪ್ರಚಾರಕಾರ್ಯ ಕೈಕೊಳ್ಳಬೇಕಾಗುವದು. ಈ ಉದ್ದೇಶಗಳನ್ನು ಇಟ್ಟುಕೊಂಡು ಕಳೆದ ೪ ವರ್ಷಗಳಿಂದ ಉ. ಕ. ಜಿಲ್ಲಾ ಸಹಕಾರೀ ಸಮಿತಿಯು ಕೆಲಸ ಮಾಡುತ್ತಿದೆ. ಅದು ಕಾಲಕಾಲಕ್ಕೆ ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕಾರ್ಯದರ್ಶಿಗಳ ಶಿಕ್ಷಣ ವರ್ಗಗಳನ್ನು ಏರ್ಪಡಿಸಿ, ಸಹಕಾರೀ ಸಂಸ್ಥೆಗಳಿಗೆ ಭೆಟ್ಟಿ ಕೊಟ್ಟು ವ್ಯವಸ್ಥಾಪಕ ಕಮಿಟಿಗಳ ಸದಸ್ಯರಿಗೆ ಸಹಕಾರೀ ತತ್ವಗಳ ಮತ್ತು ಅಡಳಿತದ ಬಗ್ಗೆ ಉಪಯುಕ್ತ ಮಾಹಿತಿ ಪೂರೈಸಿ ಸೇವೆಸಲ್ಲಿಸುತ್ತಿದೆ. ಕಳೆದ ೪ ವರ್ಷಗಳಲ್ಲಿ ೨೬೧ ವಿದ್ಯಾರ್ಥಿಗಳಿಗೆ ಸಹಕಾರೀ ಶಿಕ್ಷಣ ಕೊಟ್ಟಿದ್ದು, ಅವರಲ್ಲಿ ೯೯ ಜನರು ಉತ್ತೀರ್ಣರಾಗಿ ಸಹಕಾರಿ ಸಂಘಗಳ ಕೆಲಸದಲ್ಲಿ ಒಂದಿಲ್ಲೊಂದು ಪಾತ್ರ ವಹಿಸಿ ದುಡಿಯುತ್ತಿದ್ದಾರೆ. ಇಷ್ಟಲ್ಲದೆ ಸಹಕಾರಿಗಳ ಪರಿಸತ್ತು, ಸಭೆ ಮುಂತಾದವುಗಳನ್ನು ಜರುಗಿಸಿ, ನಮ್ಮ ಜಿಲ್ಲೆಯ ವಿಶಿಷ್ಟ ಅಡಚಣೆಗಳು ಯಾವು, ಅವುಗಳ ನಿವಾರಣೋಪಾಯಗಳಾವು ಎಂಬ ಬಗ್ಗೆ ವಿಚಾರ ಮಾಡುವದಕ್ಕಾಗಿ ಸಮಿತಿಯು ಅಸ್ಪದ ಕಲ್ಪಿಸಿಕೊಡುತ್ತಿದೆ. ಅದು ಸಹಕಾರೀ ಸಂಘಗಳಿಗೂ ಸಹಕಾರಿಗಳಿಗೂ ಉಪಯೋಗವಾಗಲೆಂದು ಒಂದು ಚಿಕ್ಕ ವಾಚನಾಲಯವನ್ನು ನಡಿಸುತ್ತಿದೆ. ಜಿಲ್ಲೆಯ ಎಲ್ಲ ಸಹಕಾರೀ ಸಂಘಗಳು ಮತ್ತು ಸಹಕಾರಿಗಳು ಈ ವಿಷಾಟುಗಳ ಲಾಭಪಡೆಕೊಳ್ಳಬೇಕು. ಮತ್ತು ಸಹಕಾರೀ ಶಿಕ್ಷಣ ಪ್ರಸಾರ ಹಾಗೂ ಸಹಕಾರೀ ತತ್ವಗಳ ಪ್ರಚಾರ ಕಾರ್ಯಕ್ಕೆಕೊಂಡ ಈ ಜಿಲ್ಲಾ ಸಮಿತಿಯ ಸದಸ್ಯತ್ವವನ್ನು ಸ್ವೀಕರಿಸಿ, ಸಮಿತಿಯು ಹೆಚ್ಚೆಚ್ಚು ಕಾರ್ಯ ಮಾಡುವಂತೆ ಪ್ರೋತ್ಸಾಹಿಸಬೇಕಾಗಿ ಬಿನ್ನಹವಿದೆ".

ಗುಜರಾತ— ಗುಜರಾತ ಭಾಗದಲ್ಲಿಯ ಜಂಗಲ ಕಾಮಗಾರರ ಸಹಕಾರೀ ಸಂಘಗಳ ಕಾರ್ಯದರ್ಶಿಗಳ ತರಬೇತಿಯ ವರ್ಗವು ಅಹಮದಾಬಾದಲ್ಲಿಯು ಸ್ವರಾಜ್ಯ ಆಶ್ರಮದಲ್ಲಿ ಪ್ರಾರಂಭಿಸಲ್ಪಟ್ಟಿದ್ದು, ಅದು ೨೯ ಸಪ್ಟಂಬರ ವರೆಗೆ ನಡೆಯುವದು.

ರಿಪ್ರೆಶರ್ ವರ್ಗ, ಗದಗ- ಧಾರವಾಡ ಜಿಲ್ಲಾ ಸಹಕಾರೀ ಬ್ಯಾಂಕಿನ ಆಶ್ರಯದಲ್ಲಿ ಇದೇ ಸಪ್ಟಂಬರ ೧೪ರಿಂದ ೨೩ನೇ ತಾರೀಖಿನವರೆಗೆ ಔದ್ಯೋಗಿಕ ಸಹಕಾರೀ ಸಂಘಗಳ ಕಾರ್ಯದರ್ಶಿಗಳಿಗಾಗಿ ರಿಪ್ರೆಶರ್ ವರ್ಗವನ್ನು ಗದಗಿನಲ್ಲಿ ತಾಲೂಕಾ ಕೊಆಪರೇಟಿವ್ ಸುಪರವೈಜಿಂಗ್ ಯೂನಿಯನಿನ ಸ್ಥಳದಲ್ಲಿ ನಡಿಸಬೇಕೆಂದು ಯೋಚಿಸಿರುತ್ತದೆ. ಗದಗ ಹಾಗೂ ಸಮೀಪದಲ್ಲಿಯ ಔದ್ಯೋಗಿಕ ಸಹಕಾರೀ ಸಂಘಗಳ ಕಾರ್ಯದರ್ಶಿಗಳು ಈ ವರ್ಗದ ಲಾಭವಡೆದುಕೊಳ್ಳಬೇಕು.

ಹೊಸ ನೊಂದಣಿಗಳು

ಈ ಕೆಳಗಿನ ಔದ್ಯೋಗಿಕ ಸಹಕಾರೀ ಸಂಘಗಳು ೧೯೫೦ ಮೆ, ಜೂನ ಮತು ಜುಲ್ಯಾ ತಿಂಗಳಲ್ಲಿ ನೋಂದಿಸಲ್ಪಟ್ಟವು: ಜಂಗಲ ಕಾಮಗಾರರ ಸಹಕಾರೀ ಸಂಘ ನಿ. ಜಾಂಬೋಟಿ, ಖಾನಾಪುರ, ಜಿ. ಬೆಳಗಾಂವ; ಖಂಡಾಲ ಕಾಮಗಾರರ ಸಹಕಾರೀ ಸಂಘ ನಿ., ತಾ. ಮೆರಾಡಾ, ಖಾನಾಪೂರ ಜಿ. ಬೆಳಗಾಂವ; ಶ್ರಮಜೀವಿಗಳ ಸಹಕಾರೀ ಸಂಘ ನಿ., ತುಳಸಿಗೇರಿ. ಬಾಗಲಕೋಟ, ಜಿ. ವಿಜಾಪುರ; ಶ್ರಮಜೀವಿಗಳ ಸಹಕಾರೀ ಸಂಘ ನಿ., ಸೀತಿಮನಿ, ತಾ. ಬಾಗಲಕೋಟ, ಜಿ. ವಿಜಾಪುರ; ಉಣ್ಣೆಯ ಮಾಲು ಮತು ನೂಲಿನ ಹಗ್ಗ ತಯಾರಿಸುವವರ ಸಹಕಾರೀ ಉತ್ಪಾದಕ ಸಂಘ ನಿ ಹಿರೇನರ್ತಿ, ಪೋ. ತಿರಗುಪ್ಪಿ, ಪೇಟಾ ಕುಂದಗೋಳ, ಜಿ. ಧಾರವಾಡ; ಕುಮಟಾ ಹೈನುದ್ಯಮ ಸಹಕಾರೀ ಸಂಘ ನಿ., ಕುಮಟಾ, ಉ. ಕನ್ನಡ.

ಮೇಲಿನವಲ್ಲದೆ, ಮಹಾರಾಷ್ಟ್ರ ಜಿಲ್ಲೆಗಳಲ್ಲಿ ೨೦ ಮತ್ತು ಗುಜರಾಥ ಜಿಲೆಗಳಲ್ಲಿ ೯ ಸಂಘಗಳು ನೋಂದಿಸಲ್ಪಟ್ಟಿವೆ.

ಮುಂಬಯಿ ಪ್ರಾಂತದ ಬೇರೆ ಬೇರೆ ಜಿಲ್ಲೆಗಳಲ್ಲಿ ೩೧ ನೇ ಡಿಸೆಂಬರ ೧೯೫೦ರವರೆಗೆ ನೊಂದಿಸಲ್ಪಟ್ಟ ಔದ್ಯೋಗಿಕ ಸಹಕಾರೀಸಂಘಗಳ ಬಗ್ಗೆ ಮಾಹಿತಿ

ಕ್ರ. ಸಂ.	ಜಿಲ್ಲೆ	ಕೂಲಿಕಾರರ ಸೊಸಾಯಿಟಿಸ್ ಅಂಡ್ ಲೇಬರ್ ಕಾಂಟ್ರಾಕ್ಟರ್ಸ ಸಹಕಾರೀ ಸಂಘಗಳ ಸಂಖ್ಯೆ.	ಸಾಮೂಹಿಕ ಉತ್ಪಾದನೆ ಸಹಕಾರೀ ಸಂಘಗಳ ಸಂಖ್ಯೆ.	ಸಾಮೂಹಿಕವಾಗಿ ಕಾರ್ಯ ಮಾಡುವ ಕಲಸಗಾರರನ್ನು ಕಲಸಕ್ಕೆ ಕರೆದುಕೊಂಡು ಹೋಗುವ ಸಂಘಗಳ ಸಂಖ್ಯೆ.	ಉಣ್ಣಾದನೆ ಸಹಕಾರೀ ಸಂಘಗಳ ಸಂಖ್ಯೆ.	ಮೀನುಗಾರಿಕೆ ಸಹಕಾರೀ ಸಂಘಗಳ ಸಂಖ್ಯೆ.	ಸಹಕಾರೀ ಪತ್ತಿನ ಸಂಘಗಳ ಸಂಖ್ಯೆ.	ಸಹಕಾರೀ ಗ್ರಾಹಕರ ಸಂಘಗಳ ಸಂಖ್ಯೆ.	ಇತರ ಕೆಲಸ ಮಾಡುವ ಸಹಕಾರೀ ಸಂಘಗಳ ಸಂಖ್ಯೆ.
೧	ಥಾಣೆ ಜಿಲ್ಲೆ	೨೫	ಅಂಕಿಗಳು ದೊರೆತಿಲ್ಲ						
೨	ಕೊಲಾಬಾ	೨೩	೧೦	೫	೬೨	೫	೧೦	೪	
೩	ಅಹ್ಮದನಗರ	೬೨	೬೯	೫	೫	೪೫	೫	೮	
೪	ನಾಸಿಕ	೪೫	೪೭	೧೦	೬	೧೬	೧	೧	
೫	ಪುಣೆ	೬೭	೨೦	೧೦	೨೦	೨೦	೧೨	೧೭	
೬	ಸೊಲ್ಲಾಪೂರ	೪೬	೧೦	೧೦	೧೦	೧೦	೧೦	೧೦	
೭	ಸಾತಾರಾ	೬೭	೧೭	೧೭	೧೭	೧೭	೧೭	೧೭	
೮	ಸಾಂಗ್ಲಿ	೨೨	೧೦	೧೦	೧೦	೧೦	೧೦	೧೦	
೯	ಕೊಲ್ಹಾಪುರ	೨೦	೧೦	೧೦	೧೦	೧೦	೧೦	೧೦	
೧೦	ಕೊಲಾಬಾ	೧೦	೧೦	೧೦	೧೦	೧೦	೧೦	೧೦	
೧೧	ಅಹ್ಮದನಗರ	೨೯	೧೦	೧೦	೧೦	೧೦	೧೦	೧೦	
೧೨	ಥಾಣೆ	೨೩	೧೦	೧೦	೧೦	೧೦	೧೦	೧೦	
೧೩	ಮುಂಬಯಿ ಮತ್ತು ಉಪನಗರ	೩೨	೧೦	೧೦	೧೦	೧೦	೧೦	೧೦	
೧೪	ಧಾರವಾಡ	೨೫	೧೦	೧೦	೧೦	೧೦	೧೦	೧೦	
೧೫	ನಾಸಿಕ	೨೫	೧೦	೧೦	೧೦	೧೦	೧೦	೧೦	
೧೬	ಪ. ಖಾನದೇಶ	೨೫	೧೦	೧೦	೧೦	೧೦	೧೦	೧೦	
೧೭	ಪೂ. ಖಾನದೇಶ	೨೫	೧೦	೧೦	೧೦	೧೦	೧೦	೧೦	
೧೮	ಸುರತ	೨೫	೧೦	೧೦	೧೦	೧೦	೧೦	೧೦	
೧೯	ಬಡೋದ	೨೫	೧೦	೧೦	೧೦	೧೦	೧೦	೧೦	
೨೦	ಭಡೋಚ	೨೫	೧೦	೧೦	೧೦	೧೦	೧೦	೧೦	
೨೧	ಪಂಚಮಹಾಲ್ಸ	೨೫	೧೦	೧೦	೧೦	೧೦	೧೦	೧೦	
೨೨	ಅಹ್ಮದಾಬಾದ	೨೫	೧೦	೧೦	೧೦	೧೦	೧೦	೧೦	
೨೩	ಖೇಡಾ	೨೫	೧೦	೧೦	೧೦	೧೦	೧೦	೧೦	
೨೪	ಮೇಹ್ಸಾನಾ	೨೫	೧೦	೧೦	೧೦	೧೦	೧೦	೧೦	
೨೫	ಸಬರಕಾಂತಾ	೨೫	೧೦	೧೦	೧೦	೧೦	೧೦	೧೦	
೨೬	ಬನಸಕಾಂತಾ	೨೫	೧೦	೧೦	೧೦	೧೦	೧೦	೧೦	
೨೭	ಪೇಡಾ	೨೫	೧೦	೧೦	೧೦	೧೦	೧೦	೧೦	
	ಒಟ್ಟು	೧೦೯೭	೧೯೯	೪೪	೨೬೩	೧೪	೧೪೫	೧೨೯	

ಸಂಪಾದಕ ವಿ. ಎಸ್. ಕಾಥವಟೆ ಇವರು ಪ್ರಾಂತಿಕ ಔ. ಸ. ಸಂಘ ಲಿ. (ಮುಂಬಯಿ) Reg no. B 5945. ವಾರ್ಷಿಕ ಚಂದಾ ರೂ. ೦
ಇವರ ಪರವಾಗಿ ೪೦೮೩/೨ ಕಿಲ್ಲೆ ಹುಬ್ಬಳ್ಳಿಯಲ್ಲಿ ಪ್ರಸಿದ್ಧಿಸಿದರು. ಎಸ್. ಎಸ್. ಕಾರಂತ
೧೦೮ ಅದರ್ಶ ಮುದ್ರಣ ಕಿಲ್ಲೆ ಹುಬ್ಬಳ್ಳಿಯಲ್ಲಿ ಮುದ್ರಿತವಾಯ್ತು.

Karnatak Pradesh Vaidyanathan Singh
Karnat... Vaidyanathan Singh
Dharwar. (Sd/-)

ಪಯು ಕೆನಗ್ಗಿಜ

ಸಂಸ್ಥಾಪಕರು: ಲೀ. ಪೆಲ್ರಿ. ಪ್ಲಿ. ಪಿ. ಬಸವನಾಳರವರು, ಎಂ. ಎ.

ಕರ್ನಾಟಕ ವಿದ್ಯಾವರ್ಧಕ ಸಂಘ
ಧಾರವಾಡ



ಟಿಸೇ ಜನ್ಮ ಜಯಂತಿ ದಾಟಿದ ಭಾರತ ಪ್ರಧಾನ—ಜವಾಹರಲಾಲಜೀ

(ಸ್ವಾತಂತ್ರ್ಯ ಪೂರ್ವದ ಸಂಪ್ರಶನ್ನ ಜಿಲನ-ಗುರು-ಶಿಷ್ಯ ಗಾಂಧಿ-ನೆಪ್ರು)

ಸಂಪುಟ ೬
ಸಂಚಿಕೆ ೩೧

ಗುರುವಾರ
೨೦-೧೧-೫೪

೧೬ ಪುಟಗಳು: ಬೆಲೆ ೨ ಆಣೆ

★ ಪ್ರಾಗೈತಿಹಾಸಿಕ ಮಾಹಿಷ್ಮತಿ ನಗರ ★

● ಅನುವಾದಕರು: – ಶ್ರೀ. ಬೆಂಗೇರಿ ಹುಚ್ಚರಾಯರು, ಬಿ. ಎ. ಬಿ. ಟಿ ●

—(೦)—

ಮಾಹಿಷ್ಮತಿಯ ಪ್ರಾಗೈತಿಹಾಸಿಕ ಅವಶೇಷಗಳು

ಈ ಲೇಖಕನು ಕ್ರಿ. ವ. ೧೯೪೬ರ ಕೊನೆಗೆ ಸಂಶೋಧನೆಯನ್ನು ಮುಂದುವರಿಸಿದಾಗ ನೀಮಾಡ ಪ್ರದೇಶದಲ್ಲಿರುವ ಪೌರಾಣಿಕ ಕಾಲದ ಮಾಹಿಷ್ಮತೀ ನಗರವನ್ನು ತಲುಪಿದನು. ಅಲ್ಲಿ ಕೆಲವು ಪ್ರಾಚೀನ ಲೇಖಗಳು ಆಗಲೆ ದೊರಕಿದ್ದುವು. ಅಕಬರನ ಕಾಲದವರೆಗೆ ಈ ಊರಿಗೆ ಮಾಹಿಷ್ಮತಿ ಎಂಬ ಹೆಸರಿತ್ತು. ಇದು ಅಲ್ಲಿಯ ಗುಡಿಗಳಲ್ಲಿರುವ ಪ್ರಾಚೀನ ಸಂಸ್ಕೃತ ಮತ್ತು ಪಾರಸೀ ಲಿಪಿಗಳಲ್ಲಿ ಕಾಣಬರುತ್ತಿದೆ. ಅದೇ ಮಾಹಿಷ್ಮತಿಯ ಸ್ಥಾನವೆಂದು ಪಂಡಿತರೂ ಒಪ್ಪಿದ್ದಾರೆ. ಈಗ ಅದೇ ಸ್ಥಾನಕ್ಕೆ ಮಹೇಶ್ವರ ವೆಂಬ ಹೆಸರಿದೆ. ಪ್ರಾಚೀನ ಸಾಹಿತ್ಯ ಹಾಗು ಲಿಪಿಗಳು ಈ ಪಟ್ಟಣವು ಮೂರು ಬಾರಿ ಕಟ್ಟಲ್ಪಟ್ಟಿತೆಂಬುದನ್ನು ಉಲ್ಲೇಖಿಸುತ್ತಿವೆ. ಮುಚುಕುಂದನಿಂದ ಕಟ್ಟಲ್ಪಟ್ಟು ಸಗರನಿಂದ ನಾಶವಾದುದು ಇನೆಯ ಮಾಹಿಷ್ಮತಿ. ಸರಾಸರಿ ಮಹಾಭಾರತ ಕಾಲದಲ್ಲಿ ವಿರಚಿತವಾಗಿ ಬೌದ್ಧಕಾಲದ ತರುವಾಯ ಕೆಲವು ಕಾಲ ಉಳಿದುಕೊಂಡುಬಂದ ಇನೆಯ ಮಾಹಿಷ್ಮತಿ.ಕ್ರಿ. ಶ ದ ಆರಂಭದ ಶತಕದಲ್ಲಿ ಹುಟ್ಟಿ ಇಲ್ಲಿಯ ತನಕ ಉಳಿದುಕೊಂಡುಬಂದ ಇನೆಯ ಮಾಹಿಷ್ಮತಿ ಅಥವಾ ಮಹೇಶ್ವರ. ಈ ಲೇಖಕನು ಈಗಿನ ಪಟ್ಟಣದ ಪಶ್ಚಿಮಕ್ಕೆ ನರ್ಮದಾ ತೀರದಲ್ಲಿ ಸರಾಸರಿ ೧ ಮೈಲು ಪ್ರದೇಶದಲ್ಲಿ ಹಬ್ಬಿದ ಇನೆ.ಎ ಮಾಹಿಷ್ಮತೀ ನಗರದ ಅವಶೇಷಗಳನ್ನು ಗೊತ್ತುಹಚ್ಚಿದನು. ಇದರ ಮೂಡಣ ದಿಕ್ಕಿನಲ್ಲಿ ಮಹೇಶ್ವರೀ ನದಿಯವರೆಗಿನ ಪ್ರದೇಶದಲ್ಲಿ ಇನೆಯ ಮಾಹಿಷ್ಮತಿ ಹಬ್ಬಿದ್ದಿತು. ಇನೆಯ ಮಾಹಿಷ್ಮತಿಯ ಅವಶೇಷಗಳ ಮೇಲ್ಮೈಯಲ್ಲಿಯೇ ಪ್ರಾಗೈತಿಹಾಸಿಕ ಚಿಹ್ನೆಗಳು ಕಣ್ಣಿಗೆ ಬಿದ್ದುವು. ಇದರಿಂದ ಈ ಪಟ್ಟಣವು ಪ್ರಾಗೈತಿಹಾಸಿಕ ಕಾಲದಲ್ಲಿಯೇ ಹಾಳಾಗಿದ್ದಿತೆಂದು ಗೊತ್ತಾಯಿತು. ಹೆಚ್ಚಿನ ಸಂಶೋಧನೆ ಹಾಗು ನಿರೀಕ್ಷಣೆಗಳಿಂದ ಈ ಲೇಖಕನಿಗೆ ಸಿಕ್ಕ ಅವಶೇಷಗಳು ಪುರಾಣದಲ್ಲಿ ಹೇಳಿದ ಹಾಗು ಮಾಂಧಾತನ ಮಗನಾದ ಮುಚುಕುಂದನು ಕಟ್ಟಿದ ಇನೆಯ ಮಾಹಿಷ್ಮತಿಯ ಅವಶೇಷಗಳೆಂದು ಕಂಡು ಬಂದಿತು- ಹೀಗೆ ಪೌರಾಣಿಕ ಕತೆಗೆ ಐತಿಹಾಸಿಕ ಸಂಗತಿಗಳ ಆಧಾರವು ಸಿಕ್ಕಿತು. ಮತ್ತು ನರ್ಮದಾ ತೀರದಲ್ಲಿ ಸಿಕ್ಕ ಗ್ರಾಮಗಳ ಅವಶೇಷಗಳ ಸಂಸ್ಕೃತಿ ಹಾಗು ಮಾಹಿಷ್ಮತಿಯ ಪ್ರಾಗೈತಿಹಾಸಿಕ ಅವಶೇಷಗಳ ಸಂಸ್ಕೃತಿ ಒಂದೇ ಆಗಿದ್ದಿತೆಂಬುದು ಸೋಜಿಗದ ಸಂಗತಿ. ಅಂದ ಮೇಲೆ ಹಡಪ್ಪಾ ಸಂಸ್ಕೃತಿಗಿಂತ ಮೊದಲು ಪೌರಾಣಿಕ ಕಾಲದ ಜನರು ನರ್ಮದಾ ಘಟ್ಟದಲ್ಲಿ ತಳವೂರಿದ್ದರೇ? ಮತ್ತು ಈ ಪೌರಾಣಿಕ ಜನರು ಯಾರು? ನರ್ಮದಾ ತೀರದಲ್ಲಿದ್ದ ಪಟ್ಟಣಗಳನ್ನು ಕಟ್ಟಿದವರೂ ಮಾಹಿಷ್ಮತಿಯ ಸಂಸ್ಥಾಪಕರೂ ಮತ್ತು ರಾಜ್ಯಕರ್ತರೂ ಆದ ಈ ರಾಜರ ಹೆಸರುಗಳು ಪುರಾಣದಲ್ಲಿ ನಿರ್ದೇಶಿಸಲ್ಪಟ್ಟಿವೆ. ಈ ಹೆಸರುಗಳ ಉತ್ಪತ್ತಿಯನ್ನು ಪರೀಕ್ಷಿಸಲಾಗಿ ಅವು ಆರ್ಯ ಭಾಷೆಯ ಶಬ್ದಗಳೆಂದು ಕಂಡು ಬಂದಿತು. ಇದರಂತೆಯೇ ಇತಿಹಾಸಜ್ಞರು ಪಶ್ಚಿಮ ಏಶಿಯದ ಪ್ರಾಚೀನ ಇತಿಹಾಸದಲ್ಲಿ ಆರ್ಯರನ್ನು ಗುರುತಿಸಿದ್ದಾರೆ ಪಾಶ್ಚಾತ್ಯ ವಿದ್ವಾಂಸರು ವೇದಗಳಲ್ಲಿ ಹೇಳಿದ ವ್ಯಕ್ತಿಗಳು ಐತಿಹಾಸಿಕ ವ್ಯಕ್ತಿಗಳೆಂದು ಏಕಮತ್ಯದಿಂದ ಒಪ್ಪಿದ್ದಾರೆಂಬುದನ್ನು ಈ ಮೊದಲೇ ಹೇಳಿದೆ. ಮಾಹಿಷ್ಮತಿಯ ಸ್ಥಾನ ಹಾಗು ನರ್ಮದಾ ಪ್ರದೇಶ ಇವೆರಡಕ್ಕೂ ಮೊತ್ತಮೊದಲು ಸಂಬಂಧಿಸಿದವರೆಂದು ಪುರಾಣದಲ್ಲಿ ಹೇಳಿದ ವ್ಯಕ್ತಿಗಳ ಹೆಸರುಗಳು ಹಾಗು ಅವರು ರಚಿಸಿದ ಸೂಕ್ತಗಳು ಋಗ್ವೇದದಲ್ಲಿ ಇಂದಿಗೂ ದೊರೆಯುತ್ತವೆಂಬುದೇ ಮಹತ್ವದ ಸಂಗತಿ.ಉದಾ:— ಮಾಂಧಾತನ ತಂದೆಯುವನಾಶ್ವನು ಸ್ವತಃ, ಇವನ ಹಿರಿಯ ಮಗ ಪುರುಕುತ್ಸ ಹಾಗು ಮೊಮ್ಮಗ ತ್ರಸದ್ದಸ್ಯು (ಋಗ್ವೇದ ೧೦, ೧೩೪; ೪, ೬೨; ೯, ೬೨; ೯, ೧೧; ೮) ಇದರಿಂದ ಮಾಹಿಷ್ಮತಿಯ ಸಂಸ್ಥಾಪಕರು ಐತಿಹಾಸಿಕ ವ್ಯಕ್ತಿಗಳೆಂತಲೂ, ಅವರು ಆರ್ಯಭಾಷೆಯನ್ನಾಡುವವರು ಇಲ್ಲವೆ ಆರ್ಯರು ಎಂದು ಕಂಡುಬಂದಿದೆ. ಈ ಸಂಗತಿಯನ್ನು ಒಪ್ಪದಿದ್ದರೆ ವೇದ ಸೂಕ್ತಗಳು ರಚಿಸಲ್ಪಡುತ್ತಿರಲಿಲ್ಲ ವೆಂದು ಅನ್ನಬೇಕಾಗುತ್ತಿದೆ.

ಅಂದ ಮೇಲೆ ಆರ್ಯರು ಕ್ರಿ. ಪೂ. ೩೦೦೦ ಕ್ಕಿಂತ ಮೊದಲೆ ಅಂದರೆ ಹಡಪ್ಪಾ ಸಂಸ್ಕೃತಿಗಿಂತ ಮುಂಚೆ ನರ್ಮದಾ ತಪ್ಪಲಿನಲ್ಲಿ ಇದ್ದರೆ? ಇದನ್ನು ನಂಬಲಾಗುವುದಿಲ್ಲ ವೆಂದು ಅನ್ನಬೇಕೆಂದರೆ. ಪುರಾಣ ವಸ್ತು ಸಂಶೋಧನೆಯ ಪ್ರಮಾಣಗಳು ಪ್ರತ್ಯಕ್ಷವಾಗಿ ಅವಶೇಷ ರೂಪದಲ್ಲಿ ನಮ್ಮುದುರಿನಲ್ಲಿದ್ದಾಗ ನಾವು ಮಾಡುವುದೇನು? ಅವಶೇಷಗಳು ಸ್ಪಷ್ಟ ರೂಪದಲ್ಲಿ ಇರದಿದ್ದರೂ ಅವುಗಳನ್ನು ಹುಡುಕುವಂತೆ ಉಪಾಸನೆ ಉಂಟಾಗುತ್ತಿದೆ

ಇದಾದ ತರುವಾಯ ಈ ಲೇಖಕನಿಗೆ ಸೌರಾಷ್ಟ್ರದಲ್ಲಿ ಕೆಲವೆಡೆಗಳಲ್ಲಿ ಮೇಲ್ಮೈಣಿಸಿದ ಸಂಸ್ಕೃತಿಯ ಅವಶೇಷಗಳು ಸಿಕ್ಕವು. ಮಾಳವದ ಚಂಬಳಾ ನದಿಯ ತೀರದಲ್ಲಿ ನಾಗಡಾ ಎಂಬ ಹಸರಿನ ಊರಿನಲ್ಲಿ (ರತ್ಲಾಮಿನ ಹತ್ತಿರ) ಇದೇ ಸಂಸ್ಕೃತಿಯ ಒಂದು ಅತ್ಯಂತ ಮಹತ್ವವಾದ ಸ್ಥಾನವು ಸಿಕ್ಕಿತು. ಆದರೆ ಪಶ್ಚಿಮ ಹಾಗು ಮಧ್ಯ ಭಾರತದಲ್ಲಿ ಎಲ್ಲೆಯೂ ಈ ಲೇಖಕನಿಗೆ ಹಡಪ್ಪಾ ಸಂಸ್ಕೃತಿಯ ಚಿಹ್ನೆಗಳು ಕಣ್ಣಿಗೆ ಬೀಳಲಿಲ್ಲ.

ಪ್ರಾಗೈತಿಹಾಸಿಕ ಹಸ್ತಿನಾಪುರದ ಶೋಧ

ಇಷ್ಟಾದ ಮೇಲೆ ಈ ಲೇಖಕನು ಗಂಗಾತೀರದ ಕಡೆಗೆ ತನ್ನ ದೃಷ್ಟಿಯನ್ನು ತಿರುಗಿಸಿದನು. ತಾಮ್ರಯುಗದ ಪ್ರಾಚೀನ ವಸ್ತುಗಳು ಬ್ಲೂಂಡ್ ಶಹರ್, ಬಿಜನೋರ್, ಮಥುರಾ, ಫತೇಹಗಡ್, ಬಕ್ಸಾರ್ ಮುಂತಾದ ಸ್ಥಾನಗಳಲ್ಲಿ ದೊರಕಿದುವು ಆದರೆ ಸಿಂಧೂ ಹಾಗು ನರ್ಮದಾ ತೀರಗಳಲ್ಲಿಯಂತೆ ಯಾವ ಪ್ರಾಗೈತಿಹಾಸಿಕ ಪಟ್ಟಣಗಳ ಅವಶೇಷಗಳೂ ಗಂಗಾತೀರದಲ್ಲಿ ಸಿಕ್ಕಲಿಲ್ಲ ಯಾಕೆಂದರೆ ಪ್ರಾಚೀನ ಕಾಲದ ಎಲ್ಲ ಪಟ್ಟಣಗಳೂ ಇಲ್ಲಿಯವರೆಗೆ ಹೆಗ್ಗಿದ್ದವೊ ಹಾಗೆಯೇ ಉಳಿದಿವೆ. ಉದ :- ಅಯೋಧ್ಯಾ, ಝಾಂಸಿ (ಪ್ರತಿಷ್ಠಾನ) ಕನೋಜ, ಕಾಶೀ ಇತ್ಯಾದಿ. ಈ ಪರಿಸ್ಥಿತಿಯಲ್ಲಿ ಐತಿಹಾಸಿಕ ಕಾಲದ ಪಟ್ಟಣಗಳ ಕೆಳಗೆ ಪ್ರಾಗೈತಿಹಾಸಿಕ ನಗರಗಳ ಅವಶೇಷಗಳು ಹೀಗೆ ಹೂಳಿ ಅಥವಾ ತೆಗ್ಗಿನಲ್ಲಿ ಕೆಳಕಳಿಗೆ ಇಳಿದು ಹೋಗಿರುವುದರಿಂದ ಅವುಗಳನ್ನು ಪತ್ತೆ ಹಿಡುಕುವುದು ಒಹಳ ಕಠಿಣ ಕೆಲಸ. ಆದರೆ ಈ ಎಲ್ಲ ಸ್ಥಾನಗಳಲ್ಲಿ ಉತ್ತರ ಪ್ರಾಗೈತಿಹಾಸಿಕ ಕಾಲದಲ್ಲಿ ಸರಾಸರಿ ಕ್ರಿ ಪೂ. ೧೦೦೦ ದಲ್ಲಿ ಹಸ್ತಿನಾಪುರವೂ ಕೂಡ ಹಾಳಾಗಿದ್ದುದರಿಂದ ಅದರ ಪ್ರಾಗೈತಿಹಾಸಿಕ ಅವಶೇಷಗಳು ನೆಲದ ಮೇಲ್ಮೈಯಲ್ಲಿಯೇ ಸಿಗುವ ಆಸೆಯಿತ್ತು. ಅದಕ್ಕಾಗಿಯೇ ಈ ಲೇಖಕನು ೧೯೫೦ ರ ಆರಂಭಕ್ಕೆ ಅಲ್ಲಿ ಹೋಗಿ ನೋಡಲು ಪುರಾಣಗಳಲ್ಲಿ ವರ್ಣಿಸಿದಂತೆಯೇ ಎಲ್ಲವೂ ಕಂಡು ಬಂದಿತು ಹಸ್ತಿನಾಪುರದ ಅವಶೇಷಗಳು ಮೇರಠದಿಂದ ಈಶಾನ್ಯಕ್ಕೆ ಮವಾನಾ ನಗರದ ಮೇಲಿಂದ ಹಾಯ್ದು ೩೦ ಮೈಲು ದೂರದವರೆಗಿರುವ ಗಂಗಾನದಿಯ ಒಂದು ಪ್ರಾಚೀನ ತೀರದಲ್ಲಿ ಹಬ್ಬಿಕೊಂಡಿವೆ. ಗಂಗಾನದಿ ಪೂರ್ವಕ್ಕೆ ಕೆಲವು ಮೈಲುಗಳ ಮೇಲೆ ಈಗ ಹರಿಯುತ್ತಿದೆ. ಈ ಲೇಖಕನು ನಿಶ್ಚಯಿಸಿಕೊಂಡಂತೆ ಹಸ್ತಿನಾಪುರದ ಅವಶೇಷಗಳ ಮೇಲ್ಮೈಯಲ್ಲಿ ಇವನಿಗೆ ಕ್ರಿ ಪೂ. ಆನೆಯ ಶತಮಾನಕ್ಕೆಂತಲೂ ಮೊದಲಿನ ಚಿಹ್ನೆಗಳು ಕಂಡುವು. ಗಂಗಾತೀರದಲ್ಲಿ ಎಲ್ಲಿಯೂ ದೊರಕದ ಚಿತ್ರಾಂಕಿತ ಕುಂಭಕಲೆಯ ಒಂದು ಮಾದರಿ ಅಲ್ಲಿ ದೊರಕಿದ್ದು ಕೇಳತಕ್ಕ ಸಂಗತಿಯಾಗಿದೆ. ಹಸ್ತಿನಾಪುರವು ಕ್ರಿ. ಪೂ. ಆನೆಯ ಶತಕಕ್ಕೆ ಮೊದಲೇ ಹಾಳಾಗಿಹೋಗಿತ್ತು. ಮತ್ತು ಇದರಂತೆಯೆ ಮಾಹಿಷ್ಮತಿಯೊಂದನ್ನು ಬಿಟ್ಟು ಹಸ್ತಿನಾಪುರದ ವಿಷಯದಲ್ಲಿಯೂ ಕೂಡ ಪುರಾಣಗಳು ಐತಿಹಾಸಿಕ ಸಂಗತಿಗಳನ್ನು ಉಲ್ಲೇಖಿಸುತ್ತವೆಂಬುದು ಸಿದ್ಧವಾಯಿತು. ಮೇಲ್ಮೈಯಲ್ಲಿಯೇ ಸರಾಸರಿ ಕ್ರಿ ಪೂ ಆನೆಯ ಶತಮಾನದ ~~ಪ್ರಾಗೈತಿಹಾಸಿಕ~~ ಅವಶೇಷಗಳು ಹಸ್ತಿನಾಪುರದ ದಿನ್ನೆಗಳಲ್ಲಿ ಸಿಕ್ಕುವವೆಂದ ಮೇಲೆ ಈ ದಿನ್ನೆಗಳ ಎತ್ತರವನ್ನು ನೋಡಿ ಮೇಲ್ಮೈಣಿಸಿದ ಅವಧಿಗಿಂತ ನಿಸ್ಸಂದೇಹವಾಗಿಯೂ ೧೦೦೦ ವರ್ಷಕ್ಕೆ ಮೊದಲಿನ ಭಾರತದ ಆರ್ಯರ ಇತಿಹಾಸವು ಇಲ್ಲಿ ಸಮಾಧಿ ಹೊಂದಿದೆಯೆಂದು ಹೇಳಲು ಅಡ್ಡಿಯಿಲ್ಲ. ಹಸ್ತಿನಾಪುರವು ಆನಾರ್ಯ ನಗರವೆಂಬ ಮಾತನ್ನು ಸರಾಸರಿ. ಯಾವ ಒದ್ದಿನಂತನಾದರೂ ಹೇಳಬಹುದು ಇಲ್ಲಿಯ ಅರಸರು ವೈದಿಕ ಋಷಿಗಳಿಗೆ ಆಶ್ರಯವನ್ನೂ, ಉತ್ತರ ವೈದಿಕ ಸಾಹಿತ್ಯ ರಚನೆಗೆ ಹುರುಪನ್ನೂ ಸಲ್ಲಿಸುತ್ತಿದ್ದರೆಂಬುದು ಪ್ರಸಿದ್ಧವಾಗಿದೆ. ಹಸ್ತಿನಾಪುರದಲ್ಲಿ ಈ ಲೇಖಕನಿಗೆ ದೊರೆತ ಪ್ರಾಗೈತಿಹಾಸಿಕ ಕುಂಭಕಲೆಯ ಅವಶೇಷಗಳ ಆಕೃತಿಯನ್ನು ಪರಿಶೀಲಿಸಿದರೆ ಇಲ್ಲಿಯ ಕುಂಭಕಲೆಯೂ ಒಂದೇ ವರ್ಗದವೆಂಬುದು ಒಡೆದು ಕಾಣುತ್ತದೆ ಮಾಹಿಷ್ಮತಿಯ ಆರ್ಯ ಸಂಸ್ಕೃತಿಯ ಕುಂಭ ಕಲೆ ಈ ಕಲೆಯ ಉನ್ನತಿಯ ಕಾಲ ನಿದರ್ಶಕವೆಂದೂ ಹಾಗು ಹಸ್ತಿನಾವತಿಯ ಕುಂಭಕಲೆ ಆದರ ಅವನತಿ ಕಾಲವೆಂದೂ ಹೇಳಬಹುದು ಇದೇ ಇವೆರಡೂ ಸಂಸ್ಕೃತಿ ಕೇಂದ್ರಗಳ ಪ್ರಾಗೈತಿಹಾಸಿಕ ಕುಂಭಕಲೆಯಲ್ಲಿಯ ಅಂತರ

೧೦೦ನೇ ಪುಟಕ್ಕೆ—

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ।
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ।
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ।
ಪರುಷದ ಬಲದಿಂದ ಅನಲೋಹದ ಕೇಡು ನೋಡಯ್ಯ। --ಬಸವಣ್ಣನವರು

ಸಂಪಾದಕರು :
ಪ್ರೊ. ಎಸ್. ಬಸವನಾಳ ಬಿ.ಎ. ಎಲ್ಎಲ್. ಬಿ ಮತ್ತು ಜಿ. ಆರ್. ಪಾಂಡೇಶ್ವರ್

ಅರುವತ್ನಾಲ್ಕರ ಹೊಸ್ತಿಲಲ್ಲಿ—ನೆಹರೂಜಿ

ಜಗತ್ತಿನ ಪ್ರಧಾನ ಮಂತ್ರಿಗಳೂ, ಇಂದಿನ ಭಾರತದ ಪ್ರಧಾನ ಪುರುಷರೂ ಆಗಿರುವ ಪಂಡಿತ ನೆಹ್ರೂರವರು ಇದೇ ಗಳಿನೇ ದಿನಾಂಕ ತಮ್ಮ ಇಹಜೀವಿತದ ೬೩ ವರ್ಷಗಳನ್ನು ದಾಟಿದರು. ಅವರಿಗೆ ದೀರ್ಘಾಯುಆರೋಗ್ಯಗಳನ್ನು ದಯಪಾಲಿಸುವಂತೆ ದಯಾಮಯವಾದ ವಿಶ್ವಶಕ್ತಿಯನ್ನು ಸರ್ವ ಭಾರತೀಯರೂ ಪ್ರಾರ್ಥಿಸಿದ್ದಾರೆಂದರೆ ಅತ್ಯುಕ್ತಿಯಲ್ಲ. ಈ ಪ್ರಾರ್ಥನಾಸಾಗರಕ್ಕೆ ನಾವೂ ನಮ್ಮ ಅಂತಃಕರಣದ ಪ್ರಾರ್ಥನೆಯ ಕಿರು ತೊರೆಯನ್ನು ಹರಿಯಿಸಿದ್ದೇವೆ.

ತಮ್ಮ ಈ ಹುಟ್ಟುಹಬ್ಬದಂದಿನ ಪಂಡಿತಜೀಯವರ ಮೊಟ್ಟಮೊದಲಿನ ಎರಡು ಕಾರ್ಯಕ್ರಮಗಳೆಂದರೆ. ಗಾಂಧಿಯವರ ಸಮಾಧಿ ದರ್ಶನ ಹಾಗೂ ೩೦೦೦ಕ್ಕಿಂತಲೂ ಮೇಲ್ಪಟ್ಟ ಮಕ್ಕಳ ಕೂಟ ದೊಡನೆ ಸಲ್ಲಾಪ. ಅವರ ಸತ್ಯ ಮತ್ತು ನ್ಯಾಯದ ಪರಿಪಾಲನೆಯ ದೃಢವ್ರತಕ್ಕೆ ಮೊದಲನೆಯದು ಸಾಕ್ಷಿಯಾಗಿದ್ದರೆ, ದ್ವೇಷಾಸೂಯೆ, ದಂಭಾಹಂಕಾರಗಳಿಲ್ಲದ ನಿರ್ಮಲ ಚಿತ್ತಕ್ಕೆ ಎರಡನೆಯದು ಸಾಕ್ಷಿಯಾಗಿದೆ. ನೆಹ್ರೂರವರ ಈ ಜನ್ಮ ಜಯಂತಿಯನ್ನು ಆಚರಿಸಿದ ಹಾಗೂ ಪಾಲಿಸುವ ಸಮಸ್ತ ಭಾರತೀಯರೂ ಅವರು ಇಟ್ಟು ಕೊಂಡಿರುವ ಈ ಉದಾತ್ತ ಹೃನ್ನಗಗಳ ಮಹಾಧ್ಯೇಯವನ್ನು ತಮ್ಮ ಸರ್ವ ಕ್ರಿಯೆಗಳಲ್ಲಿಯೂ ಅನುಸರಿಸುವ ಶಕ್ತಿಯನ್ನು ಪಡೆಯುವಂತಾಗಲಿ.

ನೆಹ್ರೂರವರ ಜೀವನವು, ಗಂಗಾ-ಯಮುನಾ-ಸರಸ್ವತೀ ನದಿಗಳ ಸಂಗಮ ಸ್ನಾನವಾದ ಅವರ ಹುಟ್ಟೂರು ಪ್ರಯಾಗ (ಅಲಹಾಬಾದ್)ದಂತೆ, ಮೂರು ಚೈತನ್ಯವಾಹಿನಿಗಳ ತ್ರಿವೇಣೀ ಸಂಗಮವಾಗಿದೆ. ಗುರು ಗಾಂಧಿಯವರ ತ್ಯಾಗ-ಯೋಗ, ತಂದೆ ಮೋತೀಲಾಲರ ಭೋಗ-ಔದಾರ್ಯ, ತಾಯಿ ರೂಪರಾಣಿಯವರ ಶೀಲ-ನಿಷ್ಠೆ ಈ ಮೂರೂ ಅವರಲ್ಲಿ ಪರಸ್ಪರ ಪೂರಕವಾಗಿ ಎರಕಗೊಂಡಿವೆ. ಅದ್ದರಿಂದಲೇ ಅವರು ಆಧ್ಯಾತ್ಮಿಕವಾದಿಗಳಾದ ಪೌರ್ವಾತ್ಯ ಪುರುಷ ಶ್ರೇಷ್ಠರ ಮೆಚ್ಚಿಕೆ ಪಡೆದಂತೆ, ಭೌತಿಕವಾದಿಗಳಾದ ಪಾಶ್ಚಿಮಾತ್ಯ ಮುತ್ಸದ್ದಿಗಳ ಮೆಚ್ಚಿಕೆಗೂ ಪಾತ್ರರಾಗಿದ್ದಾರೆ. ಅದರ ಪರಿಣಾಮವಾಗಿ, ಯುದ್ಧೋನ್ಮತ್ತತೆಯಿಂದ ಕುದಿಯುತ್ತಿರುವ ಪಾಶ್ಚಿಮಾತ್ಯ ರಾಜಕಾರಣ ಧುರಂಧರರು ಅವರ ಸೂಚನೆ ಬರುತ್ತಲೇ ತುಸ ತಣ್ಣಗಾಗಿ, ವಿಚಾರಕ್ಕೆ ತೊಡಗುವರು. ಇಂತಹ, ಜಾಗತಿಕ ಮಹಾ ವ್ಯಕ್ತಿಯನ್ನು ಪಡೆದ ಭಾರತವು, ಜಾಗತಿಕ ಶಾಂತಿ ಸುವ್ಯವಸ್ಥೆಗಳ ಸಮತೂಕವನ್ನು ಕಾದುಕೊಂಡು ಬರುವ ಸನ್ನೆಗೋಲು (Fulcrum) ಆಗಲೆಂದು ಈ ಶುಭಸಂದರ್ಭದಲ್ಲಿ ಆಶಿಸುವೆವು.

ಚಲಚ್ಚಿತ್ರ ಸಂಗೀತ ಮತ್ತು ಮಂತ್ರಿ ಕೇಸ್ಕರ್

ಭಾರತ ಚಲನ ಚಿತ್ರ ನಿರ್ಮಾಪಕರ ಸಂಘ ಹಾಗೂ ಆಕಾಶವಾಣಿ ಖಾತೆಯ ಮಂತ್ರಿ ಶ್ರೀ॥ ಕೇಸಕರರ ನಡುವೆ ನಡೆದ ಪತ್ರ ವ್ಯವಹಾರವು ಪ್ರಕಟವಾಗಿದ್ದು, ಉಭಯ ಕಕ್ಷಿಗಳ ನಿಲುಮೆಯ ಮೇಲೆ ಬೆಳಕು ಚೆಲ್ಲುತ್ತಿದೆ. "ಚಲನ ಚಿತ್ರ ಸಂಗೀತದಲ್ಲಿ ಅಶ್ಲೀಲತೆ ಹೆಚ್ಚುತ್ತ ಹೋಗಿರುವುದೆಂದು ರೇಡಿಯೋ ಕೇಂದ್ರ ಗಳಲ್ಲಿ "ಪುಣೆರಂಗ ಚಿತ್ರಮಂದಿರ ಪರೀಕ್ಷಕರ ಸಮಯಾವಧಿಯನ್ನು ಕಡಿಮೆ ಮಾಡಲಾಗುವುದು" ಎಂದು ಮಂತ್ರಿಗಳು ಸಾರಿದ್ದರೆ, "ಅಶ್ಲೀಲತೆಯ ಆರೋಪವನ್ನು ಉದಾಹರಣೆ ಸಹಿತ ಸಿದ್ಧಮಾಡಿಕೊಡದೆ ಆರೋಪಿಸಲೆತ್ನಿಸುವುದು ನ್ಯಾಯ ಸಮ್ಮತವಾಗದು" ಎಂದು ನಿರ್ಮಾಪಕ ಸಂಘದ ಅಧ್ಯಕ್ಷರು ಉತ್ತರವಿತ್ತಿದ್ದಾರೆ! ಹಾಗೂ ಹೀಗೂ ಹೊಸ ಚಿತ್ರಗಳೂ ಸರ್ಕಾರಿ ನಿಯಂತ್ರಣ ಪರೀಕ್ಷಕ ಮಂಡಳಿ"(Censor Boards)ಗಳನ್ನು ದಾಟಿ ಬಂದಮೇಲೆಯೇ ಪ್ರದರ್ಶಿತವಾಗುವುದರಿಂದ, ಮಂತ್ರಿಗಳ ಈಗಿನ ನಿಲುಮೆಯು ಆ ಮಂಡಳಗಳ ಬುದ್ಧಿಮತ್ತೆಗೆ ಅವಮಾನಕರವಾಗದೆ?" ಎಂದೂ ಅವರು ಪ್ರಶ್ನಿಸಿದ್ದಾರೆ. ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಬೀಯುವುದನ್ನು ಬಿಟ್ಟುಕೊಟ್ಟು, "ಉದಾಹರಣೆಗಳು ಹೇರಳವಿರುವುದರಿಂದ, ಅವುಗಳನ್ನೆತ್ತಿ ತೋರಿಸುವ ಅಗತ್ಯವಿಲ್ಲ" ಎಂದೂ, "ಹೇಗೆ ಮತ್ತು ಯಾವಾಗ ಚಲಚ್ಚಿತ್ರ ಧ್ವನಿಮುದ್ರಿತ ಗೀತ ಪ್ರಸಾರವನ್ನು ನಿಲ್ಲಿಸಬೇಕೆಂಬ ಬಗ್ಗೆ ಸರಕಾರಕ್ಕೆ ಅನ್ಯರು ಸೂಚಿಸಬೇಕಾದ ಅಗತ್ಯವಿಲ್ಲ' ಎಂದೂ ಶ್ರೀ॥ ಕೇಸ್ಕರ ಮಂತ್ರಿಗಳು ಒಂದು ಬಗೆಯ ತಿರಸ್ಕಾರ ವ್ಯಂಜಕವಾದ ಧಿಕ್ಕಾರದ ಉತ್ತರವನ್ನೆ ತ್ತಿರುವರೆನ್ನಬಹುದು.

ಚಲಚ್ಚಿತ್ರ ನಿರ್ಮಾಪಕ ಸಂಘವು ಕೇವಲ ವ್ಯಾವಾರೀ ದೃಷ್ಟಿಯಿಂದಲೇ ಅಶ್ಲೀಲ ವಸ್ತುಗಳಿಗೆ ಗಿರಾಕಿಗಳು ಹೆಚ್ಚೆಂದು ತಿಳಿದು ತಮ್ಮ ಚಿತ್ರಗಳಲ್ಲಿ ಅಶ್ಲೀಲ ಗೀತಗಳನ್ನು ಹೆಚ್ಚಿಸಿದ್ದಾರೆಂಬ ಸ್ಪಷ್ಟವಾಕ್ಯ ಕೂಡಾ ಸಾಧುವಾಗದು. ಪ್ರಕ್ಷೇಪದಲ್ಲಿ ಯಾವ ಚಿತ್ರವೇ ಇರಲ್ಲಿ ಅಶ್ಲೀಲತೆ ಹೆಚ್ಚು ಜನ ಪ್ರಿಯ ವಾಗಲು ಕಾಮ ಶೃಂಗಾರದ ಕಥೆ-ಗೀತೆಗಳೇ ಕಾರಣ ಗಳಲ್ಲ; ಅವುಗಳಲ್ಲಿಯ ನಟ-ನಟಿಯರ ಕೀರ್ತಿ, ಅಭಿನಯ, ವೇಷ-ಭೂಷಾಕ, ಗಳು, ದೃಶ್ಯ ವೈವಿಧ್ಯ, ಜಗರ್ಷಕ ಚಾತುರ್ಯ, ಕಥಾನಿರೂಪಣಾ ಕ್ರಮ ಹಾಗೂ ಅದರಿಂದ ಹೊರಡುವ ತತ್ಸಿದ್ಧಾಂತಗಳು—ಇವುಗಳ ಮೇಲೆ. ಕೇಳ್ಮೆಯಲ್ಲಿಯೇ ಚಿತ್ರಗಳ ಉನ್ನತಿ ಅವನತಿಗಳೂ, ಲಾಭ-ನಷ್ಟಗಳೂ ಹೊಂದಿಕೊಂಡಿವೆ. ಸ್ತ್ರೀಯರ ಕಳ್ಳರ ಗಳ ಕಥೆಗಳೇ ಹೆಚ್ಚಾಗಿವೆಯೆಂದು ಹೇಳ್ವುವುದಾದರೂ, ಅವುಗಳು ಇಂದಿನ ನಿರಕ್ಷರ ಕಾರಖಾನೆಗಳ ಮಜೂರ್ ಜೀವನ, ವೇಶ್ಯಾ ಜೀವನ, ರೇಲ್ವೇ ಪೋರ್ಟರ್ಸ್, ಪೋಲೀಸ್ ಸಿಪಾಯಿ ಜೀವನ, ಜಮ್ಮಿ ನ್ದಾರೀ ಜೀವನ ಹೀಗೆ ಸಮಸಾಮಾಜಿಕ ಸಮಾಜವನ್ನೇ ಚಿತ್ರಿಸುತ್ತಿದ್ದೇವೆ ಎನ್ನುವ ಗತ್ಯಂತರವಿಲ್ಲ. ಆದ್ದರಿಂದ ಮಾನ್ಯ ಮಂತ್ರಿ ಕೇಸಕರರು ನಿರ್ಮಾಪಕ ಸಂಘದ ಹೇಳಿಕೆ ಕೇಳಿಕೆಗಳನ್ನು ತಾಳ್ಮೆಯಿಂದ ಪರೀಕ್ಷಿಸಿದರೆ ಔದಾರ್ಯವನ್ನು ತೋರಲಿಲ್ಲವೆಂದು ಹೇಳಬೇಕಾಗಿದೆ.

ಪ್ರತೀಕಾರವು ತಪ್ಪಾಗುವುದೆ ?

ಪಾಕಿಸ್ತಾನ ಸರಕಾರವು ಭಾರತದ ಚಲಚ್ಚಿತ್ರಗಳ ಆಯಾತದ ಮೇಲೆ ನಿರ್ಬಂಧ ಹೇರುತ್ತಿದೆ ಎಂಬ ಸುದ್ದಿ ಕಳೆದ ೩ ವಾರಗಳಿಂದ ದಟ್ಟವಾಗಿ ಹಬ್ಬಿದ್ದಿತಲ್ಲದೆ, ಆ ಸುದ್ದಿಯನ್ನೇ ನಂಬಿ ಕೆಲವು ವೃತ್ತಪತ್ರಿಕೆಗಳು ಸಂಪಾದಕೀಯಗಳನ್ನು ಕೂಡಾ ಬರೆದು ಬಿಟ್ಟಿದ್ದವು. ಪಾಕಿಸ್ತಾನ ಹಾಗೂ ಭಾರತ ಸರಕಾರಗಳು ಪ್ರಕಟನೆ ಹೊರಡಿಸಿ, ಆ ಸುದ್ದಿಗೆ ಆಧಾರವೇ ಇಲ್ಲವೆಂದು ಸಾರಿರುವುದು ಸನ್ನಿಧಾನಕರವಾಗಿದೆ. ಆದರೂ, ಪಾಕಿಸ್ತಾನ ಸರಕಾರವು ಭಾರತದ ವೀಳೆಯದೆಲೆ ಆಯಾತದ ಮೇಲೆ ನಿರ್ಬಂಧ ಹೇರಿರುವುದೆಂಬ ಸತ್ಯದ ಸುದ್ದಿ ಮಾತ್ರ ಇನ್ನೂ ಸಾಕಷ್ಟು ಪ್ರಚಾರ ವಾಗಿಲ್ಲವೆಂಬುದು ಸ್ಪೋಜಗವೇ ಸರಿ. ಪ್ರತಿವರ್ಷವೂ ಮುಂಬಯಿ ಇಲಾಖೆಯ ಬೇಸಿನ್ ಹಾಗೂ ಪಾಲ್ಘರ್ ಜಲ್ಲೆಗಳಿಂದಲೇ ಪಾಕಿಸ್ತಾನಕ್ಕೆ ೨ ಕೋಟಿ ೭೦ ಲಕ್ಷ ರೂಪಾಯಿ ಕಿಮ್ಮತ್ತಿನ ವೀಳೆಯದೆಲೆಯು ನಿರ್ಯಾತವಾಗುತ್ತಿದ್ದಿತು. ಇದೇ ಮೇರೆಗೆ ಮದ್ರಾಸ್ ರಾಜ್ಯದ ಮಲಬಾರಿನಿಂದಲೂ ನಿರ್ಯಾತವಾಗುತ್ತಿದ್ದಿತು. ಪಾಕಿಸ್ತಾನ ಸರಕಾರವು ಆದರ ಮೇಲೆ ನಿರ್ಬಂಧ ಹೇರಿರುವುದರಿಂದ ವೀಳೆಯದೆಲೆ ಕೃಷಿಯನ್ನೇ ಮುಖ್ಯ ದಂಧೆಯಾಗಿಟ್ಟುಕೊಂಡ ಸಾವಿರಾರು ಕೃಷಿಕ ಕುಟುಂಬಗಳಿಗೆ ಹಾನಿ ತಟ್ಟಿದೆ. ಕಳೆದವಾರ ದಿಲ್ಲಿಯ ಪಾರ್ಲಿಮೆಂಟಿನಲ್ಲಿ ಸದಸ್ಯರೊಬ್ಬರು ವಾಣಿಜ್ಯ ಉಪಮಂತ್ರಿಗಳಿಗೆ ಈ ಕುರಿತು ಪ್ರಶ್ನೆ ಹಾಕಿದರು; ಹಾಗೂ ಭಾರತ ಸರಕಾರವು ಇದರ ನಿಷೇಧಾರ್ಥವಾಗಿ ತಕ್ಕ ಪ್ರತೀಕಾರ ಹಾಕಬಾರದೇಕೆ? ಎಂದು ಕೇಳಿದರು. ಮಾನ್ಯ ಮಂತ್ರಿ ಶ್ರೀ॥ ಕರಮಂಕರರು ಉತ್ತರ ಕೊಡುತ್ತು ಪ್ರತೀಕಾರಮಾಡುವುದರಿಂದ ಫಲದೊರೆಕೆಯಲಾರೆಂದು ವ್ಯಕ್ತಪಡಿಸಿದರು. ಪಾಕಿಸ್ತಾನದ ಸರಹದ್ ಪ್ರಾಂತ್ಯ, ಪಶ್ಚಿಮ ಪಂಜಾಬ ಮೊದಲಾದ ಭಾಗಗಳಿಂದ ಭಾರತಕ್ಕೆ ಒಂದೆರಡು ಕೋಟಿ ರೂಪಾಯಿ ಬೆಲೆಯ ಒಣಗಿದ ಹಣ್ಣು ಹಂಪಲುಗಳು ಬರುತ್ತಿವೆ. ಅವುಗಳ ಮೇಲೆ ಭಾರತ ಸರಕಾರವು ನಿರ್ಬಂಧ ಹೇರುವುದು ಸರ್ವಥಾ ತಪ್ಪಾಗಲಾರದೆನ್ನಬಹುದು. ಆ ಬಗ್ಗೆ ಕೇಂದ್ರ ಸರಕಾರವು ವಿಳಂಬಮಾಡುತ್ತಿರುವುದು ಆಶ್ಚರ್ಯಕರವಾಗಿದೆ.

† ಕೃಷಿಕರಿಗೆ ಸಹಾಯನೀಡುವ ಕೇಂದ್ರ ಸಂಸ್ಥೆಯ ಅವಶ್ಯತೆ

—(೦)—

ಭಾರತ ಸರಕಾರವು ಉದ್ಯಮಗಳಿಗೆ ನೆರವು ನೀಡುವ ಉದ್ದೇಶದಿಂದ "ಇಂಡಸ್ಟ್ರಿಯಲ್ ಫೈನಾನ್ಸ್ ಕಾರ್ಪರೇಶನ್" ಎಂಬ ಸಂಸ್ಥೆಯನ್ನು ಸಾಪಿಸಿ ಮೂರು ವರುಷವಾಯಿತು. ಹಾಗೂ ಆ ಸಂಸ್ಥೆಯಿಂದ ಹಲವು ಉದ್ಯಮಗಳಿಗೆ ಸಹಾಯವಾಗಿದೆ. ಅದೇ ಮೇರೆಗೆ ಹಳ್ಳಿಗಾಡಿನ ಕೃಷಿ ಕೈಗಾರಿಕೆಗಳ ಜನತೆಗೆ ಆಯಾಕಾಲಕ್ಕೆ ಅವಶ್ಯವಾಗುವ ಸಣ್ಣ ಪುಟ್ಟ ರಕಮಿನ ಸಾಲಗಳನ್ನು ಒದಗಿಸುವಂತೆ, ಮಧ್ಯವರ್ತಿ ಒಂದು "ರಾಷ್ಟ್ರೀಯ ಸಂಸ್ಥೆ"ಯ ಆಗತ್ಯವಿದೆ ಎನ್ನ ಬಹುದು.

ಈ ಬಗ್ಗೆ ವಿಚಾರಣೆ ನಡೆಸಿ ವರದಿ ಒಪ್ಪಿಸುವಂತೆ ಡಾ|| ಗಾಡಗೀಳರ ನೇತೃತ್ವದಲ್ಲಿ ಒಂದು ಸಮಿತಿಯು ನೇಮಕವಾಗಿದ್ದಿತು. ಆ ಸಮಿತಿಯು ತನ್ನ ವಿಸ್ತಾರವಾದ ವರದಿಯಲ್ಲಿ ಮಹತ್ವದ ಸೂಚನೆಗಳನ್ನು ಮಾಡಿವೆ. ಹಳ್ಳಿಗಳಲ್ಲಿ ಕೃಷಿ ಹಾಗು ವಿವಿಧ ಕೈಗಾರಿಕೆಗಳಲ್ಲಿ ತೊಡಗಿರುವ ಜನರಿಗೆ ಅನತ್ಯ ಬಿದ್ದಾಗ ತಕ್ಕ ಸಾಲಗಳನ್ನೊದಗಿಸಿ ಕೊಟ್ಟು, ಅವರ ಆರ್ಥಿಕ ಪರಿಸ್ಥಿತಿಯ ಏಟ್ಟನ್ನು ಎತ್ತರಿಸುವಂತೆ ಪ್ರತಿಯೊಂದು ರಾಜ್ಯ(ಪ್ರಾಂತ್ಯ)ಕ್ಕೂ ಒಂದೊಂದು ಸ್ವತಂತ್ರವಾದ "ಆರ್ಥಿಕ ಸಹಾಯ ಸಂಸ್ಥೆ" ಯನ್ನು ಸ್ಥಾಪಿಸತಕ್ಕದ್ದೆಂಬ ಸೂಚನೆಯು ಅತ್ಯಂತ ಮಹತ್ವವಾಗಿದೆ. ಈ ವರದಿಯು ಸರಕಾರಕ್ಕೆ ಒಪ್ಪಿಸಲ್ಪಟ್ಟು ಒಂದು ವರ್ಷ ಸಂದಿದೆ. ಇನ್ನೂ ಇದುವರೆಗೂ ಸರಕಾರದ ಲಕ್ಷ್ಯವು ಅದರಕಡೆಗೆ ಹೋಗಿಲ್ಲವೆಂಬುದು ವ್ಯಸನಾಸ್ಪದ ವಾಗಿದೆ

೨೦೦೦ ಕೋಟಿ ರುಪಾಯಿಯ ವೆಚ್ಚವನ್ನು ತಿಪ್ಪರಸ ಮಾಡಿರುವ ಪಂಚವಾರ್ಷಿಕ ಯೋಜನೆಯಲ್ಲಿ ಸಹಾಯ ಸಂಸ್ಥೆಯ ಬಗ್ಗೆ ಸಾಕೆಷ್ಟು ಜ್ಞಾನವಾಗಲೀ ಸಹಾನುಭೂತಿಯಾಗಲೀ ಕಂಡು ಬರುವುದಿಲ್ಲ. ಜನತೆಯು ಏಳಿಗೆ ಎಂದರೆ ಒಟ್ಟು ಹಳ್ಳಿಗರಲ್ಲಿ ವಾಸಿಸುತ್ತಿರುವ ಗ್ರಾಮೀಣ ಜನರ ಏಳಿಗೆಯಾಗದೆಯಿಲ್ಲವೆ? ಹಳ್ಳಿಗರ ಒಕ್ಕಲತನ ಹಾಗೂ ಕೈಗಾರಿಕೆಗಳ ಅಭಿವೃದ್ಧಿ ಸಾಧಿಸುವ ಬಗ್ಗೆ ಕೆಲವೊಂದು ಯೋಜನೆಗಳನ್ನು ರೂಪಿಸಲಾಗಿದೆಯೇ ಹೊರತು, ಜನರಿಗೆ ಸ್ವತಂತ್ರವಾಗಿಯೇ ಈ ಕಾರ್ಯಗಳಿಗಾಗಿ ಋಣ ಸಾಲ ಪಡೆಯಲನುಕೂಲವಾಗುವಂತಹ ವ್ಯವಸ್ಥೆಯಾಗಲೀ, ಸಂಸ್ಥೆಯಾಗಲೀ ಸೂಚಿಸಲ್ಪಟ್ಟಿರುವದಿಲ್ಲ.

ಇದೇ ಆಗಸ್ಟ್ ೪ ರಿಂದ ಸಪ್ಟಂಬರ್ ೧೫ ರವರೆಗೆ ಅಮೇರಿಕದ ಫ್ಯಾಲಿಫೋರ್ನಿಯಾಕ್ಕೆ ಸೇರಿದ ಬರ್ಕ್ಲೆ ಎಂಬಲ್ಲಿ "ಅಂತರ ರಾಷ್ಟ್ರೀಯ ಕೃಷಿ ಮತ್ತು ಸಹಕಾರಿ ಪತ್ತು" ಎಂಬ ಹೆಸರಿನ ಮಹಾ ಸಮ್ಮೇಳನ ವೊಂದು ಜರುಗಿತು ಅದರಲ್ಲಿ ಜಗತ್ತಿನ ೩೪ ರಾಷ್ಟ್ರಗಳ ೭೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಹಿಂದುಳಿದ, ಅರ್ಥಾತ್ ಸಾಕಷ್ಟು ಅಭಿವೃದ್ಧಿ ಹೊಂದಿರದ, ದೇಶಗಳ ಹಳ್ಳಿಗಾಡಿನ ಜನತೆಯ ಏಳಿಗೆಯ ಪ್ರಶ್ನೆಯೇ ಇದರಲ್ಲಿ ಮುಖ್ಯವಾಗಿ ಚರ್ಚಿತವಾಯಿತು. ಭಾರತದ ವತಿಯಿಂದ ನಾಲ್ವರು ಪ್ರತಿನಿಧಿಗಳು ಭಾಗವಹಿಸಿದ್ದು, ಶ್ರೀ ವ್ಹಿ. ಪಿ ವರದಿಯವರೂ ಒಬ್ಬರಾಗಿದ್ದರು.

ಈ ಮಹಾಸಮ್ಮೇಳನವು ಹಲವು ಮಹತ್ವದ ಸೂಚನೆಗಳ ನ್ನೊಳಗೊಂಡ ಒಂದು ವರದಿಯನ್ನು ಅಂಗೀಕರಿಸಿದ್ದು, ಆದರಲ್ಲಿ ನೂರು ಮುಖ್ಯಭಾಗಗಳನ್ನು ಮಾಡಲಾಗಿದೆ ಪ್ರತಿಯೊಂದು ದೇಶವೂ ಈ ಬಗೆ ಕೆಲವು ಕಾಯಿದೆಗಳನ್ನು ಮಾಡತಕ್ಕದ್ದು, ಹಾಗೂ ಅಂತರ ರಾಷ್ಟ್ರೀಯ ಸಹಾಯ ಸಲಕರಣೆ ಗಳನ್ನು ಒದಗಿಸಿ ಕೊಡುವ ದೃಷ್ಟಿಯಿಂದ ಪ್ರತಿಯೊಂದು ರಾಷ್ಟ್ರದ ಸರಕಾರವು ಸ್ಪಷ್ಟವಾದ "ಕೃಷಿಕರ ಹಾಗೂ ಸಹಕಾರಿ ಪತ್ತು"ಸಂಘೋಸಣ ಇಟ್ಟುಕೊಳ್ಳತಕ್ಕದ್ದೆಂದು ಸೂಚಿಸಲ್ಪಟ್ಟಿದೆ. ಕೆಲವು ಸೂಚನೆಗಳು ಹೀಗಿವೆ: (೧)ಜವಾನು ಅಡವತ್ತಿ ಕಾಯಿದೆಗಳಲ್ಲಿ ಬದಲಾವಣೆ ಮಾಡತಕ್ಕದ್ದು (೨) ಒಕ್ಕಲತನ ಹಾಗ ಲಾವಣಿ ಪದ್ಧತಿಯನ್ನು ಸ್ತಿಮಿತಗೊಳಿಸುವುದು (೩) ಪಡೆವ ಸಾಲವನ್ನು ಜಮೀನಿನ ಕಾಟ್ಟು ವಳಿಯ ಬಗ್ಗೆಯೇ ಉಪಯೋಗಿಸಲನುಕೂಲವಾಗುವಂತೆ ಸಾಕಷ್ಟು ಜವಾನು ಒದಗಿಸಿ ಕೊಡುವುದು (೪) ಹಾಗೂ ತಕ್ಕ ಮೆಲ್ತೆಪೆಯುಳ್ಳ, "ಸಾಲ ಒದಗಿಸುವ ಸಂಸ್ಥೆ"ಗಳನ್ನು ಸ್ಥಾಪಿಸುವುದು.

ಈ ವರದಿಯಲ್ಲಿ ಭಾರತಕ್ಕೆಯೇ ನೇರವಾಗಿ ಅನ್ವಯಿಸುವ ಕೆಲವು ಶಿಫಾರಸುಗಳು ಹೀಗಿವೆ:- (೧) "ರಾಷ್ಟ್ರೀಯ ಕೃಷಿ ಧನ ಸಹಾಯಕ ಸಂಸ್ಥೆ"ಯನ್ನು ಸ್ಥಾಪಿಸುವುದು. (೨) ಅಲ್ಪಾವಧಿಯ ಸಾಲ ಕೊಡುವ ಸಲುವಾಗಿ ಆಯಾ ಸ್ಥಳೀಯ ಪತ್ತನ್ನೇ ಸಂಕಲಿಸುವುದು- (೩) ಹಾಗೂ ಒಕ್ಕಲತನದ ಅಭಿವೃದ್ಧಿಗಾಗಿ ದೀರ್ಘಾವಧಿಯ ಮೇಲೆ ಅಂತರ ರಾಷ್ಟ್ರೀಯ ಸಹಾಯ ಪಡೆಯುವುದು. (೪) ನಿರ್ಯಾತಕರ ಹಾಗೂ ಕೆಲವೊಂದು ಕೃಷಿ ಉತ್ಪನ್ನಗಳ ಮೇಲಣ ಆಬಕಾರಿ ಕರ್ತದ ಕೆಲವು ಭಾಗವನ್ನು ಈ ಬಗ್ಗೆ ಒದಗಿಸಿ ಕೊಡುವುದು. (೫) ಏನೂ ಊಳಿತಾಯವಿಲ್ಲದ ಒಕ್ಕಲಿಗರಿಗೆ ಕೆಲವೊಂದು ರಕಮನ್ನು ಸಾಲವಾಗಿಯೂ ಕೆಲವನ್ನು ಸಹಾಯಧನವಾಗಿಯೂ ಒದಗಿಸಿಕೊಡುವುದು.

ಈ ಉದ್ದೇಶಗಳನ್ನು ಈಡೇರಿಸಿ ಕೊಡುವಂತೆ, ಈಗಿರುವ 'ಅಂತರ ರಾಷ್ಟ್ರೀಯ ಬ್ಯಾಂಕಿನಿಂದ ಒಕ್ಕಲತನದ ಅಭಿವೃದ್ಧಿಗಾಗಿಯೇ ಇನ್ನಷ್ಟು ಹೆಚ್ಚು ಹಣ ಒದಗಿಸುವಂತೆ ಏರ್ಪಡಿಸಿ ಕೊಳ್ಳಬೇಕು ಹಾಗೂ ಪ್ರತಿಯೊಂದು ದೇಶದ ವಿಶ್ವವಿದ್ಯಾಲಯಗಳೂ 'ಒಕ್ಕಲತನದ ಪತ್ತಿ"ನಕುರಿತು ತಕ್ಕ ವ್ಯಾಸಂಗವನ್ನೇರ್ಪಡಿಸುವಂತೆ ನೋಡಬೇಕು.

ಸಹಕಾರೀ ನೆರವು

ರಾಜ್ಯ ಸರಕಾರಗಳು ತಗಾಯಿ ಸಾಲವನ್ನು ಕೊಡುವುದಾದರೂ, ಅವುಗಳು ಬಹಳ ತಡವಾಗಿ ದೊರಕುತ್ತಿರುವುದರಿಂದ, ಹಾಗೂ ಎಲ್ಲರಿಗೂ ದೊರೆಯದಿರುವದರಿಂದ, ಶಿಷನುಪಯುಕ್ತವಾಗಿದೆ. ಎಷ್ಟೋ ವೇಳೆ ಈ ಸಾಲಗಳು ವೇಳೆ ಮೀರಿದ ಮೇಲೆ ದೊರೆಯುವುದರಿಂದ, ಅವುಗಳು ಬಿನ್ ಶೇತಕಿ ಕಾರ್ಯಗಳಿಗೆ ವೆಚ್ಚವಾಗಿ ಹೋಗುವುವು!

ಸಹಕಾರಿ ಚಳವಳಿಯು ಈ ದೇಶದಲ್ಲಿ ಇನ್ನೂ ಸಾಕಷ್ಟು ಬೆಳೆದಿರುವುದಿಲ್ಲ. ಭಾರತದಲ್ಲಿಂದು ಒಂಭತ್ತು ಕೋಟಿ ಕೃಷಿಕರಿದ್ದಾರೆ. ಇವರಲ್ಲಿ ಕೇವಲ ಶೇಕಡಾ ೮ ರಷ್ಟು ಜನರು ಕೂಡಾ ಸಹಕಾರಿ ಸಂಘಗಳ ಸದಸ್ಯರಾಗಿರುವುದಿಲ್ಲ; ಒಂದು ವೇಳೆ ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಸಹಕಾರಿ ಸಂಘವನ್ನು ಸ್ಥಾಪಿಸಿದರೂ ಕೂಡಾ, ದೇಶದ ಎಲ್ಲ ಒಕ್ಕಲಿಗರೂ ಕೈಗಾರಿಕೆಯವರಿಗೂ ಸಾಲುವಷ್ಟು ಸಾಲ ಒದಗಿಸಿ ಕೊಡಲಿಕ್ಕೆ ಶಕ್ಯವಾಗಲಾರದು; ಯಾಕೆಂದರೆ, ಅವುಗಳ ಭಂಡವಳವು ತೀರ ಪರಿಮಿತವಾಗಿರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ, ಖಾಸಗಿ ಸಾಹುಕಾರರಿಂದಲೇ ಹಳ್ಳಿಯ ಕೃಷಿಕರೂ ಕೈಗಾರಿಕೆಯವರೂ ಕಾಲ ಕಾಲಕ್ಕೆ ಸಾಲ ಪಡೆಯಬೇಕಾಗಿ ಬಂದಿದೆ. ಸರಕಾರವು ಅದನ್ನು ನಿಯಂತ್ರಿಸುವ ಕಾಯಿದೆ ಜಾರಿಗೆ ತಂದಿರುವುದರಿಂದ ಒಕ್ಕಲಿಗನಿಗೆ ಆ ಬಾಗಿಲೂ ಮುಚ್ಚಿದಂತಾಗಿಬಿಟ್ಟಿದೆ. ವ್ಯಾಪಾರೋದ್ಯಮಗಳಿಗೇ ಹಣ ಒದಗಿಸುವ ಬ್ಯಾಂಕುಗಳು ದೂರ ದೂರವಲ್ಲಿ ಚದರಿಕೊಂಡಿರುವ ಹಳ್ಳಿಯ ರೈತರಿಗೆ ಸಾಲ ಕೊಡುವುದೂ, ಹಿಂತಿರಿಗೆ ಪಡೆಯುವುದೂ ಅಕೃತ್ಯವಾಗಿ ಬಿಟ್ಟಿದೆ ಆದ್ದರಿಂದ, ಹಳ್ಳಿಗಾಡಿನ ಶೇತಕೀ ಜನರಿಗೆ ಸಾಲ ಒದಗಿಸಿ ಕೊಡುವ ಬಗ್ಗೆ ಒಂದು ಅಖಿಲ ಭಾರತೀಯ ಸಂಸ್ಥೆಯನ್ನೇ ಸರಕಾರವು ರಚಿಸಬೇಕು. ಈ ಸಂಸ್ಥೆಗೆ ೧೫೦ ಕೋಟಿ ರೂಪಾಯಿ ಭಂಡವಾಳ ಇರಬೇಕು. ಇದರ ಅರ್ಧದಷ್ಟನ್ನು ಸರಕಾರವೇ ಕೊಡಬೇಕು.

---

† ಸಹಕಾರಿ ಚಳವಳಿಯ ಪ್ರಮುಖ ರತ್ನೊಬ್ಬರಾದ ಶ್ರೀ. ವ್ಹಿ. ಪಿ ವರ್ದಿಯವರ ಲೇಖನದ ಆಧಾರದಿಂದ.

ಪಂಚವಾರ್ಷಿಕ ಯೋಜನೆ ರಾಷ್ಟ್ರೀಯ ಉತ್ಪನ್ನದ ಹೆಚ್ಚಳ

ಭಾರತ ಸರಕಾರವು ರಚಿಸಿಕೊಂಡಿರುವ ಪಂಚವಾರ್ಷಿಕಾಭಿವೃದ್ಧಿ ಯೋಜನೆಗಳಿಗೆ ಒಟ್ಟು ೨೦೦೦ ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದೆಂದೂ, ಇದರ ಫಲವಾಗಿ ರಾಷ್ಟ್ರದ ಉತ್ಪನ್ನವು ಈಗಿನಕ್ಕಿಂತ ಶೇಕಡಾ ೧೫ರಷ್ಟು ಹೆಚ್ಚಾಗುವುದೆಂದೂ ಅಂದಾಜು ಮಾಡಲಾಗಿದೆ

ಪರದೇಶೀ ಪ್ರಯಾಣಿಕರಿಂದ ಆದ ಲಾಭ

ಕಳೆದ ವರ್ಷ ಭಾರತಕ್ಕೆ ವಿದೇಶಗಳಿಂದ ಒಟ್ಟು ೧೮ ಸಾವಿರ ಸಂದರ್ಶಕರು ಬಂದಿದ್ದರೆಂದೂ, ಅವರು ಭಾರತದಲ್ಲಿನ್ನಷ್ಟು ಕಾಲವಧಿಯಲ್ಲಿ ೧೫ ಕೋಟಿ ರೂಪಾಯಿ ವೆಚ್ಚ ಮಾಡಿದ್ದು ಭಾರತಕ್ಕೆ ಅಷ್ಟು ರಕಮು ಸಂವಾದನೆ ಆದಂತಾಯಿತೆಂದೂ ತಿಳಿದು ಬರುತ್ತದೆ

೦ ೦ ೦ ೦

ಅಮೇರಿಕದ ಸಾರ್ವಜನಿಕ ಸಾಲ

ಅಮೇರಿಕದ ಸಂಯುಕ್ತ ಸಂಸ್ಥಾನ ಸರಕಾರವು ತನ್ನ ಪ್ರಜಾ ಜನರಿಂದ ಪಡೆದಿರುವ ಸಾಲದ ರಕಮು ೧೩೫೦೦ ಕೋಟಿ ರೂಪಾಯಿಯಷ್ಟಾಗುವುದೆಂದು ಅಲ್ಲಿಯ ಸರಕಾರವು ಪ್ರಕಟಿಸಿದೆ.

೦ ೦ ೦ ೦

ಸಂ. ರಾ. ಸಂಸ್ಥೆಯ ಕಾರ್ಯದರ್ಶಿತ್ವಕ್ಕೆ ಭಾರತೀಯರ ಹೆಸರು

ಸಂಯುಕ್ತ ರಾಷ್ಟ್ರ ಸಂಸ್ಥೆಯ ಪ್ರಧಾನ ಮಹಾ ಕಾರ್ಯದರ್ಶಿಗಳಾಗಿ ಇಲ್ಲಿಯವರೆಗೆ ಬಹಳಷ್ಟು ಉಪಯುಕ್ತ ಹಾಗೂ ವಿಶ್ವ ಶಾಂತಿ ಸಾಧಕ ಕಾರ್ಯ ಮಾಡುತ್ತ ಬಂದಿದ್ದ ಮಿ|| ಟ್ರಿಗ್ವೀ ಲೀಯವರು ಕಳೆದ ವಾರ ರಾಜೀನಾಮೆ ಕೊಟ್ಟರು ಸಂ ರಾ ಸಂಸ್ಥೆಯ ಕಾರ್ಯಾಲಯದಲ್ಲಿ ಕಮ್ಯೂನಿಸ್ಟರ ಬಗ್ಗೆ ಗುಪ್ತ ಪ್ರೇಮ ಇಟ್ಟುಕೊಂಡ ಕೆಲವರಿಗೆ ಅವರು ನೌಕರಿ ಕೊಟ್ಟರೆಂದು ಅಮೇರಿಕದ ಸಂಯುಕ್ತ ಸಂಸ್ಥಾನ ಸರಕಾರದ ಸಂಸ್ಥೆಯು ಪತ್ತೆ ಹಚ್ಚಿರುವಂತೆ ಈಗ ಆ ಸಂಸ್ಥೆಯ ಹಲವರ ಹೆಸರುಗಳು ಸೂಚಿತವಾಗಿವೆ. ಭಾರತದ ಶ್ರೀ|| ಎ ರಾಮಸ್ವಾಮಿ ಮುದಲಿಯಾರ್, ಶ್ರೀ|| ಬಿ. ನರಸಿಂಗರಾವ್ (ಜಾಗತಿಕ ನ್ಯಾಯಾಲಯದ ಜಜ್ಜರು) ನಿವೃತ್ತ ಭಾರತ ವೈಸರಾಯರಾದ ಶ್ರೀ|| ವಿ. ಕೆ ಕೃಷ್ಣ ಮೇನನ್ ಇವರ ಹೆಸರುಗಳೂ ಕೇಳಿ ಬರುತ್ತಿದೆ ಈ ಸ್ಥಾನದ ವರ್ಷಕ್ಕೆ ೪೦ ಸಾವಿರ ಡಾಲರ್ (ಅಜಮಾಸು ೨ ಲಕ್ಷ ರುಪಾಯಿ) ಪಗಾರವಿರುವುದಲ್ಲದೆ, ನಿವೃತ್ತರಾದ ಮೇಲೆ ವರ್ಷಕ್ಕೆ ೧೫೦೦೦ ಡಾಲರ್ (೭೫ ಸಾವಿರ ರುಪಾಯಿ) ಪೆನ್ಷನ್ ಇರುವುದು

ಮಿ|| ಲೀಯವರ ರಾಜೀನಾಮೆಯಿಂದ ಕಂಗೆಟ್ಟು, ಸಂ ರಾ ಸಂಸ್ಥೆಯ ಕಾಯಿಮ ಸಲ್ಲಾಗಾರ ಖಾಯಿಮ ಪ್ರತಿನಿಧಿಗಳಾದ ಸೋವಿಯೆಟ್ ಒಕ್ಕೂಟದ ವಿಶ್ವಸಂಸ್ಥೆಯ ರಾಯಭಾರಿಗಳಲ್ಲಿ ಒಬ್ಬರಾದ ಶ್ರೀ ಯಾಕೊವ್ ಮಲಿಕ್ ಇವರು ಈ ಸ್ಥಾನಕ್ಕೆ ಅರ್ಜಿ ಹಾಕಿಕೊಂಡಿರುವರು.

ಗ್ರಾಮ ಪಂಚಾಯತಿಗಳು

[ಲೇಖಾಂಕ ೧]

ಲೇಖಕರು:- ಅಂಡಾನಪ್ಪ ಕೌದಿ, ಬಿ. ಎ.
ಕಾರ್ಯದರ್ಶಿ ಕರ್ನಾಟಕ ಪ್ಲಾನಿಂಗ್ ಕಮಿಟಿ

ಮುಂಬಯಿ ರಾಜ್ಯದ ತುಂಬೆಲ್ಲ ಗ್ರಾಮ ಪಂಚಾಯತಗಳು ಸ್ಥಾಪಿತವಾಗಬೇಕು. ಯಾವುದೇ ಗ್ರಾಮದ ಜನಸಂಖ್ಯೆಯು ೧ ಸಾವಿರಕ್ಕೆ ಕಡಿಮೆ ಇದ್ದಲ್ಲಿ ಅದನ್ನು ನೆರೆಯ ಗ್ರಾಮದೊಡನೆ ಜೋಡಿಸಬೇಕು. ಹೀಗೆ ಮಾಡುವುದರಿಂದ ಯಾವ ಹಳ್ಳಿಗೂ ಗ್ರಾಮ ಪಂಚಾಯತದ ಸೌಲಭ್ಯ ಇಲ್ಲವೆಂಬಂತಾಗುವುದಿಲ್ಲ. ಗ್ರಾಮ ಪಂಚಾಯತಗಳಿಗೆ ಪ್ರೌಢ ಮತಾಧಿಕಾರದ ಚುನಾವಣೆಯನ್ನು ಜಾರಿಗೆ ತರಬೇಕು

ಭಾರತದಲ್ಲಿ ಗ್ರಾಮ ಪಂಚಾಯತಗಳೇ ಅತ್ಯಂತ ಹಿಂದಿನಿಂದಲೂ ಬಂದಿರುವ ಪ್ರಜಾ ರಾಜ್ಯಗಳಾಗಿರುತ್ತವೆ. ತಮ್ಮ ಅಧಿಕಾರ ಕೇಂದ್ರೀಕರಣಕ್ಕಾಗಿ ಬ್ರಿಟಿಷರು ಈ ಗ್ರಾಮ ಘಟಕಗಳನ್ನು ಬೇಕೆಂತಲೇ ನಾಶಗೊಳಿಸಿದ್ದರು. ಈಗ ದೇಶವು ಪೂರ್ಣ ಸ್ವತಂತ್ರವಾಗಿರುವುದರಿಂದ, ಪ್ರತಿಯೊಂದು ಗ್ರಾಮವೂ ಸಂಪೂರ್ಣ ಸ್ವಾವಲಂಬಿಯಾದ ಗ್ರಾಮ ಪ್ರಜಾರಾಜ್ಯ ಸರಕಾರವನ್ನು ಸ್ಥಾಪಿಸಿಕೊಡಲು ಯೋಗ್ಯ ಕಾಲ ಬಂದಂತಾಗಿದೆ.

ಗ್ರಾಮ ಪಂಚಾಯತಗಳ ಕಾರ್ಯಗಳು

(೧) ಗ್ರಾಮಕ್ಕೆ ಬರಬೇಕಾಗುವ ರಸ್ತೆಗಳ ರಚನೆ, ದೀಪಗಳ ವ್ಯವಸ್ಥೆ, ಹಾಗೂ ಸ್ವಚ್ಛತೆ

(೨) ಗ್ರಾಮದಲ್ಲಿ ಪ್ರಾಥಮಿಕ ಶಾಲೆಗಳನ್ನು ನಡೆಸುವುದು, ಪ್ರಥಮ ಚಿಕಿತ್ಸಾಲಯ ತೆರೆಯುವುದು, ಗ್ರಾಮದ ಸ್ವಚ್ಛತೆ ಹಾಗೂ ವೈದ್ಯಕೀಯ ಸಹಾಯದ ಕೆಲಸಗಳಲ್ಲಿ ಶಿಷ್ಟರ ನೆರವನ್ನೂ ಪಡೆಯುತ್ತದ್ದು.

(೩) ಬಟ್ಟೆಗಳನ್ನು ತಪಾಸಿ ನಡೆಸುವುದು. ಅಸ್ಪೀಲುಗಳನ್ನು ತಪಾಸಿ ಮಾಡುವ ಸಲುವಾಗಿ ಜಿಲ್ಲಾ ನ್ಯಾಯಾಧೀಶರು ಕೋರ್ಟು ಹಳ್ಳಿಗಳ ಪ್ರವೇಸವಿಟ್ಟುಕೊಳ್ಳಕ್ಕದ್ದು. ಇದರಿಂದ ಹಳ್ಳಿಗರಿಗೆ ಹಣದ ಹಾಗೂ ವೇಳೆಯ ಉಳಿತಾಯವಾದಂತಾಗುವುದು.

(೪) ಒಕ್ಕಲತನದ ಏಳಿಗೆ: ಬೆಳೆಗಳ ಯೋಜನೆ ಮಾಡುವುದು, ಬೀಜ ಗೊಬ್ಬರಗಳನ್ನು ಪೂರೈಸುವುದು.

(೫) ಸೈಗಾರಿಕೆಗಳನ್ನು ಸುರು ಮಾಡುವುದು, ಹಾಗೂ ಗ್ರಾಮದ ಕೆರೆ ಕಾಲುವೆಗಳ ನೀರಾವರಿ ವ್ಯವಸ್ಥೆ ನೋಡಿಕೊಳ್ಳುವುದು ಮತ್ತು ಒಳ್ಳೆಯ ಮಾದರಿಯ ಮನೆಗಳನ್ನು ರಚಿಸಿಕೊಳ್ಳುವಂತೆ ಏರ್ಪಾಡು ಮಾಡಿಸುವುದು.

(೬) ಈ ಕೆಳಗಿನಂತೆ, ಸಹಕಾರಿ ಸಂಘಗಳನ್ನು ಏರ್ಪಡಿಸಿ ಕೊಡುವುದು:—

(ಅ) ಸಾಲ ಒದಗಿಸುವ ಸ. ಸಂಘ. (ಬ) ಟ್ರಾಕ್ಟರ್ ಒದಗಿಸುವ ಸಂಘ. (ಕ) ಪಡಹೂವಿ ಸಾಗುವಳಿ ಸಂಘ (ಡ) ಮನೆ ಕಟ್ಟುವ ಸಂಘ (ಇ) ನೇಕಾರರ ಕೈಮಗ್ಗಗಳ ಸಂಘ (ಈ) ಕೊಳ್ಳು ಮಾರುವ ಸಂಘ (ಗ) ಕೋಳಿ ಸಾಕುವ ಸಂಘ (ಘ) ಜನಾವರ ಸಂಗೋಪನ ಸಂಘ (ಪ) ಕುರಿ ಸಾಕುವ ಸಂಘ (ಛ) ಕಾಯಿ ಪಲ್ಲೆ ಹಾಗೂ ಹಣ್ಣು ಹಂಪಲ ಸಹಕಾರಿ ತೋಟಗಳ ಸಂಘ (ಮ) ಹಾಲು ಮಾರುವ ಸಂಘ (ಯ) ಗೊಬ್ಬರ ತಯಾರಿಸಿ ಕೊಡುವ ಸಂಘ.

(೭) ಗ್ರಾಮ ಪಂಚಾಯತಗಳಿಗೆ ತಮ್ಮ ಅಧಿಕಾರ ಕ್ಷೇತ್ರದೊಳಗಿನ ಎಲ್ಲ ಭೂಮಿಯ ಮೇಲೂ ಒಡೆತನವಿರತಕ್ಕದ್ದು. ಅಡವಿ, ಪಡಭೂಮಿ, ಹುಲ್ಲುಗಾವಲು ಇತ್ಯಾದಿ ಭೂಮಿಗಳ ಒಡೆತನವು ಪಂಚಾಯತಕ್ಕೆ ಸೇರಿದ್ದಾಗಿರಬೇಕು, ಇವುಗಳಿಂದ ಬರುವ ಉತ್ಪನ್ನವು ಪಂಚಾಯತದ ಬೊಕ್ಕಸಕ್ಕೆ ಸೇರತಕ್ಕದ್ದು.

(೮) ಸರ್ವರಿಗೂ ಉದ್ಯೋಗ,—ದೊರೆಕಿಸಿ ಕೊಡುವ ವ್ಯವಸ್ಥೆ ಮಾಡುವುದು, ಈ ಕಾರ್ಯದಲ್ಲಿ ಜಿಲ್ಲಾ ಮತ್ತು ಪ್ರಾಂತಿಕ ಸರಕಾರಗಳು ಸಹಾಯ ನೀಡಬೇಕು.

(೯) ರಸ್ತೆ ದೀಪ ಹಾಗೂ ನೀರಾವರಿ ಯಂತ್ರಗಳ ಸಲುವಾಗಿ ವಿದ್ಯುತ್ಶಕ್ತಿಯನ್ನು ಏರ್ಪಾಟು ಮಾಡುವುದು.

(೧೦) ಪ್ರಯಾಣಕ್ಕೂ ಮಾಲುಗಳ ಸಾಗಾಟಕ್ಕೂ ಮೋಟಾರ್ ವಾಹನ ಸೌಕರ್ಯ ಒದಗಿಸುವುದು.

(೧೧) ಮತ್ತು ಗ್ರಾಮಸ್ಥರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ಹಾಗೂ ಸ್ವಾವಲಂಬಿಗಳಾಗಿ ಮಾಡುವ ಬಗ್ಗೆ ಅವಶ್ಯಕವೆನಿಸುವ ಇತರ ಕಾರ್ಯಗಳನ್ನೂ ನಿರ್ವಹಿಸುವುದು.

ಪಂಚಾಯತದ ಹಣಕಾಸು

ಈ ಮೇಲಣ ಕಾರ್ಯಗಳನ್ನು ನಡೆಸಲನುಕೂಲವಾಗುವಂತೆ (೧) ಗ್ರಾಮದ ಜಮೀನಿನ ಕಂದಾಯದ ಹಣವನ್ನೆಲ್ಲ ಗ್ರಾಮ ಪಂಚಾಯತಕ್ಕೆ ಬಿಟ್ಟು ಕೊಡತಕ್ಕದ್ದು. (೨) ನೀರಾವರಿ ಕೆರೆ-ಬಾವಿಗಳ ಕರ. (೩) ತಕ್ಕ ಪಟ್ಟಿಯೊಳಗಿನ ಅಡವಿ, ಗೋಚರ ಜಮೀನಗಳ ಉತ್ಪನ್ನ (೪) ಮನೆ ಪಟ್ಟಿ ಕರ (೫) ಪಂಚಾಯತಕ್ಕೆ ಕೊಡಬೇಕು. ಉತ್ಪನ್ನವನ್ನು ಹೆಚ್ಚಿಸಿಕೊಳ್ಳುವಂತೆ ಕೈಗಾರಿಕೆಗಳನ್ನು ಸ್ಥಾಪಿಸಿ ಕೊಡಬೇಕು

(೬) ಟ್ರಾಕ್ಟರ್ ಜೋಡಿಸುವುದು, ಬಸ್ ಸರ್ವಿಸ್ ಇಡುವುದು, ವಿದ್ಯುತ್ ಒದಗಿಸುವುದು. (೭) ಸಹಕಾರಿ ಒಕ್ಕಲತನ ಕೇಂದ್ರ ಸ್ಥಾಪಿಸಿ ಉತ್ಪನ್ನ ಮಾಡಿಕೊಳ್ಳುವುದು. ಹಾಗೂ ಪಡಭೂಮಿ ಸಾಗು ಮಾಡಿಸಿ ಉತ್ಪನ್ನ ಪಡೆಯುವುದು.

(೮) ಸಹಕಾರಿ ತತ್ವದ ಕೊಳ್ಳುವ ಮಾರಾಟ ಮಾಡುವ ಸಂಘದಿಂದ ಉತ್ಪನ್ನಗಳಿಸುವುದು.

(೯) ತಗಾವಿಯ ಬಗ್ಗೆ ತೆಗೆದಿಡುವ ಪ್ರಾಂತಿಕ ಸರಕಾರದ ಹಣವನ್ನೆಲ್ಲ ಗ್ರಾಮ ಪಂಚಾಯತಗಳಿಗೆ ಕೊಡುವುದು.

(೧೦) ನೀರಾವರಿ, ವಿದ್ಯುದುತ್ಪಾದನೆ, ಬಸ್ ಸಾರಿಗೆಗಳ ಬಗ್ಗೆ ಗ್ರಾಮಸ್ಥರಿಂದ ಸಾಲವೆತ್ತಿ ಭಂಡವಳ ಪಡೆಯುವುದು.

ಗ್ರಾಮಸ್ಥರೆಲ್ಲರಿಗೂ ಉದ್ಯೋಗ ಒದಗಿಸಿ ಕೊಡುವುದರಿಂದ ಗ್ರಾಮದ ಒಟ್ಟು ಉತ್ಪನ್ನವು ಹೆಚ್ಚುವುದು. ಪ್ರಾಂತಿಕ ಸರಕಾರವು ಎತ್ತುವ ಕರಗಳ ಒಟ್ಟು ಉತ್ಪನ್ನದ ಕನಿಷ್ಟ ಅರ್ಧಾಂಶದಷ್ಟನ್ನು ಗ್ರಾಮ ಪಂಚಾಯತಗಳಿಗೆ ಕೊಡುವುದು.

ಆರ್ಥಿಕ ಸಮಾನತೆ

ಗ್ರಾಮ ಪಂಚಾಯತಗಳು ಸರಿಯಾಗಿ ನಡೆಯಬೇಕಾದರೆ, ಗ್ರಾಮದಲ್ಲಿರುವ ಸಾಗು ಜಮೀನುಗಳನ್ನು ಎಲ್ಲರಿಗೂ ಸಮ ಪಾಲಾಗಿ ಹಂಚಿ ಹಾಕಿ ಕೊಡುವುದು ಅತ್ಯಗತ್ಯ. ಎಲ್ಲರೂ ಒಂದೇ ಸ್ಥಾನಮಾನದರ್ಜೆಯವರಾಗಿ ಕಾರ್ಯ ಪ್ರಾರಂಭಿಸಿದರೆ, ಕ್ಷೋಭೆಯೆಂಬ ನಿಂತಂತಾಗುವುದು ಹಾಗೂ ಪರಸ್ಪರ ಕಚ್ಚಾಟಗಳಿಗೆ ಅಸ್ಪದ ದೊರೆಯದಂತಾಗುವುದು. ಮತ್ತು, ಜನರ ವೇಳೆಯೂ ಶಕ್ತಿಯೂ ನಿಸರ್ಗದ ಸುಪ್ತ ಸಂಪತ್ತನ್ನು ಪಡೆಯುವುದಕ್ಕೆ ತೊಡಗಿಸಲ್ಪಟ್ಟಂತಾಗುವುದು. ಇದರಿಂದ ಗ್ರಾಮಸ್ಥರ ಸಾಂಪತ್ತಿಕ ಹಾಗೂ ಸಾಮಾಜಿಕ ಪರಿಸ್ಥಿತಿಯು ಉತ್ತಮಗೊಳ್ಳುವುದು. ಹೀಗೆ ಪ್ರತಿಯೊಂದು ಗ್ರಾಮವೂ ಆರ್ಥಿಕವಾಗಿ ಪೂರ್ಣ ಸ್ವಾವಲಂಬಿಯಾದಲ್ಲಿ, ಮಹಾತ್ಮಾಜಿಯವರು ಸಾರಿದ್ದಂತೆ, ಪ್ರತಿಯೊಂದು ಹಳ್ಳಿಯೂ ಒಂದು ಸ್ವರ್ಗವಾಗುವುದು.

ಹೊಲ್ತಿಕೋಟೆಯು ಹೊನ್ನಿನ ಕೋಟೆಯಾಗಿದೆ

ಲೇಖಕರು:- ಶ್ರೀ. ನರಸಿಂಹ ದಾಬಡೆ, ಸರ್ವೋದಯ ಸಂಚಾಲಕ

ಇಂದಿಗೆ ಸುಮಾರು ೨ ವರ್ಷಗಳ ಹಿಂದೆ ಈ ಹೊಲ್ತಿಕೋಟೆ ಗ್ರಾಮವನ್ನು ನಾನು ನೋಡಲು ಬಂದದ್ದು ಧಾರವಾಡ–ಹಲ್ಯಾಳ ರಾಜಮಾರ್ಗದಲ್ಲಿ ಹದಿಮೂರು ಮೈಲುಗಳ ಮೇಲೆ ಬಸ್ಸು ಇಳಿದು ಸುತ್ತಲೂ ನೋಡಿದೆ. ನಿಬಿಡವಾದ ಅರಣ್ಯ. ಇಲ್ಲಿ ಹಿಂದೆಯೆಂದಾದರೂ ಊರು ಇದ್ದಿರಬಹುದೇ? ಯಂಬ ಸಂದೇಹವು ನನಗುಂಟಾಯಿತು. ಒಂದು ಮೈಲು ಹೋಗುತ್ತಲೇ ಅಲ್ಲಿ ಮೂರು ಗುಡಿಸಲುಗಳನ್ನು ಕಂಡೆ. ಅವು ಗವಳಿಗರವು. ಅ ಸ್ಥಳವನ್ನು ಬಿಟ್ಟರೆ ಸುತ್ತಲೂ ನಿರ್ಜನವಾದ ಅತ್ಯಂತ ಭಯಾನಕ ಅಡವಿ ಎತ್ತ ನೋಡಿದರೂ ವನಶ್ರೀಯು ತಾನೇ ತಾನಾಗಿ ಹಬ್ಬಿಕೊಂಡಿದ್ದಾಳೆ, ತನ್ನ ಒಡಲಲ್ಲಿ ಅದೆಷ್ಟೋ ಬೆಲೆಯುಳ್ಳ ವಸ್ತುಗಳನ್ನೂ ಹಿಂಸ್ರ ಪಶುಗಳನ್ನೂ ಇಟ್ಟುಕೊಂಡು ಹೊರಗಿನಿಂದ ನೋಡಲು ಸೊಬಗನ್ನು ಬೀರುತ್ತಲಿದ್ದಳು. ಗೋಪಾಲಕರ ಸುಖದುಃಖಗಳನ್ನು ಕೇಳಿದೆ. ಒಂದೆ ತಿಂಗಳಲ್ಲಿ ಹತ್ತು ದನಗಳನ್ನು ಮುರಿದು ತಿಂದ ಕರುಣಾಜನಕ ಕತೆಯನ್ನು ಹೇಳಿದರು. ಅಲ್ಲಿ ನಿಂತು ನೋಡಿದರೆ ಅಲ್ಲಿಗೇ ಜಗತ್ತು ಮುಗಿದಂತೆ ಕಾಣುತ್ತಿತ್ತು. ಮುಂದೆ ಕಾಲುದಾರಿಯೂ ಇಲ್ಲ. ಮನುಷ್ಯನ ಎತ್ತರ ಕಡ್ಡಿ, ಕಂಟಿ ಬೆಳೆದಿವೆ. ಆದರ ಒಡಲಲ್ಲಿ ಹಾವುಗಳಿರುವವೆಂದು ಹೇಳಿದರು. ಅದರಲ್ಲಿಯೇ ಮಾರ್ಗವನ್ನು ಮಾಡುತ್ತ ನಡೆದೆವು. ಅ ಸ್ಥಳವು ಒಂದಾನೊಂದು ಕಾಲಕ್ಕೆ ಸಾಗು ಇದ್ದ ಭೂಮಿಯು. ಅಲ್ಲಿಯೂ ಸಾಕಷ್ಟು ಗಿಡಗಳು ಬೆಳೆದಿದ್ದವು. ಅದೊಂದು ಕಾಯ್ದಿಟ್ಟ ಅಡವಿಯೆಂದು ನನಗೆ ಹೇಳಿದ್ದರೆ ನಾನು ಸುಲಭವಾಗಿ ನಂಬಬಹುದಾಗಿತ್ತು. ಇನ್ನು ಮೊದಲಿದ್ದ ಊರ ಜಾಗೆಗೆ ಬಂದೆ. ಅಲ್ಲಿ ಗಿಡ ಗಂಟಿಗಳ ನುಗ್ಗಿದಲ್ಲಿ ಎರಡು ಅತ್ಯಂತ ಜೀರ್ಣವಾದ ಗುಡಿಸಲನ್ನು ಕಂಡೆನು. ಐತಿಹಾಸಿಕ ಸಂಶೋಧಕನಂತೆ ಅಲೆದಾಡಿದರೆ ಅಲ್ಲೊಂದು ಗೋಡೆ; ಇಲ್ಲೊಂದು ಕಡೆಗೆ ಕಜ್ಜಿಕಲ್ಲು ಮಗದೊಂದು ಕಡೆಗೆ ಒಣಿಯ ಮಾರ್ಗ ಇವು ಕಣ್ಣಿಗೆ ಬಿದ್ದವು. ಸುತ್ತಲಿನ ಭೀಕರ ದೃಶ್ಯವು ಇದೆಂದಾದರೂ ಊರ ಜಾಗೆಯಿರಬಹುದೇ? ಎಂದು ನನ್ನನ್ನೇ ಪ್ರಶ್ನೆಶಿದವು. ಇಂಥ ಊರು ತುಂಬಿ ಅಲ್ಲಿಯ ಭೂಮಿಯು ಸಾಗಾಗಬಹುದೆಂದು ಆಗ್ಗೆ ನಾನು ಯಾರಿಗಾದರೂ ಹೇಳಿದ್ದರೆ ಬಹುಶಃ ಅವರು ನನಗೆ ಹುಚ್ಚನೆಂದೇ ಕರೆಯಬಹುದಿತ್ತು. ರೋಗಗಳಿಗಂತೂ ಅದೊಂದು ತವರುಮನೆಯೆಂದು ಕೇಳಿದೆ.

ಅಂಥ ಇಂಥ ಪರಿಸ್ಥಿತಿಯಲ್ಲಿಯೇ ನಾವು ಆ ದಯಾಘನನಾದ ಪರಮಾತ್ಮನನ್ನು ಸ್ಮರಿಸಿ ಹೋದ ವರ್ಷ ಎಪ್ರೀಲ ತಿಂಗಳಲ್ಲಿ ಕಾರ್ಯಾರಂಭ ಮಾಡಿದೆವು. ಈ ಕಾರ್ಯಕ್ಕೆ ನನಗೆ ವಿಶ್ವಾಸ ಕೊಟ್ಟವರು ಈ ಊರ ಮೂಲ ರೈತರು ಅತ್ಯಂತ ಕಷ್ಟ ಪಟ್ಟು ದುಡಿಯುವ ರೈತರು ದೊರಕಿದ್ದೇ ನಮ್ಮ ಮೂಲ ಬಂಡವಳವೆಂದು ಹೇಳಬಹುದು. ಹೊಲಕ್ಕೀಕೋಟೆಯನ್ನು ಹೊನ್ನಿನ ಕೋಟೆಯನ್ನಾಗಿ ಮಾಡಬೇಕೆಂಬ ಅವಲವಿಕೆಯು ಅನರಮಿಖದಲ್ಲಿ ಮಿನುಗುತ್ತಲಿತ್ತು, ಅವರು ಈ ಕಾರ್ಯಕ್ಕೆ ಬದ್ಧಕಂಕಣರಾದರು. ನಾವು ನಡೆಸಿದ ಪ್ರಯತ್ನವು ಯಶಸ್ವಿಯಾಗಿ ಇತ್ತ ಸರಕಾರದವರು ಈ ಯೋಜನೆಗೆ ಒಂದು ಲಕ್ಷೆಏಳು ಸಾವಿರ ರೂಪಾಯಿಗಳ ಸಾಲವನ್ನು ಮಂಜೂರು ಮಾಡಿದರು. ಇಲ್ಲಿಯ ಕಾರ್ಯಾರಂಭದ ಅಡಿಗಲ್ಲು ಭದ್ರವಾಗಿದೆಯೆಂದು ಅತ್ಯಂತ ಧೈರ್ಯದಿಂದ ಹೇಳಬಲ್ಲೆ.

ಇದೊಂದು ಆದರ್ಶಗ್ರಾಮವಾಗಿ ಸುಂದರ ವಸಾಹತು ನಿರ್ಮಾಣವಾಗುವ ದೃಶ್ಯವು ನನ್ನ ಕಣ್ಣು ಮುಂದೆ ಇದೆ. ಸರಕಾರದ ಯೋಜನೆಯಂತೆ ಸಾಲ ತೆಗೆದುಕೊಂಡ ರೈತರು ೧೫ ವರ್ಷಗಳಲ್ಲಿ ಋಣ ಮುಕ್ತರಾಗಬೇಕೆಂದಿದೆ. ಆದರೆ ಈ ಕಾರ್ಯವು ಅದಕ್ಕೂ ಪೂರ್ವದಲ್ಲಿಯೇ ಮಾಡಬಹುದೆಂಬ ಆತ್ಮ ವಿಶ್ವಾಸವು ಅಲ್ಲಿಯ ರೈತರಲ್ಲಿಯೂ ನನ್ನಲ್ಲಿಯೂ ಇದೆ. ಅಲ್ಲಿ ಯಶಸ್ವಿಯಾದ ನೀರಾವರಿ ಯೋಜನೆಯಾದರೆ ಮಾತ್ರ ಈ ಕಾರ್ಯ ಬೇಗನೇ ಆಗಬಲ್ಲದು. ೨-೪ನೆದಿಂದ ಎರಡು ಕೆರೆಗಳಿವೆ, ಪಳ್ಳವಿದೆ, ಒಡ್ಡು ಹಾಕಲು ಅಸ್ಪದವಿದೆ. ಸರ್ವತೋಮುಖ ಅಭಿವೃದ್ಧಿ ಮಾಡುವ ಇಂಥ ಸ್ಥಳಗಳಿಗೆ ಪ್ರಥಮದಲ್ಲಿ ಪ್ರಥಮ ಪ್ರಾತಸ್ಮರ್ಯವನ್ನಿತ್ತು ಸಮಗ್ರ ಜೀವನವು ಸ್ಥಿರವಾಗುವಂತೆ ಮಾಡಬೇಕು. ಈ ಯೋಜನೆಯ ಕಾರ್ಯದಲ್ಲಿ ನೆರವಾದವರಿಗೆಲ್ಲ ನಾನು ಎಷ್ಟೆಂದು ಧನ್ಯವಾದಗಳನ್ನು ಅರ್ಪಿಸಲಿ!! ಕಾರ್ಯವು ಇನ್ನೂ ಮುಗಿದಿಲ್ಲ. ಒಂದು ವಿಧವಾಗಿ ಈಗ ಪ್ರಾರಂಭವಾಗಿದೆಯೆನ್ನಬಹುದು. ಮೊದಲಿನಕ್ಕಿಂತಲೂ ಹೆಚ್ಚಾಗಿ ರೈತರು ದುಡಿಯಬೇಕು. ಕಾರ್ಯಕರ್ತರು ಪರಿಶ್ರಮ ಪಡಬೇಕು. ಸಮ್ಮಂಧಪಟ್ಟವರೆಲ್ಲರೂ ತೀವ್ರ ಗತಿಯಿಂದ ನೆರವಾಗಬೇಕು, ನೀರಾವರಿ ಯೋಜನೆಯು ಬೇಗನೇ ಸಿದ್ಧವಾಗಬೇಕು. ಆಂದರೆ ಮಾತ್ರ ನಮ್ಮ ಸುಖ ಸ್ವಪ್ನವು ಸತ್ಯ ಸೃಷ್ಟಿಗೆ ಬರುವುದು. ಹೊಲ್ತಿಕೋಟೆಯು ಹೊನ್ನಿನ ಕೋಟೆಯಾಗುವದು. ಕಷ್ಟ ಪಟ್ಟು ದುಡಿಯುವ ರೈತರ ಕಡಿದು ಹಸನ ಮಾಡಿ ಭೂಮಿಯನ್ನು ಬೆಳೆಗಳಿಂದ ಕುಲುಕುಲು ನಗುವಂತೆ ಮಾಡಿದ ಆ ಒಕ್ಕಲಿಗನಿಗೆ ನನ್ನ ಅತ್ಯಂತ ಪ್ರಣಾಮಗಳು.

ಸರಕಾರದಿಂದ ಜಮೆಯಾದ ಹಣ ೬೬೦೦
ಜನಸಂಖ್ಯೆ ೧೫೬
ಇಲ್ಲಿಯ ವರೆಗೆ ರೈತರಿಗೆ ಕೊಟ್ಟ ಸಾಲ ೪೭೫೦೦
ಒಟ್ಟು ದನಗಳು ೪೮೫
ಈ ವರ್ಷ ಬರಬಹುದಾದ ಬೆಳೆಯ ಅಂದಾಜು ಬೆಲೆ ೫೪೦೦೦
ಗುಡಿಸಲುಗಳು ೩೬
ಸಾಗಾದ ಕ್ಷೇತ್ರ, ೨೫೦೦ ಎಕರೆ

ಮೋಪಾಸನ ಓಲೆಗಳು

ಸಾಹಿತ್ಯ ಗುರುವಿನ ಸಾನ್ನಿಧ್ಯದಲ್ಲಿ

ಲೇಖಕರು :
ಶ್ರೀ ಪಿ. ವೆಂಕೋಬಾಚಾರ್ಯ ಬಿ. ಎ, ಬಿ. ಟಿ.

ಓಲೆ ನಂ ೧೩

(ತನ್ನೊಬ್ಬ ಮಿತ್ರನಿಗೆ ಮೊಪಾಸಾನು ಕೀರ್ತಿಯ ಶಿಖರದಲ್ಲಿರ ವಾಗ ಬರೆದ ಪತ್ರದ ಕೆಲವಂಶ ಇದು:-)

"ನನ್ನ ಕೆಲಸ ಕೇವಲ ಒರೆಯುವು ದಕ್ಕೆಂದು ನನಗೆನಿಸಿದೆ ನಾನು ಜನ್ಮ ತಾಳಿದುದು ಇದೇ ಕಾರಣವೆಂದು ಹೇಳ ಬಹುದು ನನಗಿರುವ ಶ್ರದ್ಧೆ, ಕಾರ್ಯ ನಿಷ್ಠತೆ, ಕಾರ್ಯದಲ್ಲಿ ಕಂಡು ಬರುವ ಶಿಸ್ತು ಇವುಗಳೆಲ್ಲವನ್ನು ನೋಡಿದರೆ ನಾನು ಓರ್ವ ಚಿತ್ರಕಾರನಾಗಿಯೋ ಇಲ್ಲವೆ, ಸಾಹಿತಿಯಾಗಿಯೋ ಕೀರ್ತಿ ಗಳಿಸಲೆಂದೆ. ಲಿಕ್ಖತಪಾಷಣಿ ನನಗೆ ಸೇರದ ಕೆಲಸ—ನಾನು ಜನ್ಮತಾಳ ದಂತಿದೆ. ಕಚೇರಿಯಲ್ಲಿ ಕೆಲಸಮಾಡು ವಾಗ ನಿಸರ್ಗದಾವ ಯೋಚನೆಯೂ ಇರ ಲಿಲ್ಲ. ನನ್ನ ಊಹಾ ಶಕ್ತಿಯೇ ಕುಗ್ಗಿ ಹೋಗುತ್ತಿತ್ತು. ನನಗೆ ಬರೆಯುವು ದೆಂದರೆ ಒಂದು ಹುಮ್ಮಸ್ಸಿನ ಕೆಲಸ. ನನಗೆ ಮನಸ್ವಾತಂತ್ರ್ಯ ಸಿಕ್ಕಂತೆ ಯೇ ಬರೆಯುತ್ತ ಕುಳಿತರೆ ನನಗೆ ಯಾವ ತೊಂದರೆಯೂ ಎನಿಸುವುದಿಲ್ಲ. ನನ್ನ ಮನಸ್ಸಿನಲ್ಲಿ ನಡೆಯುವ, ಉದ್ಭವಿ ಸುವ ಎಲ್ಲ ಯೋಚನೆಗಳನ್ನು ತಿಳಿಸಲು ಬರಹದಲ್ಲಿಯೇ ಕಛೇರಿಯ ನಾಲ್ಕು ಗೋಡೆಗಳ ಇರುಕಿನಲ್ಲಿ ನಿಂತು ಬರೆಯು ವುದೆಂದರೆ ಬಲು ಬೇಸರ. ತಿಳಿಯಾದ ಹವೆಯಲ್ಲಿ ಸೂರ್ಯನ ಪೂರ್ಣಪ್ರಕಾಶ ದಲ್ಲಿದ್ದು ಹರಿದಾಡುವುದೆಂದರೆ ನನಗೆ ಪರಮ ಸಂತೋಷ. ಇಂತಹ ಇಕ್ಕಟ್ಟು ನಿಂದ ಪಾರಾಗುವುದೆಂದರೆ ಬರವಣಿಗೆ ಯೊಂದೇ ನನ್ನ ಲೇಖನಿಯೇ. ನನಗೆ ಮಾನಸಿಕ ಸುಖವನು ತಂದೊಡ್ಡಿತು. ಆ ಕೆಲಸದಲ್ಲಿ ನನಗೆ ದೊರೆತ ಆನಂದವೇ ನನ್ನನ್ನು ಬರವಣಿಗೆಗೆ ಪ್ರೇರೇಪಿಸಿತು."

—ಗಾಯ-

ಓಲೆ ನಂ. ೧೪

(ಗಾಯ-ಡ-ಮೋಪಾಸಾನು ತನ್ನ ಸಾಹಿ ತ್ಯ ರೀತಿನೀತಿಗಳಬಗ್ಗೆ ಮಿತ್ರನೋರ್ವನಿಗೆ ಬರೆದಿರುವ ಪತ್ರ ಇದು:-)

ಪನ್ನ ಸಾಹಿತ್ಯ ಮಿತ್ರನೇ,

ನಾವು ಹೊರಡಿಸಬೇಕೆಂದಿರುವ ಪರಿ ಚಿತ ಪತ್ರಿಕೆಯ ಬಗ್ಗೆ ನನ್ನ ಅಭಿ ಪ್ರಾಯಗಳೇ ಬೇರೆಯಾಗಿವೆ. ಈ ಸಮಯದಲ್ಲಿ ನನ್ನ ಅಭಿಮತವೇನೆಂಬು ದನ್ನು ನಿನಗೆ ಬರೆದು ಬಿಡುವೆನು. ನಿನಗೆ ಈ ನಿಸರ್ಗ ತತ್ವದಲ್ಲಿ ಎಷ್ಟು ವಿಶ್ವಾಸವಿದೆಯೋ ಅಷ್ಟೇ ಅಭಿಮಾನ ವಿಶ್ವ ನಂಬುಗೆ ಯಥಾರ್ಥ ತತ್ವದಲ್ಲಿ ನೂ ಇದೆ. ಈ ಬರೀ ಮಾತುಗಳಲ್ಲಿ ನೂ ಅರ್ಥವಿಲ್ಲ ಆದರೆ ಸಾಹಿತಿ ಳಲ್ಲಿ ಜಗಳಗಳುದ್ಭವಿಸಲು ಮಾತ್ರ ಕಾರಣವಾಗಿವೆ ಸಾಹಿತ್ಯದ ಬಗ್ಗೆ ಹೆಚ್ಚು ಚರ್ಚಿಸುವುದಾಗಲಿ, ಮೂಲ ತತ್ವಗಳ ಬಗ್ಗೆಯ ಚರ್ಚೆ ಕೆಡಿಸಿಕೊಳ್ಳು ವುದಾಗಲಿ ನನಗೆ ಸೇರುವುದಿಲ್ಲ ನಿರ ರ್ಥಕನೆಂದು; ನನ್ನ ಅಭಿಪ್ರಾಯವೇನಿದೆ ಯೆಂಬುವುದನ್ನು ನಿನಗೆ ತಿಳಿಸುವುದ ಕ್ಕೆಂದು ನಮ್ಮ ಒಬ್ಬನಾದ ನಿನಗೆ ಈ ಪತ್ರ ಬರೆದಿರುವೆನು ನಿನ್ನ ದೃಷ್ಟಿ ಕೋನವೇನೆಂಬುವುದನ್ನು ನೀನು ತಿಳಿ ಯುವುದು ಅವಶ್ಯಕವೆಂದು ನನ್ನ ಅಭಿ ಮತ ಇದರಿಂದ ನಿನ್ನನ್ನು ತೋರಿಸಿರುವೆ ನೆಂದಾಗಲಿ, ನಿನ್ನನ್ನು ನನ್ನ ಮತಕ್ಕೆಳೆ ಯುವೆನೆಂದಾಗಲಿ ನೀನು ಭಾವಿಸ ಬಾರದು ನನ್ನ ಈ ಮಾತುಗಳು ನಿನಗೆ ಬರವಾಗಿ ಕಾಣಿಸಬಹುದು ನನ್ನ ಬರವಣಿಗೆಯ ರೀತಿಯೇ ಇದು ಕ್ಷಣಾ ಲಂಕಾರಾದಿಗಳಿಂದ ಮನರಂಜಿಸುವಂತೆ ಊಹೆ ಉತ್ಪ್ರೇಕ್ಷೆಗಳಿಂದ ಆಶ್ಚರ್ಯ ವನ್ನುಂಟುಮಾಡುವಂತೆ ಬರೆಯುವ ರೂಢಿ ನನಗೆ ಹೊಸದು. ಕಂಡದ್ದು ಕಂಡಹಾಗೆ ಬರೆಯುವ ರೀತಿ ಸರ್ವ ಸಾಮಾನ್ಯರೀತಿಯ ನನ್ನ ಶೈಲಿ ನಿನಗೆ ರುಚಿಸದಿರಬಹುದು. ಆದರೆ ನಾನೇನು ಮಾಡಲಿ? ನನಗನಿಸಿದಂತೆ ನನ್ನ ಈ ಕಾಗದ ಬೆಳೆಯುತ್ತಿದೆ. ಈ ಬಗೆಯ ಪತ್ರಕ್ಕೆ ನೀನು ಬೇರೆ ಭಾವಿಸಬೇಡ. ನನ್ನ ಈ ಬರೆಯತನಕ್ಕೆ ನಕ್ಕು ಹಿಯ್ಯಾ ಳಿಸಬೇಡ. ಈ ಕಾಗದವನ್ನು ನೀನು ಹೊರಗಡೆ ಯಾವ ಮಿತ್ರರಿಗೂ ತೋರಿಸ ಬಾರದೆಂದು ನನ್ನ ವಿನಂತಿ ನಮ್ಮ ಮಿತ್ರರಿಗೆ ತಿಳಿದರೆ ತಿಳಿಯಬಹುದು. ನಿನ್ನ ಒತ್ತಾಯವೇನೂ ಇಲ್ಲ ಇದನ್ನು ನಮ್ಮ ಹಿರಿಯರಾದ ಝೋಲಾರವರು ನೋಡಿದರೆ ನೊಂದುಕೊಳ್ಳುವರೇನೋ? ಅವರಲ್ಲಿ ನನಗೆ ಗೌರವವಿದೆ. ವಿಶ್ವಾಸ ವಿದೆ ಅವರ ಲೇಖನ, ಕೃತಿಗಳನ್ನು ಪೂಜ್ಯಭಾವನೆಯಿಂದ ಗೌರವಿಸುತ್ತೇನೆ ಆದರೆ ನನ್ನ ಈ ವಿಲಕ್ಷಣ ಧೋರಣೆ ಯನ್ನವರು ತಿಳಿದು ನೊಂದುಕೊಳ್ಳುವ ರೇನೋ? ಆದರೆ ಮನಸ್ಸಿನ ನಿಜಾಂಶ ವನ್ನು ಮುಚ್ಚಿಡದೆ ತಿಳಿಯಪಡಿಸುವುದು ನಿಜ ಸಾಹಿತಿಯ ಕರ್ತವ್ಯವಲ್ಲದೆ ಮತ್ತೇನು? ಅವರನ್ನು ನಾನೇ ಸಮಕ್ಷ ಮದಲ್ಲಿ ಕಂಡು ಕ್ಷಮೆ ಬೇಡುವೆನು.

ನಾವೆಲ್ಲರೂ, ಜೀವನದಲ್ಲಿ ಯಶಸ್ವಿ ಗಳಾಗಿ ನಿಲ್ಲುವ ಮಾರ್ಗವನ್ನು ಕಂಡು ಕೊಂಡು ಹಿಡಿಯಬೇಕೆಂಬುದು ನಿನಗೆ ತಿಳಿದ ಮಾತು. ನಾವು ಇನ್ನೂ ಕೂಡಿ ಕೆಲಸಮಾಡಿದರೆ ಏನನ್ನೂ ಸಾಧಿಸಲಾ ಕೆವು? ನಾವು ಹೊಸ ಹೊಸ ಯೋಜನೆ ಗಳಲ್ಲಿ ಮನಸ್ಸು ಹಾಕಬೇಕು. ಯುಕ್ತಿ ಯಿಂದ ಕೆಲಸ ನಡೆಸಬೇಕು. ಹಿಂದೆ ಯಾರೂ ಉಪಯೋಗಿಸದ ಹೊಸ ಮಾರ್ಗದತ್ತ ನಾವು-ಹೊರಳಬೇಕು. ಅದರಲ್ಲಿ ನಮ್ಮ ಸ್ವಾರ್ಥ ಇರಬಾರದು. ಇದು ಸ್ವಯಂ ಪ್ರೇರಿತವಾದ ಮಾರ್ಗ ವೆಂದು ಓದುಗರಿಗೆ ತಿಳಿಯಬೇಕು. ಐದಾರು ತಿಂಗಳವರೆಗೆ ಕೆಲವೊಂದು ಪತ್ರಿಕೆಗಳಲ್ಲಿ ನಮ್ಮ ಬಗ್ಗೆ ಲೇಖನಗಳು ನಮ್ಮ ಕೃತಿಗಳ ಬಗ್ಗೆ ಚರ್ಚೆಗಳೂ ನಮ್ಮ ಕಾರ್ಯಧ್ಯೇಯದ ಬಗ್ಗೆ ವಿಚಾರ ಪರಿಪ್ಲುತ ರಜನೆಗಳು ಕೆಲವು ವಿನೋದ ಪರ ತೆಯ ಟೀಕೆಗಳೂ ಒಂದೇ ಸನನೇ ಬರಬೇಕು ಹೀಗೆ ಮಾಡಿದಲ್ಲಿ ಜನರ ದೃಷ್ಟಿ ನಮ್ಮ ಚಟುವಟಿಕೆಗಳ ಕಡೆ ಹೊರಳುವದು. ನಮ್ಮ ಇರುವಿಕೆ ಆವರಿಗೆ ಆಗ ತಿಳಿಯುವುದು. ಎಂದು ಈ ಕಾರ್ಯದಲ್ಲಿ ನಾವು ಸಮರ್ಥರಾಗು ವೆವೋ ಅಂದೇ ನಮ್ಮ ಕೀರ್ತಿ ಬೆಳೆಯು ತೆಂದು ತಿಳಿಯ ಬಹುದು. ಇದರಿಂದ ಆ ಪತ್ರಿಕೆಯಲ್ಲಿ ನಮ್ಮೆಲ್ಲರಿಗೆ ಹೆಚ್ಚಿನ ಸ್ಥಾನ ದೊರೆಯುವುದು ಜನರ ಬೇಡಿ ಕೆಗೆ ಮನ್ನಣೆಕೊಟ್ಟು ಪತ್ರಿಕಾಕರ್ತರು ನಮ್ಮನ್ನು ಗೌರವಿಸುವರು ಆಗ ನಿಜ ವಾದ ಸಾಹಿತಿಗೂ ಪತ್ರಿಕೋದ್ಯಮಿಗೂ ಇರುವ ನಿಕಟ ಬಂಧುತ್ವ ತಿಳಿದು ಬರು ವುದು.

ಇದು ನಿನಗೆ ಸಮ್ಮತವೇ?

ನಿನ್ನವನೇ
ಗಾಯ್

ಸಿನೇಮಾ ಸುದ್ದಿ

"ಪಂಜಾಬ ಅತ್ಯಾಚಾರ"ದ ಚಲಚ್ಚಿತ್ರ ನಿರ್ಮಾಣ

"ಜುಪಿಟರ್" ದವರ "ರಾಣಾ" ಎಂಬ ಚಿತ್ರ ಪಟವು ಸೈನಿಕರ ನೀತಿ ಕೆಡಿಸುವುದಾಗಿದೆ ಎಂದು ಸಾರಿ, ಅದನ್ನು ಸಿನೇಮಾ ಥಿಯೇಟರ್‌ಗಳಲ್ಲಿ ಪ್ರದರ್ಶಿಸ ಕೂಡದೆಂದು ಜಬ್ಬಲ್ಪುರದ "ಸೌತ್‌ಕ ಮಾಂಡ್" ಮಿಲಿಟರಿ ಅಧಿಕಾರಿಗಳು ಆಜ್ಞೆಹೊರಡಿಸುವಂತೆ ಮಾಡಿದ್ದಾರೆ.

ಈ ಆಜ್ಞೆಯನ್ನು ನೋಡಲು ಕೆಲವು ಸೈನಿಕರು ಥೇಟರಿಗೆ ಹೋಗಿ ಚಿತ್ರ ನೋಡುತ್ತಿದ್ದರು ಮಧ್ಯಂತರ ಶಾಂತಿ ಯ ವೇಳೆಯಲ್ಲಿ ಅವರು ಹೊರಗೆ ಬರು ತ್ತಲೇ ಪೋಲೀಸರು ಅವರನ್ನು ಪುನಃ ಒಳಗೆ ಹೋಗಗೊಡಲಿಲ್ಲ

—

"ಜಾಲಿಯನ್‌ವಾಲಾ"

ಗರ್ಗರಲ್ಲಿ "ಜಾಲಿಯನ್‌ವಾಲಾ" ಬಾಗ್‌ದಲ್ಲಿ ಪಂಜಾಬಿನ ಸೇನಾಧಿಕಾರಿ ಜನರಲ್ ಡಾಯರನು ಸೈನ್ಯ ಸಹಿತ ವಾಗಿ ನಿರಾಯುಧ ಹಿಂದೀಯರ ಮೇಲೆ ನಡೆಸಿದ ಭೀಕರ ಹತ್ಯಾಕಾಂಡ ಹಾಗೂ ಆ ಮೇಲೆ ಜಾರಿಗೆ ತರಲ್ಪಟ್ಟ ದಂಡನ ಆಳಿಕೆಯನ್ನು ಚಿತ್ರಿಸುವ ಚಲಚ್ಚಿತ್ರ ತಯಾರಿಸಲು ಮುಂಬಯಿಯ "ಫೇಮಸ್ ಪಿಕ್ಚರ್ಸ್" ದವರು ವಿಶಾಲು ಮಾಡುತ್ತಿರುವರು. ಶ್ರೀಯುತ ಆರ್ ಎಸ್ ಚೌಧುರಿಯವರು ಇದರ ಕತೆ ಬರೆದಿದ್ದಾ ರೆ. ಶ್ರೀಯುತ ಕರನ್‌ದಿವಾನ್ ಅಚಲಾ ಸಹದೇವ, ಡೇವಿಡ್, ಜಗದೀಶ ಸೇತಿ, ಕಮಲೇಶಕುಮಾರಿ, ರೂಪಮಾಲಾ ಇವರು ಇದರಲ್ಲಿ ಮುಖ್ಯ ಪಾತ್ರ ವಹಿಸಿ ತ್ತಾರೆ.

ಂ ಂ ಂ ಂ

"ಕೆಂಪರಾಜ" ಚಿತ್ರಪಟ ನಿರ್ಮಾಪ ಕರು ಫ್ರೆಂಚ್ ಕಾದಂಬರಿಕಾರ ಅಲೆ ಕ್ಸಾಂಡರ್ ಡ್ಯೂಮಾನ "ಕೌಂಟ್ ಆಫ್ ಮಾಂಟೆ ಕ್ರಿಸ್ಟೊ" ಎಂಬ ಅದ್ಭು ತರಮ್ಯ ಕಾದಂಬರಿಯ ಕತೆಯನ್ನು ರಜತ ಪರದೆಯ ಮೇಲೆ ತರಲು ಏರ್ಪಾ ಡು ಮಾಡಿದಾರೆ. ಇದನ್ನು "ಜಲ ದುರ್ಗ" ಎಂಬ ಹೆಸರಿಂದ ಕನ್ನಡದಲ್ಲಿ ಯೂ, "ಕರ್ಕೋಟೈ" ಎಂಬ ಹೆಸರಿಂದ ತಮಿಳಿನಲ್ಲಿಯೂ ತಯಾರಿಸಲಾಗುವುದು ಮದ್ರಾಸಿನ ಬಳಿಯ ಗಿಂಡಿಯಲ್ಲಿರುವ "ನರಸು ಸ್ಟುಡಿಯೋ" ದಲ್ಲಿ ಇದರ ಕಾರ್ಯ ಆರಂಭವಾಗಿದೆ. ಶ್ರೀ ಕೆಂಪ ರಾಜ್‌ರೇ ಇದರ ನಿರ್ದೇಶಕರು.

ಂ ಂ ಂ ಂ

ಗತಜನೇ ಸಾಲಿನ ಜನವರಿ, ಫೆಬ್ರುವರಿ, ಮಾರ್ಚ್‌ತಿಂಗಳಲ್ಲಿ ಇಂಗ್ಲೆಂಡಿನ ಚಲಚ್ಚಿತ್ರ ಪ್ರೇಕ್ಷಕರು ಸಿನೇಮಾ ನೋಡುವ ಸಲುವಾಗಿ ೨ ಕೋಟಿ ೯೨ ಲಕ್ಷ ಪೌಂಡ್ (೪೦ ಕೋಟಿ ರೂಪಾಯಿಗೆ) ವೆಚ್ಚಮಾಡಿದರೆಂದು ಬ್ರಿಟಿಷ್ ಸರಕಾರದ "ಅಂಕೆ ಸಂಖ್ಯೆ" ಖಾತೆಯು ಪ್ರಕಟಿಸಿದೆ.

ಈ ವಾರದ ಕತೆ

ಲೆ: ಜಿ. ಪಿ. ಎಸ್.

ಪವಿತ್ರ ಪ್ರೇಮಕ್ಕೆ ಕಾಣಿಕೆ

ರಕ್ತ ರಂಜಿತ ರವಿಯು ಪಡುವಣ ಬೆಟ್ಟವನ್ನು ಅರ್ಧ ಇಳಿದಿದ್ದ. ಆತನ ಹೆಂಗದಿರುಗಳು ನೀಲವ್ಯೋಮದಲ್ಲಿ ಸಿಡಿದು ನಿಂತಿದ್ದವು ಸಂಧಿಕಾಲವದು; ದಿನಮಣಿ ಅಸ್ತನಾಗುತ್ತಿದ್ದಂತೆ ಮೂಡಣದಲ್ಲಿ ತಿಂಗಳು ಮೂಡಿಬಂದ ಸೂರ್ಯ ಕಮಲಗಳು ತಲೆತಗ್ಗಿಸಿದವು, ಶಶಿ ಕಮಲಗಳು ಹೆಡೆಯತ್ತಿ ನಿಂತವು.

ಸಣ್ಣದೊಂದು ನೀರಿನ ಹೊಂಡ, ಅದರ ದಡದಲ್ಲೊಂದು ಎತ್ತರವಾದ ದಿನ್ನೆ. ಚಂದ್ರ ರೋಹಿಣಿಯರು ಎದುರು ಬದುರಾಗಿ ಕುಳಿತಿದ್ದಾರೆ ಆ ದಿನ್ನೆಯ ಮೇಲೆ ಇಬ್ಬರ ದಿನದ ಮಿಲನದ ಸ್ಥಳ ವದೇ. ಸೂಸೂಗಾಳಿ ಇಬ್ಬರ ಮುಂಗುರು ಳುಗಳನ್ನು ಹಣೆಯ ಮೇಲೆ ತೂರಾಡಿ ಸುತ್ತಿತ್ತು. ಮಾತನಾಡಿ ಆಡಿ ಏನು ಮಾತನಾಡಬೇಕೋ ತಿಳಿಯದಾಗಿತ್ತು. ಕಣ್ಣಿನಿಂದ ಕೇಳಿ ಮುಗುಳು ನಗೆಯಿಂದ ಉತ್ತರಿಸುವದೊಂದೇ ಉಳಿದಿತ್ತು. ಚಂದ್ರ ಆಗಸದ ಮೋಡಗಳನ್ನು ನೋಡುತ್ತ ಸುಮ್ಮನೆ ಕುಳಿತಿದ್ದ. ರೋಹಿ ಣಿಗೆ ಬಹಳ ಹೊತ್ತು ಸುಮ್ಮನಿರಲಾಗ ಲಿಲ್ಲ. "ಚಂದ್ರ!" ಎಂದಳು.

"ಹ್ಞು, ಆಗಲೆ ಏನು ಮಾತಾಡುದೆಲ್ಲ ಒಮ್ಮೆ ಮಾತನಾಡಿ ತೀರಿಸಿಕೊಂಡ ಬಿಡು. ಹೆಂಗಸರ ಜಾಳ್ತನ ಹಿಂಗೊ ಏನೊ! ಕೇಳಿ ನನಗ ಬೇಸರ ಬಂತು"

"ಇಲ್ರಿ, ಒಂದು ಮಾತ ಹೇಳೋ ದಕ್ಕ ಮರದಿದ್ದೆ. ಏನಂದ್ರ ಈ ಸೂಟ ಯೊಳಗ ನನ್ನ ಲಗ್ನ ಮಾಡಿಕೊಡ ಬೇಕು ಅಂತಾ ನಮ್ಮವ್ವನ ಇಚ್ಛಾ"

"ಹೋ! ಹೀಗೇನು? ಆನಂದದ ಸಂಗತಿ.....ಹಾಗಾದರೆ ನಿಮ್ಮ ಲಗ್ನ ಪಾಗ ಒಂದೆರಡು ಪುಸ್ತಕ ಆರಿಸಿ ಇಟ್ಟೇನಿ ಆವನ್ನೇ ನಿನಗ ಕಾಣಿಕೆ ಕೊಡಬೇಕು ಅಂತಾ..... "

"ಸಾಕು ನಿಮ್ಮ ಪುಸ್ತಕಾ ಸಾಹಿತ್ಯಾ ಅದೆಲ್ಲ ನನಗ ಬೇಕಾಗಿಲ್ಲ; ನಾ ಹೇಳಿದ್ದು ಕೊಡುವ ಹಾಗಿದ್ರೆ ಕೊಡ್ರಿ"

"ಏನು ಹೇಳು, ದೇವರು ಅಷ್ಟ ಯೋಗ್ಯತಾ ಕೊಟ್ಟಿದ್ರ ಯಾಕ ಕೊಡ ಬಾರದು?"

"ಇಲ್ನೋಡ್ರಿ, ಹಾಗಾದರೆ ನನಗೆ ಪುಸ್ತಕಾಗಿಸ್ತಕಾ ಬ್ಯಾಡಾ ನನಗೆ ಬೇಕಾ ದದ್ದುಕ.... ಮಾಂಗಲ್ಯ!" ಎಂದು ಸಾವ ಕಾಶವಾಗಿ ಕವಿಯಲ್ಲಿ ಹೇಳಿದಳು, ಚಂದ್ರ ತನ್ನ ಕವಿಯನ್ನು ತಾನೇ ನಂಬ ದಾದ, "ರೋಹಿ." ಎಂದು ಆಕೆಯ ಮುಂಗುರುಳನ್ನು ಹಿಂದೆಸರಿಸಿದ. ರೋಹಿ ಣಿಗೆ ನಾಚಿಕೆಯಾಯಿತೇನೊ, ತಲೆತಗ್ಗಿಸಿ ಕಾಲುಗುರಿನ್ನು ಚಿವುಟುತ್ತಿದ್ದಳು.

"ಏನಂದಿ? ಇನ್ನೊಮ್ಮೆ ಸ್ಪಷ್ಟವಾಗಿ ಹೇಳು" ಎಂದು ಬೇಕಂತೇ ಕೇಳಿದ ಚಂದ್ರ- ರೋಹಿಣಿಗೆ ಮತ್ತಿಷ್ಟು ನಾಚಿ ಕೆಯಾಗಿ ಚಂದ್ರನ ಮೊಳಕಾಲಿನ ಮೇಲೆ ತಲೆ ತಗ್ಗಿಸಿ ಮೋರೆ ಮುಚ್ಚಿಕೊಂಡಳು. ಚಂದ್ರ ಮೃದುವಾಗಿ ತಲೆಯ ಮೇಲೆ ಕೈಯಾಡಿಸಿದ. ರೋಹಿಣಿ ಒಮ್ಮೆಲೆ ಎದ್ದು ಬಳಿ "ತಲ್ನೋಡಿ" ಎಂದು ಬೆರಳು ಮಾಡಿ ತಿಂಗಳನ್ನು ತೋರಿಸಿದಳು.

"ಹೌದು ತಿಂಗಳು..."

"ಚಂದ್ರಮನ ಒದಿಯಲ್ಲಿ? "

"ರೋಹಿಣಿ ನಕ್ಷತ್ರ! "

"ಅವನು ಆಗಸದ ಚಂದ್ರ, ನೀವು ಭೂಮಿಯ ಚಂದ್ರರು"

"ಹೌದು! ರೋಹಿಣಿನೂ ಬಾಜೂಕ್ಕೆ ಇದ್ದಾಳಲ್ಲ!" ಎಂದು ಓರೆಗಣ್ಣಿನಿಂದ ನೋಡಿದ. ರೋಹಿಣಿಯ ಮುಖಕೆಂದಾ ವರೆ ಆರಳಿದಂತಾಗಿತ್ತು.

"ಚಂದ್ರ, ನಿಜವಾಗಿಯೂ ನಿಮ್ಮ ರೋಹಿಣಿಯೆ? "

"ನಿಜವಾಗಿಯೂ"

"ನಿಮ್ಮ ರೋಹಿಣಿಯನ್ನು ಮರೆಯಿ ಲಾರಿರಾ?"

"ನಾನು ಮರೆತರೂ ನನ್ನ ಬಾಜೂಕ್ಕೆ ಬಂದು ನಿಲ್ಲುವಳೆಂದ ಬಳಿಕ ಮರೆಯುವ ದಾದರೂ ಹೇಗೆ ಸಾಧ್ಯ ! "

"ಆದರೆ... ...."

"ತಿಳಿಯಿತು. ಹಾಗೇನಾದರು ಕಪ್ಪು ಮೋಡ ಆಡ್ಡಬಂದರೆ ನಮ್ಮ ಪ್ರೇಮದ ಪವಿತ್ರತೆಯ ಬಗ್ಗೆ ದೇವರಲ್ಲಿ ಅಪೀಲು ಮಾಡಬೇಕು. ನನಗೆ ದೃಡ ನಂಬಿಕೆ ಯಿದೆ: ಪವಿತ್ರ ಪ್ರೇಮ ವಾಹಿನಿಗೆ ದೇವರು ಎಂದೂ ಅಡ್ಡಬರಲಾರನೆಂದು."

"ಚಂದ್ರ" ರೋಹಿಣಿಗೆ ಅಳುವ ಹಾಗಾಗಿತ್ತು, ಆನಂದದಿಂದಲೋ ದುಃಖ ದಿಂದಲೋ ಆಕೆಗೇ ತಿಳಿಯಲಿಲ್ಲ.

ರೋಹಿಣಿ ಎಷ್ಟೋ ದಿನಗಳಿಂದ ಹೇಳಬೇಕು ಅಂದಿದ್ದ ಮಾತನ್ನು ಇಂದು ಹೊರಗೆಡುಹಿದ್ದಳು. ಚಂದ್ರನ ಬಾಳ ಸಂಗಾತಿಯಾಗಬೇಕೆನ್ನುವದು ಆಕೆಯ ಉತ್ಕಟೇಚ್ಛೆ, ಮಾತಿನ ಸಮಯದಲ್ಲಿ ಆ ಇಚ್ಛೆ ತಂತಾನೇ ಹೊರಬಿದ್ದು ಮಾತಿ ನಿಂದಲಾದರೂ ತೃಪ್ತಿ ಹೊಂದಿತ್ತು. ಆಕೆಯ ತಾಯಿ ತಂದೆ ಯಾವ ವರ ನನ್ನು ಹುಡುಕಿಟ್ಟಿರುವರೋ, ವಿಧಿಯು ಆಕೆಯ ಮುಂಬಾಳನ್ನು ಹೇಗೆ ಬರೆದಿದೆ ಯೋ ಆಕೆಗೇನು ಗೊತ್ತು? ಮುಂದಿನ ದೇನೇ ಆಗಲಿ ತನ್ನ ಇಚ್ಛೆಗೆ ಚಂದ್ರನ ಅನುಮತಿಯೊಂದಿತ್ತೆಂಬುದೊಂದೇ ಸಾಕು! ಆ ಮುಗ್ಧ ಮನಸ್ಸು ಏನೇನೋ ಸವಿಗನಸುಗಳನ್ನು ಕಾಣುತ್ತಿತ್ತು.

"ಏ ಮಿಷ್ಟರ, ಓ ಏ ಮಿಸ್! ನನಗೆ ಹೊತ್ತಾಯಿತು. ಹಾಸ್ಟೆಲಿಗೆ ಹೋಗ ಬೇಕು. ನೀ ಏನುಽ ಕಾಕಾನ ಮನಿ ಯಲ್ಲಿ ಜೈನಿ ಇದ್ದಿದಿ .. ರೋಹಿಣಿ ದೇವಿ ಯವರೇ!"

ಕನಸಿನ ಲೋಕದಿಂದ ನನಸಿನ ಲೋಕಕ್ಕಿಳಿದು ಎದ್ದುನಿಂತು, 'ಪುನಃ ಭೇಟಿಯಾವಾಗ? '' ಎಂದು ರೋಹಿಣಿ ಕೇಳಿದಳು.

''ನಾಳೆ ಅನ್ನುವುದು ಮುಗಿದೇ ಹೋ ದವು ಅಂತಾ ತಿಳಿದಿಯೇನು? "

"ಹಾಗಲ್ಲ, ಬೇಸಿಗೆ ಸೂಟಿ ಆಯಿತು. ಊರಿಗೆ ಹೋಗಬಹುದೇನೋ ಅಂತಾ ಕೇಳಿದೆ"

"ನಾನೇನೋ ಪತ್ರಬರೆದಿದ್ದೇನೆ, ಊರಿಗೆ ಬರುವದು ೧೫-೨೦ ದಿನ ತಡವಾಗತದೆ ಅಂತಾ ಮತ್ತು ನಾ ನಿರ್ಧಾರಾನೂ ಮಾಡೇನಿ ನಿಮ್ಮೂರಿಗೆ ನೀ ಹೋಗುತನಕ ನಾನೂ ಹೋಗಬಾ ರುದು ಅಂತಾ, ನೋಡ್ಬೇಕು. ನಾನು ಹೋಗ್ತೇನೆ ನಾಳೆ, ಬಾ" ಹೀಗೆನ್ನುತ್ತ ಚಂದ್ರ ಮುಂದೆ ಹೆಜ್ಜೆ ಇಟ್ಟ.

''ಮರೆಯಬೇಡಿರಿ! " ರೋಹಿಣಿ ಮನಸ್ಸಿಲ್ಲದೆ ಹೆಜ್ಜೆಯನ್ನಿಟ್ಟಳು. ಕವಲು ದಾರಿಗೆ ನಿಂತು ಚಂದ್ರ ಮರೆಯಾಗುವ ವರೆಗೂ ನಿಂತು ನೋಡಿ ಭರಭರನೆ ಮನೆಗೆ ಹೋದಳು. ಆಕೆಗೇನೋ ಹಿಡಿದು ಬಿಟ್ಟಂತಾಗುತ್ತಿತ್ತು. ವ್ಯೋಮದಲ್ಲಿ ಚಂದ್ರ ನಿಚ್ಚಳವಾಗಿ ಪ್ರಕಾಶಿಸುತ್ತಲಿದ್ದರೂ ಅವಾವುದೂ ರೋಹಿಣಿಯ ಕಣ್ಣಿಗೆ ಕಾಣಲಿಲ್ಲ. ಜಗತ್ಕರ್ತ ಬೆಳಕನ್ನು ನೀಡಿದ್ದರೂ ನಮ್ಮ ಮನಸ್ಸು ನಮ್ಮನ್ನೇ ಮೋಸಗೊಳಿಸಿ ಕತ್ತಲನ್ನು ಅನುಭವಿಸ ಹತ್ತಿದರೆ ಬೆಳಕು ನೀಡಿದವನ ತಪ್ಪೇನೂ ಇಲ್ಲ. ಕಾತುರತೆಯಿಂದ ಬೆಳಕಿದ್ದರೂ ಕತ್ತಲೆನಿಸುವದು ಸಹಜ.

೦ ೦ ೦ ೦

ಚಂದ್ರ ಬಿ ಎ. ವಿದ್ಯಾರ್ಥಿ, ರೋಹಿ ಣಿ ಇಂಟರ ವಿದ್ಯಾರ್ಥಿನಿ. ಕಾಲೇಜದಲ್ಲಿ ದಿನಾಲು ಒಬ್ಬರನ್ನೊಬ್ಬರು ಕಾಣು ವರು. ಒಂದು ದಿನ ಒಬ್ಬರು ಕಾಣ ದಿದ್ದರೆ ಇನ್ನೊಬ್ಬರಿಗೆ ಜೀವವೇ ಇಲ್ಲ ದಾಗುವದು. ಮೊದಲು ಪರಸ್ಪರ ಪರಿ ಚಯವಾದುದು ಚಂದ್ರ ತನ್ನ ಮಿತ್ರ ಬಸಣ್ಣನ ಸಲುವಾಗಿ ವೋಟ ಕ್ಯಾನ್ವಾಸ್ ಮಾಡುವಕಾಲಕ್ಕೆ. ಪರಿಚಯ ಬೆಳೆದು ಗೆಳೆತನವಾಗಿ ಪ್ರಣಯಕ್ಕೆ ಪರಿ ಣಮಿಸಿತ್ತು. ಮೊದಲು ಹೆಸರು ಕೇಳ ದಾಗ್ಗೆ ಆಕೆ "ರೋಹಿಣಿ" ಎಂದು ಹೇಳಿ ದ್ದಕ್ಕೆ ಈತ ರೋಹಿಣಿಗೆ ತಕ್ಕಂತೆ "ಚಂದ್ರ" ನೆಂದು ಹೇಳಿದ್ದ. ಮೊದಲು ರೋಹಿಣಿಯ ಸಂಗಡ ಬಹುವಚನದಲ್ಲಿ ಮಾತನಾಡುತಿದ್ದ, ಮುಂದೆ ಆಕೆಯ ಇಚ್ಛೆಯಂತೆ ಏಕವಚನದಲ್ಲಿ ಮಾತ ನಾಡಿಸಹತ್ತಿದ. "ರೋಹಿಣಿ ದೇವಿ" ಹೋಗಿ "ರೋಹಿ" ಆದಳು. ದಿನಾಲು ತಪ್ಪದೇ ಆ ದಿನ್ನೆಯ ಮೇಲೆ ಕೂಡು ವರು. ಜಗತ್ತನ್ನೇ ಮರೆತು ಮಾತ ನಾಡುವರು. ದೀವಾವಳಿ ಸೂಟಿಯಲ್ಲಿ ಮನೆಯಿಂದ ಬರಲು ಓಲೆ ಬಂದಿದ್ದರೂ ಅಭ್ಯಾಸದ ನೆವದಿಂದ ಒಬ್ಬರನ್ನೊಬ್ಬರು ಅಗಲಲಿಲ್ಲ, ಕೂಡಿಯೇ ಜೀವಿಸಬೇಕೆನ್ನು ವರು. ಸಿನೇಮಾ, ನಾಟಕ, ಸಂಗೀತ ನೃತ್ಯ ಏನೇ ಇರಲಿ ಇಬ್ಬರೂ ಕೂಡಿ ಯೇ ಹೋಗುವರು. ವಾರ್ಷಿಕ ಪರೀಕ್ಷೆ ಮುಗಿದ ನಂತರವೂ ಊರಿಗೆ ಹೋಗಲು ಮನಸ್ಸಿರಲಿಲ್ಲ.

ಚಂದ್ರ ಯಾರ ಮನಸ್ಸನ್ನೂ ನೋ ಯಿಸಲಾರ. ತನಗೆ ಹಾನಿಯಾದರೂ ಚಿಂತೆಯಿಲ್ಲ ಒಬ್ಬರ ಮನ ನೋಯು ವಾರದನ್ನುವ ಮಿತ ಭಾಷೆ ಹಿತ ವಚನ ಇವೇ ಅವನ ಮುಖ್ಯ ಗುಣಗಳು. ಭಾವನಾ ಪ್ರಪಂಚದಲ್ಲಿಯೇ ವಿಹರಿಸುವ ಭಾವ ಜೀವಿ ಚಂದ್ರ; ಸಾಹಿತಿ ಯಾಗ ಬಯಸಿದ್ದ; ಕತೆ ಕವನಗಳನ್ನು ಬರೆಯು ತ್ತಿದ್ದ; ಆದರೆ ಅವುಗಳನ್ನು ಯಾರಿಗೂ ತೋರಿಸುತ್ತಿರಲಿಲ್ಲ. ರೋಹಿಣಿ ಮಾತ್ರ ಒತ್ತಾಯದಿಂದ ಓದುತ್ತಿದ್ದಳು; ಮೆಚ್ಚು ತ್ತಿದ್ದಳು. ಕೈಲಾದ ಮಟ್ಟಿಗೆ ಪ್ರೋತ್ಸಾ ಹಿಸುತ್ತಿದ್ದಳು. ಒಂದು ದಿನ "ಉಷಾ" ಮಾಸಪತ್ರಿಕೆಯನ್ನು ಚಂದ್ರನ ಕೈಗಿತ್ತ ಳು ರೋಹಿಣಿ. ತೆಗೆದು ನೋಡುತ್ತಾನೆ ತನ್ನ "ವಿರಸ ಜೀವನ" ಎಂಬ ಕತೆ ಪ್ರಕಟವಾಗಿದೆ! ಸಂಪಾದಕರು ಹೊಗಳಿ ದ್ದಾರೆ. ಲೇಖಕರ ಹೆಸರು "ರೋಹಿಣಿ ಪತಿ"! ಚಂದ್ರ ಆಶ್ಚರ್ಯದಿಂದ "ರೋಹಿಣಿ ಇದೇನು?" ಎಂದದ್ದಕ್ಕೆ "ಚಂದ್ರನೆಂದರೂ ಒಂದೆ ರೋಹಿಪತಿ ಅಂದರೂ ಒಂದೆ ಅಲ್ಲವೆ?" ರೋಹಿಣಿಯ ಮುಗುಳುನಗೆಯ ಮರುಸವಾಲು! ಹೀಗೆ ಅವರ ಹೃದಯಗಳು ಅವರಿಗೇ ತಿಳಿಯ ದಂತೆ ಹತ್ತಿರ ಹತ್ತಿರ ಸರಿದವು.

ಮರುದಿನ ಮುಂಜಾನೆ ಎದ್ದು ನೋಡುತ್ತಾನೆ ಚಂದ್ರ ಗಂಟೆ ಎಂಟಾಗಿ ಹೋಗಿದೆ. ರಾತ್ರೆಲ್ಲ ಏನೇನೋ ಸವಿ ಗನಸುಗಳನ್ನು ಕಂಡಿದ್ದ. ಅವೆಲ್ಲಗಳನ್ನು ಹೇಳಲಿಕ್ಕೆ ಬಾರದು. ಆದರೆ ಆ ಕನಸು ಗಳು ಮಾತ್ರ ಚಂದ್ರನಲ್ಲಿ ಹೊಸ ಚೈತ ನ್ಯವನ್ನು ತುಂಬಿದ್ದವು; ಪ್ರಾತರ್ವಿಧಿ ತೀರಿಸಿ ಚಹಾಪಾನ ಗೈದು ರೂಮಿಗೆ ಬಂದ. ಮನಸ್ಸು ಇನ್ನೂ ಕನಸಿನಲ್ಲೇ

[ಅನೇ ಪುಟಕ್ಕೆ—

ಪವಿತ್ರ ಪ್ರೇಮಕ್ಕೆ ಕಾಣಿಕೆ

—ಒನೇ ಪುಟದಿಂದ]

ತೇಲಾಡುತ್ತಿತ್ತು. ಮೇಜಿನ ಮೇಲಿನ ಪುಸ್ತಕ ತೆಗೆದುಕೊಳ್ಳುತ್ತಲೇ ಪೋಷ್ಟ ಮನ್ ಒದರಿದ ಎದ್ದು ಹೋಗಿ ಬಾಗಿಲು ತೆರೆದ ತಂದೆಯಿಂದ ಟೆಲಿಗ್ರಾಂ! ಚಂದ್ರ ಗಾಬರಿಯಾದ. ಲಗುಬಗೆಯಿಂದ ಒಡೆದು ನೋಡುತ್ತಾನೆ. ಅದರಲ್ಲಿ "ಬೇಗ ಹೊರಡು" ಇಷ್ಟೇ ಬರೆದಿದೆ- ಕಾರಣ ತಿಳಿಯಲಿಲ್ಲ ಚಂದ್ರನಿಗೆ ಕೆಲದಿನಗಳ ಹಿಂದೆ ತಾಯಿಗೆ ಅಸ್ವಸ್ಥವಿದೆ ಎಂದು ಕಾಗದ ಬಂದಿತ್ತು. ತಾಯಿಗೆ ಏನಾದರು ಜಾಸ್ತಿ ಆಗಿದೆಯೋ ಅಥವಾ ಪತ್ರ ಸಾಕಿದರೆ ಇವನು ಬರುವದಿಲ್ಲ ವೆಂತೊ ಏನೂ ತಿಳಿಯಲಿಲ್ಲ. ಆದರೆ ಮನಸ್ಸು ಮಾತ್ರ ರೆಕ್ಕೆ ತೊಟ್ಟು ತಾಯಿ ಬಳಿಗೆ ಹಾರಿಹೋಯಿತು. ಊರಿಗೆ ಹೋಗಬೇಕೆಂಬ ಆತುರ ಹೆಚ್ಚಾಯಿತು. ಮಧ್ಯಾಹ್ನ ಗಾಡಿಗೆ ಹೋಗಲು ಎಲ್ಲ ವನ್ನೂ ಸಿದ್ಧಪಡಿಸಿದ್ದ ಊಟದ ಕಾರ್ಯ ಮುಗಿಸಿ ಬರುವದರೊಳಗಾಗಿ ಗಾಡಿ ಬಿಡುವ ವೇಳೆ ಸಮೀಪಿಸಿತ್ತು. ಹಾಗೇ ಬೇಗ ಬೇಗ ಟಾಂಗಾದಲ್ಲಿ ಎಲ್ಲ ಸಾಮಾನು ಜೋರಿಕೊಂಡು ಸ್ಟೇಶನಕ್ಕೆ ಹೊರಟ. ಆತನ ಮಿತ್ರ ಬಸಣ್ಣ ಬಿಳ್ಕೊಡಲು ಬಂದಿದ್ದ ಟೇಕೆಟು ತಗಿಸಿ ಗುಂಪಿನಲ್ಲಿ ನುಗ್ಗಿ ಕೂಡ್ರಲು ಸ್ಥಾನ ದೊರಕಿಸಬೇಕಾರೆ ಸಾಕು ಬೇಕಾಯಿತು. ಆಗ್ಗೇ ಅವನ ಉಸಿರುಗರೆದುದು. ಅಲ್ಲಿಯವರೆಗೆ ಯಾವ ವಿಚಾರವೂ ಇಲ್ಲದೆ ಗಾಡಿ ಹತ್ತ ಬೇಕೆಂಬುದೊಂದೇ ಇತ್ತು. ಈಗ ವಿಚಾರಕ್ಕೆ ಮತ್ತೆ ಅವಕಾಶವಾಯಿತು. ಆಗ ಫಕ್ಕನೆ ನೆನಪಾಯಿತು. ತಾನು ರೋಹಿಣಿಗೆ ಭೆಟ್ಟಿಯಾಗಬೇಕಾದುದು. ಆದರೆ ಹೇಗೆ? ಗಾಡಿ ಹೊರಡುವ ಸಮಯವಾಗಿದೆ. ಬಸಣ್ಣ ಕೈಕುಲುಕಿ "ಗುಡ್ ಬಾಯ್" ಎಂದು ಹೇಳಿದ.

"ಬಸಣ್ಣಾ" ಚಂದ್ರ ಆತುರದಿಂದ ಕರೆದ. ಬಸಣ್ಣ ಒಂದು ಮಾತು ಮರೆತು ಹೋಗಿತ್ತು ಗೊಂದಲದಲ್ಲಿ"

"ಅಯ್ಯೋ ಪಾಪ! ರೋಹಿಣಿನ್ನ ಬಿಟ್ಟು ಹೀಗೋದು ಹೇಗೆ...."

ತಲ್ಲಾ ಆಕೆಗೆ ಭೆಟ್ಟಿ ಆಗತೀನಿ ಅಂತಾ ಹೇಳಿದ್ದು ಆದರೆ ಈಗೇನು ಮಾಡಬೇಕು?.....ಇಲ್ನೋಡು ಆಕೆ ಬಂಗಲೆ ಅವರ ತಂದೆಯವರಿಂದ ಟೆಲಿಗ್ರಾಂ ಬಂದ ಕಾರಣ ಮಧ್ಯಾಹ್ನ ಗಾಡಿಗೆ ಹೊರಟು ಹೋದರು ಅಂತಾ ತಿಳಿಸಿಬಿಡು ಆ್ಞಾ?..."

ಹೀಗೆಂದೆ ಸಾಗಿತು ಚಂದ್ರನ ಮನಸ್ಸು ತಾಯಿ ರೋಹಿಣಿಯರ ನಡುವೆ ಗಾಢವಾಗಿ ಉಯ್ಯಾಲೆಯಾಡುತ್ತಿತ್ತು.

೦ ೦ ೦ ೦

ಚಂದ್ರ ಮನೆ ತಲುಪಿದಾಗ್ಗೆ ಗುರಪ್ಪನವರು ಶಯ್ಯೆ ತೀಡತಾ ಜಗಲಿಯ ಮೇಲೆ ಪೂರ್ಣ ಪ್ರಜ್ಞಾ ರೂಢರಾಗಿದ್ದರು. ಚಂದ್ರ ಬಂದದ್ದು ನೋಡಿ ಬಹಳ ಹಿಗ್ಗಿದರು. ತಾವು ಕಳಿಸಿದ ಆಳಿಗೆ ಚಕ್ಕಡಿಯಲ್ಲಿಯ ಸಾಮಾನು ಒಳಗಿಡಲಿಕ್ಕೆ ಹೇಳಿ "ಏ ಗೌರೀ ನಿಮ್ಮಣ್ಣಾ ಬಂದಾನ್ನೋಡು ಕಾಲಿಗೆ ನೀರು ತಗೊಂಬಾರಕಾ ಲಗೂ ಎಂದು ಚಂದ್ರನ ತಂಗಿ ಗೌರಿಗೆ ಸುದ್ದಿ ಮುಟ್ಟಿಸಿದರು. ಇಷ್ಟನ್ನೋದೋದೆ ತಡ "ರಾಜಣ್ಣ ಬಂದ," "ರಾಜುಬಂದ" "ಸಣ್ಣ ಸಾಹುಕಾರ ಬಂದ್ರಂತ" ಎಂದು ಹೇಳುತ್ತ ತಾಯಿ ಅಕ್ಕ ಕವ್ಲು, ಅಕ್ಕನ ಮಕ್ಕಳು ತಂಗಿ ಗೌರೀ ಅಳು ಹೋಳು ಎಲ್ಲರೂ ಜಗಲಿಗೆ ಓಡಿ ಬಂದರು.

"ಅವ್ವ ಈಗ ಮನೆಯಲ್ಲಿ ಹೆಂಗಿದೆ?"

"ಸ್ವಲ್ಪ ಆರಾಮಾಗೇದ ಆದ್ರೂ ಆ ಬೇನೆ ಗಡ ಪೂರ್ಣಗುಣ ಆಗೂದಲ್ಲ ಅಂದ್ರುದಾಕ್ತರು ..ಇರ್ಲಿ ಊಟಮಾಡ ನಡಿ ಹೊಟ್ಟಿ ಹಸ್ತಿದ್ದೀತು."

ಚಂದ್ರನನಿಜ ಹೆಸರು ರಾಜಣ್ಣ. ರಾಜಣ್ಣ ಕಮಲಕ್ಕನ ಮಗುವನ್ನೆತ್ತಿ ಕೊಂಡು ತಂಗಿಯ ಕೈಹಿಡಿದು ಒಳಗೆ ಹೋದ. ಮನೆಯಲ್ಲಿ ಎಲ್ಲರೂ ಚನ್ನಾಗಿದ್ದಾರೆ. ಆದರೂ ಹೀಗೆ ತಾರುಮಾಡಿದ್ದೇಕೆಂದು ಅವನಿಗೆ ತಿಳಿಯಲಿಲ್ಲ. ರೋಹಿಣಿಯ ನೆನಹು ಅವನನ್ನು ಅಧೀರನನ್ನಾಗಿ ಮಾಡಿತು. ಹೇಗೋ ಊಟ ಮುಗಿಸಿ ತಂಗಿಯೊಂದಿಗೆ ಹಳ್ಳದ ದಂಡೆಗೆ ತಿರುಗಾಡಲು ಹೋದ.

ಎದುರಿಗೆ ತಂಗಿ ಮಳಲಾಟವಾಡುತ್ತ ಕೂತಿದ್ದಾಳೆ. ರಾಜಣ್ಣ ಹಳ್ಳದ ಜರಿಯೊಂದಿಗೆ ತನ್ನ ವಿಚಾರ ಹರಿಬಿಟ್ಟಿದ್ದಾನೆ. ಒಮ್ಮೆಲೆ ಆಟವನ್ನು ನಿಲ್ಲಿಸಿ ಗೌರಿ,

"ಅಣ್ಣಾ ಮಿಠಾಯಿ ಕೊಡಸ್ತಿದ್ಯಾ ನಂಗೆ?" ಎನ್ನುತ್ತ ಓರೆಗಣ್ಣಿನಿಂದ ಅಣ್ಣನನ್ನು ನೋಡಿದಳು.

"ಹ್ಞೂ....ಯಾಕೆ? ಹೆಚ್ಚು ಗಮನ ವೀಯದೆ ಉತ್ತರಿಸಿದ.

ಲುಂಗಿ ಜಾಡಿಸಿ ಕೈ ಒರೆಸಿಕೊಂಡು ಅಣ್ಣನ ಹೆಗಲ ಮೇಲೆ ಕೈಹಾಕಿ ಬಾಗಿ ಕಿವಿಯ ಹತ್ತಿರ ಹೇಳಿದಳು. "ಹ್ಞೂ... ಉಹ್ಞೂ ಕಳ್ಳಾ ನೀನು ಗೊತ್ತೇ ಇಲ್ಲೇ ನಿಂಗೆ? ಮಿಠಾಯಿ ಕೊಡ್ಸು ಹೇಳತಿನಿ.... ಇಲ್ಲೋಡು....ಉ ಅತ್ತಿಗೆ ಬರತಾಳ ನಾಲೆ" ಎಂದು ಚಪ್ಪಳೆ ಇಕ್ಕಿ ಕುಣಿದು ನಗತೊಡಗಿದಳು. ರಾಜಣ್ಣನಿಗೆ ಆನಂದವಾಗುವ ಬದಲು ಸಿಟ್ಟು ಬಂದಿತು. "ಬಾಯ್ಮುಚ್ಚು" ಎಂದು ಹೊಡೆಯಲು ಕೈಯತ್ತಿದ. ಆದರೆ ಮುಗ್ಧ ತಂಗಿ ಏನೂ ತಿಳಿಯದಗೌರಿ ಹೊಡೆಯಲಿಲ್ಲ. "ಸಾಕು ಮುಚ್ಚು ಬಾಯಿ, ಇನ್ನೊಮ್ಮೆ ಅಂದೆಂದ್ರ ನೋಡು!" ಎಂದು ಜಬರಿಸಿದ.

"ಹ್ಞೂ, ನಾಚ್ತಿಯೇನ ಹೆಣ್ತಿಅಂದ್ರ ನಿನ್ನ ಹೇಣ್ತಿ ಅಲ್ಲ ಹೋಗು ನನ್ನ ಅತಿಗಿ!"

"ಸಾಕು ನಡಿ ಜಾಸ್ತ ಮಾತಾಡ ಬೇಡ" ತಂಗಿಯನ್ನೆಳೆದುಕೊಂಡು ಮನೆಗೆ ಹೋದ.

ರಾಜಣ್ಣನಿಗೆ ಆಗ ತಿಳಿಯಿತು ತಾರು ಏಕೆ ಮಾಡಿದ್ದರೆಂದು. ರೋಹಿಣಿಯ ನೆನಹು ಹೆಚ್ಚಾಗಿ ಬಾಧಿಸಹತ್ತಿತು. "ರೋಹಿಣಿಗೆ ಏನೆಂದು ಹೇಳಬೇಕು. ಅಂದಿನ ಆ ದಿನ! ಆಕೆಯಲ್ಲಿ ನನಗಾಗಿ ನಂಬಿಗೆ ಇದೆ. ವಿಶ್ವಾಸಘಾತಕತನ ಮಾಡಲಾರೆ.... ರೋಹಿ ನಾನೆಂದಿಗೂ ನಿನ್ನ ಕೈ ಬಿಡಲಾರೆ ನನ್ನ ಜೀವನದ ದೀವಟಿಗೆ ನೀನು ...ಆದರೆ....ದೇವನು ಸಹಕರಿಸಬೇಕು ದೇವರಲ್ಲಿಯ ದೃಢ ವಿಶ್ವಾಸ ಎಂದಿಗೂ ಕೆಡುಕು ಮಾಡಲಾರದು. ದೇವರು ಸಹಕರಿಸಬೇಕು.... ಹೇಗಾದರೂ ಬಿ. ಎ ಪರೀಕ್ಷೆ ಕೊಟ್ಟಿದ್ದೇನೆ ಎಲ್ಲಾದರೂ ಕೆಲಸ ಸಿಗಬಹುದು ಆಕೆ ಒಪ್ಪೇ ಒಪ್ಪುವಳು....ಆದರೆ.... ನನ್ನ ತಾಯಿ ತಂದೆ ಇದಕ್ಕೆ ಒಪ್ಪಬಹುದೆ? ಈಗಾಗಲೆ ತಾವು ಹುಡುಕಿಟ್ಟ ಕನ್ಯೆಗೆ ಮಾತೂ ಕೊಟ್ಟಿರಬಹುದು... ತಂದೆ ಒಂದು ತರಹ ಸ್ವಭಾವದವರು; ತಾಯಿ ಸೂಕ್ಷ್ಮ ಹೃದಯದವಳು. ಒಂದು ವೇಳೆ ತಂದೆ ತಾಯಿಯ ವಿರುದ್ಧ ರೋಹಿಣಿಯ ಕೈ ಹಿಡಿಯಲು ಸಾಧ್ಯವೆ ನನಗೆ? ಅದು ನನ್ನಿಂದಾಗದು.....ತಾಯಿ ಹೃದಯವನ್ನು ಎಂದೂ ನೋಯಿಸಲಾರೆ.... ಹಾ ಗಾ ದರೆ .. ರೋಹಿ ...ರೋಹಿ ...ನಾನೇನೂ ಮಾಡಲಾರೆ ...ಎಲ್ಲವನ್ನೂ ದೇವರಿಗಾಗಿ ಬಿಟ್ಟಿದ್ದೇನೆ...." ಹೀಗೆಂದು ವಿಚಾರ ಮಾಡಿ ಮಾಡಿ ಕಡೆಗೆ ದೇವರ ಮೇಲೆ ಭಾರ ಹಾಕಿ ಸುಮ್ಮನಾದ ರಾಜಣ್ಣ. ಇತ್ತ ರೋಹಿಣಿ, ಅತ್ತ ತಾಯಿ ತಂದೆ. ಕಷ್ಟವಾದರೂ ಚಿಂತೆಯಿಲ್ಲ, ಇಬ್ಬರ ನಡುವಿನ ಮಾರ್ಗವನ್ನೇ ಹುಡುಕಬೇಕು. ರಾಜಣ್ಣ ತಂದೆ ತಾಯಿಗಳ ಮಾತು ಮೀರಿದವನಲ್ಲ. ತಂದೆಯ ಕೂಡು ಹೆಚ್ಚು ಮಾತಾಡುವ ಸ್ವಭಾವವೂ ಅಲ್ಲ ಅವನದು. ರಾಜಣ್ಣೂ ಮನಸ್ಸಾಗರದಲ್ಲಿ ಹೊಯ್ದಾಟದಿಂದ ತರಂಗಗಳುದ್ಭವಿಸಿದವು. ತಾಯಿ ಊಟಕ್ಕೆಬ್ಬಿಸಿದರೂ ಹಸಿವಿಲ್ಲೆಂದು ಹೇಳಿ ಹಾಗೆ ಹಾಸಿಗೆಯಲ್ಲಿ ಒರಗಿದ.

ಮರುದಿನ ಊಟ ಮಾಡಿ ಗುರಪ್ಪನವರು ಎಲೆ ಅಡಿಕೆ ಮೆಲ್ಲುತ್ತ ನಶ್ಯ ತೀಡುತ್ತ ಚಿಗರೆಲೆಯ ಮೇಲೆ ಕೂತಿದ್ದರು ಅವರ ಹೆಂಡತಿ ತಮ್ಮ ಏನೋ ಪಿಸುಮಾತಿನಲ್ಲಿ ಹೇಳುತ್ತಿದ್ದಳ್ ಕಡೆಗೆ, "ನೀವಽ ಎತ್ತಿ ಕೇಳಿರಿ. ಅಜೇನೂ ಅಂಥಾ ಹುಡುಗನಲ್ಲ" ಎಂದು ಹೇಳಿ ಅಡಿಗೆ ಮನೆಗೆ ಹೋದರು

ತಂದೆ ಕರೆದ ಕೂಗನ್ನು ಕೇಳಿ ಮಕ್ಕ ಕೊಡನೆ ತಡುತ್ತಿದ್ದ ರಾಜಣ್ಣ ಎದ್ದು ಬಂದು ತಂದೆಯ ಬಳಿಯಲ್ಲಿ ಪವಡಿಸಿದ. ಹೊಗೆ ಸೊಪ್ಪನ್ನು ಬಾಯಲ್ಲಿ ಹಾಕಿ ಮೆಲ್ಲುತ್ತ ನಡುನಡುವೆ "ಪಿಜಕ್" ಎಂದು ಉಗುಳುತ್ತ ಸಾವುಕಾರರು,

"ಮಟ್ಟೀನ ಪೇಪಡ ಹ್ಯಾಂಗ ಆಗ್ಯಾವು?" ತಾಂಬೂಲ ರಸ ತುಂಬಿಕೊಂಡು ಕೇಳಿದರು.

"ಅಡ್ಡಿಯಿಲ್ಲ ಪಾಸಾಗಬಹುದು ಆದರ ಕ್ಯಾಸೇನಾಗತದನೋ ಹೇಳಲಕ್ಕೆ ಬಾರದು"

"ಮುಂದೇನ ಮಾಡಬೇಕೆಂತ ಮಾಡಿಪಾ?"

"ನೀವ್ಹೇಳದ ಹಾಗೆ.... ಅನಕಾ ರಿಜಲ್ಟ ಆಗಲಿ ಮುಂದ..."

ಗುರಪ್ಪನವರು ಮಗನ ವಿಧೇಯತೆಗಾಗಿ ಸಂತೋಷಗೊಂಡರು. "ನಿಮ್ಮ ತಾಯಿ ಮೈಯ್ಯಾಗು ನೆಟ್ಟಗಿಲ್ಲ; ಆಕೀನ ಅಂದ್ರು ಪತ್ರ ಹಾಕಿದರೆ ಬರೂದಿಲ್ಲ ಏನರ ನೆವ ಹೇಳಿ ಅಲ್ಲೆ ಇರ್ತಾನ ಅದ್ಕ ತಾರ ಮಾಡ್ರಿ ಅಂತ...."ಹೀಗೆಂದು ಪೀಠಿಕೆ ಹಾಕಿದರು. ಅದು ರಾಜಣ್ಣನಿಗೂ ಹೊಳೆಯದೆ ಇರಲಿಲ್ಲ.

"ಈ ಸರ್ತ ನಿನ್ನ ಲಗ್ನಾನೂ ಮಾಡಬೇಕಂತ ಆಕಿ ಮನಸದ. ಒಂದ ಕನ್ಯಾನೂ ನೋಡೀವಿ; ನಮ್ಮ ಮನಸ್ಸಿಗೆ ನಿಮ್ಮಕ್ಕ ಎಲ್ಲಾರ ಮನಸ್ಸಿಗೂ ಬಂದದೆ. ಸಾಲಾವಳಿನೂ ನೆಟ್ಟಗದ ತಿಳಿತ್ತ ಕಲ್ತಾಕಿನೂ ಅದಾಳ ಮತ್ತ ನೀವೂ ಕಲ್ತವರು ಕಲ್ತ ಹೆಣ್ಣಾನ್ನು ಬೇಡತೀರಿ ಕನ್ಯಾನ ತಂದೆಗೂ ನ ಪರಿಚಯ. ನೀ ಬೇಕಾರ ನಿಮ್ಮಕ್ಕನ್ನ ಕರಕೊಂಡು ನೋಡಿ ಬಾ"

ರಾಜಣ್ಣ ಕಳವಳದಿಂದ ಕುದಿತಾ ಇದ್ದ; ಧರ್ಮ ಸಂಕಟದಲ್ಲಿ ಬಿದ್ದು ತೊಳಲಾಡುತ್ತಿದ್ದ ತಂದೆಯ ಮಾತಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ಚಂದ್ರ ಸುಮ್ಮನೆ ಕೂತದ್ದು ಕಂಡು ಗುರಪ್ಪನವರು ವೌನವು ಅರ್ಧ ಸಮ್ಮತಿ ಎಂದು ಬಗೆದರು ತಾವು ಹಾಕಿದ ಗೆರೆ ದಾಟುವವನಲ್ಲವೆಂದು ಹಿಗ್ಗಿದರು.

"ಏನು ಹೇಳೂದು 'ಆಕಿ' ಮುಂದು ಹೇಳು ನಾನೀಗ ಬರತೇನಿ" ಎನ್ನುತ್ತ ಶೆಲ್ಲಿಯನ್ನು ಹೊದ್ದುಕೊಂಡು ಎದ್ದರು.

ಏನು ಮಾಡಿದರೂ ರೋಹಿಣಿಯ ಚಿಂತೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. "ಕರ್ತವ್ಯ (ಮಾಡಬೇಕೆ) ಆತ್ಮ ಬಲಿಕೊಡಬೇಕೆ. ಆದರ್ಶವನ್ನು ಧೈರ್ಯದಿಂದ ಸಾಧಿಸಬೇಕು. ಹಾಗೆಂದು ತಾಯಿ ತಂದೆಗೆ ನೋವನ್ನುಂಟು ಮಾಡುವದೆ? ನಾನೆಂದೂ ಅವರ ಮಾತು ಮೀರಿದವನಲ್ಲ. ಹಾಗಾದರೆ ರೋಹಿಣಿಯನ್ನು ಮರೆಯಲಾದೀತೆ? ನನ್ನನ್ನೇ ನಂಬಿದ ಅವಳ ಜೀವನ ?.... ಸಾಕಿ ಸಲುಹಿದ ತಾಯಿ ತಂದೆಗಳಿಗೆ ಮುಪ್ಪಿನ ಕಾಲದಲ್ಲಿ ನೋವನ್ನುಂಟು ಮಾಡಲಾರೆ .. ರೋಹಿಣಿಯನ್ನು ಮರೆಯಬೇಕು. ನಮ್ಮ ಪ್ರೇಮ ಪವಿತ್ರವಾಗಿದ್ದರೆ ಆದರ್ಶವಾಗಿದ್ದರೆ ದೇವರು ಸಹಕರಿಸಲಿ. ರೋಹಿಣಿಗೂ "ನನ್ನನ್ನು ಮರೆಯಲು ಪ್ರಯತ್ನಿಸು ಹಿತಕೋರುವ ತಾಯಿತಂದೆಗಳ ಮಾತು ಕೇಳು

[ಮುಂದಿನ ಪುಟಕ್ಕೆ—

ಪವಿತ್ರ ಪ್ರೇಮಕ್ಕೆ ಕಾಣಿಕೆ

ಎಂದು ಬರೆದು ಬಿಡಬೇಕು...."ಹೀಗೆ ಎಷ್ಟೋ ವಿಚಾರ ಮಾಡಿದ ರಾಚಣ್ಣ. ಅದರೆ ಮರುಕ್ಷಣದಲ್ಲಿ ರೋಹಿಣಿಯ ಆ ನಿಷ್ಕಲಂಕ ಮುಗ್ಧ ಮೊಗ ಅಸಾಹಾಯಕನನ್ನಾಗಿ ಮಾಡುವದು. ಸ್ಮೃತಿ ಪಟಲದಲ್ಲಿ ರೋಹಿಣಿ ಕಾಣಿಸಿಕೊಂಡಳು. ಇಬ್ಬರೂ ದಿನ್ನೆಯ ಮೇಲೆ ಕುಳಿತಿದ್ದಾರೆ. ರಾಚಣ್ಣನಿಗೆ ಏನೆಂದೂ ಬಾಯಿ ಬರಲೊಲ್ಲದು. ಅಪರಾಧಿಯಂತೆ ಮನಸ್ಸು ವ್ಯಾಕುಲಗೊಂಡಿದೆ.

"ರೋಹಿ ನಿನ್ನನ್ನಗಲಿ ಎಂದು ಆಪ ಶಾಥ ಮಾಡಿದೆ....ಕ್ಷಮಿಸು "

"ಚಂದ್ರ, ರೋಹಿಣಿ ನಿಮ್ಮ ಪಾದದ ಬಳಿಯಲ್ಲಲ್ಲದೆ ಬದುಕಲಾರಳು."

"ಇನ್ನೆಲ್ಲಿಯಾದರೂ ಹೋಗೋಣ, ಇಬ್ಬರೂ ಕೂಡಿ ಜೀವಿಸೋಣ, ಇದಕ್ಕೆ ಸಿದ್ಧಳೇ ನೀನು ?"

"ಸಿದ್ಧಳು ಆದರೆ ನನಗಾಗಿ ತಾಯಿ ತಂದೆಗಳನ್ನು ನೋಯಿಸಬೇಡಿ."

"ಅದೆಲ್ಲ ನನ್ನ ಪಾಲಿಗೆ ನೀನೊಂದು"

"ಚಂದ್ರ ಹಾಗೆಲ್ಲ ಬೇಡ ನಮ್ಮ ಜೀವನದಿಂದ ಬೇರೆಯವರು ನೊಂದು ಕೊಳ್ಳಬಾರದು. ನಮ್ಮ ದೇಹಗಳೆರಡಾಗಿ ದೂರ ದೂರವಾಗಿದ್ದರೂ ಹೃದಯ ಒಂದೆ. ನಮ್ಮ ಪ್ರೇಮ ಪರರಿಗೆ ನೋವ ನ್ನುಂಟು ಮಾಡದಿರಲಿ ಪರರನ್ನು ಬಲಿ ತೆಗೆದುಕೊಳ್ಳದಿರಲಿ–ಪ್ರೇಮ ಪವಿತ್ರವಾಗಿರಲಿ. ಪ್ರೇಮ ಪ್ರೇಮವಾಗಿಯೇ ಉಳಿಯಲಿ. ಅಲ್ಲಿ ಸ್ವಾರ್ಥ ಬೇಡ. ಪ್ರೇಮ ಅಮರವಾಗಿರಲಿ. ಲಗ್ನದಿಂದ ಅದರ ಪಾವಿತ್ರ್ಯಕ್ಕೆ, ಅಮರತ್ವಕ್ಕೆ ಕುಂದು ಬರುವ ಹಾಗಿದ್ದರೆ ಬೇಡ."

"ರೋಹಿ ನನ್ನನ್ನು ಕ್ಷಮಿಸು. ನಮ್ಮ ಪ್ರೇಮ ಅಮರವಾಗುಳಿಯಲಿ.ಆದರೆ...."

"ರಾಚಣ್ಣ, ಏ ರಾಜು" ರಾಚಣ್ಣ ಎಚ್ಚೆತ್ತು ಕಣ್ತೆರೆದಾಗ ಕಮಲಕ್ಕ ಒದರುತ್ತಿದ್ದಳು.

"ನಾವಿಬ್ಬರೂ ನೋಡಾಕ ಹೋಗೋನೇನೋ ಕನ್ಯಾನ ?"

"ಏನ್ಬೇಡ"

ರಾಚಣ್ಣ ಅಲ್ಲಿಂದೆದ್ದು ಹಳ್ಳದ ದಂಡೆಗೆ ಹೋದ. ಆತನ ಮನಸ್ಸಿನಲ್ಲಿ ಶಾಂತಿ ಎಂಬುದೇ ಇರಲಿಲ್ಲ. ಮೊದಲೆ ಮಿತ ಭಾಷಿ ರಾಚಣ್ಣ, ಮೌನಿಯೇ ಆಗಿದ್ದ. ಆ ಮೌನವನ್ನೇ ಒಪ್ಪಿಗೆಯಂದು ತಿಳಿದು ಕೊಂಡು ಮನೆಯವರೆಲ್ಲ ಲಗ್ನದ ತಯಾರಿ ನಡಿಸಿದರು.

ಮದುವೆಯ ಜಂಬರವೇ ಜಂಬರ, ಸಂಭ್ರಮವೇ ಸಂಭ್ರಮ. ಬೀಗರು ಬಿಜ್ಜರು ಆಪ್ತರು ಆಪ್ತೇಷ್ಟರು ಎಲ್ಲರೂ ಬಂದಿದ್ದಾರೆ. ಎಲ್ಲ ಕಾರ್ಯಕ್ರಮಗಳು ವಿದ್ಯುಕ್ತವಾಗಿ ಸಾಗಿವೆ. ತಂಗಿಯಿಂದ ಕನ್ಯೆಯ ಹೆಸರು ಪಾರ್ವತಿ ಎಂದು ಗೊತ್ತಾಯಿತು ರಾಚಣ್ಣನಿಗೆ. ರಾಚಣ್ಣ ಈಗ ಯಾರ ಕೂಡೂ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಯಂತ್ರದಂತೆ ಕೆಲಸ ಮಾಡುತ್ತಿದ್ದ ಮುಖವು ಯಾವಾಗಲೂ ನೆಲದ ಕಡೆಗೆ, ದೃಷ್ಟಿ ಶೂನ್ಯದಲ್ಲಿ. ಹೆಂಡತಿಯ ಮುಖವನ್ನು ಕದ್ದೂ ನೋಡಲಿಲ್ಲ, ನೋಡಲು ಇಷ್ಟ ಪಡಲೂ ಇಲ್ಲ. ಹಸೆಯ ಮೇಲೆ ಕೂಡ್ರು ಅಂದ್ರೆ ಕೂಡ್ರುವ, ಆಯಿತು ಅಂದ್ರೆ ಎದ್ದು ತನ್ನ ಕೋಣೆಗೆ ಹೋಗುವ. ಮದುವೆಯ ಸಂಭ್ರಮವೆಲ್ಲ ಕೂಡಿದ ಬಂಧು ಬಳಗದವರಿಗಲ್ಲದೆ ರಾಚಣ್ಣನಿಗಿಲ್ಲ. ಇವನ ಪರೌನ ಕಂಡು ಕೆಲವರು "ಈಗಿನ ಕಲ್ತ ಹುಡುಗುರ ಹಿಂಗೆ" ಎಂದು ಸಮಾಧಾನಪಟ್ಟು ಕೊಂಡರು. ಯಾರು ಒತ್ತಾಯ ಮಾಡದಿದ್ದರೂ ತಂಗಿ ಬಿಡಳು, ನೆನಪಾದರೆ ಓಡಿ ಬರುವಳು ಅಣ್ಣನ ಕೋಣೆಗೆ. 'ನಿನ್ನ ಹೆಣ್ತಿ ಹೆಸರು ಹೇಳು' ಎಂದು ಪೀಡಿಸುವಳು. 'ನನಗೆ ಗೊತ್ತಿಲ್ಲ' ಅಂದ್ರೆ 'ನಾ ಹೇಳಿ ಕೊಡತೀನಿ ಹೇಳು' ಅನ್ನುವಳು. ಆತನ ಮನಸ್ಸನ್ನು ಮತ್ತಿಷ್ಟು ಕದಡುವಳು. ಅವಳನ್ನು ಅಳಿಸಲೂ ಬಾರದು, ರಮಿಸಲೂ ಬಾರದು.

ಗೋಧೂಳಿ ಲಗ್ನ, ಪಾರ್ವತಿಯನ್ನು ಧರ್ಮಪತ್ನಿಯನ್ನಾಗಿ ಸ್ವೀಕರಿಸಬೇಕು. ಪಡುವಣ ದಿಗಂತದಲ್ಲಿ ನೇಸರನು ಅಸ್ತನಾಗುತ್ತಿದ್ದಂತೆ ರಾಚಣ್ಣನಿಗೆ ತಾನು ಬಯಸಿದ ಆದರ್ಶ ಜೀವನದ ಅಂತ್ಯವಾಗುತ್ತಿರುವಂತೆನಿಸಿತು. ಶುಭ ಮುಹೂರ್ತ ಸಮೀಪಿಸಿದೆ; ಅಯ್ಯನವರು ಮಂತ್ರ ಪಠಿಸುತ್ತಿದ್ದಾರೆ. ವಾದ್ಯಗಳು ಮೊಳಗುತ್ತಿವೆ, ಮುತ್ತೈದೆಯರು ಓಡಾಡುತ್ತಿದ್ದಾರೆ. ಬಂಧು ಬಳಗದ ಜನಸ್ತೋಮ ನೆರೆದಿದೆ, ನಡುವೆ ರಾಚಣ್ಣ ಪಾರ್ವತಿಯನ್ನು ಸ್ವೀಕರಿಸಲು ಸಿದ್ಧನಾಗಿದ್ದಾನೆ, ಅಲ್ಲಲ್ಲ ತನ್ನ ರೋಹಿಗೆ ಮೋಸಗೈಯಲು, ತಾಯಿ ತಂದೆಗಳನ್ನು ಸಂತೋಷ ಪಡಿಸಲು ಕೆಳಮುಖ ಹಾಕಿಕೊಂಡು ನಿಂತಿದ್ದಾನೆ ರಾಚಣ್ಣ. ಮುಖ ವೆತ್ತಿ ನೋಡಲಿಲ್ಲ ಹೆಂಡತಿಯ ಮೊಗವನ್ನು 'ರೋಹಿಣಿಯೂ ಅಸಾಹಾಯಕಳಾಗಿ ನನ್ನಂತೆ ತಾಯಿ ತಂದೆಗಳ ಆಗ್ರಹಕ್ಕೆ ಒಳಪಟ್ಟು ಬೇರೆಯವನನ್ನು ಲಗ್ನವಾಗುತ್ತಿರಬಹುದೆ ?... ಆಕೆಯ ಹೃದಯದಲ್ಲಿ ನನಗೊಂದು ಸ್ಥಾನ ಉಂಟು. ರೋಹಿ !'

'ಹ್ಞಾ ತಾಳಿ ಕಟ್ಟಪಾ ತಮ್ಮಾ ಶುಭ ಮುಹೂರ್ತ ಸಾವಧಾನ....' ಅಯ್ಯನವರ ಆಪ್ಪಣೆಯಾಯಿತು. ತುಂಬ ಸೆರಗು ಹೊದ್ದುಕೊಂಡು ಮುಖ ಕೆಳಗೆ ಮಾಡಿ ಕೂತ ಕನ್ಯೆಯ ಕೊರಳಿಗೆ ತಾಳಿಯನ್ನಿಟ್ಟ. ತಾಳಿಯಿಂದ ಪಾರ್ವತಿಯನ್ನು ಪತ್ನಿಯನ್ನಾಗಿ ಸ್ವೀಕರಿಸುತ್ತಿರುವಂತೆ ಅದೇ ಶಾಳಿ ಸರದಿಂದ ರೋಹಿಣಿಯ ಕತ್ತು ಹಿಚುಕುತ್ತಿರುವಂತೆ ಭಾಸವಾಯಿತು. ರಾಚಣ್ಣನಿಗೆ ಎಲ್ಲರೂ ಆಕ್ಷತೆಯನ್ನರ್ಪಿಸಿದರು. ಅಂತೂ ಲಗ್ನ ವೆನ್ನುವದೊಮ್ಮೆ ಮುಗಿದು ಹೋಯಿತು.

ಅಂದು ಮೊದಲ ರಾತ್ರಿ; ರಾಚಣ್ಣ ಅಲಂಕೃತ ಕೋಣೆಯಲ್ಲಿ ಶುಭ್ರ ಹಾಸಿನ ಮೇಲೆ ಕುಳಿತಿದ್ದಾನೆ. ತಾನೆಲ್ಲಿದ್ದಾನೋ ತನಗೇ ತಿಳಿಯದು. ತನ್ನ ಅಸಹಾಯ ಕತೆಗಾಗಿ ದೇವರಲ್ಲಿ ಮೊರೆ ಇಡುವನು. 'ರೋಹಿಣಿಯೂ ನನ್ನಂತೆ ಲಗ್ನವಾಗಿರ ಬಹುದೆ ಇಲ್ಲವೆ ನನ್ನ ಚಿಂತೆಯಿಂದ ಕೊರಗುತ್ತಿರಬಹುದೆ ? ನಾನು ಮಾಡಿದ್ದು ಸರಿಯೆ ?....ಏನೇ ಆಗಲಿ....ಲಗ್ನವಾದರೇನಾಯಿತ ನನ್ನಲ್ಲಿ ಆಕೆಗಾಗಿ ಸ್ಥಾನವಿದೆ ದೇವರಿಗೂ ಕಣ್ಣಿದೆ ಹೃದಯವಿದೆ.' ಹೀಗೆ ದ್ವಂದ್ವದಲ್ಲಿ ಸಿಲುಕಿ ರಾಚಣ್ಣ ಕಿಂಕರ್ತವ್ಯ ಮೂಢನಾಗಿದ್ದ.

ಹೆಂಗಸರ ಕಲ ಕಲ ಧ್ವನಿ ಕೇಳಿ ಬಂತು; ಕದವೂ ತೆರೆಯಿತು, ಅವರ ನಗೆ ಸಿಸುಮಾತು ಸ್ಪಷ್ಟವಾದವು. ಆರತಿಯೊಂದಿಗೆ ಕಾಲಿಟ್ಟಳು ವಧು. ಕದವು ಇಕ್ಕಲ್ಪಟ್ಟಿದ್ದಿತು. ನಾಚಿಕೆಯ ಹೆಣ್ಣು ಪಾರ್ವತಿ ದೂರದಲ್ಲೇ ಬಾಗಿ ನಿಂತಳು. ಆಕೆ ಏನು ಮಾತಾಡಬೇಕು ಹೇಗೆ ಮಾತಾಡಬೇಕು ? ಇತ್ತ ರಾಚಣ್ಣ ಶೂನ್ಯ ಮನಸ್ಕನಾಗಿ ನೆಲವನ್ನೇ ನೋಡುತ್ತಿದ್ದ. ಆದರೆ ಎಷ್ಟು ಹೊತ್ತು ಹೀಗೆ ನಿಲ್ಲುವದು? ಗಂಡಸು ಮಾತನಾಡಿಸಬೇಕಲ್ಲವೆ ?

'ಬಾ ಇಲ್ಲೆ, ಕೂತುಕೊ' ಮುಖ ವೆತ್ತದೆ ರಾಚಣ್ಣ ನುಡಿದ.

ಪಾರ್ವತಿಯಲ್ಲಿ ಒಮ್ಮೆಲೆ ರೋಮಾಂಚನವೆದ್ದವು. ಎದೆ ಬಡಿದುಕೊಳ್ಳಲಾರಂಭಿಸಿತು, ತಾನು ಎಲ್ಲಿರುವೆಳೊ ತನಗೇ ಹೊಳೆಯಲಿಲ್ಲ. ಈ ಧ್ವನಿ ಪರಿಚಯವಿದ್ದಂತೆಯೂ ಎಲ್ಲಿಯೋ ಕೇಳಿದ ಹಾಗೆಯೂ ಎನಿಸಿತು ಆದರೆ ಆದೆಲ್ಲೋ ಪಾತಾಳದಿಂದ ಉದ್ಭವಿಸಿದಂತಿತ್ತು. ಮುಖವೆತ್ತಿ ನೋಡಿದಳು– ಯಾರು ? ತನ್ನ ಪತಿ, ಹೃದಯದೇವ್ಯ ತಾನು ಬಯಸಿದ ಮೂರ್ತಿ ಚಂದ್ರ!! ಕನಸೋ ನನಸೋ ತಿಳಿಯದಾಯಿತು. ಆಕೆಗೆ... ಆಕೆಗೆ ತಿಳಿಯದ ಹಾಗೆಯೇ 'ಚಂದ್ರ!' ಎಂಬ ನುಡಿ ಹೃದಯದಿಂದ ಓಡಿ ಬಂತು. ರಾಚಣ್ಣ, 'ನನ್ನನ್ನು ಚಂದ್ರ ನೆಂದು ಕರೆಯುವ ಇವಳ್ಯಾರು,ಇದೇನು ನನ್ನ ಭ್ರಮೆ ಇರಲಿಕ್ಕಿಲ್ಲವಲ್ಲ ? ನನ್ನ ರೋಹಿ ಒದರುತ್ತಿರಬಹುದೆ ? ಆಕೆಯ ಹೃದಯದಕೂಗೇ ಇದು'ಎಂದುಕೊಂಡು ಸರಕ್ಕನೆ ಮುಖವೆತ್ತಿ ನೋಡಿದ ತನ್ನ ಹೆಂಡತಿಯನ್ನು ಅಲ್ಲ, ತನ್ನ ಹೃದಯ ದೇವತೆಯನ್ನು ! ಪಾರ್ವತಿಯನ್ನು ಅಲ್ಲಲ್ಲ, ರೋಹಿಯನ್ನು !! ತನ್ನನ್ನೇ ನೋಡುತ್ತಿದ್ದಾಳೆ ರೋಹಿಣಿ. ಆನಂದ ಬಾಷ್ಪ ನದಿಯಾಗಿ ಹರಿಯುತ್ತಿದೆ. ಮಾತನಾಡಲು ಕಂಠವೇ ಬರದು. ಹೌದು ತನ್ನ ರೋಹಿ ನಿಜ. ಅವಳೇ ಇವಳು ! 'ರೋಹಿ' ಎಂದು ಆಪ್ಪಿದ. ಮೈ ಪುಲಕಿತವಾಯಿತು. ರಾಚಣ್ಣ, ವಾರ್ವತಿಯರು ಹೋಗಿ ಚಂದ್ರ ರೋಹಿಣಿಯರಾದರು ! ತಮ್ಮ ಪವಿತ್ರ ಪ್ರೇಮಕ್ಕೆ ತಕ್ಕ ಫಲಕೊಟ್ಟವದಕಾಗಿ ದೇವರನ್ನು ಸಾಸಿರಸಾರೆ ಆಭಿನಂದಿಸಿದರು. ಜಗತ್ತನ್ನೇ ಮರೆತರು. ಒಬ್ಬರ ಬಾಯಿಂದಲೂ ಮಾತು ಹೊರಡದು. ಒಂದು ಹೃದಯಕ್ಕೆ ಇನ್ನೊಂದು ಹೃದಯ ಮಾರ್ನುಡಿಯಬೇಕು, ಹೃದಯದಲ್ಲಿಯ ಆನಂದದ ಮಿಡಿತಕ್ಕೆ ಉಕ್ಕೆ ಬರುತ್ತಿದ್ದ ಆ ಬಾಷ್ಪ ಜಲವೇ ಸಾಕ್ಷಿ. ಅದೇ ಸ್ಥಿತಿಯಲ್ಲಿ ಎಷ್ಟು ಹೊತ್ತು ನಿಂತಿದ್ದರೋ ಆ ವ್ಯೋಮದಲ್ಲಿಯ ಚಂದ್ರ ರೋಹಿಣಿಯರಿಗೇ ಗೊತ್ತು !

ಮರುದಿನ ಗೌರಿಗಾಗಿ ವಿಶೇಷ ಉಡುಗೊರೆ ಮಿರಾಯಿ ಸಿದ್ಧವಾಗಿದ್ದವು ! ಇಷ್ಟು ದಿನ ಗಂಭೀರನಾಗಿದ್ದ ಅಣ್ಣ ಇಂದು ಉತ್ಸಾಹಪಟ್ಟಿರಬೇಕು.

——

ಹೊಸ ಕಾಲಕ್ಕೆ ಹೊಸ ಪುಸ್ತಕ
ಇದೀಗ ಸಿದ್ಧವಾಗಿದೆ ! ಕ್ಷರೆ ಮಾಡಿರಿ !!

ಗ್ರಾಮಪಂಚಾಯತಿ ಕೈಪಿಡಿ

(೧೯೫೨ರಲ್ಲಿಯ ಸುಧಾರಣೆ ಸಹಿತ)

ಇದರಲ್ಲಿ ಗ್ರಾಮ ಪಂಚಾಯತಿ ಸಂಪೂರ್ಣ ಕಾಯದೆ ಮತ್ತು ಸಂಬಂಧಿಸಿದ ಯಾವತ್ತೂ ನಿಯಮಗಳು ಇವೆ. ಮುಖ್ಯವಾಗಿ: ಗ್ರಾಮ, ಜನಾವಣೆ, ಪಂಚಾಯತಿ ಫಂಡು ಹಾಗೂ ರಕಮು, ಗಸ್ತಿ ಹಾಗೂ ಪಹರೆಯ ವೆಚ್ಚ, ಸೆಕ್ರೆಟರಿಯ ಕೆಲಸ ಹಾಗು ಕರಾರು, ನ್ಯಾಯ ಪಂಚಾಯತಿಯ ಸಂಪೂರ್ಣ ವಿಷಯ ಳರ ಮತ್ತು ಫೀ, ಪಂಚಾಯತಿಗೆ ಹಣದ ಸಹಾಯ, ಜಪ್ತಿ ಮತ್ತು ವಾರಂಟು, ಸ್ಪಾವಿಡೆಂಟ ಫಂಡು, ಪಂಚಾಯತಿ ರಿಕಾರ್ಡುಗಳ ವರ್ಗವಾರಿ– ಮೊದಲಾದ ಸಂಪೂರ್ಣ ಮಾಹಿತಿಯುಳ್ಳ ಕನ್ನಡದಲ್ಲಿಯ ಅಪೂರ್ವ ಪುಸ್ತಕ. ! !

ಅಂದವಾದ ಮುದ್ರಣ– ಗಟ್ಟಿಮುಟ್ಟಾದ ಹೊದಿಕೆ.– ೨೯೨ ಪುಟಗಳು.
ಬೆಲೆ : ೩–೧೨–೦ (ಅಂಚೆ ವೆಚ್ಚ ಬೇರೆ) ನಿಮ್ಮ ಪ್ರತಿಗಾಗಿ ಇಂದೇ ಬರೆಯಿರಿ.

ರಾಮಾಶ್ರಯ ಬುಕ್ ಡಿಪೋ, ಧಾರವಾಡ

ಪತ್ತೇದಾರಿ ಕಾದಂಬರೀ ಪ್ರಪಂಚದ ಕ್ರಾಂತಿ ಕಹಳೆ

ಪತ್ತೇದಾರನ ಪರಾಜಯ

ಪ್ರಾಗೈತಿಹಾಸಿಕ ಮಾಹಿಷ್ಮತಿ ನಗರ

೨ನೇ ಪುಟದಿಂದ]

ಮಾನವನ ಪ್ರಾಚೀನ ನಾಗರಿಕ ಸಂಸ್ಕೃತಿ

ಹೀಗೆ ಪಶ್ಚಿಮ ಭಾರತದಲ್ಲಿ ಸೌರಾಷ್ಟ್ರ ದಿಂದ ದಕ್ಷಿಣ ಗುಜರಾತ ಹಾಗು ಮಧ್ಯ ಭಾರತದ ನರ್ಮದೆ ಮತ್ತು ತಾಂಬಳಾ ನದಿಗಳ ಘಟ್ಟಗಳ ಮೇಲೆ ಹಾಯ್ದು ದಿಲ್ಲಿಯಿಂದ ಮುಂದೆ ಉತ್ತರ ಪ್ರದೇಶದ ಹಿಮಾಲಯ ಘಟ್ಟದ ಹತ್ತಿರಭಾಗದ ಗಂಗಾ ನದಿಯ ತಪ್ಪಲ ಭೂಮಿಯವರೆಗಿರುವ ಸರಾಸರಿ ೧೦೦೦ ಮೈಲಿನ ನಾಡಿನಲ್ಲಿ ಈ ಲೇಖಕನಿಗೆ ಪ್ರಾಗೈತಿಹಾಸಿಕ ಭಾರತೀಯ ಸಂಸ್ಕೃತಿಯ ಒಂದೇ ಪ್ರಕಾರದ ಅವಶೇಷಗಳು ಸಿಕ್ಕಿವೆ. ಈ ಸಂಸ್ಕೃತಿ ಸಿಂಧು ಘಟ್ಟದಲ್ಲಿಯ ಹಡಪ್ಪಾ ಸಂಸ್ಕೃತಿಯ ತರದ ಕೆಳಗೆ ಸಿಕ್ಕ ಸಂಸ್ಕೃತಿಯನ್ನೆ ಹೋಲುತ್ತಿದೆ. ಹಾಗು ಕ್ರಿ. ಪೂ. ೩೦೦೦ ವರ್ಷಕ್ಕೆ ಮುಂಚೆ ಅಥವಾ ಮೋಹೆನ್ ಜೋದ ಡೋ ಹುಟ್ಟುವದಕ್ಕಿಂತ ಮೊದಲು ಈ ಸಂಸ್ಕೃತಿ ನಾಗರಿಕ ಸಂಸ್ಕೃತಿಯ ವರೆಗೆ ತಲುಪಿತ್ತೆಂದೂ ಮಾಹಿಷ್ಮತಿಯ ಅವಶೇಷಗಳು ತೋರಿಸಿ ಕೊಟ್ಟಿವೆ. ಹಾಗೆಯೇ ಈ ಸಂಸ್ಕೃತಿ ಆರ್ಯರ ಸಂಸ್ಕೃತಿ ಎಂಬುದನ್ನು ಮಾಹಿಷ್ಮತಿಯ ಮತ್ತು ಹಸ್ತಿನಾಪುರದ ಅವಶೇಷಗಳು ತೋರಿಸಿವೆ. ಇರಾಕದಲ್ಲಿಯ ಸುಮೇರಿಯ ನಗರವು ಮಾನವ ಜಾತಿಯ ಎಲ್ಲಕ್ಕೂ ಮೊದಲಿನ ನಗರವೆಂದು ತಿಳಿಯಲ್ಪಟ್ಟಿತೆಂಬುದು ನಮಗೆ ಇನ್ನೂ ನೆನಪಿದೆ. ಆದರೆ ಆದೇ ನಗರವು ಕ್ರೀ. ಪೂ. ೩೦೦೦ ರ ಸುಮಾರಿಗೆ ಅಲ್ಲಿಯ ಗ್ರಾಮಗಳಿಂದ ಬೆಳಿಗೆ ಹೊಂದಿದ ನಗರವಾಗಿತ್ತು. ಇದನ್ನು ಲಕ್ಷ್ಯದಲ್ಲಿ ತಂದರೆ ಭಾರತೀಯ ಆರ್ಯ ನಗರಗಳಾದ ಮಾಹಿಷ್ಮತಿ ಮುಂತಾದವುಗಳು ಅದಕ್ಕಿಂತ ಪ್ರಾಚೀನವಾಗಿರದಿದ್ದರೂ ಸಮಕಾಲೀನವಾದರೂ ಆಗಿರಲೇಬೇಕು ಮತ್ತು ಪುರಾಣಗಳ ಹೇಳಿಕೆಯಂತೆ ಅಯೋಧ್ಯಾ,ಪ್ರತಿಷ್ಠಾನ (ಝಾನ್ಸೀ) ಕನೌಜ ಮುಂತಾದ ನಗರಗಳು ಗಂಗಾ ಘಟ್ಟದಲ್ಲಿದ್ದ ಮಾಹಿಷ್ಮತಿಗಿಂತ ಕೆಲವು ಕಾಲ ಮೊದಲು ಹುಟ್ಟಿರಬೇಕು. ಆದರೆ ಇನ್ನೂ ಅವುಗಳನ್ನು ಈ ಲೇಖಕನಿಗೆ ನೋಡುವುದಾಗಲಿಲ್ಲ.

ಪುರಾತನ ವಸ್ತು ಸಂಶೋಧಕರು ಮತ್ತು ಇತಿಹಾಸಕಾರರು ಒಂದು ದೊಡ್ಡ ಪ್ರಶ್ನೆ ಬಿಡಿಸುವುದು ಇನ್ನೂ ಉಳಿದುಕೊಂಡಿದೆ. ನಾಗರಿಕ ಸಂಸ್ಕೃತಿ ಅಥವಾ ಸುಧಾರಣೆಯೆಂಬುದು ಮಿಸ್ರ ದೇಶದವರು ಮಾನವ ಜಾತಿಗೆ ನೀಡಿದ ಕೊಡುಗೆಯೆಂದು ಮೊದಲು ತಿಳಿಯಲ್ಪಟ್ಟಿತ್ತು. ಆದರೆ ಮಿಸ್ರಕ್ಕಿಂತಲೂ ಇರಾಕದಲ್ಲಿಯ ಪ್ರಾಚೀನವಾದ ಸುಮೇರಿಯ ನಗರಗಳ ಅವಶೇಷಗಳು ಇದೇ ಶತಕದ ಆರಂಭದಲ್ಲಿ ದೊರಕಿದುವು. ಆದರೆ ಸುಮೇರಿಯ ಜಾತಿಯ ಲೇಖಗಳು ಓದಲ್ಪಟ್ಟು ಅವುಗಳಲ್ಲಿಯ ನಾಗರಿಕ ಸಂಸ್ಕೃತಿಯ ಸಂಶೋಧನ ಅಧಿಕಾಂಶ ದಲ್ಲಿ ನಡೆದ ಮೇಲೆ ಸುಮೇರಿಯದ ಜನರು ನಾಗರಿಕ ಸಂಸ್ಕೃತಿಯನ್ನು ತೆಗೆದುಕೊಂಡು ನೀರ್ದಾರಿಯಿಂದ ಇರಾಕಕ್ಕೆ ಬಂದಿದ್ದರೆಂಬುದು ತಿಳಿದು ಬಂದಿತು. ಇವರು ಯಾವ ಹೊರನಾಡಿನಿಂದ ಬಂದರೆಂಬುದು ಮಧ್ಯ ಏಶಿಯ, ಇರಾನ್, ಯುರೋಪ್, ಚೀನ ದೇಶಗಳಲ್ಲಿಯಾಗಲಿ ಅಥವಾ ಬೇರೆಡೆಗಳಲ್ಲಿ ಯಾಗಲಿ ದೊರಕಿಲ್ಲ. ಕ್ರಿ. ಶ. ೧೯೩೨ ರಲ್ಲಿ ಸಿಂಧು ಘಟ್ಟದಲ್ಲಿ ಸುಮೇರಿಯದ ಸಮಕಾಲಿಕ ಮತ್ತು ಅದನ್ನು ಹೋಲುವ ಭಾರತೀಯ ನಾಗರಿಕ ಸಂಸ್ಕೃತಿ ಹಡಪ್ಪಾ ಸಂಸ್ಕೃತಿ ರೂಪದಲ್ಲಿ ದೊರಕಿದ ಕೂಡಲೆ, ನಾಗರಿಕ ಸಂಸ್ಕೃತಿ ಸಿಂಧು ಘಟ್ಟದಲ್ಲಿಯೇ ಸುಮೇರಿಯ ಜನರ ಮುಖಾಂತರವಾಗಿ ಇರಾಕಕ್ಕೆ ಹೋಗಿರಬೇಕೆಂತಲೂ ಪಂಡಿತರು ನಂಬಿದ್ದರು. ಆದರೆ ಕ್ರಿ. ಶ. ೧೯೪೪ರ ವರೆಗೆ ಸಿಂಧು ಘಟ್ಟದಲ್ಲಿ ನಡೆದ ಸಂಶೋಧನೆಯಿಂದ ಹಡಪ್ಪಾ ಸಂಸ್ಕೃತಿ ತನ್ನ ನಾಗರಿಕ ಸಂಸ್ಕೃತಿಯನ್ನು ತೆಗೆದುಕೊಂಡು ಬೇರೆಡೆಯಿಂದ ಸಿಂಧು ಘಟ್ಟದ ಪ್ರದೇಶಕ್ಕೆ ಬರುವದಕ್ಕಿಂತ ಮೊದಲು ಬೇರೊಂದು ಸಂಸ್ಕೃತಿ ಇಲ್ಲಿ ನೆಲೆಸಿತ್ತೆಂಬುದು ಬೆಳಕಿಗೆ ಬಂದಿತು ಈ ಸಂಸ್ಕೃತಿಯ ಅವಶೇಷಗಳು ಸೌರಾಷ್ಟ್ರ ದಿಂದ ಗಂಗಾ ನದಿಯವರೆಗಿನ ಪ್ರದೇಶ ದಲ್ಲಿ ಈ ಲೇಖಕನಿಗೆ ಕಂಡು ಬಂದುವು. ಇದೇ ಸಂಸ್ಕೃತಿ ಹಡಪ್ಪಾ ಸಂಸ್ಕೃತಿ ಗಿಂತಲೂ ಮೊದಲು ಭಾರತದ ಒಳನಾಡಿನಲ್ಲಿ ನಾಗರಿಕ ಸಂಸ್ಕೃತಿಯವರೆಗೆ ಹೋಗಿ ಮುಟ್ಟಿತ್ತೆಂತಲೂ ಮತ್ತು ಇದೇ ಆರ್ಯ ಸಂಸ್ಕೃತಿಯೆಂತಲೂ ಸಿದ್ಧವಾಗುತ್ತಿದೆ. ಅಂದ ಮೇಲೆ ನಾಗರಿಕ ಸಂಸ್ಕೃತಿ ಮಾನವ ಜಾತಿಯ ಭಾರತೀಯರ ಕೊಡುಗೆಯೋ ಎಂಬ ಮತ್ತೊಂದು ಪ್ರಶ್ನೆ ಈಗ ನಮ್ಮೆದುರಿಗಿದೆ ಈಗ ಖಂಡಿತವಾಗಿ ಯಾವ ನಿರ್ಣಯಕ್ಕೂ ಬರುವಂತಿಲ್ಲ. ಇದಕ್ಕೂ ಹೆಚ್ಚಿನ ಸಂಶೋಧನೆ ನಡೆಯಬೇಕು.

ಭಾರತೀಯ ಆರ್ಯರ ಪ್ರಾಚೀನ ಸಂಸ್ಕೃತಿ

ಇದೆಲ್ಲವನ್ನೂ ನಿರೀಕ್ಷಿಸಿದರೆ ಆರ್ಯರ ಈಗಿನ ಇತಿಹಾಸದ ಸ್ವರೂಪವು ಬದಲಿರಬಹುದೇ ಎಂಬ ಪ್ರಶ್ನೆ ಬರುತ್ತದೆ. ಸಂಶೋಧನವು ಯಾವ ನಿರ್ಣಯವನ್ನು ಕೊಡುತ್ತದೆಂಬುದನ್ನು ನೋಡುವಾ. ಹಡಪ್ಪಾ ಸಂಸ್ಕೃತಿಯ ಸಂಶೋಧನೆಯ ತರುವಾಯ ಮೋಹೆನ್‌ಜೋದಡೋ ಮತ್ತು ಹಡಪ್ಪಾ ಇವುಗಳಲ್ಲಿ ದೊರೆತ ಪುರಾತನ ವಸ್ತುಗಳನ್ನು ಆಗಿನ ಭಾರತೀಯ ಪುರಾತನ ವಸ್ತು ಸಂಶೋಧನದ ಪ್ರಸಿದ್ಧೀಶಕರಾದ ಸರ್ ಜಾನ್ ಮಾರ್ಷಲ್ಲರವರು ಪರೀಕ್ಷೆಗಾಗಿ ವಿಶ್ವ ವಿಖ್ಯಾತ ಪಂಡಿತರಾದವರಿಗೆ ಒಪ್ಪಿಸಿದ್ದರು. ಮುದ್ರೆಗಳ ಮೇಲಿನ ಚಿತ್ರಲಿಪಿಯನ್ನು ಪರೀಕ್ಷೆಯ ಸಲುವಾಗಿ ಅವರು ಬ್ಯಾಬಿಲೋನಿಯಾ ಹಾಗು ಮಿಸ್ರದೇಶಗಳ ಪುರಾತನ ಸಂಶೋಧನೆ ಹಾಗು ಪಶ್ಚಿಮ ಏಶಿಯದ ಪುರಾತನ ಲಿಪಿತಜ್ಞರಾದ ವಿಶ್ವವಂದ್ಯ ವಿದ್ವಾನ್ ಡಾ|| ಸಿ. ಎಫ್. ಗ್ಯಾಡ್ ಮತ್ತು ಡಾ|| ಎಸ್. ಲ್ಯಾಂಗ್ಡನ್ ಇವರ ಕಡೆಗೆ ಕಳಿಸಿದ್ದರು. ಈ ಪಂಡಿತರು ಸಿಂಧು ಘಟ್ಟದಲ್ಲಿಯ ಲಿಪಿ ಮತ್ತು ಬ್ಯಾಬಿಲೋನಿಯಾದಲ್ಲಿ ದೊರೆತ ಲಿಪಿ ಇವುಗಳಿಂದ ಅನುಮಾನಿಸಬಹುದಾದ ಸಂಸ್ಕೃತಿಯುಳ್ಳ ಜನರ ಬಗೆಗೆ ಸಂಶೋಧನೆ ಮಾಡಿ ತಮ್ಮ ಮತವನ್ನು ತಿಳಿಸಿದ್ದಾರೆ. ಅವರಲ್ಲಿಯ ಅವತರಣಿಕೆಗಳು ವಿಚಾರಿಸಲು ಯೋಗ್ಯವಾಗಿವೆ.—

ಡಾ|| ಸಿ. ಎಫ್. ಗ್ಯಾಡ್ಡರ ಮತ

ಈ ಚಿತ್ರ ಲಿಪಿ ಹಲವು ಅಂಶದಲ್ಲಿ ವರ್ಣಮಾಲೆಯಾಗಿದೆ. ಸಾಧಾರಣವಾಗಿ ಮುದ್ರೆಗಳ ಮೇಲೆ ಕೆತ್ತಿದ ಹೆಸರುಗಳು ಯಾವುದೊ ಪ್ರಾಚೀನ ಆರ್ಯ ಭಾಷೆಯ ಶಬ್ದಗಳಾಗಿವೆ

ಎಸ್ ಲ್ಯಾಂಗ್ಡನ್ನರು ಹೀಗೆ ಅಭಿಪ್ರಾಯಪಡುತ್ತಾರೆ.- "ಏನೇ ಆಗಲಿ, ಭಾರತ ಆರ್ಯರು ಬಹಳ ಪ್ರಾಚೀನರೆಂದು ಇತಿಹಾಸವು ಹೇಳುತ್ತಿದೆ. ಹಾಗೆ ನಾವು ನಮ್ಮ ಲಕ್ಷ್ಯವನ್ನು ಇತ್ತ ಕೊಡಬೇಕು. ಎನಟೋಲಿಯ (ಕಿರಿ-ಏಶಿಯ) ದ ಮೇಲಿಂದ ಆರ್ಯರು ಭಾರತಕ್ಕೆ ಬಂದರೆಂಬ ಮಾತು ಸಿಂಧು ಘಟ್ಟದ ಸಂಶೋಧನೆಯಿಂದ ಅಸಂಬದ್ಧನೆಂದು ತಿಳಿಯುತ್ತಿದೆ. ಭಾರತದ ಆರ್ಯರೆಲ್ಲರೂ ಇಂಡೋ ಜರ್ಮನ್ ವರ್ಗದ (ಅಥವಾ ಆರ್ಯ ಸಮುದಾಯ) ಎಲ್ಲಕ್ಕೂ ಪ್ರಾಚೀನ ವ್ರತಿನಿಧಿಗಳಾಗಿದ್ದಾರೆ."

(ಮೇಲಿನ ಅವತರಣಿಕೆ ಎಸ್. ಲ್ಯಾಂಗ್ಡನ್ನರ "The Indis script" ಎಂಬ ಗ್ರಂಥದ ಪುಟ ೬೩ರಲ್ಲಿದೆ.)

—o—

ಜಯಕರ್ನಾಟಕ
ವಾರಪತ್ರಿಕೆಗೆ ಚಂದಾದಾರರಾಗಿರಿ

THE ANAND
Insurance Co., Ltd.
(Incorporated In India)
ESTD 1942
Chairman
Sir Chunilal B. Metha
Transacts:
FIRE, MARINE, MOTOR,
and other classes of
INSURANCE
Total Assets Exceed
Rs. 17,70,000
43 Mahatma Gandhi Road,
Fort BOMBAY
Apply for Agencies to the
MANAGING DIRECTOR

ದಿ ಆನಂದ್
ಇನ್‌ಶುರನ್ಸ್ ಕಂ. ಲಿ.
(ಇಂಡಿಯಾದಲ್ಲಿ ಘಟನೆ ಹೊಂದಿದ್ದು)
(ಸ್ಥಾಪನೆ ೧೯೪೨)
ಚೇರಮನ್ :
ಸರ್ ಚುನಿಲಾಲ್ ಬಿ. ಮೆಹ್ತಾ
ಬೆಂಕಿ, ನೌಕಾ, ಮೋಟರ್ ಮತ್ತು ಇತರ ಬಗೆಯ ವಿಮಾ ಕಾರ್ಯವನ್ನು ಮಾಡಲಾಗುವದು.
ಒಟ್ಟು ಆಸ್ತಿ ರೂ. ೧೭,೭೦,೦೦೦ ಮಿಕ್ಕಿದೆ
ಹೆಡ್ ಆಫೀಸು : ೪೩ ಮಹಾತ್ಮಾ ಗಾಂಧಿ ರೋಡ ಫೋರ್ಟ ಮುಂಬಯಿ
ಏಜನ್ಸಿ ಬೇಕಾದಲ್ಲಿ ಮ್ಯಾನೇಜಿಂಗ ಡಾಯರೆಕ್ಟರರಿಗೆ ಬರೆಯಿರಿ.

ಸಿದ್ಧೇಶ್ವರ ಎಂಪ್ಲಾಯ್ಮೆಂಟ್ ಕಂಪನಿ ಹುಬ್ಬಳ್ಳಿ
ಇವರ ಸೌಕರ್ಯ
ಭದ್ರತೆಯ ಹೆಗ್ಗುರುತು
ಶ್ರೀಮಂತಿಕೆ ಇದ್ದಲ್ಲಿ
ಸಿದ್ಧೇಶ್ವರ ಉಕ್ಕಿನ
ಟ್ರೇಝರಿಗಳು
ಬರಗ್ಲರ್‌ಪ್ರೂಫ್,ಫಾಯರ್‌ಪ್ರೂಫ್
ಟ್ರೇಝರಿಗಳು ಉಕ್ಕಿನ ಕಪಾಟು
ಕ್ಯಾಶ್ ಬಾಕ್ಸುಗಳು ನಮ್ಮಲ್ಲಿ ದೊರೆಯುತ್ತವೆ.


ಎಣ್ಣೆ ಕಾಳಿನ ಕೃಷಿ ಕೇಂದ್ರ ಸಮಿತಿಯ ಯೋಜನೆ

ಮುಂದಿನ ಐದು ವರ್ಷಾವಧಿಯೊಳಗೆ ಭಾರತದ ಎಣ್ಣೆ ಬೀಜಗಳ ಹುಟ್ಟುವಳಿಯನ್ನು ಈಗಿಗಿಂತ ಶೇಕಡಾ ೨೫ ರಷ್ಟು ಹೆಚ್ಚಿಸುವ ಬಗ್ಗೆ "ಕೇಂದ್ರ ಎಣ್ಣೆ ಕಾಳಿನ ಸಮಿತಿ" ಯು ಒಂದು ಯೋಜನೆ ತಯಾರಿಸಿದೆ. ಸದ್ಯಕ್ಕೆ ಶ್ರುತಿವರ್ಷಗಳ ಲಕ್ಷ ಟನ್ ಮುಖ್ಯ ಎಣ್ಣೆ ಕಾಳುಗಳು ಹುಟ್ಟುವಳಿ ಆಗುತ್ತಿವೆ ಇದನ್ನು ೫೬ ಲಕ್ಷ ಟನ್ನಿಗೆ ಏರಿಸುವಂತೆ ಈ ಯೋಜನೆ ತಯಾರು ಮಾಡಲ್ಪಟ್ಟಿದೆ.

ಸದ್ಯಕ್ಕೆ ಭಾರತದ ಪ್ರಜಾ ಜನರಿಗೆ ವರ್ಷಕ್ಕೆ ತಲಾ ೭ ಪೌಂಡಿನಷ್ಟು ತಿನ್ನುವ ಎಣ್ಣೆ ಸಂಪಾದಿಕೆಯಾಗುವಷ್ಟು ಹುಟ್ಟುವಳಿ ಆಗುತ್ತಿದೆ; ಪ್ರತಿಯೊಬ್ಬ ವ್ಯಕ್ತಿಯೂ ಉತ್ತಮ ಆರೋಗ್ಯದಿಂದಿರಬೇಕಾದರೆ, ವರ್ಷಕ್ಕೆ ೪೫ ಪೌಂಡು ಎಣ್ಣೆ ಬೇಕಾಗುವುದು ಈಗಿಗಿಂತ ತಲಾ ಕೇವಲ ೧ ಪೌಂಡಿನಂತೆ ಹೆಚ್ಚು ಎಣ್ಣೆ ದೊರೆಯಬೇಕಾದರೆ ೫೬೨೩೦ ಟನ್ನಿನಷ್ಟು ಹೆಚ್ಚು ಹುಟ್ಟುವಳಿ ಆಗಬೇಕಾಗುವುದು.

ಆದ್ದರಿಂದ ೭೪೦೦ ಈಗಿನಕ್ಕಿಂತ ಉತ್ತಮ ತರಗತಿಯ ಗಾಣಗಳನ್ನು ಚಾಲೂ ಮಾಡಿಸಬೇಕಾಗುವುದು. ಈ ಬಗ್ಗೆ ಮುಂದಿನ ಐದು ವರ್ಷಗಳಲ್ಲಿ ಈ ಸಮಿತಿಯು ೪೦ ಲಕ್ಷ ರುಪಾಯಿ ವೆಚ್ಚ ಮಾಡುವುದು

ಎಣ್ಣೆ ಕಾಳಿನ ಕ್ಷೇತ್ರ ವಿಸ್ತಾರ ಮಾಡದೆ, ಇಸ್ಟೇ ಕ್ಷೇತ್ರದಲ್ಲಿ ಈಗಿನಕ್ಕಿಂತ ಹೆಚ್ಚು ಎಣ್ಣೆ ಹೊರಡುವ ಉತ್ತಮ ತರಗತಿಯ ಬೀಜಗಳನ್ನು ಹಾಕಿಸಲಾಗುವುದು.

ಭಾರತದಲ್ಲಿರುವ ವಿದೇಶೀ ಬ್ಯಾಂಕುಗಳು

ಭಾರತದಲ್ಲಿ ವ್ಯವಹಾರ ಮಾಡುತ್ತಿರುವ ಪರದೇಶೀ ಬ್ಯಾಂಕುಗಳು ಕಳೆದ ಸಾಲಿನಲ್ಲಿ ಒಟ್ಟು ೩ ಕೋಟಿ ೧೯ ಲಕ್ಷ ರುಪಾಯಿ ಲಾಭ ಗಳಿಸಿವೆ. ಈ ಲಾಭವು ಭಾರತದ ಬ್ಯಾಂಕುಗಳು ಅದೇ ಸಾಲಿನಲ್ಲಿ ಗಳಿಸಿದ ಲಾಭದ ಅರ್ಧದಷ್ಟಾಗುವುದು. ಭಾರತದ ಬ್ಯಾಂಕುಗಳ ಒಟ್ಟು ಭಂಡವಳವು ೪೧ ಕೋಟಿ ೧೨ ಲಕ್ಷ ರುಪಾಯಿ ಆಗುವುದು. ಅವುಗಳು ಕಳೆದ ಸಾಲಿನಲ್ಲಿ ಒಟ್ಟು ೬ ಕೋಟಿ ೭೮ ಲಕ್ಷ ರುಪಾಯಿ ಲಾಭ ಮಾಡಿದುವು. ಇಂಪೀರಿಯಲ್ ಬ್ಯಾಂಕಿನ ಲಾಭವು ೧ ಕೋಟಿ ೩೦ ಲಕ್ಷ ರುಪಾಯಿ ಯಾಗಿದ್ದಿತು.

ಭಾರತದಲ್ಲಿ ೩೦ ವಿದೇಶೀ ಬ್ಯಾಂಕುಗಳು ಕೆಲಸ ನಡೆಸಿದ್ದು ಅವುಗಳ ಒಟ್ಟು ಠೇವು ೧೬೫ ಕೋಟಿ ರುಪಾಯಿ; ಇದು ಭಾರತದ ಬ್ಯಾಂಕುಗಳ ಒಟ್ಟು ಠೇವಿನ ಶೇಕಡಾ ೧೮ ರಷ್ಟಾಗುತ್ತದೆ.

ಈ ವಿದೇಶೀ ಬ್ಯಾಂಕುಗಳಿಂದ ಭಾರತ ಸರಕಾರಕ್ಕೆ ೧೯೫೧ ರಲ್ಲಿ ೪೦ ಲಕ್ಷ ರುಪಾಯಿ ಕರ ದೊರೆಯಿತು

ಆಸ್ಯಾ ಖಂಡದ ನಿರುದ್ಯೋಗಿ ಯುವಕರ ಸಂಖ್ಯೆ

ಆಸ್ಯಾ ಖಂಡದ ರಾಷ್ಟ್ರಗಳಲ್ಲಿ ಸದ್ಯಕ್ಕೆ ೫ ಕೋಟಿ ಯುವಕರು ತಕ್ಕ ನೌಕರಿಗಳ ತರಬೇತಿ ಇಲ್ಲದೆ ಇದ್ದಾರೆಂದು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘವು ವರದಿ ಮಾಡಿದೆ. ೧೫ ರಿಂದ ೧೯ ವರ್ಷ ವಯಸ್ಸಿನೊಳಗಿನ ಯುವಕರ ಸಂಖ್ಯೆಯು ಈ ಕೆಳಗಿನಂತಿದೆ:—

ಬರ್ಮಾ ೧೪೧೩೬೧೫,
ಸಿಲೋನ್ ೬೯೦೬೧೪
ಫೋರ್ಮೊಸಾ ೫೫೩೧೯೪,
ಭಾರತ ೪೦೫೫೫೧೭೭ ಜಪಾನ್ ೮೫೫೦೦೦೦
ಕೋರಿಯಾ ೨೫೫೦೪೨೫
ಫಿಲಿಪ್ಪೈನ್ ೧೯೯೧೭೦೦
ಥಾಯ್‌ಲೆಂಡ್ ೧೯೪೪೬೫೪
ಪೊರ್ನಿಯೊ ೫೦೦೦೦ ಮಲಯೆಳೆಳ್ಳಂಗಿ
ಸಿಂಗಾಪುರ ೮೮೮೭೭.

ಇಷ್ಟೊಂದು ದೊಡ್ಡ ಸಂಖ್ಯೆಯ ಯುವಕರು ಯಾವುದೇ ಬಗೆಯ ನೌಕರಿ ಮಾಡಲಿಕ್ಕೂ ತಕ್ಕ ಶಿಕ್ಷಣ ತರಬೇತಿ ಇಲ್ಲದೆ ಇರುವರು. ಹಾಗೂ ಇವರಿಗೆ ಏನಾದರೊಂದು ಬಗೆಯ ವೃತ್ತಿಯ ಶಿಕ್ಷಣ ಕೊಟ್ಟು, ಆಯಾ ದೇಶದ ಅಭಿವೃದ್ಧಿ ಯೋಜನೆಯ ಕಾರ್ಯಗಳಿಗೆ ಉಪಯೋಗಿಸಿಕೊಳ್ಳತಕ್ಕದ್ದು ಎಂದು ನವದಿಯಲ್ಲಿ ವಿವರಿಸಲಾಗಿದೆ.

ಧಾರವಾಡ ತಾಲೂಕಿನ ಮತ್ತು ಆಜೂಬಾಜೂದ ಹೊಲದೊಡೆಯರಿಗೆ ಮತ್ತು ರೈತರಿಗೆ

ಅಪೂರ್ವ ಸಂಧಿ

ಸಾಗಾಗದಿದ್ದ ಮತ್ತು ಪಡಬಿದ್ದ ಭೂಮಿಗಳನ್ನು

ಸಾಗುವಳಿಗೆ ತರುವ ಸಮಯವೀಗ ಪ್ರಾರಂಭಿಸಿದೆ

ಯಾಂತ್ರಿಕ ಬೇಸಾಯದ ಲಾಭ ಪಡೆಯಿರಿ

ಇನ್ನೊಂದು ಅಥವಾ ಎರಡು ತಿಂಗಳಲ್ಲಿ ಸಾಗಿದ್ದ ಭೂಮಿಗಳ ಬೇಸಾಯದ ಕೆಲಸ ಪ್ರಾರಂಭಿಸಿದರೆ, ಬುಲ್ ಡೋಜರ ವಗೈರೆ ಸಲಕರಣೆಗಳು ಸಕಾಲಕ್ಕೆ ನಿನುಗೆ ಸಿಗಲಾರವು; ಆದ್ದರಿಂದ—

ತಡಮಾಡದೆ ನಮ್ಮ ಟ್ರ್ಯಾಕ್ಟರ ಸಹಾಯ ಪಡೆಯಿರಿ

ಒಕ್ಕಲಿಗರಿಗೆ ಯಾಂತ್ರಿಕ ಬೇಸಾಯದ ಸಹಾಯ ಮಾಡುವ ಉದ್ದೇಶದಿಂದ, ನಾವು ಟ್ರಾಕ್ಟರುಗಳನ್ನೂ, ಆದರ ಅನೇಕ ಉಪಕರಣಗಳನ್ನೂ, ಬುಲ್‌ಡೋಝರ್ ವಗೈರೆ ಅನೇಕ ಸಾಧನಗಳನ್ನು ತರಿಸಿ ಒಕ್ಕಲಿಗರಿಗೆ ವಿವಿಧ ರೀತಿಯಿಂದ ಸಹಾಯ ಮಾಡುತ್ತಾ ಬಂದಿದ್ದೇವೆ.

ಟ್ರಾಕ್ಟರುಗಳಿಂದ, ಆಳವಾಗಿ ರಂಟೆ ಹೊಡೆಯುವದು, ಹರಗುವದು, ಎಡೆಹೊಡೆಯುವದು, ಬದವು ಬಾಂದು ಹಾಕುವದು ವಗೈರೆ ಎಲ್ಲ ಕೆಲಸವನ್ನು ಬಹಳ ಸೋವಿ ಭಾಡಿಗೆಯಿಂದ ಸಕಾಲಕ್ಕೆ ಕೆಲಸಮಾಡಿಕೊಡುತ್ತೇವೆ

ಈವಳಗಾಗಿ ಅನೇಕ ರೈತರ ನೂರಾರು ಎಕರೇದಲ್ಲಿ ಅತಿಸಮಾಧನಕಾರಕವಾಗಿ ಕೆಲಸಮಾಡಿದ್ದೇವೆ.

ಧಾರವಾಡ ತಾಲೂಕಿನ ಮತ್ತು ಆಜೂಬಾಜುದ ರೈತರು;ಕೂಲಿ ಕೆಲಸದವರ ಮತ್ತು ಮಳೆಯ ಅನಿಶ್ಚಿತತೆಯ ಈ ಕಾಲದಲ್ಲಿ ಅವಶ್ಯವಾಗಿ ನಮ್ಮ ಯಾಂತ್ರಿಕ ಸಹಾಯ ಪಡೆಯಿರಿ.

ಆಗಾವ ಆರ್ಡರ ಕೊಟ್ಟಲ್ಲಿ; ಸಕಾಲಕ್ಕೆ ನಮ್ಮ ಟ್ರಾಕ್ಟರಲಭ್ಯವಾಗಬಹುದು.

ಹೆಚ್ಚಿನ ಮಾಹಿತಿಗೆ ನಮ್ಮ ಆಫಿಸಿನಲ್ಲಿ ವಿಚಾರಿಸಿರಿ.

"ಫ್ಲ್ಯಾಗ ಬ್ರ್ಯಾಂಡ" ಕಡಿಮೆ ಬೆಲೆಯಲ್ಲಿ ರುಚಿಕರ ಚಹಾ

ನಾವು ಈಗ ಫ್ಲ್ಯಾಗ ಬ್ರ್ಯಾಂಡ ಚಹಾದ ಡಿಸ್ಟ್ರಿಕ್ಟ ಏಜಂಟರಿದ್ದು ಬೇರೆ ಬೇರೆ ಸ್ಥಳಗಳಲ್ಲಿ ಏಜಂಟರನ್ನು ನೇಮಿಸತಕ್ಕವರಿದ್ದೇವೆ. ದರ ವ ಏಜನ್ಸಿ ವಿವರಗಳಿಗೆ ಬರೆಯಿರಿ ಅಥವಾ ಸಮಕ್ಷಮ ಭೆಟ್ಟಿಯಾಗಿರಿ.

ಮೆ!! ಡಿಸ್ಟ್ರಿಕ್ಟ ಮ್ಯಾನೆಜ್ಮೆಂಟ ಸಾಹೇಬರವರು ಧಾರವಾಡತಾಲೂಕಿನಲ್ಲಿ ರೈತರಿಗೆ ಕಬ್ಬಿಣ ಸಾಮಾನುಗಳನ್ನು ಹಂಚುವಿಕೆಯಸಲುವಾಗಿ ಈಯೂನಿಯನ್‌ವನ್ನು ಏಜಂಟರನ್ನಾಗಿ ನಿಯಮಿಸಿದ್ದರಿಂದ ಈ ಯೂನಿಯನ್‌ದಲ್ಲಿ ಹಳಿ, ಗಡ್ಡಿಪಟ್ಟಿ, ಇರಸು, ತಗಡು, ಸಿಮೆಂಟ ವಗೈರೆ ಉಪಯುಕ್ತ ಸಾಮಾನುಗಳು ದೊರೆಯುತ್ತವೆ. ಕಾರಣ ಈ ಹದ್ದಿಯಲ್ಲಿಯ ರೈತಬಾಂಧವರು ಈ ಮಾಲುಗಳನ್ನು ಯೂನಿಯನ್‌ದಿಂದ ದೊರಕಿಸಿಕೊಳ್ಳಬೇಕಾಗಿ ವಿನಂತಿ

ದಿ ಧಾರವಾಡ ಡಿಸ್ಟ್ರಿಕ್ಟ ಕೋ-ಆಪರೇಟಿವ್ವ ಹರಚೇಜ ಅಂಡ ಸೇಲ ಯೂನಿಯನ್ ಲಿಮಿಟೆಡ್

ಮ್ಯಾನೇಜರು

ವಿಳಾಸ : C/o ಟಿಂಗಿನಕಾಯಿ ಪ್ರೆಸ್ ಧಾರವಾಡ

★ ವಾರದ ವಿಶ್ವ—ಸಂ. ರಾ. ಸಂಸ್ಥೆಯಲ್ಲಿ ★

ಕೋರಿಯಾ ಸಮಸ್ಯೆ—ಆಫ್ರಿಕಾ ಪ್ರಶ್ನೆ—ಕಾಶ್ಮೀರದ ಕೊಡಕು

ಕೋರಿಯಾದಲ್ಲಿ "ತಾತ್ಕಾಲಿಕ ಯುದ್ಧ ವಿರಾಮ"ವು ಜಾಹೀರು ಮಾಡಲ್ಪಟ್ಟು ಒಂದೂವರೆ ವರ್ಷ ಕಳೆಯಿತಾದರೂ, ಒಂದೆಡೆ ಅಮೇರಿಕನ್ ಸೈನ್ಯಗಳು ಉತ್ತರ ಕೋರಿಯದ ಯುದ್ಧ ಸರಂಜಾಮುಗಳ ಸಂಗ್ರಹ ಕೇಂದ್ರಗಳ ಮೇಲೆ ವಿಮಾನ ಧಾಳಿ ನಡೆಸುತ್ತಲೇ ಇವೆ; ಅದಕ್ಕೆ ಪ್ರತಿಯಾಗಿ, ದಕ್ಷಿಣ ಕೋರಿಯದ ಕೇಂದ್ರಗಳ ಮೇಲೆ ಧಾಳಿ ಇಡುತ್ತಲೇ ಹೋಗಿವೆ ! ಇದೊಂದು ಸೊಡ್ಡ ವಿಚಿತ್ರವೇ ಸರಿ ! ಎರಡೂ ಕಡೆಯವರೆ ವಶದಲ್ಲಿ ಸೆರೆಯಾಗಿ ಸಿಕ್ಕಿರುವ ಯುದ್ಧ ಕೈದಿಗಳನ್ನು ಅವರವರ ಪಕ್ಷಕ್ಕೆ ಬಿಟ್ಟುಕೊಡುವ ವಿಷಯದಲ್ಲಿ ಉಂಟಾಗಿರುವ ತೊಡಕನ್ನು ಬಿಡಿಸುವ ಬಗ್ಗೆ ಪಾನ್‌ಮುಂಜಾನದಲ್ಲಿ ಕಳೆದ ಒಂದುವರ್ಷದಿಂದಲೂ ಎರಡೂ ಕಡೆಯ ಸೈನ್ಯಾಧಿಕಾರಿಗಳೊಳಗೆ ಚರ್ಚೆ ನಡೆಯುತ್ತಲೇ ಇದೆ. ಹೀಗೆ, ಹೆಸರಿಗೆ ಮಾತ್ರವೇ ಕೋರಿಯದಲ್ಲಿ ತಾತ್ಕಾಲಿಕ ಶಾಂತತೆ ಇದೆ ಎಂಬುದನ್ನು ಯಾರೂ ಮರೆಯಕೂಡದು ! ಸಂ. ರಾ. ಸಂಸ್ಥೆಯಲ್ಲಿ ಈ ಕುರಿತಾಗಿಯೇ ಕಳೆದ ವಾರ ವಿಡೀ ಚರ್ಚೆ ನಡೆಯಿತು. ಅದೇ ವೇಳೆಗೆ, ಅಮೇರಿಕದ(ಸಂ ಸಂಸ್ಥಾನಗಳ) ಹೊಸ ರಾಷ್ಟ್ರಾಧ್ಯಕ್ಷರು ಪತ್ರಿಕಾ ಪ್ರತಿನಿಧಿಗಳಿಗೆ ಇತ್ತ ಒಂದು ಸಂದರ್ಶನದಲ್ಲಿ, "ಕೋರಿಯಾ ಯುದ್ಧವನ್ನು ಆಸ್ಯಾದ ಎರಡು ಕಕ್ಷಿಗಳೊಳಗಿನ ಯುದ್ಧವೆಂದು ಪರಿಮಿತ ಗೊಳಿಸಬೇಕು" ಎಂದಿದ್ದಾರೆ. ಅರ್ಥಾತ್, ಸಂ.ರಾ.ಸಂಸ್ಥೆಯು ದಕ್ಷಿಣ ಕೋರಿಯಕ್ಕೆ ಕೊಟ್ಟಿರುವ ಬೆಂಬಲವನ್ನು ಹಿಂತೆಗೆದು ಕೊಳ್ಳಬೇಕೆಂಬುದೇ ಅವರ ಮಾತಿನ ತಾತ್ಪರ್ಯವೆನಿಸುತ್ತದೆ. ಆದರೆ, ಆದೇವೇಳೆಗೆ ಪೊರ್ಮೋಸಾದಲ್ಲಿ ಆಶ್ರಯ ಹೊಂದುತ್ತಿರುವ (ಚೀಣಾದಿಂದ ಸೋತು ಓಡಿ ಬಂದಿರುವ) ಜಪಾನಿಯಾಂಗರಿಗೆ ಯುದ್ಧೋಪಕರಣ ಗಳನ್ನೊದಗಿಸಿ ಕೊಟ್ಟು, ಅವರ ಮುಖಾಂತರವೇ ಉತ್ತರ ಕೋರಿಯ ಹಾಗೂ ಅದರ ಬೆಂಬಲಕ್ಕಿರುವ ಕಮ್ಯುನಿಸ್ಟ ಚೀಣಾವನ್ನು ಇದಿರಿಸಬೇಕೆಂಬುದೇ ಅಧ್ಯಕ್ಷ ಐಸೆನ್ ಹಾವರರ ಯುಕ್ತಿಯಾಗಿ ತೋರುತ್ತದೆ ! ಕೋರಿಯಾ ಪ್ರಶ್ನೆಯನ್ನು ಬಗೆಹರಿಸಬೇಕಾದರೆ, ಸಂ.ರಾ ಸಂಸ್ಥೆಯಲ್ಲಿ ಇಂದಿನ ಚೀಣಾಕ್ಕೂ ಪ್ರಾತಿನಿಧ್ಯ ಕೊಡಬೇಕೆಂದೂ, ಜಪಾನಿಯಾಂಗರ ಪ್ರತಿನಿಧಿಯು ಇಂದಿನ ಚೀಣಾದ ಪ್ರತಿನಿಧಿ ಎನಿಸಲಾರನೆಂದೂ ವಿಜಯಲಕ್ಷ್ಮಿ ಪಂಡಿತ ಅವರು ಖಂಡತುಂಡ ಮಾತೆನ್ನಾಡಿದರು. ಈ ಮಧ್ಯೆ, ಭಾರತ ಸರಕಾರವು ಕಮ್ಯುನಿಸ್ಟ ಚೀಣಾದ ಮುಖ್ಯ ಪ್ರಧಾನರೊಡನೆ ಈ ಬಗ್ಗೆ ಸಂಧಾನ ಪ್ರಯತ್ನಮಾಡುತ್ತಿರುವುದಾಗಿಯೂ ಸುದ್ದಿ ಪ್ರಕಟವಾಗಿದೆ. ಆದರೆ, ಆಸಂಧಾನವು ಯಶಸ್ವಿಯಾಗಬೇಕಾದರೆ, ಚೀಣಾಕ್ಕೆ ಸಂ.ರಾ.ಸಂಸ್ಥೆಯಪ್ರಾತಿನಿಧ್ಯ ಕೊಟ್ಟೇತೀರಬೇಕೆಂದೂ ಪಂಡಿತ ನೆಹ್ರು ಗಳುತ್ತೀ ಮತಿ ಪಂಡಿತರ ಮುಖಾಂತರ ಸಂ.ರಾ.ಸಂಸ್ಥೆಗೆ ತಿಳಿಸಿರುವರು. ಸಂಯುಕ್ತರಾಷ್ಟ್ರ ಸಂಸ್ಥೆಯ ಅಧ್ಯಕ್ಷರಾಗಿರುವ ಮಿ॥ಲೆಸ್ಟರ್ ಪಿಯರ್ಸನ್ನರು ಇದೇ ೧೧ನೇ ದಿನಾಂಕ ಮಾಡಿದ ರೇಡಿಯೋ ಭಾಷಣದಲ್ಲಿ ಭಾರತ ಸರಕಾರದ ಸಂಧಾನ ಪ್ರಯತ್ನವನ್ನು ಹೊಗಳಿರುವುದು ಲಕ್ಷಿಸುವಂತಿದೆ. ಅದೇ ದಿನ ಭಾರತ ಸರಕಾರದ ಪ್ರತಿನಿಧಿಗಳಲ್ಲೊಬ್ಬರಾದ ಬ್ಯಾರಿಸ್ಟರ್ ವಿ.ಕೆ. ಕೃಷ್ಣಮೇನನ್ನರು ರತಿಯಾದ ವಿದೇಶಾಂಗ ಮಂತ್ರಿಗಳಾದ ಮಿ॥ವಿಶಿನ್‌ಸ್ಕಿಯವರನ್ನು ಭೆಟ್ಟಿ ಮಾಡಿ ೨೦ ನಿಮಿಟು ತನಕ ಅವರೊಡನೆ ಈ ಕುರಿತಾಗಿಯೇ ಮಾತುಕತೆ ಯಾಡಿದರೆಂದು ಪ್ರಕಟವಾಗಿದೆ. ಅಂತೂ, ಕೊರಯದ ಸಮಸ್ಯೆಯ ಪರಿಹಾರದ ಶುಭ ಚಿಹ್ನೆತೋರಿದೆ.

ಸಂ. ರಾ. ಸಂಸ್ಥೆಯ ಸಮಾನ್ಯ ಸಭೆಯಲ್ಲಿ ಶ್ರೀಮತಿ ಪಂಡಿತರು ಭಾರತ ಸರಕಾರದ ನಿಲುಮೆಯ ನ್ನು ಮತ್ತೊಮ್ಮೆ ಸ್ಪಷ್ಟ ಪಡಿಸುತ್ತ, "ಚೀನದ ಇಂದಿನ ಜನತಾ ಸರಕಾರಕ್ಕೆ ಈ ಸಂಸ್ಥೆಯ ಸದಸ್ಯತ್ವವನ್ನು ಇನ್ನಾದರೂ ಕೊಡಬೇಕು. ಅದಕ್ಕೆ ತಪ್ಪಿದಲ್ಲಿ ಕೋರಿಯಾದ ಪ್ರಶ್ನೆಯ ಚರ್ಚೆಯು ತೀರ ಕೃತ್ರಿಮ ವಾದೀತು ಆದ್ದರಿಂದ, ಜಪಾನಿಯಾಂಗರ ಪ್ರತಿನಿಧಿಯೇ ಇಂದಿನ ಚೀನಾದ ಪ್ರತಿನಿಧಿಯೆಂದು ಹುಟ ಹಿಡಿಯುವುದು ಅನ್ಯಾಯವೇಸರಿ" ಎಂದರು. ಶ್ರೀಮತಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಹೀಗೆಂದರುಇಂಡೋನೇಶಿಯಾಕ್ಕೂ ಸಂಪೂರ್ಣ ಸ್ವಾತಂತ್ರ್ಯವನ್ನು ದೊರಕಿಸಿ ಕೊಡಲು ಯಶಸ್ವಿಯಾಗಿ ಪ್ರಯತ್ನಿಸಿದ್ದ ಈ ಸಂ. ರಾ. ಸಂಸ್ಥೆಯು ಫ್ರೆಂಚರ ಆಧೀನವಲ್ಲಿ ನರಳುತ್ತಿರುವ ಉತ್ತರ ಆಫ್ರಿಕದ ಟ್ಯುನಿಶಿಯ ಹಾಗೂ ಮೊರಕ್ಕೋ ದೇಶಗಳ ಸ್ವಾತಂತ್ರ್ಯದ ಚಳವಳಿಯ ಬಗ್ಗೆ ವಿರೋಧಮಾಡುತ್ತಿರುವುದುಯೋಗ್ಯವಲ್ಲ. ದಕ್ಷಿಣಾಫ್ರಿಕಾ ಸರಕಾರವು ಜಾರಿಗೆ ತಂದಿರುವ ವರ್ಣ ಜನರ ಆಸ್ತಿಪಾಸ್ತಿಗಳನ್ನು ಕಸಿಯುವ ಹಾಗೂ ಅವರನ್ನು ಪ್ರತ್ಯೇಕಿಸಿಡುವ ವರ್ಣದ್ವೇಷದ ಕಾಯದೆಗಳ ವಿಷಯವು ಆ ಸರಕಾರದ ಆಂತರಿಕ ಸಮಸ್ಯೆ ಎಂದು ವಾದಿಸುವದು ಸರಿಯಲ್ಲ. ೧೯೪೮ರಲ್ಲಿಯೇ ಈ ಸಂಸ್ಥೆಯು ಆ ಪ್ರಶ್ನೆಯನ್ನೂ ಚರ್ಚೆಗೆ ತೆಗೆದುಕೊಂಡ್ದಿತು, ಹಾಗೂ, ಅದನ್ನು ಪರಸ್ಪರ ವಿಚಾರ ವಿನಿಮಯದಿಂದ ಬಗೆಹರಿಸಿಕೊಳ್ಳುವಂತೆ ದಕ್ಷಿಣಾಫ್ರಿಕಾ ಸರಕಾರ, ಭಾರತ ಹಾಗೂ ಪಾಕಿಸ್ತಾನ ಸರಕಾರಗಳ ಪ್ರತಿನಿಧಿಗಳ ದುಂಡುಮೇಜು ಪರಿಷತ್ತುನೇರಿ ನಿರ್ಣಯಕ್ಕೆ ಬರುವವರೆಗೆ ಈ ಕಾಯದೆಗಳನ್ನು ಜಾರಿಗೆ ತರಬಾರದೆಂದು ದಕ್ಷಿಣಾಫ್ರಿಕಾ ಸರಕಾರಕ್ಕೆ ಆದೇಶವಿತ್ತಿದ್ದಿತು. ಈಗ ತನ್ನ ಆ ಆದೇಶಕ್ಕೆ ವಿರುದ್ಧವಾಗಿ ವರ್ತಿಸುವ ಇಂದಿನ ಘೋರಣವು ಸರಿಯಲ್ಲ"ಎಂದರು. ಸಂ.ರಾ.ಸಂಸ್ಥೆಯಲ್ಲಿ ಬ್ರಿಟನ್‌ಮತ್ತು ಸಂಯುಕ್ತ ಸಂಸ್ಥಾನದ ವರ್ಚಸ್ಸೇ ವಿಶೇಷವಾಗಿರುವುದರಿಂದ, ಆಸಂಸ್ಥೆಯ ಯಶಾಪಯಶಗಳೂ, ಜಾಗತಿಕ ಸಮರ ಶಾಂತಿಗಳೂ ಆ ವುಗಳನ್ನೇ ಕೂಡಿವೆ ಎಂದೂ ಆದ್ದರಿಂದ ಅವುಗಳು ಬಹಳಹೊಣೆಯರಿತು ವರ್ತಿಸಬೇಕೆಂದೂ ವಿನಂತಿಸಿದರು.

ಶ್ರೀಮತಿ ಪಂಡಿತರ ವಾದ ಸರಣಿಯ ಪರಿಣಾಮವಾಗಿ, ಸಂ. ರಾ. ಸಂಸ್ಥೆಯ "ವಿಶೇಷ ರಾಜಕೀಯ ಸಮಿತಿ" ಯಲ್ಲಿ ಭಾರತ, ಪಾಕಿಸ್ತಾನ ಹಾಗೂ ಇತರ ೧೧ ಆರಬ ರಾಷ್ಟ್ರಗಳ ಪ್ರತಿನಿಧಿಗಳು ಒಟ್ಟಾಗಿ ತಯಾರಿಸಿದ ಗೊತ್ತುವಳಿಯು ಮಂಜೂರು ಮಾಡಲ್ಪಟ್ಟಿತು. ಗೊತ್ತುವಳಿಯ ಪ್ರಕಾರ, ದಕ್ಷಿಣಾಫ್ರಿಕ ಸರಕಾರದ ವರ್ಣ ದ್ವೇಷ ಘೋರಣದ ವಿಚಾರ ವಿನಿಮಯ ಮಾಡಲು ಮೂರು ಸರಕಾರಗಳ (ಭಾರತ, ಪಾಕಿಸ್ತಾನ, ದ. ಆಫ್ರಿಕ) ಪ್ರತಿನಿಧಿಗಳ ಒಂದು ಸದ್ಭಾವನ ಸಮಿತಿಯು ನೇಮಿಸಲ್ಪಡುವುದು. ಹಾಗೂ ಆ ಸಮಿತಿಯು ವರದಿ ಮಾಡುವವರೆಗೆ, ದ ಆ. ಸರಕಾರವು ಈ ಕಾಯಿದೆಗಳನ್ನು ತಡೆಹಿಡಿಯತಕ್ಕದ್ದು. ಆದರೆ, ದ. ಆಫ್ರಿಕ ಸರಕಾರದ ಪ್ರತಿಕ್ರಿಯೆಯು ಇನ್ನೂ ತಿಳಿದು ಬಂದಿಲ್ಲ. ಈ ಗೊತ್ತುವಳಿಯ ಪರವಾಗ್ನಿ ೪೬ ಮತಗಳೂ, ವಿರುದ್ಧ ೧ ಮತವೂ ಬಿದ್ದು ೧೩ ರಾಷ್ಟ್ರಗಳ ಪ್ರತಿನಿಧಿಗಳು ತಟಸ್ಥವಾಗಿ ಉಳಿದರು.

ಕಾಶ್ಮೀರ ಸಮಸ್ಯೆಯ ಕುರಿತಾಗಿ ಕಳೆದವಾರ ಭದ್ರತಾ ಮಂಡಳದಲ್ಲಿ ವಿಶೇಷ ಮಹತ್ವದ ನಿರ್ಣಯವೇನೂ ಆಗಲಿಲ್ಲಾ

ದಿ ಬೆಳಗಾಂವ ಡಿಸ್ಟ್ರಿಕ್ಟ್
ಸೆಂಟ್ರಲ್ ಕೋ-ಆಪ. ಬ್ಯಾಂಕ, ಲಿ.

೧೦೫ ಖಾಂಥೂರಗಲ್ಲಿ, ಬೆಳಗಾಂವ

ಶಾಖೆಗಳು :

ಅಥಣಿ, ಕಾಗವಾಡ, ಕುಡಚಿ, ಗೋಕಾಕ, ನಿಪ್ಪಾಣಿ, ಸಂಕೇಶ್ವರ, ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ, ಸವದತ್ತಿ, ಕಟಕೋಳ, ರಾಮದುರ್ಗ, ನಂದಗಡ, ಯಮಕನಮರ್ಡಿ, ಬೆಳಗಾಂವ ಬಝಾರ, ... ಲಿಂಗರಾಜ ಕಾಲೇಜ .

ಪ್ರಗತಿ ನೋಟ

ಅಧಿಕೃತ ಶೇಅರ ಭಂಡವಲ	೧೦,೦೦,೦೦೦
ಸಂದಾಯವಾದ ಶೇಅರ ಭಂಡನವಲು	೫,೪೬,೯೫೦
ಕ್ರಮಬದ್ಧ ಹಾಗೂ ಇತರ ಕಾದಿಟ್ಟ ನಿಧಿಗಳು	೬,೩೮,೧೧೬
ಒಟ್ಟು ಠೇವು ಹಣ	೪೯,೬೬,೩೬೩
ದುಡಿಯುವ ಬಂಡವಲು	೧,೧೪,೫೨,೪೪೫

ಈ ಬ್ಯಾಂಕಿನ ಯಾವತ್ತೂ ಆಫೀಸುಗಳಲ್ಲಿ

ಚಾಲತೀ ಸೇವಿಂಗ್ಸ ಬ್ಯಾಂಕ, ಫಿಕ್ಸ್ಡ, ರಿಕರಿಂಗ ಮತ್ತು ಮುದ್ದತಿ ಠೇವುಗಳು ಸ್ವೀಕರಿಸಲ್ಪಡುವವು. ಎಲ್ಲತರದ ಬ್ಯಾಂಕಿಂಗ ವ್ಯವಹಾರ ಮಾಡಲಾಗುವದು.

ಬೆಳಗಾಂವ ಬಝಾರ ಶಾಖೆಯಲ್ಲಿ

ಭದ್ರತೆಯಿಂದ ಕಾಯುವದಕ್ಕೆ ಲಾಕರುಗಳು ಸಿಗುತ್ತವೆ.

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಆಫೀಸುಗಳಲ್ಲಿ ವಿಚಾರಿಸಿರಿ :

ಪಿ. ಬಿ. ಉಗರಗೋಳ
ಚೇರಮನ್

ವಾರದ ಭವಿಷ್ಯ

ಸಾಪ್ತಾಹಿಕ ಗ್ರಹಚಾರ

ಲೇಖಕರು : ಶ್ರೀ. ಬಿ. ಆರ್. ಜೋಶಿ, ಗಲಗಲಿ. ಜಿ. ವಿಜಾಪುರ

(ನಿರಯನ ರಾಶಿಯಿಂದ)

ತಾ|| ೨೦–೧೧–೫೨ ರಿಂದ ೨೬–೧೧–೫೨ರ ವರೆಗೆ

(ಪ್ರಶ್ನೆ ಕಾಲವನ್ನಾಗಲಿ ಜನ್ಮ ಕಾಲವನ್ನಾಗಲಿ ತಿಳಿಸಿ ಮುಂಗಡ ೫ ರೂ. ಕಳಿಸುವವರು ನಮ್ಮ ಸಲಹೆಯನ್ನು ಪಡೆಯಬಹುದು)

ಮೇಷ

೨೬–೪ ದಿನಾಂಕಗಳು ಸುಖಕರವಾದ ಸಂಗತಿಗಳು. ಪ್ರತಿಷ್ಠೆ ಬೆಳೆಯುವದು. ೨೨–೨೫ ತೊಂದರೆಯ ದಿನಗಳು ೯ ರಲ್ಲಿ ಬುಧನು ವಕ್ರಿ ಬಾಲಕರು ವಿದ್ಯಾರ್ಥಿಗಳು ನಿಮಗೆ ತೊಂದರೆಗಳನ್ನು ಕೊಡಬಹುದು. ಶುಕ್ರನು ೯ ರಲ್ಲಿ ಶುಭ್ರ ಪದಾರ್ಥಗಳ ವ್ಯವಹಾರದಲ್ಲಿ ಲಾಭ. ಬಿಳಿ ಜನರು (ಯುರೋಪಿಯನ್ ಖಂಡದಂತಹ) ನಿಮಗೆ ಅನುಕೂಲವಾಗಿ ನಡೆಯುವರು ಗುರು ರಾಶಿಯಲ್ಲಿ, ಬಂದ ತೊಂದರೆಗಳನ್ನು ನಿವಾರಿಸಲು ಕವಚದಂತೆ ಸಂರಕ್ಷಕನಾಗುವನು. ೨೭ ದಿನಾಂಕ ಆರ್ಥಿಕ ಲಾಭ ಉದ್ಯೋಗದಲ್ಲಿ ಪ್ರಗತಿ. ಶುಕ್ರ ಗುರು ತ್ರಿಕೋನ ತ್ರಿಕೋನ. ಶನಿ ಪ್ಲೂಟೋ ಲಾಭ ಯೋಗಗಳು ನಿಮ್ಮ ಪ್ರಗತಿಗಾಗಿ ಸಹಕರಿಸುವವು.

ವೃಷಭ

ರಾಶಿಯ ಒಡೆಯನು ೮ ರಲ್ಲಿರುವನು. ಆತ್ಮ ಪ್ರಗತಿಗಾಗಿ ಹೆಣಗಾಡಬೇಕಾಗುವದು ೫ ನೇ ಶನಿ ನಿಮ್ಮ ಹೆಣಗಾಟಕ್ಕೆ ಯಶಸ್ಸು ಕೊಡುವನು. ಜನ್ಮತಃ ೮ ರಲ್ಲಿ ಶನಿ ಇದ್ದವರು ಬಹಳ ಪ್ರಯತ್ನ ಶೀಲರಾಗುವರು. ವೃಷಭ ರಾಶಿಗೆ ಯೋಗಕಾರಿ ಶನಿ ಸ್ಥಾಪಿಲಿನ್ನರ ಕುಂಡಲಿ ನೋಡಿರಿ. ವೃಷಭ ತುಲಾ ಲಗ್ನದಲ್ಲಿ ಹುಟ್ಟಿದವರಿಗೆ ಶನಿ ಸಮುಚಿತ ರಾಶಿಯಲ್ಲಿ ಸಮುಚಿತ ಭಾವದಲ್ಲಿ ಪ್ರವೇಶಿಸಿ ಅವರು ಜಗದಲ್ಲಿ ಮುಂದಾಳುಗಳಾಗುವರು. ೪ ದಿನಾಂಕ ರವಿ ಮಂಗಳ ಶುಭಯೋಗದಿಂದ ನಿಮ್ಮ ಪರಾಕ್ರಮಕ್ಕೆ ಲಾಭ ಇದರಂತೆ ೨೭ ಸ್ತ್ರೀ ಬಂಧುಗಳ ಸಹಕಾರದಿಂದ ನೀವು ಮುಂದಾಡಿಯನ್ನಿಡುವಿರಿ. ೨೭ ನಿಮ್ಮ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿರಿ.

ಮಿಥುನ

ರಾಶೀಶನು ೬ ರಲ್ಲಿ ಯಶಸ್ಸು ಶ್ರಮ ಸಾಧ್ಯ ೨೬ ನೇ ದಿನಾಂಕ ಶುಭವಾದದ್ದು. ೨೨ ಪ್ರಕೃತಿ ಸ್ವಾಸ್ಥ್ಯದ ಬಗ್ಗೆ ಕಾಳಜಿ ತಕ್ಕೊಳ್ಳಬೇಕು ೨೨–೨೬ ಚಂದ್ರಾಷ್ಟಮ ದಿವಸಗಳು. ಈ ವಾರ ವಿಚಾರ ಮಾಡಿ ಮುಂದಡಿಯಿಡಲು ಕಲಿಯಿರಿ. ಗುರು ನಿಮಗೆ ಕೆಲಮಟ್ಟಿಗೆ ಲಾಭ ಸೂಚಕನು ಮಿತ್ರರೂ ಸಜ್ಜನರೂ ಸಹಾಯಕರಾಗುವರು ಹೊಸ ಕೆಲಸಗಳಿಂದ ಕೀರ್ತಿಯೂ ಬರಬಹುದು. ಬುಧನು ನಿಮ್ಮ ಕೆಲಸಗಳಲ್ಲಿ ಅಲಸ್ಯ ಮಾಡಿಸಿದರೂ ಕೊನೆಯಲ್ಲಿ ಶುಭ್ರವಾಗಿ ಬರುವಂತೆ ಮಾಡುವನು. ವಿಶೇಷವಾಗಿ ಅವಸರ ಮಾಡದೆ ವಿನಯ ತೋರಿಸಬೇಕು. ಮಿಥುನ ರಾಶಿಯವರಿಗೆ ಈ ವಾರ ಸಾಧಾರಣ ಫಲವಿದೆ. ಕುಟುಂಬದಲ್ಲಿ ಆಚ್ಛಾದಿತವನ್ನು ಕಲಿಸುವದು ಬುಧ ಮಂಗಳ ಕೇತುಗಳು ನಿಮಗೆ ಸಜ್ಜನತ್ವವನ್ನು ಬಲಪಡಿಸುವದು. ಇವೆಲ್ಲ ಮೂಲ ಕುಂಡಲಿಯಿಂದ ನಿರ್ಧರಿಸುವದು ಯೋಗ್ಯ.

ಕರ್ಕ

ಈ ವಾರ ಚಂದ್ರನಿಗೆ ಸಾಕಷ್ಟು ಬಲವಿಲ್ಲ. ಕಾರಣ ೨೧ ದಿನಾಂಕ ಚಂದ್ರ ಗುರು ತ್ರಿಕೋನ ಮುಂಜಾನೆ ೬ ಗಂಟೆಗೆ ಇರುವದು. ಆಗ ನಿಮ್ಮ ಮನಸ್ಸು ಉಲ್ಲಸಿತವಿರುವದು. ನಿಮ್ಮ ಕಾರ್ಯ ಮಾಡಿಕೊಳ್ಳಿರಿ. ೨೨ ಮುಂಜಾನೆ ೧ ಗಂಟೆಗೆ ವರಿಷ್ಠರ ಹಿರಿಯರ ಭೇಟ್ಟಿ ತೆಗೆದುಕೊಳ್ಳಿರಿ. ೨೩ ಸಂಜೆಯ ೬ ಗಂಟೆಗೆ ಸಭಾ ಸಮ್ಮೇಲನಗಳಲ್ಲಿ, ಭಾಗವಹಿಸಿರಿ. ೨೫ ಮುಂಜಾನೆ ೯–೧೨ ನಡುವೆ ಯಾವ ಕಾರ್ಯ ಮಾಡಿದರೂ ಯಶಸ್ವಿಗಳಾಗಿವಿರಿ ೨೬ ರಾತ್ರಿ ೧೦ ಗಂಟೆಗೆ ರಸಾಯನ ಶಾಸ್ತ್ರ ಅಭ್ಯಾಸ ಮಾಡಿರಿ

ಸಿಂಹ

೨೬ ನೇ ದಿನಾಂಕ ಮುಂಜಾನೆ ೯ ಗಂಟೆಗೆ ಶನಿ ಪ್ಲೂಟೋ ಶುಭಯೋಗವಿದೆ. ಪ್ರಕಟ ಶತ್ರುಗಳು ಕೂಡ ಮಿತ್ರರಾಗುವರು. ಆಗ ನೀವು ಹೊಲದ ಕೆಲಸವನ್ನು ಅಥವಾ ಪುರಾಣ ವಸ್ತು ಸಂಶೋಧನದ ಕಾರ್ಯಗಳನ್ನು ಕೈಕೊಳ್ಳಬಹುದು. ಈ ರಾಶಿಯ ಪುರಾಣ ವಸ್ತು ಸಂಶೋಧನ ಪಾಠೆಯವರು ಅದ್ಭುತ ಶೋಧ ಕಾರ್ಯವನ್ನು ಕೈಕೊಂಡರೆ ಅವರು ಇತಿಹಾಸದ ಮೇಲೆ ಹೊಸ ಬೆಳಕನ್ನು ಕೆಡವುವರು. ಮಿಥುನ ಕನ್ಯಾ ಧನು ಲಗ್ನದಲ್ಲಿ ಹುಟ್ಟಿದವರು ಸಂಶೋಧನ ಕಾರ್ಯ ಕ್ಷಮರಾಗುವರು. ಮಂಗಳ ಬುಧ ಶುಭಯೋಗ ವಿದ್ದವರು ಸಂಶೋಧನ ಪಾಠೆಯಲ್ಲಿ ಸೇರಬೇಕು. ಹರ್ಷಲ ಚಂದ್ರ ಶುಭಯೋಗವೂ ಇದಕ್ಕೆ ಸಹಕರಿಸುವದು.

ಕನ್ಯಾ

ಶನಿ ತುಲೆಯಲ್ಲಿ ಆರ್ಥಿಕ ತೊಂದರೆಗಳಿಂದ ಇನ್ನೂ ನೀವು ಮುಕ್ತರಾಗಿಲ್ಲ ಸಾಧು ಸಜ್ಜನರ ಸೇವೆಯನ್ನು ಮಾಡಿದರಿಂದ ಮುಕ್ತರಾಗಲು ಪ್ರಯತ್ನಿಸಿರಿ, "ಆತ್ಮಜ್ಞಾನಾರ್ಜನೆಯೇತ್ ಭೂತಿ ಕಾಮಃ" ಎಂದು ಉಪನಿಷತ್ತು ಹೇಳುವದು ೨೩ ಮಧ್ಯರಾತ್ರಿ ಚಂದ್ರ ನೇಪಚ್ಯೂನ ತ್ರಿಕೋನ ನೀವು ಇಂತಹ ಸುಖಸ್ವಪ್ನವನ್ನು ಕಾಣುವಿರಿ ನಿಮ್ಮ ರಾಶಿಯಲ್ಲಿ ಜನರನ್ನು ಹೊಂದ್ದು ಹ್ಹಾತಿಕ್ಕೊಂಡ್ಡು ಹ್ಹೋಗುವ ಗುಣವು ಸ್ವಭಾವಿಕವಾಗಿರುವದರಿಂದ ಶುಕ್ರನೂ ಈಗ ನಿಮಗೆ ೪ ರಲ್ಲಿ ಸಂಚರಿಸುವದರಿಂದ ಹುಂಬುತನಕ್ಕೆ ಅವಕಾಶವಿರುತ್ತದೆ. ಉಲ್ಲಾಸಿತನದ ನೀರವು ನಮಗೆ ಈ ವಾರ ಸಿಗುವಹುದೇ? ಬ[illegible] ತುಲಾ ರಾಶಿಯಲ್ಲಿ ಅನಿಷ್ಟಗಳು ಶಿಕ್ಷಣಕ್ಕೆ ಹಿಡಿಯಬಹುದು. ಬುಧ ಶುಕ್ರರ ಸ್ಥಿತಿಯಿಂದ ಸಂಗೀತ ಸಾಹಿತ್ಯ ಕಲೆಗಳಲ್ಲಿ ಆಸಕ್ತಿ ಹೆಚ್ಚಾಗಿ ಅವುಗಳಲ್ಲಿ ಯಶಸ್ಸು ಸಿಗುವದು.

ತುಲಾ

ರಾಶಿಯ ಅಧಿಪತಿ ಈಗ ೬ ರಲ್ಲಿರುವನು. ನಿಮ್ಮ ನೆರೆಯವರು ನಿಮಗೀಗ ಸಹಕರಿಸುವರು. ಸಾಹಿತ್ಯ ಸಂಗೀತಾದಿ ಕಲಾವಿದರಿಗಳಲ್ಲಿ ಅವನು ಯಶಸ್ಸು ಕೊಡುವನು ಆದರೂ ೭ ಶುಕ್ರನ ಮೌಲ್ಯ ಪೆಲ್ಲಿನೆ ಮುಂದಡಿಯಿಟ್ಟಲು ಕಲಿಯಿರಿ. ೨೭ ಮುಂಜಾವಿನಲ್ಲಿ ನಸುಕಿನಲ್ಲಿ ಶುಕ್ರ ಗುರು ತ್ರಿಕೋನವದೆ. ಮನಸ್ಸಿನ ಪ್ರಸನ್ನತೆ ಆರ್ಥಿಕ ಲಾಭ ಮುಕ್ಕಳ ಅಭ್ಯುದಯ

ವೃಶ್ಚಿಕ

೨೧ ಮೂರು ಸಂಜೆಯ ಮುಂದೆ ಶನಿ ನೇಪಚ್ಯೂನ ಯುತಿ ನಿಮ್ಮ ಗುಪ್ತ ಶತ್ರುಗಳನ್ನು ತೊಡೆದು ಸಾವಧಾನದಿಂದ ವ್ಯವಹರಿಸಿರಿ. ೨೪ ರವಿ ಮಂಗಳ ಶುಭಯೋಗ ನಿಮಗೆ ಸ್ಫೂರ್ತಿಯನ್ನು ಕೊಡುವದು. ೨೫ ಮುಂಜಾನೆ ನಿಮ್ಮ ವಾರದ ಮಹತ್ವದ ಕಾರ್ಯಗಳನ್ನು ನಿರ್ವಹಿಸಿಕೊಳ್ಳಿರಿ ವೃಶ್ಚಿಕ ಧನು ರಾಶಿಗಳ ಸಂಗಮದಲ್ಲಿ ಏಷ್ಟೋ ಸಾಹಸಿ ಪುರುಷರು ಹುಟ್ಟುವರು ರವಿ ಮಂಗಳ–ಹರ್ಷಲರ ಶುಭಯೋಗಗಳ ನಿಮ್ಮ ಜನ್ಮ ಕುಂಡಲಿಯಲ್ಲಿದ್ದರೆ ನೀವು ಸಮರ್ಥ ಆದೇಶವನ್ನು ವಹಿಸುವ ಅಧಿಕಾರಿಗಳು ಆಗುವಿರಿ.

ಧನು

ನಿಮ್ಮ ಜನ್ಮ ಕುಂಡಲಿಯಲ್ಲಿ, ಗುರು ಶನಿ ತ್ರಿಕೋಣವಿದ್ದರೆ ನೀವು ಸುಯೋಗಿಗಳೂ ಮಹತ್ವಾಕಾಂಕ್ಷಿಗಳೂ, ಆಗುವಿರಿ. ಧನು ವಿಶ್ವಭಾವಿ ರಾಶಿ ಭಾಗವಹಿಸುವಷ್ಟಿಂಥ ದೂರ ನಿಂತು ವಿಮರ್ಶ ಮಾಡುತ್ತದೆ. ಈಗ ನಿಮಗೆ ಪಂಚಮ ಭಾವದಲ್ಲಿ ಗುರು ಇದ್ದಾನೆ ವಿಮರ್ಶಕ ಕಾರ್ಯವನ್ನು ಕೈಕೊಳ್ಳಬಹುದು. ಶನಿ ಲಾಭದಲ್ಲಿ ಒಕ್ಕಲಿಗರ ಅಗ್ರಿ ಕಲ್ಚರಲ್ ಪಾಠೆಯವರ ನೆರವು ಸಿಗುವದು

ಮಕರ

ಈ ರಾಶಿಯಲ್ಲಿ ಪರಿಸ್ಥಿತಿಯನ್ನು ಎದರಿಸಿ ಮುಂದಡಿ ಇಡುವದರಲ್ಲಿ ನಿಮ್ಮ ರಾಶಿಯವರು. ಈ ರಾಶಿಗೆ ಯೋಗಕಾರಕ ಶುಕ್ರನು ಅವನು ಈಗ ಲಾಭದಲ್ಲಿರುವನು ಕಾರಣ ಜೋರಿನಿಂದ ಮುಂದಡಿಯಿಟ್ಟು ಅವನ ಲಾಭ ಪಡೆಯಿರಿ ಈ ರಾಶಿಯಲ್ಲಿ ಹುಟ್ಟಿದವರಿಗೆ ಬುಧ ಶನಿ ಹರ್ಷಲ ತ್ರಿಕೋನವಿದ್ದರೆ ಉತ್ತಮ ಜ್ಯೋತಿರ್ವಿದರಾಗುವರು ಕಾರಣ ನೀವು ಉತ್ತಮ ಶಾಸ್ತ್ರಾಭ್ಯಾಸ ಮಾಡಿ ಲೇಖೋ ರಾಫೆಲ ರಫಾಡ ವಕೀಲರಂತೆ ಭರತ ಖಂಡದ ಕೀರ್ತಿಯನ್ನು ಬೆಳೆಸಿರಿ.

ಕುಂಭ

ರಾಶಿಗಳಲ್ಲಿ ಈ ರಾಶಿ ಶಾಸ್ತ್ರ ಶೋಧಕ್ಕೆ ಅತ್ಯುತ್ತಮ ೧೧ ರಲ್ಲಿ ಈಗ ಶುಕ್ರನಿರುವನು ಲಾಭವಾಗುವ ಕಾರ್ಯಗಳನ್ನು ಕೈಕೊಳ್ಳುವಹುದು. ೨೬–೪ ದಿನಾಂಕಗಳು ಶುಭವಾದವು ಗುರು ಬೌದ್ಧಿಕ ಪ್ರಗತಿಯನ್ನುಂಟು ಮಾಡುವನು

ಮೀನ

ರಾಶಿಯ ಅಧಿಪತಿ ಗುರು ಮಿತ್ರ ಕ್ಷೇತ್ರದಲ್ಲಿ ಆರ್ಥಿಕ ಕೌಟುಂಬಿಕ ವ್ಯವಹಾರಗಳಲ್ಲಿ ನಿಮಗೆ ಪೌರ್ಬಲ್ಯವು ತೋರಲಿಕ್ಕಿಲ್ಲ ಆದರೂ ಶನಿ ೮ ರಲ್ಲಿ ದೇಹ ಜಾಡ್ಯದ ಬಗ್ಗೆ ಜಾಗರೂಕತೆ ವಹಿಸುವದು ನೆಟ್ಟಗೆ ಇಲ್ಲದಿದ್ದರೆ ಡಾಕ್ಟರರ ನಿರಾಕರಣೆಗಳಾಗಿ ಇದ್ದದ್ದು ಪೂರ್ತಿ ಕಳೆದುಕೊಳ್ಳಬೇಕಾದೀತು ಆಧರ್ವಣದಲ್ಲಿ ಜಾಡ್ಯನನ್ನು ಹೋಗಲಾಡಿಸುವ ಮಂತ್ರಗಳಿವೆ. ಅವನ್ನು ಹುಡುಕಿ ಪರನ ಮಾಡುತ್ತ ಹೋಗಿರಿ. ಚಿತ್ತ ಶುದ್ಧಿಯನ್ನು ಸಂಪಾದಿಸಿ ವೇದ ವಾದನ ಮಾಡಿದರೆ ಬೇಕಾದಂತಹ ಜಾಡ್ಯವನ್ನು ನೀಗಬಹುದು

ರೀಗಲ್ ಟಾಕೀಜ, ಧಾರವಾಡ

ತಾ|| ೧೬-೧೧-೫೨ ರಿಂದ

ಜುಪಿಟರ್ಸದವರ ಮನರಂಜಕ ಚಿತ್ರ

—ಕರ್ನಾಟಕದಲ್ಲಿ ಪ್ರಥಮ ಪ್ರದರ್ಶನ—



TO BE CONTINUED

IN NEXT ROLL